JJ-51

ಕರ್ನಾಟಕ ವಿಧಾನಸಭೆಯ ನಡವಳಿಗಳು
KARNATAKA LEGISLATIVE ASSEMBLY DEBATES

(B) 25219

ಅಧಿಕೃತ ವರದಿ
OFFICIAL REPORT

೧೨ನೇ ಅಧಿವೇಶನ

12TH SESSION

ಸಂಪುಟ - ೧೦ (ಕ್ರಮಾಂಕ - ೧)

Volume - 10 (No. 1)

(೩೦ನೇ ಮಾರ್ಚ್ ೨೦೦೭)

(30th March 2007)

ಭಾಗ - ೨

Part - II

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

(B) 25219

ಕರ್ನಾಟಕ ವಿಧಾನಸಭೆಯ ನಡವಳಿಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

೧೨ನೇ ಅಧಿವೇಶನ

12TH SESSION

ಸಂಪುಟ – ೧೦ (ಕ್ರಮಾಂಕ – ೧)

Volume - 10 (No. 1)

(೩೦ನೇ ಮಾರ್ಚ್ ೨೦೦೭)

(30th March 2007)

ಭಾಗ – ೨

Part - II

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ಕರ್ನಾಟಕ ವಿಧಾನ ಸಭೆ

ಹನ್ನೆರಡನೇ ವಿಧಾನ ಸಭೆ
ಐದನೇ ಅಧಿವೇಶನದ ಮುಂದುವರೆದ ಉಪವೇಶನ

ಶ್ರೀ ಕೃಷ್ಣ
ಅಧ್ಯಕ್ಷರು

ಶ್ರೀ ಎನ್. ವೈ. ಗೋಪಾಲಕೃಷ್ಣ
ಉಪಾಧ್ಯಕ್ಷರು

ಕರ್ನಾಟಕ ವಿಧಾನ ಸಭೆ

ಶುಕ್ರವಾರ ೩೦ನೇ ಮಾರ್ಚ್ ೨೦೦೭ ರಂದು ಸದನವು

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯.೨೭ ಗಂಟೆಗೆ ಸಮಾವೇಶಗೊಂಡಿತ್ತು

ಅಧ್ಯಕ್ಷರು ಶ್ರೀ ಕೃಷ್ಣರವರು

ಪೀಠವನ್ನು ಅಲಂಕರಿಸಿದ್ದರು

ದಿನಾಂಕ ೩೦-೩-೨೦೦೭

ವಿಷಯಾನುಕ್ರಮಣಿಕೆ

೧ ವಿತ್ತೀಯ ಕಾರ್ಯಕಲಾಪ 01–207

ಸಂಖ್ಯೆ

ಅ) ೨೦೦೭-೨೦೦೮ನೇ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ ---

ಶ್ರೀ ಸಿದ್ಧರಾಮಯ್ಯ
ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ
ಶ್ರೀ ಎ ಟಿ ರಾಮಸ್ವಾಮಿ
ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ

ಆ) ಚರ್ಚೆಗೆ ಉತ್ತರ ---
ಬಿ ಎಸ್ ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು) --

ಇ) ಕರ್ನಾಟಕ ವಿನಿಯೋಗ (ಲೇಖಾನುದಾನ) --
ವಿಧೇಯಕ, ೨೦೦೭-ಮಂಡನೆ ಹಾಗೂ ಅಂಗೀಕಾರ

ಈ) ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) --
ವಿಧೇಯಕ, ೨೦೦೭- ಮಂಡನೆ ಹಾಗೂ ಅಂಗೀಕಾರ

ಉ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) --
ವಿಧೇಯಕ, ೨೦೦೭-ಮಂಡನೆ ಹಾಗೂ ಅಂಗೀಕಾರ

ಊ) ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) --
ವಿಧೇಯಕ, ೨೦೦೭- ಮಂಡನೆ ಹಾಗೂ ಅಂಗೀಕಾರ

ಋ) ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) --
ವಿಧೇಯಕ, ೨೦೦೭ – ಮಂಡನೆ ಹಾಗೂ ಅಂಗೀಕಾರ

೨ ಪ್ರಶ್ನೋತ್ತರ 207–346

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾದ ಪ್ರಶ್ನೆಗಳು --

ಶ್ರೀ ಆರ ಧೃವನಾರಾಯಣ ೩೨೦ (೧೭೦೫)
ಶ್ರೀ ಹೆಚ್ ಹಾಲಪ್ಪ ೩೧೬ (೨೨೬೨)
ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ೩೨೨ (೧೯೯೦)
ಶ್ರೀ ಬಸವರಾಜ ರಾಯರೆಡ್ಡಿ (೨೦೦೨)
ಶ್ರೀ ಎನ್ ಹೆಚ್ ಶಿವಶಂಕರ ರೆಡ್ಡಿ (೨೧೪೦)
ಶ್ರೀ ನಾಗರಾಜು ಎಂ ಟಿ ಬಿ ೨೩೮ (೨೧೫೫)
ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ೩೧೭ (೨೫೬೧)

ಆ) ಲಿಖಿತ ಮೂಲಕ ಉತ್ತರಿಸಲಾದ ಪ್ರಶ್ನೆಗಳು

ಶ್ರೀ ನೆ ಲ ನರೇಂದ್ರಬಾಬು
ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು,
ಸಂಸದೀಯ ವ್ಯವಹಾರಗಳ ಸಚಿವರು) --

೩ ಗಮನ ಸೆಳೆಯುವ ಸೂಚನೆ 346–380

ಅ) ವಿಷಯ ಕೇಂದ್ರ ಪುರಸ್ಕೃತ ವಸತಿ ಕಾರ್ಯಾಗಾರ ಯೋಜನಾ
ಕಾರ್ಯಕ್ರಮಕ್ಕೆ-ಹಣ ಬಿಡುಗಡೆಯಾಗದಿರುವುದರಿಂದ ತುಮಕೂರು
ಜಿಲ್ಲೆಯ ನೇಕಾರರಿಗೆ ಉಂಟಾಗಿರುವ ತೊಂದರೆ ಬಗ್ಗೆ
ಶ್ರೀ ಕ್ಯಾತ್ಸಂದ ಎನ್ ರಾಜಣ್ಣ
ಅಪ್ಪು ಪಟ್ಟಣ ಶೆಟ್ಟಿ (ಜವಳಿ ಸಚಿವರು)

ಆ) ಶ್ರೀ ಸಿದ್ದೇಶ್ವರ ಸಹಕಾರ ಬ್ಯಾಂಕ್ ನಿಯಮಿತ, ಬಿಜಾಪುರ ಇದರ ಆಡಳಿತ
ಮಂಡಳಿಯ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳುವುದರ ಬಗ್ಗೆ
ಶ್ರೀ ಜೆ ಸಿ, ಮಧುಸ್ವಾಮಿ
ಶ್ರೀ ಜಿ ಟಿ ದೇವೇಗೌಡ (ಸಹಕಾರಿ ಸಚಿವರು)

ಶ್ರೀ ಜೆ ವಿ ಶ್ರೀರಾಮರೆಡ್ಡಿ
ಶ್ರೀ ಶಿವಾನಂದ ಎಸ್ ಪಾಟೀಲ್

೪ ಪ್ರಕಟಣೆ 380–381

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ವಿಧಾನಪರಿಷತ್ತು ಕೆಲವು ವಿಧೇಯಕಗಳಿಗೆ ತನ್ನ ಸಹಾಮತಿ
ನೀಡದಿರುವ ಬಗ್ಗೆ ಚರ್ಚೆ

ಪರ್ಯಾಲೋಚನಾ ಪ್ರಸ್ತಾವ

ಅ) ಕರ್ನಾಟಕ ಧನ ವಿನಿಯೋಗ (ಲೇಖಾನುದಾನ)
ವಿಧೇಯಕ, ೨೦೦೭

ಆ) ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ)
ವಿಧೇಯಕ, ೨೦೦೭

ಇ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ)
ವಿಧೇಯಕ, ೨೦೦೭

ಈ) ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ)
ವಿಧೇಯಕ, ೨೦೦೭

ಉ) ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ)
ವಿಧೇಯಕ, ೨೦೦೭

೫ ಶಾಸನ ರಚನೆ 381–544

ವಿಧೇಯಕಗಳನ್ನು ಪುನರ್ ಪರ್ಯಾಲೋಚಿಸುವುದು
ಹಾಗೂ ಅಂಗೀಕರಿಸುವುದು

೬ ಅನುಬಂಧ 545–900

ವಿತ್ತೀಯ ಕಾರ್ಯಕಲಾಪ

ಸಾಮಾನ್ಯ ಚರ್ಚೆ

ಅ ೨೦೦೭-೦೮ನೇ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಶ್ರೀ ಜೆ ಸಿ ಮಧುಸ್ವಾಮಿ ಸನ್ಮಾನ್ಯ ಯಡಿಯೂರಪ್ಪನವರೆ, ಕೊಬ್ಬರಿ ಕೊಳ್ಳುವುದಕ್ಕೆ subsidy ನೀಡುವ ಅವಧಿ ಇವತ್ತಿಗೆ ಮುಗಿದು ಹೋಗುತ್ತಿದೆ ಆ ಬಗ್ಗೆ ಒಂದು ಹೇಳಿಕೆ ಕೊಡಿ ನನಗೆ ಹೇಳಿದರೇನಾಗುತ್ತದೆ? ಅಲ್ಲಿಗೆ message ಹೋಗುವುದಿಲ್ಲ D C ಗಳಿಗೆ ಸ್ವಲ್ಪ message ಹೋಗಬೇಕು ತಾವು ಒಂದು ಮಾತು ಹೇಳಿ ಸಾರ್

ಶ್ರೀ ಕೆ ಎನ್ ರಾಜಣ್ಣ ೧೫ ದಿವಸಗಳಾದರೂ ಕೂಡ ಅವಕಾಶ ಕೊಡಬೇಕು

ಶ್ರೀ ಹೆಚ್ ಆಂಜನೇಯ ಬೀದಿ ನಾಯಿಗಳ ಮಾರಣ ಹೋಮ ನಡೆಯುತ್ತಿದೆ ಅದನ್ನು ತಪ್ಪಿಸಬೇಕೆಂದು ಹೇಳುತ್ತೇನೆ

ಅಧ್ಯಕ್ಷರು ದಯಮಾಡಿ, ಕುಳಿತುಕೊಳ್ಳಿ,

ಶ್ರೀ ಹೆಚ್ ಆಂಜನೇಯ ಎರಡು ದಿನಗಳಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ

ಅಧ್ಯಕ್ಷರು ಸಿದ್ದರಾಮಯನವರೆ, ತಾವು ಮಾತನಾಡಿ (ಗೊಂದಲ) ನೀವು ಮಾತನಾಡಿಯಾದ ಮೇಲೆ ೧೨ ಗಂಟೆಯೊಳಗೆ ಎಷ್ಟು ಸಮಯ ಸಿಗುತ್ತದೆ ಎಂದು ನೋಡಿ, ಬೇರೆಯವರಿಗೆ ಅವಕಾಶ ಮಾಡಿಕೊಡುತ್ತೇನೆ ಮಾತನಾಡಿ

(ಗೊಂದಲ)

ಶ್ರೀ ವೈಜನಾಥ ಪಾಟೀಲ್ ನಾನು ಮೊದಲೇ ಕೇಳಿದ್ದೇನೆ ನಾನು ಮಾತನಾಡುತ್ತೇನೆ

ಅಧ್ಯಕ್ಷರು ಅವಕಾಶ ಕೊಡುತ್ತೇನೆ ಈಗ ಸಿದ್ದರಾಮಯ್ಯನವರು ಮಾತನಾಡಲಿ ಅವರು ಮಾತನಾಡಿ ಮುಗಿಸಿದಮೇಲೆ ೧೨ ಗಂಟೆಗೆ ಅವರು ಉತ್ತರ ಕೊಡುವುದಕ್ಕೆ ಆರಂಭಿಸುತ್ತಾರೆ ಉಳಿದ ಅವಧಿಯಲ್ಲಿ ಎಷ್ಟು ಜನರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬಹುದೋ ನೋಡೋಣ

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಸಿದ್ದರಾಮಯ್ಯನವರು ಮಾತನಾಡಿದ ಮೇಲೆ ರಾಯರೆಡ್ಡಿಯವರಿಗೆ ೧೦ ನಿಮಿಷ ಅವಕಾಶ ಕೊಡಿ

ಅಧ್ಯಕ್ಷರು ಮಾತನಾಡಲಿ, ಈಗ ಸಿದ್ದರಾಮಯ್ಯನವರು ಮಾತನಾಡಿಲಿ ˙ ಅವರು ೭ ಬಜೆಟ್ ಮಂಡಿಸಿರುವವರೆಂದು ಅವರೆಲ್ಲ ಹೇಳುತ್ತಿದ್ದಾರೆ ಅವರು ಮಾತನಾಡಲಿ

ಶ್ರೀ ಎಂಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಸಚಿವರು) ಸಮಯ ನಿಗದಿ ಮಾಡಿ ಇವರು ೧೨ ಗಂಟೆಗೆ ಉತ್ತರ ಕೊಡುತ್ತಾರೆ ಆ ಸಮಯಕ್ಕೆ ಸರಿಯಾಗಿ ಅವರಿಗೆ ಸಮಯ allot ಮಾಡಿ ಆ allotment ನಲ್ಲಿ ಅವರು ಎಷ್ಟು ಜನರಾದರೂ ಮಾತನಾಡಲಿ (ಗೊಂದಲ) ನಿನ್ನೆ ಒಪ್ಪಂದ ಯಾವ ಪ್ರಕಾರ ಆಗಿದೆ ಆ ಪ್ರಕಾಖ ವಿರೋಧ ಪಕ್ಷದವರು ನಡೆದುಕೊಳ್ಳುಬೇಕು

(ಗೊಂದಲ)

ಅದ್ಯಕ್ಷರು ಈಗ ಹೇಗೆ time allot ಮಾಡುತ್ತೀರಿ?

(ಗೊಂದಲ)

ಶ್ರೀ ಸಿದ್ದು ಕಲ್ಲಪ್ಪ ಸವದಿ ಹಿಂದಿನ ಸೀಟ್ ನವರಿಗೆ ಮಾತನಾಡಲು ೪ ಜನರಿಗಾದರೂ ೫-೫ ನಿಮಿಷ ಅವಕಾಶ ಕೊಡಿ

ಶ್ರೀ ವೈಜನಾಥ್ ಪಾಟೀಲ್ ಪ್ರಶ್ನೆ ಮೇಲೆ ಮಾತನಾಡಲು ಅವರಿಗೆ allow ಮಾಡುವುದಿಲ್ಲ (ಗೊಂದಲ) ನನಗೆ ಈಗಲೇ ಅವಕಾಶ ಕೊಡಿ

(ಗೊಂದಲ)

(ಈ ಹಂತದಲ್ಲಿ ಶ್ರೀ ವೈಜ್ಯನಾಥ್ ಪಾಟೀಲ್ ರವರು ಮಾತನಾಡಲು ಅವಕಾಶ ಕೊಡಲಿಲ್ಲವೆಂದು ಸದನದ ಬಾವಿಗೆ ಆಗಮಿಸಿದರು)

ಶ್ರೀ ಸಿದ್ದು ಕಲ್ಲಪ್ಪ ಸವದಿ ನಮಗೂ ಐದು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡಿ

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ ಇವರು ಕೃಷ್ಣಾದ ಬಗ್ಗೆ ಮಾತನಾಡುತ್ತಾರೆ ಇವರಿಗೂ ಅವಕಾಶ ಕೊಡಿ ಎದ್ದು ನಿಂತಿಉರವವರೆಲ್ಲರಿಗೂ ಅವಕಾಸ ಮಾಡಿಕೊಟ್ಟರೆ ಇದು ಏಕ ಬರುತ್ತದೆ? ವಿರೋಧ ಪಕ್ಷದವರಿಗೆ ಹೆಚ್ಚಿನ ಅವಕಾಶ ಕೊಡಬೇಕು ವಿರೋಧ ಪಕ್ಷದವರು ಎಷ್ಟು ಜನರು ಮಾತನಾಡುತ್ತಿದ್ದಾರೆ? ಇವರಿಗೆ ಅವಕಾಶ ಕಲ್ಪಿಸಿಕೊಡಿ

ಅಧ್ಯಕ್ಷರು ಧರ್ಮಸಿಂಗ್ ರವರೆ ನೀವು ಸುಮ್ಮನೆ ವೃಥಾ ಆರೋಪ ಮಾಡುವುದು ಸರಿಯಿಲ್ಲ ನೋಡ್ರೀ ವಿರೋಧ ಪಕ್ಷದವರು ಎಷ್ಟು ಹೊತ್ತು ಮತ್ತು ಎಷ್ಟು ಜನ ಮಾತನಾಡಿದ್ದಾಋುಎ ಆಡಳಿತ ಪಕ್ಷದವರು

ಎಷ್ಟು ಹೊತ್ತು ಮತ್ತು ಎಷ್ಟು ಜನ ಮಾತನಾಡಿದ್ದಾರೆ ಎಂಬ ಬಗ್ಗೆ ಮಾಹಿತಿ ಕೊಡಿ ಏನಾಗಿದೆ ಎಂದರೆ, ಈ ಕಡೆಯವರು ಮಾತನಾಡಿಲ್ಲ ೩-೪ ಜನ ಕೊಟ್ಟಿದ್ದಾರೆ ಅದನ್ನು ಹತ್ತು ಹತ್ತು ನಿಮಿಷ ಮಾತನಾಡಿದ್ದಾರೆ ಪೂರ್ತಿ ವಿರೋಧ ಪಕ್ಷದವರೇ ಮಾತನಾಡಿರುವುದು ಅಂಥದ್ದರಲ್ಲಿ ನೀವು ವೃಥಾ ಆರೋಪ ಮಾಡಿದರೆ ಹೇಗೆ ?

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ ನಿನ್ನೆ ತಾವೆಲ್ಲರೂ ಏನು ಒಪ್ಪಿಗೆ ಕೊಟ್ಟಿದ್ದೀರಿ ಆ ಪ್ರಕಾರ ತಾವುಗಳೆಲ್ಲರೂ ನಡೆದುಕೊಳ್ಳಬೇಕು

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ ಪ್ರಕಾಶ್ ರವರೆ ನಾವು ಒಪ್ಪಿಕೊಂಡಿದ್ದೇವೆ ಬಿಡಿ ಸುಮ್ಮನೆ ಏಕೆ ಹೇಳುತ್ತೀರಿ?

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ ನಿನೆ ತಾವುಗಳು ಏನು ಮಾತನಾಡಿದ್ದೀರಿ ಅದಕ್ಕೆ ಬದ್ಧರಾಗಿರಿ, ಏಕೆಂದರೆ ಅವರು ೧೨ ಗಂಟೆಗೆ ಉತ್ತರ ಕೊಡಬೇಕಾಗಿದೆ

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ ಅದಕ್ಕೆ ಬದ್ಧರಾಗಿದ್ದೇವೆ ನಾನು ಏನು ಹೇಳುತ್ತೇನೆಂದರೆ, ಮಾನ್ಯ ಸಿದ್ದರಾಮಯ್ಯನವರು, ಪಕ್ಷದ ಅಧ್ಯಕ್ಷರು, ರಾಯರೆಡ್ಡಿ ಯವರು ಮಾತನಾಡುತ್ತಾರೆ

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ ಸರಿ ಸಾರ್ ಅವರು ಮಾತನಾಡಲಿ

(ಗೊಂದಲ)

ಶ್ರೀ ಎನ್ ದರ್ಮಸಿಂಗ್ ನೀವು ಟ್ರೆಜರಿ ಬೆಂಚ್‌ನವರು, ಆಡಳಿತ ನಡೆಸತಕ್ಕಂಥವರು, ನಿಮ್ಮ ಬಜೆಟ್ ಮೇಲೆ ಪ್ರತಿಕ್ರಿಯೆ ಮಾಡತಕ್ಕಂಥ ಜನರಿಗೆ ಅವಕಾಶ ಕಲ್ಪಿಸಿ ಕೊಡಿ

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ ಆಗಬಹುದು ಯಾರ ಬೇಡವೆನ್ನುತ್ತಾರೆ ಅವರೆಲ್ಲರಿಗೂ ನೀವು ಟೈಂ ಅಲಾಟ್ ಮಾಡಿ ಒಬ್ಬೊಬ್ಬರಿಗೆ ೧೫ ನಿಮಿಷಗಳ ಕಾಲೆವೆಮದು ಸಮಯ ಫಿಕ್ಸ್ ಮಾಡಿ

(ಗೊಂದಲ)

ಅಧ್ಯಕ್ಷರು ವೈಜನಾರ್ತ ಪಾಟೀಲ್ ರೆ ನೀವು ನಿಮ್ಮ ಸ್ಥಾನಕ್ಕೆ ಹೋಗಿ

(ಗೊಂದಲ)

ಶ್ರೀ ಬಸವರಾಜ್ ರಾಯರೆಡ್ಡಿ ಮಾನ್ಯ ಅಧ್ಯಕ್ಷರೆ,

ಶ್ರೀ ಜೆ ಸಿ, ಮಾಧುಸ್ವಾಮಿ I am on point of order ಅವರು ತಮ್ಮ ಸ್ಥಾನದಲ್ಲಿ ನಿಂತು ಕೊಂಡು ಮಾತನಾಡಬೇಕು

(ಗೊಂದಲ)

ಶ್ರೀ ಎನ್ ಧರ್ಮ ಸಿಂಗ್ ಆಯಿತು ನಾನು ಹೇಳುತ್ತಿದ್ದೇನೆ ರಾಯರೆಡ್ಡಿಯವರೆ ಸನ್ಮಾನ್ಯ ಸಭಾಧ್ಯಕ್ಷರು ತಮಗೆ ಎಲ್ಲಿ ಸೀಟ್ ಅಲಾಟ್ ಮಾಡಿದ್ದಾರೆ ತಾವು ಆ ಸ್ಥಾನಕ್ಕೆ ಬಂದು ಮಾತನಾಡಿ

ಅಧ್ಯಕ್ಷರು ಆಯಿತು ಬಿಡಿ ಅವರಿಗೆ ಎಲ್ಲಿ ಸೀಟ್ ಅಲಾಟ್ ಆಗಿದೆ ಅಲ್ಲಿಂದ ಮಾತನಾಡಲಿ

(ಗೊಂದಲ)

ಅಧ್ಯಕ್ಷರು ಸ್ವಲ್ಪ ತಾಳಿ, ಈಗ ಸಿದ್ದರಾಮಯ್ಯನವರೆ ತಾವು ಮತನಾಡಿ ನಂತರ ಟೈಂ ಉಳಿದರೆ ಈ ಕಡೆ ಮತ್ತು ಆ ಕಡೆ ಎಷ್ಟು ಕೊಡಬೇಕೆಂದು ನೋಡಿ ನಾನು ಅವಕಾಶ ಮಾಡಿ ಕೊಡುತ್ತೇನೆ ಅಲ್ಲದಿದ್ದರೆ ಏನಗುತ್ತದೆ, ಅವರು ೧೨ ಗಂಟೆಗೆ ಉತ್ತರ ಕೊಡಬೇಕು ಎಲ್ಲರೂ ಎದ್ದು ನಿಂತು ಕೊಳ್ಳುತ್ತಾರೆ

ಶ್ರೀ ಬಸವರಾಜ್ ರಾಯರೆಡ್ಡಿ ನಾನು ಹತ್ತು ನಿಮಿಷಯದಲ್ಲಿ ಮುಗಿಸಿ ಬಿಡುತ್ತೇನೆ, ನಂತರ ಅವರು ಮಾತನಾಡಲಿ

ಅಧ್ಯಕ್ಷರು ನೀವು ಮಾತನಾಡಿ ನಂತರ ಅವರಿಗೆ ಅವಕಾಶ ಕೊಡುತ್ತೇನೆ

ಶ್ರೀ ಬಸವರಾಜ್ ರಾಯರೆಡ್ಡಿ ಸಿದ್ದರಾಮಯ್ಯನವರು ಒಪ್ಪಿಕೊಂಡಿದ್ದಾರೆ ಅವರೇ ಒಪ್ಪಿಕೊಂಡಿರುವಾಗ ನೀವು ನಮಗೆ ಅವಕಾಶ ಕೊಡಿ

ಅಧ್ಯಕ್ಷರು ರೀ ನಾನು ಅವರನ್ನು ಕರೆದಿದ್ದೇನೆ ಅವರು ಮಾತನಾಡಲಿ, ಅವರು ಮಾತನಾಡಿದ ನಂತರ ಏನು ಟೈಂ ಉಳಿಯುತ್ತದೆ ಅದನ್ನು ಆ ಕಡೆಗೆ ಈ ಕಡೆಗೆ ಹಂಚಿ ಕೊಡುತ್ತೇನೆಂದರೆ, ನಿಮಗೇನು ಹೀಗೆ ಹೇಳುತ್ತೀರಿ? ಸಿದ್ದರಾಮಯ್ಯನವರೆ ನೀವು ಮಾತನಾಡಿ because you are the main speaker today ನಂತರ ೩-೪ ಸದಸ್ಯರಿಗೆ ಅವಕಾಶ ಕೊಡುತ್ತೇನೆ ನೀವು ಪ್ರಾರಂಭ ಮಾಡಿ ನೋಡಿ ಬಾಯಿಗೆ ಬಂದ ಹಾಗೆ ಮಾತನಾಡಬೇಡಿ ನೀವು ನಿಮ್ಮ ಸ್ಥಾನಕ್ಕೆ ಹೋಗಿ

ಶ್ರೀ ಎನ್ ಧರ್ಮಸಿಂಗ್ ವೈಜ್ ನಾರ್ಥ ಪಾಟೀಲ್ ರವರಿಗೂ ಅವಕಾಶ ಕೊಡುತ್ತೇನೆಂದು ಹೇಳಿ

ಶ್ರೀ ಎಂ ಪಿ ಪ್ರಕಾಶ್ ವೈಜ್ ನಾಥ್ ಪಾಟೀಲ್ ರವರೆ ತಾವು ಮಾತನಾಡುವಿರಂತೆ ದಯಮಾಡಿ ತಮ್ಮ ಸ್ಥಾನಕ್ಕೆ ಬನ್ನಿ ರಾಯರೆಡ್ಡಿಯವರು ಮಾತನಾಡಿದ ನಂತರ ತಾವು ಮಾತನಾಡುವಿರಂತೆ, ಬನ್ನಿ ನಿಮಗೆ ಟೈಂ ಕೊಡಿಸುತ್ತೇವೆ

ಅಧ್ಯಕ್ಷರು ಆಇತು ತಾವು ತಮ್ಮ ಸ್ಥಾನಕ್ಕೆ ಹೋಗಿ ನಂತರ ನೋಡೋಣ ಅವರದಾದ ಮೇಲೆ ಎಷ್ಟು ಸಮಯ ಉಳಿಯಿತು ಎಂದು ನೋಡೋಣ

(ಈ ಹಂತದಲ್ಲಿ ಮಾನ್ಯ ವೈಜನಾಥ್ ಪಾಟೀಲ್ ರವರು ತಮ್ಮ ಸ್ಥಾನಕ್ಕೆ ಮರಳಿದರು)

ಈ ಸಿದ್ದರಾಮಯ್ಯ (ಚಾಮುಂಡೇಶ್ವರಿ) ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಿದ ನಂತರ ಅವರಿಗೆ ಅವಕಾಶ ಕೊಡಿ

ಅಧ್ಯಕ್ಷರು ಆಯಿತು ಮಾಡನಾಡುವಿರಂತೆ, ನೀವು ಆರಂಭ ಮಾಡಿ

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ) ಮಾನ್ಯ ಅಧ್ಯಕ್ಷರೆ, ಮಾನ್ಯ ಹಣಕಾಸಿನ ಸವಿವರಾದಂಧ ಮಾನ್ಯ ಯಡಿಯೂರಪ್ಪನವರು, ೨೦೦೭-೦೮ ಕ್ಕೆ ಆಯವ್ಯಯ ಮಂಗಡ ಪತ್ರವನ್ನು ಮಂಡಿಸಿದ್ದಾರೆ ಈಗಾಗಲೇ ಬಹಳಷ್ಟು ಜ ಸದಸ್ಯರು ಈ ಆಯವ್ಯಯ ಪತ್ರದ ಮೇಲೆ ಮಾತನಾಡಿ ಅವರ ಅಭಿಪ್ರಾಯಗಳನ್ನು, ಸಲಹೆಗಳನ್ನು, ಟೀಕೆಗಳನ್ನು ವ್ಯಕ್ತ ಮಾಡಿದ್ದಾರೆ ಮಾನ್ಯ ಯಡಿಯೂರಪ್ಪನವರು ಹಣಕಾಸಿನ ಸಚಿವರಾದ ಮೇಲೆ ಇದು ಅವರ ಎರಡನೇ ಆಯವ್ಯಯ ಕಳೆದ ವರ್ಷ ಮಂಡಿಸಿದ್ದರು ಈ ಆರ್ಥಿಕ ವರ್ಷ ಮತ್ತು ಮುಂದಿನ ಆರ್ಥಿಕ ವರ್ಷಕ್ಕೆ ಮಂಡಿಸಿದ್ದಾರೆ ಮಾನ್ಯ ಯಡಿಯೂರಪ್ಪನವರಿಗೆ ಕರ್ನಾಟಕದಲ್ಲಿ ಅವರು ಆಯವ್ಯಯ ಮಂಡಿಸುವ ಸಂದರ್ಭದಲ್ಲಿ, ಕರ್ನಾಟಕ ಆರ್ಥಿಕ ಪರಿಸ್ಥಿತಿ ಬಹಳ ಸುಸ್ಥಿತಿಯಲ್ಲಿರತಕ್ಕಂಧ ಸಮಯದಲ್ಲಿ ಅವರು ಹಣಕಾಸಿನ ಮಂತ್ರಿಗಳಾದರು ಬಹುಶಃ ಹಿಂದಿನ ಯಾವ ಹಣಕಾಸು ಮಂತ್ರಿಗಳಿಗೂ ಕೂಡ ಇಂಧ ಸುವರ್ಣ ಅವಕಾಶ ಸಿಕ್ಕಿರಲಿಲ್ಲ ಅಂಧ ಸುವರ್ಣ ಅವಕಾಶ ಅವರಿಗೆ ಸಿಕ್ಕಿದೆ ನಾನು ಟೀಕೆಗೋಸ್ಕರ ಈ ಮಾತನ್ನು ಹೇಳುತ್ತಿಲ್ಲ ಸುವರ್ಣ ಅವಕಾಶವನ್ನು ಅವರು ಈ ರಾಜ್ಯದ ಬೆಳವಣಿಗೆಇಗೆ, ಆಂತರಿಕ ಉತ್ಪನ್ನದ ಬೆಳವಣಿಗೆಗೆ, ಜನ ಜೀವನದ ಗುಣ ಮಟ್ಟದ ಸುಧಾರಣೆಗೆ,

ಬಡತನ ನಿವಾರಣೆಗೆ, ನಿರುದ್ಯೋಗದ ನಿವಾರಣೆಗೆ, ಇದಕ್ಕೆ ಸರಿಯಾದ ರೀತಿಯಲ್ಲಿ ಅವರು ಅವಕಾಶವನ್ನು ಉಪಯೋಗಿಸಿಕೊಳ್ಳಲಿಲ್ಲ ಅವರು ಇದನ್ನು ಸದುಪಯೋಗಪಡಿಸಿಕೊಂಡಿದ್ದರೆ, ಇನ್ನೂ ಹೆಚ್ಚು ಜನಪರವಾದ, ಬೆಳವಣಿಗೆ ಪರವಾದಂಥ, ಮುಂಗಡಪತ್ರವನ್ನು ಮಂಡಿಸಲಿಕ್ಕೆ ಸಾಧ್ಯವಾಗುತ್ತಿತ್ತು ಅವರು ಆ ಅವಕಾಶವನ್ನು ಕಳೆದುಕೊಂಡರು ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳೂವುದಕ್ಕೆ ಬಯಸುತ್ತೆನೆ ನಾನೂ ಕೂಡ ಈ ರಾಜ್ಯದ ಜನತೆಯ ಆಶೀರ್ವಾದದಿಂದ ಏಳು ಸಾರಿ ಈ ರಾಜ್ಯದ ಆಯವ್ಯಯವನ್ನು ಮಂಡಿಸಕ್ಕಂಥ ಅವಕಾಶ ಸಿಕ್ಕತ್ತು ೧೯೯೪-೯೫ ರಿಂದ ೧೯೯೯-೨೦೦೦ ವರೆಗೆ ಆಮೇಲೆ ಇತ್ತೀಚೆಗೆ ಎರಡು ಆಯವ್ಯಯಗಳು ೨೦೦೪-೦೫ ಮತ್ತು ೨೦೦೫-೦೬ ಈ ಎರಡು ಆಯವ್ಯಯಗಳನ್ನು ಮಂಡಿಸತಕ್ಕಂಥ ಅವಕಾಶ ಸಿಕ್ಕಿತ್ತು ಆದುದರಿಂದ ನಾನು ರಾಜಕೀಯವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ ರಾಜಕೀಯ ಬೆರಸಲಿಕ್ಕೆ ಹೋಗುವುದಿಲ್ಲ ೨೦೦೭-೦೮ನೇ ಸಾಲಿನ ಆಯವ್ಯಯವನ್ನು ವಾಸ್ತವಿಕ ನೆಲಗಟ್ಟಿನಲ್ಲಿ ನಾನು ವಿಶ್ಲೇಷಣೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನತಕ್ಕಂಥ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇನೆ ಮಾನ್ಯ ಯಡಿಯೂರಪ್ಪನವರು, ಬಹಳ ಅತುತ್ತಮವಾದ ಆಯವ್ಯಯವನ್ನು ಮಂಡಿಸಿದ್ದೇನೆ ಕರ್ನಾಟಕದ ಇತಿಹಾಸದಲ್ಲಿ ಇಂಥ ಆಯವ್ಯಯವಾದ ಆಯವ್ಯಯವನ್ನು ಮಂಡಿಸಿದ್ದೇನೆ ಕರ್ನಾಟಕದ ಇತಿಹಾಸದಲ್ಲಿ ಇಂಥ ಆಯವ್ಯಯ ಯಾವಾಗಲೂ ಕೂಡ ಯಾರೂ ಮಂಡಿಸಿರಲಿಲ್ಲ ಅಂಥ ಆಯವ್ಯಯ ಮಂಡಿಸಿದ್ದೇವೆ, ರಾಜ್ಯದ ಎಲ್ಲಾ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿದ್ದೇನೆಂದು ಹೇಳಿದ್ದೀರಿ ಆದರೆ, ಈ ಆಯವ್ಯಯವನ್ನು ಸಮಗ್ರವಾಗಿ ನೋಡಿದಾಗ ಬಹಳ ಸ್ಪಷ್ಟವಾಗತಕ್ಕಂಥದ್ದು ಈ ಆಯವ್ಯಯದಲ್ಲಿ ದೂರದೃಷ್ಟಿಯಿಲ್ಲ ರಾಜ್ಯದಲ್ಲಿ ಇವತ್ತೇನು ಸಂಪನ್ಮೂಲಗಳು ಹೆಚ್ಚಾಗಿ ದೊರಕುತ್ತಿವೆ, ಆ ದೂರದೃಷ್ಟಿಯಿಲ್ಲ ರಾಜ್ಯದಲ್ಲಿ ಇವತ್ತೇನು ಸಂಪನ್ಮೂಲಗಳು ಹೆಚ್ಚಾಗಿ ದೊರಕುತ್ತಿವೆ, ಆ ಸಂಪನ್ಮೂಲಗಳನ್ನು ಬಳಸಿಕೊಂಡು ಯಾವ ಆದ್ಯತಾ ವಲಯಗಳಿವೆ, ನಾವೇನು ರಾಜ್ಯದ

ಬೆಳವಣಿಗಿಗೆ ಪೂರಕವಾಗಿ ಆದ್ಯತೆಗಳನ್ನು ಗುರುತು ಮಾಡಿಕೊಂಡಿದ್ದೇವೆ, ಆ ಆದ್ಯತಾ ವಲಯಗಳಿಗೆ ಹೆಚ್ಚು ಹಣ ಹೂಡತಕ್ಕಂಥ ಆ ಮೂಲಕ ಉತ್ಪನ್ನ ಹೆಚ್ಚು ಮಾಡತಕ್ಕಂಥ ಜನರ ಜೀವನ ಮಟ್ಟ ಸುಧಾರಣೆ ಮಾಡತಕ್ಕಂಥ ಪ್ರಮಾಣಿಕ ಪ್ರಯತ್ನವನ್ನು ಮಾಡಬೇಕಾಗಿತ್ತು

ಇವತ್ತಿನ ದಿವಸ ಆರ್ಥಿಕ ಸ್ಥಿರತೆ ಬಂದಿದ್ದರೆ, ಅದಕ್ಕೆ ಮಾನ್ಯ ಯಡಿಯೂರಪ್ಪನವರು ಸಂಪೂರ್ಣ ಕಾರಣ ಅಥವಾ ನಾನೇ ಅದಕ್ಕೆ ಜವಾಬ್ದಾರಿ ಎಂದು ಅವರು ಬೆನ್ನು ತಟ್ಟಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಏಕೆಂದರೆ, ಕರ್ನಾಟಕ ರಾಜ್ಯದಲ್ಲಿ ೧೯೯೦ ರಿಂದ ಆಚೆಗೆ ಆರ್ಥಿಕ ಪರಿಸ್ಥಿತಿ ಚೆನ್ನಾಗಿತ್ತು ಆದರೆ, ೧೯೯೦ ರಿಂದ ಈಚೆಗೆ ಅಂದರೆ, ೨೦೦೦-೦೧ರವರೆಗೆ ಆರ್ಥಿಕ ಪರಿಸ್ಥಿತಿ ಹದಗೆಡುತ್ತಾ ಹೋಯಿತು ಅಂದರೆ, ಆರ್ಥಿಕ ಪರಿಸ್ಥಿತಿಯ ಆರೋಗ್ಯ ಕೆಡುತ್ತಾ ಹೋಯಿತು ಕಾರಣ ಏನೆಂದರೆ, ಮೊದಲನೆಯದು ತೆರಿಗೆ ಬೆಳವಣಿಗೆ ಕಡಿಮೆ ಆಯಿತು ಎರಡನೆಯದಾಗಿ ಕೈಗಾರಿಕೆ ಮತ್ತು ಬೇರೆ ಬೇರೆ ಮೂಲಭೂತ ಸೌಕರ್ಯಗಳಲ್ಲಿ ಬಂಡವಾಲ ಅಕರ್ಷಣೆ ಮಾಡುವುದಕ್ಕೆ ತೆರಿಗೆ ವಿನಾಯಿತಿಗಳನ್ನು ಯದ್ವಾತದ್ವಾ ಕೊಡುವುದಕ್ಕೆ ಪ್ರಾರಂಭವಾಯಿತು ಇಡೀ ದೇಶದಲ್ಲಿ ಇದರ ಬಗ್ಗೆ ಒಂದು ರೀತಿ ಪೈಪೋಟಿ ಪ್ರಾರಂಭವಾಯಿತು ಕೆಲವು ಘೋಷಣೆ Tax Holiday ಮಾಡುವುದು ತೆರಿಗೆ ರದ್ದು ಮಾಡುವುದು ಮತೆ ಸಂಪೂರ್ಣ ವಿನಾಯತಿ ಕೊಡುವುದು, ಈ ರೀತಿಯಾಗಿ ತೆರಿಗೆಗಳನ್ನು ಕಡಿಮೆ ಮಾಡತಕ್ಕಂಥ ಈ ಎಲ್ಲಾ ಪ್ರಕ್ರಿಯೆಗಳಿಂದ ಆರ್ಥಿಕ ಪರಿಸ್ಥಿತಿ ಹದಗೆಡುತ್ತಾ ಹೋಯಿತು ಯಾವಾಗ ಬಂಡವಾಳ ಹೆಚ್ಚು ಹೂಡಿ, ಬೆಳವಣಿಗೆ ಆಗಬೇಕೆಂದು ದೇಶದಲ್ಲಿ ಆರ್ಥಿಕ ಉದಾರೀಕರಣ ಪ್ರಾರಂಭವಾದ ಮೇಲೆ ಅಂದರೆ, ಬಂಡವಾಳ ಹೂಡುವುದಕ್ಕೋಸ್ಕರ ಆಕರ್ಷಣೆ ಮಾಡಲಿಕ್ಕೆ ಈ ರೀತಿಯಾದಂಥ ಅನಾರೋಗ್ಯಕರವಾದ ರೀತಿಯಲ್ಲಿ ಪೈಪೋಟಿ ಪ್ರಾರಂಭವಾಗಿ ರಾಜಸ್ವ ವೆಚ್ಚ ಹೆಚ್ಚಾಗಲಿಕ್ಕೆ ಪ್ರಾರಂಭವಾಯಿತು ತೆರಿಗೆ ಬರತಕ್ಕಂಥದು ಕಡಿಮೆ ಆಯಿತು ಹಾಗಾಗಿ ೧೯೯೪-೯೫, ೧೯೯೫-೯೬, ೧೯೯೬-೯೭ರ ಅವಧಿಯಲ್ಲಿ ಸ್ವಲ್ಪಮಟ್ಟಿಗೆ ಈ ರಾಜ್ಯದಲ್ಲಿ Surplus Budget ಇತ್ತು ಆ ನಂತರ ಹಿನೇ

ವೇತನವನ್ನು ಜಾರಿ ಮಾಡಿದಾಗ, ಸಾಲ ತೆಗೆದುಕೊಂಡು ಬಂದು Revenue deficit ಭರಿಸುವುದಕ್ಕೆ ಪ್ರಾರಂಭವಾಯಿತು ಇದರಿಂದ ಸಾಲದ ಭಾರ ಕೂಡ ಜಾಸ್ತಿಯಾಗುವುದಕ್ಕೆ ಪ್ರಾರಂಭವಾಯಿತು ಋಣಭಾರ ಜಾಸ್ತಿಯಾದಾಗ ನವು ಸಾಲ ತೆಗೆದುಕೊಂಡು ಬಂದು capital investmentಗೆ ಖರ್ಚು ಮಾಡದಿದ್ದರೆ, asset ನಿರ್ಮಾಣ ಮಾಡುವುದಕ್ಕೆ ಖರ್ಚು ಮಾಡದಿದ್ದರೆ ರಾಜ್ಯದಲ್ಲಿ ಆರ್ಥಿಕ ಬೆಳವಣಿಗೆ ಆಗಲಿಕ್ಕೆ ಸಾಧ್ಯವೇ ಇಲ್ಲ ೧೯೯೯ ರಲ್ಲಿ ದೇಶದ ಎಲ್ಲಾ ರಾಜ್ಯಗಳು ಅವರವರ ತೊಂದರೆಗಳನ್ನು identify ಮಾಡಿಕೊಳ್ಳುವುದಕ್ಕೆ ಪ್ರಾರಂಭ ಮಾಡಿಕೊಂಡೆವು ಕರ್ನಾಟಕ ರಜ್ಯ ಕೂಡ ಇದನ್ನು ಮಾಡಲಿಕ್ಕೆ ಪ್ರಾರಂಬ ಮಾಡಿತು ಆನಂತರ ಕರ್ನಾಟಕ ರಾಜ್ಯದಲ್ಲಿ ೨೦೦೦-೦೧ನೇ ಸಾಲಿನಲ್ಲಿ ಮೊದಲಬಾರಿಗೆ ಶ್ವೇತಪತ್ರವನ್ನು ಹೊರಡಿಸಲಾಯಿತು ಅದರಲ್ಲಿ ನಮ್ಮಲ್ಲಿರತಕ್ಕಂಥ ಸಮಸ್ಯೆಗಳೇನು ಮತ್ತೆ ಅದಕ್ಕೆ ಪರಿಹಾರವೇನು ಎನ್ನತಕ್ಕಂಥದನ್ನು ಸದನದ ಮುಂದಿಟ್ಟು, ತದನಂತರ ೨೦೦೨ರಲ್ಲಿ ಒಂದು Fiscal Responsibility Act ಅನ್ನು ಇಲ್ಲಿಯೇ ಪಾಸ್ ಮಾಡಲಾಯಿತು ಆಗ ನೀವೆಲ್ಲಾ ಇಲ್ಲಿದ್ದಿರಿ, ನಾನು ಇರಲಿಲ್ಲ ಮಾನ್ಯ ಶ್ರೀ ಎಸ್ ಎಂ ಕೃಷ್ಣರವರು ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ Fiscal Responsibility ಅನ್ನು ಪಾಸ್ ಮಾಡಿ ಅದರಲ್ಲಿ ಕೆಲವು ಗುರಿಗಳನ್ನು ನಿಗದಿ ಮಾಡಲಾಯಿತು ಅದರಲ್ಲಿ ಬಹಳ ಪ್ರಮುಖವಾದ ಗುರಿಗಳೇನೆಂದರೆ, Fiscal Responsibility Act ನ Section-3 ರಲ್ಲಿ ಏನು ಹೇಳುತ್ತಾರೆಂದರೆ, ೨೦೦೫-೦೬ ನೇ ಸಾಲಿನ ಮಾರ್ಚ್ ೩೧ ರೊಳಗೆ Revenue deficits ಅನ್ನು ತೆಗೆದು ಹಾಕಬೇಕ ಮತ್ತೆ fiscal deficits not more than 3% of the GDP ಇರಬೇಕು ಅಂದರೆ ೩% ಒಳಗೆ ಇರವಂತೆ ಮಾಡಬೇಕೆಂದು ಇತ್ತು ೨೦೦೩-೦೪ non – developmental expenditure ರಲ್ಲಿ ಸುಮಾರು ೬೩-೬೪% ಇತ್ತು ಸುಮಾರು ೩೬-೩೭% developmental expenditure ಖರ್ಚಾಗುತ್ತಿತ್ತು ಈ ರೀತಿಯಾದ ಆರ್ಥಿಕ ಅಸಮತೋಲನ ರಾಜ್ಯದಲ್ಲಿ

೨೦೦೩-೦೪ರಲ್ಲಿತ್ತು ಈ ಆರ್ಥಿಕ ಅಸಮತೋಲನವನ್ನು ೧೧ನೇ ಹಣಕಾಸಿನ ಆಯೋಗದವರು ಕೂಡ ನಿಮಗೆ ಒಂದು ವರ್ಷದಲ್ಲಿ ಬರತಕ್ಕಂಥ ರಾಜಸ್ವ ಏನಿದೆ, ಅದರಲ್ಲಿ ರೆವಿನ್ಯು ಡಿಫಿಶಿಟ್ ೫% ಗಿಂಥ ಹೆಚ್ಚಾಗಬಾರದೆಂದು ನಿಗದಿ ಮಾಡಿದರು ಮತ್ತೊಂದು ಏನೆಂದರೆ, ವಿತ್ತಿಯ ಸುಧಾರಣೆ ನಿಧಿ ಎಂದು ಸ್ಥಾಪನೆ ಮಾಡಿ, ಯಾವ ರಾಜ್ಯ ಆರ್ಥಿಕ ಸುಧಾರಣೆಗಳನ್ನು ಕಟ್ಟು ನಿಟ್ಟಾಗಿ ಮಾಡಿಕೊಂಡು ಹೋಗುತ್ತಾರೆಯೊ ಮತ್ತು ನಿಗದಿತ ಅವಧಿಯಲ್ಲಿ revenue deficit ಅನ್ನು ತೆಗೆದು ಹಾಕಿ fiscal deficit ಅನ್ನು ತೆಗೆದು ಹಾಕಿ fiscal deficit ಅನ್ನು ೩ ರೊಳಗೆ ತರುತ್ತಾರೆಯೊ ಅವರಿಗೆ fiscal incentives ಕೊಡುತ್ತೇವೆಂದು ಘೋಷಣೆ ಮಾಡಿದರು ನಾನು ೨೦೦೪-೦೫ ನೇ ಸಾಲಿನ ಮೇ ತಿಂಗಳಲ್ಲಿ ಮಾನ್ಯ ಧರ್ಮಸಿಂಗ್ ರವರು ಮುಖ್ಯ ಮಂತ್ರಿಗಳಾದಾಗ ನಾನು ಹಣಕಾಸಿನ ಮಂತ್ರಿಯಾಗಿದ್ದೆ ಆಗ revenue deficit ತೆಗೆದು ಹಾಕಬೇಕೆಂದು ಮತ್ತು fiscal deficit ೩% ಒಳಗೆ ತರಬೇಕೆಂದು ಹಾಗೆಯೇ developmental expenditure ಅನ್ನು ಹೆಚ್ಚು ಮಾಡಬೇಕೆಂದು ಮತ್ತು non – developmental expenditure ಅನ್ನು ಕಡಿಮೆ ಮಾಡಬೇಕೆಂದು ತೀರ್ಮಾನ ಮಾಡಿ ಕಟ್ಟುನಿಟ್ಟಿನ ರಮಗಳನ್ನು ನಾವು ತೆಗೆದುಕೊಂಡೆವು ಮತ್ತೆ ಕೇಂದ್ರ ಸರ್ಕಾರ debt swapping scheme ಅನ್ನು ಪ್ರಕಟಣೆ ಮಾಡಿದರು ಕೇಂದ್ರ ಸರ್ಕಾರದಲ್ಲಿನ ತೆರಿಗೆಗಳನ್ನು ಕಡಿಮೆ ಮಾಡಿ ನಮಗೆ ಏನು ಹೇಳಿದರೆಂದರೆ, ಕಡಿಮೆ ತೆರಿಗೆಗಳಲ್ಲಿ ನೀವು ಸಾಲವನ್ನು ಗೆಗೆದುಕೊಂಡು Higher rate ನಲ್ಲಿರುವ ಸಾಲವನ್ನು ವಾಪಸ್ಸು ಕೊಟ್ಟರೆ ಅದಕ್ಕೂ ಕೂಡ incentive ಕೊಡುತ್ತೇವೆಂದು ಹೇಳಿದರು ಅಂದರೆ, ಸಾಲ ಮನ್ನಾ ಮಾಡುತ್ತೇವೆಂದು ಹೇಳಿದರು ನಾವು ಆ ಸಾರಿ ಸುಮಾರು ೫ ಸಾವಿರಕ್ಕಿಂಥ ಹೆಚ್ಚು debt swapping ಮಾಡಿ ಸುಮಾರು ೨೦೦೦ ಕೋಟಿ ರೂಪಾಯಿಗಳನ್ನು ನಾವು ಉಳಿತಾಯ ಮಾಡತಕ್ಕಂಥ ಕೆಲಸ ಆಯಿತು ಇದರಿಂದ ೨೦೦೫-೦೬ರಲ್ಲಿ ಕರ್ನಾಟಕ ರಾಜ್ಯಕ್ಕೆ ಸುಮಾರು ೩೮೬ ಕೋಟಿ ರೂಪಾಯಿಗಳ

ಸಾಲ ಮನ್ನಾ ಆಯಿತು ಮತ್ತು ೨೦೦೧-೦೫ರೊಳಗೆ ಏನು ನಿಗದಿ ಮಾಡಲಾಗಿತ್ತೊ ಅದನ್ನು ನಾವು ೨೦೦೪-೦೫ರಲ್ಲಿಯೇ revenue deficit ಅನ್ನು ತೆಗೆದು ಹಾಕಿದ್ದರಿಂದ ೮೫೪ ಕೋಟಿ revenue surplus ಆಯಿತು ಅಂದರೆ, ನಾವು deficit side ನಿಂದ surplus ಗೆ ಬಂದೆವು ಆ surplus ಹಣವನ್ನು capital side ಗೆ ಖರ್ಚು ಮಾಡತಕ್ಕಂಥದು, ಆಸ್ತಿ ನಿರ್ಮಾಣ ಮಾಡುವುದಕ್ಕೆ ಖರ್ಚು ಮಾಡತಕ್ಕಂಥದು, ಎಲ್ಲಿ ಸಾಲ ತೆಗೆದುಕೊಂಡು ಬಂದು revenue deficit ಅನ್ನು ನಾವು ತೀರಿಸಬೇಕಾಗಿತ್ತೋ ಆ ಒಂದು ಪರಿಸ್ಥಿತಿಯಿಂದ ನಾವು ಹೊರ ಬಂದು ಅಂದರೆ, ಸಾಲದ ಭಾರದಿಂದ ಹೊರ ಬಂದು ನವು ಅದನ್ನು ಮಾಡಲಿಕ್ಕೆ ಪ್ರಥಮ ಭಾರಿಗೆ ೮೫೪ ಕೋಟಿ ರೂಪಾಯಿಗಳಷ್ಟು revenue surplus ಆಯಿತು

ಅದು ಮುಂದಿನ ವರ್ಷಗಳಲ್ಲಿ ಅಂದೆ ೨೦೦೫-೦೬, ೨೦೦೬-೦೭ ರಲ್ಲಿ ಹೆಚ್ಚಾಗುತ್ತಾ ಹೋಯಿತು ಅದು ೨೩೮೪ ಕೋಟಿ ರೂಪಾಯಿಗಳಿಗೆ ಹೋಗಿದೆ ಈ ವರ್ಷ ಅಂದರೆ ಪ್ರಸಕ್ತ ಸಾಲಿನಲ್ಲಿ revised estimate ಪ್ರಕಾರ I don't know accounts figure, ಏನು ಆಗುತ್ತದೆಯೋ ಗೊತ್ತಿಲ್ಲ Revised estimate ಪ್ರಕಾರ ೨೩೮೧ ಕೋಟಿ ರೂಪಾಯಿಗಳು ೨೦೦೫-೦೬ರಲ್ಲಿ surplus ೧೫೦೦ ಚಿಲ್ಲರೆ ಕೋಟಿ ರೂಪಾಯಿಗಳು ಕಳೆದ ೩ ವರ್ಷಗಳಲ್ಲಿ ೨೦೦೪-೦೫, ೨೦೦೫-೦೬, ೨೦೦೬-೦೭ revenue surplus ಕರ್ನಾಟಕದಲ್ಲಿ ಪ್ರಾರಂಭವಾಯಿತು ೩೦೦೩-೦೪ರ ನಂತರ ಈಗ ಪ್ರಾರಂಭವಾಯಿತು ಇದರಿಂದಾಗಿ ರಾಜ್ಯಕ್ಕೆ ಸಾಲವನ್ನು ತೆಗೆದುಕೊಂಡು ಬಂದು revenue surplus ತೀರಿಸಕ್ಕಂತಹದ್ದು, ಬೇರೆ ಬೇರೆ ಕಡೆ ಖರ್ಚು ಮಾಡುವಂತಹದ್ದು ಸಂಬಳ ಪಿಂಚಣಿ ಕೊಡುವಂತಹದ್ದು ಇವೆಲ್ಲವೂ ಕರ್ನಾಟಕದಲ್ಲಿ ತಪ್ಪಿಹೋಗಿ ಕರ್ನಾಟಕದ ಆರ್ಥಿಕ ಪರಿಸ್ಥಿತಿ ಸುಧಾರಣೆಯೂ ಆ ದಿನದಲ್ಲಿ ನಡೆಯುವುದಕ್ಕೆ ಪ್ರಾರಂಭವಾಯಿತು Fiscal defecit ಎಷ್ಟಕ್ಕೆ ಬಂತು ಎಂದರೆ ೨ ೮೫ ಗೆ ಬಂತು ಅಂದರೆ ೩ಕ್ಕಿಂತ ಕಡಿಮೆ ಆಯಿತು ಆರ್ಥಿಕ

ಬೆಳವಣಿಗೆಯೂ ಕೂಡ ಬೆಳವಣಿಗೆ ಅಗುವುದಕ್ಕೆ ಶುರುವಾಯಿತು ಮಾನ್ಯ ಯಡಿಯೂರಪ್ಪನವರು ೨೦೦೫-೦೬ರಲ್ಲಿಯೂ ಕೂಡ ೨ ತಿಂಗಳ ಕಾಲ ಂದರೆ ಫೆಬ್ರವರಿ ೩ನೇ ತಾರೀಖು ಅವುರ ಹಣಕಾಸಿನ ಮಂತ್ರಿಯಾಗಿದ್ದರು ಎಂದು ಕಾಣಿಸುತ್ತದೆ ಮತ್ತೆ ಅವರು ಬಜೆಟ್ ನ್ನು ಕೂಡ ಮಂಡಿಸಿದರು ಅವರು ೧ ವರ್ಷ ೨ ತಿಂಗಳು ಹಣಕಾಸಿನ ಮಂತ್ರಿಯಾಗಿ ಕೆಲಸವನ್ನು ಮಾಡಿದ್ದಾರೆ ೨೦೦೫ರ ಹಣಕಾಸಿನ ಪರಿಸ್ಥಿತಿ ಮತ್ತು ೨೦೦೬-೦೭ ಇವರು ಸಂಪೂರ್ಣವಾಗಿ ಹಣಕಾಸಿನ ಮಂತ್ರಿಯಾಗಿರುವಂತಹ ಅವಧಿ ೧ ವರ್ಷ ಇನ್ನೊಂದು ವರ್ಷ ೨ ತಿಂಗಳು ಕಾಲ ಹಣಕಾಸಿನ ಮಂತ್ರಿಯಾಗಿದ್ದರು ಆಗ ನಾನು ೪ ತಿಂಗಳ ಕಾಲ ಹಣಕಾಸಿನ ಸಚಿವನಾಗಿದ್ದೆ, ಮಾನ್ಯ ಸಿಂಧ್ಯಾರವರು ೪-೫ ತಿಂಗಳು ಹಣಕಾಸಿನ ಸಚಿವರಾಗಿದ್ದರೆಂದು ಕಾಣಿಸುತ್ತದೆ ಆಗ ಬಜೆಟ್ ನ್ನು ಮಂಡಿಸಿದವನು ನಾನು, ಅವತ್ತಿನ ಪರಿಸ್ಥಿತಿ ಇವತ್ತಿಗೆ compare ಮಾಡಿದರೆ developmental expenditure ಹೆಚ್ಚಾಗುತ್ತಿಲ್ಲ ನಾನು ಇದನ್ನು ಅವರು ಕೊಟ್ಟಿರುವಂತಹ ನೋಡಿಕೊಂಡೇ ಹೇಳುತ್ತಿರುವುದು ೨೦೦೪-೦೫ ರಲ್ಲಿ developmental expenditure in total expenditure 56 72 ಒಟ್ಟು expenditure ರಾಜ್ಯವು ಖರ್ಚು ಮಾಡತಕ್ಕಂತಹ ಹಣದಲ್ಲಿ revenue account ನಲ್ಲಿ ಮತ್ತು capital account ನಲ್ಲಿ ಖರ್ಚು ಮಾಡತಕ್ಕಂತಹ ಹಣದಲ್ಲಿ ೫೬ ೭೨ ೨೦೦೫-೦೬ರಲ್ಲಿ ಅದು ೫೬ ೭೨ ರಿಂದ ೬೨ ೯೫ಕ್ಕೆ ಹೋಯಿತು, developmental expenditure in total expenditure It has grown 56 72 in 2004-05, 2005-06 it has grown to 62 95 ಈಗ ಅದು ಕನಿಷ್ಟ ೬೫,೬೬,೬೭,೬೮ರಲ್ಲಿ ಬರಬೇಕಾಗುತ್ತದೆ ಆ ದಾರಿಯಲ್ಲಿ ಹೋದರೆ ೨೦೦೪-೦೫ರಲ್ಲಿ ಬೆಳವಣಿಗೆಯಾಗಿರುವ ತರಹವೆ maintain ಮಾಡಿಕೊಂಡು ಹೋಗಿದ್ದರೆ ಕನಿಷ್ಟ ೬% ಅಂದುಕೊಂಡರೂ ಕೂಡ ಅದು ೬೨ ರಿಂದ ೬೮ಕ್ಕೆ developmental expenditure, plan expenditure growth ಮುಟ್ಟಬೇಕಾಗಿತ್ತು ಆಧರೆ ೨೦೦೬-೦೭ರಲ್ಲಿ ಎಷ್ಟು ಆಗಿದೆ ಎಂದರೆ ಇವರು ಕೊಟ್ಟಿರುವಂತಹ ಅಂಕಿಅಂಶದ ಪ್ರಕಾರ

೬೨೯೫ ರಿಂದ ಬರೀ ೬೩%ಗೆ ಹೋಗಿದೆ ೫% ಮಾತ್ರ developmental expenditure ನಲ್ಲಿ ಹೆಚ್ಚಾಗಿದೆ ಆದರೆ ಇವರಿಗೆ ತೆರಿಗೆಗಳು ಈ ವರ್ಷದಲ್ಲಿ bumper ಆಗಿದೆ ಅದು ಯಡಿಯೂರಪ್ಪನರ ಶ್ರಮದಿಂದ ಏನು ಆಗಿಲ್ಲ ನಾವು ಹಾಕಿಕೊಟ್ಟಿರುವಂತಹ ತಳಹದಿ ಇದೆಯಲ್ಲಾ, ಈ ತಳಹದಿಯ ಆಧಾರದ ಮೇಲೆ bumper ಆಗಿದೆ ಸುಮಾರು ತೆರಿಗೆ ಗಳಲ್ಲಿ ೨೦೦೫-೦೬, ೨೦೦೬-೦೭ಕ್ಕೆ compare ಮಾಡಿದರೆ ೪೩೦೦ ಕೋಟಿ ರೂಪಾಯಿಗಳು ಹೆಚ್ಚಾಗಿದೆ ಕೇಂದ್ರದಿಂದ ಬರುವಂತಹ ತೆರಿಗೆಗಳು and grants ಸುಮಾರು ೩೨೦೦ ಕೋಟಿ ರೂಗಳಿಗಿಂತ ಹೆಚ್ಚಾಗಿದೆ ಇವರಿಗೆ ಒಂದೇ ವರ್ಷದಲ್ಲಿ ಕೇಂದ್ದಿಂದ ಬರುವಂಧ ತೆರಿಗೆಗಳು ೨೦೦೫-೦೬ರಲ್ಲಿ total receipt ನಲ್ಲಿ ೯% ಇದ್ದರೆ, ಈ ಸಾರಿ ೧೭.೫% ಆಗಿದೆ .೧೭.೪೯ ಇದು ಕೇಂದ್ರದಿಂದ ಬರುವಂತಹದ್ದು, ೧೭.೪೯ against the 9% in 2005-06, ಕೇಂದ್ರಸರ್ಕಾರದ ಬೆಳವಣಿಗೆಯಾಯಿತು ರಾಜ್ಯದ್ದು ತೆರಿಗೆ ಸುಮಾರು ಎಲ್ಲಾ total 21% ಆಗಿರಬಹುದು Revised estimate ನ್ನು ಸೇರಿಸಿಕೊಂಡರೂ ಕೂಡ ೨೧% ಆಗಿರಬಹುದು ಆದರೆ non-plan expenditure ಇದೆಯಲ್ಲಾ ೨೨-೨೪ ಹೆಚ್ಚಾಗಿದೆ Non-developmental expenditure ೩೭% ನಲ್ಲಿ ನಿಂತಿದೆ ಅದೇನೂ ಕಡಿಮೆಯಾಗಲಿಲ್ಲ ಆದರೆ plan expenditure ಹೆಚ್ಚಾಗಿದೆ Receipts growth ಸುಮಾರು ೨೦% non-plan expenditure ಕೂಡ ೧೯ ಕ್ಕಿಂತ ಜಾಸ್ತಿಯಾಗಿದೆ ಹಾಗಾಗಿ ನಮ್ಮ growth ಬರೀ ೫ ಮಾತ್ರ ಇದೆ ಇದರ ಅರ್ಥ ಏನೆಂದರೆ, ನೀವು developmental ಗೆ ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕೆ you are totally failed ಕೆಲವು ಕಡೆ non-developmental ಗೆ ಹಣವನ್ನು ಖರ್ಚು ಮಾಡಿದ್ದೀರಿ ನೀವು non-developmental expenditure ನ್ನು cut ಮಾಡುವುದಕ್ಕೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ನಾವು ಇದ್ದಾಗ ೬೩ರಿಂದ non-developmental expenditure now it has compare to 40%

ಅದು ಏಕೆ ಸಾಧ್ಯವಾಯಿತೆಂದರೆ ನಾವು wasteful expenditure ನ್ನು cutd down ಮಾಡಿ debt service ನಲ್ಲಿ ಭಾರವನ್ನು ಕಡಿಮೆ ಮಾಡಿಕೊಂಡು ಎಲ್ಲವನ್ನು ಮಾಡಿರುವುದರಿಂದ ನಾವು ಆ ಹಂತಕ್ಕೆ ಬರುವುದಕ್ಕೆ ಸಾಧ್ಯವಾಯಿತು ನೀವು ಈ ದಿಕ್ಕಿನಲ್ಲಿ ಮಾನ್ಯ ಯಡಿಯೂರಪ್ಪನವರೆ ಪ್ರಯತ್ನವೇನೂ ಮಾಡಲಿಲ್ಲ ಇದರ ಬಗ್ಗೆ ನಾನು ಸುಮ್ಮನೆ figureಗಳನ್ನು ಕೊಟ್ಟಿರುವಂತಹ ಪುಸ್ತಕವನ್ನೆ, ಇಲ್ಲಿ ಕೊಟ್ಟಿರುವಂತಹ figureಗಳು ಬಜೆಟ್ ನಲ್ಲಿ ಹೇಳಿರುವಂತಹ figureಗಳು ಒಂದಕ್ಕೊಂದು ಸಂಬಂಧವೇ ಇಲ್ಲ ಇದು ಹೇಗೆ ಮಾಡಿದರೋ ಗೊತ್ತಿಲ್ಲ ಅದು ಹೇಗೆ ಮಾಡಿದರೋ ಗೊತ್ತಿಲ್ಲ ಇದಕ್ಕೆ ಯಾರೂ ಅಂಕಿ ಅಂಶಗಳನ್ನು ಕೊಟ್ಟರೋ ಅದಕ್ಕೆ ಯಾರು ಅಂಕಿಅಂಶಗಳನ್ನು ಕೊಟ್ಟರೋ ಗೊತ್ತಿಲ್ಲ ನೀವು ಬಜೆಟ್ ನಲ್ಲಿ anticipate ಮಾಡಿದ ಮೇಲೆ ಇಲ್ಲಿ anticipate ಮಾಡಬಹುದಾಗಿತ್ತಲ್ಲಾ? Revised estimate ಬಗ್ಗೆ ಬಜೆಟ್ ನಲ್ಲಿ ಬರೆಯುತ್ತೀರಿ ಆದರೆ ಇಲ್ಲಿ ಕಡಿಮೆ ಇದೆ, ಅಲ್ಲಿ ಜಾಸ್ತಿಯಾಗುತ್ತದೆ ಇಲ್ಲಿ ಮಾಡಿರುವುದೇ ಅಲ್ಲಿ ಮಾಡಬೇಕು ಇದನ್ನು planning department ನವರು ಮಾಡಬೇಕಾಗುತ್ತದೆ ಇದನ್ನು finance department ನವರು ಮಾಡಬೇಕಾಗುತ್ತದೆ ಇದು ಒಂದು ತರಹ ಇರುತ್ತದೆ, ಅಲ್ಲೇ ಒಂದು ತರಹ ಇರುತ್ತದೆ

ಮಾನ್ಯ ಅಧ್ಯಕ್ಷರೇ ೨೦೦೪-೦೫ ರಲ್ಲಿ page 286, Economic Survey Total non-developmental expenditure in the year 2004-05, 14,742 ಕೋಟಿ ೨೦೦೫-೦೬ ರಲಲಿ ಅದು ೧೩,೦೦೩ ಕೋಟಿ ಆಯಿತು Non developmental expenditure ಇವರು ೨೦೦೬-೦೭ ರಲ್ಲಿ ೧೫,೪೮೩ ಅಂದರೆ ೧೩,೦೦೩ ಕೋಟಿಯಿಂದ ೧೫,೪೮೩ ಕೋಟಿಗೆ ಹೊರಟುಹೋಯಿತು ಆ ವರ್ಷವು ಸಹ plan ಜಾಸ್ತಿಯಾಗಿದೆ ಆಯಾಯಾ ವರ್ಷಕ್ಕೆ percentage ಕೊಡುವುದು ಅಂದರೆ ೧೯ ೦೭% is the increase ಇದು Non-developemental expenditure

ಶ್ರೀ ಎಂ ಪಿ ಪ್ರಕಾಶ್ Total expenditure percentage ನೋಡಿದರೆ, whether it is proportionate or not ಎನ್ನುವುದು ಗೊತ್ತಾಗುತ್ತದೆ Total expenditure ಅದೇ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ

ಶ್ರೀ ಸಿದ್ಧರಾಮಯ್ಯ This is not Developmental Expenditure Developmental expenditure in total expenditure is 63% That is increased by 0 5% ಅದು 0 05 percent ಏತಕ್ಕೆ ಆಯಿತು ಅಂದರೆ non-developmental expenditure cut down ಮಾಡಿಲ್ಲ ಮನಸೋ ಇಚ್ಛೆ ಖರ್ಚು ಮಾಡುವುದಕ್ಕೆ ಹೊರಟುಬಿಟ್ಟಿರಿ ಕೇಳಿ ಕೇಳಿದವರಿಗೆಲ್ಲಾ ದುಡ್ಡು ಕೊಡುವುದು ಗೊತ್ತು ಗುರಿ ಇಲ್ಲ ಬದ್ಧತೆಯಿಲ್ಲ ಆದ್ದರಿಂದ ಈ ರೀತಿಯಾಗುವುದು ಆಮೇಲೆ ಪ್ಲಾನ್ ನಲ್ಲಿ

ಶ್ರೀ ಬಿ ಎಸ್ ಯಡಿಯೂರಪ್ಪ ತಾವು ಎಷ್ಟೇ ಹುಡುಕಿದರೂ ಏನೂ ಸಿಗುವುದಿಲ್ಲ

ನೀವು ನೋಡಿದ್ದೀರಾ ಇದನ್ನು ನೀವು Economic Survey ನೋಡಿದರೆ ಗೊತ್ತಾಗುತ್ತದೆ ಇದನ್ನು ಮಾಡಿ ನೋಡಿದಾಘ ೨೦೦೪-೦೫ ರಲ್ಲಿ non –developmental expenditure Rs 14,742cr It has come down to Rs 13,003 Crores ಇದು ನಿಮ್ಮದಲ್ಲವೇ figure? ಇದು ಕಡಿಮೆನೋ ಜಾಸ್ತೀನೋ? It is maintained at 37% ಈಗ ೬೨೯೫% ಇದ್ದದ್ದು ೩೭೦೫% ಆಗುತ್ತದೆ ೬೩% ಇದ್ದದ್ದು ಎಷ್ಟಾಗುತ್ತದೆಂದರೆ ೩೭% ಆಗುತ್ತದೆ That's all ಎಲ್ಲಿ ಹುಡುಕಿದರೂ ಏನೂ ಸಿಗುವುದಿಲ್ಲ ಇದೇನು ಬೇರೆಯೇ ನೀವು ಕೊಟ್ಟಿರುವುದು ಲೆಕ್ಕವಲ್ಲವೇ? Plan ನಲ್ಲೂ ಕೂಡ ಕಡಿಮೆಯಾಗಿದೆ Non-plan Expenditure ನೋಡಿ ನೀವು Non-plan expenditure ೨೦೦೪-೦೫ರಲ್ಲಿ ರೂ ೨೫,೫೧೫ ಕೋಟಿ Non-plan expenditure

೨೦೦೫-೦೬ ರಲ್ಲಿ ರೂ ೨೩,೫೮೬ ಕೋಟಿ ಅಂದರೆ ೨ ಸಾವಿರ ಕೋಟಿ ಕಡಿಮೆಯಾಯಿತು Non plan expenditure ನಲ್ಲಿ ಮತ್ತೆ ೨೦೦೬-೦೭ರಲ್ಲಿ ಮಾನ್ಯ ಯಡಿಯೂರಪ್ಪನವರು ಹಣಕಾಸಿನ ಮಂತ್ರಿಗಳಾದಾಗ ೨೮,೮೩೧ ಕೋಟಿ ಮತ್ತೆ How can you expect the growth in this State? ನಾವು ಕನಿಷ್ಠ ರಾಷ್ಟ್ರ ಮಟ್ಟಕ್ಕಾದರೂ ಇರಬೇಕಲ್ಲ ರಾಷ್ಟ್ರ ಮಟ್ಟಕ್ಕಿಂತ ಕಡಿಮೆ ಇದ್ದೇವೆ ಬೇರೆ ಬೆಳವಣಿಗೆಯಾಗಿರುವ ರಾಜ್ಯಗಳನ್ನು ಬಿಟ್ಟುಬಿಡಿ ಗುಜರಾತ್, ಮಹಾರಾಷ್ಟ್ರ ತಮಿಳುನಾಡು, ಪಂಜಾಬ್ ಹರಿಯಾಣ ಈ ರಾಜ್ಯಗಳನ್ನು ಬಿಟ್ಟುಬಿಡಿ GDP growth ದೇಶದಲ್ಲಿ ೯ ೦೨% ಇದ್ದರೆ ನಮ್ಮದು ೭.೦೯% ದೇಶದ್ದು ೯ ೨%, ನಮ್ಮದು ೭ ೯% ನಮ್ಮ ರಾಜ್ಯದ್ದು ೭ ೮% ಇದಕ್ಕೆ ಕಾರಣ ಇವರು ಏನು ಹೇಳುತ್ತಾರೆ Agriculture sector ನಲ್ಲಿ ಬರಗಾಲ ಬಂತು ಮಳೆ ಬರಲಿಲ್ಲ Production ಕಡಿಮೆಯಾಯಿತು ಹಾಗಾಗಿ GDP growth ಆಗಲಿಲ್ಲ ಅಂತ ಹೇಳುವುದು ಆದರೆ ಕ್ಷೇತ್ರದಲ್ಲಿ Primary sector ನಲ್ಲಿ growth ಎಷ್ಟಿದೆ ಅಂದರೆ GDP 2 9% ಇದೆ ೨ ೯% Agriculture sector ನಲ್ಲಿ, ಕರ್ನಾಟಕದಲ್ಲಿ less than 2% O K Round figure ಅಂದರೆ ೨% ಆದರೂ ಕಡಿಮೆಯಾಯಿತಲ್ಲ ಹೊಸ Agriculture policy ಮಾಡಿದ್ದು ಏನಾಯಿತು ಬರಗಾಲ ಬಂದಿದೆ ನಿಜ ಆದರೆ ನೀವು ಬೇರೆ ಬೇರೆ ಕ್ಷೇತ್ರಗಳಲ್ಲಿ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಏನು ಮಾಡಿದ್ದೀರಿ ಇದನ್ನು ಮಾಡದೇ ಇರುವುದರಿಂದ, ಒಂದು ಬರಗಾಲ ನಿಜ, ಅದು ಕೂಡ contributing factor ಬೇರೆ productivity ಹೆಚ್ಚು ಮಾಡುವುದಕ್ಕೆ ರೈತರಿಗೆ minimum support price ಕೊಡುವುದಕ್ಕೆ ಅಗಲಿ ರೈತ ಬೆಳೆದಂತಹ ಬೆಳೆಗಳಿಗೆ ನೀವು ಕಡಿಮೆ ಆಗದಂತೆ ನೋಡಿಕೊಂಡರೆ ಅವರು ಹೆಚ್ಚು ಬೆಳೆಯುವುದಕ್ಕೆ ಪ್ರಯತ್ನ ಮಾಡುತ್ತಾರೆ ಕಬ್ಬು ಈ ಸಾರಿ ಸುಮಾರು ೪೦ ಲಕ್ಷ ಟನ್ ಅರೆಯುವುದಕ್ಕೆ ಆಗುವುದಿಲ್ಲ ಎನ್ನುವ ಪರಿಸ್ಥಿತಿಗೆ ಬಂದಿದ್ದಾರೆ ಅರೆಯುವಂತಹ ಶಕ್ತಿ ಇಲ್ಲ ಅಂತ, ಕಬ್ಬಿನ ಫ್ಯಾಕ್ಟರಿಗಳು, ನಿಲ್ಲಿಸಿಬಿಡುತ್ತಿದ್ದಾರೆ ಈ ಏಪ್ರಿಲ್ ಆದ ಮೇಲೆ

ನಿಲ್ಲಿಸಿಬಿಡುತ್ತೇವೆಂದು ಹೇಳುತ್ತಿದ್ದಾರೆ ಅವರು ತೆಗೆದುಕೊಳ್ಳುವುದಿಲ್ಲ ಒಂದು ತಿಂಗಳು ಹೆಚ್ಚು ಕಡಿಮೆಯಾಗಿ ಹೋಗಿಬಿಟ್ಟರೆ yield ಇದೆಯಲ್ಲ ರಿಕವರಿ ಕಡಿಮೆಯಾಗುತ್ತದೆ ೧೦-೧೫ ಕೆ ಜಿ ಸಕ್ಕರೆ ಕಡಿಮೆಯಾಗುತ್ತದೆ ಸಕ್ಕರೆ ಫ್ಯಾಕ್ಟರಿಗಳನ್ನು ಮಾಡಿರುವವರು ಬಹಳಷ್ಟು ಜನ ಇದ್ದಾರೆ Dry ಆಗುತ್ತದೆ, ಅದಕ್ಕೆ yield ಕಡಿಮೆಯಾಗುತ್ತದೆ ರೈತರಿಗೆ how much loss is going to incur? ಈಗ ನೀವು ಮಾಡಬೇಕಾಗಿರುವುದು ಏನು ಸರ್ಕಾರ? ಒಂದು ಈ ಸಕ್ಕರೆ ಕಾರ್ಖಾನೆಗಳಿಗೂ ನಮಗೂ ಸಂಬಂಧವಿಲ್ಲವೆಂದು ಕೈ ತೊಳೆದುಕೊಂಡು ಕುಳಿತುಬಿಟ್ಟರಿ ಕಬ್ಬಿನ ಬೆಲೆ ನಿಗಧಿ ಮಾಡುವುದಕ್ಕೆ ನಮಗೆ ಏನೂ ಅಧಿಕಾರವಿಲ್ಲವೆಮುದ ಕುಳಿತುಬಿಟ್ಟರಿ ಇವತ್ತು ಕಬ್ಬು ಎಷ್ಟಕ್ಕೆ ತೆಗೆದುಕೊಳ್ಳುತ್ತಿದ್ದಾರೆಂದರೆ ೭೦೦-೮೦೦ ರೂಪಾಯಿಗಳಿಗೆ ಬಂದಿದೆ ಒಂದು ಟನ್ ಒಂದು ಸಾವಿರ ರೂಪಾಯಿ ಇದ್ದದ್ದು ಒಂದು ಸಾವಿರ ರೂಪಾಯಿಗಳಿಗಿಂತ ಜಾಸ್ತಿ ಕೊಡುತ್ತಿದ್ದರು ಕೆಲವು ಕಡೆ ಅದು ಇವತ್ತು ೭೦೦ ರೂಪಾಯಿಗಳಿಗೆ ಬಂದುಬಿಟ್ಟಿದೆ ೧೧೦೦-೧೨೦೦ ರೂಪಾಯಿಗಳು ಇದ್ದದ್ದು ೭೦೦-೮೦೦ ರೂಪಾಯಿಗಳಿಗೆ ಬಂದುಬಿಟ್ಟಿದೆ ಸರ್ಕಾರಕ್ಕೆ ಬೆಲೆ ನಿಗದಿ ಮಾಡುವುದಕ್ಕೆ ಅಧಿಕಾರವಿರಲಿಲ್ಲವೇ? ಫ್ಯಾಕ್ಟರಿ ಅವರನ್ನು ಕರೆದು ಮಾತನಾಡುವುದಕ್ಕೆ ಅಧಿಕಾರವಿರಲಿಲ್ಲವೇ? ನಾನು ಹಿಂದೆ ಮಾಡಿದ್ದೆ ಏನು ಮಹದೇವಪ್ರಸಾದ್, ಮಾಡಲಿಲ್ಲವೇ ಆಗ? ಮಾಡಿದ್ದೇವೆ ನಮ್ಮ ಜಿಲ್ಲೆಯಲ್ಲಿ ಬನ್ನಾರಿಯನ್ನು ಶುಗರ್ ಫ್ಯಾಕ್ಟರಿಯವರನ್ನು ಮತ್ತು ಪ್ರೈವೇಟ್ ನವರನ್ನೆಲ್ಲ ಕರೆದು ಮಾಡಿದ್ದೇವೆ

೧೧೦೦ ೦೦ ರೂಪಾಯಿ ಮಾಡಿದ್ದೇವೆ ೨೦೦೫-೦೬ರಲ್ಲಿ

ಶ್ರೀ ಹೆಚ್ ಡಿ ರೇವಣ್ಣ ೨೦೦೫-೦೬ ರಲ್ಲಿ ಅಷ್ಟು demand ಇರಲಿಲ್ಲ ಆಗ ಕಬ್ಬು ಬೆಳೆ ಇರಲಿಲ್ಲ

ಶ್ರೀ ಸಿದ್ಧರಾಮಯ್ಯ It is also a fact ಆಗ ಕಬ್ಬಿನ ಉತ್ಪನ್ನ ಜಾಸ್ತಿ ಇರಲಿಲ್ಲ All right

ಶ್ರೀ ಜೆ ಸಿ ಮಾಧುಸ್ವಾಮಿ ಮಹಾರಾಷ್ಟ್ರ ದಲ್ಲಿ ೧೨೦೦ ರೂಪಾಯಿ ಕೊಡುತ್ತಿದ್ದಾರೆ

ಶ್ರೀ ಸಿದ್ದರಾಮಯ್ಯ ಪಾಪ ಆಗ ಕಬ್ಬು ಕಡಿಮೆ ಇತ್ತು ಆದ್ದರಿಂದ ಮಾಡಿದರು ಈಗ ಕಬ್ಬು ಜಾಸ್ತಿಯಾಗಿ ಬಿಟ್ಟಿದೆ ೨ ತಿಂಗಳು ಯಾವ ಶುಗರ್ ಫ್ಯಾಕ್ಟರಿಯವರು ಸಹ ಕಬ್ಬನ್ನು ಅರಿಯಲಿಲ್ಲ ಆದ್ದರಿಂದ ಕಬ್ಬು ಉಳಿದುಕೊಂಡಿತ್ತು

ಶ್ರೀ ಜೆ ಸಿ ಮಾಧುಸ್ವಾಮಿ ಮಹಾರಾಷ್ಟ್ರ ಭೂಮಿ ಮೇಲೆ ಇರಲಿಲ್ಲವೇ ಸಾರ್

ಶ್ರೀ ಅಮರೇಗೌಡ ಭಯ್ಯಾಪುರ್ ಮಾಧುಸ್ವಾಮಿಯವರೇ ಮಹಾರಾಷ್ಟ್ರದಲ್ಲಿಯು ಇದೇ ಪರಿಸ್ಥಿತಿ ಅಲ್ಲಿ ಬೇರೆ ಇಲ್ಲ ಅಲ್ಲಿಯು ಸಹ ಬಹಳ ಗಂಭೀರ ಪರಿಸ್ಥಿತಿಯಿದೆ

ಶ್ರೀ ಸಿದ್ದರಾಮಯ್ಯ ಆಯಿತು, ಈಗ ಲಾಬಿ ಸ್ವಲ್ಪ strong ಆಗಿ ಕಟ್ಟೋಣ ಇಲ್ಲಿ

ಶ್ರೀ ಹೆಚ್ ಡಿ ರೇವಣ್ಣ ೧೯೯೫ ರಲ್ಲಿ ಇದೇ ಪರಿಸ್ಥಿತಿ ಇತ್ತು ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಕಬ್ಬು ಯಾವ ರೀತಿ ಆಯಿತು ಎನ್ನುವುದು ಪ್ರತಿ ಕಡೆ ಪ್ರಕಾಶ್ ಸಾಹೇಬರು ಹೇಳಿದ್ದಾರೆ Transportation, subsidy ಎಲ್ಲಾ ತಾವೇ ಕೊಟ್ಟಿದ್ದೀರಿ ಹಿಂದೆ ೧೯೯೫ನೇ ಇಸವಿಯಲ್ಲಿ ಅವತ್ತು ದೇವೇಗೌಡರು ಪ್ರಧಾನಿಗಳಾಗಿದ್ದಾಗ ೧೭ sugar factories ಕೊಟ್ಟರು ಈ ರಾಜ್ಯಕ್ಕೆ ೨೦೦೦ ಇಸವಿಯಿಂದ ೧೭ sugar factories ಅನ್ನು ಏನು ಮಾಡಿದರು ಎಂಬುದನ್ನು ದಯಮಾಡಿ ಹೇಳಿ

ಶ್ರೀ ಬಿ ಆರ್ ಪಾಟೀಲ್ ಮಾನ್ಯ ಸಿದ್ಧರಾಮಯ್ಯನವರೇ, ಈಗ ಅವರು ಹೇಳುತ್ತಿರುವಂತೆ ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಇವತ್ತಿಗೂ ಕೂಡ ಒಂದು ಹೈ ಪವರ್ ಕಮಿಟಿ ಅಸ್ತಿತ್ವದಲ್ಲಿದೆ, ಇಲ್ಲಿಯವರೆಗೆ

ಒಂದು ಸಭೆ ಆಗಲಿಲ್ಲ ಬೀದರ್ ನಲ್ಲಿ ಕಬ್ಬು ಬೆಳೆಗಾರರು ಆತ್ಮಹತ್ಯೆ ಮಾಡಿಕೊಂಡರು ಮೊನ್ನೆ ಜೇವರ್ಗಿಯಲ್ಲಿ ತಹಸೀಲ್ದಾರರ ಕಛೇರಿಯ ಎದುರಿಗೆ ಕಬ್ಬು ಸುಟ್ಟರು ಪವರ್ ಇಲ್ಲವೆಂದು ಹೇಳುತ್ತಾರಲ್ಲ ಮುಖ್ಯ ಮಂತ್ರ ಅಧ್ಯಕ್ಷ ಸ್ಥಾನದಲ್ಲಿ ಒಂದು ಸಮಿತಿ ಇದೆ, ಅವರು ಕರೆದು ಮಾತನಾಡಿ ಅವರಿಗೆ ಒಪ್ಪಿಸಬಹುದು, ಅವರಿಗೆ ಅಧಿಕಾರ ಇಲ್ಲವೆಂದು ರಾಜ್ಯಸರ್ಕಾರ ಹೇಳಲಿಕ್ಕಾಗುವುದಿಲ್ಲ ಅಷ್ಟು ನಿಸ್ಸಹಾಯಕರಾಗಬಾರದು

ಶ್ರೀ ಎಸ್ ಸಿದ್ದರಾಮಯ್ಯ ಈಗ ಹೇಳುವುದು ಏನೆಂದರರೆ ಕಬ್ಬು ಜಾಸ್ತಿಯಾಗಿರುವುದು ನಿಜ, ಎರಡೂ ತಿಂಗಳೂ ಕಬ್ಬು ಅರೆಯಲಿಲ್ಲ ಇದರಿಂದೇನಾಗುತ್ತದೆಯೆಂದರೆ ಬೆಲ್ಲವನ್ನು ತಯಾರು ಮಾಡಲಿಕ್ಕಾಗುವುದಿಲ್ಲ ಬೆಲ್ಲ ಖರೀದಿಸುವವರು, ತಿನ್ನುವವರು ಕಡಿಮೆಯಾಗಿ ಎಲ್ಲಾ ಸಕ್ಕರೆ ತಿನ್ನುತ್ತಿದ್ದಾರೆ ರೇವಣ್ಣ ಪದೇ ಪದೇ ಎದ್ದರೆ ಹೇಗೆ ನೀವು?

(ಗೊಂದಲ)

ಅಧ್ಯಕ್ಷರು ಸಿದ್ದರಾಮಯ್ಯನವರೇ ಈ ರೀತಿ ಚರ್ಚೆಯಾಗುತ್ತಿದ್ದರೆ ಸಮಯದ ಅಭಾವ ಇದೆ ನೀವು ಪೂರ್ತಿ ಮುಗಿಸಲಿಕ್ಕಾಗುವುದಿಲ್ಲ

ಶ್ರೀ ಎಸ್ ಸಿದ್ದರಾಮಯ್ಯ ಇಲ್ಲ, ಸಮಯ ಇಲ್ಲ, ಪ್ಲೀಸ್ ಕುಳಿತುಕೊಳ್ಳಿ, ನೀವು ಆಮೇಲೆ ಮಾತನಾಡಿ

ಅಧ್ಯಕ್ಷರು ನೀವು ಮಾತನಾಡಿ

ಶ್ರೀ ಎಸ್ ಸಿದ್ಧರಾಮಯ್ಯ ನಾನಿನ್ನು introduction ನಲ್ಲೇ ಇದ್ದೇನೆ, ಈಗ ಬೇಗ ಬೇಗ ಮುಂದಕ್ಕೆ ಹೋಗುತ್ತೇನೆ ನಾನೇನು ಹೇಳುತ್ತೇನೆಮದರೆ ರೈತರು ಇವತ್ತು ಕಬ್ಬು ಬೆಳೆಗಾರರು ಅತ್ಯಂತ ಸಂಕಷ್ಟದಲ್ಲಿದ್ದಾರೆ ಅವರಿಗೆ ನೀವು ಕಬ್ಬನ್ನು ಮಹಾರಾಷ್ಟ್ರಕ್ಕೆ ಕಳುಹಿಸಲಿಕ್ಕೆ transport cost ಕೊಡುವುದಾಗಲಿ, ಅವರಿಗೆ incentives ಕೊಡುವುದಾಗಲಿ ಮಾಡಬೇಕು ಕಬ್ಬಿನ ಮೇಲೆ ಇರತಕ್ಕಂಥ purchase tax ತೆಗೆದುಹಾಕಿ ರೈತರಿಗೆ ಸ್ವಲ್ಪ ಅನುಕೂಲವಾಗುತ್ತದೆ, ಒಂದು ಟನ್ ಗೆ

೫೦, ೬೦-೦೦ ೬೫-೦೦ ರೂ ಗಳು ಬರುತ್ತದೆ ತೆಗೆದುಹಾಕಿ To that extent ರೈತರಿಗೆ benefit ಆಗಲಿ ಮಾಡಿ ಅದನ್ನು ಅದನ್ನು ಮಾಡಲಿಕ್ಕೆ ಕೇಂದ್ರಸರ್ಕಾರವನ್ನು ನೋಡಬೇಕಾಗಿಲ್ಲ, ಇನ್ನಾರನ್ನೂ ನೋಡಬೇಕಾಗಿಲ್ಲ ಅದನ್ನು ಮಾಡಬಹುದು ಏಕೆಂದರೆ ಯಡಿಯೂರಪ್ಪನವರು ರೈತರ ಪರ ಹೋರಾಟ ಮಾಡುತ್ತಿದ್ದೇನೆ ಹೋರಾಟ ಮಾಡುತ್ತಿದ್ದೇನೆಂದು ಹೇಳುತ್ತಾರೆ ನಿಜ, ರೈತರ ಪರ ಹೋರಾಟ ಮಾಡುತ್ತಿದ್ದೇನೆ, ಹೋರಾಟ ಮಾತುತಿದ್ದೇನೆಂದು ಹೇಳುತ್ತಾರೆ ನಿಜ, ರೈತರ ಮಗ ಎಂದು ಹೇಳುತ್ತಾರೆ, ನಿಜ, ನಾವೆಲ್ಲರೂ ರೈತರ ಮಕ್ಕಳೇ, ಆದರೆ ಕೆಲವರು ಮಾತ್ರ ರೈತರ ಮಗ ಎಂದು ಹೇಳಿಕೊಳ್ಳುತ್ತಾರೆ ಇಲ್ಲಿ ಬಂದಿರುವವರಲ್ಲಿ ೭೦% ರೈತರ ಮಕ್ಕಳೇ ನಾನಂತೂ ರೈತನಲ್ಲ, ಈಗ ಬಿಟ್ಟುಬಿಟ್ಟಿದ್ದೇನೆ ಎಲ್ಲಾದರೂ ಇರಲಿ, ಅಸೆಂಬ್ಲಿಯಲ್ಲಿ ಎಲ್ಲಾ ರೈತರೇ ಅಲ್ಲವೇ? ಈಗ ನೀಉುವ ಯಾರ ಮಗ, ರೈತರ ಮಗ ಅಲ್ಲವೇ, ಸರಿ ನಾನು ಯಾರ ಮಗ, ರೈತರ ಮಗ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಇವರ್ಯಾರೂ ರೈತರಲ್ಲ, ಈಗ ಸಧ್ಯಕ್ಕಂತೂ ಒಬ್ಬರೂ ರೈತರಾಗಿಲ್ಲ ಒಂದು ದಿವಸಾದರೂ ನೇಗಿಲು ಹಿಡಿದಿದ್ದಾರೆಯೇ, ಖೂರ್ಗಿ ಹಿಡಿದಿದ್ದಾರೆಯೇ, ಬೀಜ ಹಿಡಿದು ಬಿತ್ತಿದ್ದಾರೆಯೇ, ಕುಂರಿ ಎಂದರೆ, ಕುರುಪಿ ಎಂದರೆ ಗೊತ್ತೇ? ಇವರೆಲ್ಲಾ ಬೇರೆಯವರನ್ನು ಇರಿಸಿಕೊಂಡು ಹೊಲ ಮಾಡಿಸಿಕೊಳ್ಳುತ್ತಿದ್ದಾರೆ ಇವರು ರೈತರೆಂದು ಹೇಳಿಕೊಳ್ಳುತ್ತಿದ್ದಾರೆ

(ಗೊಂದಲ)

ಶ್ರೀ ಅಲಂಗೂರು ಶ್ರೀನಿವಾಸ್ ಈಗಲೂ ಉಳುಮೆ ಮಾಡಿ ತೋಟದಲ್ಲಿ ವಾಸವಾಗಿದ್ದೇನೆ

ಶ್ರೀ ಎಸ್ ಸಿದ್ದರಾಮಯ್ಯ ಹೌದು, ಶ್ರೀನಿವಾಸ್ ನೀವು ಮಾಡುತ್ತೀರಿ ನನಗೆ ಗೊತ್ತು ನಿಮಗೆ ತೋಟವಿದೆ ಅಲ್ಲಿ ಚೆನ್ನಾಗಿ ಮನೆ ಕಟ್ಟಿಸಿಕೊಂಡು ಕೆಲವರು ಅಲ್ಲಿರುತ್ತಾರೆ ಈಗ ಫಾರಂ ಹೌಸ್ ಎಂದು ಬೆಂಗಳೂರು ಸುತ್ತ ಕೆಲವರು ತೆಗೆದುಕೊಂಡಿದ್ದಾರೆ ಅವರೆಲ್ಲಾ ರೈತರು

ಅಧ್ಯಕ್ಷರು ನವ ರೈತರು

ಶ್ರೀ ಎಸ್ ಎಲ್ ಧರ್ಮೇಗೌಡ ಖರ್ಗೆಯವರು ಹೇಳುತ್ತಿರುವುದು ಸರಿಯಿರಬಹುದು, ಇಲ್ಲವೆಂದು ಹೇಳುವುದಿಲ್ಲ ನಾವೆಲ್ಲಾ ಇದ್ದೇವೆ ಸ್ವಾಮಿ

ಶ್ರೀ ಎಸ್ ಸಿದ್ದರಾಮಯ್ಯ ನೀವೆಲ್ಲಾ ರೈತರೇ ಸುಮ್ಮನೆ ಕುಳಿತುಕೊಳ್ಳಿ ಲಕ್ಷ್ಮಯ್ಯನವರು ರೈತರೇ, ನೀವು ರೈತರೇ, ವಿಶ್ವನಾತ್ ರೈತರೇ, ನಾನು ರೈತನೆ, ಇಲ್ಲ ನಾನು ಡಿಗ್ರಿ ಪಾಸು ಮಾಡುವವರೆಗ ಹೊಲ ಉತ್ತಿದ್ದೇನೆ, ನೇಗಿಲು ಹೊಡೆದಿದ್ದೇನೆ ಎಲ್ಲಾ ಮಾಡುತ್ತಿದ್ದೆ, ಆಮೇಲೆ ಲಾ ಓದಲಿಕೆಕ ಹೋದಮೇಲೆ ಜಮೀನು ಹೋಗುವುದನ್ನು ಅಲ್ಲಿಂದ ಬಿಟ್ಟುಬಿಟ್ಟೆ ವ್ಯವಸಾಯ ಮಾಡುವುದನ್ನು ಬಿಟ್ಟುಬಿಟ್ಟೆ ಆದರೆ ಸುಮ್ಮನೆ ಈಗ ರೈತರ ಸಮಸ್ಯೆಗಳು ಗೊತ್ತಿವೆ ಅಷ್ಟೇ

ಅಧ್ಯಕ್ಷರು ಅಲ್ಲಿಯವರೆಗೆ ರೈತರು ಆಗಿದ್ದಿರಿ, ಈಗ ನೀವು ರೈತರು ಅನ್ನಿಸಿಕೊಳ್ಳುವುದಕ್ಕಾಗುವುದಿಲ್ಲ ಬಿಟ್ಟ ಮೇಲೆ ಮತ್ತೇಕೆ?

ಶ್ರೀ ಎಸ್ ಸಿದ್ಧರಾಮಯ್ಯ ಈಗ ಸ್ವತಃ ಮಾಧುಸ್ವಾಮಿಯವರು ಊರಿನಲ್ಲೇ ಇದ್ದುಕೋಂಡು ವ್ಯವಸಾಯ ಮಾಡುತ್ತಾರೆ ಧರ್ಮೇಗೌಡರು ಜಮೀನಿನಲ್ಲಿರುತ್ತಾರೆ ವಿಶ್ವನಾಥ್ ಕೂಡ, ಇವರೆಲ್ಲಾ ಕಾಫಿ ತೋಟದವರೆಲ್ಲಾ ಅಲ್ಲಲ್ಲೇ ಮನೆಗಳನ್ನು ಕಟ್ಟಿಕೊಂಡು ಇರುತ್ತಾರೆ ನಿಜವಾಗಿ ರೈತರ ಬವಣೆ ಭಾರಿ ಕಷ್ಟವಿದೆ, ಕಬ್ಬಿಗೆ ಸರ್ಕಾರದವರು ಕೂಡಲೇ ಸಹಾಯಕ್ಕೆ ಧಾವಿಸಬೇಕು That is my demand ಕೂಡಲೇ ಧಾವಿಸಬೇಕು ಇಲ್ಲದಿದ್ದರೆ ರೈತರು ಬಹಳ ಕಂಗಾಲಾಗುತ್ತಾರೆ ಬಹಳ 'ಕಷ್ಟದ ಪರಿಸ್ಥಿತಿಗೆ ಬರುತ್ತಾರೆ ಯಾವುದಾದರೂ ಆಗಲಿ ನೀವು ರೈತರಿಗೆ ಕೂಡಲೇ ಸಹಾಯ ಮಾಡಲಿಕ್ಕೆ ಹೋಗಬೇಕು ಈ ವರ್ಷ ಬೇಕಾದಷ್ಟು ಹಣ ನಿಮ್ಮ ಹತ್ತಿರವಿತ್ತು ೭,೫೦೬-೦೦ ಕೋಟಿ ರೂ ಗಳು, ಅದರಲ್ಲಿ ರೈತರ ಪರ ಏತಕ್ಕೆ ಖರ್ಚು ಮಾಡಲಿಲ್ಲ, ಅದರಲ್ಲಿ ಒಂದಷ್ಟು ಹಣವನ್ನು ರೈತರ ಪರವಾಗಿ ಖರ್ಚು ಮಾಡಿ ಹಾಗೆ ಮಾಡಲಿಲ್ಲವೆನ್ನುವುದೇ ನಮ್ಮ ಆರೋಪ ಆ ಕಡೆ ಮಾಡಬೇಕಾಗಿತ್ತು ಸಪ್ಲಿಮೆಂಇರಿ ಎಸ್ಟಮೇಟ್ಸ್ ನಲ್ಲಿ

೬,೦೦೦ ಕೋಟಿ ರೂ ಎರಡನೇ ಕಂತು ಮೊದಲನೇ ಕಂತು ೧,೦೦೦-೦೦ ಕೋಟಿ ರೂಗಳು ಸುಮಾರು ೭,೪೦೦-೦೦ ಕೋಟಿ ರೂ ಗಳು ಇವೆ, ಅದರಲ್ಲಿ ರೈತರಿಗೇಕೆ, ಕಬ್ಬು ಬೆಳೆಗಾರರಿಗೆ ಸಹಾಯ ಮಾಡಲಿಕ್ಕೆ ಬರುತ್ತಿರುಲಿಲ್ಲ ರೈತರಿಗೆ ಕೊಡಬಹುದಾಗಿತ್ತು That is where you have failed ನನಗೆ ಹೇಳಲಿಕ್ಕೆ ಬಿಡಿ, ನನಗೆ ಮರೆತುಹೋಗುತ್ತದೆ ರೇವಣ್ಣ ನಾನು ಮಾತನಾಡುತ್ತೇನೆ ಆಯಿತು ನಾವಿದ್ದಾಗ ಕೊಟ್ಟಿದ್ದೇವೆ

ಶ್ರೀ ಹೆಚ್ ಡಿ ರೇವಣ್ಣ ನೀವು ಇದ್ದಾಗ ಒಂದು ರೂಪಾಯಿ ಕೊಟ್ಟಿರುವುದನ್ನು ತೋರಿಸಿ ರೈತರ ಪರವಾಗಿ ನಿಂತಿದ್ದ ಹಿಂದಿನ ಸರ್ಕಾರ ರೈತರ ಪರವಾಗಿ ಒಂದು ರೂಪಾಯಿಯನ್ನು ಕೊಟ್ಟಿರುವುದನ್ನು ತೋರಿಸಿ

(ಗೊಂದಲ)

ಶ್ರೀ ಬಿ ಶಿವರಾಂ ಕಬ್ಬು ಅರೆಯುವವರಿಗೆ ಕೊಡಬೇಡ ಎಂದು ಅರ್ಥವೇ?

ಶ್ರೀ ಹೆಚ್ ಡಿ ರೇವಣ್ಣ ಕೊಟ್ಟಿರುವುದನ್ನು ಹೇಳುತ್ತಿಲ್ಲ ಈ ದಿವಸ ಸಿದ್ದರಾಮಯ್ಯನವರು ಹೇಳಿದ್ದನ್ನು ನಾನು ಒಪ್ಪುತ್ತೇನೆ, ನಾನು ರೈತರ ಪರ, ಕಬ್ಬು ಬೆಳೆಯುವವರ ಪರ ಇದ್ದೇನೆ ಎಂದರು ನಮ್ಮ ಜಿಲ್ಲೆಯಲ್ಲಿ ಇವತ್ತು ಸಾಯುತ್ತಿದ್ದಾರೆ ಕೇಂದ್ರ ಸರ್ಕಾರದಲ್ಲಿ ನಿಮ್ಮ pressure ಇದೆಯೆಲ್ಲಾ, ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಿ ನೀವು ಧರಂಸಿಂಗ್ ರವರು ಕೇಂದ್ರ ಸರ್ಕಾರಕ್ಕೆ ಕೇಳಿ, ಇವತ್ತು ೪೦ ಲಕ್ಷ ಟನ್ ಕಬ್ಬು ಬೆಳೆಗಾರರ ಪರವಾಗಿ ಇಲ್ಲಿದೆ, ಇವತ್ತು ಅದರ ಪರವಾಗಿ ನಿಂತುಕೊಳ್ಳಲಿಕ್ಕೆ ನೀವು ಹೇಳಿ

ಶ್ರೀ ಎಸ್ ಸಿದ್ಧರಾಮಯ್ಯ ಇವತ್ತು ನಾನು ಇಲ್ಲಿ ನಿಂತಿರುವುದು ಈ ಸರ್ಕಾರದ ಮೇಲೆ ಒತ್ತಾಯ ಮಾಡಲಿಕ್ಕೆ ಜನ ನನ್ನನ್ನು ಆಶೀರ್ವಾದ ಮಾಡಿ ಕಳುಹಿಸಿದ್ದಾರೆ ಅಲ್ಲಿ ಆಮೇಲೆ ಒತ್ತಾಯ ಮಾಡುವುದು ಇದ್ದೇ ಇರುತ್ತದೆ ನಾನು ಇಲ್ಲಿ ಮಾತನಾಡುವುದು, ಪಾರ್ಲಿಮೆಂಟರಿಯಲ್ಲಿ ಹೋಗಿ ಮಾತನಾಡಲಿಕ್ಕೆ ಆಗುವುದಿಲ್ಲ I can't enter the Parliament

ಶ್ರೀ ಬಿ ಶಿವರಾಂ   ಪಾರ್ಲಿಮೆಂಟ್ ಗೆ ಕಳುಹಿಸಿರುವವರು ಹೋಗಿ ಮಾತನಾಡುತ್ತಾರೆ ಅಲ್ಲಿಗೆ ಕೆಲವರು ಹೋಗುತ್ತಿಲ್ಲವಲ್ಲ

ಶ್ರೀ ಎಸ್ ಸಿದ್ದರಾಮಯ್ಯ   ಆದ್ದರಿಂದ ಪಾರ್ಲಿಮೆಂಟರಿಗೆ ಹೋದವರು ಅದನ್ನೆಲ್ಲಾ ಎತ್ತಲಿ ನನ್ನನ್ನು ಇಲ್ಲಿ ಜನ ಆಶೀರ್ವಾದ ಮಾಡಿ ಕಳುಹಿಸಿರುವುದು ಇಲ್ಲಿ ಕರ್ನಾಟಕದ ಅಸೆಂಬ್ಲಿಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಆದ್ದರಿಂದ I have every right ಪಾರ್ಲಿಮೆಂಟರಿ ಮೆಂಬರ್ಸ್ ಇದ್ದಾರೆ ಅವರು ಅಲ್ಲಿ ಮಾತನಾಡುತ್ತಾರೆ ನಾವು ಕೂಡ ಕೇಂದ್ರಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಒತ್ತಾಯ ಮಾಡಬಾರದು ಎಂದು ನಾನೇನು ಹೇಳುವುದಿಲ್ಲ ಕೇಂದ್ರಸರ್ಕಾರದ ಮೇಲೆ ಒತ್ತಾಯ ಮಾಡಬೇಕು ಕೇಂದ್ರಸರ್ಕಾರವೂ ಕೂಡ ಬರಬೇಕು ಈಗ ಕೇಂದ್ರಸರ್ಕಾರ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆಂದು ಹೇಳಿ ವಿದರ್ಭ ಪ್ಯಾಕೇಜ್ ಎಂದು ಹೇಳಿ commonly known as vidarba package, ಅದಕ್ಕೆ ಪ್ರಧಾನಿ ಮಂತ್ರಿಗಳಾದ ಶ್ರೀ ಮನಮೋಹನ್ ಸಿಂಗ್ ರವರು ಆರು ಜಿಲ್ಲೆಗಳಲ್ಲಿ ೨,೬೮೯-೦೦ ಕೋಟಿ ರೂ ಗಳನ್ನು ಅದರಲ್ಲಿ ಹಾಸನವೂ ಸೇರಿಕೊಂಡಿದೆ ಹೊಳೆನರಸೀಪುರ ಕೂಡ ಸೇರಿದೆ

ಶ್ರೀ ಬಿ ಶಿವರಾಂ   ನಮ್ಮಲ್ಲಿ ಜಾಸ್ತಿ ಇದೆ, ಅದಕ್ಕೆ ಅದನ್ನು ಸೇರಿಸಿದ್ದಾರೆ, ನಮ್ಮ ಜಿಲ್ಲೆಗೆ ಅದೊಂದು ಪ್ರಶಸ್ತಿ ಇದ್ದ ಹಾಗೆ

ಶ್ರೀ ಎಸ್ ಸಿದ್ಧಣ್ಣರಾಮಯ್ಯ ಇಲ್ಲಪ್ಪಾ ನನಗೇನು ಹೊಟೆ ಉರಿ ಇಲ್ಲ ಹೊಟ್ಟೆ ಉರಿ ಎಲ್ಲಾ ನಿಮ್ಮ ಹತ್ತಿರ ಇರುವುದು, ನನಗೇಕೆ ಹೊಟ್ಟೆ ಉರಿ ಮಾಡಲಿಕ್ಕೆ ಹೋಗುವಿರಿ? ಇಲ್ಲದಿದ್ದರೆ ಪರವಾಗಿಲ್ಲ ಹೊಟ್ಟೆ ಉರಿ ಯಾರಿಗಿದೆ ಎಂಧು ಇಡೀ ನಾಡಿನ ಜನತೆಗೆ ಗೊತ್ತಾಗಿದೆ ನನಗೇಕೆ ನಿಮ್ಮ ಮೇಲೆ ಹೊಟ್ಟೆ ಉರಿ ಮಧ್ಯೆ ರೇವಣ್ಣ ಮಾತನಾಡಬೇಡಿ

ಶ್ರೀ ಎಂ ಪಿ ಪ್ರಕಾಶ್ ಆರಂಭದಲ್ಲಿ ನಿಮ್ಮ ಮಾತು ಬಹಳ ಚೆನ್ನಾಗಿದೆ, ಮಧ್ಯೆ ಈ interruptions ಬಿಟ್ಟು ಅಲ್ಲಿಗೆ ಬನ್ನಿ ಬಹಳ

ಚೆನ್ನಾಗಿ ಬರುತ್ತಿದೆ ಒಪ್ಪಿಕೊಂಡೆ, we want to learn, ಆದ್ದರಿಂದ ದಯಮಾಡಿ ಮೊದಲಿನ ತರಹ ಮಾತನಾಡಿ

ಶ್ರೀ ಎಸ್ ಸಿದ್ದರಾಮಯ್ಯ ಒಂದೊಂದು ಸಾರಿ ಕೆಲವರಿಗೇನಾಗುತ್ತದೆ ಸತ್ಯ ಹೇಳಿದರೆ ಬಯ್ಯುವ ಹಾಗೆ ಅನ್ನಿಸುತ್ತದೆ ಸತ್ಯ ಹೇಳಿದರೆ ಬಯ್ಯಯುವ ಹಾಗೆ ಅನ್ನಿಸಿದರೆ ನಾನೇನು ಮಾಡಲಿಕ್ಕಾಗುತ್ತದೆ ಆದ್ದರಿಂದ ಸತ್ಯವನ್ನೇ ಹೇಳಬಾರದೆಂದರೆ ಹೇಗೆ, ಇನ್ನು ಮೇಲೆ ನಾನು ನಿಮ್ಮ ತಂಟೆಗೆ ಬರುವುದಿಲ್ಲ ಬಿಡಿ ಹೋಗಲಿ

ಶ್ರೀ ಹೆಚ್ ಡಿ ರೇವಣ್ಣ ತಾವು ಹಿಂದಿನ ೫ ವರ್ಷಗಳದ್ದು ಸ್ವಲ್ಪ ಹೇಳಬೇಕು, ಬರೇ ಇದನ್ನೇ ಹೇಳಬಾರದು ತಾವು ಒಳ್ಳೆಯ ಕೆಲಸವನ್ನೇ ಮಾಡಿದ್ದೀರಿ

ಶ್ರೀ ಎಸ್ ಸಿದ್ಧರಾಮಯ್ಯ ನಾನು ಕಳೆದ ಸಾರಿ ಬಜೆಟ್ ಮೇಲೆ ಚರ್ಚೆ ಮಾಡುವಾಗ ಕಬ್ಬಿನ ಸಮಸ್ಯೆಯಿರಲಿಲ್ಲ, ಕಬ್ಬಿನ ಸಮಸ್ಯೆ ಇತ್ತೇ ಪ್ರಕಾಶರವರೇ ಹೋದ ಸಾರಿ ಆಗ ಕಬ್ಬಿನ ಸಮಸ್ಯೆ ಇರಲಿಲ್ಲ ಈ ಸಾರಿ ಕಬ್ಬಿನ ಸಮಸ್ಯೆ ಇದೆ

ಈ ಸಾರಿ ಕಬ್ಬಿನ ಸಮಸ್ಯೆ ಇದೆ ಅದನ್ನು ಬಗೆಹರಿಸಬೇಕೋ, ಬೇಡವೋ? ಪ್ರತಿ sugar factory ವ್ಯಾಪ್ತಿಯಲ್ಲಿ ಒಂದು ಲಕ್ಷ, ಒಂದೂವರೆ ಲಕ್ಷ, ಎರಡು ಲಕ್ಷ ಟನ್ ಕಬ್ಬು ಇದೆ ರೈತರು ಎಲ್ಲಿಗೆ ಹೋಗಬೇಕು? ನಾವು ರೈತರ ೨೫,೦೦೦ ಸಾವಿರ ರೂಪಾಯಿಗಳ ಬೆಳೆ ಸಾಲವನ್ನು ಮನ್ನಾ ಮಾಡಿದೆವು ಎಮದು ನೀವು ಪ್ರಚಾರ ಮಾಡಿಕೊಳ್ಳುವುದು ಒಂದು ಕಡೆಯಾದರೆ, ಇನ್ನಂದು ಕಡೆ this real problem is to be solved The farmers are facing seriosu problem That is to be solved by the Governement ಅದರ ಕಡೆ ನೀವು ಗಮನ ಕೊಡಲಿಲ್ಲ ಎಮದು ನಾನು ಹೇಳುತ್ತಿದ್ದೇನೆ ಆದ್ದರಿಂದ ಇದರ ಬಗ್ಗೆ ಸರ್ಕಾರದವರು ಏನೇನು ಮಾಡಲಿಕ್ಕೆ ಸಾಧ್ಯವಾಗುತ್ತದೋ ಅದನ್ನು ಮಾಡಬೇಕು Transport subsidy

ಕೊಡುವಂಥಾದ್ದು, purchase tax ತೆಗೆದು ಹಾಕತಕ್ಕಂಥಾದ್ದು ಇವುಗಳನ್ನೆಲ್ಲ ಕೂಡಲೇ ಮಾಡಬೇಕು ಲೇಟ್ ಆಗಿ ಬಿಟ್ಟರೆ ಆದರಿಂದ ಪ್ರಯೋಜನವೇನೂ ಆಗುವುದಿಲ್ಲ ಏಕೆಂದರೆ ಅಷ್ಟರಲ್ಲಿ ಕಬ್ಬು ಒಣಗಿ ಹೋಗುತ್ತದೆ

ಶ್ರೀ ಪ್ರಕಾಶ್ ಬಿ ಹುಕ್ಕೇರಿ ಮಹಾರಾಷ್ಟ್ರದಲ್ಲಿ ಈಗಾಗಲೇ ಕೊಡುತ್ತಿದ್ದಾರೆ ಮತ್ತು purchase tax ತೆಗೆದು ಹಾಕಿದ್ದಾರೆ

ಶ್ರೀ ಹೆಚ್ ಡಿ ರೇವಣ್ಣ ಕೇಂದ್ರ ಸರ್ಕಾರದ ಮಂತ್ರಿಗಳಾದ ಶರದ್ ಪವಾರ್ ರವರು sugar factory ಬಗ್ಗೆ ಏನು ಹೇಳಿದ್ದಾರೆ ಇನ್ನುವುದನ್ನೂ ಗಮನದಲ್ಲಿಟ್ಟುಕೊಳ್ಳಬೇಕು

ಶ್ರೀ ಸಿದ್ಧರಾಮಯ್ಯ ರೇವಣ್ಣನವರಿಗೆ ಸ್ವಲ್ಪ ಕುಳಿತುಕೊಳ್ಳಲು ಹೇಳಿ ಪದೇ ಪದೇ ಎದ್ದೇಳಬೇಡಿ ಎಂದು ರೇವಣ್ಣನವರಿಗೆ ಹೇಳಿ I am not yielding

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಮಹಾರಾಷ್ಟ್ರದಲ್ಲಿ ಒಂದು ಟನ್ ಕಬ್ಬಿಗೆ ಒಂದು ನೂರು ರೂಪಾಯಿಗಳನ್ನು ಕೊಡುತ್ತಿದ್ದಾರೆ

ಶ್ರೀ ಸಿದ್ಧರಾಮಯ್ಯ ನನಗೆ disturb ಮಾಡಬೇಕು ಎಂದು ನಿರ್ಧಾರ ಮಾಡಿಕೊಂಡು ಬಂದಿದ್ದೀರಾ ರೇವಣ್ಣನವರೇ?

ಅಧ್ಯಕ್ಷರು ಅವರಿಗೆ ಮಾತನಾಡಲು ಬಿಡಿ ಈ ರೀತಿ ಎಲ್ಲರೂ ಮಧ್ಯೆ ಮಧ್ಯೆ ಮಾತನಾಡಿದರೆ ಏನೂ ಪ್ರಯೋಜನವಾಗುವುದಿಲ್ಲ

ಶ್ರೀ ಸಿದ್ಧರಾಮಯ್ಯ ಕೇಂದ್ರ ಸರ್ಕಾರ ಏನು ಮಾಡಿದೆ, ಏನು ಮಾಡಿಲ್ಲ ಎನ್ನತಕ್ಕಂಥಾದ್ದು separate ವಿಚಾರ ಈಗ ನಾವು ಮಾತನಾಡುತ್ತಿರುವುದು ರಾಜ್ಯದ ಬಜೆಟ್ ಬಗ್ಗೆ ಕೇಂದ್ರ ಸರ್ಕಾರದ ಬಜೆಟ್ ಬಗ್ಗೆ ಮಾತನಾಡುತ್ತಿಲ್ಲ ಮಹಾರಾಷ್ಟ್ರದಲ್ಲಿ ಒಂದು ಟನ್ ಕಬ್ಬಿಗೆ ಒಂದು ನೂರು ರೂಪಾಯಿಗಳನ್ನು ಆಗಲೇ ಕೊಟ್ಟಿದ್ದಾರೆ ಅದೇ ರೀತಿ ಇಲ್ಲೂ ಕೊಡಿ ಈ ವರ್ಷ ಕಷ್ಟ ಬಂದಿರುವುದರಿಂದ ಈ ವರ್ಷ ಕೊಡಿ

ಅದನ್ನು ಮಾಡಿ ಎಂದು ಹೇಳಿದರೆ, ಕೇಂದ್ರ ಸರ್ಕಾರ ಏನು ಮಾಡಿದೆ ನಾವು ಏನು ಮಾಡಿದ್ದೇವೆ ಎಂದು ಹೇಳುವುದಕ್ಕೆ ಬರುವುದಿಲ್ಲ ಅದನ್ನು ಇಷ್ಟಕ್ಕೇ ನಿಲ್ಲಿಸುತ್ತೇನೆ ಕಬ್ಬಿನ ಸಮಸ್ಯೆ ಇವತ್ತು ಬಹಳ ಕಠಿಣವಾಗಿದೆ ಗಂಭೀರವಾದಂಥ ಸಮಸ್ಯೆಯಾಗಿದೆ, ಹಾಗಾಗಿ ನೀವು ರೈತರ ನೆರವಿಗೆ ಬರಬೇಕು ಎನ್ನತಕ್ಕಂಥಾದ್ದು ಒಂದು

ಇನ್ನು ಕೃಷಿ ಬಗ್ಗೆ ಹೇಳುವುದಾದರೆ, ಮೊದಲಿಗೆ ಈ ಸಾರಿಯ plan ಬಗ್ಗೆ ಹೇಳಿಬಿಡುತ್ತೇನೆ ೨೦೦೫-೦೬ರಲ್ಲಿ ೧೩,೫೫೫ ಕೋಟಿ ರೂಪಾಯಿಗಳನ್ನು ಇಟ್ಟಿದ್ದರೆ, ೨೦೦೬-೦೭ ಕ್ಕೆ ಅಂದರೆ current year ಗೆ ಇವರು ಇಟ್ಟಿರುವುದು ೧೭,೭೮೨ ಕೋಟಿ ರೂಪಾಯಿಗಳು ಅದರ ಪ್ರಕಾರ, ೧೦% growth ಆಗಿದೆ ಎಂದು ನೀವು ಹೇಳಿದ್ದೀರಿ ಇನ್ನೊಂದು ಸಂಪನ್ಮೂಲಗಳು ಸಿಗುತ್ತಿರುವಾಗ why you have restricted to only 10% Last yeai it was 33% This year it is only 10%, why? ಜನವರಿಯಲ್ಲಿ ನೀವೇ ಕೊಟ್ಟಿರತಕ್ಕಂಥ figures ಪ್ರಕಾರ Inflation 6 58 ಆಗಿದೆ ಅದರ ಹಿಂದಿನ ವರ್ಷ ಅಂದರೆ ಹೋದ ವರ್ಷದ ಜನವರಿಯಲ್ಲಿ ४ ೫ ಇತ್ತು ಇಷ್ಟು inflation ಆದರೂ ಕೂಡ ನೀವು ಮುಂದಿನ ವರ್ಷ planಗೆ ನೀವು ಹೆಚ್ಚು ದುಡ್ಡು ಖರ್ಚು ಮಾಡಲು ಹಿಂದೇಟು ಹೊಡೆಯುತ್ತಿದ್ದೀರಿ ಈ ವರ್ಷ ೧೧ನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುತ್ತಿದೆ ಕಳೆದ ಯೋಜನೆಗಿಂತ, ಅಂದರೆ ೧೦ನೇ ಪಂಚವಾರ್ಷಿಕ ಯೋಜನೆಗಿಂತ ೧೧ನೇ ಪಂಚವಾರ್ಷಿಕ ಯೋಝನೆಯಲ್ಲಿ the growth is 122% ಅದರ ಪ್ರಕಾರ ಬೆಳವಣಿಗೆ ಆಗಬೇಕಲ್ಲವೇ? ೧೧ನೇ ಪಂಚವಾರ್ಷಿಕ ಯೋಜನೆಗೆ ೯೬,೭೦೩ ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ ೯ನೇ ಪಂಚವಾರ್ಷಿಕ ಯೋಜನೆಯಲ್ಲಿ ೨೩,೪೦೦ ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದರು ೯ ರಿಂದ ೧೦ನೇ ಯೋಜನೆಗೆ ೮೨% growth, ೧೦ರಿಂದ ೧೧ ಕ್ಕೆ ೧೨೨% growth ಇದ್ದರೆ, ಇವತ್ತು ನಿಮ್ಮದು ಮೊದಲನೇ ವರ್ಷವೇ less than 10% growth ಇದೆ ಅಂದರೆ, ೧೧ನೇ

ಪಂಚವಾರ್ಷಿಕ ಯೋಜನೆಯಲ್ಲಿ ಯೋಜನಾ ಆಯೋಗದವರು ನಿಗದಿ ಮಾಡಿರತಕ್ಕಂಥಾದ್ದಕ್ಕೆ ನೀವು ವಿರುದ್ಧವಾಗಿ ಹೊರಟಿದ್ದೀರಿ You do not want to spend money on Plan schemes, Plan schemes, Plan projects ನನ್ನ ಪ್ರಕಾರ ಕನಿಷ್ಟ ಪಕ್ಷ, ಈ ವರ್ಷಕ್ಕೆ Plan size 20,000 ಕೋಟಿ ರೂಪಾಯಿಗಳಾದರೂ ಇರಬೇಕಾಗಿತ್ತು ಏಕೆಂದರೆ, ೯೬,೭೦೩ ಕೋಟಿ ರೂಪಾಯಿಗಳನ್ನು ೨೦೦೬-೦೭ರ rate ನಲ್ಲಿ ಲೆಕ್ಕ ಹಾಕಿರುವುದು ೨೦,೦೦೦ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಇರಬೇಕಾಗಿತ್ತು This clearly shows that ನೀವು ಬೆಳವಣಿಗೆಯ ದಾರಿ ತಪ್ಪುತ್ತಿದ್ದೀರಿ ಇದರಿಂದ ಬೆಳವಣಿಗೆ ಕುಂಠಿತವಾಗಲು ಪ್ರಾರಂಭವಾಗುತ್ತದೆ

ಇನ್ನು, ನೀರಾವರಿ ಬಗ್ಗೆ ಹೇಳಬೇಕಾದರೆ, ಯಡಿಯೂರಪ್ಪನವರು ಜಾಸ್ತಿ ಇದೆ ಎಂದು ಹೇಳುತ್ತಾರೆ, ಅದನ್ನು ನಾನು ಒಪ್ಪುವುದಿಲ್ಲ ಅದನ್ನು ಅವರು ತಮ್ಮ ಉತ್ತರದಲ್ಲಿ ತೋರಿಸಬೇಕು ನಾನು ಮೂರು ಬಜೆಟ್ ಪುಸ್ತಕಗಳನ್ನು ತೆಗೆದುಕೊಂಡು ಬಂದಿದ್ದೇನೆ ೨೦೦೬-೦೭ರಲ್ಲಿ Plan ನಲ್ಲಿ allocation 3,942 41 ಕೋಟಿ ರೂಪಾಯಿಗಳಿತ್ತು ೨೦೦೬-೦೭ ರಲ್ಲಿ ಅದು ೪,೨೮೦ ಕೋಟಿ ರೂಪಾಯಿಗಳಷ್ಟಿತ್ತು The allocation is 26 48% ೨೦೦೪-೦೫ರಲ್ಲಿ the allocation is 29 04% ೨೦೦೫-೦೬ರಲ್ಲಿ the allocation is 26 48% ೨೦೦೬-೦೭ರಲ್ಲಿ the allocation is 26% ಈಗ ೨೦೦೭-೦೮ರಲ್ಲಿ the allocation is 3 145 77 ಕೋಟಿ ರೂಪಾಯಿಗಳು ಅಂದರೆ ೧೭.೬೯% ಆಗುತ್ತದೆ ನಾನು ಹೇಳಿದ್ದುದು allocation of funds when compared to last year ಕಳೆದ ವರ್ಷಗಳಲ್ಲಿ ಎಷ್ಟು allocation ಇತ್ತು ಈ ವರ್ಷ ಎಷ್ಟು allocation ಇದೆ, ಅದರ ಮೇಲೆ growth ಅವಲಂಬಿತವಾಗುತ್ತದೆ

ಶ್ರೀ ಹೆಚ್ ಡಿ ರೇವಣ್ಣ ೨೦೦೫-೦೬ರಲ್ಲಿ ಹಿಂದಿನ ಬಿಲ್ ಬಾಕಿ ಎಷ್ಟು ಇತ್ತು ಎನ್ನುವುದನ್ನೂ ತಾವು ಹೇಳಬೇಕು ಏಕೆಂದರೆ, ಹಳೆಯ ಬಿಲ್ ಬಾಕಿ ಇತ್ತಲ್ಲ, ಅದೂ ಅದರಲ್ಲಿ ಸೇರಿದೆ ತಾವು ಅದನ್ನೂ ಹೇಳಿ

ಶ್ರೀ ಸಿದ್ದರಾಮಯ್ಯ Plan allocation ಗೂ ಬಾಕಿ ಬಿಲ್ ಗೂ ಸಂಬಂಧವಿಲ್ಲ ತಾವು ದಯವಿಟ್ಟು ಕುಳಿತುಕೊಳ್ಳಿ ಸುಮ್ಮನೇ ಗೊತ್ತಿಲ್ಲದೇ ಏನೋ ಮಾತನಾಡಬೇಡಿ ರೇವಣ್ಣನವರೇ, ಕುಳಿತುಕೊಳ್ಳಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೇ, ಸ್ವಲ್ಪ ಕೇಳಿ Record straight ಇರಬೇಕು ಎಸ್ ಎಂ ಕೃಷ್ಣಾರವರ ಕಾಲದಲ್ಲೂ ಕೂಡ 29% allocation ಇತ್ತು ಸುಮಾರು ಎರಡು ವರ್ಷಗಳ ಕಾಲ allocation ೨೯% ಇತ್ತು ಇವರು ಬಂದಮೇಲೆ ಅದು ೨೬% ಆಯಿತು ೨೬% ಕಡಿಮೆಯಾಗಿದೆ ಎಂದು ಅವರಿಗೆ ಹೇಳಿದ ಮೇಲೆ next year 29% allocation ಮಾಡಿದರು ಈಗ ಅವರು ಹೇಳುತ್ತಿರತಕ್ಕಂಥಾದ್ದೇನೆಂದರೆ, ನೀವು allocate ಮಾಡಿದ್ದು ೧೭% ಪಂಚವಾರ್ಷಿಕ ಯೋಜನೆಗಳಲ್ಲಿ ಇದಕ್ಕೆ ೫-೬ ಸಾವಿರ ಕೋಟಿ ರೂಪಾಯಿಗಳನ್ನು allocate ಮಾಡುತ್ತಿದ್ದಾರೆ ನೀವು ಅದ್ಯಾವುದನ್ನೂ ಗಮನದಲ್ಲಿಟ್ಟುಕೊಳ್ಳದೇ, ೧೭% allocation ಮಾಡಿ, ಹಿಂದೆ ಏನಿತ್ತು, ಬಾಕಿ ಇತ್ತು ಎಮದು ಹೇಳಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ ಇದು PWD ಇಲಾಖೆಯಲ್ಲ

ಶ್ರೀ ಎಂ ಪಿ ಪ್ರಕಾಶ್ Debt relief ಎನ್ನತಕ್ಕದ್ದನ್ನು ಇದರಲ್ಲಿಯೇ ಸೇರಿಸಿದ್ದಾರೆ ಯೋಜನೇತರದಲ್ಲಿ, ನಾಲ್ಕು ಸಾವಿರ ಚಿಲ್ಲರೆ ಏನಿದೆಯಲ್ಲ

ಶ್ರೀ ಸಿದ್ದರಾಮಯ್ಯ ಅದನ್ನೂ ಸೇರಿಸುಕೊಳ್ಳೋಣ

ಶ್ರೀ ಎಂ ಪಿ ಪ್ರಕಾಶ್ Net servicing ಏನಾಗಿದೆ? ೧೫೪೬ ಅದನ್ನು ನಿಮ್ಮ ಅಲೋಕೇಷನ್ ನಲ್ಲಿ ಇರಿಗೇಷನ್ ನಲ್ಲಿ ತೋರಿಸಿಕೊಂಡಿದ್ದೀರಿ

ಶ್ರೀ ಸಿದ್ಧರಾಮಯ್ಯ ಅದನ್ನು ಬರೆದಿರುವುದು ಎಲ್ಲಿ?

ಶ್ರೀ ಎಂ ಪಿ ಪ್ರಕಾಶ್ ಸಾಲ ತೀರುವಳಿಯಾಗಿರುವಂಥದ್ದು ನೀವೇ ಪ್ರಾರಂಭದಲ್ಲಿ ಹೇಳಿದಿರಿ Higher rate of interest

ಶ್ರೀ ಸಿದ್ದರಾಮಯ್ಯ ಅದನ್ನೂ ಸೇರಿಸಿಕೊಳ್ಳೋಣ

ಶ್ರೀ ಎಂ ಪಿ ಪ್ರಕಾಶ್ Net servicing ಏನಾಗಿದೆ? ೧೫೪೬ ಅದನ್ನು ನಿಮ್ಮ ಅಲೊಕೇಷನ್ ನಲ್ಲಿ ಇರಿಗೇಷನ್‌ನಲ್ಲಿ ತೋರಿಸಿಕೊಂಡಿದ್ದೀರಿ

ಶ್ರೀ ಸಿದ್ದರಾಮಯ್ಯ ಅದನ್ನು ಬರೆದಿರುವುದು ಎಲ್ಲಿ?

ಶ್ರೀ ಎಂ ಪಿ ಪ್ರಕಾಶ್ ಸಾಲ ತೀರುವಳಿಯಾಗಿರುವಂಥಾದ್ದು ನೀವೇ ಪ್ರಾರಂಭದಲ್ಲಿ ಹೇಳಿದಿರಿ Higher rate of interest

ಶ್ರೀ ಸಿದ್ದರಾಮಯ್ಯ ಆಯಿತು, Assuming for the argument sake

ಶ್ರೀ ಜೆ ಸಿ ಮಾಧುಸ್ವಾಮಿ ಸಾಲ ತೀರಾವಳಿ ಕೂಡ ೧೪% ನಿಂದ ೧೨% ಗೆ ಈಗ ಇಳಿದಿದೆ ೧೪ paise per rupee ಎಂದು ತೀರುವಳಿ ಕೊಡುತ್ತಿದ್ದಿರಿ, it is 12 paise now

ಶ್ರೀ ಸಿದ್ದರಮಯ್ಯ ನಾನು ಈಗ ಅಲ್ಲಿಗೆ ಬರುತ್ತೇನೆ ಪ್ರಕಾಶ್ ಈಗ ನೀವು ನೀರಾವರಿಗೆ ಬಹಳ ಜಾಸ್ತಿ ಮಾಡಿಬಿಟ್ಟಿದ್ದೇವೆ ಎಂದು ಹೇಳುತ್ತಿದ್ದೀರಲ್ಲ, plan ನಲ್ಲಿ ಆಯಿತು ಹೋಗಲಿ ಅದನ್ನು ಬಿಟ್ಟುಬಿಡಿ ಅದನ್ನು ಅಷ್ಟಕ್ಕೆ ನಿಲಿಸುತ್ತೇನೆ ೧೧ನೇ plan ನಲ್ಲಿ, ಸುಮಾರು ೨೫ ಸಾವಿರ ಕೋಟಿಯನ್ನು ನೀರಾವರಿಗೆ ಖರ್ಚು ಮಾಡಬೇಕೆಂದು ಹೇಳುತ್ತಾರೆ ಐದು ವರ್ಷದಲ್ಲಿ, ಹಾಗಾದರೆ ಮೊದಲನೇ ವರ್ಷ ಎಷ್ಟು ಇಡಬೇಕು? ಹೇಳಿ ನೋಡೋಣ ಬಜೆಟ್ ನಲ್ಲೇ ಇದೆ, ತೆಗೆದು ನೋಡಿ ಸಾವಿರ ಇಡಬೇಕಲ್ಲ Why you kept only 3,100? ಅದನ್ನು ಲೆಕ್ಕಕ್ಕೆ ಸೇರಿಸಿಕೊಂಡು ಅದೇನೊ ಬಡ್ಡಿ ತೀರಿಸಿ ಸಾಲ ಕೊಟ್ಟುಬಿಟ್ಟಿದ್ದೇವೆ, ಎನ್ನುವಿರಿ ಹಾಗಾದರೆ ಈ ಯಾರದು? ನೀವು ಆ ದಾರಿಯಲ್ಲಿ ಹೋಗಬೇಕಲ್ಲ ೨೪ಸಾವಿರ ಕೋಟಿ ಐದು ವರ್ಷದಲ್ಲಿ ನೀವು ಖರ್ಚು

ಮಾಡಿ ಎಂದು ೧೧ನೇ plan ನಲ್ಲಿ ನಲ್ಲಿ ನಿಮಗೆ ಹೇಳಿದ್ದಾರಲ್ಲ, Why have you reduced? ನಿಮಗೆ tribunal decision ಬಂದಿದೆ ಅಚ್ಚುಕಟ್ಟನ್ನು ಎಲ್ಲರೂ ಮುಗಿಸಿಕೊಳ್ಳಬೇಕು ನಮಗೆ ಇವತ್ತು ಕಬಿನಿ ಯಲ್ಲಿ ಅಚ್ಚುಕಟ್ಟು ಎಲ್ಲ ಮಾಡಿಕೊಂಡಿದ್ದರೆ ಬರೀ ನೀರು 12 tmc ಸಿಗುತ್ತೀರಲಿಲ್ಲ Second stage ಮಾಡಿ ಅದನ್ನೆಲ್ಲ ನಾವು ಅಚ್ಚುಕಟ್ಟು ಮಾಡಿಕೊಂಡಿದ್ದರೆ ಇವತ್ತು ತಮಿಳುನಾಡಿಗೆ ೨೧ tmc ನೀರನ್ನು ಕೊಡುತ್ತಿದ್ದಾರಲ್ಲ ಅದರಲ್ಲಿ ಅರ್ಧವಾದರೂ ನಮಗೆ ಸಿಗುತ್ತಿತ್ತು ಎರಡು ಲಕ್ಷ ಕರೆ ಅಲ್ಲಿ ಮಾಡಿಕೊಂಡಿದ್ದರೆ This is the loss ಕರ್ನಾಟಕಕ್ಕೆ, ನಾನೇನು ಹೇಳುವುದು ನೀವು ಯದ್ವಾತದ್ವಾ ಮಾಡಿ ಎಂದು ಹೇಳುವುದಿಲ್ಲ ಈಗ resource ಇರುವಾಗ ನೀವು non plan ಗಳಿಗೆ ಹೆಚ್ಚು ಖರ್ಚು ಮಾಡುವುದಕ್ಕೆ ಹೋಗುತ್ತೀರಿ Non developmental side ಗೆ ಹೆಚ್ಚಾಗಿ ಖರ್ಚು ಮಾಡುವುದಕ್ಕೆ ಹೋಗುತ್ತೀರಿ You have reduced the plan allocation That is my point ಕನಿಷ್ಟ ಪಕ್ಷ ಐದು ಸಾವಿರ ಕೋಟಿಗಿಂತ ಹೆಚ್ಚಿಗೆ ಇಡಬೇಕಾಗಿತ್ತು ಪ್ರತಿ ವರ್ಷ ಐದು, ಆರು, ಆರುವರೆ, ಏಳು ಈ ರೀತಿ ಹೋಗಬೇಕಾಗಿತ್ತು ನೀವು ಐದು ವರ್ಷದಲ್ಲಿ ೨೫ ಸಾವಿರ ಕೋಟಿಯನ್ನು ಖಚು ಮಾಡಬೇಕಾದರೆ ೧೧ ನೇ ಪಂಚ ವಾರ್ಷಿಕ ಯೋಜನೆಗಳು ಅಲಿ ಐದು ಸಾವಿರ ಕೋಟಿ ಇರಬೇಕೊ ಬೇಡವೊ ? ನೀರಾವರಿಗೂ ಕೂಡ ಕೇಂದ್ರ ಸರ್ಕಾರದಿಂದ ಹಣ ಬರುತತದೆ ಈ ರೀತಿ ಪರಿಸ್ಥಿತಿ ಇರುವಾಗ ನೀವ್ಯಾಕೆ ಕಡಿಮೆ ಮಾಡಿದಿರ? How can you expect food production ಹೆಚ್ಚಾಗಿ ಬರಬೇಕೆಂದು ಏಕೆ ಯೋಚನೆ ಮಾಡುತ್ತೀರಿ? How can you expect? Food production ಹೆಚ್ಚಾಗಬೇಕು, ಅವು ಎಲ್ಲಿ ಆಗುತ್ತದೆ? ನೀರಾವರಿ ಪ್ರದೇಶ ಮಳೆ ಇಲ್ಲದಿದ್ದರೂ ಕೂಡ ನೀರಾವರಿ ಪದಾರ್ಥಗಳನ್ನು ಬೆಳೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ? ನೀವು ಅಚ್ಚುಕಟ್ಟನ್ನು ಹೆಚ್ಚು ಮಾಡದೆ ಹಣವನ್ನು ಹೆಚ್ಚು ಖರ್ಚು ಮಾಡದೆ ಅದರಲ್ಲೂ ನೀರಾವರಿಯಲ್ಲಿ ನನಗೆ ಗೊತ್ತಿರುವ ಮಟ್ಟಿಗೆ ಹೆಚ್ಚು ಸೋರಿ ಹೋಗುವುದೇ ಜಾಸ್ತಿ ಇದು

ಎಲ್ಲರ ಕಾಲದಲ್ಲೂ ನಡೆದುಕೊಂಡು ಬಂದಿದೆ ಇದು ಇವತ್ತು ನಿನ್ನೆಯಲ್ಲ ಎಲ್ಲಾ ಕಾಲದಲ್ಲೂ ನಡೆಯುತ್ತಿದೆ ನೋಡುವುದಕ್ಕೆ ಮಾತ್ರ ದೊಡ್ಡ amount ಆಗಿ ಕಾಣಿಸುತ್ತದೆ, ಆದರೆ ಕೆಲಸದ ಮೇಲೆ ಎಷ್ಟು ಖರ್ಚಾಗುತ್ತದೆ, ಎಂದು ಹೇಳಿ? ಅದಕ್ಕಾಗಿ I demand, ಇನ್ನು ಮುಂದಾದರೂ ಕೂಡ ಈ ವರ್ಷದಿಂದ ಅದನ್ನು ಮಾಡಿ plan evaluation ಆಗಬೇಕು ಪ್ರತಿ ವರ್ಷ developmental expenditure evaluation ಆಗಬೇಕು Physical progress, evaluation ಅಂದರೆ physical progress ಎಷ್ಟು physical progress ಆಗಿದೆ ಭೌತಿಕ ಬೆಳವಣಿಗೆ ಎಷ್ಟು? ಹಣಕಾಸಿನ ಖರ್ಚೆಷ್ಟು ? ಎಷ್ಟು ಆಗಬೇಕಾಗಿತ್ತು? ಈ ರೀತಿ ಒಂದು evaluation ಪ್ರತಿ ವರ್ಷ ಆಗಲೇಬೇಕು ಇಲ್ಲದಿದ್ದರೆ ನಾವು ಹೆಚ್ಚಾಗಿ ಹಣವನ್ನು ಖರ್ಚು ಮಾಡುತ್ತೇವೆಂದು ಬರೀ figures ಅನ್ನೇ ಹೇಳಬೇಕಾಗುತ್ತದೆಯೇ ಹೊರತು ಅಚ್ಚುಕಟ್ಟು ಇರುವುದಿಲ್ಲ ಅಚ್ಚುಕಟ್ಟು ಬೆಳವಣಿಗೆಯಾಗುವುದಿಲ್ಲ That is why I demand ನಾನು evaluation ಮಾಡಲಿಲ್ಲ ಅದನ್ನು ಮಾಡುವುದಕ್ಕಾಗಲಿಲ್ಲ ಇನ್ನು ಮುಂದಾದರೂ ಕೂಡ ನೀವು ಮಾಡಿ ಅಡಿಟಂಗ್ ಆಗಬೇಕು ನೀವು performance burdget ಕೊಡಿ ಎಂದರೆ ಈ ಸಾರಿ ಕೊಟ್ಟಿಲ್ಲ ಯಡಿಯೂರಪ್ಪನವರೇ ನಿಮ್ಮ ಭರವಸೆಗಳು ಈಡೇರಿಲ್ಲವೆಂದರೆ, ಏಕೆ ಆಗಿಲ್ಲ ಹೇಳ್ರಿ ಎನ್ನುತ್ತಾರೆ ಯಾವುದಾವುದು ಆಗಿಲ್ಲವೆಂದು ಓದಿ ಹೇಳಲೇ?

ಶ್ರೀ ಜಯಪ್ರಕಾಶ್ ಹೆಗ್ಡೆ ನಾನು ಮೊನ್ನೆ ಹೇಳಿದಾಗ ಸಿಟ್ಟು ಮಾಡಿಕೊಂಡುಬಿಟ್ಟರು

ಶ್ರೀ ಸಿದ್ದರಾಮಯ್ಯ ಬರೀ ಭರವಸೆಗಳು ಅದಕ್ಕೇ ನಾನು ಪಟ್ಟಿ ಮಾಡಿದಿದೆ ನಿಮ್ಮ ಹತ್ತಿರ ಇದ್ದರೆ ಅದನ್ನು ಹೇಳಿಬಿಡಿ ನಿಮಗೆ ಬೇಕೆಂದರೆ ಹೇಳುತ್ತೇನೆ

ಶ್ರೀ ಬಿ ಎಸ್ ಯಡಿಯೂರಪ್ಪ ೨೦೦೬-೦೭ರಲ್ಲಿ ಹೇಳಿರುವುದನ್ನು ಯಾವುದನ್ನು ಮಾಡಿಲ್ಲ ತಾವು ಅದರ ಬಗ್ಗೆ ಒಂದು ಪಟ್ಟಿ ಮಾಡಿ ಕಳುಹಿಸಿಕೊಡಿ

ಶ್ರೀ ಸಿದ್ದರಾಮಯ್ಯ ನಿಮಗೆ ಗೊತ್ತಿಲ್ಲವೇ? Finance Department ಇರುವುದು ಏತಕ್ಕೆ? ನಾವು ಪಟ್ಟಿ ಕೊಡುವುದಾದರೆ ನಿಮ್ಮ ಇಲಾಖೆ ಏಕಿರಬೇಕು? ನಾನು ಬೇಕಾದರೆ ಹೇಳುತ್ತೇನೆ ನಿಮಗೆ ಎಲ್ಲ ಬೇಕಾದರೆ ಓದುತ್ತೇನೆ ಪೇಜ್ ನಂಬರ್ ೨೦ ರಲ್ಲಿ ನೀವುಏನೇನೊ ಎಂದು ಹೇಲಿದ್ದೀರಲ್ಲ ಅ ವುಗಳಲ್ಲಿ ಯಾವುದು ಆಗಿದೆ, ಯಾವುದು ಆಗಿಲ್ಲವೆಂದು ನೋಡಿ ಈಗ ಹೇಳಲೇ?

ಶ್ರೀ ಬಿ ಎಸ್ ಯಡಿಯೂರಪ್ಪ Action taken report ಅನ್ನೆ ಕೊಟ್ಟಿದ್ದೇವೆ

ಶ್ರೀ ಸಿದ್ದರಾಮಯ್ಯ ಬಜೆಟ್ ಪುಸ್ಕದಲ್ಲಿ ನಾನು ಓದುತ್ತೇನೆ ನಾನು ಬುರುಡೆ ಹೊಡೆಯುವುದಿಲ್ಲ ಬಜೆಟ್ ಪುಸ್ತಕದಲ್ಲಿರುವುದನ್ನು ಹೇಳುತ್ತೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ೪೮ ಕಾರ್ಯಕ್ರಮದಲ್ಲಿ ೧೫ ಆಗಿದೆ

ಶ್ರೀ ಸಿದ್ದರಾಮಯ್ಯ ನೀವು ಆರಾಧನಾ ಕಮಿಟಿಯನ್ನೇ ಮಾಡಿಲ್ಲ ಕುಳಿತುಕೊಳ್ಳಿ (ಮಾನ್ಯ ಸಚಿವರಾದ ನಾಗರಾಜ ಶೆಟ್ಟಿಯವರನ್ನು ಉದ್ದೇಶಿಸಿ) ೧೪ ತಿಂಗಳಾಯಿತು ಆರಾಧನಾ ಸಮಿತಿಯನ್ನು ಮಾಡಿಲ್ಲ

ಶ್ರೀ ಸಿ ಮಾಧುಸ್ವಾಮಿ ಎರಡು ಲಕ್ಷಣ ಎಂಭತ್ತು ಸಾವಿರ ಒಂದೊಂದು ಕ್ಷೇತ್ರಕ್ಕೆ ತಾವು ಮುಜರಾಯಿಯಲ್ಲಿ ಆರಾಧನಾಗ ಕೊಟ್ಟಿರುವುದು ತಾವು ಐದು ಲಕ್ಷ ರೂ ಗಳನ್ನು ಕೊಡುತ್ತೇವೆಂದು ಹೇಳಿ ಮಾತನ್ನು ಕೊಟ್ಟಿರುವುದು ಯಾವುದೇ ಕ್ಷೇತ್ರಕ್ಕೆ ಐದು ಲಕ್ಷ ರಿಲೀಸ್ ಆಗಿಲ್ಲ

ಶ್ರೀ ಬಿ ಶಿವರಾಂ ಸಮಿತಿಯನ್ನೇ ಮಾಡದೆ ಹಣವನ್ನು ವಾಪಸ್ ತೆಗೆದುಕೊಂಡಿದ್ದಾರೆ

ಶ್ರೀ ಪಿ ಟಿ ಪರಮೇಶ್ವ ನಾಯಕ್ ಆರಾಧನಗೆಂದು ಹಣವನ್ನು ಕೊಟ್ಟಿದ್ದರು ಒಂದು ವರ್ಷವಾದರೂ ಅದಕ್ಕೆ ಸಮಿತಿಯನ್ನೇ ಮಾಡಲಿಲ್ಲ

(ಗೊಂದಲ)

ಶ್ರೀ ಸಿದ್ದರಾಮಯ್ಯ ಮಾನ್ಯ ಅಧ್ಯಕ್ಷರೇ, Why are you loosing your patience? ನಾಗರಾಜಶೆಟ್ಟಿಯವರು ಯಾವುದು ಮಾಡಿಲ್ಲವೆಂದು ಹೇಳಿದ್ದು? ಹೋದ ವರ್ಷ ಐದು ಲಕ್ಷ ಕೊಟ್ಟಿದ್ದೇವೆ ಆರಾಧನಾ ಸ್ಕೀಮ್ ನಲ್ಲಿ ಎಂದು ಹೇಳಿದ್ದೀರಿ ನಮಗೆ ನಮ್ಮ ಕ್ಷೇತ್ರದಲ್ಲಿ ಆರಾಧನಾ ಸಮಿತಿ ಎಂದು ಮಾಡಿದ್ದೀರಾ? ಆರಾಧನಾ ಸಮಿತಿ ಇಲ್ಲದೇನೆ ಖರ್ಚು ಎಲ್ಲಿ ಮಾಡುವುದು? ಅದರ ಬಗ್ಗೆ ಸ್ವಲ್ಪ ಹೇಳಿ Order ಅನ್ನು ತೆಗೆದುಕೊಂಡು ಬಂದು ತೋರಿಸಿ ಅದು ಎಲ್ಲಿಯೂ ಇಲ್ಲ ಸುಮ್ಮನೆ ಏಕೆ ಹೇಳುತ್ತೀರಿ? Action to remove encroachment of tanks, identification of boundaries and preservation of all the tanks in the State ಮಾಡಿದ್ದೀರಾ? Not initiated, Priority to METRO rail project ಆಯಿತಾ? ಮಾಡುತ್ತೇವೆ, ಇರುವುದು ಬೇರೆ ಆಯಿತಾ? Priority ಆಗಿಲ್ಲ ಎಲ್ಲಿ ಶುರುವಾಗಿದೆ? ಕೆಲಸವೇ ಶುರುವಾಗಿಲ್ಲ ವರ್ಷದಲ್ಲಿ ಆಗುತ್ತದೆ ಎನ್ನುತ್ತೀರಿ ಒಂದು ವರ್ಷದಲ್ಲಿ ಶುರುವಾದರೂ ಮಾಡಬೇಕಲ್ಲ ಭಾಗ್ಯಲಕ್ಷ್ಮಿ ಆಯಿತಾ? motivating a girl studying in the High School to have self confidence, ಆಯಿತಾ? ಈ ಬಜೆಟ್ ಪುಸ್ತಕ ಬೇಕೆ ಬೇಡವೇ? ಇದು ಸರಿ ಇಲ್ಲವೇ? ಇದನ್ನು ಓದಬೇಡವೇ? Action taken reprot ಅನ್ನು ನಾನು ಓದಿಲ್ಲ ಅದನ್ನು ಕೊಡಬೇಕಾಗಿದ್ದರೆ ಬಜೆಟ್ ಮಂಡಿಸುವುದಕ್ಕಿಂತ ಮುಂಚೆ ಕೊಡಬೇಕಾಗಿತ್ತು

ಶ್ರೀ ಜೆ ಸಿ ಮಾದುಸ್ವಾಮಿ ಜುಲೈನಲ್ಲಿ ಕೊಡುತ್ತೇವೆಂದು ಅವರು ಹೇಳಿ ಕಳುಹಿಸುತ್ತಾರೆ, ನಾವು ಕೇಳಿದಾಗ

ಶ್ರೀ ಬಿ ಶಿವರಾಂ ಎಲ್ಲದಕ್ಕೂ action taken ನೋಡಿ ಎಂದು ಹೇಳುತ್ತೀರಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಮಾನ್ಯ ಸಿದ್ದರಾಮಯ್ಯನವರೇ, As a Finance Minister ನೀವು ಬಜೆಟ್ ಕಾಪಿಯನ್ನು ಹಿಡಿದು ಹೇಳಿದರೆ ಎಷ್ಟು ಉಚಿತವಾಗುತ್ತೆ?

ಶ್ರೀ ಸಿದ್ದರಾಮಯ್ಯ Budget copy ಎಂದರೆ ಏನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ Action Taken Report ನೋಡಿ, ಯಾವುದು ಆಗಿಲ್ಲವೆಂದು ನೀವು ಹೇಳುತ್ತಿದ್ದೀರಿ

(ಗೊಂದಲ)

ಶ್ರೀ ಸಿದ್ದರಾಮಯ್ಯ ಆ ಪಟ್ಟಿ ಕೊಡಿ ಆಯಿತು, ಕುಳಿತುಕೊಳ್ಳಿ ಇಲ್ಲಿ ಏನು ಹೇಳಿದ್ದೀರಿ? "Action taken, remove encroachments of tanks, identification of boundaries and preservation of all the tanks in the State" ಎಂದು ಹೇಳಿದ್ದೀರಲ್ಲ, ರಾಜ್ಯದಲ್ಲಿ ಎಲ್ಲಿ ಮಾಡಿದ್ದೀರಿ, ಹೇಳಿ? Please, Action Taken Report ನಲ್ಲಿ ಓದಿ ಹೇಳಿ ಅರೆ, ಮಾಡಿರುವುದು ಎಲ್ಲಿದೆ ಎಂಬುದನ್ನು Action Taken Report ಓದಿ ಹೇಳಿ ನಾನು ಓದಿಲ್ಲ ನೀವೇನಾದರೂ ಓದಿದ್ದೀರಾ? ಸುಮ್ಮನೆ ಅವೆಲ್ಲಾ ಬೇಡ ಅದೆಲ್ಲಿದೆ ಎಂಬುದನ್ನು ಈಗ ಓದಿ ಹೇಳಿಬಿಡಿ You are a senior member ಮೂರು ಸಲ ಗೆದ್ದು ಬಂದಿದ್ದೀರಿ, ಓದಿ ಹೇಳಿ, ಓದಿಲ್ಲ, ಏನೂ ಇಲ್ಲ, ಸುಮ್ಮನೆ ಬಂದು ಹೇಳುವುದು "Suitable marketing support to the products of women elf help groups" ಮಾರ್ಕೆಟ್ ಗಳನ್ನು ಎಲ್ಲಿ ಮಾಡಿದ್ದೀರಿ? ಸುಮ್ಮನೆ ಹೇಳುವುದು? "Waiver of fee to

talented students from familıes of below poverty lıne for professıonal educatıon" ಇನ್ನೂ ದುಡ್ಡು ಕೊಟ್ಟಿಲ್ಲ "Constructıon of 50,000 agrıcultural pond for dry land developemnt" ಎಷ್ಟು ಮಾಡಿದ್ದೀರಿ ? Pond ಇಲ್ಲ ಏನೂ ಇಲ್ಲ, ಇದರ ಬಗ್ಗೆ ಮಾಧುಸ್ವಾಮಿಯವರು ಹೇಳಿದರಲ್ಲ "Encouragement to enhance export of hortıcultural produce" ಎಲ್ಲಿ ಮಾಡಿದ್ದೀರಿ? "Incıeas eof 44% ın Budgetary allocatıon for ırrıgatıon works" ಎಲ್ಲಿ? "Addıtıonal grants for land purchase, startıng of 110 hostels for educatıon of chıldren of weaker sectıons" ನನ್ನ Constıtuency ಯಲ್ಲಂತೂ ಇಲ್ಲ ಈ ತರಹ ಬೇಕಾದಷ್ಟು ಇವೆ "Legıslatıon for the welfare of constructıon labourers" ನೀವು ಯಾವ ಕಾನೂನನ್ನು ತಂದಿರುವುದು?

ಶ್ರೀ ಜೆ ಸಿ ಮಾಧುಸ್ವಾಮಿ ಸಿದ್ಧರಾಮಯ್ಯನವರೆ, ಬೇರೇನೂ ಬೇಡ ಎಲ್ಲಿಯಾದರೂ ಜತ್ರೋಪ ಸಸಿಗಳನ್ನು ಹಾಕಿದ್ದಾರೆಯೇ? ಕೇಳಿ

ಶ್ರೀ ಸಿದ್ದರಾಮಯ್ಯ ಹೊಂಗೆ ಗಿಡ, ಜತ್ರೋಪ ಸಸಿಗಳನ್ನು ಎಲ್ಲಿ ಬೆಳಿದಿದ್ದೀರಿ?

ಒಬ್ಬ ಮಾನ್ಯ ಸದಸ್ಯರು ಶಿವಮೊಗ್ಗದಲ್ಲಿ ಸುಮಾರು ೩೦,೦೦೦ ಸಾವಿರ ಹೆಕ್ಟೇರ್ ಪ್ರದೇಶದಲ್ಲಿ

ಶ್ರೀ ಸಿದ್ಧರಾಮಯ್ಯ ಆಯಿತು, ಇರಲಿ ಅವೆಲ್ಲವೂ ಪುಸ್ತಕದ ಮೇಲಿನ ಲೆಕ್ಕ

(ಗೊಂದಲ)

ಶ್ರೀ ಸಿದ್ಧರಾಮಯ್ಯ ನಾನು ಹೇಳುತ್ತಾ ಹೋಗುತ್ತೇನೆ, ಕೇಳಿ ಅವರು ಹೇಳುತ್ತಾರೆ, ಬಿಡಿ, Please ಮಾನ್ಯ ಅಧ್ಯಕ್ಷರೆ, Finance Minister ಹೇಳಲಿ I am not going to yield

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ನೀವು ಅನುಭವ ಇರುವಂತಹವರು

ಶ್ರೀ ಸಿದ್ಧರಾಮಯ್ಯ ಅನುಭವವಿರುವವರು ಸುಳ್ಳು ಹೇಳಬಾರದು

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಬಜೆಟ್ ಅನ್ನು ನೋಡಿ ಹೇಳುವಂಥಾದ್ದು ಉಚಿತವಲ್ಲ

ಶ್ರೀ ಸಿದ್ಧರಾಮಯ್ಯ ನಾನು ಅದನ್ನು ರಾತ್ರಿ ಓದುತ್ತೇನೆ

ಶ್ರೀ ಕೆ ಶ್ರೀನಿವಾಸ ಗೌಡ ನಮ್ಮ ಸಕಾರ ಇದ್ದಾಗ ಜತ್ರೋಪ, ಹೊಂಗೆ ಗಿಡಗಳನ್ನು ಹಾಕಿರುವುದು

ಶ್ರೀ ಸಿದ್ಧರಾಮಯ್ಯ ಗೋ ಸಂರಕ್ಷಣೆ ಒಬ್ಬ ರೈತನಿಗೆ ೨೦ ಎಕರೆಗಳನ್ನು ಕೊಡುವುದು ಎಲ್ಲಿ ಕೊಟ್ಟಿದ್ದೀರಿ? ಯಾವ ರೈತರಿಗೆ ಕೊಟಟಿದ್ದೀರಿ? ಯಾವ ಜಿಲ್ಲೆಯಲ್ಲಿ ಕೊಟ್ಟಿದ್ದೀರಿ? ನಮ್ಮ ಜಿಲ್ಲೆಗೆ ಒಂದೂ ಇಲ್ಲ

ಒಬ್ಬ ಮಾನ್ಯ ಸದಸ್ಯರು ಬೆಳಗಾಂಗೆ ಕೊಟ್ಟಿದ್ದಾರೆ

ಶ್ರೀ ಸಿದ್ಧರಾಮಯ್ಯ ಬೆಳಗಾಂನಲ್ಲಿ ಕೊಟ್ಟಿದ್ದಾರೆಯೇ? ಹಾಗಾದರೆ, ನಮ್ಮ ಜಿಲ್ಲೆಯಲ್ಲಿ ಏಕೆ ಕೊಟ್ಟಿಲ್ಲ? ಆಯಿತು, ಕುಳಿತುಕೊಳ್ಳಿ ಈ ತರಹ I can give a list

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಇದು ಈ ವರ್ಷ ಆಗಿದ್ದು

ಶ್ರೀ ಸಿದ್ದರಾಮಯ್ಯ ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದನ್ನು ನಿಲ್ಲಿಸಿಬಿಡುತ್ತೇನೆ ಮಿನಿಸ್ಟರುಗಳೆಲ್ಲರೂ ಈ ರೀತಿ

ಎದ್ದು ನಿಂತು, ಅಡ್ಡಿಪಡಿಸುವುದು ಸರಿಯಲ್ಲ Finance Minister ಇದ್ದಾರೆ ಅವರು ಉತ್ತರ ನೀಡುತ್ತಾರೆ ನೀವೇಕೆ ಎದ್ದೆದ್ದು ನಿಂತು ಹೇಳುತ್ತೀರಿ Finance Minister is capable of replying to all our questions ನಾನು ಅವೆಲ್ಲವನ್ನೂ ಪಟ್ಟಿ ಮಾಡಿ ಹೇಳುವುದಕ್ಕೆ ಹೋಗುವುದಿಲ್ಲ ಆರು ವೈದ್ಯಕೀಯ ಕಾಲೇಜುಗಳನ್ನು ಈ ವರ್ಷ ಮುಗಿಸಿಬಿಡುತ್ತೇವೆಂದು ಹೇಳಿದ್ದಿರಿ ಎಲ್ಲಿ ಮಾಡಿದರು? ರೇವಣ್ಣನವರೆ, ಅದಿನ್ನೂ ಮುಗಿದಿಲ್ಲ, ಅಲ್ಲವೇ? ಮುಗಿದಿಲ್ಲ ತಾವು ಕುಳಿತುಕೊಳ್ಳಿ

ಶ್ರೀ ಹೆಚ್ ಡಿ ರೇವಣ್ಣ ಸರ್, ನನ್ನ ಕ್ಷೇತ್ರದಲ್ಲಿರುವ ಕಾಲೇಜು ಮುಗಿದಿಲ್ಲ ಅಂತಲ್ಲ

ಶ್ರೀ ಸಿದ್ದರಾಮಯ್ಯ ಜನರಲ್ ತಿಮ್ಮಯ್ಯನವರ ಮನೆಯನ್ನು ಸ್ಮಾರಕ ಮಾಡತುತ್ತೇವೆಂದು ಹೇಳಿದ್ದರು ಎಲ್ಲಿ ಮಾಡಿದ್ದಾಖುಎ?

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಅಲ್ಲಿ ಇವತ್ತಿಗೂ RTO Office ಇದೆ

ಶ್ರೀ ಸಿದ್ದರಾಮಯ್ಯ ಜನರಲ್ ತಿಮ್ಮಯ್ಯನವರ ಮನೆಯನ್ನು ಸ್ಮಾರಕ ಮಾಡುವುದಾಗಿ ಸರ್ಕಾರ ದುಡ್ಡು ಕೊಟ್ಟಿತ್ತು ಎಲ್ಲಿ ಮೂಉರ ಲಕ್ಷ ಮನೆಗಳನ್ನು ಮಾರ್ಚಿ ೨೦೦೭ರ ಒಳಗಡೆ ಕಟ್ಟುತ್ತೇವೆ ಎಂದು ಹೇಳಿದರು ಎಲ್ಲಿ ಮಾಡಿರು? ಮೂರು ಲಕ್ಷ ಮನೆಗಳನ್ನು ಮಾರ್ಚಿ ೨೦೦೭ರ ಒಳಗಡೆ ಕಟ್ಟುತ್ತೇವೆ ಎಂದು ಹೇಳಿದರು ಎಲ್ಲಿ ಮಾಡಿದಿರು? ಮೂರು ಲಕ್ಷ ಮನೆಗಳನ್ನು ಮಾರ್ಚಿ ೨೦೦೭ರ ಒಳಗಡೆ ಕಟ್ಟುತ್ತೇವೆ ಎಂದು ಹೇಳಿದರು ಎಲ್ಲಿ ಮಾಡಿದರು ಎಲ್ಲಿ ಮಾಡಿದರು? ನಿನ್ನೆ ದೇಶಪಾಂಡೆಯವರು ಓದಿ ಹೇಳಿದರು ೨೦೦೬-೦೭ಕ್ಕೆ ೭೩,೦೦೦ ಮನೆಗಳನ್ನು ಕಟ್ಟಿದ್ದಾರೆ ಅದೂ ಕೂಡ ಹಿಂದೆ ಕೊಟ್ಟಿದ್ದಂತಹ ಗುರಿಯೇ ಹೊರತು ಹೊಸದಾಗಿ ಕೊಟ್ಟಿರುವುದಿಲ್ಲ ಮೂರು ಲಕ್ಷ ಮನೆಗಳು ಎಲ್ಲಿ? ಕುಮಾರಸ್ವಾಮಿಯವರು ಹೇಳುತ್ತಾರೆ ಬಜೆಟ್ ನಲ್ಲಿ ಹೇಳಿರುವುದು ಮೂರು ಲಕ್ಷ ಎಲ್ಲ ಕಟ್ಟಿದ್ದಾರೆ ? ಒಟ್ಟು ಆರೂವರೆ ಲಕ್ಷ ಎಲ್ಲಿ

ಕಟ್ಟಿದ್ದಾರೆ ಆದ್ದರಿಂದ ಇವತ್ತು ನೀರಾವರಿಗೆ ನೀವು ಹಣವನ್ನು ಕೂಡ ಸರಿಯಾಗಿ ಇಡದೇ

ಶ್ರೀ ಹೆಚ್ ಡಿ ರೇವಣ್ಣ ನೀರಾವರಿಗೆ ಹಿಂದಿಗಿಂತಲೂ ೧೫ ಪರ್ಸೆಂಟ್ ಜಾಸ್ತಿ ಇಟ್ಟಿದ್ದೇವೆ ಬೇಕಾದರೆ, ತೆಗೆದು ನೋಡಿ

ಶ್ರೀ ಸಿದ್ದರಾಮಯ್ಯ ರೇವಣ್ಣನವರೆ, Annual Financial Statement ಓದಿ ಇದನ್ನು ಸರ್ಕಾರವೇ ಕೊಟ್ಟಿರುವುದು Capital Account ನಲ್ಲಿ ಎಷ್ಟು ಖರ್ಚು ಮಾಡಿದ್ದೀರಿ? Plan ನಲ್ಲಿ ಎಷ್ಟು ಖರ್ಚು ಮಾಡುತ್ತಿದ್ದೀರಿ ಎಂಬುದು ಇದರಲ್ಲಿದೆ ಮಾನ್ಯ ಅಧ್ಯಕ್ಷರೆ, Revenue Accountನಲ್ಲಿ ಎಷ್ಟು ಖರ್ಚು ಮಾಡುತ್ತಿದೀರಿ ಎಂಬುದು ಇದರಲ್ಲಿದೆ ಮಾನ್ಯ ಅಧ್ಯಕ್ಷರೆ, Revenue Accountನಲ್ಲಿ ಎಷ್ಟು ಖರ್ಚು ಮಾಡುತ್ತಿದ್ದೀರಿ ಎಂಬುದು ಇದರಲ್ಲಿದೆ ಮಾನ್ಯ ಅಧ್ಯಕ್ಷರೆ, Revenue Account ನಲ್ಲಿ ಎಷ್ಟು ಖರ್ಚು ಮಾಡುತ್ತೇವೆ ಮುಂದಿನ ವರ್ಷಕ್ಕೆ ಅಂದರೆ, ೨೦೦೭-೦೮ ನೇ ವರ್ಷಕ್ಕೆ Annual Financial Statement ನಲ್ಲಿ revenue receipts ಇರುತ್ತದೆ capital receipts ಇರುತ್ತದೆ revenue expenditure ಇರುತ್ತದೆ ಮತ್ತು capital expenditure ಸಹ ಇರುತ್ತದೆ ಹಾಗಾದರೆ, ಈ ಪುಸ್ತಕದೊಳಗಡೆ ಅವೆಲ್ಲವೂ ಇರಬೇಕಲ್ಲ? ಈ statementನಲ್ಲಿ ಇರಬೇಕಲ್ಲ? ಈಗ ನಾನು ಓದಿ ಹೇಳುತ್ತೇನೆ, ನೋಡಿ ನಿಮ್ಮ PWDಗೂ ದುಡ್ಡು ಕಡಿಮೆಯಾಗಿಬಿಟ್ಟಿದೆ ಮಾನ್ಯ ಅಧ್ಯಕ್ಷರೆ, ೨೦೦೫-೦೬ರಲ್ಲಿ ಖರ್ಚಾಗಿರುವುದು ಖರ್ಚಿನ ಅಕೌಂಟ್ ಲೆಕ್ಕಕ್ಕೆ ಬಂದಿರುವುದು ಇದು ೨೦೦೫-೦೬ರ ಲೆಕ್ಕ ಇನ್ನೂ ಆಗಿಲ್ಲ ನೀರಾವರಿಗೆ ೨೦೦೫-೦೬ರಲ್ಲಿ capital outlay on major and medium irrigation 3,143 20 3,173 ಕೋಟಿ, revised estimate ನಲ್ಲಿ ೩,೮೬೫ ಕೋಟಿ ಇದು ‐ capital account ನಲ್ಲಿ ಖರ್ಚಾಗಿರುವುದು ಇವರು ೩,೦೪೭ ಕೋಟಿ ರೂಪಾಯಿಗಳನ್ನು ಮುಂದಿನ ವರ್ಷಕ್ಕೆ ಇಟ್ಟಿದ್ದಾರೆ This is capital account ಇನ್ನು

revenue account ನಲ್ಲಿ major and medium irrigation ಗೆ ೮೨ ಕೋಟಿ ರೂಪಾಯಿ, ಹೋದ ವರ್ಷ ೭೨ ಕೋಟಿ ರೂಪಾಯಿ, ಈ ವರ್ಷ ೮೨ ಕೋಟಿ ರೂಪಾಯಿ ಎಲ್ಲಿ ಜಾಸ್ತಿಯಾಯಿತು? ಇದು ತಾನೇ document? Is there an book other than this to show revenue and capital expenditure and receipts? ಇರಬೇಕಲ್ಲ? ಬಾಯಲ್ಲಿ ಹೇಳಿದರೆ ಹೇಗಾಗುತ್ತದೆ? This is the book furnished by the government ಆದ್ದರಿಂದ, ನಾನು ಏನು ಹೇಳುತ್ತೇನೆಂದರೆ, ಅದರ ಜೊತೆಗೆ ಈ ದುಡ್ಡಿನಲ್ಲಿ ೩೦೦ ಕೋಟಿ ರೂಪಾಯಿ ಈ ನೀರಾವರಿ ಒಳಗಡೆ ಈಗಾಗಲೇ ನಾನು ಹೇಳಿದೆನಲ್ಲ, ೩,೧೪೫ ಕೋಟಿಯೊಳಗಡೆ ನಂಜುಂಡಪ್ಪನವರ ವರದಿಗೆ ಖರ್ಚು ಮಾಡುತ್ತೇವೆಂದು ಹೇಳಿದ್ದಾರಲ್ಲ, action plan ಮಾಡಿದ್ದಾರಲ್ಲ ಅದರ ೩೦೦ ಕೋಟಿ ರೂಪಾಯಿಗಳು ಸಹ ಇದರೊಳಗಡೆಯೇ ಬರುತ್ತದೆ ಅದನ್ನು ಮೈನಸ್ ಮಾಡಿ ಹೋದ ವರ್ಷಕ್ಕೂ ಈ ವರ್ಷಕ್ಕೂ ಎಷ್ಟಾಗುತ್ತದೆ? ೧,೫೭೧ ಕೋಟಿ ರೂಪಾಯಿಗಳನ್ನು ನುಂಗುಂಡಪ್ಪ ವರದಿಗೆ ನಾವು ಖರ್ಚು ಮಾಡುತ್ತೇವೆ ಎಂದು ಇದರಲ್ಲಿ ಇದೆಯಲ್ಲ, ಅದು ಈ ಪ್ಲಾನ್ ಒಳಗಡೆಯೇ ಸೇರಿಕೊಂಡಿದೆ I want to know whetehr it is a plan scheme or non-plan scheme ಪ್ಲಾನ್ ಎಂದರೆ, ೧೫೭೧ ಕೋಟಿ ಇವರೊಳಗಡೆಯೇ ಸೇರಿಕೊಂಡಿರುತ್ತದೆ ೧೭,೭೮೨ ಕೋಟಿಯಲ್ಲಿ ಮೈನಸ್ ೧,೫೭೧ ಕೋಟಿ ಎಂದರೆ, ಎಷ್ಟು ಉಳಿಯಿತು ? Absolutely there is no plan growth ಸುಮ್ಮನೆ ಏನೋ ಬೇರೆ ಪುಸ್ತಕ ಇಟ್ಟು ನಂಜುಂಡಪ್ಪ ವರದಿಗೆ ನಾವು ೧,೫೭೧ ಕೋಟಿ ಪವರ್ ಗೂ ಕೂಡ ೨೫೦ ಕೋಟಿ ರೂಪಾಯಿಯನ್ನು ಅದರೊಳಗಡೆಯೇ ಸೇರಿಸಿದ್ದಾರೆ ಈ ವರ್ಷ ಪ್ಲಾನ್ ನಲ್ಲಿ ತೋರಿಸಿದ್ದಾರಲ್ಲ, ಅದರೊಳಗಡೆಯೇ ಸೇರಿಕೊಳ್ಳುತ್ತದೆ ನೀರಾವರಿಗೆ ೩೦೦ ಕೋಟಿ, ಪ್ರವಾಸೋದ್ಯಮಕ್ಕೆ ೧೪೮ ಕೊಟಿ ಖರ್ಚು ಮಾಡುತ್ತಿದ್ದೇವೆ, ಅದರಲ್ಲಿ ಕೋಟಿ ಇದಾಗಿದೆ

ಮತ್ತೆ ನಾವು ರಾಜ್ಯವನ್ನು ಬಹಳ ವೇಗವಾಗಿ ಕೊಂಡೋಗಿಬಿಡುತ್ತೇವೆ, ರಾಜ್ಯ ಸಮೃದ್ಧಿಯಾಗಿದೆ, ಇನ್ನು ರಾಜ್ಯದಲ್ಲಿ ತೊಂದರೆಯೇ ಇರುವುದಿಲ್ಲವೆಂದು ಬೆನ್ನು ತಟ್ಟಿಕೊಳ್ಳುವುದಕ್ಕೆ ಯಾವ ನೈತಿಕ ಹಕ್ಕಿದೆ ನಿಮಗೆಲ್ಲಿದೆ ಹೇಳಿ? ನೀರಾವರಿಯ ಬಗ್ಗೆ ಇಲ್ಲಿಗೆ ನಿಲಿಸುತ್ತೇನೆ ನಾನು ಕೃಷಿಯ ಬಗ್ಗೆ ಹೆಚ್ಚು ಮಾತನಾಡಲು ಹೋಗುವುದಿಲ್ಲ ಎಲ್ಲವನ್ನೂ ನೀವೇ ಮಾತನಾಡಿದ್ದೀರಿ ನಮ್ಮ ಕೃಷ್ಣ ಬೈರೇಗೌಡರು ಸಹ ಬಹಳ ಚೆನ್ನಾಗಿ ಮಾತನಾಡಿದ್ದಾರೆ Energy ಕೂಡ ಅಷ್ಟೇ

ಶ್ರೀ ಹೆಚ್ ಡಿ ರೇವಣ್ಣ Energy ಬಗ್ಗೆ

ಶ್ರೀ ಸಿದ್ಧರಾಮಯ್ಯ ಅದರ ಬಗ್ಗೆ ಇನ್ನೊಂದು ದಿವಸ ಚರ್ಚೆ ಮಾಡೋಣ ರೇವಣ್ಣ ಬೇಡಿಕೆಗಳ ಬಗ್ಗೆ ಬಂದಾಗ ನಿಮ್ಮ ಇಲಾಖೆಯದ್ದು ಬಂದಾಗ ಹೇಳಿ

ಶ್ರೀ ಎನ್ ಧರ್ಮ್‌ಸಿಂಗ್ ನಮ್ಮ ಕಾಲದಲ್ಲಿ energy ಗೆ ೧೩೬೮ ಕೊಟ್ಟಿದ್ದೆವು ಈಗ ೧೧೮೨ ಗೆ ಬಂದಿದ್ದೀರಿ Last year ೧೦೫೯ ಇತ್ತು

ಶ್ರೀ ಹೆಚ್ ಡಿ ರೇವಣ್ಣ ಎಷ್ಟು ಕೊಟ್ಟಿದದೇವೆ, ಎಷ್ಟು ರಿಲೀಸ್ ಮಾಡಿದ್ದೇವೆ ಎಂಬುದನ್ನು ದಯಮಾಡಿ ಹೇಳಿ ಬಜೆಟ್ ಪುಸ್ತಕದಲ್ಲಿ ಎಷ್ಟು ಹಣವಿದೆ, ಕೊಟ್ಟಿರುವ ಹಣವೆಷ್ಟು ಹೇಳಿ

ಶ್ರೀ ಸಿದ್ದರಾಮಯ್ಯ Energy, ೨೦೦೬-೦೭ಕ್ಕೆ ೨೪೪೬ ಕೋಟಿ ೨೦೦೫-೦೬ ನಲ್ಲಿ ೧೮೩೩ ಕೋಟಿ ಈ ಸಲ energy ಗೆ capital account ನಲ್ಲಿ ೨೧೭೦ ಕೋಟಿ ಇದೆ ಅಂದರೆ capital expenditure ನಲ್ಲಿ capital account ೧೪೪೬ ಕೋಟಿಯಿಂದ ೨೧೭೦ ಕೋಟಿ ಇದರಲ್ಲಿ ೨೫೦ ಕೋಟಿ ಡಾ ನಂಜುಡಪ್ಪನವರ ವರದಿಗೆ ಕೊಟ್ಟಿರುವುದು ಕೂಡ ಇದೆ ಅಂದರೆ ಅದರಲ್ಲಿ ಅಚ್ಚು ಕಡಿಮೆಯಾಯಿತು P W D ನಲ್ಲೂ ಹಾಗೆಯೇ ಆಗಿದೆ Power is a very important raw material agricultural and industrial

development ನಾವು ಇವತ್ತು ಇನ್ನೂ hydel power ಟ್ಯಾಪ್ ಮಾಡಬೇಕಾಗಿರುವುದು ೭,೭೫೯ ಮೆ ವ್ಯಾಟ್ಸ್ ಆದ್ದರಿಂದ power sector ಗೆ ಹೆಚ್ಚು ಹಣವನ್ನು ಖರ್ಚು ಮಾಡಬೇಕು ಹೆಚ್ಚು ಹಣವನ್ನಿಡಬೇಕು ಬಂಡವಾಲ ಹೆಚ್ಚು ಹೂಡಬೇಕು ಖಾಸಗಿ ಬಂಡವಾಳವನ್ನಾದರೂ ತಂದು ಹೂಡಬೇಕು ಹೈಲ್ power ಗೆ ಖರ್ಚು ಜಾಸ್ತಿಯಾಗುತ್ತದೆ ೭೭೫೦ ಮೆ ವಾಟ್ಸ್ ಹೈಡಲ್ ವಿದ್ಯುತ್ತನ್ನು ಉತ್ಪಾದನೆ ಮಾಡಲು ನಮ್ಮಲ್ಲಿ ಇನ್ನೂ ಅವಕಾಶವಿರುವಾಗ ಅಲ್ಲೀ ಹೆಚ್ಚು ಬಂಡವಾಳ ಹೂಡಬೇಕೋ ಬೇಡವೋ ? ಹೆಚ್ಚು ಬಂಡವಾಳವನ್ನು ಹೂಡಿ ಅದನ್ನು ಟ್ಯಾಪ್ ಮಾಡುವ ಕೆಲಸ ಮಾಡಬೇಕು

ಶ್ರೀ ಹೆಚ್ ಡಿ ರೇವಣ್ಣ ಹಿಂದೆ ಏನು ಮಾಡಿದ್ದಾರೆ?

ಶ್ರೀ ಸಿದ್ಧರಾಮಯ್ಯ ಹಿಂದಿನದನ್ನು ಹೋಲಿಕೆ ಮಾಡಲು ಆಗುವುದಿಲ್ಲ ರೇವಣ್ಣ ಹಣಕಾಸಿನ ಪರಿಸ್ಥಿತಿ ಇವತ್ತು ಯಡಿಯೂರಪ್ಪನವರು ಹೇಳುವ ಪ್ರಕಾರ ತುಂಬಿ ತುಳುಕುತ್ತಿದೆ ಆಗೆ revenue deficit ಇತ್ತು Revenue deficit ಇದ್ದ ಕಾಲ ನಿಮಗೆ ಗೊತ್ತೆ?

ಶ್ರೀ ಹೆಚ್ ಡಿ ರೇವಣ್ಣ ತಾವು ಒಂದು ನಿಮಿಷ ಈಲ್ಡ್ ಆದರೆ ಹೇಳುತ್ತೇನೆ

ಶ್ರೀ ಸಿದ್ಧರಾಮಯ್ಯ ಏಕೆ ಪದೇ ಪದೇ ಮಧ್ಯದಲ್ಲಿ ಹೇಳುತ್ತೀರಿ? ನೀವು ಆಮೇಲೆ ಉತ್ತರವನ್ನು ಹೇಳಿ

ಶ್ರೀ ಹೆಚ್ ಡಿ ರೇವಣ್ಣ ವಿರೋಧ ಪಕ್ಷದ ನಾಯಕರು ಹೇಳಿದ್ದಕ್ಕೆ ನಾನು ಹೇಳುವುದು ಬೇಡವೇ? ಅವರು ೭೦೦೦ ಮೆ ವ್ಯಾಟ್ ಜನರೇಟ್ ಮಾಡಲು ಅವಕಾಶವಿದೆಯೆಂದು ಹೇಳಿದ್ದಾರೆ ಅದಕ್ಕೆ ನಾನು ಉತ್ತರ ಹೇಳುವುದು ಬೇಡವೇ?

ಶ್ರಿ ಸಿದ್ದರಾಮಯ್ಯ ನಿಮ್ಮ ಇಲಾಖೆಯ ಬಗ್ಗೆ ಬಂದಾಗ ಹೇಳಿ

ಶ್ರೀ ಹೆಚ್ ಡಿ ರೇವಣ್ಣ ಈಗಲೇ ಹೇಳುತ್ತೇನೆ

ಶ್ರೀ ಸಿದ್ಧರಾಮಯ್ಯ ಇಲ್ಲಾ ಇಲ್ಲಾ I am not going to yield I do not want his reply ನಾನು ಈಲ್ಡ್ ಆಗಿಲ್ಲ ನೀವು ಸೀನಿಯರ್ ಮಿನಿಸ್ಟರ್ ಕೂರಿ ಏಕೆ ಪದೇ ಪದೇ ಎದ್ದು ತೊಂದರೆ ಮಾಡುತ್ತೀರ?

ಶ್ರೀ ಹೆಚ್ ಡಿ ರೇವಣ್ಣ ಐದು ನಿಮಿಷ

ಶ್ರೀ ಸಿದ್ಧರಾಮಯ್ಯ ಐದು ನಿಮಿಷ ಕೊಡಲು ಆಗುವುದಿಲ್ಲ ಅಧ್ಯಕ್ಷರು ಈಗ ಬೆಲ್ ಹೊಡೆಯುತ್ತಾಋಎ

ಶ್ರೀ ಹೆಚ್ ಡಿ ರೇವಣ್ಣ ತಾವು ದಯಮಾಡಿ ಈಲ್ಡ್ ಆಗಿ ನಾನು ಹೇಳುತ್ತೇನೆ ಅವಕಾಶ ಕೊಟ್ಟರೆ ನಾನು ಹೇಳುತ್ತೇನೆ

ಶ್ರೀ ಆರಗ ಜ್ಞಾನೇಂದ್ರ ಅನೇಕ ವಿಚಾರಗಳಲ್ಲಿ hit and run ಆಗಬಾರದು

ಶ್ರೀ ಹೆಚ್ ಡಿ ರೇವಣ್ಣ ನನಗೆ

ಶ್ರೀ ಸಿದ್ದರಾಮಯ್ಯ You are a senior minister What is this Revanna? ಅವರು ಉತ್ತರ ಕೊಡುತ್ತಾಋಎ ಕುಳಿತಿಕೊಳ್ಳಿ You are not a Finance Minister

ಶ್ರೀ ಹೆಚ್ ಡಿ ರೇವಣ್ಣ ನಾನು energy ಗೆ, ಸಂಬಂಧಪಟ್ಟಂತೆ ಉತ್ತರವನ್ನು ಹೇಳುತ್ತೇನೆ

ಶ್ರೀ ಸಿದ್ದರಾಮಯ್ಯ ಹಾಗೆಲ್ಲಾ ಕೊಡುವಂತಿಲ್ಲ ಉತ್ತರ ಕೊಡುವವರು ಅವರು ನೀವಲ್ಲ This is a general discussion on the Budget Finance Minister is expected to reply, not the all Ministers ಒಂದೊಂದು ಇಲಾಖೆಗೆ ಒಬ್ಬೊಬ್ಬರು ಉತ್ತರ ಕೊಡಲು ಬರುವುದಿಲ್ಲ ಪ್ರಕಾಶ್ ರವರೆ, ಸಂಸದೀಯ ಸಚಿವರು ಏಕೆ ಸುಮ್ಮನೆ ಕುಳಿತ್ತಿದ್ದೀರಿ ಸ್ವಲ್ಪ ಅವರಿಗೆ ಹೇಳಿ ಏಕೆ ನಗುತ್ತಾ ಕುಳಿತಿದ್ದೀರಿ?

ಶ್ರೀ ಆರಗ ಜ್ಞಾನೇಂದ್ರ ಮಾನ್ಯ ಸಿದ್ಧರಾಮಯ್ಯನವರೆ, ಅನೇಕ ವಿಚಾರಗಳಲ್ಲಿ hit and run ಆಗಬಾರದು Records straight ಆಗಬೇಕು,

(ಗೊಂದಲ)

ಶ್ರೀ ಸಿದ್ಧರಾಮಯ್ಯ ಪುಸ್ತಕ ತೆಗೆದುಕೊಂಡು ಓದಿಕೊಂಡು ಬನ್ನಿ ಸುಮ್ಮನೆ ಏನೇನೋ ಹೇಳಿದರೆ ಆಗುವುದಿಲ್ಲ

ಶ್ರೀ ಆರಗ ಜ್ಞಾನೇಂದ್ರ ತಾವು ಚೆನ್ನಾಗಿ ಮಾತನಾಡುತ್ತಿದ್ದೀರಿ ನಮಗೆಲ್ಲರಿಗೂ ಸಂತೋಷವಿದೆ ಆದರೆ records straight ಆಗಲಿ

ಶ್ರೀ ಸಿದ್ಧರಾಮಯ್ಯ ನೀವೂ ಧರಣಿಗೆ ಕುಳಿತುಕೊಳ್ಳಲು ಬನ್ನಿ ನಾನೂ ಬರುತ್ತೇನೆ ಎಲ್ಲರೂ ಧರಣಿ ಕುಳಿತುಕೊಳ್ಳಬೇಕೆಂದಿದ್ದರೆ ಬನ್ನಿ ಅದುಬಿಟ್ಟು ಈ ರೀತಿ ಪದೇ ಪದೇ ಎದ್ದರೆ ಹೇಗೆ?

ಶ್ರೀ ಹೆಚ್ ಡಿ ರೇವಣ್ಣ ಸ್ವಾಮಿ ಒಂದೆರಡು ನಿಮಿಷ ತಾವು ೭ ಸಾವಿರ ಮೆ ವ್ಯಾಟ್ ವಿದ್ಯುತ್ ಉತ್ಪಾದನೆಯ ಬಗ್ಗೆ ಹೇಳಿದಿರಿ

ಶ್ರೀ ಸಿದ್ಧರಾಮಯ್ಯ ಅದಾಗುವುದಿಲ್ಲ Please, please

ಶ್ರೀ ಧರ್ಮ್‌ಸಿಂಗ್ ಅವರು ಮಾತನಾಡಲಿ

ಶ್ರೀ ಹೆಚ್ ಡಿ ರೇವಣ್ಣ ಮಾನ್ಯ ಧರ್ಮ್ ಸಿಂಗ್ ಸಾಹೇಬರೇ ಒಂದು ನಿಮಿಷ

ಶ್ರೀ ಎನ್ ಧರ್ಮ್‌ಸಿಂಗ್ ಅವರು ಮಾತನಾಡಲಿ

ಶ್ರೀ ದಿನೇಶ್ ಗುಂಡೂರಾವ್ ಮಾನ್ಯ ಅಧ್ಯಕ್ಷರೆ, ಮಂತ್ರಿಗಳಿಗೆ ಹೇಳೀ, ನಿಮ್ಮ ಅಧಿಕಾರವನ್ನು ಚಲಾಯಿಸಿ

(ಗೊಂದಲ)

ಶ್ರೀ ಸಿದ್ಧರಾಮಯ್ಯ ಹೀಗಾದರೆ ನಾನು ಭಾಷಣವನ್ನೇ ನಿಲ್ಲಿಸಿಬಿಡುತ್ತೇನೆ

ಶ್ರೀ ಹೆಚ್ ಡಿ ರೇವಣ್ಣ Energy ಯಲ್ಲಿ

ಶ್ರೀ ಬಿ ಆರ್ ಪಾಟೀಲ್ ಇದೇನು ಡಿಬೇಟೋ ಹೇಗೆ ? ಮಾನ್ಯ ಸಿದ್ಧರಾಮಯ್ಯನವರಿಗೆ ಮಾತನಾಡಲು ಅವಕಾಶ ಕೊಡಿ ಡಿಬೇಟ್ ಆಗಿದ್ದರೆ ಚರ್ಚೆಯಾಗಲಿ ಇಕದು ಡಿಬೇಟಲ್ಲ ಅವರು ಬೇಡಿಕೆಯಮೇಲೆ ಬಂದಾಗ ಮಾತನಾಡಲಿ ಬೇಡಿಕೆಯ ಮೇಲೆ ಚರ್ಚೆಯಾಗುವಾಗ ಬೇಕಾದರೆ ಅವರು ಹೇಳಲಿ ಅವರಿಗೆ ಅಲ್ಲಿ ಅವಕಾಶವಿದೆ ಇಲಾಖಾವಾರು ಚರ್ಚೆ ಬಂದಾಗ ಅವರು ಮಾತನಾಡಲಿ

(ಗೊಂದಲ)

ಅಧ್ಯಕ್ಷರು ಎಲ್ಲರೂ ಮಾತನಾಡಿದರೆ ಹೇಗೆ ?

(ಗೊಂದಲ)

ಶ್ರೀ ಹೆಚ್ ಡಿ ರೇವಣ್ಣ ಮಾನ್ಯ ಅಧ್ಯಕ್ಷರೆ,

(ಗೊಂದಲ)

ಶ್ರೀ ಸಿದ್ಧರಾಮಯ್ಯ ಅವರು ನಾನು ಮಾತನಾಡಬಾರದೆಂದು ಪ್ಲಾನ್ ಮಾಡಿಕೊಂಡು ಬಂದಂತೆ ಕಾಣುತ್ತದೆ

(ಗೊಂದಲ)

ನನಗೆ disturb ಮಾಡಲು ಪ್ಲಾನ್ ಮಾಡಿಕೊಮಡು ಬಂದಂತೆ ಕಾಣುತ್ತದೆ ಅವರಿಗೆ ಕುಳಿತುಕೊಳ್ಳಲು ಹೇಳಿ ಮಂತ್ರಿಗಳಾದರೆ ಎಷ್ಟು ಸಲವಾದರೂ ಎದ್ದೇಳಬಹುದೆಂದು ಇದೆಯೇ?

ಶ್ರೀ ಬಿ ಶಿವರಾಂ ಇದು ಉದ್ದೇಶಪೂರ್ವಕವಾಗಿ ಸಿದ್ದರಾಮಯ್ಯನವರ ಭಾಷಣವನ್ನು ಅಡ್ಡಿ ಮಾಡತಕ್ಕದ್ದು

ಶ್ರೀ ಹೆಚ್ ಡಿ ರೇವಣ್ಣ ನಾನು ಯಾರಿಂದಲೂ ಸೌಜನ್ಯವನ್ನು ಕಲಿಯಬೇಕಾಗಿಲ್ಲ ನಾನು ನಿಮ್ಮಿಂದೇನು ಕಲಿಯಬೇಕಾಗಿಲ್ಲ ಕುಳಿತುಕೊಳ್ಳಿ

ಅಧ್ಯಕ್ಷರು ಅವರು ಮಾತನಾಡಲಿ ಬಿಡಿ ರೇವಣ್ಣ ಅವರು ಈಲ್ಡ್ ಆಗುತ್ತಿಲ್ಲ

ಶ್ರೀ ಬಿ ಶಿವರಾಂ ನಾವೇನು ನಿಮ್ಮಿಂದ ಕಲಿಯಬೇಕಾಗಿಲ್ಲ

ಶ್ರೀ ಹೆಚ್ ಡಿ ರೇವಣ್ಣ ನಮಗೇನು ಹೇಳಬೇಕಾಗಿಲ್ಲ ನಮಗೂ ಗೊತ್ತಿದೆ ನಾನೂ ಎರಡು ಸಲ ಸದಸ್ಯನಾಗಿ ಬಂದಿದ್ದೇನೆ ನಾನು ಯಾರಿಂದೇನು ಕಲಿಯಬೇಕಾಗಿಲ್ಲ ಬಳ್ಳಾರಿ ಪ್ಯಾಕೇಜ್ ಎಂದು ಘೋಷಣೆ ಮಾಡಿದರು

(ಗೊಂದಲ)

ಅಧ್ಯಕ್ಷರು ಅವರು ಈಲ್ಡ್ ಆಗಿಲ್ಲ

ಶ್ರೀ ಸಿದ್ದರಾಮಯ್ಯ ನಾನು ಈಲ್ಡ್ ಆಗಿಲ್ಲ ನಾನು ಈಲ್ಡ್ ಆದರೆ ಮಾತ್ರ ಅವರು ಮಾತನಾಡಲಿ I am not going to yield I don't yield

ಶ್ರೀ ಬಿ ಆರ್ ಪಾಟೀಲ್ ಮಾನ್ಯ ಪ್ರಕಾಶ್‌ರವರು ಮತ್ತು ಯಡಿಯೂರಪ್ಪನವರು ಹೇಗೆ ಕೇಳುತ್ತಿದ್ದಾರೆ ಹಗೆ ಇವರೂ ಸ್ವಲ್ಪ ಮನಸ್ಸಿಟ್ಟು ಹೇಳಲಿ

ಶ್ರೀ ಸಿದ್ದರಾಮಯ್ಯ ಅವರು ಈ ರೀತಿ disturb ಮಾಡಿದರೆ I am not going to speak ಎಷ್ಟು ಸಲ ರೇವಣ್ಣ ನವರು ಎದದ್ದು? How many times he has interfered? This is not correct

ಶ್ರೀ ಹೆಚ್ ಡಿ ರೇವಣ್ಣ ಮಾನ್ಯ ಸಿದ್ದರಾಮಯ್ಯನವರು ಅರ್ಥ ಮಾಡಿಕೊಳ್ಳಬೇಕು ನಾನು ಹೇಳುವುದು

ಶ್ರೀ ಸಿದ್ದರಾಮಯ್ಯ I have never seen in my life

ಶ್ರೀ ಹೆಚ್ ಡಿ ರೇವಣ್ಣ ನಾನು clarification ಕೊಡಬೇಕಲ್ಲವೇ?

ಶ್ರೀ ಸಿದ್ದರಾಮಯ್ಯ Clarificationನ್ನು ಹಣಕಾಸಿನ ಮಂತ್ರಿಗಳು ಕೊಡುತ್ತಾರೆ ಹಾಗಾದರೆ ಎಲ್ಲಾ ಮಂತ್ರಿಗಳೂ ಕೊಡಬೇಕಲ್ಲ? ಈ ರೀತಿಯಾದರೆ ನಾನೇನು ಮಾತನಾಡಬೇಕು? thoughts ಗಳೆಲ್ಲಾ ಹೊರಟೇ ಹೋಯಿತು

ಶ್ರೀ ಹೆಚ್ ಡಿ ರೇವಣ್ಣ ಬಳ್ಳಾರಿಗೆ ಸೋನಿಯಾ ಪ್ಯಾಕೇಜ್ ಎಂದು ಇಟ್ಟರಿ Energy ಯಲ್ಲಿ

ಶ್ರೀ ಸಿದ್ದರಾಮಯ್ಯ ಅದನ್ನು ಆಮೇಲೆ ಸೋನಿಯಾಗಾಂಧಿಯವರ ಹತ್ತಿರ ಹೋಗಿ ಕೇಳಪ್ಪಾ

ಶ್ರೀ ಹೆಚ್ ಡಿ ರೇವಣ್ಣ ಸೋನಿಯಾ ಪ್ಯಾಕೇಜ್ ನಲ್ಲಿ ಏನು ಮಾಡಿಸಿದ್ದೀರಿ?

(ಗೊಂದಲ)

ಶ್ರೀ ಬಿ ಶಿವರಾಂ ಅವರು ಉತ್ತರ ಕೊಡಲು ಅವಕಾಶ ಕೊಡಿ ಅವರು ಮಾತನಾಡುವಾಗ ಏಕೆ ತಾವು ಮಾತನಾಡುತ್ತೀರಿ ಉತ್ತರ ಕೊಡಲು ಅವಕಾಶವಿದೆ, ಅಲ್ಲಿ ಮಾತನಾಡದೆ ಈಗೇಕೆ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ I am not going to yield ಅವರು ಈ ರೀತಿ ಮಾನಾಡಿದರೆ ಹೇಗಾಗುತ್ತದೆ? ನಾನು ಹಣಕಾಸಿನ ಮಂತ್ರಿಯಾಗಿದ್ದಾಗ ಯಾವಾಗಲೂ ಹೀಗೆ interfere ಆಗುತ್ತಿರಲಿಲ್ಲ ರೇವಣ್ಣ ನಿನಗೆ ಮುಖ್ಯಮಂತ್ರಿಯಾಗಲು ಅವಕಾಶವಿದೆ ಏಕೆ ಪದೇ ಪದೇ ಎದೇಳುತ್ತೀಯಾ? ಅದರ ಬಗ್ಗೆ ಚರ್ಚೆಯೆಲ್ಲಾ ನಡೆಯುತ್ತಿರುವುದು ನನಗೆ ಗೊತ್ತು ಏಕೆ ಹೀಗಾಡುತ್ತೀಯಾ? ಇನ್ನೇನು ಈ termನೊಳಗೆ ಬರುತ್ತದೆ ಸುಮ್ಮನಿರು

ಶ್ರೀ ಹೆಚ್ ಆಂಜನೇಯ ಅದಕ್ಕೆ ನೀವೂ ಬೆಂಬಲ ಕೊಡುತತೀರಾ?

ಶ್ರೀ ಕೆ ಆರ್ ರಮೇಶ್‌ಕುಮಾರ್ ಎರಡು ಹೆಸರು ಬಂದಿದೆ ಪ್ರಕಾಶ್ ರವರದ್ದು ಮತ್ತು ಅವರದ್ದು ಪ್ರಕಾಶ್ ರವರು ಸೀನಿಯರ್ ಆದರೆ ಅವರಿಗೆ ತೀರಾ ಆದಾಗಬೇಕೆಂದೇನಿಲ್ಲ, ಆದ್ದರಿಂದ ರೇವಣ್ಣನವರೇ ಆಗಲಿ ಎಂದು ನಾವೆಲ್ಲರೂ ಹೇಳುತ್ತಿದ್ದೇವೆ ಆಧ್ದರಿಂದ ನೀವ ಸ್ವಲ್ಪ ಪ್ರಸನ್ನಚಿತ್ತರಾಗಿರಬೇಕು

ಒಬ್ಬ ಮಾನ್ಯ ಸದಸ್ಯರು ಸಿದ್ದರಾಮಯ್ಯನವರು ಆಗುವುದಿಲ್ಲವೇ?

ಶ್ರೀ ಸಿದ್ದರಾಮಯ್ಯ ಪ್ರಕಾಶ್‌ರವರ ಹೆಸರಿದೆ ಆದರೆ, ಅದು ಎರಡನೆಯದು

ಶ್ರೀ ಸಿದ್ದರಾಮ್ಯ ಅಧ್ಯಕ್ಷರೇ ನಾನು ವಾರ್ಷಿಕ ವಿತ್ತ ನಿರೂಪಣೆ ಪುಸ್ತಕದಿಂದ ಓದುತ್ತಿರುವುದು ಇದರಲ್ಲಿ revenue receitps, capital receipts, capital disbursements ಅಂತ ಇರುತ್ತದೆ ಒಂದು ವರ್ಷದಲ್ಲಿ ನಾವು ಏನೇನು ಖರ್ಚು ಮಾತುತ್ತೇನೆ ಎಂಬುದೆಲ್ಲ ಇದರಲ್ಲಿ ಇರುತ್ತದೆ ಮುಂದಿನ ವರ್ಷಕ್ಕೆ ಇವರು ೪೭,೯೫೦ ಕೋಟಿ ಖರ್ಚು ಮಾಡುತ್ತೇವೆ ಎಂದಿದ್ದಾರೆ ಅದೆಲ್ಲ ಇಲ್ಲಿ ಬರೆದಿದೆ ಇನ್ನು ಪವರ್‌ದು Power reforms ೨೦೦೧ರಲ್ಲಿ ಶುರುವಾಯಿತು ಒಂದು ಕಾಲಧ್ಲ್ಲಿ ३೮% ಇತ್ತು ರೇವಣ್ಣನವರು ಮೂರು ವರ್ಷದಿಂದ ಇಂಧನ ಸಚಿವರಾಗಿದ್ದಾರೆ In T and D loss, except Bescom ಸ್ವಲ್ಪ ಕಡಿಮೆಯಾಗಿದೆ ಮೈಸೂರಿನ ಚಾಮುಮಡಿ ಕಂಪನಿ ರೇವಣ್ಣನವರು ಮುಖ್ಯಮಂತ್ರಿ ಹುದ್ದೆಗೆ strong candidate ರೇವಣ್ಣ, ಮುಖ್ಯಮಂತ್ರಯಾಗುವುದಿಲ್ಲ ಅಂತ ಹೇಳಬೇಡ ರೆಕಾರ್ಡ್‌ಗೆ ಹೋಗಿಬಿಡುತ್ತದೆ ಕನಿಷ್ಟ ಉಪ ಮುಖ್ಯಮಂತ್ರಿಯಾದರೂ ಆಗುತ್ತೀರ

ಶ್ರೀ ಅರಗ ಜ್ಞಾನೇಂದ್ರ ನೀವು ವಿರೋಧ ಪಕ್ಷದ ನಾಯಕರಾಗಬೇಕು

ಶ್ರೀ ಸಿದ್ದರಾಮಯ್ಯ Power sector ನಲ್ಲಿ ನಮ್ಮಲ್ಲಿ ಒಟ್ಟು ಉತ್ಪನ್ನ ಆಗುತ್ತಿರುವುದು both hydel, thermal, diesel and wind ಎಲ್ಲ ಸೇರಿ ೪೯೯೯ MWs Hydel power stagnant, thermal power ಮಾತ್ರ ಏಳೂ ಈಗ ರಾಯಚೂರಿನಲ್ಲಿ ಆಗಿಬಿಟ್ಟಿವೆ, ಅಲ್ಲಿ ಒಂದು ಯೂನಿಟ್ ಗೆ ೧೦ MW ಆಗುತ್ತಿದ್ದು ೭ರಿಂದ ೧೪೭೦ MW ಬರುತ್ತದೆ ಈಗ ೮ನೆಯದನ್ನು ಕಮಿಷನ್ ಮಾಡುತ್ತೇವೆ ಅಂತ ಹೇಳುತ್ತಾರೆ

ಶ್ರೀ M P ಪ್ರಕಾಶ್ ನೀವು ೭ ಬಜೆಟ್ ಮಂಡಿಸಿದ್ದೀರಿ, ತಮಗೂ ಗೊತ್ತಿದೆ, ತಮ್ಮ ಕಾಲದಲ್ಲಿ IEBR ನಲ್ಲಿರುವುದಾಗಲಿ OBB ಆಗಲಿ ಈ figures ಬರುತ್ತವೆ ? ಹೇಳಿ Misguide ಮಾಡಬೇಡಿ

ಶ್ರೀ ಸಿದ್ದರಾಮಯ್ಯ You do not mislead, ನಾನು ಕೊಟ್ಟಿರುವ ಬಜೆಟ್ ನಲ್ಲೂ IEBR ಇತ್ತು ಕೃಷಿಯಲ್ಲಿ GDP ಬೆಳವಣಿಗೆ ೨% ಇದೆ, ಅದನ್ನು ಹೆಚ್ಚು ಮಾಡಬೇಕಾದರೆ ಏನು ಬೇಕು IEBR ಬಗ್ಗೆ ನಾನು have not said single word ನಮ್ಮ ವಾದ ಏನೆಂದರೆ hydel power stagnant ಆಗಿಬಿಟ್ಟಿದೆ, ದುಡ್ಡನ್ನು ಬೇರೆ ಕಡೆ ಖರ್ಚು ಮಾಡಿ ಎಂಬುದಷ್ಟೆ ನಾನು Annual statement ನಿಂದ ಏನು ಹೇಳಿದೆ ಅಂದರೆ capital account ನಲ್ಲಿ ಎಷ್ಟು ಖರ್ಚು ಮಾಡುತ್ತಿದ್ದೀರಿ, revenue expenditure ಎಷ್ಟು ಅಂತ ಹೇಳಿದೆ ಅಷ್ಟೇ But I am not making allegation against Revanna, ಇನ್ನೂ ಹೆಚ್ಚು ಬಂಡವಾಳ ನಾವು ಪವರ್ ನಲ್ಲಿ ಹೂಡಬೇಕು, ಹೂಡದೇ ಹೋದದರೆ ಇವತ್ತಿಗೂ ೨೦೦೦ ಕ್ಕಿಂತ ಹೆಚ್ಚು MW ನಮಗೆ ಕೊರತೆ ಇದೆ Hdel availability 7700 ಸಿಕ್ಕುತ್ತಿದೆ, ಆದ್ದರಿಂದ, ಅದಕ್ಕೆ ಹೆಚ್ಚು ಬಂಡವಾಳ ಹೂಡಿ, ನಮ್ಮ ಕೈಲಿ ಆಗದಿದ್ದರೆ ಖಾಸಗಿಯವರಿಂದ ಹೂಡಿಸಿ ಇದನ್ನು ಇಲ್ಲಿವರೆಗೆ ಮಾಡಿಲ್ಲ, ಮಾಡಬೇಕೆಂಬುದು ನನ್ನ ಸಲಹೆ ನೀವು development capital

side ಗೆ ಹಣ ಖರ್ಚು ಮಾಡದೇ ಹೋದರೆ growth ಎಲ್ಲಿ ಹೆಚ್ಚಾಗುತ್ತದೆ Transmisison and distribution loss and teft put altogether is average out of 4 companies 27% ಆದರೆ ಬಹಳ ವರ್ಷಗಳಿಂದ ಚರ್ಚೆ ನಡೆಯುತ್ತಲೇ ಇದೆ, energy audit ಆಗಬೇಕೂಂತ, ಅದು ಆಗಲೇ ಇಲ್ಲ

ಏಕೆಂದರೆ, ಶೇಕಡ ೪೯% ರಷ್ಟು ಪವರ್ ಪಂಪ್‌ಸೆಟ್ ಗಳಿಗೇ ಹೋಗುತ್ತದೆ ಎಂದು ಹೇಳುತ್ತಾರೆ ಇದರಿಂದ ರೈತರಿಗೆ ೪೯% ವಿದ್ಯುತ್ ಹೋಗುತ್ತಿದೆ ಎನ್ನುತ್ತಾರೆ ಪಂಪ್ ಸೆಟ್ ಗಳಿಗೆ ಮೀಟರ್ ಹಾಕಿಲ್ಲದಿರುವುದರಿಂದ ವಿದ್ಯುತ್ ಬಳಕೆ ಲೆಕ್ಕ ಸಿಗುವುದಿಲ್ಲ ಎನ್ನುತ್ತಾರೆ ರೈತರಿಗೆ ಎಷ್ಟು ವಿದ್ಯುತ್ ಹೋಗುತ್ತದೆ Domestic purposeಗೆ ಎಷ್ಟು ವಿದ್ಯುತ್ ಹೋಗುತ್ತದೆ? ಕೈಗಾರಿಕೆಗಳಿಗೆ ಎಷ್ಟು ಹೋಗುತ್ತದೆ Small scale Industries ಗಳಿಗೆ ಎಷ್ಟು ಹೋಗುತ್ತದೆ? ಪಂಪ್‌ಸೆಟ್‌ಗಳಿಗೆ ಎಷ್ಟು ಖರ್ಚಾಗುತ್ತಿದೆ? ಎಂಬ ಬಗ್ಗೆ ಲೆಕ್ಕ ಬೇಕೋ? ಬೇಡವೋ? Energy audit ಪ್ರಾರಂಭವಾಯಿತು and it is stopped ಕರ್ನಾಟಕ ರಾಜ್ಯದಲ್ಲಿ ಸುಮಾರು ೧೫½ ಲಕ್ಷ ಪಂಪ್‌ಸೆಟ್ಟುಗಳಿವೆ ಶೇಕಡ ೪೯ರಷ್ಟು ವಿದ್ಯುತ್ ಅವುಗಳಿಗೆ ಖರ್ಚಾಗುತ್ತಿದೆ ಎಂದು ಹೇಳುತ್ತಾರೆ But, I do not agree with that Because, there is no audit reort There is no audit report in the Energy Department How can you come to any conclusion? ಮೀಟರ್ ಅನ್ನೇ ಹಾಕಿಲ್ಲವಲ್ಲಾ ಕೆಲವು ಕಡೆಗಳಲ್ಲಿ ಪ್ರಾಯೋಗಿಕವಾಗಿ ಮೀಟರ್ ಹಾಕಿದ್ದಾರೆ That is also, correct ಆಗಿ ಅವು ಚಿತ್ರಣ ಕೊಡುವುದಿಲ್ಲ ಅವೆಲ್ಲಾ ಕಿತ್ತೇ ಹೋಗಿ ಬಿಟ್ಟಿದೆ Technical loss ಇವತ್ತು ೧೦ ೨೮% ಇದೆ ಹಾಗೂ Commercial loss ೨೭% ಇದೆ Non performance of TCs ನಿಂದಾಗಿ ಶೇಕಡ ೧೬% ರಷ್ಟು TCಗಳು ಸುಟ್ಟು ಹೋಗುತ್ತಿವೆ ಈ ರೀತಿಯಾದರೆ, efficiency has to be improved ಇದರಲ್ಲಿ ಬಂಡವಾಳ ಹೆಚ್ಚಾಗಿ ಹೂಡಬೇಕಾಗಿದೆ ಒಂದು ಕಡೆ efficiency

improve ಆಗುತ್ತಿಲ್ಲ, ಮತ್ತೊಂದು ಕಡೆ ಬಂಡವಾಳವನ್ನೂ ಹೂಡುತ್ತಿಲ್ಲ ಹೀಗಾದರೆ ಪವರ್ ಉತ್ಪನ್ನ ಅಥವಾ ಅದರ ಬೆಳವಣಿಗೆ ಹೇಗೆ ಹೆಚ್ಚಾಗುತ್ತದೆ? Audit ಸಹ ಆಗಿಲ್ಲ ಆದ್ದರಿಂದ ಇದು ಆಗಬೇಕು ಇದು ಅದಾಗಲೇ ಮಾನ್ಯ ಯಡಿಯೂರಪ್ಪನವರೇ, ನಿಮಗೆ ಲೆಕ್ಕ ಗೊತ್ತಾಗುತ್ತದೆ ರಾಜ್ಯದಲ್ಲಿರುವ ೧೫½ ಲಕ್ಷ ಪಂಪ್‌ಸೆಟ್ಟುಗಳಿಗೆ ಎಷ್ಟು ಪವರ್ ಹೋಗುತ್ತಿದೆ ಎನ್ನುವುದು audit ಆದಮೇಲೆ ಗೊತ್ತಾಗುತ್ತದೆ ಇಲ್ಲದಿದ್ದರೆ ಯಾರು ಯಾರ ಮೇಲೋ ಹೇಳಿ ಬಿಡುತ್ತಾರೆ ಅವರ ಮೇಲೆ ಇವರು ಹೇಳುತ್ತಾರೆ ಇವರ ಮೇಲೆ ಅವರು ಹೇಳುತ್ತಾರೆ ಒಬ್ಬರೂ ಕೈಗೆ ಸಿಗುವುದಿಲ್ಲ ಎಲ್ಲರೂ ಸೇರಿ ಸುಮ್ಮನೆ ಪುಕ್ಸಟ್ಟೆ ಸಿಗುತ್ತಾರೆಂದು ರೈತರ ಮೇಲೆ ಹೇಳಿಬಿಡುತ್ತಾರೆ KEB ಮೇಲೆ ನಾನು ಮಾತನಾಡುವಾಗ ಈ ಬಗ್ಗೆ ಒಮ್ಮೆ ಹೇಳಿದ್ದೆ ಬೆಂಗಳೂರಿನಲ್ಲಿ ಹಾಕಿದ್ದೇವೆಂದು ಬೆಸ್ಕಾಂನವರು ಹೇಳಿದರು I don't know ಬೆಂಗಳೂರು ,ಸುತ್ತ ಶ್ರೀಮಂತರು ಫಾರ್ಮ್‌ಗಳು ಮತ್ತು ರೆಸಾರ್ಟ್‌ಗಳು ಅವುಗಳಾಗಿವೆ ಮೋಜು ಮಾಡುವುದಕ್ಕೆ ಅವರು ಅಲ್ಲಿ Swimming poolಗಳನ್ನೂ ಇಟ್ಟುಕೊಂಡಿದ್ದಾರೆ ಅಲಿಗೂ ರೈತರಿಗೆ ಯಾವ ದರ ವಿಧಿಸಲಾಗುತ್ತಿದೆಯೋ ಅದೇ ದರವನ್ನು ವಿಧಿಸಲಾಗುತ್ತಿದೆ ರಾಜ್ಯದಲ್ಲಿ ಬೆಂಗಳೂರು ಒಂದರಲ್ಲಿ ಮಾತ್ರ ಮಾಡಲಾಗಿದೆ ಮೈಸೂರಿನಲ್ಲಿ ನೀವು ಎಲ್ಲಿ ಮಾಡಿದ್ದೀರಿ? ಅಲ್ಲಿ ಇನ್ನೂ ನೀವು ಮಾಡಿಲ್ಲ ಬೆಂಗಳೂರಿನಲ್ಲಿ ಮಾಡಲಿಕ್ಕೆ ಹೊರಟಿದ್ದೀರಿ, ಅದಕ್ಕೆ ಸ್ವಲ್ಪ ಕಡಿಮೆಯಾಗಿದೆ ಬೆಂಗಳೂರಿನಲ್ಲಿ ಮಾಡಿರುವುದರಿಂದಲೇ T&D loss ೩೦%ರಿಂದ ೨೪%ಕ್ಕೆ ಇಳಿದಿದೆ ಮೈಸೂರಿನಲ್ಲಿ ೨೬% ಗುಲ್ಬರ್ಗಾದಲ್ಲಿ ೩೦%, ಹುಬ್ಬಳ್ಳಿಯಲ್ಲಿ ೨೯.೧% T& D loss ಇದೆ ಒಟ್ಟರೆಯಾಗಿ ೨೭% loss ಇದೆ So, the commercial loss and technical loss have not been reduced one side, ಕೂಡ ಅಲ್ಲಿ ಹೂಡುತ್ತಿಲ್ಲ ಈ ರೀತಿಯಾಗಿರುವುದರಿಂದ power generation stagnant ಆಗಿ ಬಿಟ್ಟಿದೆ KERC ನವರು ೪೬ ಪಟ್ಟಣ ಮತ್ತು ಸಿಟಿಗಳಲ್ಲಿ T&D loss ಅನ್ನು ೧೫% ಇಳಿಸಬೇಕು ಎಂದು

ಹೇಳಿದ್ದಾರೆ But, no action has been taken in accordance with the recommendations of the KERC

ಶ್ರೀ ಹೆಚ್ ಡಿ ರೇವಣ್ಣ ಮಾನ್ಯ ಸಿದ್ದರಾಮಯ್ಯನವರೆ, ಒಂದು ನಿಮಿಷ

ಶ್ರೀ ಸಿದ್ದರಾಮಯ್ಯ ಮಾನ್ಯ ರೇವಣ್ಣನವರೆ, ಎಲ್ಲಾ ಬರೆದುಕೊಂಡು ಒಟ್ಟಿಗೆ ಎಲ್ಲಾ ಅಂಶಗಳಿಗೂ ಉತ್ತರ ಕೊಡಿ KEB ಬಗ್ಗೆ ಇನ್ನೊಂದು ಸಲ ದೀರ್ಘವಾಗಿ ಚರ್ಚೆ ಮಾಡೋಣ ನಾನು ಈಗ ಅದರ ಬಗ್ಗೆ ಚರ್ಚಿಸುವುದನ್ನು ಇಷ್ಟಕ್ಕೇ ನಿಲ್ಲಿಸಿಬಿಡುತ್ತೇನೆ ಆ ಇಲಾಖೆಯಲ್ಲಿ ಏನೇನಾಗಿದೆ? ಅದರ efficiency ಏನು? ಅಲ್ಲಿ ಏನಾಗುತ್ತದೆ? ಎಂಬುದರ ಬಗ್ಗೆ ಇನ್ನೊಂದು ಬೇರೆ ದಿನ ಚರ್ಚೆ ಮಾಡೋಣ ಆಗ ನಾನು ಎಲ್ಲಾ ವಿಷಯಗಳನ್ನೂ ಹೇಳುತ್ತೇನೆ ಈಗ ನಾನು ಅದರ ಬಗ್ಗೆ ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ ಈಗಲೇ ಮಾನ್ಯ ಸಚಿವರು ಅದರ ಬಗ್ಗೆ ಉತ್ತರ ಕೊಡುವುದು ಬೇಡ ಮಧ್ಯೆ ಪ್ರವೇಶಿಸಿದರೆ ನನ್ನ ವಾದ ಸರಣಿ ತುಂಡಾಗುತ್ತದೆ ಇಂಧನ ಇಲಾಖೆ demands ಬಂದಾಗ ನಾನು ಮಾತನಾಡುತ್ತೇನೆ ಆಗ ಮಾನ್ಯ ಸಚಿವರು ಉತ್ತರ ಕೊಡುವಿರಂತೆ, please, ಈಗ ಬೇಡ ನಾನು ಬೇಗ ನನ್ನ ಭಾಷಣ ಮುಗಿಸಿಬಿಡುತ್ತೇನೆ, ಈಗಾಗಲೇ time ಆಗಿದೆ ಇನ್ನೂ ಮಾನ್ಯ ಹಣಕಾಸಿನ ಸಚಿವರು ಬಜೆಟ್‌ಗೆ ಉತ್ತರ ಕೊಡಬೇಕಾಗಿದೆ

ಶ್ರೀ ಹೆಚ್ ಡಿ ರೇವಣ್ಣ ದಯವಿಟ್ಟು ನನಗೆ ಮಾತನಾಡಲು ಎರಡೇ ಎರಡು ನಿಮಿಷ ಅವಕಾಶ ಕೊಡಿ

ಶ್ರೀ ಸಿದ್ದರಾಮಯ್ಯ ಈಗಾಗಲೇ ಸಮಯವಾಗಿದೆ, ಈಗ ತಾವು ಉತ್ತರ ಕೊಡುವುದು ಬೇಡ ಇನ್ನೂ೩-೪ ಜನ ಮಾತನಾಡವವರಿದ್ದಾಋಎ ಮಾನ್ಯ ಯಡಿಯೂರಪ್ಪನವರು ೧೨ ಗಂಟೆಗೆ ಉತ್ತರ ಕೊಡಬೇಕಾಗಿದೆ

ಶ್ರೀ ಹೆಚ್ ಡಿ ರೇವಣ್ಣ ಮಾನ್ಯ ಸಿದ್ದರಾಮಯ್ಯ ಸಾಹೇಬರು

ಶ್ರೀ ಸಿದ್ದರಾಮಯ್ಯ ದಯವಿಟ್ಟು ಎಲ್ಲಾ ಅಂಶಗಳ ಬಗ್ಗೆ ಬರೆದುಕೊಂಡು, ಓದಿಕೊಂಡು, ನಿಮ್ಮ ಇಲಾಖೆ ಡಿಮ್ಯಾಂಡ್ ಬಂದಾಗ ಎಲ್ಲದರ ಬಗ್ಗೆ ಸ್ಪಷ್ಟವಾಗಿ ಹೇಳಿ ಈಗ ಹೇಳಿದರೆ, ನಿಮ್ಮ ಉತ್ತರ incomplete ಆಗುತ್ತದೆ, ಅದು ಅಸಂಬದ್ಧವಾಗುತ್ತದೆ ಆದ್ದರಿಂದ ಈಗ ಉತ್ತರ ಹೇಳುವುದಕ್ಕೆ ಹೋಗಬೇಡಿ

ಶ್ರೀ ಹೆಚ್ ಡಿ ರೇವಣ್ಣ ನೀವು ಬೇರೆ ರೀರಿ ದಾರಿ ತಪ್ಪಿಸುತ್ತಿದ್ದೀರಿ ನಾನು ಹೇಳುತ್ತೇನೆ ದಯಮಾಡಿ ನನಗೆ ಅವಕಾಶ ಕೊಡಿ

ಶ್ರೀ ಸಿದ್ದರಾಮಯ್ಯ ನಾನು ಯಾರನ್ನೂ ದಾರಿ ತಪ್ಪಿಸುವುದಿಲ್ಲ ನಾನು ನೇರವಾದ ದಾರಿಯಲ್ಲಿ ಹೋಗುತ್ತಿದ್ದೇನೆ You are trying to mislead I have never misled the House in my political career

ಶ್ರೀ ಹೆಚ್ ಡಿ ರೇವಣ್ಣ ಇವತ್ತು ವಿದ್ಯುತ್ ಉತ್ಪಾದನೆ ಬಂಡವಾಳ ಹೂಡುತ್ತಿಲ್ಲ ಎಂದು ಹೇಳಿ ಸದನವನ್ನು ದಾರಿ ತಪ್ಪುಸುತ್ತಿದ್ದೀರಿ

ಶ್ರೀ ಸಿದ್ದರಾಮಯ್ಯ I never mislead the House

ಶ್ರೀ ಹೆಚ್ ಡಿ ರೇವಣ್ಣ ನಾನು ವಿಷಯವನ್ನು ಸದನಕ್ಕೆ ತಿಳಿಸಬೇಕಲ್ಲವೇ?

ಅಧ್ಯಕ್ಷರು ಅವರು ಯೀಲ್ಡ್ ಆಗದಿದ್ದರೆ ಏನೂ ಮಾಡಲಿಕ್ಕಾಗುವುದಿಲ್ಲ,

ಶ್ರೀ ಸಿದ್ದರಾಮಯ್ಯ ಏನ್ರೀ ಇದು? ಕೈಲಾಗದವರು ಮೈ ಪರಚಿಕೊಂಡರಂತೆ ನೀವು ಹೇಳಬೇಕಾದುದದನ್ನು ನಂತರ ಹೇಳಿ ಸುಮ್ಮನೆ ಪದೇ ಪದೇ ಮಧ್ಯೆ ಪ್ರವೇಶಿಸಬೇಡಿ

ಶ್ರೀ ಹೆಚ್ ಡಿ ರೇವಣ್ಣ ಆ ದಿಸೆಯಲ್ಲಿ ನಾವೇನು ಮಾಡಿದ್ದೇವೆ ಎಂಬುದನ್ನು ನಾನು ಹೇಳಬೇಕಲ್ಲವೇ?

ಶ್ರೀ ಸಿದ್ದರಾಮಯ್ಯ ನಾನು ಹೇಳಬೇಕಾದುದನ್ನು ಹೇಳಿದ್ದೇನೆ ನಿಮಗೆ ಹೇಳಬೇಕಾದುದನ್ನು ನೀವು ನಂತರ ಹೇಳಿ

ಶ್ರೀ ಹೆಚ್ ಡಿ ರೇವಣ್ಣ ಅದನ್ನೇ ನಾನು ಹೇಳುತ್ತೇನೆ ದಯವಿಟ್ಟು ಅವಕಾಶ ಕೊಡಿ

ಶ್ರೀ ಸಿದ್ದರಾಮಯ್ಯ ನಂತರ ನಿಮಗೆ ಅವಕಾಶ ಸಿಗುತ್ತದೆ ಈಗ ನೀವು ಉತ್ತರ ಹೇಳಿ ಸುಮ್ಮನೆ ಪದೇ ಪದೇ ಮಧ್ಯೆ ಎದು ನಿಂತು ನಮಗೆ disturb ಮಾಡಬೇಡಿ ಈಗಾಗಲೇ ೩ ಸಾರಿ ಮಧ್ಯೆ ಎದ್ದು ನಿಂತುಕೊಂಡಿದ್ದೀರಿ ಇದರಿಂದಾಗಿ ಹಲವಾರು ನಿಮಿಷಗಳ ಸಮಯ ವ್ಯಯವಾಯಿತು ನೀವು ಏನೂ ಮಾಡಿಲ್ಲವೆಂದು ನಾನು ಹೇಳಲಿಲ್ಲ ಬಂಡವಾಳ ಹೂಡಿಲ್ಲ ಎಂದಷ್ಟೇ ನಾನು ಹೇಳಿದೆ

(ಗೊಂದಲ)

ಮಾನ್ಯ ಯಡಿಯೂರಪ್ಪನವರಿಗೆ, ನೀವು ಆ ಕ್ಷೇತ್ರದ್ಲಿ ಬಂಡವಾಳ ಹೆಚ್ಚಾಗಿ ಹೂಡಿ ಎಂದು ನಾನು ಹೇಳುತ್ತಿದ್ದೇನೆ You should be happy ಅದಕ್ಕಾಗಿ ನೀವು ಖುಷಿ ಪಡಬೇಕು

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ನಿಮ್ಮ ಇಲಾಖೆಯಲ್ಲಿ ಹೆಚ್ಚು ಬಂಡವಾಳ ಹೂಡಿ ಎಂದು ಅವರು ಹೇಳಿದರೆ,ಅದಕ್ಕೆ ನೀವು ಬೇಡ ಎಂದು ಹೇಳುತ್ತೀರಲ್ಲಾ?

ಶ್ರೀ ಹೆಚ್ ಡಿ ರೇವಣ್ಣ ನಾನು ಆ ರೀತಿ ಹೇಳಲಿಲ್ಲ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಮತ್ತೆ ತಾವು ಏಕೆ ಮಧ್ಯೆ ಎದು ನಿಂತು ಮಾತನಾಡುತ್ತೀರಿ?

ಶ್ರೀ ಹೆಚ್ ಡಿ ರೇವಣ್ಣ ಮಾನ್ಯ ಸಿದ್ದರಾಮಯ್ಯ ಸಾಹೇಬರು

ಶ್ರೀ ಸಿದ್ದರಾಮಯ್ಯ ಆಮೇಲೆ ನಮ್ಮ ಮನೆಗೆ ಬನ್ನಿ ಏನೇನಾಗಿದೆ ಎಂಬುದನ್ನೆಲ್ಲಾ ನಾನು ಆಮೇಲೆ ಹೇಳುತ್ತೇನೆ

ಶ್ರೀ ಹೆಚ್ ಡಿ ರೇವಣ್ಣ ನಾವು ಏನು ಮಾಡಿದ್ದೇವೆ ಎಂಬುದನ್ನಾದರೂ ನಾವು ಹೇಳಬೇಕಲ್ಲವೇ?

ಶ್ರೀ ಕೆ ಶ್ರೀನಿವಾಸಗೌಡ ಒಂದು ದಿವಸ ನೀವು ಅವರ ಮನೆಗೆ ಹೋಗಿ, ಇನ್ನೊಂದು ದಿವಸ ಅವರನ್ನೇ ನಿಮ್ಮ ಮನೆಗೆ ಕರೆಸಿಕೊಳ್ಳಿ

ಶ್ರೀ ಸಿದ್ದರಾಮಯ್ಯ ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ೨-೩ ವಿಚಾರಗಳ ಬಗ್ಗೆ ಹೇಳಿದ್ದಾರೆ ನಾನು ಈ ವಿಚಾರದಲ್ಲಿ ಕರ್ನಾಟಕದಲ್ಲಿ ಇತಿಹಾಸ ನಿರ್ಮಾಣ ಮಾಡಿದ್ದೇನೆ ಎಂದು ಅವರು ಹೇಳಿಕೊಳ್ಳುತ್ತಾರೆ ಶೇಕಡ ೪ರ ಬಡ್ಡಿ ದರದಲ್ಲಿ ಸಾಲ ಕೊಟ್ಟಿರುವುದರ ಬಗ್ಗೆ ಅವರು ಹೇಳಿಕೊಳ್ಳುತ್ತಾರೆ ಇಡೀ ದೇಶದಲ್ಲಿ ಬೇರೆ ಯಾರೂ ಶೇಕಡ ೪ರ ಬಡ್ಡಿ ದರದಲ್ಲಿ ಸಾಲ ಕೊಟ್ಟಿಲ್ಲ, ಇದನ್ನು ನಾವು ಮಾಡಿದ್ದು ಎಂದು ಅವರು ಹೇಳಿಕೊಳ್ಳುತ್ತಾರೆ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ, ಮಾನ್ಯ ಎಸ್ ಎಂ ಕೃಷ್ಣರವರ ಕಾಲದಲ್ಲಿ ಮೂರು ವರ್ಷಗಳ ಕಾಲ ಬರಗಾಲ ಇದ್ದುದ್ದರಿಂದ, ನಾವು ಶೇಕಡ ೬ ರಷ್ಟು ದರದಲ್ಲಿ ರೈತರಿಗೆ ಸಾಲ ಸಿಕ್ಕಬೇಕು ಎಂದು ಮಾಡಿದೆವು ೨೦೦೫-೦೬ ರಲ್ಲಿ ನಾವು ಬಡ್ಡಿ ದರವನ್ನು ಶೇಕಡ ೧೧ ½ ರಿಂದ ಶೇಕಡ ೬ ಕ್ಕೆ ಇಳಿಸಿದೆವು From 11 5% to 6%, the difference is 5 5% 2828 ಕೋಟಿ ರೂಪಾಯಿಗಳ ಸಾಲ ಕೊಡಲಾಯಿತು It comes to about Rs 150 crores ಇವರು ಸಾಲದ ಮೇಲಿನ ಬಡ್ಡಿ ದರವನ್ನು ಶೇಕಡ ೬% ರಿಂದ ೪% ಕ್ಕೆ ಇಳಿಸಿದರು The difference is 2% ಇವರು ಯಾವಾಗ ಇದನ್ನು ಮಾಡಿದರು? ಕೇಂದ್ರ ಸರ್ಕಾರ ರೈತರಿಗೆ ಕೊಡುವ ಸಾಲದ ಮೇಲಿನ ಬಡ್ಡಿ ದರವನ್ನು ೯%ರಿಂದ ೭%ಗೆ ಇಳಿಸಿದಾಗ, ೨% ಕಡಿಮೆಯಾಯಿತು ಆದ್ದರಿಂದ, the out go from treasury is zero The outgo or extra burden on the Government exchequer is zero

ಶ್ರೀ ಶಿವಾನಂದ ಎಸ್ ಪಾಟೀಲ್ ಮಾನ್ಯ ಸಿದ್ದರಾಮಯ್ಯನವರೆ, ಒಂದು ನಿಮಿಷ ನಮ್ಮ DCC Bank ನಲ್ಲಿ ಇನ್ನೊಂದು

ಸಮಸ್ಯೆಯಾಗಿದೆ ನಬಾರ್ಡ್ finance ಗೆ ಇನ್ನು ಮೇಲೆ ೩.೧೫% ಕೊಡುತ್ತಾರಂತೆ ಆದ್ದರಿಂದ loan borrowings ಮೇಲೆ ಕೇವಲ ೫% ಆಗುತ್ತದೆ ಮಾನ್ಯ ಸಿದ್ರಾಮಣ್ಣ, ನೀವು ೫.೫% ಗೆ ಏನೊಂದು incentive ಕೊಡುತ್ತೀರಲ್ಲಾ, ಅದನ್ನು reduce ಮಾಡಿ, ನಬಾರ್ಡ್‌ನವರು ಇನ್ನು ಮೇಲೆ ೩.೧೫% ಕೊಡುತ್ತಾರಂತೆ, Own funds ಮೇಲೆ ೫.೫% ಇದ್ದುದ್ದನ್ನು ಮತ್ತೆ reduce ಮಾಡಿದರು ಈ ಒಂದು ದೃಷ್ಟಿಯಿಂದ ರಾಜ್ಯದಲ್ಲಿರುವ ಎಲ್ಲಾ ಡಿ ಸಿ ಸಿ ಬ್ಯಾಂಕ್‌ಗಳು ಒಂದೇ ವರ್ಷದಲ್ಲಿ ಮುಳುಗಿ ಹೋದವು ಈ Circular recent ಆಗಿ ಇದು ಬಂದು just 15 days ಆಯಿತು

ಶ್ರೀ ಸಿದ್ದರಾಮಯ್ಯ ಆದ್ದಿರಿಂದ, ಇದರಿಂದೇನು ಅವರು ತೆಗೆದುಕೊಳ್ಳಬೇಕೆಂದಿದ್ದಾರಲ್ಲಾ, ಅದರಲ್ಲಿ credit ತೆಗೆದುಕೊಳ್ಳಬೇಕಾಗಿರತಕ್ಕವರು ಮಾನ್ಯ ಧರ್ಮಸಿಂಗ್ ರವರು ಮತ್ತು ಅವರ ಸರ್ಕಾರ ಕೇಂದ್ರ ಸರ್ಕಾ ೨% ಕಡಿಮೆ ಮಾಡಿದೆಯೇ ಹೊರತು, ಇದರಿಂದ

(ಗೊಂದಲ)

೪% ಬಡ್ಡಿ ದರದಲ್ಲಿ ರೈತರಿಗೆ ಸಾಲ ಕೊಡುತ್ತಿರುವುದರಲ್ಲಿ, the out go from the treasury or from the consolidated fund is nil ಇದೊಂದು ಆಯಿತು ಶೇಕಡ ೪% ನಲ್ಲಿ ಸಾಲ ಕೊಟ್ಟಿದ್ದ credit ನಮಗೇ ಬರಬೇಕು ಈಗ ಬೆಳೆ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದೀರಿ ಅದನ್ನು ನಾವು ಸ್ವಾಗತ ಮಾಡುತ್ತೇವೆ ಅದನ್ನು ಎಲ್ಲರಿಗೂ ಮಾಡಿ

ನಮ್ಮ ಡಿಮ್ಯಾಂಡ್ ಏನೆಂದರೆ, ನಾವು ಮನ್ನ ಮಾಡಿದಾಗ ೬% ಗೆ ತಂದಾಗ ೧೨,೬೮,೦೦೦ ಫ್ಯಾಮಿಲಿಗಳಿಗೆ ಅನುಕೂಲವಾಗಯಿತು ಈಗ ಇವರು ೨೫,೦೦೦ ರೂಪಾಯಿ ಬೆಲೆ ಸಾಲ ಮಾಡುತ್ತೇವೆಂದು ಹೇಳಿದ್ದಾರೆ ಮಾಡಿ ಆದರೆ, ನೀವು ಮಾಡುವುದಾದರೆ ಬರಿ ಇಪ್ಪತ್ತೈದು ಸಾವಿ, ಐವತ್ತು

ಸಾವಿರದೊಳಗಡೆ ಇಪ್ಪತ್ತೈದು ಕಟ್ಟಿದರೆ, ಇವನ್ನೆಲ್ಲಾ ಬಿಟ್ಟು, ಯಾರ್‍ಯಾರು ಬೆಳೆ ಸಾಲವನ್ನು ತೆಗೆದುಕೊಂಡಿದ್ದಾಋಎ, ಬೆಳೆ ಸಾಲಕ್ಕೆ ಸೀಮಿತವಾಗಿ ಯಾರ್‍ಯಾರು ಬೆಳೆ ಸಾಲವನ್ನು ತೆಗೆದುಕೊಂಡಿದ್ದಾರೆ, ಎಲ್ಲರದನ್ನು ಕೂಡ ಅಷ್ಟಕ್ಕೆ ಮನ್ನ ಮಾಡಿ ಟೈಮ್ ೩೧ಕ್ಕೆ ಮುಗಿದು ಹೋಯಿತು ಏನು ನಾಳೆ ರಜಾ ನಾಳಿದ್ದೂ ರಜಾ, ೩೧ ಆಗಿಯೆ ಹೋಯಿತು ಮತ್ತೆ ಇವರು ಸಾಲ ಮನ್ನ ಮಾಡುತ್ತೇವೆಂದು ಹೇಳಿದ ಮೇಲೆ ಇದ್ದಬದ್ದ ದುಡ್ಡನ್ನು ಖರ್ಚು ಮಾಡಿಕೊಂಡರು ಯಾರೂ ಕಟ್ಟುವುದಕ್ಕೆ ಹೋಗಿಲಿಲ್ಲ ಈಗ ಅವರೇನಾದರು ಕಟ್ಟಬೇಕಾದರೆ ಅವರ ಮನೆಯಲ್ಲಿರುವ ಒಡವೆನೊ, ಆಸ್ತಿನೊ ಗಿರವಿ ಇಟ್ಟುಬಿಟ್ಟು ತಂದು ಬಡ್ಡಿ ಕಟ್ಟಬೇಕು, ಅಲ್ಲಿ ಪ್ರೈವೆಟ್ ಮನಿ ಲೆಂಡರ್ಸ್ ಹತ್ತಿರ ಹೋಗಿರ ತರಬೇಕು, ಮತ್ತೆ ಅವನ ಮನೆ ಹಾಳಾಗುತ್ತದೆ ಆದುದರಿಂದ ನೀವು ಅವರ ಮನೆಯನ್ನು ಉಳಿಸಬೇಕಾದರೆ, ಒಂದು ಟೈಮ್ ವಿಸ್ತರಿಸಬೇಕು ೫%ಗೆ ಬಡ್ಡಿ ಇಳಿಸಿದಾಗ ೧೧೬೯ ಕೋಟಿ ಭಾರ ಬಂತು ಇವರು ಇದನ್ನು ಮಾಡುವುದರಿಂದ ೧೫೦೦ ಒಳಗಡೆ ಬರುತ್ತದೆ ಏಕೆಂದರೆ ಇದು ೬ ಲಕ್ಷ ಕುಟುಂಬಗಳಿಗೆ ಅನ್ವಯವಾಗುವುದು ಅಲ್ಪಾವಧಿ ಸಾಲ, ಮಧ್ಯಮಾವಧಿ ಸಾಲ, ಧೀರ್ಘಾವಧಿ ಸಾಲ, ಎಲ್ಲಾ ತೆಗೆದುಕೊಂಡಿರುವವರನ್ನು ಸೇರಿಸಿದರು ಕೂಡ ಒಟ್ಟು ಸಾಲ ತೆಗೆದುಕೊಂಡಿರುವವರು ೧೬,೮೬,೦೦೦ ಇದನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ ಇಲ್ಲವೆಂದರೆ ರೈತರ ಮುಗಿಗೆ ತುಪ್ಪ ಹಚ್ಚಿದಂತಾಗುತ್ತದೆ ರೈತರು ಇನ್ನಷ್ಟು ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತಾರೆ, co-operative institutions ಎಲ್ಲಾ ಮುಳುಗಿ ಹೋಗುತ್ತವೆ, ಮತ್ತೆ ಇವರು ೧೯೦೦ ಕೋಟಿ ಹೋಗುತ್ತದೆಂದು ಹೇಳಿದ್ದಾರೆ ಇಲ್ಲಿಯವರೆಗೆ ಬಾಕಿ ಇದ್ದದ್ದೆ ಬ್ಯಾಂಕ್ ಗಳಿಗೆ ಕೊಡಬೇಕಾದ್ದೆ ೫೦೦ ಕೋಟಿ DCC bankಗಳಿಗೆ ಕೊಡಬೇಕಾದ್ದದ್ದು ೫೦೦ ಕೋಟಿ, ಸಪ್ಲಿಮೆಂಟರಿ ಎಸ್ಟಿಮೇಟ್ ನಲ್ಲಿ ಮಾಡಿಕೊಂಡಿರುವ ೫೦೦ ಕೋಟಿ ಆ ಬಾಕಿ ೫೦೦ ಕೋಟಿಗೆ ಹೋಗುತ್ತದೆ ಇನ್ನು ೫೦೦ ಕೋಟಿ ಆ ಬಾಕಿ ೫೦೦ ಕೋಟಿಗೆ ಹೋಗುತ್ತದೆ ಇನ್ನು ೫೦೦ ಕೋಟಿ ಬಜೆಟ್ ನಲ್ಲಿಟ್ಟುಕೊಂಡಿದ್ದಾಋಎ ಆ ೫೦೦ ಕೋಟಿಯಲ್ಲಿ ಇವರು ಮೇ ಒಳಗಡೆ ಎಲ್ಲವನ್ನು ತುಂಬಿಕೊಡದೆ

ಹೋದರೆ, ಯಾವ society re-finance ಮಾಡುವುದಿಲ್ಲ, ಯಾರ ಕೈಯಲ್ಲೂ ಆಗುವುದಿಲ್ಲ ಈಗಾಗಲೇ ೫೦೦೦ಕ್ಕಿಂತ ಹೆಚ್ಚು society ಗಳು, defunct ಆಗಿಬಿಟ್ಟಿವೆ, ಸತ್ತು ಹೋಗಿದ್ದಾರೆ, ಮುಚ್ಚಿ ಹೋಗಿಬಿಟ್ಟಿದ್ದಾವೆ ಮತ್ತೆ ಆ ನೇಕಾರರರ ೨೫,೦೦೦ ರೂಪಾಯಿಗಳ ಸಾಲ ಮನ್ನ ಮಾಡುತ್ತೇವೆಂದು ಹೇಳಿದ್ದಾಋುಎ ನೇಕಾರರೆಲ್ಲಾ ಸಾಲ ತೆಗೆದುಕೊಂಡಿರುವುದೆಲ್ಲಾ Urban Co-operative Bankಗಳಲ್ಲಿ ಅದು ಅವರಿಗೆ ಅನ್ವಯವಾಗುವುದೇ ಇಲ್ಲ ಏಕೆಂದರೆ ಅವರಿಗೆ ೪% interest rate ನಲ್ಲಿ Urban Co-operative Bank ನಲ್ಲಿ ಸಾಲವೇ ಸಿಕ್ಕಿಲ್ಲ ಇದು ಸುಮ್ಮನೆ ಬರೀ ಪುಸ್ತಕದಲ್ಲಾಗುತ್ತದೆ ನೀವು ಸಾಲನೇ ಕೊಟ್ಟಿಲ್ಲವೆಂದಾಗ ನೀವು ಸಾ ಮನ್ನ ಮಾಡುವುದೆಲ್ಲಿ ಬಂತು? ಆ ನೇಕಾರರಿಗೆ ಸಹಾಯ ಮಾಡುವುದಿದ್ದಾಋುಎ ಸರಿಯಾಗಿ ಅವರಿಗೆ ಸಹಾಯ ಮಾಡಬೇಕು ಆಮೇಲೆ ಈ ಸಾರಾಯಿ ನಿಷೇಧ ಮಾಡುತ್ತೇವೆಂದು ಹೇಳಿದ್ದಾರೆ ಸಾರಾಯಿ ನಿಷೇಧ ಮಾಡಿದರೆ . ಸುಮಾರು ೧೯೦೦ ಕೋಟಿ ರೂಪಾಯಿಗಳನಷ್ಟು ಹಣ ಇಲ್ಲವಾಗುತ್ತದೆ ಈಗ ಸಾರಾಯಿ ಒಂದರಲ್ಲಿ ಸರ್ಕಾರಕ್ಕೆ ೧೯೦೦ ಕೋಟಿ ರೂಪಾಯಿಗಳು ಬರುತ್ತಿದೆ ಅಬಕಾರಿಯಲ್ಲಿ ಒಟ್ಟು ನಾಲ್ಕುವರೆ ಸಾವಿರ ಕೋಟಿ ರೂಪಾಯಿಗಳು ಬರುತ್ತದೆ, ಇದರಲ್ಲಿ ಸಾರಾಯಿಯಿಮದ ೧೯೦೦ ಕೊಟಿ ರೂಪಾಯಿಗಳು ಬರುತ್ತದೆ ಮಾಡಲಿ ಸಂತೋಷ, ನಮ್ಮದೇನು ತಕರಾರು ಇಲ್ಲ ಏಕೆಂದರೆ ಬಡವರ ಮಹಿಳೆಯರ ಕಣ್ಣೀರು? ಬೇಕೆಂದು ಚರ್ಚೆಗಳೆಲ್ಲಾ ನಡೆಯುತ್ತಿವೆ, ಅವರ ಕಣ್ಣೀರು ಒರೆಸುವುದಕ್ಕೆ ಮಾಡಬೇಕು ಆದರೆ ಬಜೆಟ್ ಭಾಷನದಲ್ಲೇ ನಾವು CL 2ಗೆ permission ಕೊಡುತ್ತೇವೆಂದು ಹೇಳಿದ್ದಾರೆ So, the sachets are going to be replaced by bottles with colour ಮಾಡಲಿ, ಬಡವರ ಜೀವನ ಹಾಳಾಗುತ್ತದೆ, ಅದಕ್ಕೆ ಮಾಡಲಿ, ನನಗಿರುವ ಅನುಭವದಲ್ಲಿ ದಿ ಜೆ ಹೆಚ್ ಪಟೇಲರು ಮುಖ್ಯಮಂತ್ರಿಯಾಗಿದ್ದಾಗ ನಾನು ಹಣಕಾಸಿನ ಸಚಿವನಾಗಿ ಒಂದು ಸಬ್ ಕಮಿಟಿಯಲ್ಲಿ ಅಧ್ಯಕ್ಷನಾಗಿದ್ದೆ, ಇ ಆರ್ ಸಿಂಧ್ಯಾರವರು, ಬೈರೇಗೌಡರು, ನಾಣಯ್ಯನವರು ಅದರ ಸದಸ್ಯರಾಗಿದ್ದರು, ನಾವು ಪಾನನಿಷೇಧ ಮಾಡಿರತಕ್ಕಂತಹ ಎಲ್ಲಾ

ರಾಜ್ಯಗಳನ್ನು ನೋಡಿಕೊಂಡು ಬಂದೊ There is total prohibition in Gujarat even today ಆದರೆ, ನೀವು ಎಲ್ಲಾದರು ಹೋಗಿ ನಿಮಗೆ ವೈನ್ ಶಾಪ್ ಗಳು, ಫುಟ್ ಪಾತ್ ಮೇಲೆ ನೀವು ಎಲ್ಲಿ ಹೋದರು ಸಿಗುತ್ತದೆ ನಮ್ಮ ಸಮಿತಿ ಆ ರಾಜ್ಯಕ್ಕೆ ಭೇಟಿ ನೀಡಿದಾಗ ವಗೇಲಾರವರು ಮುಖ್ಯಮಂತ್ರಿಗಳಾಗದ್ದರು ನಮ್ಮ ಸಮಿತಿ ಆ ರಾಜ್ಯಕ್ಕೆ ಭೇಟಿ ನೀಡಿದಾಗ ವಗೇಲರವರನ್ನು, ನಾವು ಸಾರಾಯಿ ನಿಷೇಧವನ್ನು ರಾಜ್ಯದಲ್ಲಿ ಮಾಡಬೇಕೆಂದಿದ್ದೇವೆ ಈ ಬಗ್ಗೆ ನಿಮ್ಮ ಅಭಿಪ್ರಾಯವೇನೆಂದು ಕೇಳಿದೆ The prohibition itself is hypocrisy ಎಂದು ಹೇಳಿದರು ಸಾರಾಯಿ ನಿಷೇಧದಿಂದ, ಇಲ್ಲಿಸಿಟ್ ಲಿಕ್ಕರ್ ಜಾಸ್ತಿಯಾಗುತ್ತದೆ ಬುಟ್ ಲೆಗ್ ಅಕ್ಟಿವಿಟಿಸ್ ಜಾಸ್ತಿಯಾಗುತ್ತದೆ, ಭ್ರಷ್ಟಾಚಾರ ಜಾಸ್ತಿಯಾಗುತ್ತದೆ ಕಳ್ಳಭಟ್ಟಿ ಜಾಸ್ತಿಯಾಗುತ್ತದೆ, ಇದನ್ನೆಲ್ಲಾ ನಿಯಂತ್ರಣ ಮಾಡತಕ್ಕಂತಹ ಪೊಲಿಟಿಕಲ್ ವಿಲ್ ಬೇಕಾಗುತ್ತದೆ, ಅದಕ್ಕೆ ಬೇಕಾದ ಸಿದ್ಧತೆಗಳು ಬೇಕಾಗುತ್ತದೆ, ಸಇಬ್ಬಂದಿ ಬೇಕಾಗುತ್ತದೆ ಮತ್ತೆ ಅದೇ ಪೋಲೀಸ್ ಡಿಪಾರ್ಟ್‌ಮೆಂಟ್, ಅದೇ ಅಬಕರಿ ಇಲಾಕೆಯವರು, ಬೇರೆ ಯಾರೂ ಇಲ್ಲ ಅದನ್ನು ನೋಡಿಕೊಳ್ಳುವವರು ಯಾರು? ಅದೇ ಪೋಲಿಸ್ ನವರು ಅದೇ ಅಬಕಾಋಇಯವರು, ಅವರು, ಕುರಿ ಕಾಯಿ ತೋಳವೆಂದರರೆ ಸಂಬಳವೇ ಬೇಡವೆಂದು ಕುಳಿತುಬಿಡುತ್ತಾರೆ ನಾನು ಇದನ್ನು ಕ್ರಿಟಿಸೈಸ್ ಮಾಡುತ್ತಿಲ್ಲ

ಅಧ್ಯಕ್ಷರು ಸಿದ್ಧರಮಯ್ಯನವರೆ, ನೀವು ಎಲ್ಲಾ ಮಾಡಬೇಕೆಂದು ಪ್ರಕಟಣೆ ಮಾಡಿ, ಕೊನೆಗಳಿಗೆಯಲ್ಲಿ ಏನೇನೂ ಕಾರಣಗಳಿಂದ ಅಂಚೆ ಬಿಟ್ಟಿರಿ, ಅವರು ಧೈರ್ಯ ಮಾಡಿ ಮಾಡಿಬಿಟ್ಟಿದದಾಋಎ, ಅದು ಸಕ್ಸಸ್ ಆಗಬೇಕಾದರೆ ಬೇಕಾಗುವ ಸಲಹೆಗಳನ್ನು ಹೇಳಿ

ಶ್ರೀ ಸಿದ್ಧರಾಮಯ್ಯ ನಾನು ನನ್ನ ಅನುಬಂಧವನ್ನು ಹೇಳುತ್ತಿದ್ದೇನೆ ಸ್ವಾಮಿ ನಿಮಗೆ ಯಾವತ್ತು ಕುಡಿದು ಅಭ್ಯಾಸವಾಗಿಲ್ಲ, ಅದಕ್ಕೆ ನಿಮಗೆ ಅದು ಗೊತ್ತಾಗುವುದಿಲ್ಲ I wish them all the success ಆಗಬಹುದಾ ?

ಅಧ್ಯಕ್ಷರು No No ನಿಮ್ಮ ಅನುಭವದಲ್ಲಿ ಸಲಹೆ ಹೇಳಿ

ಶ್ರೀ ಸಿದ್ಧರಾಮಯ್ಯ But, the truth is ಆಂಧ್ರಪ್ರದೇಶದವರು ಪಾನ ನಿಷೇಧಕ್ಕೆ ಹೋದರು, came back, ತಮಿಳುನಾಡು ಹೋದರು, came back, ಕೇರಳ ಹೋದರು, came back, ಇದು ಇತಿಹಾಸದಲ್ಲಿರತಕ್ಕಂತಗದ್ದು ಅಷ್ಟನ್ನು ಹೇಳಿ ಅದನ್ನು ಅಲ್ಲಿಗೆ ಬಿಟ್ಟುಬಿಡುತ್ತೇನೆ ರಾಜ್ಯದಲ್ಲಿ ಒಟ್ಟು ಸಾವಿರದ ಐನೂರ ಎಂಬತ್ತ ನಾಲ್ಕು ಅರಾಕ್ ಶಾಪ್‌ಗಳಿದ್ದಾವೆಂದು ಹೇಳಿದ್ದಾರೆ ಅಲ್ಲಿ ನಾವು CL 2 ಕೊಡುತ್ತಿದ್ದೇವೆಂಬುದು, ಬಹುಶಃ ಇದರ ಹಿಂದುಗಡೆ CL2 ಕೊಟ್ಟರೆ ಮತ್ತೆ ನಷ್ಟ ಎಲ್ಲಿ ಆಗುತ್ತದೆ, ಕುಡಿಯುವುದು ತಪ್ಪಿಹೋಗುತ್ತದೆಯಾ? ಬೀಡಿ ಸೇದುತ್ತಿದ್ದವನು ಭೀಡಿ ನಿಲ್ಲಿಸಿಬಿಟ್ಟರೆ, ಆ ಗಿರಾಕಿ ಸಿಗರೇಟ್ ಸೇದುವುದಕ್ಕೆ ಹೊರಟುಹೋಗೆಬಿಡುತ್ತಾನೆ, ಅವನು ಬಿಡುವುದಿಲ್ಲ ಚಟ ಇದೆಯಲ್ಲ ಅದು, ಬೀಡಿ ಸೇದುತ್ತಿದ್ದವನು ಸಿಗರೇಟ್ ಹುಡುಕಿಕೊಂಡು ಹೋಗುತ್ತಾನೆ ಸಾರಾಯಿ ಕುಡಿಯುತ್ತಿದ್ದವನು, ಬಟ್ಟಿ ಸರಿ ಹುಡುಕಿಕೊಂಡು ಹೋಗುತ್ತಾನೆ ಆದುದರಿಂದ ನಾನೇನು ಹೇಳುತ್ತಿದ್ದೇನೆಂದರೆ, ಇದಕ್ಕೆಲ್ಲಾ ಬಗಿಯಾದ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ ರಾಜ್ಯದಲ್ಲಿ ಹೆಚ್ಚು ಕಾನೂನಿನ ಸಮಸ್ಯೆಗಳು ಉದ್ಭವವಾಗುವುದು ಜಾಸ್ತಿಯಾಗುತ್ತದೆ, ಅದಕ್ಕೆ ಈ ಸಲಹೆಯನ್ನು ಕೊಡುತ್ತಿದ್ದೇನೆ, ಬೇರೆ ಏನೂ ಇಲ್ಲ Otherwise, I wish them all success ಇದಾಗಬಹುದಲ್ಲಾ, ಇದೊಂದು, ಮತ್ತೆ ಲಾಟರಿ ನಿಷೇಧ ಮಾಡಿದ್ದೇವೆಂದು ಹೇಳಿದ್ದಾರೆ, ಲಾಟರಿಯಿಂದ ೨೫೦ ಕೋಟಿಯಾಗುತ್ತದೆ ನಾವಿದ್ದಾಗಲೇ, ಅನ್ ಲೈನ್ ಮತ್ತು ಪ್ಲೇವಿನ್ ಲಾಟರಿಗಳನ್ನು ರದ್ದುಮಾಡಿ, ಕರ್ನಾಟಕದಲ್ಲಿ ಒಂದು ವರ್ಷ ಇರಲಿಲ್ಲ ಅವರು ಅದರ ಮೇಲೆ ಹೈಕೋರ್ಟ್‌ಗೆ ಹೋದರು ಅವರೇನು ಹಏಳಿದರೆಂದರೆ, ಬರೀ ಪ್ಲೇವಿನ್ ಲಾಟರಿ ರದ್ದುಮಾಡುತ್ತಿರಿ you make Karnataka a lottery free State ಎಂದು, ಆ ಹಿನ್ನೆಲೆಯಲ್ಲಿ ಇದು ಹೈ ಕೋರ್ಟಿನ ಡೈರೆಕ್ಷನ್, ಆ ಹಿನ್ನಲೆಯಲ್ಲಿ ಇದನ್ನು ಮಾಡಿದ್ದಾರೆ, ಒಳ್ಳೆಯದು ಆದರೆ ಜೂಜು, ಮಟ್ಕಾ ಜಾಸ್ತಿಯಾಗುವ ಸಾಧ್ಯತೆ ಇದೆ ಎಲ್ಲಾ ಕಡೆ

ಇಲ್ಲಿಗಲ್ ಆಗಿ ಜೂಜುಗಳು ಶುರುವಾಗಿಬಿಡುತ್ತವೆ ಅಧ್ಯಕ್ಷರೆ, ನೀವು ಆ ಕಡ ತಿರುಗಾಡುವುದಕ್ಕೆ ಹೋಗುತ್ತಿರಲ್ಲಾ, ನೀವು ನೋಡಿ, ಕಡಲೆಕಾಯಿ ತಿನ್ನುವ ಗಿರಾಕಿಗಳೆ ಆ ಕುದುರೆ ಜೂಜ ಆಡುವುದಕ್ಕೆ ಹೋಗುವುದು, ಕೊನೆಗೆ ಎಲ್ಲವನ್ನು ತೀರಿಸಿಬಿಟ್ಟು ಕೊನೆಗೆ ಆಟೊಗೂ ದುಡ್ಡಿಲ್ಲದೆ ಬರಿ ಕಡಲೆಕಾಯಿ ತಿಂದುಕೊಂಡು ನಡೆದುಕೊಂಡು ಹೋತುತ್ತಿರುವುದನ್ನು ಅಲ್ಲಿ ನೋಡಬಹುದು ಜೂಜಾಡಿದರೆ ದುಡ್ಡು ಬರುತ್ತದೆ ಅನುಕೂಲಸ್ತರು ಆಗಿಬಿಡಬಹುದು, ಶ್ರೀಮಂತರಾಗಿ ಬಿಡಬಹುದು ಎಂದು ಹೋಗುತ್ತಾರ ಬಡವರು ಶ್ರೀಮಂತವಾಗುವುದಕ್ಕೆ ಹೋಗುತ್ತಾರೆ, black money ಯವರು ಅದನ್ನು convert ಮಾಡಿ white money ಮಾಡಿಕೊಳ್ಳುವುದಕ್ಕೆ ಹೋಗುತ್ತಾರೆ ಲಾಟರಿ ರದ್ದು ಮಾಡಿದ್ದಾರೆ, ಅದರಲ್ಲಿ ಕೂಡ ಅವರಿಗೆ ಜಯ ಸಿಗಲಿ ಇದರಿಂದ ರಾಜ್ಯದ ಜನತೆಗೆ ರಾಜ್ಯದ ಜನಜೀವನದ ಮೇಲೆ, ರಾಜ್ಯದ ಬದುಕಿನ ಮೇಲೆ, ರಾಜ್ಯದ ಜೀವನದ ಗುಣಮಟ್ಟದ ಮೇಲೆ ಏನು ಪರಿಣಾಮ ಆಗುತ್ತದೆ ಎನ್ನತಕ್ಕಂಥದ್ದನ್ನು ನಾವು ನೋಡಬೇಕಾಗುತ್ತದೆ ಇವು ದುಷ್ಪರಿಣಾಮಗಳೋ, ಒಳ್ಳೆಯ ಪರಿಣಾಮಗಳೋ ಏನಾಗುತ್ತದೆ ಎಂದು ನೋಡಬೇಕು ಇವರು ಎಲ್ಲರಿಗೂ ಬೆಳೆ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ SC/ST ಜನ Co-operative Society ಗಳಲ್ಲಿ ಒಂದು ಪರ್ಸೆಂಟ್ ಕೂಡ ಸಾಲ ತೆಗೆದುಕೊಂಡಿಲ್ಲ ಅವರಿಗೆ ಮತ್ತು Backward class ನವರಿಗೆ, ಮೈನಾರಿಟಿಯವರಿಗೆ ಅವರು ಎಲ್ಲಿ ಅವರ Minority Development Corporation, Backward Class Development Corporation ಮತ್ತು SC/ST Corporation ಗಳಿಂದ ಏನು ಸಾಲ ತೆಗೆದುಕೊಂಡಿದ್ದಾರುಎ ಅವರಿಗೂ ಕೂಡ ಸಾಲ ಮನ್ನಾ ಮಾಡತಕ್ಕಂಥದ್ದನ್ನು ಮಾಡಬೇಕು,ಅವರಿಗೇಕೆ ಡಿನೈ ಮಾಡಬೆಕು ? ಈ ಅನುಕೂಲ ಎಲ್ಲರಿಗೂ ಆಗಬೇಕಲ್ಲ I demand, Backward class ನವರು, ಹಿಂದುಳಿದವರು, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನ ಅವರಿಗೂ ಇವರ ಜೊತೆಯಲ್ಲಿ ಸಾಲ ಮನ್ನಾ ಮಾಡಬೇಕು ಎನ್ನತಕ್ಕಂತಹ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ

ಮಾಡುವುದಕ್ಕೆ ಇಷ್ಟಪಡುತ್ತೇನೆ ನಂಜುಂಡಪ್ಪನವರ ವರದಿ ಪ್ರಕಾರ ೧೦೫೦ ಕೋಟಿ ರೂಪಾಯಿಗಳನ್ನು ಇಡಬೇಕು ನಂಜುಂಡಪ್ಪನವರು ೨೦೦೨ ಜೂನ್ ತಿಂಗಳಲ್ಲಿ ಅವರು ವರದಿ ಕೊಟ್ಟಿರುವುದು ಅವರು ವರದಿ ಕೊಟ್ಟಾಗ ಹೇಳಿದರು ಈ regional imbalance ಹೋಗ ಬೇಕಾದರೆ, ೩೧,೦೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು ಆ ೩೧,೦೦೦ ಕೋಟಿ ರೂಪಾಯಿಗಳಲ್ಲಿ ೧೫,೦೦೦ ಕೋಟಿ regular plan ನಲ್ಲಿ ಬರುತ್ತದೆ ಇನ್ನು ೧೬,೦೦೦ ಕೋಟಿ ರೂಪಾಯಿಗಳನ್ನು additional ಆಗಿ ಬಂಡವಾಳ ಹಾಕಬೇಕೆಂದು ಹೇಳಿದ್ದಾರೆ ಎಂಟು ವರ್ಷಗಳಲ್ಲಿ ಎರಡೆರಡು ಸಾವಿರ ಕೋಟಿ ರೂಪಾಯಿಗಳಂತೆ ಎಂಟು ವರ್ಷಗಳಲ್ಲಿ ಮಾಡಬೆಕೆಂದು ಹೇಳಿದ್ದಾರೆ ಈಗ ನಾವು ಯಾವ ವರ್ಷದಲ್ಲಿದ್ದೇವೆ? ಅವರು ಹೇಳಿದ್ದು ೨೦೦೩-೦೪, ೨೦೦೪-೦೫ ರಿಂದ ಎಮಟು ವರ್ಷಗಳು ಈಗ ನಾವು ೨೦೦೭-೦೮ ರಿಂದ ಪ್ರಾರಂಭ ಮಾಡುತ್ತಿದ್ದೇವೆ ಅವರು ೧೬,೦೦೦ ಕೋಟಿ ರೂಪಾಯಿಗಳು ಹೇಳಿದ್ದು ಕನಿಷ್ಟ ೨೫,೦೦೦ ಕೋಟಿ ರೂಪಾಯಿಗಳಾಗಿರುತ್ತವೆ Inflation, escalation, ಎಲ್ಲ ಸೇರಿದ್ರೆ ಇದು ಜಾಸ್ತಿಯಾಗಿರುತ್ತದೆ ಕನಿಷ್ಟ ಎಂಟು ವರ್ಷಗಳಲ್ಲಿ ನಾವು ಮೂರು ಕೋಟಿಯಿಂದ ಹಿಡಿದು ನಾಲ್ಕು ಕೋಟಿ, ನಾಲ್ಕುವರೆ ಕೋಟಿ, ಐದು ಕೋಟಿ ಖರ್ಚು ಮಾಡಿದರೆ ಮಾತ್ರ ನಂಜುಂಡಪ್ಪನವರ ವರದಿಯನ್ನು ಸಂಪೂರ್ಣವಾಗಿ ಜಾರಿಮಾಡುವುದಕ್ಕೆ ಸಾಧ್ಯವಾಗುತ್ತದೆ ಇದು ಒಂದು ೧೫೭೧ ಕೋಟಿ ರೂಪಾಯಿಗಳನ್ನು ನೀವು ಪ್ರತ್ಯೇಕವಾಗಿ ತೆಗೆದು ಇಟ್ಟಿಲ್ಲ ಈಗಿರುವ plan ನಲ್ಲಿಯೇ ಎಲ್ಲವನ್ನೂ ಸೇರಿಸಿದ್ದೀರಿ ಆಯಾ ಇಲಾಖೆಯ ಪ್ಲ್ಯಾನ್ ಗಳಲ್ಲಿ ಅಕೌಂಟ್ ಗಳಲ್ಲಿ ಎಲ್ಲ ಸೇರಿ ಹೋಗಿದೆ ಹಳದಿ ಪುಸ್ತಕಗಳನ್ನು ತೆಗೆದು ನೋಡಿದೆ Irrigation ನಲ್ಲಿ ಆ ಅಕೌಂಟ್ ನಲ್ಲಿ ೩೦೦ ಕೋಟಿ ಇದೆ Power ನಲ್ಲಿ ಆ ಅಕೌಂಟ್ ನಲ್ಲಿ ೩೦೦ ಕೋಟಿ ಇದೆ Power ನಲ್ಲಿ ಆ ಅಕೌಂಟ್ ನಲ್ಲಿ ೨೫೦ ಕೋಟಿ ಇದೆ ಪ್ರವಾಸೋದ್ಯಮದಲ್ಲಿ ೧೫೦ ಕೋಟಿ ರೂಪಾಯಿ ಇದೆ, ೧೫೭೧ ಕೋಟಿ ರೂಪಾಯಿ ಎಲ್ಲಿ ಇಟ್ಟಿದ್ದೀರಿ? ಎಲ್ಲ ಆಯಾ ಇಲಾಖೆಯ ಅಕೌಂಟ್‌ಗಳಲ್ಲಿ ಇದೆ Irrigation, Major

Irrigation, Medium Irrigation ಆ ಅಕೌಂಟ್ ಗಳಲ್ಲಿ ಬಂದಿವೆ ಅವೆಲ್ಲಾ ನಿಮಗೆ expenditure ಪುಸ್ತಕಗಳನ್ನು ಕೊಟಿದ್ದಾರಲ್ಲಾ ಆ ಪುಸ್ತಕಗಳನ್ನೆಲ್ಲಾ ನಾನು ಓದಿದೆ ಎಲ್ಲಾ ಅಲ್ಲಿಯೇ ಬಂದು ಬಿಟ್ಟಿದೆ Additional ಆಗಿ ಎಲ್ಲಿ ಇಟ್ಟಿದ್ದೀರಿ? ೧೭,೭೮೨ ಕೋಟಿ plan ಇದೆಯಲ್ಲಾ ಅದರೊಳಗಡೆ ಇದು ಬರುವುದು ಆದ್ದರಿಂದ imbalanceನ್ನು ನೀವು address ಮಾಡುವುದಕ್ಕೆ ಈ ತರಹದಿಂದ ಸಾಧ್ಯವಾಗುವುದಿಲ್ಲ Not possible Intentions ಒಳ್ಳೆಯದಿರಬಹುದು I am not going to question the intention of the Government But, where is the money? With this type of approach, we can't address the problem of the regional imbalance ಅದನ್ನು ಮಾಡುವುದಕ್ಕಾಗುವುದಿಲ್ಲ ಮಾಡುವುದಾದರೆ ಹೆಚ್ಚು ಹಣ ಇಡಬೇಕು ಅದಕ್ಕೆ ಪ್ರತ್ಯೇಕವಾಗಿ additional ಆಗಿ, in addition to regular plan Additional ಆಗಬೇಕು ಅದು, ಆಗ ಮಾತ್ರ ನಾವು ಏನು ಅತಿ ಹಿಂದುಳಿದವು ಹೆಚ್ಚು ಹಿಂದುಳಿದವು, ಅವನ್ನು ಮಾಡಲಿಕೆಕ ಸಾಧ್ಯವಾಗುತ್ತದೆ ಬಡವರಿಗೆ ಕಾರ್ಡ್ ಕೊಡುವ ವಿಷಯ ಮಾನ್ಯ ಕಾರಜೋಳ್ ರವರು ಇದ್ದಾಋಎ ೧೬ ತಿಂಗಳುಗಳಾದವು, ಕಾರಜೋಳರವರು ಬಹಳ ಜೋರಾಗಿ ಪ್ರಾರಂಭ ಮಾಡಿದಿರಿ, ಏಕೋ ಮೆತ್ತಗೆ ಆಗಿಬಿಟ್ಟಿರಲ್ಲಾ ಏಕೆ? ನಿಮಗಿರುವ ಒತ್ತಡ ಏನು? ನಿಮಗೆ pressure ಏನೂ ಇಲ್ಲವಾ? Tension ಏನೂ ಇಲ್ಲವಾ? ೫೪ ಲಕ್ಷ BPL ಕಾರ್ಡುಗಳನ್ನು ಕೊಟ್ಟಿದ್ದೀರಿ ೫೫ ಲಕ್ಷ ಕಾರ್ಡುಗಳನ್ನು ಕೊಟಿದ್ದೀರಿ ಇದರಲ್ಲಿ ೬೫ ಲಕ್ಷ pending applications ಇವೆ ಅವು ಇನ್ನೂ dispose ಆಗಿಲ್ಲ APL ಕೊಡಬೇಕೋ ಎಂದು ಹೇಳಿ ೬೫ lack applications are pending

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇವರ ಬಳಿ ಯಾವುದೇ justification ಇಲ್ಲ ಅದಕ್ಕೆ

ಶ್ರೀ ಸಿದ್ದರಾಮಯ್ಯ ನೀವು ಎಲ್ಲಿಗಾದರೂ ಹೋಗಿ, ಜನ ನಮಗೆ BPL ಕಾರ್ಡ್ ಕೊಟ್ಟಿಲ್ಲ, BPL ಕಾರ್ಡ್ ಕೊಟ್ಟಿಲ್ಲ ಎಂದು ಹೇಳುತ್ತಾರೆ I don't know ಅದನ್ನು ಹೇಗೆ ಸರಿ ಮಾಡುತ್ತೀರೋ ನೋಡಬೇಕು ಇಲ್ಲದಿದ್ದರೆ ಬಡವರಿಗೆ ಬಹಳ ಅನ್ಯಾಯವಾಗುತ್ತದೆ ನೀವು ಕೂಡ ನಮ್ಮ ರೀತಿ ಸಾಮಾಜಿಕ ನ್ಯಾಯದ ಪರ ಇರತಕ್ಕಂಥವರು ಬಡವರಿಗೆ ಅನ್ಯಾಯ ಮಾಡುವುದಕ್ಕೆ ಹೋಗಬೇಡಿ ಈಗ ಇನ್ನೊಂದು ಏನು ಹೊಸದಾಗಿ ಮಾಡಿದ್ದಾರೆಂದರೆ ಯೂನಿಟ್ ಸಿಸ್ಟಮ್ ತಂದು ಬಿಟ್ಟಿದ್ದಾಖುಎ ಯೂನಿಟ್ ಸಿಸ್ಟಮ್ ನಲ್ಲಿ ಬಜೆಟ್ ನಲ್ಲಿ provision ನೋಡಿದರೆ ಹೋದವರ್ಷ ೭೨೯ ಕೋಟಿ food ಗೆ subsidy ಕೊಟ್ಟಿದ್ದರೆ, ಈ ಸಾರಿ ಬರೀ ೬೨೦ ಕೋಟಿ ಇಟ್ಟಿದ್ದಾರೆ ನಾನು ಏಕೆ ಹೇಳಿದೆ ಎಂದರೆ, ಅಲ್ಲಿ ಹಣ ಕಡಿಮೆ ಆಗಿದೆ, ಎಲ್ಲಾ ಕಡಿಮೆ ಆಗಿದೆ, ನಿಮ್ಮ ಬಜೆಟ್ provision ನೋಡಿದಿರಾ ನೀವು ೭೨೯ ಕೋಟಿಯಿಂದ ೬೨೯ ಕೋಟಿನೋ ಎಷ್ಟೋ ಇದೆ ಇಲ್ಲವಾ? ಪರವಾಗಿಲ್ಲ ಬಿಡಿ ನೀವು ಖುಷಿಯಾಗಿ ಇದ್ದರೆ ನನಗೇನಾಗಬೇಕು ? ನಾಲ್ಕು ಕೇಜಿ per head ಎಂದು ಹೇಳುತ್ತಾರೆ ಅದು ಮೂರು ರೂಪಾಯಿಗೆ ಕೊಡುವಾಗ ನಾವು ಮಾಡಿದ್ದು ಒಂದು ಕುಟಂಬಕ್ಕೆ ೨೦ ಕೇಜಿ ಆಹಾರಧಾನ್ಯ ಸಿಗಬೇಕೆಮದು ಪಾಪ ಎರಡು ಹೊತ್ತು ಗಂಜಿ ಕುಡಿಯಬಹುದು ಎಂದು ೨೦ ಕೇಜಿ ಆಹಾರಧಾನ್ಯ ಸಿಗಬೇಕೆಂದು ಪಾಪ ಎರಡು ಹೊತ್ತು ಗಂಜಿ ಕುಡಿಯಬಹುದು ಎಂದು ೨೦ ಕೇಜಿ ಮಾಡಿದೆವು ಈಗ ಗಂಡ ಹೆಂಡತಿ ಇರುತಾರೆ, ೧೨ ವರ್ಷಕ್ಕಿಂತ ಕೆಳಗಿನ ಮಕ್ಕಳಿದ್ದರೆ ಅವರಿಗೆ ಒಂದು ಕೇಜಿಯೂ ಕೊಡುವ ಹಾಗಿಲ್ಲ ಅದನ್ನು ಯಾವಾಗ ತೆಗೆದು ಹಾಕಿದಿರಿ, ಇನ್ನೂ ತೆಗೆದಿಲ್ಲ ತೆಗೆದು ಹಾಕಿದ್ದರೆ ಬಹಳ ಸಂತೋಷ, ಇವರು ೨೦ ಕೇಜಿ maximum ಇಟ್ಟುಕೊಂಡಿರುವುದು ಒಂದು ಕುಟುಂಬದಲ್ಲಿ ೧೦ ಜನ ಇದ್ದರೆ ಅದೂ ಕೊಡುತತಿಲ್ಲ This is a serious problem Everywhere ಜನರಿಗೆ ಆಹಾರಾವಾಗಿದೆ ಈ ಕಡೆ ಹೆಚ್ಚು ಗಮನ ಕೊಡತಕ್ಕಂತಹ ಕೆಲಸ ಮಾಡಬೇಕು ಬರೀ ಪ್ರಚಾರ ಮಾಡತಕ್ಕಂತಹ ಕಾರ್ಯಕ್ರಮಗಳನ್ನು ಮಾಡಿಕೊಂಡು ಈ ಕಡೆ ಏನೂ ಮಾಡದೇ ಹೋದರೆ

ಬಡವರ ಕಷ್ಟ ಏನಾಗಬೇಕು ? ಬಡವರ ಬಗ್ಗೆ ಮಾತನಾಡುವುದು ಏನು? Backward Class Commission is a permanent commision On the directionof the Supreme Court it was constituted ಈ ಸಮ್ಮಿಶ್ರ ಸರ್ಕಾರ ಬಂದ ಮೇಲೆ, immediate ಆಗಿ Chairman ರನ್ನು ತೆಗೆದು ಹಾಕಿದರು, Member ನ್ನು ತೆಗೆದು ಹಾಕಿದರು ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ರವರೇ, ಒಂದು ವರ್ಷ ಎರಡು ತಿಂಗಳಾಯಿತು, ಇವತ್ತಿನವರೆಗೂ Memberಗೂ ನೇಮಕ ಮಾಡಲಿಲ್ಲ ನಾವು ಆಗ ೨೦೦೫-೦೬ ರಲ್ಲಿ Socio economic survey ಮಾಡಲಿಲ್ಲ ೨೩ ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು It is totally stopped ಇವತ್ತಿನವರೆಗೆ ಮಾಡಿಲ್ಲ Backward Class ಬಗ್ಗೆ ನಾವು ಬಹಳ ಕೆಲಸಗಳನ್ನು ಮಾಡುತ್ತೀವೆಂದು ಹೇಳಿದರೆ ಏನು? ಒಂದು ವರ್ಷ ಎರಡು ತಿಂಗಳುಗಳಿಂದ ಅದಕ್ಕೆ Chairman ಇಲ್ಲ ಏನೂ ಇಲ್ಲ, on the direction of the Supreme Court ಮಾಡಿದ್ದೆವು ನೀವು ಇವತ್ತಿನವರೆಗೂ ಏನೂ ಮಾಡಿಲ್ಲ ೨೩ ಕೋಟಿ ರೂಪಾಯಿಗಳನ್ನು ಅವರು ಏನು ಮಾಡಿದರು ಎಂದು ಗೊತ್ತಾಗಲಿಲ್ಲ ಕೇಂದ್ರ ಸರ್ಕಾರದವರು ೨೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು, ನಾವು ಮೂರು ಕೋಟಿ ರೂಪಾಯಿಗಳನ್ನು ಹಾಕಿ ೨೩ ಕೋಟಿ ರೂಪಾಯಿಗಳಲ್ಲಿ socio economic survey ಮಾಡಬೇಕೆಂದು ಎಲ್ಲ ತಯಾರಿ ನಡೆದಿತ್ತು ತಯಾರಿ ನಡೆಯುವಾಗ stop ಆಗಿ ಬಿಟ್ಟಿತು It is mandatory on the part of any State Government ಈ ತರಹ ಆಗಿದೆ ಆದ್ದರಿಂದ ನಾನು ಸಮಯ ಇಲ್ಲದೆ ಇರುವುದರಿಂದ ಬೇರೆ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಹೋಗಿದೆ, ಇಷ್ಟು ಹೇಳಿ, ಮಾನ್ಯ ಯಡಿಯೂರಪ್ಪನವರು ಬರೀ ಪ್ರಚಾರ ರಾಜಕೀಯ ದೃಷ್ಟಿಕೋನ ಇಟ್ಟುಕೊಂಡಿದ್ದಾರೆ ಹೊರತು, ರಾಜ್ಯದ ಹಿತ, ರಾಜ್ಯದ ಆರ್ಥಿಕ ಬೆಳವಣಿಗೆ, ಜನರ ಜೀವನದ ಗುಣಮಟ್ಟ, ಇದರ ಬಗ್ಗೆ ಯಾವುದೇ ಕಾಳಜಿ ಇಲ್ಲದೆ ಇರತಕ್ಕಂತಹ ಬಜೆಟ್ ಆದರೆ

ಇವರಿಗೆ ಸಿಕ್ಕಿದಮತಹ ಸುವರ್ಣಾವಕಾಶ ಕರ್ನಾಟಕದ ಇತಿಹಾಸದಲ್ಲಿ ಯಾರಿಗೂ ಸಿಕ್ಕಿರಲಿಲ್ಲ,

ಆ ಅವಕಾಶವನ್ನು ಇವೊತ್ತು ಕಳೆದುಕೊಂಡು ಕರ್ನಾಟಕ ಮುಂದಿನ ವರ್ಷಕ್ಕೆ ಫಿಸ್ಕಲ್ ಡಿಫಿಸಿಟ್ ಜಾಸ್ತಿಯಾಗುತ್ತದೆ It has crossed ೩% ಮತ್ತೆ ರೆವಿನ್ಯು ಢಿಫಿಸಿಟ್ ಬಂದರೆ ಆಶ್ಚರ್ಯವಿಲ್ಲ ಆ ಮಟ್ಟಕ್ಕೆ ಬರಬಹುದು ಏಕೆಂದರೆ ಇವರು ಯಾವುದೇ ಖರ್ಚನ್ನು ಯೋಜನಾಬದ್ಧವಾಗಿ ಮಾಡುತ್ತಿಲ್ಲವಲ್ಲ ಆದ್ಯತಾ ವಲಯಗಳಿಗೆ ಖರ್ಚು ಮಾಡುತ್ತಿಲ್ಲವಲ್ಲ ಆದ್ಯತಾ ವಲಯಗಳಿಗೆ ಇವರು ಬಂಡವಾಳವನ್ನು ಹೂಡುತ್ತಿಲ್ಲವಲ್ಲ ಅಗ್ರಿಕಲ್ಚರ್ ಗೆ ಹೂಡುತ್ತಿಲ್ಲ ಪವರ್ ಗೆ ಹೂಡುತ್ತಿಲ್ಲ ನೀರಾವರಿಗೆ ಹೂಡುತ್ತಿಲ್ಲ, ಸೋಶಿಯಲ್ ಸೆಕ್ಟರ್ ಗೆ ಇಲ್ಲ, ಶಿಕ್ಷಣಕ್ಕೆ ಇಲ್ಲ, ಹೀಗೆ ಇವೆಲ್ಲಕ್ಕೂ ಕೂಡ ಕಡಿಮೆ ಮಾಡಿಬಿಟ್ಟಿದ್ದಾರೆ ಹೀಗಾಗಿ ಈ ರಾಜ್ಯದ ಬೆಳವಣಿಗೆ ಮುಂದಿನ ವರ್ಷಕುಂರಿತವಾಗತಕ್ಕಂಥ ಎಲ್ಲ ಸಾಧ್ಯತೆಗಳಿವೆ ಅದರ ಅಪವಾಧವನ್ನು ಮಾನ್ಯ ಯಡಿಯೂರಪ್ಪನವರು ಹೊರಬೇಕಾಗುತ್ತದೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) ತಾವೇನೋ ಕೆಲವು ವಿಷಯಗಳನ್ನು ಅರ್ಥಗರ್ಭಿತವಾಗಿ ಚೆನ್ನಾಗಿ ಅನಲೈಸ್ ಮಾಡಿ ಹೇಳಿದ್ದೀರಿ ಅದರ ಬಗ್ಗೆ ನಮ್ಮದೇನೂ ಆಕ್ಷೇಪಣೆ ಇಲ್ಲ ಆದರೆ ತಮಗೇ ಗೊತ್ತಿರತಕ್ಕಂಥಾದ್ದು ಈಗ ಭಾಷಣದಲ್ಲಿ ನಾವು ಆಫ್ ಬಜೆಟ್ ಮತ್ತು ಅನ್ ಬಜೆಟ್ ನ ಕೆಲವು ವಿಷಯಗಳನ್ನು ಹೇಳುತ್ತೇವೆ ಆಯನ್ಯೂಯಲ್ ಫೈನಾನ್ಶಿಯಲ್ ಬಜೆಟ್ ನ್ನು ಕೊಡತಕ್ಕಂಥ ಸಂದರ್ಭಲದಲಿ ಆಫ್ ಬಜೆಟ್ ವಿಷಯ ಸೇರಿಸಿರಲಿಲ್ಲ ಅದು ತಮಗೂ ಕೂಡ ಗೊತ್ತಿರತಕ್ಕಂಥದ್ದು ಇರಗೇಶನ್ ನ್ನು ತಾವು ಒಂದು ಉದಾಹರಣೆಯಾಗಿ ತೋರಿಸಿ ಅದರಲ್ಲಿ ನೋಡಿ ಅಲೋಕೇ?ಶನ್ ಕಡಿಮೆಯಾಗಿದೆಯೆಂದು ಹೇಳುತ್ತೀರಿ ಆಫ್ ಬಜೆಟ್ ಬಾರೋಯಿಂಗ್ ಇರತಕ್ಕಂಥದ್ದನ್ನು ಅದರಲ್ಲಿ ನಾವು ಭಾಷಣದಲ್ಲಿ ಹೇಳುತ್ತೇವೆಯೇ ವಿನಃ ಆ್ಯನ್ಯೂಯಲ್ ಬಜೆಟ್‌ನಲ್ಲಿ ಸೇರಿಸುತ್ತೇವೆಯೆ?

ಶ್ರೀ ಸಿದ್ದರಾಮಯ್ಯ ಮಾನ್ಯ ಪ್ರಕಾಶ್ ರವರೆ, ನಾನು ಇನ್ನೊಂದು ಬಾರಿ ಓದಲೆ? Hundred percent I amgoing to

convince you, if you want ಈಗ ಮೊದಲು ಅವರು ಉತ್ತರ ಕೊಡಲಿ

ಶ್ರೀ ಎಂ ಪಿ ಪ್ರಕಾಶ್ ಅವರೂ ಕೂಡ ಉತ್ತರವನ್ನು ಕೊಡುತ್ತಾರೆ ಇವೊತ್ತು ನೀವು ಅವರನ್ನು ಅಭಿನಂದಿಸಬೇಕು

ಶ್ರೀ ಸಿದ್ದರಾಮಯ್ಯ ಏಕೆ ?

ಶ್ರೀ ಎಂ ಪಿ ಪ್ರಕಾಶ್ ಏಕೆಂದರೆ ಪ್ರಧಾನ ಕಾರ್ಯದರ್ಶಿಗಳು ಇಲ್ಲ ಎನ್ನುವ ಕೊರಗೇನೋ ಅವರಿಗೆ ಇತ್ತು ಆದರೆ ಸುಬ್ರಹ್ಮಂಯಂರವರು ನಿಮ್ಮ ಹತ್ತಿರ ಕೂಡ ಕೆಲಸ ಮಾಡಿರತಕ್ಕಂಥವರು ಅದ್ಭುತವಾಗಿರತಕ್ಕಂಥ ಬಜೆಟ್‌ನ್ನು ನಾವು ತಯಾರು ಮಾಡಿ ಇವೊತ್ತು ಇಲ್ಲಿ ಕುಳಿತಿದ್ದೇವೆ

ಶ್ರೀ ಸಿದ್ದರಾಮಯ್ಯ ಏನು ಮೇಜು ತಟ್ಟಿಬಿಟ್ಟರೆ ಅದ್ಭುತವಾಗಿಬಿಡುತ್ತದೆಯೆ? ನಿಮ್ಮ ಕಲ್ಲಿಗ್ಸೇ, ನಿಮ್ಮ ಪಾರ್ಟಿ ಕಲಿಗ್ಸೇ ಚೆಲುವರಾಯಸ್ವಾಮಿಯವರು, ರೇವಣ್ಣನವರು, ಇವರುಗಳೆಲ್ಲಾ ಬೇಕೆಂತಲೇ ಹೇಳುತ್ತಾರೆಯೆ? Are they not members of the cabinet? They are not sitting here (in Opposition) They are sitting in Treasury Benches)

ಶ್ರೀ ಎಂ ಪಿ ಪ್ರಕಾಶ್ ಆ ತರಹ ಅವರು ಹೇಳಿಲ್ಲವೆಂದು ಅವರೇ ಹೇಳಿದ್ದಾರೆ

ಶ್ರೀ ಸಿದ್ದರಾಮಯ್ಯ ಮೊದಲು ಹೇಳಿಬಿಟ್ಟು ನಂತರ ಹೇಳಿಯೇ ಇಲ್ಲವೆನ್ನುವ ಹೊಸ ಸಂಸ್ಕೃತಿ ಈಬ ಬಮದುಬಿಟ್ಟಿದೆ ಹೊರಗಡೆ ಹೇಳುವುದು, ಇಲ್ಲಿಗೆ ಬಂದು ಹೇಳಿಯೇ ಇಲ್ಲವೆಂದು ಹೇಳುವುದು This is a new culture which has develped

ಶ್ರೀ ಎಂ ಪಿ ಪ್ರಕಾಶ್ ನಮ್ಮ revenue receipt ವಿಷಯದಲ್ಲಿ ಅವರೂ ಕೂಡ ಆಗಿರುವುದರಿಂದ ಎಂಥ ಸುವರ್ಣಾವಕಾಶ ಇತ್ತು ಎನ್ನುವ

ಮಾತನ್ನು ಅವರು ಹೇಳಿದ್ದಾರೆ ನೀವೇ ಹೇಳಿದಂತೆ ನಾನ್ - ಪ್ಲಾನ್ ಎಕ್ಸ್ ಪೆಂಡಿಚರ್ ನ್ನು ಕಂಟ್ರೋಲ್ ಮಾಡುವುದಿದೆಯಲ್ಲ ಅದು ನಿಜವಾಗಿ

ಶ್ರೀ ಸಿದ್ದರಾಮಯ್ಯ ಹದಗೆಡಿಸಬೇಡಿ ಎಂಬುದೇ ನಮ್ಮ ಸಲಹೆ, ಹದಗೆಡಿಸಬೇಡಿ, ಹದಗೆಡಿಸಬೇಡಿ ಆರ್ಥಿಕ ಸುಸ್ಥಿತಿಯನ್ನು ಹದಗೆಡಿಸುವುದಕ್ಕೆ ಹೋಗಬೇಡಿ That is my argument ಇಷ್ಟು ಹೇಳಿ, ನಾನು ಸಂಶಯ ವ್ಯಕ್ತಪಡಿಸುತ್ತಿದ್ದೇನೆ ಅವರ ಪರ್‌ಫಾರ್ಮೆನ್ಸ್ ಹೇಗಿದೆ ಎಂಬ ಬಗ್ಗೆ ಮುಂದಿನ ವರ್ಷ ನೋಡೋಣ ಕಳೆದ ವರ್ಷದ ಪರ್ ಫಾರ್ಮೆನ್ಸ್‌ನ್ನು ನೋಡಿ ಈ ವರ್ಷದ ಪರ್ ಫಾರ್ಮೆನ್ಸ್ ನ್ನು ನೋಡಿದಾಗ ಅದೇ ದಾರಿಯಲ್ಲಿ ಇವರು ಹೋಗುತ್ತಿದ್ದಾರೆಂದು ನನಗನ್ನಿಸುತ್ತಿದೆ ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಸಿದ್ದರಾಮಯ್ಯನವರೆ, ನಾನ್ - ಪ್ಲಾನ್ ಎಕ್ಸ್ ಪೆಂಡಿಚರ್ ನ್ನು ಕಡಿಮೆ ಮಾಡಿ ಎಂದು ಹೇಳಿ ಮಾರ್ಗದರ್ಶನ ಮಾಡಿದ್ದೀರಿ ಅದರಲ್ಲಿ ತಾವು ಅನುಭವಿಗಳು ಆ ಮಾರ್ಗದರ್ಶನವನ್ನು ನಾನು ಒಪ್ಪುತ್ತೇನೆ ನಾನ್ - ಪ್ಲಾನ್ ಎಕ್ಸ್ ಪೆಂಡೀಚರ್ ನ್ನು ಕಡಿಮೆ ಮಾಡತಕ್ಕಂಥದ್ದು ಎಲ್ಲರ ಗುರು ಕೂಡ ಆಗಿರಬೇಕು ಆದರೆ ನಿಮ್ಮ ಸಂಶಯಕ್ಕೆ ಅವಕಾಶವಿಲ್ಲದಂತೆ ನಾವು ನಿರ್ವಹಿಸುತ್ತೇವೆ ಎನ್ನತಕ್ಕಂಥ ಬರವಸೆಯನ್ನು ನಿಮಗೆ ಕೊಡುತ್ತೇವೆ

ಶ್ರೀ ಜೆ ವಿ ಶ್ರೀರಾಮರೆಡ್ಡಿ ಪ್ರಧಾನ ಕಾರ್ಯದರ್ಶಿಗಳು ಇರಲಿಲ್ಲ, ಸುಬ್ರಹ್ಮಣ್ಯಂನಂಥವರು ಇದ್ದಾಋುಎ, ತಯಾರು ಮಾಡಿದ್ದಾರೆ ಎಂದರೆ, ನೀವು ಮಾಡಲಿಲ್ಲವೆ ಬಜೆಟ್ ತಯಾರಿಯನ್ನು?

ಶ್ರೀ ಎಂ ಪಿ ಪ್ರಕಾಶ್ ನೋಡಿ, ಎಲ್ಲ ಸರ್ಕಾರಗಳೂ ಕಾರ್ಯದರ್ಶಿಗಳನ್ನು ಇಟ್ಟುಕೋಡೇ ಕೆಲಸ ಮಾಡುವುದು

ಶ್ರೀ ಜೆ ವಿ ಶ್ರೀರಾಮರೆಡ್ಡಿ ಅಧಿಕಾರಿಗಳ ಹೆಸರನ್ನು ಇಲ್ಲಿ ದಯವಿಟ್ಟು ತಾವು ಹೇಳಬಾರದು ತಾವು ಹಿರಿಯರಾಗಿದ್ದು ಈ ರೀತಿ ಅಧಿಕಾರಿಗಳ ಹೆಸರನ್ನು ಹೇಳಬಾರದು

ಶ್ರೀ ಎಂ ಪಿ ಪ್ರಕಾಶ್ ಅಧಿಕಾರಿಗಳು ಎಲ್ಲರಿಗೂ ಸಲಹೆಯನ್ನು ಕೊಡುತ್ತಾಋಎ ನೋಡಿ, ಶ್ರೀರಾಮರೆಡ್ಡಿಯವರೆ, ಸರ್ಕಾರ ಎಂದರೆ ಅಧಿಕಾರಿಗಳು ಮತ್ತು ರಾಜಕಾರಣಿಗಳಾಗಿ ಜನ ಪ್ರತಿನಿಧಿಗಲು ಕಲೆತಿರತಕ್ಕಂಥದ್ದೇ ಒಂದು ಸರ್ಕಾರ ಏನು ಬುದ್ಧದೇವ ಭಟ್ಟಾಚಾರ್ಯರು ತಮ್ಮಷ್ಟಕ್ಕೆ ತಾವೇ ಬರೆದುಕೊಳ್ಳುತ್ತಾ ಕೂಡುತ್ತಾರೆಯೆ?

ಶ್ರೀ ಜೆ ವಿ ಶ್ರೀರಾಮರೆಡ್ಡಿ ನೋಡಿ, ನೀವು ಯಾವುದೋ ವಿಚಾರಕ್ಕೆ ಯಾವುದೋ ನೀವು ಹೇಳಬೇಡಿ

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ ಬುದ್ಧದೇವ ಭಟ್ಟಾಚಾರ್ಯರು ನಿಮ್ಮ ಸೃಷ್ಟಿ ಅಲ್ಲ

(ಗೊಂದಲ)

ಶ್ರೀ ಜೆ ವಿ ಶ್ರೀರಾಮರೆಡ್ಡಿ ಹಾಗಾದರೆ ಈ ಬಜೆಟ್‌ನ್ನು ತಯಾರು ಮಾಡಿದ್ದು ನೀವಲ್ಲವೆ? ಹಾಗಾದರೆ ಈ ಬಜೆಟ್ ತಯಾರು ಮಾಡಿದ್ದು ಯಾರು ಎಂದು ಹೇಳಿ?

(ಈ ಹಂತದಲ್ಲಿ ಹಲವಾರು ಸದಸ್ಯರು ತಮಗೆ ಮಾತನಾಡಲು ಅವಕಾಶ ಕೊಡಬೇಕೆಂದು ಮಾನ್ಯ ಅಧ್ಯಕ್ಷರಿಗೆ ಒಟ್ಟಿಗೆ ಕೇಳುತ್ತಿದ್ದರು)

ಅಧ್ಯಕ್ಷರು ಈಗ ಎಲ್ಲರೂ ಕುಳಿತುಕೊಳ್ಳಿ ಮಾತನಾಡಲು ಅವಕಾಶ ಕೊಡಬೇಕೆಂದು ನೀವು ಮತ್ತು ಅವರೂ ಕೇಳುತ್ತಿದ್ದಾರೆ ಆದರೆ ನಿನ್ನೆಯೆಲ್ಲಾ ಚರ್ಚೆ ಮುಗಿಸಿ ಇವೊತ್ತು ಉತ್ತರ ಆರಂಭವಾಗಲಿ ಎಂದು ಹೇಳಿದ್ದೆ ನಿಮ್ಮ ನಿಮ್ಮಲ್ಲಿಯೇ ಆದ ಒಪ್ಪಂದದ ಪ್ರಕಾಋ ೯ ರಿಂದ ೧೨

ಗಂಟೆ ಈಗ ಇನ್ನು ೧೫ ನಿಮಿಷ ಉಳಿದಿದೆ ೧೨ ೦೦ ಗಂಟೆಗೆ ಯಡಿಯೂರಪ್ಪನವರೆ, ಈಗ ಏನು ಮಾಡುವುದು ಸ್ವಾಮಿ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ- ನಾನು ಅತ್ಯಂತ ವಿನಯದಿಂದ ಎರಡು ಮಾತುಗಳನ್ನು ಹೇಳುತ್ತೇನೆ ಒಂದು ಆಯವ್ಯಯವನ್ನು ಮಂಡನೆ ಮಾಡಿದ್ದೇವೆ ಈಗ ತಾವು ವಿರೋಧ ಪಕ್ಷಕ್ಕೆ ಏನು ಸಮಯವ್ನು ನಿಗದಿ ಮಾಡಿರುತ್ತೀರಿ ಹಾಗೆಯೇ ಆಡಳಿತ ಪಕ್ಷಕ್ಕೂ ಅಷ್ಟು ಸಮಯ ಕೊಡಬೆಕು ತಾನೆ? ಅವರು ಹೇಳಬಹುದಾದಂಥ ಒಳ್ಳೆಯ ವಿಷಯಗಳನ್ನು ವಿರೋಧ ಪಕ್ಷದಲ್ಲಿದ್ದುಕೊಂಡು ಹೇಳುವುದಕ್ಕೆ ಸಾಧ್ಯವಾಗದೇ ಇದ್ದಂಥದ್ದನ್ನು ಹೇಳಲು ಅವಕಾಶವಾಗುವಂತೆ ಆಡಳಿತ ಪಕ್ಷದವರಿಗೂ ಕೂಡ ಮಾತನಾಡಲು ಅವಕಾಶ ಮಾಡಕೊಡಬೇಕು ತಾನೆ? ನಿನ್ನೆ ಒಂದು ಒಪ್ಪಂಧವಾಗಿತ್ತು ೧೨ ೦೦ ಗಂಟೆಗೆ ಉತ್ತರ ಕೊಡಬೇಕು ಎಂದು ಆಗಿತ್ತು ಒಂದ್ಯೆದಾರು ಜನ ಮಾತನಾಡುವವರು ಇನ್ನೂ ಇದ್ದಾಋುಎ ಎಂದರು ನಿನ್ನೆ ನಾನು ೫ ೦೦ ಗಂಟೆಗೆ ಉತ್ತರ ಕೊಡುವವನಿದೆ ಆದರೆ ತಮ್ಮ ಅಪ್ಪಣೆಯಂತೆ ಇವೊತ್ತು ಉತ್ತರ ಕೊಡಬೇಕು ಎಂದಾಯಿತು ಆದರೆ ಸಮಯ ನಿಗದಿ ಮಾಡಿರುವುದು ನೀವಾಗಿರುವುದರಿಂದ ಅದರಂತೆ ನೋಡಿಕೊಳ್ಳಬೇಕಾಗಿರುವುದು ತಾವಲ್ಲವೆ ಸ್ವಾಮಿ? ನೀವಲ್ಲದೇ ನಾವು ನೋಡಿಕೊಳ್ಳುವುದಕ್ಕಾಗುತ್ತದೆಯೆ ಸ್ವಾಮಿ? ಈಗಲಾದರೂ ಅದರಂತೆ ಮಾಡಿ ಯಾರಿಗೆ ಸಮಯ ಸಿಕ್ಕಿಲ್ಲ ಅವರಿಗೆ ಸಮಯ ಕೊಟ್ಟು ನಾನು ೧೨ ೦೦ ಗಂಟೆಗೆ ಮಾತನಾಡುವುದಕ್ಕೆ ದಯಮಾಡಿ ನನಗೆ ಅವಕಾಶ ಮಾಡಿಕೊಡಿ ಇಲ್ಲದೇ ಹೋದರೆ ಮರ್ಧಯೆ ನಾನು ಏನೂ ಮಾತನಾಡುವುದಿಲ್ಲ ತಾವು ಯಾವಾಗ ಹೇಳುತ್ತೀರೋ ಆಗ ಉತ್ತರ ಕೊಡುತ್ತೇನೆ ಇನ್ನೂ ಆ ಮನೆಗೆ ಬಿಲ್ ಹೋಗಿ ಬರಬೇಕು ಇಲ್ಲಿ ಒಬ್ಬೊಬ್ಬರಿಗೆ ಒಂದು ಗಂಟೆ, ಒಂದೂವರೆ ಗಂಟೆ ಮಾತನಾಡಲು ತಾವು ಅವಕಾಶ ಕೊಟ್ಟುಬಿಟ್ಟು ಸಮಯ ನಿಗಧಿಯಂತೆ ನಡೆಯದೇ ಇದ್ದರೆ ನಾವು ಹೇಗೆ ಕಾರ್ಯಕಲಾಪದಲ್ಲಿ ಭಾಗವಹಿಸುವುದು? ತಮಗೆ ಬಿಟ್ಟಿದ್ದು, ತಾವು ಈ ಬಗ್ಗೆ ಹೇಳಿ

ಅಧ್ಯಕ್ಷರು ಇದುವರೆಗೆ ೧೭ ಗಂಟೆ ೨೫ ನಿಮಿಷ ಬಜೆಟ್ ಮೇಲೆ ಚರ್ಚೆ ನಡೆದಿದೆ ಅದರಲ್ಲಿ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಆಯವ್ಯಯವನ್ನು ಮಂಡಿಸಿರುವವರು ಯಡಿಯೂರಪ್ಪನವರು ಅದರ ನಷ್ಟ ಅಥವಾ ಲಾಭ ಅವರಿಗೇ ಹೋಗಬೇಕೇ ಹೊರತು, ಅಧಿಕಾರಿಗಳು ಮಂಡಿಸಿದರು ಎಂದು ಹೇಳುವುದು ಸರಿಯಾದ ಕ್ರಮವಲ್ಲ

(ಗೊಂದಲ)

ಶ್ರೀ ವಾಟಾಳ್ ಆ ರೀತಿ ಅವರು ಮಂಡಿಸುವುದೇ ಆದರೆ ನೀವೆಲ್ಲಾ ಎದ್ದು ಹೊರಗೆ ಹೋಗಿ ನೀವು ಇರಬೇಡಿ ನಾವೂ ಇರುವುದು ಬೇಡ

ಶ್ರೀ ಎಂ ಪಿ ಪ್ರಕಾಶ್ ಇಲ್ಲಾ ನಾವೇ ಎಲ್ಲಾ ಬೃಹಸ್ಪತಿಗಳು, ನಾವೇ ಬೃಹಸ್ಪತಿಗಳು, ನಾವೇ ನಡೆಸತಕ್ಕಂಥದ್ದು, ಈ ಸದನ ನಡೆಯತಕ್ಕಂಥದ್ದಲ್ಲಿ ಇಲ್ಲಿ ಯಾರದೂ ಪಾತ್ರವಿರುವುದಿಲ್ಲ

ಶ್ರೀ ವಾಟಾಳ್ ನಾಗರಾಜ್ ಇಲ್ಲಿ ನಾವು ಬೃಹಸ್ಪತಿಗಳು ಎಂದು ಹೇಳಿಕೊಳ್ಳಲಿಲ್ಲ ನೀವ್ಯಾಕೆ ಹೀಗೆ ಕಿರುಚಿಕೊಳ್ಳುತ್ತೀರಿ ನಾವು ಹಾಗೆ ಹೇಳಲಿಲ್ಲ ಆದೆ ಅಧಿಕಾರಿಗಳು ಮಂಡಿಸಿದರು ಎಂದು ಹೇಳುವುದು ಸರಿಯಲ್ಲ ಹೀಗೆ ಹೇಳಿದರೆ ಹಣಕಾಸಿನ ಸಚಿವರನ್ನು ಕೆಳಕ್ಕೆ ತಳ್ಳದಂತಾಗುತ್ತದೆ

ಶ್ರೀ ಎಂ ಪಿ ಪ್ರಕಾಶ್ ನಾನು ಅಧಿಕಾರಿಗಳು ಮಂಡಿಸಿದ್ದಾರೆ ಎಂದು ಹೇಳಿದೆನಾ? ಈ ರೀತಿ ಮಾತನಾಡಿದರೆ ಹೇಗೆ ? ಯಾವುದೂ ಸಂಬಂಧ ಇಲ್ಲದ್ದು

ಅಧ್ಯಕ್ಷರು ಬಹಳ ಜನ ಮಾತನಾಡುವುದಕ್ಕೆ ಅವಕಾಶವನ್ನು ಕೇಳುತ್ತಿದ್ದಾರೆ ಎಲ್ಲಾ ಸೇರಿ ಸುಮಾರು ೧೭ ೩೦ ಗಂಟೆ ಕಾಲ ಚರ್ಚೆಯಾಗಿದೆ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲ

ಕೊಡುವುದಕ್ಕೆ ಆಗುವುದಿಲ್ಲ ಮೊದಲೇ ಸಮಯ ನಿಗದಿ ಮಾಡಿ regulate ಮಾಡುವುದಕ್ಕೆ ಆಗಲಿಲ್ಲ ಅದೇ ರೀತಿ ನಡೆದುಕೊಂಡು ಬಂದಿದೆ ಇನ್ನು ಮುಂದೆ ಆ ರೀತಿ ಮಾಡೋಣ, ಸಾಕಷ್ಟು ಸಮಯವನ್ನು ವಿರೋಧ ಪಕ್ಷದವರು ಉಪಯೋಗಿಸಿಕೊಂಡಿದ್ದಾರೆ,ಇಲ್ಲವೆಂದು ನಾನು ಹೇಳುವುದಿಲ್ಲ ಈಗ ಮಾತನಾಡುವುದಕ್ಕೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಎದ್ದು ನಿಂತಿದ್ದಾರೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ೧೭ ೩೦ ಗಂಟೆ ಚರ್ಚೆಯಲ್ಲಿ, ಕಾಂಗ್ರೆಸ್ಸ್ ಪಕ್ಷದವರು, ವಿರೋಧ ಪಕ್ಷದವರು ಮತ್ತು ಆಡಳಿತ ಪಕ್ಷದವರು ಎಷ್ಟು ಮಾತನಾಡಿದ್ದಾರೆ ನೋಡಿ ಯಾರೂ ಮಾತನಾಡಬಾರದು ಎಂದು ಅಲ್ಲ ಅವರಿಗೆ ನಿಗದಿ ಮಾಡಿರುವ ಸಮಯದಲ್ಲಿ ಮಾತನಾಡಲಿ ಈ ಕಡೆಯವರಿಗೆ ಅವಕಾಶವಾಗದೆ ಹೋದರೆ ಹೇಗೆ?

ಅಧ್ಯಕ್ಷರು ಆಯಿತು ಕೊಡೋಣ ಸ್ವಾಮಿ, ತಕರಾರು ಮಾಡಿಕೊಂಡು ಹೋದರೆ ಎಲ್ಲರೂ ಕಾಲು ಗಂಟೆ ಮಾತನಾಡುತ್ತೇವೆ, ಯಡಿಯೂರಪ್ಪನವರು ಇವತ್ತು ಆ ಮನೆಗೆ ತೆಗೆದುಕೊಂಡು ಹೋಗುವ ಹಾಗೆ ಇಲ್ಲ

ಶ್ರೀ ಕೆ ಶ್ರೀನಿವಾಸ ಗೌಡ ಮಾನ್ಯ ಅಧ್ಯಕ್ಷರೆ, ಮೊದಲು ನಮ್ಮ ಕಡೆಗೆ ಮಾತನಾಡುವುದಕ್ಕೆ ಕೊಟ್ಟುಬಿಡಿ ಆಮೇಲೆ ಅವರು ಉತ್ತರ ಕೊಡಲಿ

ಅಧ್ಯಕ್ಷರು ದಯಮಾಡಿ ಎಲ್ಲರೂ ಸಹಕರಿಸಬೇಕು, ೧೭ ೩೦ ಗಂಟೆ ಚರ್ಚೆ ನಡೆದಿದೆ ಅದರಲ್ಲಿ ೧೫ ಗಂಟೆ ಈ ಕಡೆಯವರ ಉಪಯೋಗಿಸಿಕೊಂಡಿದ್ದೀರಿ

(ಗೊಂದಲ)

ಅಧ್ಯಕ್ಷರು ಕುಳಿತುಕೊಳ್ಳಿ, ನಿಮ್ಮ ಸ್ನೇಹಿತರೇ ಮಾತನಾಡಿದ್ದಾರೆ ಇನ್ನು ಯಾರು ಮಾತನಾಡಿದ್ದಾರೆ? ಈ ಭಾಗದವರು ಇಲ್ಲಿಯವರೆಗೆ ೧೫ ಗಂಟೆ ಮಾತನಾಡಿದ್ದಾರೆ ಸುಮ್ಮನೆ ಆ ಕಡೆಗೆ ಹೇಳುತ್ತಿದ್ದರೆ ನೋಡಿ ಈ

ಭಾಗದಿಂದ ದಯಮಾಡಿ ಒಬ್ಬರು ಮಾತನಾಡಿ ಅನಂತರ ಖರ್ಗೆಯವರು ಆ ಪಕ್ಷದ ಅಧ್ಯಕ್ಷರು ಹಾಗೂ senior member ಇದ್ದಾರೆ, ಅವರು ಮಾತನಾಡಲಿ

(ಗೊಂದಲ)

ಶ್ರೀ ಎನ್ ಧರ್ಮ್‌ಸಿಂಗ್ ಈಗ ಹೆಸರು ಹೇಳಿದ್ದೀರಿ, ಆದುದರಿಂದ ಖರ್ಗೆಯವರು ಎದ್ದು ನಿಂತಿದ್ದಾರೆ ನಂತರ ಅವರು ಮಾತನಾಡಲಿ

ಅಧ್ಯಕ್ಷರು ಈಗ ಅವರು conclude ಮಾಡಲಿ ಈ ಕಡೆಯಿಂದ ಯಾರಾದರೂ ಒಬ್ಬರು ಮಾತನಾಡಲಿ ಎಲ್ಲರೂ ಹತ್ತತ್ತು ನಿಮಿಷ ಮಾತನಾಡಿ ಎಲ್ಲರೂ ಸಹಕರಿಸಬೇಕು ಆನಂತರ ಖರ್ಗೆಯವರು ಮಾಡುತ್ತಾರೆ, ಅವರೂ conclude ಮಾಡುತ್ತಾರೆ, ಆಮೇಲೆ ಅದಕ್ಕೆ ಉತ್ತರ ಕೊಡುತ್ತಾರೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಈಗ ನಾನು ಮಾತನಾಡುವುದಾ, ಖರ್ಗೆಯವರು ಮಾತನಾಡುತ್ತಾರ?

ಅಧ್ಯಕ್ಷರು ಈಗ ಅವರು conclude ಮಾಡುತ್ತಾರೆ ನೀವು ಹತ್ತು ನಿಮಿಷ ಮಾತನಾಡಿ, ಅವರು ಹತ್ತು ನಿಮಿಷ ಮಾತನಾಡುತ್ತಾರೆ, ನಂತರ ಖರ್ಗೆಯವರು

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ನೀವು ನನಗೆ ಕೊಟ್ಟಿರೋ ಅಥವಾ ಅವರು ಮಾತನಾಡುತ್ತಾರೋ, ತಾವು ಯಾರಿಗೆ ಅವಕಾಶ ಕೊಟ್ಟಿರಿ?

ಅಧ್ಯಕ್ಷರು ಅವರು ಮಾತನಾಡುತ್ತಾರೆ, ನಂತರ ಕೊನೆಯಲ್ಲಿ ನೀವು ಮಾತನಾಡಿ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಅಧ್ಯಕ್ಷರೆ, ತಾವು ೨೦೦೭-೦೮ ರ ಕುರಿತಂತೆ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೆ ಧನ್ಯವಾದವನ್ನು ಸಲ್ಲಿಸುತ್ತಿದ್ದೇನೆ ಮಾರ್ಚ್ ೧೬ನೇ ತಾರೀಖು ನಮ್ಮ ಸಮ್ಮಿಶ್ರ ಸರ್ಕಾರದ ೨ನೇ ಬಜೆಟ್ ಅನ್ನು ಹಣಕಾಸು ಸಚಿವರು ಹಾಗೂ ಉಪ ಮುಖ್ಯಮಂತ್ರಿಗಳಾಗಿರುವಂತಹ ಮಾನ್ಯ ಯಡಿಯೂರಪಪ್ಪನವರು ಇದನ್ನು ಮಂಡಿಸಿದ್ದಾರೆ ನಾನು ಕಳೆದ ೧೨ ಬಜೆಟ್ ಅನ್ನು ನೋಡಿದ್ದೇನೆ ೧೩ನೇ ಬಜೆಟ್ ಅನ್ನು ಶಾಸಕವಾಗಿ ಮೂರನೇ ಅವಧಿಗೆ ಆಯ್ಕೆಯಾಗಿ ಈ ಸದನದಲ್ಲಿ ನೋಡುತ್ತಿದ್ದೇನೆ ನಾನು ಬಹಳ ವಿಶ್ವಾಸದಿಂದ ಮತ್ತು ಜನರ ಭಾವನೆಗಳ ಹಿನ್ನಲೆಯಲ್ಲಿ ಹಾಗೂ ಕಳೆದ ೧೩ ವರ್ಷಗಳ ಬಜೆಟ್ ನ್ನು ನೋಡಿರುವುದರ ಹಿನ್ನಲೆಯಲ್ಲಿ ಹೇಳಬಹುದು, ೧೩ ವರ್ಷದ ಬಜೆಟ್ ಮಾತ್ರವಲ್ಲ ಅದಕ್ಕೂ ಹಿಂದೆ ಮಂಡಿಸಿರುವಂತಹ ಅನೇಕ ಬಜೆಟ್‌ಗಳಿಗಿಂತಲೂ ಇದು ಅತ್ಯುತ್ತಮವಾದಂತಹ ಬಜೆಟ್ ಎನ್ನುವುದನ್ನು ಇವತ್ತು ಇಡೀ ರಾಜ್ಯದ ಜನ ಹಾಡಿ ಹೊಗಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ ಮಾನ್ಯ ಸಿದ್ದರಾಮಯ್ಯನವರು ಹಣಕಾಸು ಸಚಿವರಾಗಿ ಏಳು ವರ್ಷ ಬಜೆಟ್ ಮಂಡಿಸಿರುವುದನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ ಬಜೆಟ್ ಅನ್ನು ಅನೇಕ ದೃಷ್ಟಿಕೋನಗಳಿಂದ ಹೇಗೇಗೆ ವಿಶ್ಲೇಷಣೆ ಮಾಡಬಹುದು ಎಂದು ನೋಡಿದ್ದೇನೆ ನಾವು ಅಂಕಿಸಂಖ್ಯೆಗಳ ಮೇಲೆ ವಿಶ್ಲೇಷಣೆ ಮಾಡಬಹುದು ಅದು ಒಂದು ಭಾಗ, ಅದನ್ನು ಅವರು ಪ್ರಯತ್ನ ಮಾಡಿದ್ದಾರೆ ಮಾನ್ಯ ದೇಶಪಾಂಡೆಯವರು ನಿನ್ನೆ ಯಾವ ರೀತಿಯಾಗಿ ಕಾನೂನು ಪ್ರಕಾರ ಹೇಗೆ ವಿಶ್ಲೇಷಿಸಬಹುದು ಎಂದು rules and actಗಳಲ್ಲಿ ಏನೇನು ಇದೆ ಅದರ ಹಿನ್ನೆಲೆಯಲ್ಲಿ ವಿಶ್ಲೇಷಣೆಯ್ನು ಮಾಡಿದ್ದಾರೆ ನಾವು ಮಾಡಬೇಕು, ಒಂದು ಜವಾಬ್ದಾರಿಯುತ ಸರ್ಕಾರವಾಗಿ, ನಾವು ಈ ಸದನದಲ್ಲಿ ಬಜೆಟ್ ಅನ್ನು ಅನೇಕ ದೃಷ್ಟಿಕೋನಗಳಿಂದ ವಿಶ್ಲೇಷಣೆಯನ್ನು ಮಾಡಬೇಕಾದಂತಹ ಅಗತ್ಯತೆ ಇದೆ ಆ ರೀತಿಯಲ್ಲಿ ಅವರವರ ಪಾತ್ರವನ್ನು ಅವರು ನಿರ್ವಹಿಸಿದ್ದಾರೆ ಮಾನ್ಯ ಯಡಿಯೂರಪ್ಪನವರು ಸಮ್ಮಿಶ್ರ ಸರ್ಕಾರದ ಮೊದಲನೇ ಬಜೆಟ್

ಅನ್ನು ಮಂಡಿಸಿದರು ಆ ಬಜೆಟ್ ನಲ್ಲಿ ಯಾವ ಮಾತುಗಳನ್ನು ಹೇಳಿದ್ದೇವೆ ಅದನ್ನು ಹೇಗೆ ಅನುಷ್ಠಾನಗೊಳಿಸಿದ್ದೇವೆ ಎನ್ನುವುದನ್ನು action taken report ಮೂಲಕ ನೋಡಬಹುದು ಹಿಂದಿನ ಸರ್ಕಾರ ಮಂಡಿಸಿರುವಮತಹ ಬಜೆಟ್‌ನ action taken report ಗಳಿಗೂ ಹೋಲಿಕೆ ಮಾಡಿ ನೋಡಿದರೆ, ನಾವು ೨೦೦೬-೦೭ರ ಬಜೆಟ್ ನಲ್ಲಿ ಏನು ಭರವಸೆಗಳನ್ನು ರಾಜ್ಯದ ಜನೆಗೆ ಕೊಟ್ಟಿದ್ದೇವೆ, ಅದನ್ನು ಅತೀ ಹೆಚ್ಚು ಪ್ರಮಾಣದಲ್ಲಿ ಅನುಷ್ಠಾನಗೊಳಿಸುವುದಕ್ಕೆ ನಮ್ಮ ಸಮ್ಮಿಶ್ರ ಸರ್ಕಾರ ಪ್ರಯತ್ನ ಮಾಡಿದೆ ಅದನ್ನು ವಿಶ್ವಾಸದಿಂದ, ಅಂಕಿಸಂಖ್ಯೆಗಲ ಮೂಲಕ, ದಾಖಲೆಗಳ ಮೂಲಕ ಹೇಳಲಾಗಿದೆ ನನಗೆ ಸಮಯದ ಮಿತಿಯನ್ನು ಕೊಟ್ಟಿರುವುದರಿಂದ ನಾವು ಯಾವುದು ಮಾಡಲಿಲ್ಲ? ಏಕೆ ಮಾಡಲಿಲ್ಲ? ಎಂದು ಎಲ್ಲವನ್ನೂ ಉದಾಹರಿಸಿ ಹೇಳುವುದಕ್ಕೆ ಹೋಗುವುದಿಲ್ಲ ೪% ಬಡ್ಡಿಗೆ ಸಾಲ ಕೊಡಲಿಲ್ಲವಾ? ಭಾಗ್ಯಲಕ್ಷ್ಮಿ ಮಾಡಲಿಲ್ಲವೇ? ಎತ್ತಿನ ಗಾಡಿ ನಿಮ್ಮ ಕ್ಷೇತ್ರಕ್ಕೂ ಬರಲಿಲ್ಲವೇ? ಕೃಷಿ ಹೊಂಡ ತೆಗೆಸುತ್ತಿಲ್ಲವೇ? ನಾವು ಎಷ್ಟು ಹೇಳಬಹುದು? ಇದೆಲ್ಲವನ್ನು ನಾವು ಮಾಡಿದ್ದೇವೆ ಅದರ ಜೊತೆಗೆ ಕೊರತೆ ಇದೆ ಕೊರತೆಗಳನ್ನೇ ಹೇಳಬೇಕೆಂದು ವಿರೋಧ ಪಕ್ಷದವರು ಬಯಸಿದರೆ, ಕೊರತೆಗಳನ್ನು ಹೇಳಬಹುದು ಕೊರತೆಗಳು ಯಾವ ಸರ್ಕಾರದಲ್ಲಿ ಇರಲಿಲ್ಲ? ಆದರೆ ನಾವು ಬಜೆಟ್‌ನಲ್ಲಿ ಕೊಟ್ಟಿರುವಂತಹ ಏನಿದೆ, ಅದನ್ನು ಅತೀ ಹೆಚ್ಚು ದೊಡ್ಡ ಪ್ರಮಾಣದಲ್ಲಿ ಅನುಷ್ಠಾನಗೊಳಿಸುವುದಕ್ಕೆ ರಾಜಕೀಯ ಇಚ್ಚಾಶಕ್ತಿಯನ್ನು ತೋರಿಸಿ ಪ್ರಯತ್ನ ಮಾಡಿರುವ ಸಮ್ಮಿಶ್ರ ಸರ್ಕಾರ ನಮ್ಮದು ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ನಿರ್ವಹಣೆ ಹಾಗಾಗಿದೆ, ಹೀಗಾಗಿದೆ ಎಂದು ಹೇಳಿದರು ಅವರಿಗೆ ಅದು ಹೇಗಾಗಿದೆ ಎಂದು ಗೊತ್ತಿದೆ ಆಧರೆ ಒಂದು ವಿಚಾರ, ಕಾಂಗ್ರೆಸ್ ಪಕ್ಷಕ್ಕೆ ಮಾನ್ಯ ಸಿದ್ದರಾಮಯ್ಯನವರು ಸೇರಿದ ಮೇಲೆ ಆ ಪಕ್ಷದ ಪಾತ್ರವನ್ನು ಅವರು ನಿರ್ವಹಿಸಲೇಬೇಕು ಏಕೆಂದರೆ ಅವರು ಎಲ್ಲರನ್ನೂ ಸಮಾಧಾನಪಡಿಸಲೇಬೇಕಲ್ಲ ಹಾಗಾಗಿ ಅವರು ಆ ಪಕ್ಷಕ್ಕೆ ಅನುಕೂಲಕರವಾದಂತಹ ರಿತಿಯಲ್ಲಿ ಅವರು ಹೇಳಲೇಬೇಕು ಆದರೆ ನಮ್ಮ ಸರ್ಕಾರಕ್ಕೆ ನಾನು ಹೇಳುವುದಕ್ಕೆ ಬಯಸ್ಸುವುದೇನೆಂದರೆ, ಹಣಕಾಸು

ನಿರ್ವಹಣೆ ವಿಚಾಋದಲ್ಲಿ ಯಾರ ಶಿಫಾರಸ್ಸು ಬೇಡ ದೇಶ ಮಟ್ಟದಲ್ಲಿ ಆರ್ಥಿಕ ತಜ್ಞರು ಯಾರಿದ್ದಾರೆ, ದೇಶದಲ್ಲಿ survey ಮಾಡಿರುವಂತಹ ಅನೇಕ ಸಂಘ ಸಂಸ್ಥೆಗಳು ಯಾವುದಿದೆ, ಅದು ಕರ್ನಾಟಕ ರಾಜ್ಯದ ಹಣಕಾಸು ನಿರ್ವಹಣೆ ವಿಚಾರದಲ್ಲಿ ಶಿಫಾರಸ್ಸನ್ನು ಕೊಟ್ಟಿದೆ ನಿಮ್ಮ ಶಿಫಾರಸ್ಸು ತೆಗೆದುಕೊಂಡು ಏನು ಮಾಡಬೇಕಾಗಿದೆ? ನೀವು ರಾಜಕೀಯ ಕಾರಣಕ್ಕೆ ವಿರೋಧಿಸುತ್ತಿದ್ದೀರಿ ಎಂದು ಗೊತ್ತಿದೆ ರಾಜ್ಯದ ಆರ್ಥಿಕ ಸದೃಢತೆಯನ್ನು ಪರಿಗಣಿಸಿ ICRA ಸಂಸ್ಥೆಯು LA + ವರ್ಗೀಕರಣವನ್ನು ಕರ್ನಾಟಕಕ್ಕೆ ಕೊಟ್ಟಿದೆ ಇಡೀ ದೇಶದಲ್ಲಿ ಬೇರೆ ರಾಜ್ಯಗಳಿಗೆ ಅಷ್ಟೇ ಅಲ್ಲ CRISIL ಸಂಸ್ಥೆಯು AA ಶ್ರೇಣಿಯನ್ನು ನೀಡಿದೆ ಇದು ರಾಷ್ಟ್ರದ ಇತರ ಎಲ್ಲಾ ರಾಜ್ಯಗಳಿಗಿಂತ ಅಧಿಕ ಶ್ರೇಣಿಯನ್ನು ನೀಡುತ್ತದೆ ಎನ್ನುವುದನ್ನು ಇಂತಹ ಸಂಸ್ಥೆಗಳು ಹೇಳಿದೆ ಹಾಗಾಗಿ ವಿರೋಧ ಪಕ್ಷದವರು ಸಹಜವಾಗಿ ಅವರ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ ಆದರೆ ರಾಜ್ಯದ ಜನರಾಂಗಲಿ, ನಾವು ಸದನದಲ್ಲಾಗಲಿ, ನಾವ್ಯಾರು ಆರ್ಥಿಕ ನಿರ್ವಹಣೆ ವಿಚಾರದಲ್ಲಿ ಯಾವುದೇ ಕಾರಣಕ್ಕೂ ಹಿಂದೆ ಬಿದ್ದಿಲ್ಲವೆಂದು ವಿಶ್ವಾಸವನ್ನು ಹೊಂದಬೇಕಾದಂತಹ ಅಗತ್ಯತ ಇದೆ ಆ ರೀತಿಯಲ್ಲಿ ಹಣಕಾಸಿನ ಸಚಿವರು ನಿರ್ವಹಣೆ ಮಾಡುತ್ತಿರುವುದನ್ನು ನೋಡುತ್ತಿದ್ದೇವೆ ಅದರ ಜೊತೆಯಲ್ಲಿ ನಮ್ಮ ಸಾಲ ನಿರ್ವಹಣೆ ವಿಷಯದಲ್ಲಿ ಇರಬಹುದು ಹಾಗೂ ನಿನ್ನೆ ಮತ್ತು ಇವತ್ತು ಏನು ಅನೇಕ ಸಂಗತಿಗಳು ಪ್ರಸ್ತಾಪವಾಘಿದೆ, ಅದಕ್ಕೆ ಸರಿಯಾದಂತಹ ಉತ್ತರವನ್ನು ಈ ಬಜೆಟ್‌ನಲ್ಲಿ ನೀಡಿದೆ ನಾನು ಸಮಯದ ಮಿತಿಯಿರುವುದರಿಂದಾಗಿ ಆ ವಿಷಯಗಳಿಗೆ ಹೆಚ್ಚು ಹೋಗುವುದಕ್ಕೆ ಬಯಸುವುದಿಲ್ಲ ಆದರೆ ಆರ್ಥಿಕವಾಗಿ ಉತ್ತವಾದಂತಹ ರೀತಿಯಲ್ಲಿ ನಿರ್ವಹಣೆಯನ್ನು ಮಾಡುತ್ತಿದ್ದೇವೆ ನಾನು ಮಾನ್ಯ ವಿರೋಧ ಪಕ್ಷದವರಿಗೆ ಹಾಗೂ ಹಿರಿಯ ನಾಯಕರುಗಳಿಗೆ ಕೇಳುವುದಕ್ಕೆ ಬಯಸುತ್ತಿದ್ದೇನೆ, ಆರ್ಥಿಕ ನಿರ್ವಹಣೆಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ ಎಂದು ಎಲ್ಲರಿಂದಲೂ ಶಬ್ಬಾಸ್ ಗಿರಿಯನ್ನು ಪಡೆದುಕೊಂಡಿದೆ ನಾವು ಇತ್ತೀಚೆಗೆ ಕೇಂದ್ರ ಸರ್ಕಾರಲ್ಲಿ ಬಜೆಟ್ ಅನ್ನು ಮಂಡಿಸಿರುವುದನ್ನು ನೋಡಿದ್ದೇವೆ ನಾವು ಯೋಚನೆಯನ್ನು

ಮಾಡೋಣ ಮಾನ್ಯ ಚಿದಂಬರಂರವು ಹಣಕಾಸು ಸಚಿವರಾಗಿ ಕೇಂದ್ರದ ಬಜೆಟ್ ಅನ್ನು ಮಂಡಿಸಿದರು ದೇಶದಲ್ಲಿ ಆರ್ಥಿಕವಾದಂತಹ ಸಂಪನ್ಮೂಲದ ಕ್ರೋಢೀಕರಣ ಚೆನ್ನಾಗಿದೆ ಆದರೆ ಕೇಮದ್ರ ಸರ್ಕಾರಕ್ಕೆ ಹಣದುಬ್ಬರವನ್ನು ನಿಲ್ಲುಸುವುದಕ್ಕೆ ಆಗಲಿಲ್ಲ ಅವರು ಬಜೆಟ್ ಮಂಡಿಸಿದರಲ್ಲ, ಅವರಿಗೆ ಹಣದುಬ್ಬರನ್ನು ಮಂಡಿಸುವುದಕ್ಕೆ ಆಯಿತಾ? ಇವತ್ತು ಬೆಲೆಗಳು ಏಕೆ ಏರುತ್ತಿವೆ? ಇವತ್ತು ಬೆಲೆಗಳು ಯಾವರೀತಿ ಏರುತ್ತಿವೆಯೆಂದರೆ ನಾವು ಸಾಮಾನ್ಯ ಜನ ಕಷ್ಟಪಟ್ಟು ಅನುಭವಿಸುತ್ತಿದ್ದೇವೆ ಆದುದರಿಂದ ಆರ್ಥಿಕ ವಿಷಯದಲ್ಲಿ ನಾವು ನಮ್ಮ ರಾಜಕಾರಣಕ್ಕೆ ತಕ್ಕಂತೆ ಮಾತನಾಡುವುದಲ್ಲ ನಾವು ಇದನ್ನು ಸಮಗ್ರವಾಗಿ ವಿಶ್ಲೇಷಣೆಯನ್ನು ಮಾಡಬೇಕಾಗುತ್ತದೆ ಮಾನ್ಯ ಚಿದಂಬರಂರವರು ಹಣಕಾಸು ಸಚಿವರಾಗಿ ಬಜೆಟ್ ನ್ನು ಮಂಡಿಸಿದ ಮೇಲೆ ಹಣದುಬ್ಬರ ತಗ್ಗಬೇಕಾಗಿತ್ತು ಬೆಲೆಗಳು ಇಳಿಯಬೇಕಾಗಿತ್ತು

ಮಾನ್ಯ ಚಿದಂಬರಂರವರು ಹಣಕಾಸಿನ ಸಚಿವರಾಗಿ ಬಜೆಟ್ ಅನ್ನು ಮಂಡಿಸಿದ ಮೇಲೆ ಹಣದುಬ್ಬರ ತಗ್ಗಬೇಕಾಗಿತ್ತು, ಬೆಲೆಗಳು ಇಳಿಯಬೇಕಾಗಿತ್ತು ಅದು ಆಗುತ್ತಾ ಇಲ್ಲ, ಅದಕ್ಕೆ ಕಾರಣ ಅಲ್ಲೂ ಅನೇಕ ರೀತಿಯ ದೋಷಗಳು ಇವೆ ಅದರ ಪರಿಣಾಮ ನಮ್ಮ ರಾಜ್ಯದ ಮೇಲೂ ಆಗಿರುವಂಥಾದ್ದು ಕೆಲವು ಚಿಕ್ಕಪುಟ್ಟ ಕೊರತೆಗಳಿಗೆ ಕಾರಣವಾಗಿರಬಹುದು ಆದರೆ ಒಟ್ಟಾರೆಯಾಗಿ, ರಾಜ್ಯ ಉತ್ತಮವಾದ ಆರ್ಥಿಕ ಸ್ಥಿತಿಯನ್ನು ನಿರ್ವಹಿಸುತ್ತಿದೆಯೆಂಬ ಮಾತನ್ನು ಹೇಳುತ್ತಾ ನಾನು ಉಳಿದಂಥ ಅಂಕಿ ಸಂಖ್ಯೆಗಳನ್ನು ಹೇಳುವುದಕ್ಕೆ ಬಯಸದೇ, ಈ ಸಂಗತಿಗಳನ್ನು ಹೇಳುತ್ತಾ, ಈ ಬಜೆಟ್‌ನಲ್ಲಿ ಅಭಿವೃದ್ಧಿಯ ಪರವಾಗಿ, ನಮ್ಮ ಸಮ್ಮಿಶ್ರ ಸರ್ಕಾರ ಅತ್ಯುತ್ತಮವಾದ ಹೆಜ್ಜೆಯನ್ನಿಟ್ಟಿರುವುದಕ್ಕೆ ಅನೇಕ ಉದಾಹರಣೆಗಳು ಇವೆ ಬಡವರ, ಸಾಮಾನ್ಯ ಜನರ, ಕಷ್ಟದಲ್ಲಿರುವಂಥವರ, ಕಷ್ಟದಲ್ಲಿರುವಂಥವರ, ಕಷ್ಟದಲ್ಲಿ ಯಾರು ಇದ್ದಾರೋ, ಬಡತನದಲ್ಲಿ ಯಾರು ಇದ್ದಾರೊ, ಶೋಷಿತರು ಇದ್ದಾರೋ ಅವರು ಯಾವುದೇ ವರ್ಗಕ್ಕೆ, ಸಮಾಜಕ್ಕೆ ಸೇರಿದವರಿದ್ದರೂ, ಅವರಿಗೆಲ್ಲರಿಗೂ ನ್ಯಾಯವನ್ನು ದೊರಕಿಸಿ ಕೊಡುವುದಕ್ಕೆ ಈ ಬಜೆಟ್ ನಲ್ಲಿ ಬೇಕಾಗಿರುವಂದ

ಅನೇಕ ಅಂಶಗಳು ಇದೆ ಇಲ್ಲಿ ಅಭಿವೃದ್ಧಿಯ ದಾರಿಯಲ್ಲಿ ನಾವು ಇನ್ನೊಂದು ದೊಡ್ಡ ದಾಪುಗಾಲನ್ನು ಇಡುತ್ತಿದ್ದೇವೆನ್ನುವ ಬಗ್ಗೆ ಈ ಬಜೆಟ್ ನಿಂದ ಸಾಬೀತಾಗುವಂಥಾದ್ದು ಇದೆ ನಾನು ಆ ವಿಷಯಕ್ಕೆ ಹೋಗುವ ಮೊದಲು ಇದು ಅತ್ಯಂತ ಅಭಿವೃದ್ಧಿಗೆ ಪೂರಕವಾದಂಥ ಬಜೆಟ್ ಎಂದು ಹೇಳುವುದರ ಜೊತೆಯಲ್ಲಿ, ಇದು ನಾವು ಸಾಮಾಜಿಕ ಬದಲಾವಣೆಯನ್ನು ಹೊಂದುವುದಕ್ಕೆ ದಿಕ್ಸೂಚಿ ಆಗಿರುವಂಥ ಬಜೆಟ್ ಆಗಿದೆ ನಾನು ಈ ಮಾತನ್ನು ಬಹಳ ವಿಶ್ವಾಸದಲ್ಲಿ ಹೇಳುತ್ತೇನೆ ಬಜೆಟ್ ಕೇವಲ ಅಂಕಿ ಸಂಖ್ಯೆಗಳು, ಆರ್ಥಿಕ ವಿಷಯಗಳದ್ದು ಅಷ್ಟೆ ಅಲ್ಲ ಸಾಮಾಜಿಕ ಬದಲಾವಣೆಯ ದಿಕ್ಸೂಚಿಯಾಗಬೇಕೆಂದು ಆದರೆ, ಆ ಅಂಶ ಈ ಬಜೆಟ್‌ನಲ್ಲೂ ಇದೆ ಹಿಂದಿನ ಯಾವ ಸರ್ಕಾರಗಳು ಸಹ ಸಾಮಾಜಿಕ ಪರಿವರ್ತನೆಯನ್ನು ಕೊಡುವಂತೆ ಬಜೆಟ್ ಅನ್ನು ಮಂಡಿಸಿರಲಿಲ್ಲ ನಾವು social reformation ಏನು ಆಗಬೇಕೆಂದು ಹೇಳುತ್ತೇವೆ, ಸಮಾಜದಲ್ಲಿ ಪರಿವರ್ತನೆಗಳು ಏನು ಆಗಬೇಕೆಂದು ಹೇಳುತ್ತೇವೆ ಆ ಸಮಾಜ ಪರಿವರ್ತನೆಯಾಗುವುದಕ್ಕೆ ಬೇಕಾಗಿರುವಂಥ ಅಂಶಗಳನ್ನು ಹೊಂದಿರುವಂತಹ ಬಜೆಟ್ ಇದು ಇದರಲ್ಲಿ ಸಾರಾಯಿ ಮನ್ನಾ ಇದೆ, ಅನೇಕ ಕೊರತೆಗಳೂ, ಬೇರೆ ಬೇರೆ ಅನುಭವಗಳು ನಮಗೆ ಇರಬಹುದು ಆದರೆ ಸಾರಾಯಿ ಮನ್ನಾ ಈ ರಾಜ್ಯದ ಜನತೆಯಲ್ಲಿ ಅದರಲ್ಲೂ ವಿಶೇಷಾಗಿ ಸ್ತ್ರೀ ಶಕ್ತಿ ಗುಂಪುಗಳವರ ಭಾವನೆ, ಆ ಭಾವನೆಗಳನ್ನು ಇವತ್ತು ಗೌರವಿಸಿ, ಮುಂದೆ ಬರುವ ಸವಾಲುಗಳನ್ನು ಎದುರಿಸೋಣವೆಂಬ ಒಂದು ರಾಜಕೀಯ ಇಚ್ಛಾಸಕ್ತಿಯನ್ನು ತೋರಿಸಿ, ಸಾರಾಯಿ ಮನ್ನಾ ಮಾಡುವುದಕ್ಕೆ ಮುಂದಾಗಿರುವ ಸರ್ಕಾರ ನಮ್ಮದು ಇದು ಸಮಾಜದಲ್ಲಿ ಒಂದು ನಿಶ್ಚಿತವಾದ ಬದಲಾವಣೆಯನ್ನು ತರುತ್ತದೆ ಇದು ನಿಶ್ಚಿತವಾದ ಒಂದು ಒಳ್ಳೆಯ ಸಂದೇಶವನ್ನು ನಾವು ಈ ಸದನದ ಮೂಲಕ ಕಳುಹಿಸುವುದಕ್ಕೆ, ಸರ್ಕಾರದ ಮೂಲಕ ಕಳುಹಿಸುವುದಕ್ಕೆ ಸಾಧ್ಯವಾಗುತ್ತದೆ ನಾವು ಸಾರಾಯಿ ಮನ್ನಾ, ಲಾಟರಿ ಮನ್ನಾ ಮಾಡುವ ಮೂಲಕ ಸಮಾಜದಲ್ಲಿ ಒಂದು ವಿಶ್ವಾಸವನ್ನು ಸರ್ಕಾರವಾಗಿ ಸಮಾಜದಲ್ಲಿರುವಂತಹ ಎಲ್ಲಾ ರೀತಿಯ ದೋಷಗಳನ್ನು, ಎಲ್ಲಾ ರೀತಿಯ ಕುಂದು ಕೊರತೆಗಳನ್ನು ದೂರ

ಮಾಡುವುದಕ್ಕೆ, ಪ್ರಯತ್ನ ಮಾಡುತ್ತಿದೆಯೆನ್ನುವಂಥ, ಒಂದು ಸಾಮಾಜಿಕ ಪರಿವರ್ತನೆಗೆ ನಾಂದಿಯಾಗುವಂಥ ಒಳ್ಳೆಯ ಬಜೆಟ್ ಅನ್ನು ಮಾನ್ಯ ಬಿ ಎಸ್ ಯಡಿಯೂರಪ್ಪನವರು ನಮ್ಮ ಸಮ್ಮಿಶ್ರ ಸರ್ಕಾರದಲ್ಲಿ ಮಂಡಿಸಿದಾರೆಂದು ವಿಶ್ವಾಸದಲ್ಲಿ ಹೇಳಬಹುದು ಅಷ್ಟೆ ಅಲ್ಲ ಸಾರಾಯಿ ರದ್ದು , ಲಾಟರಿ ರದ್ದು, ಇದರ ಜೊತೆಯಲ್ಲಿ ನಾವು ಆದರ್ಶ ವಿವಾಹಕ್ಕೆ ೧೦,೦೦೦ ರೂಪಾಯಿಗಳನ್ನು ಕೊಡುವಂಥಾದ್ದು ಏನು ಇದೆ ಇದು ಸಹ ಸಾಮಾಜಿಕ ಪರಿವರ್ತನೆಯಲ್ಲಿ ಒಂದು ಪ್ರಮುಖವಾದ ಅಂಶವಿದೆ ನಾವು ಸರಳ ವಿವಾಹವನ್ನು ಮಾಡಿಕೊಳ್ಳಬೇಕೆಂದು ವೇದಿಕೆಗಳಲ್ಲಿ ಹೇಳುತ್ತೇವೆ ಆದರೆ ಅದನ್ನು ಅನುಷ್ಠಾನಕ್ಕೆ ತರಬೇಕೆಂಬ ಇಚ್ಛಾಸಕ್ತಿಯನ್ನು ನಮ್ಮ ಸರ್ಕಾರ ತೋರಿಸಿರುವಂಥಾದ್ದನ್ನು, ಈ ಸಂದರ್ಭದಲ್ಲಿ ನಾವು ಕಾಣಬೇಕು ಇನ್ನೂ ಅನೇಕ ಅಂಶಗಳು ಇವೆ, ಹಾಗಾಗಿ ಇದು ಕೇವಲ ಆರ್ಥಿಕ ನಿರ್ವಹಣೆಯಲ್ಲಿ ಉತ್ತಮವಾಗಿರುವಂಥಾದ್ದು ಮಾತ್ರವಲ್ಲದೆ, ಅಭಿವೃದ್ಧಿಯ ಪರವಾಗಿ ನಾವು ಮುಂದೆ ಹೋಗುತ್ತಿರುವ ವಿಚಾರದಲ್ಲಿ ದಾಪುಗಾಲು ಇಡುವುದರ ಜೊತೆಯಲ್ಲಿ, ಸಾಮಾಜಿಕ ಪರಿವರ್ತನೆಗಳಿಗೆ ಬೇಕಾಗಿರುವಂತಹ ಮಹತ್ತವಾದ ಒಂದು ಪ್ರಯತ್ನವನ್ನು ಈ ಬಜೆಟ್‌ನಲ್ಲಿ ಮಾಡಿದ್ದೇವೆಂಬ ಮಾತನ್ನು ನಾನು ಬಹಳ ವಿಶ್ವಾಸದಲ್ಲಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ ಇನ್ನೊಂದು ಈ ಬಜೆಟ್‌ನ ಬಹಳ ಮುಖ್ಯವಾದ ಅಂಶವೆಂದರೆ, ಇದು ಸಮಾಜದಲ್ಲಿ ಒಂದು ಸುಸಂಸ್ಕೃತವಾದಂತಹ, ಒಂದು ಸಂಸ್ಕಾರಯುತವಾದಂತಹ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಈ ಬಜೆಟ್‌ನಲ್ಲಿ ಸಾಧ್ಯವಾಗುತ್ತಿದೆ ಅನೇಕ ಕ್ಷೇತ್ರಗಳಿಗೆ, ಮಠಮಂದಿರಗಳಿಗೆ, ಹಣವನ್ನು ಕೊಟ್ಟಿದ್ದಾರೆಂಬ ಆರೋಪಗಳನ್ನು ಮಾಡಿದರು ನಾವು ಈ ಸದನದ ಮೂಲಕ ನಮ್ಮೆಲ್ಲಾ ಶ್ರದ್ಧಾಭಕ್ತಿ ಕೇಂದ್ರಗಳು ಯಾವುದಿದೆಯೋ, ಮಠಮಂದಿರಗಳು ಯಾವುದಿದೆಯೋ, ಒಳ್ಳೆ ಒಳ್ಳೆಯ ಸಂಘಸಂಸ್ಥೆಗಳು ಯಾವುದಿದೆಯೋ ಸಮಾಜಕ್ಕೆ, ಈ ರಾಜ್ಯದ ಜನರ ಹಿತಕ್ಕೆ ಕೆಲಸ ಮಾಡುತ್ತಿರುವವರು ಯಾರು ಇದ್ದಾರೋ, ಅದರ ಬಗ್ಗೆ ಹೇಳಬಹುದು ನಮ್ಮ ಸರ್ಕಾರ ಮಾಡಿರುವುದಕ್ಕಿಂತಲೂ ಒಂದು ಹೆಜ್ಜೆ ಮುಂದೆ ನಿಂತು,

ಅನೇಕ ಶತಮಾನಗಳಿಂದ ಅವರು ಸಮಾಜದ ಜನತೆಯ ಏಳ್ಗೆಗೋಸ್ಕರ ಶ್ರಮಿಸುತ್ತಿರುವಂಥಾದ್ದನ್ನು ನಾವು ಕಂಡಿದ್ದೇವೆ ನಾವು, ಸರ್ಕಾರಗಳು ನಮ್ಮ ನಮ್ಮ ಇಚ್ಚೆಗೆ ನಮ್ಮ ನಮ್ಮ ಕಾಲಮಿತಿಗೆ ಬೇಕಾದಂಥ ರೀತಿಯಲ್ಲಿ ನಡೆದುಕೊಳ್ಳುತ್ತಿರಬಹುದು ನಮ್ಮ ಕರ್ನಾಟಕ ರಾಜ್ಯ ಶಿಕ್ಷಣ ಕ್ಷೇತ್ರದಲ್ಲಿ ಇವತ್ತು ಮುಂದೆ ಇರುವುದಕ್ಕೆ, ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದ ಭಾಗ ಮುಂದೆ ಇರುವುದಕ್ಕೆ ಕಾರಣ ಇರುವುದೆಂದರೆ, ಅನೇಕ ಸಂಘಸಂಸ್ಥೆಗಳ, ಮಠಮಂದಿರಗಳ ಶ್ರಮದ ಫಲವೆಂದು ಹೇಳಬೇಕು ಅವರಿಗೆ ಹಣವನ್ನು ಕೊಡುವಂಥಾದ್ದು ತಪ್ಪು ಎಂದು ಕಾಣುವುದಾದರೆ, ಅದು ಕೇವಲ ಯಾವುದೋ ದೊಂಬರಾಟದ ಮಾತಿಗೋಸ್ಕರವಾಗಿ ಅದು ತಪ್ಪು ಎಂದು ಭಾವಿಸಿಕೊಳ್ಳುತ್ತಾರೆಯೇ ಹೊರತು, ಅದರಲ್ಲಿ ಏನು ಅರ್ಥವಿಲ್ಲವೆಂದು ಭಾವಿಸಿಕೊಂಡಿದ್ದೇನೆ ಇದರಲ್ಲಿ ಅನೇಕ ರೀತಿಯ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹಿಸುವಂತಹ ಅಂಶಗಳು ಇವೆ ಸಮಾಜದಲ್ಲಿ ಯಾರು ಒಳ್ಳೆಯ ಕೆಲಸಗಳನ್ನು ಮಾಉತ್ತಿದ್ದಾಋಉ, ಅವರನ್ನು ಗುರುತಿಸುವಂತಹ ಪ್ರಯತ್ನವಿದೆ ನಾವು ಸಮಾಜದಲ್ಲಿ ಒಂದು ಒಳ್ಳೆಯ ಸಂಸ್ಕಾರ ನಿರ್ಮಾಣವಾಗಬೇಕು, ಒಳ್ಳೆಯತನವನ್ನು ನಮ್ಮ ಸರ್ಕಾರ ಪ್ರೋತ್ಸಾಹಿಸುತ್ತಿದೆಯೆನ್ನುವಂಥಾದ್ದನ್ನು, ಒಳ್ಳೆದನ್ನು ಮಾಡುವಂಥವರಿಗೆ ಬೆಂಬಲಿಸುತ್ತದೆಂಬುದನ್ನು ನಾವು ಈ ಬಜೆಟ್ ಮೂಲಕ ತೋರಿಸಿದ್ದೇವೆ ಅದು ಈ ರೀತಿಯಾಗಿ ಅನೇಕ ಕಾರ್ಯಕ್ರಮಗಳನ್ನು ನೀಡುವುದರ ಮೂಲಕ ನಾವು ಮಾಡಿದ್ದೇವೆ ಇದರಲ್ಲಿ ಶ್ರೀಮತಿ ಗಂಗೂಬಾಯಿ ಹಾನಗಲ್‌ರವರು ಗಾಯನ ಕ್ಷೇತ್ರದಲ್ಲಿ, ಸಂಗೀತ ಕ್ಷೇತ್ರದಲ್ಲಿ ಆ ಎತ್ತರಕ್ಕೆ ಹೋಗುವುದಕ್ಕೆ ಸರ್ಕಾರ ನಾವು ಏನು ಮಾಡಿದ್ದೇವೆ? ಅವರ ಶ್ರಮ, ಅವರ ಪ್ರತಿಭೆ, ಅವರ ಕಠಿಣ ತಪಸ್ಸಿನ ಫಲವಾಗಿ ಇವರು ಆ ಎತ್ತರಕ್ಕೆ ಹೋಗಿದ್ದಾರೆ ಅದರಲ್ಲಿ ನಮ್ಮ ಸರ್ಕಾರದ್ದು ಕೊಡುಗೆ ಏನು ಇದೆ? ಆದರೆ ಅದನ್ನು ಗುರುತಿಸುವಂಥಾದ್ದು ಸರ್ಕಾರದ ದೊಡ್ಡತನ ಆ ರೀತಿಯಲ್ಲಿ ಪ್ರತಿಯೊಂದು ಅಂಶವನ್ನು ಕನ್ನಡ ಸಂಸ್ಕೃತಿ ವಿಷಯದಲ್ಲಿ ಇರಬಹುದು, ಬಜೆಟಿನ ಅನೇಕ ಸಂಗತಿಯಲ್ಲಿ ಇರಬಹುದು ಅದನ್ನು ಸರ್ಕಾರ ಮಾಡಿ ತೋರಿಸಿದೆ ಇದನ್ನು ಮಾಡಿ ತೋರಿಸಬೇಕಾದಂಥ

ಮತ್ತು ಸಮಾಜಕ್ಕೆ ಈ ಸಂದೇಶವನ್ನು ಕಳುಹಿಸಬೇಕಾದಂಥ ಅಗತ್ಯತೆ ಸರ್ಕಾರದ್ದು ಇದೆ ಈ ರೀತಿಯ ಸಂದೇಶಗಳನ್ನ ಕಳುಹಿಸಬೇಕಾಗುತ್ತದೆ ಯಾರು ಒಳ್ಳೆಯನ್ನು ಮಾಡುವವರು ಇದ್ದಾರೊ, ಅವರಿಗೆ ಸರ್ಕಾರ ಪ್ರೋತ್ಸಾಹಿಸುತ್ತದೆಂಬ ಸಂದೇಶವನ್ನು ಕಳುಹಿಸಬೇಕಾಗುತ್ತದೆ ಅದು ಯಾರೇ ಒಳ್ಳೆಯದನ್ನು ಮಾಡಲಿ, ಯಾರು ಒಳ್ಳೆಯದನ್ನು ಮಾಡುತ್ತಾರೆ, ಅವರನ್ನು ಗುರುತಿಸುತ್ತೇವೆ, ಪ್ರೋತ್ಸಾಹಿಸುತ್ತೇವೆ, ಬೆಂಬಲಿಸುತ್ತೇವೆಂಬ ಮಾತನ್ನು ಹೇಳಬೇಕಾಗಿದೆ ಈ ಸಮಾಜದಲ್ಲಿ ಉತ್ತಮವಾದಂಥ ಸಂಸ್ಕಾರ, ಉತ್ತಮವಾದಂಥ ಒಂದು ಸಾಂಸ್ಕೃತಿಕ ಸಮೃದ್ಧತೆ ಬೆಳೆಯಬೇಕು ಅದಕ್ಕೆ ಬೇಕಾದಂಥ ಅಂಶವನ್ನು ಈ ಬಜೆಟ್‌ನಲ್ಲಿ ಹೇಳಿರುವುದನ್ನು ನಾವು ಕಾಣಬಹುದು ನಾನು ಈ ಸಂಗತಿಗಳನ್ನು ಹೇಳುತ್ತಾ, ಈ ಬಜೆಟ್‌ನಲ್ಲಿ ಇನ್ನು ಎಷ್ಟು ಒಳ್ಳೆಯ ಸಂಗತಿಗಳು ಇವೆ ನಾನು ಸಮಯದ ಮಿತಿಯನ್ನು ತೋರಿಸುತ್ತಿದ್ದೀರಿ ಇನ್ನು ಎಷ್ಟು ಒಳ್ಳೆಯ ಸಂಗತಿಗಳು ಇದರೊಳಗೆ ಇದೆಯಂಬುದನ್ನು, ನಾನು ಎಷ್ಟು ಅಂಶಗಳನ್ನು ಬೇಕಾದರೂ ಉಲ್ಲೇಖಿಸಿ ಮಾತನಾಡಬಹುದು ಆದರೆ ಮುಖ್ಯವಾಗಿ ಈ ಬಜೆಟ್ ಒಂದು ಸಾಮಾಜಿಕ ಪರಿವರ್ತನೆಗೆ ನಾಂದಿಯಾಗುತ್ತದೆಂಬ ವಿಶ್ವಾಸವನ್ನು ವ್ಯಕ್ತಪಡಿಸುತ್ತಾ, ಸಾಂಸ್ಕೃತಿಕವಾದಂಥ, ಸಾಹಿತ್ಯಕವಾದಂಥ, ಒಂದು ಸಂಸ್ಕಾರಯುತವಾಗಿರುವಂಥ, ಒಂದು ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದಕ್ಕೆ ಬೇಕಾಗಿರುವಂಥ ಒಂದು ಸಂದೇಶ ಕೂಡ ಈ ಬಜೆಟ್ ಮೂಲಕ ಕಳುಹಿಸುವುದಕ್ಕೆ ಸಾಧ್ಯವಾಗಿದೆಯೆನ್ನುವಂಥ ಮಾತನ್ನು ಹೇಳುತ್ತೇನೆ ಇವತ್ತು ಯಕ್ಷಗಾನ ಅಕಾಡೆಮಿಯನ್ನು ಪ್ರಾರಂಭ ಮಾಡಿದ್ದಾರೆ ನಾನು ಮಾನ್ಯ ಹಣಕಾಸು ಸಚಿವರನ್ನು ಮತ್ತು ಮಾನ್ಯ ಮುಖ್ಯಮಂತ್ರಿಯವರನ್ನು, ಅಭಿನಂದಿಸುತ್ತೇನೆ, ಏಕೆಂದರೆ ಈ ರಾಜ್ಯದಲ್ಲಿ ವಿಶೇಷವಾಗಿ ಮಲೆನಾಡಿನ ಕರಾವಳಿ ಭಾಗದಲ್ಲಿ ಇರುವಂಥ ಒಂದು ಸಂವೃದ್ಧವಾದಂಥ ಒಂದು ಕಲೆ ಎಂದರೆ ಅದು ಯಕ್ಷಗಾನವಾಗಿದೆ ಯಕ್ಷಗಾನ ಕೇವಲ ಮನರಂಜನೆ ಮಾತ್ರವಲ್ಲ, ಅದು ಸಂಸ್ಕಾರ ಕೊಡುವಂಥ ಕಲೆಯಾಗಿದೆ ಜಾನಪದ ಅಕಾಡೆಮಿಯ ಜೊತೆಯಲ್ಲಿ ಯಕ್ಷಗಾನ ಅಕಾಡೆಮಿ ಸೇರಿಕೊಂಡಿತ್ತು ಅದಕ್ಕೆ ಪ್ರತ್ಯೇಕವಾದ ಒಂದು ಭಾಗವಿರಲಿಲ್ಲ

ಇವತ್ತು ಯಕ್ಷಗಾನ ಅಕಾಡೆಮಿಯನ್ನು ಮಾಡುವುದರ ಮೂಲಕ, ಯಕ್ಷಗಾನ ಕಲೆಯನ್ನು ಅಭಿವೃದ್ಧಿಪಡಿಸುವ ಪ್ರಯತ್ನವಾಗಿದೆ ನಾನು ಅದಕ್ಕೋಸ್ಕರ ಆ ಭಾಗದ ಪ್ರತಿನಿಧಿಗಳ ಪರವಾಗಿ, ಆ ಭಾಗದ ಕಲಾಭಿಮಾನಿಗಳು, ಅನೇಕ ವರ್ಷಗಳಿಂದ ಈ ಬೇಡಿಕೆಯನ್ನು ಮುಂದಿಟ್ಟಿದ್ದರು ಅದನ್ನು ಈಡೇರಿಸುವುದಕ್ಕೆ, ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ ಇದಕ್ಕೆ ೨೦ ಲಕ್ಷ ರೂಪಾಯಿಗಳನ್ನು ಇಡಲಾಗಿದೆಯೆಂದು ಹೇಳಿದ್ದಾರೆ ನಿಜ, ಯಕ್ಷಗಾನ ಅಕಾಡೆಮಿಗೆ ಇನ್ನು ಹೆಚ್ಚಿನ ಹಣಕಾಸಿನ ನೆರವು ಬೇಕಾಗಿರುವಂತಹ ಅಗತ್ಯತೆ ಇದೆ ಆದರೆ ಈ ವರ್ಷ ೨೦ ಲಕ್ಷ ರೂಪಾಯಿಗಳಲ್ಲಿ ಈ ಅಕಾಡೆಮೆ ಪ್ರಾರಂಭವಾಯಿತ್ತಲ್ಲಾ, ಎಂಬ ಸಂತೋಷವಿದೆ ಮುಂದಿನ ದಿನಗಳಲ್ಲಿ ಹಣಕಾಸಿನ ನೆರವನ್ನು ಹೆಚ್ಚು ಕೊಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಉಲ್ಲೇಖ ಮಾಡುತ್ತಾ ನಮ್ಮ ಈ ಸರ್ಕಾರಲ್ಲಿ, ನಮ್ಮ ಸರ್ಕಾರದ ಯೊಜನೆಗಳಲ್ಲಿ, ಕೃಷಿಗೆ ಮತ್ತು ತೋಟಗಾರಿಕೆ ಸಹ ಅನೇಕ ರೀತಿಯಾದಂಥ ಅನಕೂಲಗಳನ್ನು ಮಾಡಿದ್ದಾರೆ ಕೃಷಿ ಮತ್ತು ತೋಟಗಾರಿಕೆಗಳು ನಮ್ಮ ರೈತರ ಬೆನ್ನೆಲುಬು ಆಗಿರುವುದರಿಂದ, ಅನೇಕ ರೀತಿಯ ಸಹಾಯ, ಸಹಕಾರ ಸಿಗುವಂಥ ಯೋಜನೆಗಳು ಇವೆ ನಾನು ಒಂದೊಂದೇ ಯೋಜನೆಗಳನ್ನು ವಿಸ್ತರಿಸಿ ಹೇಳುವುದಕ್ಕೆ ಹೋದರೆ, ಸಮಯವಾಗುತ್ತದೆಂಬ ಕಾರಣಕ್ಕಾಗಿ, ಇವತ್ತು ವಿಶೇಷವಾಗಿ ತೋಟಗಾರಿಕೆಯಲ್ಲಿ ಅಡಿಕೆ ಬೆಳೆಯ ಕೊಳೆ ರೋಗಕ್ಕೆ ಸಂಬಂಧಪಟ್ಟ, ಇವತ್ತು ಅಡಿಕೆ ಮತ್ತು ದಾಳಿಂಬೆ ಬೆಳೆಗೆ ೩ ಕೋಟಿ ರೂಪಾಯಿಗಳನ್ನು ಬ್ಯಾಕ್ಟೀರಿಯಾ ಕಾಟ ನಿವಾರಣೆಗೋಸ್ಕರವಾಗಿ ಇಟ್ಟಿದ್ದಾಋಐ ಅಷ್ಟೆ ಅಲ್ಲದೇ ಶೃಂಗೇರಿಯಲ್ಲಿ ಅಡಿಕೆ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವುದರ ಮೂಲಕ, ಆ ಭಾಗದ ರೈತರು, ಜನರು, ಏನು ಕಷ್ಟ ಪಡುತ್ತಿದ್ದಾರೊ, ಅವರಿಗೆ ಅನುಕೂಲವಾಗುವಂಥ ಪ್ರಯತ್ನವನ್ನು ಮಾಡಿದ್ದಾರೆ ಅದಕ್ಕೆ ಹಳದಿ ಎಲೆ ರೋಗ, ಕೊಳೆ ರೋಗವನ್ನು ತಡೆಯುವುದಕ್ಕೆ ಬೇಕಾಗಿರುವಂತಹ ಪ್ರಯತ್ನವನ್ನು ಶೃಂಗೇರಿಯಲ್ಲಿ ಸಂಶೋಧನಾ ಕೇಂದ್ರವನ್ನು ಮಾಡುವುದರ ಮೂಲಕ ಮಾಡಿದ್ದಾರೆ ಬಾಗಲಕೋಟೆಯಲ್ಲಿ ಕರ್ನಾಟಕ ತೋಟಗಾರಿಕಾ ವಿಶ್ವವಿದ್ಯಾನಿಲಯವನ್ನು

ಮಾಡುವುದರ ಮೂಲಕ, ಬಾಗಲಕೋಟೆ, ವಿಜಾಪುರ, ಬೆಳಗಾಂ, ಈ ಭಾಗಗಳಲ್ಲಿ ತೋಟಗಾರಿಕೆಗೆ ಅತ್ಯಂತ ಸಮೃದ್ಧವಾದ ಭಾಗವಾಗಿದೆ ಅದಕ್ಕೆ ೧೦ ಕೋಟಿ ರೂಪಾಯಿಗಳನ್ನು ಇಡುವುದರ ಮೂಲಕ ಮತ್ತು ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುವುದರ ಮೂಲಕ ಒಂದು ಒಳ್ಳೆಯ ಸಂದೇಶವನ್ನು ಕಳುಹಿಸಿದ್ದಾರೆ ಬೀದರ್ ಜಿಲ್ಲೆಯಲ್ಲಿ ತೋಟಗಾರಿಕಾ ಕಾಲೇಜನ್ನು ಸ್ಥಾಪಿಸುವುದರ ಮೂಲಕ, ಆ ಭಾಗದ ಬೆಳೆಗಳಿಗೂ ಸಹ ಉತ್ತಮವಾದಂಥ ಪ್ರೋತ್ಸಾಹ ಸಿಗುವುದಕ್ಕೆ, ಮತ್ತು ಆ ಭಾಗದ ಯುವಕರು, ವಿದ್ಯಾರ್ಥಿಗಳು, ಈ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದಕ್ಕೆ ಬೇಕಾಗಿರುವಂಥಾದ್ದು ಈ ಪ್ರಯತ್ನವಾಗಿದೆ ಇಲ್ಲಿ ಕೇವಲ ರೈತರಿಗಷ್ಟೆ ಅಲ್ಲ, ಯುವಕರು ತಮ್ಮನ್ನು ಈ ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳುವಂಥಾದ್ದಕ್ಕೆ ಬೇಕಾಗಿರುವ ಅವಕಾಶಗಳು, ಈ ವಿಶ್ವವಿದ್ಯಾನಿಲಯಗಳಿಂದ, ಈ ಕಾಲೇಜುಗಳಿಂದ ಆಗುತ್ತಿರುವುದನ್ನು ಕಾಣಬಹುದು ಈ ರೀತಿಯ ಒಳ್ಳೆಯ ಕೆಲಸಗಳು ಗುಲ್ಬರ್ಗಾದಲ್ಲಿ ವಿಜ್ಞಾನ ಕಾಲೇಜನ್ನು ಸ್ಥಾಪಿಸುವುದಕ್ಕೆ ೬ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ ಈ ರೀತಿ ನಿಜವಾಗಿ ಯರು ಸ್ವಂತ ಕಾಲ ಮೇಲೆ ಮೇಲೆ ಸ್ವಾಭಿಮಾನದಿಂದ, ಗೌರವದಿಂದ, ಜೀವನವನ್ನು ನಡೆಸಬೇಕೆಂದು ಯುವ ಸಮೂಹ ಬಯಸುತ್ತದೊ, ಅಂಥವರಿಗೆ ಬೇಕಾದಂಥ ಶಿಕ್ಷಣ ಮತ್ತು ತರಬೇತಿಯನ್ನು ಕೊಡುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿರುವಂಥಾದ್ದನ್ನು ಕಾಣುತ್ತೇವೆ ಯುವಕರು ನಿರಾಶರಾಗಬಾರದು, ಯುವಕರು ಸ್ವಾಭಿಮಾನಿಗಳಾಗುವಂಥ ಒಂದು ಸ್ಥಿತಿ ನಿರ್ಮಾಣವಾಗಬೇಕೆಂದರೆ, ಈ ರೀತಿ ಮೂಲಭೂತ ಸೌಕರ್ಯಗಳ ಅಗತ್ಯತೆ ಇದೆ ಅದನ್ನು ನಿರ್ಮಿಸುವುದಕ್ಕೆ ಬೇಕಾದಂಥ ಪ್ರಯತ್ನಗಳು, ಇವತ್ತು ಆಗಿರುವುದನ್ನು ನಾವು ಕಾಣುತ್ತಿದ್ದೇವೆ ನಾನು ಕನ್ನಡ ಸಂಸ್ಕೃತಿ ಇಲಾಖೆಯಲ್ಲಿ ಅವರು ಯೋಜನೆಯ ಅಡಿಯಲ್ಲಿ ಸುಮಾರು ೩೯ ವಿವಿಧ ರೀತಿಯ ಘೋಷಣೆಗಳನ್ನು ಮಾಡಿದ್ದಾರೆ ಇವುಗಳಲ್ಲಿ ಎರಡು , ಮೂರನ್ನು ಹೊರತುಪಡಿಸಿದರೆ, ಅದು ಆ ಇಲಾಖೆಗೆ ಉಳಿದು, ಉಳಿದ ಎಲ್ಲವೂ ಆ ಎಲ್ಲವೂ ನೇರವಾಗಿ ಬರುತ್ತದೆ ಕನ್ನಡ ಸಂಸ್ಕೃತಿ ಇಲಾಖೆ ಇವತ್ತು ಶಕ್ತಿಶಾಲಿಯಾಗುವುದಕ್ಕೆ ಬೇಕಾಗಿರುವಂತಹ

ಪ್ರಯತ್ನ ಆಗಿರುವುದನ್ನು ಕಾಣುತ್ತೇವೆ ಮೊದಲನೆಯದಗಿ ಅಭಿವೃದ್ದಿಗಳು ಆಗಬೇಕು, ಅಭಿವೃದ್ಧಿಗಳಿಗೆ ಎಂದೂ ಕೊನೆ ಇಲ್ಲ ಇದು ನಿರಂತರವಾಗಿ ನಡೆಯುತ್ತಿರುತ್ತದೆ ಆದರೆ ಅಭಿವೃದ್ದಧಿಯ ಜೊತೆಯಲ್ಲಿ ನಮ್ಮ ಸಾಂಸ್ಕೃತಿಕ ವಿಶೇಷತೆಗಳು ಏನು ಇವೆಯಲ್ಲಾ, ನಮ್ಮ ನಾಡಿನ ವಿಶೇಷತೆಗಳು ಏನು ಇವೆಯಲ್ಲಾ, ಸುವರ್ಣ ಕರ್ನಾಟಕದ ಈ ಸಂದರ್ಭದಲ್ಲಿ, ಅದಕ್ಕೆ ನಾವು ಮಹತ್ವವನ್ನು ಕೊಟ್ಟಿರುವಂಥಾದ್ದು, ನಮ್ಮ ಸರ್ಕಾರದ ಒಮದು ವಿಶೇಷವಾದ ಸಾಧನೆಯಾಗಿದೆ

ಏಕೆಂದರೆ ಆ ಸಾಂಸ್ಕೃತಿಕ ವಿಶೇಷತೆಗಳನ್ನು ನಾವು ರಕ್ಷಿಸಿಕೊಳ್ಳಬೇಕಾಗುತ್ತದೆ, ಬೆಳೆಸಿಕೊಳ್ಳಬೇಕಾಗುತ್ತದೆ, ಪೋಷಿಸಿಕೊಳ್ಳಬೇಕಗುತ್ತದೆ ಅದಕ್ಕೆ ಈ ಬಜೆಟ್ ನಲ್ಲಿ ಅತ್ಯತ್ತಮವಾಧ ಕಾರ್ಯಕ್ರಮವನ್ನು ರೂಪಿಸಿದ್ದಾರೆ ಅದರ ಅಗತ್ಯವೂ ಇದೆ ಆ ರೀತಿಯಲ್ಲಿ ಪ್ರಯತ್ನವಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ

ಇನ್ನು, ಸಾಲ ಮನ್ನಾ ಯೋಜನೆಯಂತೂ ಜನರಲ್ಲಿ ಎಷ್ಟು ದೊಡ್ಡ ಒಂದು ವಿಶ್ವಾಸವನ್ನು ಮೂಡಿಸಿದೆ ಎನ್ನುವುದು ನಮಗೆ ಗೊತ್ತಿದೆ ನಿಜ ಎಲ್ಲರಿಗೂ ಸಾಲ ಮನ್ನಾ ಆಗಬೇಕು ಎನ್ನುವ ಭಾವನೆಗಳು ನಮ್ಮೆಲ್ಲರಲ್ಲಿ ಇರುವುದು ಮತ್ತು ಆ ಬಗ್ಗೆ ಚರ್ಚೆಯಾಗಿರುವುದು ನಮ್ಮೆಲ್ಲರಿಗೂ ಗೊತ್ತಿದೆ ೨೫ ಸಾವಿರ ರೂಪಾಯಿಗಳ ಸಾಲ ಮನ್ನಾವನ್ನು ಎಲ್ಲರಿಗೂ ಸಾಲ ಮನ್ನಾ ಯೋಜನೆಯಡಿಯಲ್ಲಿ ತರಬೇಕು ಎನ್ನುವ ಭಾವನೆಗಳಿವೆ ಸರ್ಕಾರದ ಆರ್ಥಿಕ ಇತಿಮಿತಿಯಲ್ಲಿ ಈ ಕುರಿತಂತೆ ನಿಶ್ಚಿತವಾಗಿ ತಮ್ಮ ಉತ್ತರವನ್ನು ಹೇಳುವಾಗ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಸಚಿವರೂ ಆದಂಥ ಮಾನ್ಯ ಉಪಮುಖ್ಯಮಂತ್ರಿಗಳು ನಮ್ಮೆಲ್ಲರ ಭಾವನೆಗಳಿಗೆ ಸ್ಪಂದಿಸಿ ಆ ಕುರಿತಂತೆ ಮಾತನಾಡುತ್ತಾರೆ ಎನ್ನುವ ವಿಶ್ವಾಸವನ್ನು ಈ ಸಂದರ್ಭದಲ್ಲಿ ನಾನು ವ್ಯಕ್ತಪಡಿಸುತ್ತೇನೆ

ಇನ್ನು ಶಿಕ್ಷಣ ಕ್ಷೇತ್ರ ಇವತ್ತು ಮಹತ್ತರವಾದಂಥ ಸಾಧನೆಯನ್ನು ಮಾಡುತ್ತಿದೆ ಅದು ಪ್ರಾಥಮಿಕ ಶಿಕ್ಷಣವಿರಬಹುದು, ಪ್ರೌಢ ಶಿಕ್ಷಣವಿರಬಹುದು ಅಧವಾ ಉನ್ನತ ಶಿಕ್ಷಣವಿರಬಹುದು ಹಿಂದೆ ಯಾವ

ಸರ್ಕಾರಗಳೂ ಕೊಡದೇ ಇರುವಷ್ಟು ಹೈಸ್ಕೂಲುಗಳನ್ನು ಮತ್ತು ಜೂನಿಯರ್ ಕಾಲೇಜುಗಳನ್ನು ಒಂದೇ ವರ್ಷದಲ್ಲಿ ನಮ್ಮ ಸರ್ಕಾರ ಕೊಟ್ಟು ಸಾಧನೆ ಮಾಡಿದೆ ಇದು ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ದೇಶದ ಇತಿಹಾಸವನ್ನು ತೆಗೆದರೂ ಸಹ, ಒಂದೇ ವರ್ಷದಲ್ಲಿ ಇಷ್ಟು ಹೊಸ ಹೈಸ್ಕೂಲುಗಳನ್ನು ಮತ್ತು ಜೂನಿಯರ್ ಕಾಲೇಜುಗಳನ್ನು ಕೊಟ್ಟಿರಲಿಕ್ಕಿಲ್ಲ ಸುಮಾರು ೬೮ ತಾಲ್ಲೂಕುಗಳಲ್ಲಿ ಡಿಗ್ರಿ ಕಾಲೇಜುಗಳಿಲ್ಲ ೩೦-೩೫ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗವನ್ನು ಆರಂಭಿಸುತ್ತೇವೆ ಎಂದು ಹೇಳಿದ್ದಾರೆ ಆದರೆ ಸುಮಾರು ೯೫ ಡಿಗ್ರಿ ಕಾಲೇಜುಗಳ ಅವಶ್ಯಕತೆ ಇರುವುದು ಸರ್ಕಾರಕ್ಕೆ ಗೊತ್ತಿದೆ ಶಿಕ್ಷಣ ಕ್ಷೇತ್ರದ ಮಹತ್ವ ಇವತ್ತು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಸಂವಿಧಾನಬದ್ಧವಾಗಿ ನಾವು ಕೊಡುತ್ತಾ ಇರುವಂಥ ಶಿಕ್ಷಣ ಇವತ್ತು ಪ್ರತಿಯೊಬ್ಬ ಜನತೆಗೂ ತಲುಪುತ್ತಿರುವುದರಿಂದಾಗಿ ನಾವು ಅದಕ್ಕೆ ಬೇಕಾದಂಥ ಸೌಲಭ್ಯಗಳನ್ನು ಹೆಚ್ಚು ಮಾಡಬೇಕಾದಂಥ ಅವಶ್ಯಕತೆಯಿದೆ ಹಾಗಾಗಿ ಕನಿಷ್ಟ ೫೦-೬೦ ಡಿಗ್ರಿ ಕಾಲೇಜುಗಳಾದರೂ ಈ ವರ್ಷದಲ್ಲಿ ಸಿಗುವಂತಾಗಬೇಕು ಎನ್ನುವುದು ಶಿಕ್ಷಣ ಕ್ಷೇತ್ರದಲ್ಲಿರುವಂಥ ಎಲ್ಲರ ಅಪೇಕ್ಷೆಯಾಗಿದೆ ಅದಕ್ಕೂ ಸಹ ಸರ್ಕಾರ ನಿಶ್ಚಿತವಾಗಿ ಸ್ಪಂದಿಸುತ್ತದೆ ಎನ್ನುವಂಥ ವಿಶ್ವಾಸವನ್ನು ಈ ಸಂದರ್ಭದಲ್ಲಿ ನಾನು ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ

ಕೃಷಿ ಕ್ಷೇತ್ರದಲ್ಲಿ, ಸಾಲ ಮನ್ನಾ ವಿಷಯವನ್ನು ಮಾತನಾಡುತ್ತಿರುವ ಈ ಸಂದರ್ಭದಲ್ಲಿ ನಾನು ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ ಇದು PLD ಬ್ಯಾಂಕುಗಳ ದೀರ್ಘಾವಧಿ ಸಾಲಗಳಿಗೂ ಅನ್ವಯಿಸುತ್ತದೆ ಎನ್ನುವಂಥಾದ್ದು ತಮ್ಮ ಸ್ಪಷ್ಟವಾದಂಥ ಹೇಳಿಕೆಯಲ್ಲಿದೆ ಆದರೆ, ಈ ಬಗ್ಗೆ ಸರ್ಕಾರದ ಸುತ್ತೋಲೆ ಹೋಗುವಂಥ ಸಂದರ್ಭದಲ್ಲಿ ಈ ಬಗ್ಗೆ ಇನ್ನಷ್ಟು ಹೆಚ್ಚು ಸ್ಪಷ್ಟತೆಯನ್ನು ಕೊಡಬೇಕಾದಂಥ ಅಗತ್ಯತೆ ಇದೆ ಇಲ್ಲದಿದ್ದರೆ, ಸಹಕಾರಿ ಕ್ಷೇತ್ರದಲ್ಲಿರುವಂಥ ರಾಜಕೀಯ ಇಚ್ಛಾಶಕ್ತಿಯನ್ನು ಹೊಂದಿರುವಂಥ ಅನೇಕರು, ಸರ್ಕಾರದ ಈ ಯೋಜನೆಗಳನ್ನು ಬೇರೆ ರೀತಿಯಲ್ಲಿ interpretation ಮಾಡಿ ಈ ಯೋಜನೆಯ ಲಾಬ ಜನತೆಗೆ ಹೋಗದೇ ಇರುವಂಥ ಪ್ರಯತ್ನಗಳನ್ನು ನಡೆಸುತ್ತಿರುವುದನ್ನು ನಾವು

ಕಾಣುತ್ತಿದ್ದೇವೆ ಸಹಕಾರಿ ಕ್ಷೇತ್ರದಲ್ಲಿ ಎಂಥೆಂಥವರಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ ನಾನು ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ ಒಳ್ಳೆಯ ಕೆಲಸ ಮಾಡುತ್ತಿರುವಂಥ ಸಹಕಾರಿ ಕ್ಷೇತ್ರದಲ್ಲಿ ಇವತ್ತು ಅನೇಕರು ತಮ್ಮನ್ನು ತಾವೇ ಸಹಕಾರಿಗಳು ಎಂದು ಹೇಳಿಕೊಂಡು ಹೇಗೆ ಆ ಕ್ಷೇತ್ರವನ್ನು ಅವನತಿಗೆ ತೆಗೆದು ಕೊಂಡು ಹೋಗುತ್ತಿರುವಂಥ ಪ್ರಯತ್ನಗಳು ಮಾಡುತ್ತಿದ್ದಾರೆ ಎನ್ನುವುದೂ ಗೊತ್ತಿದೆ ಆದರೆ, ನಮ್ಮ ಸರ್ಕಾರದ ಯೋಜನೆಯ ಫಲ ರೈತರಿಗೆ ತಲುಪಬೇಕು ಯೋಜನೆಯ ದುರುಪಯೋಗದ ಮಾತುಗಳನ್ನು ಅಥವಾ ಈ ಯೋಜನೆಯ ಲಾಭ ಸಿಗದೇ ಇರುವಂಥ ಮಾತುಗಳನ್ನು ಆ ಸ್ಥಳಗಳಲ್ಲಿ ಇರುವಂಥವರು ಹೇಳುವಂಥಾದ್ದು ಆಗಬಾರದು ಹಾಗಾಗಿ ನಾವು ಏನು ಮಾತುಗಳನ್ನು ಹೇಳಿದ್ದೇವೆ, ಅದು PLD ಬ್ಯಾಂಕುಗಳ ದೀರ್ಘಾವಧಿ, ಸಾಲಗಳಿಗೂ ಅನ್ವಯಿಸುತ್ತದೆ ಎನ್ನುವುದು ಸುತ್ತೋಲೆಯ ಮೂಲಕ ತಲುಪುವಂಥ ಪ್ರಯತ್ನ ಆಗಬೇಕು ಅದಕ್ಕೆ ಸ್ಪಷ್ಟಿಸುವಾದಂಥ ನಿರ್ದೇಶನಳು ಸರ್ಕಾರದ ಇಲಾಖೆಯಿಂದ ಹೋಗುವಂತೆ ಆಗಬೇಕು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ

ಇನ್ನು ಪ್ರವಾಸೋದ್ಯಮದ ಬಗ್ಗೆ ಹೇಳುವುದಾದರೆ, ಪ್ರವಾಸೋದ್ಯಮಕ್ಕೆ ನಾವು ಈ ವರ್ಷ ೧೪೮ ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು ಗೊತ್ತಿದೆ, ಇದರಲ್ಲಿ ಸಮಾಧಾನಕರವಾದ ಮತ್ತು ಸಂತೋಷದ ಸಂಗತಿ ಎಂದರೆ, ಖಾಸಗಿಯವರ ಸಹಭಾಗಿತ್ವ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೆಚ್ಚಾಗುವುದಕ್ಕೆ ಬೇಕಾಗುವಂಥ ಅವಕಾಶಗಳು ಸಿಗುತ್ತಿವೆ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಸರ್ಕಾರ ಅಗತ್ಯವಿರುವ ಮೂಲಭೂತ ಸೌಕರ್ಯಗಳ್ನು ಕೊಡಬೇಕು ಆದರೆ ಖಾಸಗಿ ಕ್ಷೇತ್ರಗಳಲ್ಲಿರುವಂಥವರು, ಈ ಒಂದು ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವುದಕ್ಕೆ ಬೇಕಾಗಿರುವಂಥ ಒಂದು ಪ್ರಯತ್ನ ನಮ್ಮ ಈ ಬಜೆಟ್ ನ್ಲಲಿರುವುದನ್ನು ನಾನು ಸವಾಗತಿಸುತ್ತೇನೆ ಅದೇ ರೀತಿ, ಇನ್ನೂ ಅನೇಕ ಸಂಗತಿಗಳನ್ನು ಇಲ್ಲಿ ಉಲ್ಲೇಖಿಸಬಹುದಾದರೂ ತಾವು ಸಮಯವಾಯಿತು ಎಂದು ಹೇಳುತ್ತಿರುವುದರಿಂದ ನಾನು ಕೇವಲ

ಒಂದೆರಡು ಮಾತುಗಳನ್ನು ನಮ್ಮ ಜಿಲ್ಲೆಯ ಹಿತದೃಷ್ಟಿಯಿಂದ ಕೇವಲ ಒಂದೆರಡು ನಿಮಿಷಗಳಲ್ಲಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ ನಮ್ಮ ಜಿಲ್ಲೆಯ ಬಗ್ಗೆ ಈಗಾಗಲೇ ಕೆಲವು ಉಲ್ಲೇಖಗಳು ಆಗಿದೆ ನಾನು ಆ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸಿ, ನಮ್ಮ ಜಿಲ್ಲೆಗೆ ಪ್ರವಾಸೋದ್ಯಮ ದೃಷಿಯಿಂದ ಹೆಚ್ಚಿನ ಪ್ರತ್ಸಾಹ ಸಿಗಬೇಕಾಗಿದೆ ನಮ್ಮ ಜಿಲ್ಲೆ ಬಹಳ ಸಮೃದ್ಧವಾದಂಥ ಪ್ರವಾಸೋದ್ಯಮ ಕ್ಷೇತ್ರಗಳನ್ನು ಹೊಂದಿದೆ ಅದರ ಜೊತೆಗೆ, ತೋಟಗಾರಿಕಾ ಕ್ಷೇತ್ರದಲ್ಲಿ ಅನೇಕ ರೀತಿಯ ವೈವಿಧ್ಯಮಯವಾದಂಥ ಬೆಳೆಗಳನ್ನು ಹೊಂದಿರುವಂಥ ಜಿಲ್ಲೆ ನಮ್ಮ ಉತ್ತರ ಕನ್ನಡ ಜಿಲ್ಲೆ ಕೆಲವು ಜಿಲ್ಲೆಗಳಲ್ಲಿ ಕೆಲವು ತೋಟಗಾರಿಕಾ ಬೆಳೆಗಳಷ್ಟೇ ಇವೆ ಆದರೆ, ಎಲ್ಲ ರೀತಿಯ ತೋಟಗಾಋಇಕಾ ಮತ್ತು ಸಂಬಾರು ಬೆಳೆಗಳಿರುವಂಥ ಜಿಲ್ಲೆ ಎಂದರೆ ಅದು ಉತ್ತರ ಕನ್ನಡ ಜಿಲ್ಲೆ ವೆನಿಲ್ಲಾದಿಂದ ಹಿಡಿದು, ಲವಂಗದಿಂದ ಹಿಡಿದು, ದಾಲ್ಚಿನ್ನಿಯಿಂದ ಹಿಡಿದು, ಜಾಯಿಕಾಯಿಂದ ಹಿಡಿದು ಎಲ್ಲ ರೀತಿಯ ಸಾಂಬಾರು ಪದಾರ್ಥಗಳನ್ನು ನಾವು ಬೆಳೆಯುತ್ತೇವೆ ಅದರ ಜೊತೆಯಲ್ಲಿ ಅನೇಕ ತೋಟಗಾರಿಕಾ ಬೆಳೆಗಳನ್ನೂ ಬೆಳೆಯುತ್ತೇವೆ ಹಾಗಾಗಿ, ಅದನ್ನು ಪ್ರೋತ್ಸಾಹಿಸಬೇಕೆಂದು ಹೇಳುತ್ತೇನೆ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಮೀನುಗಾರಿಕೆ ಬಹಳ ದೊಡ್ಡ ಒಂದು ಕೊಡುಗೆಯನ್ನು ನೀಡುತ್ತಿದೆ ನಾವು 'ಮತ್ಸ್ಯ ಆಶ್ರಯ ಮನೆ' ಇತ್ಯಾದಿಗಳನ್ನು ಕೊಡುತ್ತೇವೆ ಆದರೆ, ಮೀನುಗಾರಕೆಯ ರಸ್ತೆಗಳನ್ನು ಅಭಿವೃದ್ದಿ ಪಡಿಸುವುದಕ್ಕೆ ಬಂದರುಗಳ ಹೂಳು ಎತ್ತುವುದಕ್ಕೆ, ಜಟ್ಟಿಗಳನ್ನು ಸಮೃದ್ಧವಾಗಿ ನಿರ್ಮಾಣ ಮಾಡುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು

ಶ್ರೀ ಜೆ ಸಿ ಮಾಧುಸ್ವಾಮಿ ಎಲ್ಲಾದರೂ ಒಂದು ಕಡೆ ನೀವು specific ಬಜೆಟ್ ಮೇಲೆ ಮಾತನಾಡಿದ್ದೀರಾ? ವಿಶ್ವೇಶ್ವರ ಹೆಗಡೆಯವರು ಹೀಗೆ ಬರೀ ಜನರಲ್ಲಾಗಿ ಹೇಳಿಕೊಂಡು ಹೋದರೆ, ನಾವು Assembly ಯಲ್ಲಿ ಏಕೆ ಕುಳಿತುಕೊಳ್ಳಬೇಕು Be specific, Vishveshwar ತೋಟಗಾರಿಕೆ ಹೆಚ್ಚಿಸಿ, ಸಾಂಭಾರ್ ಬೆಳೆಗಳಿಗೆ ಹೆಚ್ಚಿಸಿ ಎಂದರೆ ಈಗ ಕಡಿಮೆ ಮಾಡಿದ್ದಾರೆ ಎಂದು ಅರ್ಥವೇ?

ಶ್ರೀ ಕೆ ವಿಶ್ವೇಶ್ವರ ಹೆಗಡೆ ನಿಮಗೆ ಬೇಕಾಗಿರುವಂಥ ಎಲ್ಲ ಅಂಕಿ ಸಂಖ್ಯೆಗಳನ್ನು, ವಿವರಗಳನ್ನು ನಾನು ಕೊಡಬಲ್ಲೆ ಆದರೆ ಸಮಯದ ಮಿತಿ ಇರುವುದರಿಂದಾಗಿ, ನಾನು ಎಲ್ಲ ವಿವರಗಳಿಗೆ ಹೋಗುತ್ತಿಲ್ಲ ಇದನ್ನು ನಾನು ಮೊದಲೇ ಹೇಳಿದೆ ಈ Action Taken Reportನಲ್ಲಿ ನಮ್ಮ ಸರ್ಕಾರದ ಹಿಂದಿನ ವರ್ಷದ ಸಾಧನೆಗಳಿವೆ

ಶ್ರೀ ಜೆ ಸಿ ಮಾಧುಸ್ವಾಮಿ Specific ಆಗಿ ಹೇಳಿ

ಶ್ರೀ ಕೆ ವಿಶ್ವೇಶ್ವರ ಹೆಗಡೆ Specific ಆಗಿ ಹೇಳುವುದಕ್ಕೆ ಸಮಯದ ಮಿತಿ ಇದೆಯಲ್ಲ ನಮ್ಮ ಜಿಲ್ಲೆಯ ಕುರಿತಂತೆ, ಈ ಬಾರಿಯ ಬಜೆಟ್‌ನಲ್ಲಿ ಸಾಕಷ್ಟು ಯೋಜನೆಗಳು ಬಂದಿದ್ದರೂ ಸಹ ಇನ್ನೂ ಹೆಚ್ಚಿನ ಗಮನ ನಮ್ಮ ಜಿಲ್ಲೆಗೆ ಬೇಕಾಗಿದೆ ಸಮುದ್ರ ಕೊರೆತವನ್ನು ತಡೆಗಟ್ಟುವುದಕ್ಕೆ ಬೇಕಾಗಿರುವ ಪ್ರಯತ್ನ ಆಗಬೇಕಾಗಿದೆ ನಮ್ಮ ಜಿಲ್ಲೆಯಲ್ಲಿ ನದಿಗಳು ಜಾಸ್ತಿ ಇರುವುದರಿಂದ, foot bridge ಗಳ ಅಗತ್ಯತೆ ಇರುವುದರಿಂದ, ಅದಕ್ಕೆ ಹೆಚ್ಚಿನ ಹಣಕಾಸಿನ ನೆರವು ಬೇಕಾಗಿದೆ ಎನ್ನುವಂಥ ಮಾತನ್ನು ಹೇಳುತ್ತೇನೆ ಶಿಕ್ಷಣ ಕ್ಷೇತ್ರದ ಅನೇಕ ಸೌಲಭ್ಯಗಳು ನಮ್ಮ ಜಿಲ್ಲೆಗೆ ಬೇಕಾಗಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ ಸೀಬರ್ಡ್‌ನಿಂದ ನಿರ್ಮಾಣವಾಗುತ್ತಿರುವಂಥ ವಿಮಾನ ನಿಲ್ದಾಣವನ್ನು ನಾಗರೀಕ ವಿಮಾನ ನಿಲ್ದಾಣಕ್ಕಾಗಿ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದ್ದು, ಅದಕ್ಕಾಗಿ ಹೆಚ್ಚಿನ ಭೂಮಿಯನ್ನು ಖರೀದಿ ಮಾಡಲಿಕ್ಕೆ ಸರ್ಕಾರ ಈಗಾಗಲೇ ಘೋಷಣೆಯನ್ನು ಮಾಡಿದೆ ಅದಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ನಮ್ಮ ಜಿಲ್ಲೆಯ ಹಿತದೃಷ್ಟಿಯಿದ ಅನೇಕ ಬೇಡಿಕೆಗಳನ್ನು ಇಟ್ಟಿದ್ದೇವೆ ಅವುಗಳನ್ನು ಈಡೇರಿಸುವ ದಿಕ್ಕಿನಲ್ಲಿ ಮುಂದೆ ಹೋಗುತ್ತಾರೆ ಎನ್ನುವುದು ಸ್ಪಷ್ಟವಾಗಿದೆ ನಿಶ್ಚಿತವಾಗಿ ಮುಂದೆ ಹೋಗುತ್ತೇವೆ ಎನ್ನುವಂಥ ಮಾತನ್ನು ಹೇಳಿ, ಸರ್ಕಾರ ಎಷ್ಟು ಅತ್ಯುತ್ತಮವಾದ ಬಜೆಟ್‌ನ್ನು ಮಂಡಿಸಿರುವುದಕ್ಕೆ, ಶ್ರೀಯತ ಯಡಿಯೂರಪ್ಪನವರು ಎರಡನೇ ಬಾರಿಗೆ ಬಜೆಟ್ಟನ್ನು ಮಂಡಿಸಿರುವುದಕ್ಕೆ, ಶ್ರೀಯುತ ಯಡಿಯೂರಪ್ಪನವರು ಎರಡನೇ ಬಾರಿಗೆ ಬಜೆಟ್ಟನ್ನು ಮಂಡಿಸಿರುವುದಕ್ಕೆ ನಾನು ಮತ್ತೊಮ್ಮೆ

ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ' ಸಂಧ್ಯಾ ಸುರಕ್ಷಾ ಯೋಜನೆ', 'ಅಮೃತ ಯೋಜನೆ' ಇತ್ಯಾದಿ ಯೋಜನೆಗಳ ಕುರಿತಂತೆ ನಾವು ಎಷ್ಟು ಬೇಕಾದರೂ ಹೇಳಬಹುದು ಒಳ್ಳೊಳ್ಳೆಯ, ಸಮಾಜದಲ್ಲಿ ವಿಶ್ವಾಸ ಮೂಡಿಸುವಂಥ ಯೋಜನೆಗಳನ್ನು ಅವರು ಕೊಟ್ಟಿದ್ದಾರೆ ಇಷ್ಟು ಅತ್ಯುತ್ತಮವಾದಂಥ ಬಜೆಟ್ಟನ್ನು ನೀಡಿರುವುದಕ್ಕೆ ನಾನು ಈ ಸಂದರ್ಭದಲ್ಲಿ ನಮ್ಮ ಸಮ್ಮಿಶ್ರ ಸರ್ಕಾರಕ್ಕೆ ಅಭಿನಂದನೆಗಳನ್ನು ಹೇಳುತ್ತೇನೆ ಈ ರೀತಿಯ ಜನಪದ ಯೋಜನೆಗಳನ್ನು ಮಾಡಲಿಕ್ಕೆ ಕಾಂಗ್ರೆಸ್ಸಿನವರಿಗೆ ಸಾಧ್ಯವಾಗಲಿಲ್ಲ ನಿಜವಾಗಿ,ಅಧಿಕಾರಿಗಳು ಹೇಳಿದಂತೆ ನಡೆದುಕೊಂಡವರು ಕಾಂಗ್ರೆಸ್ಸಿನವರು ಅವರು ಜನಪರವಾದಂಥ ಕಾರ್ಯಕ್ರಮವನ್ನೇ ಎಂದೂ ಯೋಜನೆ ಮಾಡಲಿಲ್ಲ ಆದರೆ, ಸರ್ಕಾರದ ವಿವೇಚನಾ ಶಕ್ತಿಯನ್ನು ಬಳಸಿ ಜನರಿಗೆ ಬೇಕಾಗಿರುವಂಥ ಕಾರ್ಯಕ್ರಮವನ್ನು ಮಾಡಿರುವುದು ನಮ್ಮ ಸಮ್ಮಿಶ್ರ ಸರ್ಕಾರ ಎನ್ನುವುದನ್ನು ಈ ಸಂದರ್ಭದಲ್ಲಿ ವಿಶ್ವಾಸದಿಂದ ಹೇಳುತ್ತೇನೆ ಯಾವುದೇ ಸರ್ಕಾರವಿದ್ದರೂ ನಿಶ್ಚಿತವಾಗಿ ಅಧಿಕಾರಿಗಳ ಸಲಹೆ ಸೂಚನೆಗಳು ಬೇಕೇ ಬೇಕು ಅವರೂ ಸಹ ಒಳ್ಳೆಯ ರೀತಿಯಲ್ಲಿ ಸಲಹೆ ಸೂಚನೆಗಳನ್ನು ನೀಡಿಯೇ ನೀಡುತ್ತಾರೆ ಆದರೆ ಒಂದು ಸರ್ಕಾರವಾಗಿ, ನಮ್ಮ ರಾಜಕೀಯ ಇಚ್ಛಾಶಕ್ತಿಯಿಂದ ಕಾರ್ಯಕ್ರಮಗಳನ್ನು ರೂಪಿಸಬೇಕಾದಂಥಾದ್ದು ನಮ್ಮ ಜವಾಬ್ದಾರಿಯಾಗಿದೆ ಅದನ್ನು ನಾವು ಮಾಡಿದ್ದೇವೆ ನೀವು ಹೇಳಿದಂತೆ ಆಗಿಲ್ಲ ಎನ್ನುವುದನ್ನು ಮತ್ತೊಮ್ಮೆ ಸ್ಪಷ್ಟಪಡಿಸುತ್ತಾ, ಇಷ್ಟು ಅತ್ಯುತ್ತಮವಾದ ಬಜೆಟ್ಟನ್ನು ಮಂಡಿಸಿರುವುದಕ್ಕೆ ನಮ್ಮ ಸಮ್ಮಿಶ್ರ ಸರ್ಕಾರಕ್ಕೆ, ಹಣಕಾಸಿನ ಸಚಿವರಾದಂಥ ಶ್ರೀಯುತ ಯಡಿಯೂರಪ್ಪನವರಿಗೆ ಅಭಿನಂದಿ, ನನಗೆ ಮಾತನಾಡಲು ಕಾಲಾವಕಾಶವನ್ನು ಕೊಟ್ಟಿರುವುದಕ್ಕೆ ತಮಗೂ ಸಹ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಅಧ್ಯಕ್ಷರು ಈಗ ಎ ಟಿ ರಾಮಸ್ವಾಮಿಯವರು

ಶ್ರೀ ಮಲ್ಲಿಕಾರ್ಜುನ ಖರ್ಗೆ ವಿಶ್ವೇಶ್ವರ ಹೆಗಡೆಯವರ ನಂತರ ನನಗೆ ಅವಕಾಶ ಕೊಡುವುದಾಗಿ ಹೇಳಿದ್ದಿರಿ

ಅಧ್ಯಕ್ಷರು ನೀವು ಕೊನೆಯಲ್ಲಿ ಮಾತನಾಡುವಿರಂತೆ, ಅವರು ಮಾತನಾಡಿ ಬಿಡಲಿ, ಆಮೇಲೆ ನೀವು ಮಾತನಾಡಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ವಿಶ್ವೇಶ್ವರ ಹೆಗಡೆಯವರದ್ದು ಮುಗಿದ ಮೇಲೆ ಈ ಕಡೆಯವರಿಗೆ ಅವಕಾಶ ಕೊಡುತ್ತೇನೆ ಎಂದು ನೀವೇ ಹೇಳಿದ್ದರಲ್ಲ

ಅಧ್ಯಕ್ಷರು ಆ ಕಡೆ ಇಬ್ಬರೂ ಮಾತನಾಡಲು ಅವಕಾಶ ಕೇಳಿದ್ದಾರೆ ಅವರು ಮಾತನಾಡಲಿ ಆಮೇಲೆ ನೀವು ಮಾತನಾಡಿ conclude ಮಾಡಿ ಆಮೇಲೆ ಉತ್ತರ, ರಾಮಸ್ವಾಮಿಯವರೇ ಈಗ ನೀವು ಮಾತನಾಡಿ

ಶ್ರೀ ಎ ಟಿ ರಾಮಸ್ವಾಮಿ ಬೇಕಾದರೆ ಅವರು ಮಾತನಾಡಿದ ಮೇಲೆ ನಾನು ಮಾತನಾಡುತ್ತೇನೆ ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ

ಶ್ರೀ ಮಲ್ಲಿಕಾರ್ಜುನ ಖರ್ಗೆ ತಾವು ಮಾತನಾಡಿ ಆದರೆ ಅವರು ಹೇಳಿದುದನ್ನು ಹೇಳುತ್ತಿದ್ದೇನೆ ಅಷ್ಟೇ

ಶ್ರೀ ಎ ಟಿ ರಾಮಸ್ವಾಮಿ (ಅರಕಲಗೂಡು) ಸನ್ಮಾನ್ಯ ಅಧ್ಯಕ್ಷರೇ, ಸಮ್ಮಿಶ್ರ ಸರ್ಕಾರ ಮಂಡಿಸಿರುವ ೨೦೦೭-೦೮ನೇ ಸಾಲಿನ ಆಯವ್ಯಯವನ್ನು ನಾನು ಸ್ವಾಗತ ಮಾಡುತ್ತೇನೆ

ಶ್ರೀ ಐವಾನ್ ನಿಗ್ಲಿ ಮಾನ್ಯ ಅಧ್ಯಕ್ಷರೇ, ನಮಗೆ ಅವಕಾಶವನ್ನೇ ಕೊಡುತ್ತಿಲ್ಲ ಏಕೆ ನಮ್ಮನ್ನು ಕರೆದುಕೊಂಡು ಬಂದು ಈ ಸೀಟಿನಲ್ಲಿ ಕೂರಿಸಿರುವುದು?

ಅಧ್ಯಕ್ಷರು ಕುಳಿತುಕೊಳ್ಳಿ ಅವರು ಮಾತನಾಡುತ್ತಿದ್ದಾರೆ ಮಧ್ಯಮಧ್ಯದಲ್ಲಿ ನೀವು ಈ ರೀತಿ ಮಾತನಾಡುವುದು ಸರಿಯಲ್ಲ, ಕುಳಿತುಕೊಳ್ಳಿ

ಶ್ರೀ ಎ ಟಿ ರಾಮಸ್ವಾಮಿ ಈ ಒಂದು ಆಯವ್ಯಯ ಈ ನಾಡಿನ ಎಲ್ಲ ಸಮಸ್ಯೆಗಳನ್ನು ಅಥವಾ ಎಲ್ಲ ಅಭಿವೃದ್ಧಿ ಕಾರ್ಯಗಳನ್ನು

ಪರಿಪೂರ್ಣವಾಗಿ ಮುಗಿಸಿದೆ ಅಥವಾ ಮಾಡಿದೆ ಎನ್ನತಕ್ಕಂಥ ಅಭಿಪ್ರಾಯ ನನ್ನದು ಅಲ್ಲದೇ ಇದ್ದರೂ, ಒಂದು ಬಡವರ ಪರವಾದಂಥ, ರೈತರ ಪರವಾದಂಥ ಅಭಿವೃದ್ಧಿ ಪರವಾದಂಥ ಆಯವ್ಯಯವನ್ನು ಸನ್ಮಾನ್ಯ ಯಡಿಯೂರಪ್ಪನವರು ಮಂಡಿಸಿದ್ದಾರೆ

ಇದರಲ್ಲಿ ಇಲ್ಲಕ್ಕಿಂತ ಮುಖ್ಯವಾಗಿ ಯಾವುದೇ ಲಾಭಿಗೂ ಕೂಡ ಮಣಿಯದೆ ರಾಜಕೀಯ ಇಚ್ಛಾಶಕ್ತಿಯನ್ನು ರಾಜ್ಯದ ಹಿತದೃಷ್ಟಿಯಿಂದ ಒಂದು ಬದ್ಧತೆಯನ್ನು ವ್ಯಕ್ತಪಡಿಸಿಕೊಂಡು ಆಯವ್ಯಯವನ್ನು ಮಂಡಿಸಿದ್ದಾಖುಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ರಾಜ್ಯದ ಬೊಕ್ಕಸಕ್ಕೆ ಆದಾಯವೇನು ಬರುತ್ತಿತ್ತು, ಆ ಆದಾಯಕ್ಕಿಂತ ಈ ನಾಡಿನ ಜನರ ನೆಮ್ಮದಿ, ಆರೋಗ್ಯ, ಸಮರಸ್ಯ ಮುಖ್ಯವೆಂದು ಹಲವಾರು ಕಾರ್ಯಕ್ರಮಗಳನ್ನು ಕೂಡ ರದ್ದು ಮಾಡಿ ಜನಪರವಾದಂಥ ಒಂದು ಕಾರ್ಯಕ್ರಮವನ್ನು ರೂಪಿಸಿದಾರೆ, ಆದರೆ,ಈ ಸಂದರ್ಭದಲ್ಲಿ ಒಂದು ಮಾತನ್ನು ಈ ಮೂಲಕ ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಬಹುತೇಕ ಒಳ್ಳೆಯ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ ಆದರೆ, ಆ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಉತ್ತಮವಾದ ಆಡಳಿತವಿರಬೇಕು ಉತ್ತಮವಾದ ಆಡಳಿತವನ್ನು ಕೊಡಲಿಕ್ಕೆ ಈ ಆಯವ್ಯಯದಲ್ಲಿ ಸ್ವಲ್ಪ ಕಾರ್ಯಕ್ರಮಗಳನ್ನು ಕೊಟ್ಟಿದ್ದರೆ, ಆ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಹೆಚ್ಚು ಉಪಯುಕ್ತವಾಗುತ್ತಿತ್ತು ಎನ್ನುವುದು ನನ್ನ ಭಾವನೆಯಾಗಿದೆ ಇವತ್ತು ಎಷ್ಟೇ ಕಾರ್ಯಕ್ರಮಗಳನ್ನು ಕೊಟ್ಟರೂ ಸಹಿತ, ಅದರ ಅನುಷ್ಠಾನದಲ್ಲಿ ಲೋಪದೋಪಗಳು ಆಗುತ್ತಿದೆ, ಯಾವುದೇ ಅಧಿಕಾರಿಗಳಿಗೆ ಭಯ ಮತ್ತು ಭೀತಿ ಇಲ್ಲ ಆ ದಿಕ್ಕಿನಲ್ಲಿ ಸನ್ಮಾನ್ಯ ಹಣಕಾಸಿನ ಸಚಿವರು ಗಮನಹರಿಸಬೇಕೆನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಬಹುಮುಖ್ಯವಾಗಿ ರಾಜಕೀಯ ಇಚ್ಛಾಶಕ್ತಿಯನ್ನು ಅವರು ವ್ಯಕ್ತಪಡಿಸಿದ್ದದಾರೆಂದು ನಾನು ಆಗಲೇ ಹೇಳಿದೆ ಈ ರಾಜ್ಯದಲ್ಲಿ ಸರಾಯಿ ಮಾರಾಟವನ್ನು, ಲಾಟರಿ ಮಾರಾಟವನ್ನು ನಿಷೇಧಿಸುವುದರ ಜೊತೆಗೆ ಸಾಲ ಮನ್ನಾ ಮಾಡತುತ್ತೇವೆ ಎಂದು ಹೇಳಿದಾಗ, ಇಲ್ಲ, ಇವರ ಕೈಯಲ್ಲಿ ಮಾಡಲಿಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ಹತ್ತು ಹಲವಾರು ಬಾರಿ

ವೇದಿಕೆಗಳಲ್ಲಿ ನಮ್ಮ ವಿರೋಧ ಪಕ್ಷದ ಮುಖಂಡರುಗಳು ಕೂಡ ಹೇಳಿದರು ಇವತ್ತು ಈ ಸರ್ಕಾರ ಆ ಒಂದು ರಾಜಕೀಯ ಇಚ್ಛಾಶಕ್ತಿಯನ್ನು ವ್ಯಕ್ತಪಡಿಸಿ ಸಾರಾಯಿ ಮಾರಾಟ ನಿಷೇಧವನ್ನು, ಲಾಟರಿ ಮಾರಾಟ ನಿಷೇಧವನ್ನು ಕೂಡ ಮಾಡಿದೆ ಜೊತೆಗೆ, ರೈತರ ಹಿತವನ್ನು ಕಾಪಾಡಲಿಕ್ಕಾಗಿ, ರೈತರ ಸಾಲವನ್ನು ಮನ್ನಾ ಮಾಡಿರುವಂಥಾದ್ದು ತಮಗೆಲ್ಲ ಗೊತ್ತಿದೆ ಆ ಸಾಲ ಮನ್ನಾದಲ್ಲಿ ಎಷ್ಟನ್ನು ಮಾಡಬೇಕು, ಯಾವ ರೈತರಿಗೆ ಮಾಡಬೇಕಾಗಿತ್ತು ಎನ್ನುವ ಬಗ್ಗೆ ಇನ್ನೂ ಕೂಡ ಚರ್ಚೆಗಳಾಗುತ್ತಿವೆ ನಾನು ಸರ್ಕಾರವನ್ನು ಈ ಮೂಲಕ ಒತ್ತಾಯ ಮಾಡುತ್ತಿದ್ದೇನೆ ಎಲ್ಲ ವರ್ಗದ ರೈತರಿಗೂ ಕೂಡ ೨೫,೦೦೦ ರೂ ಗಳವರೆಗೆ ಸಾಲವನ್ನು ಮನ್ನಾ ಮಾಡಬೇಕೆಂಬುದು ನನ್ನ ಅಭಿಪ್ರಾಯ ಅದನ್ನು ನಾನು ಅತ್ಯಂತ ಕಳಕಳಿಯಿಂದ, ವಿನಮ್ರವಾಗಿ, ವಿನಂತಿಯನ್ನು ಮಾಡುತ್ತಿದ್ದೇನೆ ನಮ್ಮ ಕಾಂಗ್ರೆಸ್ ಪಕ್ಷ ಮುಖಂಡದಲ್ಲಿ ಕೂಡ ನಾನು ನಿನಂತಿ ಮಾಡಿಕೊಳ್ಳುತ್ತೇನೆ ಈ ಪಕ್ಷ ಬಹಳ ದೊಡ್ಡ ಪಕ್ಷ, ನೂರಕ್ಕೂ ಹೆಚ್ಚು ವರ್ಷಗಳ ಇತಿಹಾಸವಿರುವ ಪಕ್ಷ, ಬಡವರ ಬಗ್ಗೆ ಕಾಳಜಿ ಇರುವ ಪಕ್ಷ, ರೈತರ ಒಗ್ಗೆ ಕಾಳಜಿ ಇರುವ ಪಕ್ಷವೆಂದು ಅವರು ಹೇಳಿಕೊಳ್ಳುತ್ತಾರೆ ಇವತ್ತು ಈ ಸಮ್ಮಿಶ್ರ ಸರ್ಕಾರ ಸಾರಾಯಿ ಮಾರಾಟ ನಿಷೇಧ ಮಾಡಿದೆ, ಲಾಟರಿ ಮಾರಾಟ ನಿಷೇಧ ಮಾಡಿದ,ಎ ಡಾ ನಂಜುಂಡಪ್ಪನವರ ಸಮಿತಿಯ ವರದಿಯ ಅನುಷ್ಠಾನಕ್ಕಾಗಿ ೧೫೭೧ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ ರೈತರಿಗೆ, ನೇಕಾರರಿಗೆ, ಮೀನುಗಾರರಿಗೆ, ಸ್ತ್ರೀ ಶಕ್ತಿ, ಸ್ವಸಹಾಯ ಸಂಘಗಳಿಗೆ ४% ಬಡ್ಡಿಯಲ್ಲಿ ಸಾಲವನ್ನು ಕೊಡಲು ಕಾರ್ಯಕ್ರಮ ರೂಪಿಸಿದೆ ೫ಎ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿ ಮಾಡಲಿಕ್ಕೆ ಕಾರ್ಯಕ್ರಮ ರೂಪಿಸಿದೆ ಹಿರಿಯ ಶ್ರಮ ಜೀವಿಗಳಿಗೆ ಸಂಧ್ಯಾ ಸುರಕ್ಷಾ ಯೊಜನೆ ಎನ್ನುವ ಕಾರ್ಯಕ್ರಮ ರೂಪಿಸಿದೆ ವಿಧವಾ ವೇತನ, ವೃದ್ದಾಪ್ಯ ವೇತನ, ಅಂಗವಿಕಲರ ವೇತನಗಳನ್ನು ೨೦೦ ರಿಂದ ४೦೦ ರೂಪಾಯಿಗಳಿಗೆ ಹೆಚ್ಚು ಮಾಡಿದೆ ಸ್ವಾತಂತ್ರ್ಯ ಹೋರಾಟಗಾರರಿಗೆ ೧೫೦೦ ರಿಂದ ೩೦೦೦ ರೂಪಾಯಿಗಳಿಗೆ ವೇತನ ಹೆಚ್ಚು ಮಾಡಿದೆ ೧೦ನೇ ತರಗತಿಯವರೆಗೆ ಬಿಸಿಯೂಟ ಯೋಜನೆಯನ್ನು ವಿಸ್ತರಣೆ

ಮಾಡಿದೆ, ಅದಕ್ಕಿಂತಲೂ ಕೂಡ ಹೆಚ್ಚಾಗಿ ಅಸಂಘಟಿತ ಕುಶಲಕರ್ಮಿಗಳಾದ ದರ್ಜಿಗಳು, ಮಡಿವಾಳರು, ಬಡಗಿಗಳು, ಕ್ಷೌರಿಕರು, ಕುಂಬಾರರು ಇತರರಿಗೆ ಕಲ್ಯಾಣ ಮಂಡಳಿಯನ್ನೂ ಕೂಡ ರಚನೆ ಮಾಡಿ, ಅಸಂಘಟಿತ ಕಾರ್ಮಿಕರ ನೆರವಿಗೆ ಕುಡ ಬಂದಿರುವುದು ತಮಗೆ ಗೊತ್ತಿದೆ ಈ ಮಾತುಗಳನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಈ ಸರ್ಕಾರದ ಬಡವರ ಪರವಾಗಿ ಕೆಲಸ ಮಾಡುತ್ತಿದೆ ಯಾರೋ ಟಾಟಾ, ಬಿರ್ಲಾ ಅಥವಾ ನೈಸ್ ಕಂಪನಿಯವರ ಪರವಾಗಿ ಕೆಲಸ ಮಾಡುತ್ತಿಲ್ಲವೆನ್ನುವ ಮಾತನ್ನು ಹೇಳಿ, ಇವತ್ತು ನಾನು ನಮ್ಮ ರಾಯ ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಈ ರಾಜ್ಯದ ಸ್ವಾಮ್ಯಕ್ಕೆ ಒಳಪಡತಕ್ಕಂಥ ಯಾವ ನಮ್ಮ ರೈತರಿದ್ದಾರೆ, ಅನ್ನದಾತನಿದ್ದಾನೆ ಅವನ ಎಲ್ಲ ಸಾಲವನ್ನೂ ಕೂಡ ಮನ್ನಾ ಮಾಡಲಿಕ್ಕೆ ನಾನು ಒತ್ತಾಯ ಮಾಡುತ್ತಿದ್ದೇನೆ ಆದರೆ, ಕೇಂದ್ರ ಸರ್ಕಾವನ್ನೂ ನಮ್ಮ ಕಾಂಗ್ರೆಸ್ ಪಕ್ಷದ ಪ್ರಮುಖರು ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಒಳಪಡತಕ್ಕಂಥ ಎಲ್ಲ ಬ್ಯಾಂಕ್‌ಗಳ ರೈತರ ಸಾಲವನ್ನೂ ಕೂಡ ಮನ್ನಾ ಮಾಡಲಿಕ್ಕೆ ಅವರು ಒತ್ತಾಯ ಮಾಡಬೇಕು ಅನ್ನದಾತನಿಗೆ ನೆರವು ಕೊಡುವುದಕ್ಕೆ ನೀವು ಅದಕ್ಕೆ ಒಪ್ಪಿಕೊಳ್ಳುವುದಾದರೆ, ನಮ್ಮ ಸರ್ಕಾರ ಅದಕ್ಕ ಸ್ಪಂದಿಸದೇ ಹೋದರೆ ನಿಮ್ಮ ಮಾತಿಗೆ ನಾನು ಈ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟು ಹೋಗುತ್ತೇನೆ ರಐತರ ನೆರವಿಗೆ ಬಂದು ಪೂರ್ಣ ಸಾಲ ಮನ್ನಾ ಮಾಡಬೇಕು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ರೈತರ, ಅನ್ನದಾತರ ಎಲ್ಲ ಸಾಲವನ್ನು ಕೂಡ ರಾಜ್ಯ ಸರ್ಕಾರ ಮನ್ನಾ ಮಾಡಲಿ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವ ಎಲ್ಲ ಸಾಲಗಳನ್ನು ಕೂಡ ಅವರು ಮನ್ನಾ ಮಾಡಲಿ ಈ ಸವಾಲನ್ನು ನೀವು ಸ್ವೀಕಾರ ಮಾಡಿ ನಾವು ಒತ್ತಾಯ ಮಾಡುತ್ತೇನೆ ನಮ್ಮ ಸರ್ಕಾರದವರು ಇದನ್ನು ಮಾಡುವುದಿಲ್ಲವೆಂದರೆ, ನಾವೆಲ್ಲ ಬೇಕಾದರೆ ಪದ ತ್ಯಾಗ ಮಾಡಲಿಕ್ಕೆ ಸಿದ್ದರಿದ್ದೇವೆ ನೀವೂ ಆ ಸವಾಲನ್ನು ಸ್ವೀಕಾರ ಮಾಡಿ ಕೇಂದ್ರಸರ್ಕಾರವನ್ನು ಒಪ್ಪಿಸಿ ಏಕೆಂದರೆ, ರೈತರ ಬಡವರ ಪರವಾಗಿ ಮಾತನಾಡುತ್ತೀವಿ ನಿನ್ನೆ ಕುಳಿತುಕೊಂಡು ನೈಸ್ ಕಂಪನಿಗೆ ಸಂಬಂಧಿಸಿದ ವಿಚಾರವನ್ನು ಮಾತನಾಡುತ್ತಿದ್ದೆವು ಕೇವಲ ಬೆಂಗಳೂರಿನ peripheral road ಸುತ್ತಮುತ್ತ ೪, ಸಾವಿರ ಎಕರೆ ಅವರಿಗೆ, ಇನ್ನು ಬಿಡದಿಯ ಹತ್ತಿರ,

ಮಂಡ್ಯದ ಹತ್ತಿರ, ಶ್ರೀರಂಗಪಟ್ಟಣದ ಹತ್ತಿರ, ರಾಮನಗರದ ಹತ್ತಿರ ಅದನ್ನು ಬಿಡಿ , ಬೆಂಗಳೂರು ಸುತ್ತ ಮುತ್ತ peripheral road ನಲ್ಲಿ ಬರುವ ೪ ಸಾವಿರ ಎಕರೆಗೆ, ಒಂದು ಎಕರೆಗೆ ಕನಿಷ್ಟ ೫ ಕೋಟಿ ರೂ ಎಂದರೆ ೨೦ ಸಾವಿರ ಕೋಟಿ ರೂಪಾಯಿಗಳಾಗುತ್ತದೆ ಅದರ ಜೊತೆಗೆ, ಅಲ್ಲಿ ಎಲ್ಲ ಉಪನಗರಗಳಿಗೆ ಬೇಕಾಗಿರುವ ಜಾಗಗಳು ರಸ್ತೆ ಮಾಡುವುದು ಮತ್ತು ಅವರು ೩೦ ವರ್ಷ toll collect ಮಾಡುವುದು ಅದಕ್ಕೆ ನನ್ನ ಸ್ನೇಹಿತರು ಏನು ಹೇಳುತ್ತಿದ್ದರೆಂದರೆ, ಈ ೪ ಸಾವಿರ ಎಕರೆಯಲ್ಲ, ಕೇವಲ ೨ ಸಾವಿರ ಎಕರೆ ಕೊಡಿಸಿಬಿಡಿ ಬಿಡದಿ, ರಾಮನಗರ, ಮಂಡ್ಯ, ಶ್ರೀರಂಗಪಟ್ಟಣದ ಭೂಮಿ ಬೇಡ ನಾವು ೩೦ ವರ್ಷ toll ಅನ್ನೂ collect ಮಾಡುವುದಿಲ್ಲ freeಯಾಗಿ ರಸ್ತೆ ಮಾಡಿಕೊಡುತ್ತೇವೆ ಎಂದು ಹೇಳಿದರು ಯಾವ ಸರ್ಕಾರ ಯಾರ ಪರವಿದೆ? ಈ ಬಜೆಟ್ ಏನು ಟಾಟಾ, ಬಿಲಾ ಪರವಿದೆಯೇ? ಅಥವಾ ಯಾವುದಾಧರೂ ಮದ್ಯದ ಲಾಬಿಯವರ ಪರವಿದೆಯೇ? ಅದಕ್ಕೆ ನಾನು ಹೇಳಿದ್ದೇನೆಂದರೆ, ಒಂದು ರಾಜಕೀಯ ಇಚ್ಛಾಶಕ್ತಿಯನ್ನು ವ್ಯಕ್ತಪಡಿಸಿ, ಇವತ್ತು ಈ ಆಯವ್ಯಯವನ್ನು ತಯಾರು ಮಾಡಿರತಕ್ಕಂಥದ್ದು ನಿಜಕ್ಕೂ ಕೂಡ ಸ್ವಾಗತಾರ್ಹ ಎಂದು ಹೇಳುತ್ತೇನೆ ಸರ್ಕಾರದವರೇನು ಇವತ್ತು ಸಾಲ ಮನ್ನಾದ ಮೂಲಕ ರೈತರಿಗೆ benefit ಕೊಡಲಿಕ್ಕೆ ಹೊರಟಿದ್ದಾರೆ, ಇದರಲ್ಲಿ ಒಂದು ವಿಷಯವನ್ನು ಮಾನ್ಯ ಯಡಿಯೂರಪ್ಪನವರು ಗಮನಿಸಿಬೇಕು, ಇದು ರೈತರಿಗೆ ಕೆಲವು ಸಂದರ್ಭಗಲ್ಲಿ ತಲುಪುತ್ತಿಲ್ಲ Middle agents ಪಾಲಾಗುತ್ತಿದೆ ಬೇನಾಮಿ ಸಾಲಗಳಿವೆ, Deposit ಇಲ್ಲದಿದ್ದರೂ ಕೂಡ deposit ಬಂದಿದೆ ಎಂದು ಬ್ಯಾಂಕ್‌ನಲ್ಲಿ ತೋರಿಸಿ ಅದರಲ್ಲಿ ಸಾಲ ಕೊಟ್ಟಿದ್ದೇವೆಂದು ಕಾಲ್ಪನಿಕವಾಗಿ ಸಾಲ ಮಂಜೂರಾತಿ ಮಾಡಿದ್ದೇವೆಂದು, ಅದಕ್ಕೆ adjust ಮಾಡತಕ್ಕಂಥ ಹುನ್ನಾರ ನಡೆಯುತ್ತಿದೆ Renewal ಮಾಡುವಾಗಲೂ ಕೂಡ ಸಾಲವನ್ನೇ ತೆಗೆದುಕೊಳ್ಳಲಿಲ್ಲ, ಸಾಲ ಕೊಟ್ಟಿದ್ದೇವೆಂದು renewal ಮಾಡುವಂಥದ್ದು ನಡೆಯುತ್ತಿದೆ ಬೆಂಗಳೂರು ನಗರ ಜಿಲ್ಲೆ DCC Bank ಒಂದರಲ್ಲಿಯೇ ಸುಮಾರು ೧ ಕೋಟಿ ರೂಪಾಯಿಗಳ ಸಾಲ ಈ ತರಹ ಬೇನಾಮಿ

ರೂಪದಲ್ಲಿ ಕೊಟ್ಟಿದ್ದಾರೆ ಬೇನಾಮಿಯಾಗಿ claim ಮಾಡಿದ್ದಾರೆಂದು ಈಗಾಗಲೇ ಸರ್ಕಾರ್ಕೆ ವರದಿ ಕೊಟ್ಟಿದ್ದಾರೆ ಶಿವಮೊಗ್ಗ ಜಿಲ್ಲೆಯಲ್ಲಿ ೧೩ ಕೋಟಿ ರೂಪಾಯಿಗಳನ್ನು ಈ ತರಹ ಬೇನಾಮಿ ಸಾಲ ಕೊಟ್ಟಿದ್ದೇವೆಂದು claim ಮಾಡಿದ್ದಾರೆಂದು ನನಗೆ ಮಾಹಿತಿ ಬಂದಿದೆ

DCC Bank ಗಳಲ್ಲಿ ಬೇನಾಮಿ ಸಾಲಗಳನ್ನು ತೋರಿಸಿಕೊಳ್ಳುವುದು, ಸರ್ಕಾರದಿಂದೇನು benefit ಸಿಗುತ್ತದೆ, ಅದನ್ನು ಪಡೆದುಕೊಳ್ಳುವುದಕ್ಕೆ ಈ middlemen, ಅಲ್ಲಿಯ ಅಧಿಕಾರಿ ವರ್ಗದವರು ಸೇರಿಕೊಂಡು ಆ ರೀತಿ ಮಾಡುತ್ತಿದ್ದಾರೆ ಆ ಬಗ್ಗೆ ಸರ್ಕಾರದ ಈ ಸಾಲದ ಸೌಲಭ್ಯ ನಿಜವಾದ ರೈತರಿಗೆ ತಲುಪಬೇಕೆಂದರೆ, ಅವರಿಗೆ cheque ಗಳ ಮೂಲಕ payment ಆಗಬೇಕು ಅವರಿಗೇನು ಸಾಲ ಕೊಡುತ್ತಾರೆ,ಅದನ್ನು ಆ DCC Bank ಗಳೂ ಕೂಡ cheque ಮೂಲಕ ಆ ರೈತರಿಗೆ ಪಾವತಿ ಮಾಡಿದರೆ ಒಳ್ಳೆಯದು ಏಕೆಂದರು, ಹೆಬ್ಬೆಟ್ಟು ಒತ್ತಿಸಿಕೊಂಡು ೨೫ ಸಾವಿರ ರೂಪಾಯಿಗಳಿಗೆ ೫೦ ಸಾವಿರ ರೂಪಾಯಿ ಎಂದು ಬರೆದುಕೊಂಡಿರುತ್ತಾರೆ ಅದು ಅವನಿಗೆ ಗೊತ್ತಿರುವುದೇ ಇಲ್ಲ ಆ ದಿಕ್ಕಿನಲ್ಲಿ ಸರ್ಕಾರ ಹೆಚ್ಚಾಗಿ ಗಮನವನ್ನು ಹರಿಸಬೇಕೆನ್ನುವ ಮಾತನ್ನು ಹೇಳುತ್ತೇನೆ ಆ ವಿಷಯವನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ ಇವತ್ತು Special Economic Zone ಗಳನ್ನೇನು ಮಾಡುತ್ತಿದ್ದೀರಿ

ಶ್ರೀ ಶಿವಾನಂದ ಎಸ್ ಪಾಟೀಲ್ Point of Order ಇದೆ DCC Bank ನ್ನು accuse ಮಾಡುವುದು ಬೇಡವೆಂದು ಹೇಳಲಿಲ್ಲ ಮಾಡಲಿ, because he is a Ruling Party member Co operative Minister ಅವರ party ಯವರೇ ಇದ್ದಾರೆ ಶಿವಮೊಗ್ಗ ಮತ್ತು ಬೆಂಗಳೂರಿನ ಉದಾಹರಣೆ ಹೇಳಿದರು On records ಅವರಲ್ಲೇನಾದರೂ material ಇದ್ದರೆ ಅವರಿಗೆ ಸಾಲ ಮನ್ನಾ ಮಾಡಿ ಬಿಟ್ಟುಬಿಡುವುದೇಕೆ ? ಅವರನ್ನು convict ಮಾಡಬಹುದಲ್ಲ? ದಯಮಾಡಿ, ಉತ್ತರ ಕೊಡಬೆಕು ಸಾಲ ಮನ್ನಾ ಮಾಡಿ, ಅವರು ಹಣ

ತೆಗೆದುಕೊಂಡು ಹೋಗಿಬಿಡುತ್ತಾರೆ But, they must brought on book

ಶ್ರೀ ಎ ಟಿ ರಾಮಸ್ವಾಮಿ ಅದಕ್ಕೇ ನಾನು ಹೇಳಿದ್ದು ಈಗಾಗಲೇ ನಿರ್ದಿಷ್ಟವಾಗಿ ನಾನು ಹೇಳಿದೆ ಬೆಂಗಳೂರು DCC Bank ನಲ್ಲಿ ಈ ತರಹದ್ದು ೧ ಕೋಟಿ ರೂಪಾಯಿಗಳ ಬೇನಾಮಿ ಸಾಲಕ್ಕೆ claim ಮಾಡಿದ್ದಾರೆ ಆ ಬಗ್ಗೆ ಸರ್ಕಾರಕ್ಕೂ ಕೂಡ ವರದಿ ಬಂದಿದೆ ನಾನು ಖಚಿತವಾಗಿಯೇ ಹೇಳುತ್ತಿದ್ದೆನೆ ಮೊದಲೇ ನಾನು ಪ್ರಾರಂಭಿಕವಾಗಿ, ಪೂರ್ವಭಾವಿಯಾಗಿ ಮಾತನಾಡುತ್ತಾ ಹೇಳಿದೆ ಕಾರ್ಯಕ್ರಮಗಳನ್ನು ಕಾರ್ಯಕ್ರಮಗಳನ್ನು ಕೊಡುವುದಷ್ಟೇ ಅಲ್ಲ, ಆ ಕಾರ್ಯಕ್ರಮಗಳು ಸಮರ್ಪಕವಾಗಿ ಅನುಷ್ಠಾನವಾಗಲಿಕ್ಕೆ ಒಳ್ಳೆಯ ಆಡಳಿತವಿರಬೇಕು

ಶ್ರೀ ಶಿವಾನಂದ ಎಸ್ ಪಾಟೀಲ್ ಒಂದು enquiry initiate ಮಾಡುವುದಕ್ಕೆ ನೀವೇ ಹೇಳಿಬಿಡಿ

ಶ್ರೀ ಎ ಟಿ ರಾಮಸ್ವಾಮಿ ಅದಕ್ಕೇ ನೀವು ಕಾರ್ಯಕ್ರಮ ರೂಪಿಸಿ ಎನ್ನುವ ಮಾತನ್ನು ಹೇಳಿದೆ

ಶ್ರೀ ಶಿವಾನಂದ ಎಸ್ ಪಾಟೀಲ್ Concerned Miniser ರಿಂದ enquiry initiate ಮಾಡಿಸಿ

ಅಧ್ಯಕ್ಷರು ಶಿವಾನಮದ ಎಸ್ ಪಾಟೀಲರೆ, ಅವರು ಮಾತನಾಡಲಿ,

ಶ್ರೀ ಎ ಟಿ ರಾಮಸ್ವಾವಿ ಅದನ್ನೇ ನಾನು ಹೇಳುತ್ತಿದ್ದೇನೆ ನಾನೂ ಕೆಲವು ಆ ಮಾತುಗಳನ್ನು, ನನ್ನ ಗಮನಕ್ಕೆ ಬಂದ ನ್ಯೂನತೆಗಳ ಬಗ್ಗೆ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ ಅದರ ಬಗ್ಗೆ ಕಠಿಣವಾದ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತಿದ್ದೇನೆ

ಅಧ್ಯಕ್ಷರು ರಾಮಸ್ವಾಮಿಯವರೆ, ಬೇಗ ಮಾತನಾಡಿ ಮುಗಿಸಿ

ಶ್ರೀ ಎ ಟಿ ರಾಮಸ್ವಾಮಿ ಈಗ ವಿಶೇಷ ಆರ್ಥಿಕ ವಲಯಗಳನ್ನೇನು ರಚನೆ ಮಾಡಿದ್ದಾರೆ, ಅಲ್ಲಿ ರಚನೆ ಮಾಡಿ, ರೈತರ ಜಮೀನನ್ನು ಸ್ವಾಧೀನ ಮಾಡಿಕೊಂಡು ಅಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲಿಕ್ಕೆ ಅವಕಾಶವನ್ನು ಮಾಡಿಕೊಡುತ್ತಿದ್ದೀರಿ ಆ ರೈತರು ಜಮಿನನನ್ನೇನು ಕಳೆದುಕೊಂಡುರ, ಅವರೆಲ್ಲ ಇವತುತ ಕೂಲಿಗೆಂದು ಬೆಂಗಳೂರಿಗೆ ಬರುತ್ತಿದ್ದಾರೆ ಅಲ್ಲಿ ನಮ್ಮ ರಾಜ್ಯದ ಒಬ್ಬ ವಿದ್ಯಾವಂತ ನಿರುದ್ಯೋಗಿಗೆ ಅಲ್ಲಿ ತೆರೆಯುವ ಕಾರ್ಖಾನೆಗಳಿಗೆ ಬೇಕಾದಂಧ ತರಬೇತಿಗಳನ್ನು ಇವರು vision ಇಟ್ಟುಕೊಂಡು ಆ ತರಬೇತಿಗಳನ್ನೇ ಕೊಡುತ್ತಿಲ್ಲ ಆ ಕಾರ್ಖಾನೆಗಳಿಗೆ, ಬೇರೆ ಬೇರೆಯವರು, ಹೊರ ರಾಜ್ಯದವರು ಬಂದು ನೌಕರರಾಗಿ ಸೇರಿಕೊಳ್ಳುತ್ತಿದ್ದಾರೆ ಅಲ್ಲಿ ನಮ್ಮ ಭೂಮಿಯನ್ನು ಕಳೆದುಕೊಂಡ ರೈತರಿರಬಹುದು ಅಥವಾ ಆ ಭಾಗದ ನಿರುದ್ಯೋಗಿ ಯುವಕರಿರಬಹುದು ಅವರು ಬೇರೆ ಕಡೆಗೆ ಅಂದರೆ ಬೆಂಗಳೂರಿಗೆ ಕೂಲಿ ಕೆಲಸಕ್ಕೆ ಬರುತ್ತಿದ್ದಾರೆ ನೀವೇನು ಅಲ್ಲಿ Special Economic Zone ಮಾಡುತ್ತಿದ್ದೀರಿ ಅಂಥ ಕಡೆ ಮೊದನೆಯದಾಗಿ ನೀವು ಯಾವಾಗ ಕಾರ್ಖಾನೆಗಳು ಬರುತ್ತವೆ, ಅದಕ್ಕೆ ಸಂಬಂಧಪಟ್ಟಂತೆ, ನಿರುದ್ಯೋಗಿ ವಿದ್ಯಾವಂತರಿಗೆ, ಆ ದಿಕ್ಕಿನಲ್ಲಿ ತರಬೇತಿ ಕೊಟ್ಟರೆ, ಉದ್ಯೋಗಾವಕಾಶವನ್ನು ಒದಗಿಸಿಕೊಡಲು ಅವಕಾಶವಾಗುತ್ತದೆ ನಿಮ್ಮ Special Economic Zone ಗಳನ್ನು ಪ್ರಾರಭ ಮಾಡಿದ್ದಕ್ಕೂ ಕೂಡ ಸಾರ್ಥಕವಾಗುತ್ತದೆ ಆ ದಿಕ್ಕಿನಲ್ಲಿ ತಾವು ಗಮನವನ್ನು ಹರಿಸಬೇಕೆನ್ನುವ ಮಾತನ್ನು ಕೂಡ ಈ ಸಂದರ್ಭದಲ್ಲಿ ತಮ್ಮೆಲ್ಲರ ಗಮನಕ್ಕೆ ಅಧ್ಯಕ್ಷರ ಮುಖೇನ ತರಲು ಇಚ್ಚೆಸುತ್ತಿದ್ದೇನೆ ಇವತ್ತು ನಾವು ನೋಡಿದ್ದೇನೆ ಜಲ ಕ್ಷಾಮ ಶುರುವಾಗಿ ಬಿಟ್ಟಿದೆ ಇನ್ನೇನು ನಾವು ಹತ್ತಿರದಲ್ಲೇ ಆಹಾರ ಕ್ಷಾಮವನ್ನೂ ನೋಡಬೇಕದ ಪರಿಸ್ಥಿತಿ ಇದೆ ಆಹಾಋದ ಉತ್ಪಾದನೆ ಕಡಮೆಯಾಗುತ್ತಿದೆ ಏಕೆಂದರೆ, ಕೃಷಿಯಲ್ಲಿ ನಮಗೇನೂ ಹೆಚ್ಚು ಲಾಭವಿಲ್ಲವೆಂದು ಅನಿಸುತ್ತಿಲ್ಲ ಎ ಷ್ಟು ಶ್ರಮ ವಹಿಸಿದರೂ ಕೂಡ ಅದು ಲಾಭದಾಯಕವೆಂದು ಅನಿಸುತ್ತಿಲ್ಲ ಕಾರಣ, ಕೃಷಿ ಕ್ಷೇತ್ರದ ಒಂದು ಅವನತಿ ಏನಾಗುತ್ತಿದೆ, ಅದಕ್ಕೆ ಮಾರುಕಟ್ಟೆಯ ವ್ಯವಸ್ಥೆ ಸಮರ್ಪಕವಾಗಿ

ದೊರೆಯುತ್ತಿಲ್ಲ ಈ ಮಾರುಕಟೆಯ ವ್ಯವಸ್ಥೆಯನ್ನು ಕಲ್ಪಿಸಲಿಕ್ಕೆ ಈ ಆಯವ್ಯಯದಲ್ಲಿ ಹೆಚ್ಚು ಹೇಳಿಲ್ಲವೆಂದು ನಾನು ಹೇಳಬೇಕಾಗುತ್ತದೆ ಆ ದಿಕ್ಕಿನಲ್ಲಿ ಸನ್ಮಾನ್ಯ ಹಣಕಾಸು ಸಚಿವರೂ ಕೂಡ ಒಳ್ಳೆಯ ಮಾರಕಟ್ಟೆಯ ವ್ಯವಸ್ಥೆಯನ್ನು ರೈತರಿಗೆ ಒದಗಿಸಿಕೊಡಲಿಕೆಕ ಕಾರ್ಯಕ್ರಮವನ್ನು ರೂಪಿಸಬೇಕೆನ್ನುವ ಮಾತನ್ನು ಅವರ ಗಮನಕ್ಕೆ ತರುತ್ತೇನೆ ಕೃಷಿ ನವೀಕರಣದ ಕಾರ್ಯಕ್ರಮಗಳೇನಿವೆ, ಅವನ್ನೂ ಕೂಡ University ಯಲ್ಲೇ ಉಳಿದುಕೊಂಡಿವೆ, ಅವನ್ನು ರೈತರಿಗೆ ಮುಟ್ಟಿಸಲು, ರೈತರ ಜಮೀನಿಗೆ ಮುಟ್ಟಿಸಲು ಕಾರ್ಯಕ್ರಮಗಳನ್ನು ಮಾಡಬೇಕೆಂದು ಮತ್ತೊಮ್ಮೆ ತಮ್ಮ ಗಮನಕ್ಕೆ ತರುತ್ತೇನೆ ಆಹಾರ ಮಂತ್ರಿಗಳಲ್ಲಿ ವಿನಂತಿ ಏನೆಂದರೆ, ಇವತ್ತು ನ್ಯಾಯ ಬೆಲೆ ಅಂಗಡಿಗಳ ಮೂಲಕ ಏನು ಆಹಾರ ವಿತರಣೆಯಾಗುತ್ತಿದೆ, ಬಹುತೇಕ ಅವೆಲ್ಲ ಕಳ್ಳಸಾಗಾಣಿಕೆಯಾಗುತ್ತಿವೆ ಇವತ್ತು ನ್ಯಾಯ ಬೆಲೆ ಅಂಗಡಿ ಮೂಲಕ ಏನು ಆಹಾರ ವಿತರಣೆಯಾಗುತ್ತಿದೆ, ಬಹುತೇಕ ಅವೆಲ್ಲ ಕಳ್ಳಸಾಗಾಣಿಕೆಯಾಗುತ್ತಿವೆ ಇವತ್ತು ನ್ಯಾಯ ಬೆಲೆ ಅಂಗಡಿ ಮೂಲಕ ಆಹಾರವನ್ನು ಕೊಡುತ್ತಾರೆ ಇವತ್ತು ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯಿತಿಯಲ್ಲಿ SGRY ಮೂಲಕ ಆಹಾರವನ್ನು ಸರಬರಾಜು ಮಾಡುತ್ತಾರೆ Scarcity ಯಲ್ಲಿ, flood ನಲ್ಲಿ ಆಹಾರವನು ಸರಬರಾಜು ಮಾಡುತ್ತಾರೆ ಅವಾವುವೂ ಕೂಡ ರೈತರಿಗೆ, ಬಡವರಿಗೆ ಮುಟ್ಟುತ್ತಿಲ್ಲ ಬಹುತೇಕ ಇವೆಲ್ಲ ಕಳ್ಳಸಾಗಾಣಿಕೆಯಾಗುತ್ತಿದೆ ಅರ್ಧ ಆಹಾರವೇ ಸಾಕು ತಿಂದು ಉಂಡು ಹೆಚ್ಚಾಗುವಷ್ಟು ಆಹಾರ ಸಾಕಾಗುತ್ತದೆ ಇವರ್‍ಯಾರೋ ತಿಂದು ಹೊಟ್ಟೆ ದಪ್ಪ ಮಾಡಿಕೊಳ್ಳುತ್ತಿದ್ದಾರೆ ಎಲ್ಲಿಯಾದರೂ system ಅನ್ನು develop ಮಾಡಿದರೆ, ಸರ್ಕಾರ ಕೊಡುವ ಆಹಾರ ಅರ್ಧವೇ ಸಾಕು ಎಲ್ಲ ತಿಂದು ಉಣ್ಣುವವರಿಗೆ ಹೆಚ್ಚಾಗಿ ಉಳಿದುಕೊಳ್ಳುತ್ತದೆ ಅದಕ್ಕೆ ಒಂದು system develop ಮಾಡಲಿ ಕೂಲಿಗಾಗಿ ಕಾಳು ಯೋಜನೆಯಲ್ಲಿ ಗಮಡ ಹೆಂಡತಿ ಕೆಲಸಕ್ಕೆ ಹೋದರೆ ಇಬ್ಬರಿಗೂ ೩-೩ ಕೆ ಜಿ ಯಂತೆ ದಿವಸಕ್ಕೆ ೬ ಕೆ ಜಿ ಆಹಾರ ಸಿಗುತ್ತದೆ ಹಸಿರು ಕಾರ್ಡ್‌ನಲ್ಲಿ, ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯಿತಿ ಕೆಲಸದಲ್ಲಿ ಸಿಗುತ್ತಿದೆ ಎಲ್ಲಿ ಉಪಯೋಗವಾಗುತ್ತಿದೆ? ಅದಕ್ಕೆ

ಸರ್ಕಾರದವರು ಒಂದು system develop ಮಾಡಿ, ಕಳ್ಳಸಾಗಾಣಿಕೆಯಾಗದ ಹಾಗೆ ಸಮರ್ಪಕವಾಘಿ ನೋಡಿಕೊಂಡರೆ ಇವರೇನು ಅಕ್ಕಿಗೆ, ಆಹಾರಧಾನ್ಯಗಳಿಗೆ subsidy ಕೊಡುತ್ತಿದ್ದಾರೆ ಅದೂ ಉಳಿಯುತ್ತದೆ ಎಲ್ಲರಿಗೂ ಯಥೇಚ್ಚವಾಗಿ ಆಹಾರಕ್ಕೆ ಹಾಹಾಕಾರವಿಲ್ಲದ ಹಾಗೆ ಆಹಾರ ದೊರಕುತ್ತದೆ ಆ ದಿಕ್ಕಿನಲ್ಲಿಯೂ ಕೂಡ ಕಾರ್ಯಕ್ರಮವನ್ನು ರೂಪಿಸಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸಕಾರದ ಗಮನಕೆಕ ತರುತ್ತೇನೆ ಸನ್ಮಾನ್ಯ ಯಡಿಯೂರಪ್ಪನವರು ಆಯವ್ಯಯವನ್ನೇನು ಮಂಡಿಸಿದ್ದಾರೆ ನಾನು ಮೊದಲೇ ಹೇಳಿದ ಹಾಗೆ, ಇದೊಮದು ರಾಜಕೀಯ ಇಚ್ಚಾ ಶಕ್ತಿಯನ್ನು ಹೊಂದಿರುವ ಆಯವ್ಯಯ ಈ ಆಯವ್ಯಯವನ್ನು ನಾನು ಸ್ವಾಗತ ಮಾಡುತ್ತೇನೆ ಈ ಆಯವ್ಯಯ ಈ ರಾಜ್ಯದ ಬಡವರ ವಿಶೇಷವಾಗಿ ರೈತರ ಹಿತವನ್ನು ಕಾಪಾಡಲಿಕ್ಕೆ ನಾಂದಿಯಾಗಲಿ ಹೇಲಿ ಮತ್ತೊಮ್ಮೆ ಪ್ರಾರ್ಥನೆ ಮಾಡುತ್ತಾ, ನಾನು ಮೊದಲೇ ವಿನಂತಿ ಮಾಡಿದಹಾಗೆ, ಎಲ್ಲ ರಯತರಿಗೂ ಕೂಡ ೨೫ ಸಾವಿರ ರೂಪಾಯಿಗಳವರಿಗೆ ರಿಯಾಯಿತಿಯನ್ನು ಒದಗಿಸಿಕೊಡಬೇಕೆಂದು ಹೇಳಿ ನಾನು ಮತ್ತೊಮ್ಮೆ ತಮ್ಮ ಮೂಲಕ ವಿನಂತಿ ಮಾಡಿಕೊಂಡು ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೆನೆ

ಶ್ರೀ ಐವಾನ್ ನಿಗ್ಲಿ ಒಂದೆರಡು ನಿಮಿಷ ಮಾತನಾಡಲು ಅವಕಾಶ ಕೊಡಿ

ಅಧ್ಯಕ್ಷರು ಮಾತನಾಡಲು ಖರ್ಗೆಯವರನ್ನು ಕರೆದಿದೆನೆ, ಕುಳಿತುಕೊಳ್ಳಿ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಮತ್ತು ಅನೇಕ ಹಿರಿಯ ನಾಯಕರು ಬಜೆಟ್ ಮೇಲೆ ಮಾತನಾಡಿದ್ದಾಋುಎ, ಸಿದ್ದರಾಮಯ್ಯನವರು ಕೂಡ ಬಹಳ ದೀರ್ಘವಾಘಿ ಆಯವ್ಯಯದ ಮೇಲೆ ಮಾತನಾಡುತ್ತಾ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ ಬಹುಶಃ ನಾನು ಹೆಚಚಿನ ಕಾಲಾವಕಾಶ ತೆಗೆಉಕೊಳ್ಳದೇ, ಕೆಲವು ವಿಚಾರಗಳನ್ನು ಈ ಸದನದ ಗಮನಕ್ಕೆ ಮತ್ತು ವಿಶೇಷವಾಗಿ ಅರ್ಥ

ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ ಇದು ಯಡಿಯೂರಪ್ಪನವರ ಬಜೆಟ್ ಅಂದರೆ, ಅವರು ಯಾವಾಗಲೂ ಕೂಡ ಮೊದಲಿನಿಂದಲೇ ಈ ಸಮ್ಮಿಶ್ರ ಸರ್ಕಾರದ ಬಜೆಟ್ ಏನಿದೆ, ಈ ಬಜೆಟ್ ಬಗ್ಗೆ ಯಡಿಯೂರಪ್ಪನವರು ಅನೇಕ ಸಾರಿ ಈ ಸದನದ ಹೊರಗಡೆಯೇ ಹೇಳಿದ್ದಾರೆ ಏನೇನು ಮಾಡುತ್ತೇನೆಂದು ಒಳಗಡೆ ಹೇಳುವುದಕ್ಕಿಂತಲೂ ಹೊರಗಡೆ ಒಂದೊಂದು ಸಂದರ್ಭದಲ್ಲಿ, ಒಂದೋಮದು ಸಮಾರಂಭದಲ್ಲಿ ಏನೇನು ಅವರು announce ಮಾಡಿಕೊಳ್ಳುತ್ತಾ ಬಂದರೋ, ಅಂತಿಮವಾಗಿ ಅದನ್ನು ಅವರು ಬಜೆಟ್ ರೂಪದಲ್ಲಿ ಇಲ್ಲಿ ಮಂಡಿಸಿದರು ಅದು ಸುಮಾರು ೧೨೭ ಪುಟಗಳ ಆಯವ್ಯಯವನ್ನು ಮಂಡಿಸಿ, ಅವರ ವಿಚಾರಗಳೇನಿದೆ ಎಂಬುದನ್ನು ವರ್ಷಗಟ್ಟಲೆ ಏನು ಹೇಳಿದ್ದರು ಅದನ್ನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಹಿಮದಿಯಲ್ಲಿ ಒಂದು colloquial language ಇದೆ ಅಂದರೆ ಕೋಳಿ ಕಿಮ್ಮತ್ತು ನಾಲ್ಕಾಣೆ ಆದರೆ, ಮಸಾಲೆ ಕಿಮ್ಮತ್ತು ೧೨ ಆಣೆ, ಹಾಗೆ, ಈ ಬಜೆಟ್ ಆಗಿದೆ

ಶ್ರೀ ಕೆ ಶ್ರೀನಿವಾಸಗೌಡ ಯಡಿಯೂರಪ್ಪನವರಿಗೆ ಮಸಾಲೆ, ಕೋಳಿ ವಿಚಾರವೇನು ಗೊತ್ತಾಗುತ್ತದೆ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಎಲ್ಲ ಗೊತ್ತಿರುತ್ತದೆ ನಮಗೆ ಮೊನ್ನೆ ಊಟ ಹಾಕಿಸಲಿಲ್ಲವೇ? ತಿಳಿದುಕೊಳ್ಳುವುದು ಬೇರೆ ಅವರು ವಿಷಯಗಳನ್ನು ತಿಳಿದುಕೊಂಡಿದ್ದಾರೆ ಅವರಿಗೆ ಗೊತ್ತಿರುತ್ತದೆ ಅದಕ್ಕಾಗಿ, ಇವತ್ತೇನಾಗಿದೆ ಎಂದರೆ development `ಗೆ ಕಡಿಮೆ ಹಣ non-development ಗೆ ಹೆಚ್ಚಿನ ಹಣ ಇಟ್ಟಿದ್ದಾಋುಎ, ಅದಕ್ಕೆ ನಾನು ಆ ಗಾದೆ ಹೇಳಿದೆ ಅಂದರೆ ಅಭಿವೃದ್ಧಿ ಮಾಡಬೇಕೆನ್ನುವ ಇಚ್ಛಾಶಕ್ತಿ ಇದ್ದರೆ ಮಾಡಬೇಕು ಅನೇಕ ಜನ ಹೊಗಳಿದರು ಹೆಗ್ಡೆಯವರು ಹೇಳಿದರು ಎ ಟಿ ರಾಮಸ್ವಾಮಿಯವರಂತೂ ಇತ್ತೀಚೆಗೆ ಬಹುಶಃ ಎಂ ಪಿ ಪ್ರಕಾಶ್‌ರವರಾದ ಮೇಲೆ ಸರ್ಕಾರದ ಪರವಾಗಿ ಅವರೇ ವಕಾಲತ್ತು ವಹಿಸಿಕೊಂಡಿದ್ದಾರೆ `ಎಲ್ಲ ರೀತಿಯಿಂದ ಮಾತನಾಡತಕ್ಕಂಥದ್ದು ಇದೆ

ಅದು ಒಳ್ಳೆಯದಿರಲಿ, ಕೆಟ್ಟದಿರಲಿ, ಹಿಂದೆ ನಾನು ಎಲ್ಲೆದ್ದೆ? ಏನೇನು ಮಂಡಿದ್ದೇನೆ? ಏನು ಮಾತನಾಡಿದ್ದೇನೆ? ಅವರು ಅವೆಲ್ಲ ಮರೆತಿದ್ದಾರೆ

ಅವರೆಲ್ಲಾ ಮರೆತು ಈಗ ಅವರ ಎದುರಗಡೆ ಇರತಕ್ಕಂಥಾದ್ದು ರೇವಣ್ಣ, ದೇವೇಗೌಡರು, ಕುಮಾರಸ್ವಾಮಿ, ಈ ಕಡೆ ನೋಡಿಕೊಂಡು ಮಾತನಾಡುತ್ತಾರೆ ಮಾತನಾಡಲಿ ಪರವಾಗಿಲ್ಲ ನಾನೇನು ಅದಕ್ಕೆ ವಿರೋಧ ಮಾಡುತ್ತಿಲ್ಲ ಏಕೆಂದರೆಮ ಅವರು ಆ ಪಾರ್ಟಿಗೆ ಹೋಗಿದ್ದಾರೆ ನಾವು ಅನ್ಯಾಯ ಮಾಡಿದ್ದವೆಉ, ಅದಕ್ಕಾಗಿ ಅವರು ಆ ಕಡೆಗೆ ಹೋದರು ಅದಕ್ಕೆ ಅವರು ಮಾತನಾಡಿದ್ದಾಋುಎ ಅವರು ಮಾತನಾಡಿದ್ದಕ್ಕೆ ಸಂತೋಷ ನಾವು ಇವತ್ತು ತಿಳಿದುಕೊಳ್ಳಬೇಕಲ್ಲ ಯಾವ್ಯಾವ ಸೆಕ್ಟರರ್ ನಲ್ಲಿ ನೀವು ಹಣವನ್ನು ಹೆಚ್ಚಿನ ರೀತಿಯಲ್ಲಿ ಹೂಡಿದಿರಿ? ಮತ್ತು ಅದರಿಮದ ಈ ರಾಜ್ಯಕ್ಕೆ ಏನು ಲಾಭ? ಉಳಿದಂಧ ಹಣ ನೀವೇನು ಬೇರೆ ಕಡೆಗೆ ಹಂಚುತ್ತಿದದೀರಿ, ಅದು ಬಹಳಷ್ಟು ಜನ ಸ್ವಾಭಾವಿಕವಾಗಿ ಖುಷಿ ಪಉತ್ತಾಋುಎ ಏಕೆಮದರೆ, ಈಗ ನಾನೊಂದು ಮರಕ್ಕೆ ಕೇಳಿದರೆ ನನಗೊಂದು ೫೦ ಲಕ್ಷ ಇನ್ನೊಬ್ಬರು ಇನ್ನೊಂದು ಮರಕ್ಕೆ ಕೇಳಿದರು ಅವರಿಗೊಂದು ಎರಡು ಕೋಟಿ ಇನ್ನೊಬ್ಬರು ಕೇಳಿದರು ಅವರಿಗೆ ಹತ್ತು ಕೋಟಿ ಇನ್ನೊಬ್ಬರು ಒಂದು ರಸ್ತೆ ಕೇಳಿದರು ಅಂದರೆ, ಈ PWD- Annexure ನಲ್ಲಿ ಬರಬೇಕಾದಂಧ ಎಲ್ಲಾ ಕೆಲಸಗಳು ಈ ಬಜೆಟ್ ನಲ್ಲಿ ಬಂಗಿವೆ ಯಾವಾಗಲೂ ಕೂಡ ಯಾರೂ ಇದನ್ನು ಹೇಳುತ್ತಿರಲಿಲ್ಲ ೫೦ ಲಕ್ಷ, ೧೦ ಲಕ್ಷ, ೧ ಕೋಟಿ, ಮೆನ್ ಷನ್ ಆಗಿದೆ ಸಾರಾಸಗಟವಾಗಿ ಎಂಡೋಮೆಂಟ್ ಹೆಡ್‌ನಲ್ಲಿ ೫೦ ಕೋಟಿನೋ ೨೦ ಕೋಟಿನೋ ಹಣ ಇಡುವವರು ಆ ಎಂಡೋಮೆಂಟ್ ಮುಖಾಂತರ ಸಂಬಂಧಪಟ್ಟ ಗುಡಿ – ಗುಂಡಾರಗಳಿಗೆ ನೀವೇನು ಮಾಡಬೇಕಾಗಿತ್ತೊ ಅದನ್ನು ಮಾಡುತ್ತಿದ್ದರು ಇವತ್ತೇನು ಮಾಡಿದ್ದೀರಿ? ಖುಷಿ ಪಡಿಸುವುದಕ್ಕೆ ಇದರಲ್ಲಿ ಪ್ರಿಂಟ್ ಮಾಡಿ ಹಂಚುವುದು ಇದರಲ್ಲಿ ಇಷ್ಟು ಕೊಟ್ಟಿದ್ದೇನೆಂದು ಹೇಳಿ ಬಿಡುವುದು ಬಜೆಟ್ ನಲ್ಲಿ ಕೊಟ್ಟಿಲ್ಲವೆ? ನಾನು ಬಜೆಟ್‌ನಲ್ಲಿ ಓದಿಲ್ಲವೆ? ನಿಮಗಾಗಿ ಮಾಡಿದ್ದೇನೆಂದು ಹೇಳುವುದು ಅಂದರೆ, ಜಾತಿಗಳನ್ನೂ ಒಡೆದು ಆಳುವುದು, ಅಂದರೆ ವರ್ಗ ಇದ್ದಿದ್ದಕ್ಕೆ ಆ ವರ್ಗದಲ್ಲಿ ಜಾತಿಗಳನ್ನು ತಂದು

ಅದಕ್ಕೆ ಬೇರೆ ಬೇರೆ ರೀತಿಯಿಂದ ಹಣ ಕೊಟ್ಟು, ನೋಡಿ ನಾನು ಕೊಟ್ಟಿದ್ದೆನೆ ಹಿಂದೆ ಯಾರು ಕೊಟ್ಟಿದ್ದೇನೆ ಹಿಂದೆ ಯಾರು ಕೊಟ್ಟಿದ್ದರು ಎಂದು ಹೇಳುವುದು ಅಥವಾ ಒಂದು ಕ್ಲಾಸ್ ರೂಪದಲ್ಲಿ ಅವರೊಂದು ರಾಜಕೀಯವಾಗಿ ಶಕ್ತಿ ಬೆಳೆಯುತ್ತಿದ್ದರೆಂದರೆ, ಆ ಶಕ್ತಿಯನ್ನು ಒಡೆಯುವುದಕ್ಕೋಸ್ಕರ ಈ ಕುತಂತ್ರವೂ ಕೂಡ ನಡೆದಿದೆ ಅದನ್ನು ಕಲ್ಯಾಣ ಯೋಜನೆ ಎನ್ನುವ ರೀತಿಯಲ್ಲಿ ಮಾಡಿಲ್ಲ ಆ ಒಂದು ವರ್ಗಗಳಿಗೆ ಒಡೆಯಬೇಕೆನ್ನುವ ರೀತಿಯಿಂದ ಇವತ್ತು ಈ ಕೆಲಸಗಳನ್ನು ಮಾಡಿದರು ಎರಡನೇಯದಾಗಿ ಏನು ಮಾಡಿದ್ದಾರೆ, ಎಲ್ಲಿ ಕೃಷಿ ರಂಗದಲ್ಲಿ ನೀರಾವರಿಯಲ್ಲಿ ಮತ್ತು ಪವರ್ ಸೆಕ್ಟಾರ್ ನಲ್ಲಿ ಇಂಥ ಕೋರ್ ಸೆಕ್ಟಾರ್ ಏನು ಇವೆ ಎಲ್ಲಿ ನಿಜವಾಗಿ ರೈತರ ಅಭಿವೃದ್ಧಿಯಾಗುತ್ತದೆ ಅಥವಾ ಬಡವರಿಗೆ ನಿಜವಾಗಲೂ ಸಹಾಯವಾಗುತ್ತದೆ, ಆಶ್ರಯ ಮನೆಗಾಗಲಿ, ಹಾಸ್ಟೆಲ್ ಗಾಗಲಿ, ಹೆಚ್ಚಿನ ರೂಪದಲ್ಲಿ ವಿದ್ಯಾರ್ಥಿ ವೇತನ ಕೊಡತಕ್ಕಂಥದ್ದಾಗಲಿ, ಅವರ ಬಾಕಿಯನ್ನು ಸಾರಸಗಟಾಗಿ ತುಂಬಿ ಟೆಕ್ನಿಕಲ್ ಸ್ಕೂಲ್ಸ್‌ನಲ್ಲಿ ಬ್ಯಾಕ್ ವರ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಕ್ಯಾಸ್ಟ್ ವಿದ್ಯಾರ್ಥಿಗಳಿಗೆ ಅನೇಕ ಕಡೆ ಪರೀಕ್ಷೆಗಳಿಗೆ ಕೂರಿಸದೆ ಖಾಸಗಿ ಸಂಸ್ಥೆಗಳು ಏನು ಮಾಡುತ್ತಿದ್ದಾರೆ ಅದನ್ನು ತಪ್ಪಿಸತಕ್ಕಂಥ ವ್ಯವಸ್ಥೆ ಮಾಡಿ ಹಣ ಕೊಡತಕ್ಕಂಥದ್ದಾಗಲಿ, ಆ ಕಡೆಗೆ ಹೆಚ್ಚಿನ ಗಮನವಿಲ್ಲ ಗಮನ ಯಾವುದರ ಕಡೆಗಿದೆ? ವಿಶ್ವವಿದ್ಯಾಲಯಗಳಲ್ಲಿ ಒಂದು ಪೀಠ ಮಾಡುವುದು ಆ ಪೀಠ ಮಾಡುವುದರಿಂದ ಆ ಜಾತಿಯ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆಯೆ? ಮಾಡಬೇಕು, ಮಾಡಬಾರದೆಂದು ಇಲ್ಲ ಅವಶ್ಯಕತೆ ಇದ್ದರೆ ಮಾಡಿ ಮೊದಲು ಯಾವುದಕ್ಕೆ ಆದ್ಯತೆ ಕೊಡಬೇಕೆಂದು ತಿಳಿದುಕೊಂಡು ನೀವು ಹೆಜ್ಜೆ ಇಟ್ಟರೆ ನಿಜವಾಗಲೂ ನೀಉವ ಅರ್ಥಸಚಿವರಾಗಿ ಪ್ರಮಾಣಿಕವಾಗಿ ಈ ರಾಜ್ಯದ ಬಗ್ಗೆ ಚಿಂತನೆ ಮಾಡುತ್ತಿದ್ದೀರೆಂದು ನಾನು ಹೇಳಬಹುದು ನಾನೊಂದು ವಿಷಯಕ್ಕೆ ನೇರವಾಗಿ ಬರುತ್ತೇನೆ ಇಲ್ಲಿಯವರೆಗೆ ಬಹಳ ವಾದ – ವಿವಾದ ನಡೆಯಿತು ಅದರಲ್ಲಿ ಪದೇ ಪದೇ ರೇವಣ್ಣನವರು ಎದು ಕೇಳಿದ್ದೇ ಕೇಳಿದ್ದು, ಹೇಳಿದ್ದೇ ಹೇಳಿದ್ದು ಮತ್ತು ಅದರಲ್ಲಿ ಯಡಿಯೂರಪ್ಪನವರು

ಕೂಡ ಸ್ವಲ್ಪ ಹೆಚ್ಚು ಕಡಿಮೆ ಆವೇಶ ಬಂದು ಹೇಳುತ್ತಿದ್ದರು ಆದರೆ, ಮೊದಲಿನಷ್ಟು ಸಿಟ್ಟು ಈಗ ಇಲ್ಲ ಈಗೇನಾಗಿದೆ ಎಂದರೆ, ಅರ್ಥ ಸಚಿವರಾದ ಮೇಲೆ ಅಧಿಕಾರ ಬಂದ ಮೇಲೆ ಸ್ವಲ್ಪ ಸಿಟ್ಟು ಕಡಿಮೆಯಾಗಿದೆ ಇನ್ನು ಆ ಗುರಿ ಮುಟ್ಟುವವರಿಗೆ ಆ ಸಿಟ್ಟು ಕಡಿಮೆಯಾಗುತ್ತಾ ಹೋಗುತ್ತದೆ ಗುರು ಮುಟ್ಟಿದ ಮೇಲೆ ಮತ್ತೇನ್ಮಾಡುತ್ತಾರೆ ಗೊತ್ತಿಲ್ಲ ಯಾವ ಅವತಾರ ತಾಳೊತ್ತಾರೋ ಗೊತ್ತಿಲ್ಲ ಆದರೆ, ಅವರು ಇಲಿ ವಿರೋಧ ಪಕ್ಷದಲ್ಲಿದ್ದಾಗ ಗೊತ್ತಲ್ಲ, ಈ ರೈತರ ಮಗ, ರೈತರಿಗಾಗಿ ಏನು ಮಾಡಿದಿರಿ? ಹಾಗೆ ಮಾಡಿದರಿ, ಎಲ್ಲಾ ಲೂಟಿ ಮಾಡಿದ್ದೀರಿ, ಆ ಬಜೆಟ್ ನೂರು ಕೋಟಿ ಇದ್ದರೆ ಅವರು ಯಾವಾಗಲೂ ಇದರಲ್ಲಿ ಸಾವಿರ ಕೋಟಿ ಅನ್ಯಾಯವಾಗಿದೆ, ಸಾವರಿ ಕೋಟಿ ಅವ್ಯವಹಾರವಾಗಿದೆ ಎಂದು ಹೇಳುತ್ತಿದ್ದರು ಇಂಥ ಮಾತುಗಳನ್ನು ನೀವೆಲ್ಲಾ ಕೇಳಿದ್ದೀರಿ ಬೇಕಾಧರೆ ಕಡತ ತರಿಸಿ ನೋಡಿದರೆ ತಮಗೆ ಗೊತ್ತಾಗುತ್ತದೆ ನೀರಾವರೆ ಯೋಜನೆಯ ಬಗ್ಗೆ ಹೇಳುತ್ತೇನೆ ಏಕೆಂದರೆ, ಅವರು ಎದ್ದಾಗ ಪದೇ ಪದೇ ಹಿಂದಿನ ಸರ್ಕಾರಗಳು ಏನು ಮಾಡಿದವು? ರಾಮಸ್ವಾಮಿಯವರೇ ನೀವು ಕೇಳಬೇಕು ಹೆಗ್ಡಯವರು ಎಲ್ಲಿಗೆ ಹೋದರೋ ಗೊತ್ತಿಲ್ಲ ನೀರಾವರಿ ಯೋಜನೆಯಲ್ಲಿ ೨೦೦೧ ರಲ್ಲಿ ೩೯.೫೮% ಪ್ಲಾನ್ ಔಟ್ ಲೈನ್ ನೀರಾವರಿಗೆ ಇಟ್ಟಿದ್ದರು ೨೦೦೨-೦೩ ರಲ್ಲಿ ೩೧.೯೧%, ೨೦೦೩-೦೪ ರಲ್ಲಿ ೩೨,೪೧% ೨೦೦೪-೦೫ರಲ್ಲಿ ೩೧% ಅಂದರೆ ಅಬೌ ೩೦% ಇರಿಗೇಷನ್‌ಗೆ ಅಲೋಕೇಷನ್ ನಂತರ ಏನಾಯಿತು, ಸಇದ್ದರಾಮಯ್ಯನವರು ಬಂದ ಮೇಲೆ ಅದು ೨೬% ಗೆ ಬಂತು ಪುನಃ ಅವರು ಅದನ್ನು ಸುಧಾರಿಸಿಕೊಂಡರು ಏಕೆಂದರೆ ಆಗ ನೀರಾವರಿ ಸಚಿವ ನಾನೇ ಆಗಿದ್ದೆ ನಾನೂ ಕೂಡ ಅವರಿಗೆ ಅನೇಕ ಸಾರಿ ಹೇಳುತ್ತಿದ್ದೆ ಕೇವಲ ಉಪವಾಸ ಬಿದ್ದು ಉಳಿತಾಯ ಮಾಡಿದರೆ ಆಗುವುದಿಲ್ಲ, ಹಣ ಹೆಚ್ಚಿಗೆ ಕೊಡಬೇಕೆಂದು ಕೇಳಿದ ಮೇಲೆ ನೆಕ್ಸ್ಟ್ ಅವರು ೨೯.೮% ಗೆ ಹೆಚ್ಚಿಗೆ ಮಾಡಿದರು ಅದರ ನೆಕ್ಸ್ಟ್ ಬಜೆಟ್ ಕೂಡ ಅವರೇ ಮಂಡಿಸಿದ್ದರು ಏಕೆಮದರೆ ನೀವು ಫೆಬ್ರುವರಿಯಲ್ಲಿ ಬಂದಿದ್ದು ಆಗ ಅವರು ಆ ಹಣವನ್ನು ಒದಗಿಸಿದ್ದರು, ಆಗ ೨೬% ಗೆ ಬಂತು ಇವರ ಕಾಲದಲ್ಲಿ ಎಷ್ಟು

ಬಂತು ಎಂದರೆ, ಹೋದ ಸಲ ೧೭% ಗೆ ಬಂತು ಅಂದರೆ, ಇದು ರೈತರ ಪರವೇ ಸ್ವಾಮಿ? ೩೧%ನಿಂದ ೩೯%, ೩೨%, ೩೧%, ೩೦%, ನಿಂದ ೧೭% ಗೆ ಬಂದಿದ್ದೀರಲ್ಲಾ ನಾವು ರೈತರ ಪರವಾಗಿ ಇದ್ದೇವೆಂದು ಹೇಳಿಕೊಳ್ಳುತ್ತೀರಿ, ನೀರಾವರಿ ಯಾರಿಗೆ ಆಗುತ್ತದೆ ಸ್ವಾಮಿ? ಏನು ದೊಡ್ಡ ದೊಡ್ಡ ಇಂಡಸ್ಟ್ರೀಗಳಿಗೆ ಅನುಕೂಲವಾಗುತ್ತದೆಯೆ? ಈ ದೇಶದ ರೈತನ ಭೂಮಿಗೆ ತಾನೇ ನಾವು ನೀರಾವರಿಯ ಮೂಲಕ ಖರ್ಚು ಮಾಡುವುದು ಆಧರೆ, ಈ ಹಣ ಇಲ್ಲಿ ಕಡಿಮೆ ಇಟ್ಟು, ಬರಿ ಗುಡಿ ಗುಂಡಾರಗಳಿಗೆ ಕೊಟ್ಟು ಬೆನ್ನು ಚಪ್ಪರಿಸಿಕೊಂಡು ನಾನು ಅದಕ್ಕೆ ಕೊಟ್ಟೆ ಇದಕ್ಕೆ ಕೊಟ್ಟೆ ಸೈಕಲ್ ಮೇಲೆ ಹೋದೆ ಎಂದರೆ ಜನ ಮೆಚ್ಚುತ್ತಾರೆಯೆ? ನಾವು ಹಳ್ಳಿಗಳಿಗೆ ಹೋದರೆ ಜನ ನಮ್ಮನ್ನು ದೊಣ್ಣೆ ತೆಗೆದುಕೊಂಡು ಹೊಡಿಯುತ್ತಾರಂತೆ, ಜನರಿಗೆ ನಾವು ಕೇಳುತ್ತೇವೆ ನಾವು ೩೯% ಹಣ ಇಟ್ಟಿದ್ದೇವು ಇವರು ೧೭% ಹಣ ಇಟ್ಟಿದ್ದಾರೆ ಇವರಿಗೆ ಬಡಿಗೆ ತೆಗೆದುಕೊಂಡು ಹೊಡೆಯುತ್ತೀರೋ ನಮಗೆ ಬಡಿಗೆ ತೆಗೆದುಕೊಂಡು ಹೊಡೆಯುತ್ತೀರೋ? ಎಂದು ಕೇಳುತ್ತೇನೆ ಉತ್ತರ ಕೊಡಿ ಅದನ್ನು ಬಿಟ್ಟು ನಾನು ಹೆಚ್ಚಿಗೆ ಹಣ ಇಟ್ಟಿದ್ದೇನೆ, ಸರಿಯಾಗಿ ಓದಿ ಎಂದು ಹೇಳುತ್ತೀರಿ ನಾನು ಓದುತ್ತೇನೆ ಸ್ವಾಮಿ ೨೦೦೧ ರಿಂದ ಇಲ್ಲಿಯವರೆಗೆ ಓದುತ್ತಿದ್ದೇನೆ ಇದರ ಜೊತೆಯಲ್ಲಿ ಪವರ್ ಸೆಕ್ಟಾರ್ ನಲ್ಲಿ ಕೂಡ ತಾವು ಇದನ್ನು ತೆಗೆದುಕೊಂಡರೆ, ತಾವು ಈಗ ೧೦% ಗೆ ಬಂದಿದ್ದೀರಿ ಎನರ್ಜಿ ೨೦೦೫-೦೬ನಲ್ಲಿ ೧೩.೬೮%, ೨೦೦೬-೦೭ನಲ್ಲಿ ೧೦.೫೯%, ೨೦೦೭-೦೮ ನಲ್ಲಿ ೧೧% ಇಟ್ಟಿದ್ದೀರಿ ಅಂದರೆ ಹೋದ ಸಲವೂ ಕಡಿಮೆ, ಈ ಸಲವೂ ಕಡಿಮೆ ಅಂದರೆ, ಸಿದ್ದರಾಮಯ್ಯನವರ ಕಾಲಕ್ಕೆ ಕೊಟ್ಟಂಥ ಹಣಕ್ಕೂ ಮತ್ತು ಈಗ ಕೊಟ್ಟಿರುವ ಹಣದ ಪರ್ಸೆಂಟೇಜ್‌ಗೆ ಹೋಲಿಸಿದರೆ ನೀವು ೨.೩% ಕಡಿಮೆ ಇದ್ದೀರಿ ಹೊರತಾಗಿ ಹೆಚ್ಚಿಗೆ ಇಲ್ಲ ವಿದ್ಯುಚ್ಛಕ್ತಿ ಕೊರತೆ ಇದೆ ಎಂದು ಗೊತ್ತು ಇನ್ನು ನಮಗೆ ಸುಮಾರು ೭೦೦೦ ಮೆ.ವ್ಯಾ ನಷ್ಟು ಷಾರ್ಟೇಜ್ ಇದೆ ಉತ್ಪನ್ನ ಮಾಡುವ ಶಕ್ತಿ ಇದ್ದರೂ ಕೂಡ ಅದಕ್ಕೆ ನೀವು ಹಣ ಇಟ್ಟಿಲ್ಲ ಮೇಲಿಂದ ಹೇಳುತ್ತಿದ್ದೀರಿ ಸಾಕಷ್ಟು ಹಣ ಅಭಿವೃದ್ಧಿಗಾಗಿ ಇಟ್ಟಿದ್ದೇವೆಂದು ಹೇಳುತ್ತೀರಿ ಮತ್ತೆ ನಿಮ್ಮದು ರಂಗ ಯಾವುದು ಎಂದರೆ, "ಅಭಿವೃದ್ಧಿ ರಂಗ"

ಅಭಿವೃದ್ಧಿ ರಂಗದವರು ಕೋರ್ ಸೆಕ್ಟಾರ್‌ಗೆ ಮಾಡಿರುವ ಅಲೋಕೇಷನ್ ಎಷ್ಟು ಎಮದರೆ, ಹಿಂದಿನ ಸರ್ಕಾರಕ್ಕಿಂತಲೂ ೫%, ೩%, ೧೦%,ಕಡಿಮೆ

ಆದ್ದರಿಂದ, ಇವರು ರೈತರ ಮಕ್ಕಳೆ? ಇವರು ರೈತರ ಬಗ್ಗೆ ಚಿಂತನೆ ಮಾಡುತ್ತೇವೆಂದು ಹೇಳಿದ್ದೇ ಹೇಳಿದ್ದು, ಮತ್ತೆ ಭಾಷಣ ಮಾಡಿದ್ದೇ ಮಾಡಿದ್ದು ಇದು ಏನಾಗಿದೆಯೆಮದರೆ, ಹಿಟ್ಲರ್ ಕಾಲದಲ್ಲಿ ಗೋಬೆಲ್ಸ್ ಎಂಬ ಇನ್ ಫರ್ಮೇಶನ್ ಮಿನಿಸ್ಟರ್ ಇದ್ದರು ಆ ಗೋಬೆಲ್ಸ್‌ನ ಥಿಯರಿ ಇವತ್ತಿನ ದಿವಸ ಯಾರಾದರೂ ಉಪಯೋಗ ಮಾಡುತ್ತಿದ್ದರಿ ಮತ್ತು ನಿಜವಾಗಿಯೂ ಅದನ್ನು ಅನುಷ್ಠಾನಕ್ಕೆ ತರುತ್ತಿದ್ದರೆ, ಅದು ಬಿಜೆಪಿ ನಾಯಕರು, ಅದರಲ್ಲಿ ವಿಶೇಷವಾಗಿ ಮಾನ್ಯ ಯಡಿಯೂರಪ್ಪನವರು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಅಂದರೆ, ಇದು ನನ್ನ ಬಜೆಟ್, ನನ್ನ ಹಣ ಎಂದು ಹೇಳುತ್ತಿದ್ದಾರೆ

ಶ್ರೀ ಅರಗ ಜ್ಞಾನೇಂದ್ರ ಇದರಲ್ಲಿ ಕಾಂಗ್ರೆಸ್‌ನವರನ್ನು ಮೀರಿಸುವುದಕ್ಕೆ ಸಾದ್ಯವಿಲ್ಲ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಇದಕ್ಕೆ ಸಂಬಂಧಪಟ್ಟಂಥ ಡಾಕ್ಯುಮೆಂಟ್ ಗಳನ್ನು ಕೊಡುತ್ತೇನೆ

ಶ್ರೀ ಅರಗ ಜ್ಞಾನೇದ್ರ ಇಲ್ಲ, ಈಗ ಕೇಂದ್ರ ಇರಲಿ ಅಥವಾ ರಾಜ್ಯವಿರಲಿ ಮಿಡಯಾಗಳನ್ನು ಮ್ಯಾನೇಜ್ ಮಾಡತಕ್ಕಂಥದು ಹೇಗೆ ಎಂಬುದು ಮತ್ತೆ ಈ ರೀತಿಯ ಸುಳ್ಳುಗಳನ್ನು ಸಾವಿರ ಸಾರಿ ಹೇಳುವುದು ಹೇಗೆ ಎಂಬುದರ ಬಗ್ಗೆ ನಿಮ್ಮನ್ನು ಮೀರಿಸುವುದಕ್ಕೆ ಆಗುವುದಿಲ್ಲ

(ಗೊಂದಲ)

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ನಾನು ೫ ವರ್ಷಗಳ ಅಂಕಿ–ಅಂಶಗಳನ್ನು ಇಟ್ಟುಕೊಂಡು ಮಾತನಾಡುತ್ತಿದ್ದೇನೆ

(ಗೊಂದಲ)

ಶ್ರೀ ಎಂ ಟಿ ಬಿ ನಾಗರಾಜ್ ಮಾನ್ಯ ಅರಗ ಜ್ಞಾನೇಂದ್ರನವರೆ, ತಾವು ಏನಾದರು ಆದಾರ ಇಟ್ಟುಕೊಂಡು ಮಾತನಾಡಿ ನಿಮ್ಮ ಹತ್ತಿರ ಯಾವುದೇ ಮಾಹಿತಿ ಇಲ್ಲ, ಸುಮ್ಮನೆ ಏತಕ್ಕೆ ಮಾತನಾಡುತ್ತಿದ್ದೀರಿ?

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ ಮಾನ್ಯ ಅರಗ ಜ್ಞಾನೇಂದ್ರರವರೆ, ಹಿಟ್ಲರ್ನ ಅಭಿಮಾನಿದಳು ಯಾರೆಂದು ನಿಮಗೆ ಗೊತ್ತಿದೆಯಲ್ಲವೆ? ನಿಮ್ಮ ಗುರೂಜಿಗಳೇ ಹಿಟ್ಲರ್ ನ ಅಭಿಮಾನಿಗಳು ಅದೇ ನಿಮಗೆಲ್ಲ ಇರತಕ್ಕಂಥ ಒಂದು ವ್ಯವಸ್ಥೆ ಆ ಒಂದು ವ್ಯವಸ್ಥೆಯಲ್ಲಿ ತಾವುಗಳು ಬಂದಿದ್ದೀರಿ

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ ಹಿಟ್ಲರ್‌ನ ಆದರ್ಶವನ್ನು ನೀವು ಪಾಲಿಸಿದ್ದೀರಿ

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ ನೀವು ಕಾಂಗ್ರೆಸ್ ಮೇಲೆ ಈ ರೀತಿ ಆರೋಪ ಮಾಡಬೇಡಿ ದಯವಿಟ್ಟು ತಾವು ಸುಮ್ಮನೆ ಕುಳಿತುಕೊಳ್ಳಬೇಕು

ಶ್ರೀ ಅರಗ ಜ್ಞಾನೇಂದ್ರ ಆಯಿತು, ಇದಕ್ಕೆ ನೀವೇ ಹಿರಿಯಣ್ಣರಾಗಿದ್ದೀರಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮೀಡಿಯಾವನ್ನು ಮ್ಯಾನೇಜ್ ಮಾಡುತ್ತಿದ್ದೀರೆಂದು ಮಾನ್ಯ ಅರಗ ಜ್ಞಾನೇಂದ್ರರವರು ಒಂದು ಮಾತನ್ನು ಹೇಳಿದರು ಆದ್ದರಿಂದ ಯಾವರೀತಿ ಮ್ಯಾನೇಜ್ ಮೆಂಟ್

(ಗೊಂದಲ)

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಅದಕ್ಕೆ ಮೀಡಿಯಾವರು ಜವಾಬ್ದಾರಿಯೇ ?

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ ಇಲ್ಲ ಆದರೆ, ಅವರಿಗೆ ಫೋರ್ಸಿಬಲ್ ಆಗಿ ಮೂಡಿಸಿದರು

ಶೀ ದಿನೇಶ್ ಗುಂಡುರಾವ್ ಮಹಾತ್ಮ ಗಾಂಧೀಜಿಯವರನ್ನು ಕೊಂದಂಥ ಜನ ನೀವು

(ಗೊಂದಲ)

ಅಧ್ಯಕ್ಷರು ಮಾನ್ಯ ಖರ್ಗೆಯವರು ಮಾತನಾಡುವುದಕ್ಕೆ ಅವಕಾಶ ಕೊಡಿ ಸುಮ್ಮನೆ ಯಾವ್ಯಾವುದೊ ವಿಚಾರ ತಂದು ಮಾತನಾಡುತ್ತೀರಿ

(ಗೊಂದಲ)

ಶ್ರೀ ಎ ಎಸ್ ಬಸವರಾಜ್ ಮಾನ್ಯ ಅಧ್ಯಕ್ಷರೆ, ಸದನ ಎಲ್ಲೆಲ್ಲಿಗೋ ಹೋಗುತ್ತಿದೆ ನೋಡಿ ಮಹಾತ್ಮ ಗಾಂಧೀಜಿಯವರನ್ನು ಕೊಲೆ ಮಾಡಿರತಕ್ಕಂಥ ವಿಷಯವನ್ನು ಬಜೆಟ್ ಮೇಲೆ ಮಾತನಾಡುವಾಗ ಹೇಳುವುದು ಒಳ್ಳೆಯದಲ್ಲ

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ ನಂಬರ್ ೧ ಮುಖ್ಯ ಮಂತ್ರಿ ಎಂದು ಹೇಗೆ ಬಂತು?

ಅಧ್ಯಕ್ಷರು ಆಯಿತು ಬಿಡಿ, ಅವರು ಮಾತನಾಡಲಿ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಅರಗ ಜ್ಞಾನೇಂದ್ರರವರು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುವಾಗ ಅದೇನ್ನಿದ್ದರೂ ನಿಮಗೆ ಅನ್ವಯಿಸುತ್ತದೆ ಎಂಬ

ರೀತಿಯಲ್ಲಿ ಒಂದು ಮಾತನ್ನು ಹೇಳಿದ್ದಾರೆ ಸನ್ಮಾನ್ಯ ಖರ್ಗೆಯವರು ಅಂಕಿ – ಅಂಶಗಳ ಆಧಾರ ಮೇಲೆ ಹೇಳಿದ್ದಾರೆ ಅಂದರೆ, ಇಂಥ ವರ್ಷಗಳಲ್ಲಿ ಇಷ್ಟಿಷ್ಟು ಆಗಿದೆ ಎಂದು ಹೇಳುತ್ತಾ ನೀವು ಈ ರೀತಿಯಾಗಿ ಮಾಡಿದ್ದೀರೆಂದು ಉದಾಹರಣೆಯನ್ನು ಹೇಳಿದರು ಮಾನ್ಯ ಖರ್ಗೆಯವರು ಹೇಳಿರತಕ್ಕಂಥ ಅಂಕಿ–ಅಂಶಗಳನ್ನು ತಾವು ಪ್ರಿವಿಲೇಜ್ ಗೆ ನೋಟೀಸ್ ಕೊಡಿ ಅದಕ್ಕೆ ಅವರು ಬಾಧ್ಯವಾಗಿ ಸಭೆಗೆ ಉತ್ತರ ಹೇಳಬೇಕಾಗಿದೆ ಏನೋ ಹೇಳಬೇಕೆಂದು ಹೇಳುವುದಿಲ್ಲ ಏಕೆಂದರೆ, ಮಾತನಾಡುವುದೆಲ್ಲಾ ರೆಕಾರ್ಡ್‌ಗೆ ಹೋಗುತ್ತದೆ ಅವರು ಅಪಾದನೆಗಳನ್ನು ಅಂಕಿ–ಅಂಶಗಳನ್ನು ಆಧರಿಸಿ ಹೇಳಿದ್ದಾರೆ ಆದ್ದರಿಂದ ಆ ಒಂದು ಅಂಕಿ ಅಂಶಗಳನ್ನು ತಾವು ನಿರಕರಿಸುವುದಾದರೆ, ತಾವು ಹೇಳಿರತಕ್ಕಂಥದು ಸತ್ಯಕ್ಕೆ ದೂರವಾದ ಅಂಶ ಅಂಕಿ ಅಂಶಗಳು ಈ ರೀತಿ ಇವೆ ಎಂದು ತಾವು ಪ್ರಿವಿಲೇಜ್ ಮೂವ್ ಮಾಡಿ

ಶ್ರೀ ಅರಗ ಜ್ಞಾನೇಂದ್ರ ' ಸುಳ್ಳು ಹೇಳಿದ್ದಾರೆಂದು ಅವರು ಗೋಬೆಲ್ಸ್ ನನ್ನು ಉದಾಹರಣೆ ಕೊಟ್ಟು ಹೇಳಿದ್ದಕ್ಕೆ ನಾನು ಹೇಳಿದ್ದೇನೆ ಹೊರತು ಬೇರೇನು ಇಲ್ಲ ಅವರೇ ಹಿರಿಯಣ್ಣರೆಂದು ನಾನು ಹೇಳಿದ್ದೇನೆ

ಡಾ ವಿ ಎಸ್ ಆಚಾರ್ಯ ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ರಮೇಶ್ ಕುಮಾರ್ ರವರು ಅಂಕಿ ಅಂಶಗಳ ಸಮೇತ ಸ್ವಲ್ಪ ಹೇಳಿ ಎಂದು ಕೇಳಿದ್ದರು ನೀರಾವರಿ ಬಗ್ಗೆ ಬಹಳ ಆಕ್ಷೇಪಣೆಗಳನ್ನು ಇವತ್ತಿನ ದಿವಸ ನಮ್ಮ ಮಾಜಿ ಉಪ ಮುಖ್ಯ ಮಂತ್ರಿಗಳು ಪ್ರಸ್ತಾಪಮಾಡಿದ್ದಾರೆ ಕಳೆದ ವರ್ಷ ನೀರಾವರಿ ವಲಯಕ್ಕೆ ೪೩೮೦ ಕೋಟಿ ರೂಪಾಯಿಗಳೆಂದು ತೋರಿಸಿದ್ದು ನಿಜ ಇದರಲ್ಲಿ ಕಾಮಗಾರಿಗಾಗಿ ೨೭೩೨ ಕೋಟಿ ರೂಪಾಯಿಗಳು, ಉಳಿದಂಥದು ಬಡ್ಡಿ ಮತ್ತು ಅಸಲು ತೀರುವಳಿಯ ಬಗ್ಗೆ ಕೂಡಿಸಿ ಹೇಳತಕ್ಕಂಥ ಅಕೌಂಟಿಂಗ್ ಪದ್ಧತಿಯಾಗಿತ್ತು ಈ ಬಾರಿ ಅದು ೩೧೪೫ ಕೋಟಿ ರೂಪಾಯಿಗೆ ಬಂದಿದೆ ೪೨೮೦ ರಿಂದ ೩೧೪೫ ಕೋಟಿಗೆ ಬಂದಿದ್ದರಿಂದ ಕಡಿಮೆಯಾಗಿದೆ ಎಂದು ಹೇಳುತ್ತಿದ್ದೀರಿ ಆದರೆ, ೩೧೪೫ ಕೋಟಿ ರೂಪಾಯಿಗಳು ನಿಜವಾದಂದ

ಕಾಮಗಾರಿಗಳಿಗೆ ಸೇರಿದೆ ಇದರಲ್ಲಿ ಬಡ್ಡಿ ಸೇರಿಲ್ಲ, ಇದು ಪ್ರತ್ಯೇಕವಾಗಿದೆ ಆದ್ದರಿಂದ ಕಳೆದ ವರ್ಷದ ೨೭೩೨ ಕೋಟಿಗಿಂಧ ೪೧೩ ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಈ ಸಾರಿ ಖರ್ಚು ಮಾಡುತ್ತಿದ್ದೇವೆ

ಶ್ರೀ ಸಿದ್ದರಾಮಯ್ಯ ಕಳೆದ ವರ್ಷ ನಿಮ್ಮ ಪ್ಲಾನ್ ಸೈಜ್ ಎಷ್ಟಿತ್ತು?

ಡಾ ವಿ ಎಸ್ ಆಚಾರ್ಯ ೧೬ ಸಾವಿರ ಕೋಟಿ ರೂಪಾಯಿ

ಶ್ರೀ ಸಿದ್ದರಾಮಯ್ಯ ಈ ಸಾರಿ ಎಷ್ಟಿದೆ?

ಡಾ ವಿ ಎಸ್ ಆಚಾರ್ಯ ೧೭ ರಿಂದ ಕೋಟಿ ರೂಪಾಯಿ ಇದೆ

ಶ್ರೀ ಸಿದ್ದರಾಮಯ್ಯ ಇದು ಹೆಚ್ಚು ಆಗಬೇಕೊ ಅಥವಾ ಬೇಡವೊ? Inflation ಎಷ್ಟಿದೆ? ಎರಡನೆಯದಾಗಿ, ೩೦೦ ಕೋಟಿ ರೂಪಾಯಿಗಳನ್ನು ನಂಜುಂಡಪ್ಪ ವರದಿಗೆ ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ, ಈ ಹಣವನ್ನು ಎಲ್ಲಿಟ್ಟಿದ್ದೀರಿ? ಈ ಹಣವನ್ನು ತಾವು ಅವರೊಳಗೆಯೆ ಇಟ್ಟಿದ್ದೀರಿ

ಡಾ ವಿ ಎಸ್ ಆಚಾರ್ಯ ಇಟ್ಟಿರಬಹುದು

ಶ್ರೀ ಸಿದ್ದರಾಮಯ್ಯ ಹಾಗಾದರೆ, ಆ ಹಣವನ್ನು ಅದರಿಂದ ಕಳೆಯಿರಿ

ಡಾ ವಿ ಎಸ್ ಆಚಾರ್ಯ ಈ ಹಣವನ್ನು ಏತಕ್ಕೆ ಕಳೆಯಬೇಕು

ಶ್ರೀ ಸಿದ್ದರಾಮಯ್ಯ ಅದು ನಂಜುಂಡಪ್ಪವರದಿಯನ್ನು ಅನುಷ್ಠಾನ ಮಾಡುವುದಕ್ಕೆ ಇಟ್ಟಿರತಕ್ಕಂಥ ಅಡಿಷನಲ್ ಹಣ

ಡಾ ವಿ ಎಸ್ ಆಚಾರ್ಯ ಕಳೆದ ವರ್ಷಕ್ಕಿಂತ ಈ ವರ್ಷ ನೀರಾವರಿ ವಲಯಕ್ಕೆ ಕಡಿಮೆ ಹಣ ಆಗಿಲ್ಲ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಆಚಾರ್ಯರವರೆ, ತಾವು ಅನಂತರ ಜಸ್ಟಿಫೈ ಮಾಡಿಕೊಳ್ಳಿ ನಾನು ಹೇಳುವುದನ್ನು ಸ್ವಲ್ಪ ಕೇಳಿ

ಬೇಡ ಎಂದು ಹೇಳುವುದಕ್ಕೆ ಆಗುವುದಿಲ್ಲ ಏಕೆಂದರೆ, ಅಂಕಿ ಅಂಶಗಳನ್ನು ಯಾರಾದರೂ ತೆಗೆದು ಹಾಕುವುದಕ್ಕೆ ಆಗುತ್ತದೆಯೇ? ನೀವು ಇಟ್ಟಿರತಕ್ಕಂಥ ಅಂಕಿ-ಅಂಶಗಳನ್ನು ನಾನು ನಿಮ್ಮ ಮುಂದೆ ಸ್ಪಷ್ಟವಾಗಿಡುತ್ತಿದ್ದೇನೆ ಎರಡನೆಯದಾಗಿ ನಿಮ್ಮ ಬಜೆಟ್‌ನ ಪರ್ಫಾರ್ಮೆನ್ಸ್ ಅಂದರೆ, ನಿಮ್ಮ ಬಜೆಟ್ ನಲ್ಲಿ ಎಲ್ಲಾ ಇಲಾಖೆಗಳ ಹೆಡ್‌ನಲ್ಲಿ ನಮಗೆ ಸಿಕ್ಕಿರತಕ್ಕಂಥ ಮಾಹಿತಿ ಪ್ರಕಾರ ಸೆಪ್ಟಂಬರ್ ಕೊನೆಯವರೆಗೆ ಟೋಟಲ್ ಆಗಿ ೩೯೦೦ ನಷ್ಟು ಖರ್ಚು ಮಾಡಿದ್ದೀರಿ ಮತ್ತೆ ಡಿಸೆಂಬರ್ ಅಂತ್ಯದವರೆಗೆ ೪೩% ಮತ್ತೆ ಫೆಬ್ರವರಿ ಕೊನೆಯವರೆಗೆ ೫೩% ಮತ್ತೆ ಈ ತಿಂಗಳಲ್ಲಿ ಸುಮಾರು ಐದಾರು ಪರ್ಸೆಂಟ್ ಜಾಸ್ತಿಯಾದರೂ ಕೂಡ ೬೦% ಗಿಂಥ ಹೆಚ್ಚಿನ ಹಣವನ್ನು ನೀವು ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ ಇದು ಸೆಪ್ಟಂಬರ್ ತಿಂಗಳಿಂದ ಮಾರ್ಚ ೧೫ರವರೆಗೆ ಕೊಟ್ಟಿರತಕ್ಕಂಥ ನಿಮ್ಮಲ್ಲಿನ ಅಂಕಿ-ಅಂಶಗಳು ಇದನ್ನು ಇಲಾಖೆಯಿಂದ ನಮಗೆ ಒದಗಿಸಿರತಕ್ಕಂಥ ಮಾಹಿತಿ

ಮಾರ್ಚ್ ೧೫ರೊಳಗೆ ೬೦% ಹಣವನ್ನು ಖರ್ಚು ಮಾಡಿದರೆ, ಉಳಿದಂಥ ೪೦% ಹಣವನ್ನು ಯಾವಾಗ ನೀವು ಖರ್ಚು ಮಾಡುತ್ತೀರಿ? ಆ ಡೆವಲಪ್ ಮೆಂಟ್ ಕೆಲಸ ಯಾವಾಗ ಆಗುತ್ತದೆ? ಅದರ ಪರ್ಫಾರ್ಮೆನ್ಸ್ ಏನು? ಇದರ ಬಗ್ಗೆ ಚಿಂತನೆ ಮಾಡಬೇಕಲ್ಲವೆ? ಇಟಿರತಕ್ಕಂಥ ಎಲ್ಲಾ ಹಣವನ್ನು ನಾನು ಬಹಳ ಒಳ್ಳೆಯ ರೀತಿಯಿಂದ ಖರ್ಚು ಮಾಡಿದ್ದೇನೆಂದು ಹೇಳಬಹುದು ಬಜೆಟ್ ನಲ್ಲಿ ಪ್ರಿಂಟ್ ಆಗಿರತಕ್ಕಂಥ ಅಂಕಿ-ಅಂಶಗಳು ಏನೇ ಇರಬಹುದು ಆಧರೆ, ಅದರ ಪರ್ಫಾರ್ಮೆನ್ಸ್ ಏನಿದೆ ಎಂಬುದು ಬಹಳ ಮುಖ್ಯ ಮತ್ತೆ ಪರ್ಫಾರ್ಮೆನ್ಸ್ ಮೇಲೆ ನಿಮ್ಮ ಡೆವಲಪ್ ಮೆಂಟ್ ಆಧಾರಿತವಾಗಿರುತ್ತದೆ ಇದರ ಮೇಲೆ ಎಷ್ಟು ಪರ್ಸೆಂಟ್ ನೀರಾವರಿ ಅಭಿವೃದ್ಧಿಯಾಯಿತೆಂದು ತಿಳಿಯಬಹುದು ನಿಮ್ಮ ಫೈನಾನ್ಸ್ ಷಿಯಲ್ ಟಾರ್ಗೆಟ್ ಜೊತೆಯಲ್ಲಿ ಫಿಸಿಕಲ್ ಟಾರ್ಗೆಟ್‌ನ್ನು ಅಚೀವ್ ಮಾಡಿದರೆ ಮಾತ್ರ ಅದು ನಿಜವಾಗಿ ಅಚೀವ್ ಮಾಡಿದಂತಾಗುತ್ತದೆ ಹೊರತು ಸುಮ್ಮನೆ ಬಜೆಟ್‌ನಲ್ಲಿ ೩೦೦, ೪೦೦ ಕೋಟಿ ರೂಪಾಯಿ ಇಟ್ಟಿದ್ದೇವೆಂದು ನೀವು ಹೇಳಿಕೊಂಡು ಹೋದರೆ ಅದು ಸರಿಯಲ್ಲವೆಂದು ಹೇಳುವುದಕ್ಕೆ

ಇಷ್ಟಪಡುತ್ತೇನೆ ದು ನಿಮಗೂ ಕೂಡ ಗೊತ್ತಿದೆ ಅದರಲ್ಲಿಯೂ ಕೂಡ ನೀವು ವಿಫಲರಾಗಿದೀರಿ Nearly by 40% you are lagging behind on your own assurances and promises ಇದೊಂದು ಕಡೆಯಾದರೆ, ಎರಡನೆಯದಾಗಿ ಹೇಳುವುದಾದರೆ, ಬರಗಾಲಕ್ಕೆ ನೀವು ಹಣವನ್ನು ಒದಗಿಸಿಕೊಡುತ್ತೀರಿ ಇದಕ್ಕಾಗಿ ಒದಗಿಸಿರುವ ಹಣದಲ್ಲಿ ೪೩% ನಷ್ಟು ಖರ್ಚಾಗಿದೆ ಎಂದು ಮಾನ್ಯ ಜಗದೀಶ್ ಶೆಟ್ಟರ್ ರವರು ಸಹ ಹೇಳಿದ್ದಾರೆ ಉಳಿದ ಹಣ ಡಿ ಸಿ ಕಛೇರಿಯಲ್ಲಿ ಅಥವಾ ಪಿ ಡಿ ಅಕೌಂಟ್‌ನಲ್ಲಿರಬಹುದು ಇಲ್ಲದಿದ್ದರೆ ಚೆಕ್ ಬಂದರೆ ಆನರ್ ಮಾಡಬೇಡಿ ಎಂದು ತಾವು ಟ್ರೆಸರಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿರಬಹುದೇನೋ ಗೊತ್ತಿಲ್ಲ ಇವತ್ತಿನದಿವಸ ಸುಮಾರು ೧೩೪ ತಾಲ್ಲೂಕುಗಳಲ್ಲಿ ಭೀಕರವಾದಂಥ ಬರಗಾಲವಿದೆ ಎಂದು ಎಲ್ಲರೂ ಹೇಳುತ್ತಿದ್ದಾರೆ ಮತ್ತೆ ಕುಡಿಯುವುದಕ್ಕೆ ನೀರು ಇಲ್ಲವೆಂದು ಹೇಳುತ್ತಿದ್ದೇವೆ ಆದರೆ, ಇದಕ್ಕೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರಿಸುತ್ತಿದೆ ಎಂಬ ಮಾತನ್ನು ತಾವು ಹೇಳುತ್ತೀರಿ ಇಷ್ಟು ಹೇಳತಕ್ಕಂಥ ನಮ್ಮ ಸರ್ಕಾರ ಇರತಕ್ಕಂಥ ಹಣವನ್ನು ಖರ್ಚು ಮಾಡುವುದಿಲ್ಲವೆಂದರೆ ನಾವು ಈ ಸರ್ಕಾರಕ್ಕೆ ಏನು ಹೇಳಬೇಕು? ಈ ಸರ್ಕಾರ ಕಾಯೋನ್ಮುಖವಾಗಿದೆ ಮತ್ತೆ ಕೆಲಸ ಮಾತುತ್ತಿದೆ ಮತ್ತೆ ಬಹಳ ಚುರುಕಾಗಿದೆ ಎಂದು ಹಾಗೂ ಹಿಂದಿನದಕ್ಕಿಂತಲೂ ಚೆನ್ನಾಗಿದೆ ಎಂದು ಹೇಳಬೇಕೆ? ಹಿಂದೆ ನವು ಬರಗಾಲ ಕಾಮಗಾರಿಗಳನ್ನು ನಿಭಾಯಿಸುವಾಗ ಶಾಸಕರುಗಳನ್ನು ಟಾಸ್ಕ್ ಫೋರ್ಸ್‌ನ ಅಧ್ಯಕ್ಷರನ್ನಾಗಿ ಮಾಡಿ ಮತ್ತು ಪ್ರತಿಯೊಂದು ಜಿಲ್ಲೆಗೆ ಉಸ್ತುವಾರಿ ಕಾರ್ಯದರ್ಶಿಗಳನ್ನು ಮಾಡಿ ೧೫ ದಿವಸಗಳಿಗೊಮ್ಮೆ ಸಭೆ ಮಾಡಿ ನೀವು ಏಕೆ ಹಣ ಖರ್ಚು ಮಾಡಿಲ್ಲವೆಂದು ಮತ್ತು ಏನು ತೊಂದರೆ ಇದೆ ಮತ್ತೆ ಯಾವ್ಯಾವ ಬಾಬ್ತಿಗೆ ಹಣ ಬೇಕೆಂದು ಸಂಬಂಧಪಟ್ಟ ಕಾರ್ಯದರ್ಶಿಗೆ ಕೇಳಿ ಅದಕ್ಕೆ ಹಣವನ್ನು ನಾವು ಕೊಡುತ್ತಿದ್ದೆವು

ಆದರೆ, ಇವತ್ತು ಆ ಹಣ ಕೊಟ್ಟಮೇಲೆ ಇವರು review ಮಾಡುವುದಿಲ್ಲ ಇದನ್ನು ನೋಡುವುದಿಲ್ಲ ಮತ್ತು ಪ್ರತಿಯೊಬ್ಬ ಮಂತ್ರಿಯೂ ಕೂಡ ಹೋಗಿ ಕನಿಷ್ಟಪಕ್ಷ ಅಲ್ಲಿ ಏನಾಗಿದೆ ಏಕೆ ಇಷ್ಟು ಹಿನ್ನಡೆಯಾಗಿದೆ,

೪೩% ಅಂದರೆ ಏನರ್ಥ? ಇಷ್ಟರಮಟ್ಟಿಗೆ ಈ ವರ್ಷ ಸಿಕ್ಕಂತಹ ಹಣ, ಅದು ಖರ್ಚಾಗಿದ್ದರೆ ಅನೇಕ ಕೆರೆಗಳು ದುರಸ್ತಿಯಾಗುತ್ತಿತ್ತು ರಸ್ತೆಗಳ ದುರಸ್ತಿಯಾಗುತ್ತಿತ್ತು ಚೆಕ್‌ಡ್ಯಾಂ ಬರುತ್ತಿತ್ತು Soil conservation ಕೆಲಸ ಆಗುತ್ತಿತ್ತು forest ನಲ್ಲಿ ಗುಂಡಿಯನ್ನು ಹೊಡೆಯುವಂತಹ ಕೆಲಸ ಆಗುತ್ತಿತ್ತು ಆಧರೆ ಇವತ್ತಿನ ದಿವಸ ಸರಿಯಾಗಿ ಖರ್ಚು ಮಾಡಿದರೆ ಆ ಹಣ ಅಲ್ಲಿಯೇ ಉಳಿದುಕೊಂಡಿದೆ ಕೇಂದ್ರ ಸರ್ಕಾರದ ಪ್ಯಾಕೇಜ್ ಬಂದಿದ್ದರೂ ಕೂಡ ಇದರ ಬಗ್ಗೆ ಮಾನ್ಯ ಸಿದ್ದರಾಮಯ್ಯನವರು ಈಗಾಗಲೆ ಹೇಳಿದ್ದಾರುಎ ಅನೇಕ ಜನರು ಕೂಡ ಹೇಳಿದ್ದಾರೆ ೨೬೮೯ ಕೋಟಿ ರೂಪಾಯಿಗಳಿಗೆ ಸರಿಯಾದಂತಹ ಒಂದು ಪ್ಲಾನ್ ಮಾಡಿ ಯಾವ ಯಾವ ಬಾಬತ್ತಿನಲ್ಲಿ ಎಷ್ಟು ಖರ್ಚು ಮಾಡಬೇಕು, ಏಕೆಂದರೆ ಹೆಚ್ಚುಕಡಿಮೆ ಅದರಲ್ಲಿ ಸಾವಿರ ಕೊಟಿ ರೂಪಾಯಿಗಳು ಗ್ರಾಂಟ್ ಇದೆ ಉಳಿದ ಸಾವಿರ ಕೋಟಿ ರೂಪಾಯಿಗಳು ಹೆಚ್ಚೂ ಕಡಿಮೆ ಲೋನ್ ಪೋರ್ಷನ್ ಆಗಿದೆ ಲೋನ್ ಪೋರ್ಷನ್ ಏತಕ್ಕೆ ಬೇಕು ಗ್ರಾಂಟ್ ಎಲ್ಲೆಲ್ಲಿ ಬರುತ್ತದೆ ಅದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ೩ ವರ್ಷದಲ್ಲಿ ಆಗತಕ್ಕಂತಹ expenditure ನ್ನು ನಾವು ಇದನ್ನು ತೆಗೆದುಕೊಂಡು ಖರ್ಚು ಮಾಡಿದ್ದರೆ ಬರಗಾಲಕ್ಕೆ ಬೇಕಾದಂತಹ ಹಣವು ಕೂಡ ಕಡಿಮೆಯಾಗುತ್ತಿತ್ತು ಏಕೆಂದರೆ ಈ ಹಣವನ್ನು ಖರ್ಚು ಮಾಡುವುದರಿಂದ, ನ್ಯಾಚುರಲಿ, ಸ್ವಲ್ಪ ಮಟ್ಟಿಗೆ ನಮ್ಮ ಖಜಾನೆಯಲ್ಲಿ ದುಡ್ಡು ಇರದೆ ಇರುವುದರಿಂದ, ಆ ಹಣವನ್ನು ಉಳಿತಾಯ ಮಾಡಬಹುದಾಗಿತ್ತು State exchequer ನಿಂದ ಹೋಗುವಂತಹದ್ದನ್ನು ಕೂಡ ಅದು ತಡವಾಗಿ ಬಂದರೂ ಕೂಡ ಆಭಾಗದಲ್ಲಿ ಕನಿಷ್ಟ ೬ ತಿಂಗಳಿದ ನಿಲ್ಲಿಸಬಹುದಾಘಿತ್ತು ಅದರಲ್ಲಿಯೂ ಕೂಡ ಆಸಕ್ತಿ ಇಲ್ಲ ಅದೇ ರೀತಿಯಗಿ ಕೇಂದ್ರ ಸರ್ಕಾರದಿಂದ ಬಂದಂತಹ Employment Guarantee Scheme ನಲ್ಲೂ ಕೂಡ review ಮಾಡುವಾಗಿಲ್ಲ ಎಷ್ಟು ಹಣ ಬಂತು ಪುನಃ ಏನು ಯೋಜನೆಗಳನ್ನು ಮಾಡಿ ಕಳುಹಿಸಬೇಕೆಂದು ಹೇಳಿಆದರ ಬಗ್ಗೆ pursue ಮಾಡುವವರೇ ಇಲ್ಲ ಕರ್ನಾಟಕ ಭವನದಲ್ಲಿರುವಂತಹ ಕಮೀಷನರ್‌ರವರು ಕೂಡ ಇದನ್ನು pursue ಮಾಡುವುದಿಲ್ಲ ಇವರು ನಮಗೆ ಎಷ್ಟು ಹಣ ಬೇಕು?

Employment Guarantee Scheme ನಲ್ಲಿ ಎಂದು ಹೇಳಿ ಈ ೫ ಜಿಲ್ಲೆಗಳ ಬಗ್ಗೆ ಒಂದು ಪ್ರಸ್ತಾವನೆಯನ್ನು ಕೂಡ ಸರಿಯಾಗಿ ಕಳುಹಿಸಿರುವುದಿಲ್ಲ ಈ ಮಾರ್ಚ್ ಎಂಡ್ ನೊಳಗಡೆ ಅನೇಕ ಸಾರಿ ದುಡ್ಡು ನಮಗೆ ಹೆಚ್ಚಬೇಕು ಹೆಚ್ಚು ಕಡಿಮೆ ಇದ್ದರೆ ಅದನ್ನು ಪುನಃ ಏಪ್ರಿಲ್ ತಿಂಗಳಿನಲ್ಲಿ ಖರ್ಚು ಮಾಡುವುದಕ್ಕಗುವುದಿಲ್ಲ ಈಗ ಪುನಃ ಏಪ್ರಿಲ್ ತಿಂಗಳಿನಲ್ಲಿ ಹೊಸ ಡಿಮ್ಯಾಂಡ್‌ನ್ನು ಕಳುಹಿಸಿ ಹೊಸ ಬೇಡಿಕೆಯನ್ನು ಇಟ್ಟು ಅದು ಪ್ರೊಸೆಸ್ ಆಗಬೇಕಾಗಿದ್ದರೆ ಕನಿಷ್ಟವೆಂದರೆ ಒಂದು ತಿಂಗಳು ಬೇಕಾಗುತ್ತದೆ ಆವಾಗ ನೀವು ಏನು ಹೇಳುತ್ತೀರಿ? ದುಡ್ಡು ಬಂದಿಲ್ಲ, ಕೇಂದ್ರ ಸರ್ಕಾರದಿಂದ ಕೊಟ್ಟಿಲ್ಲ, ನಾವು ಏನು ಮಾಡಬೇಕು? ಒಂದು ಕಡೆ ನೀವು ನಿರಾಸಕ್ತಿಯಿಂದ ಕೆಲಸ ಮಾಡುವ ಹಾಗಿಲ್ಲ ಇನ್ನೊಂದು ಕಡೆ ಹಣ ಇಲ್ಲವೆನ್ನುವಂತಹ ಮಾತು ಹೇಳುವುದು ಒಂದು ಇತ್ತೀಚೆರೆ ಒಂದು fashion ಆಗಿ ಹೋಗಿದೆ ಬರೀ ದೂರುವಂತಹದ್ದು ಆಗಿದೆ ಏನೆಂದರೆ ಅಧಿಕಾರಿಗಳು ನಮ್ಮ ಮಾತು ಕೇಳುತ್ತಿಲ್ಲ ಈ ಅಧಿಕಾಋಇಗಳು ಸರಿಯಾಗಿಲ್ಲ "ಕುದುರೆ ಮೇಲೆ ಕೂರಿ ಸವಾರಿ ಮಡುವಂತಹವನು ಸರಿಯಾಗಿದ್ದರೆ ಖಂಡಿತವಾಗಿ ಕುದುರೆಯನ್ನು ಓಡಿಸಬಹುದು" ಆದರೆ ಇವರೇ ಸರಿಯಾಘಿಲ್ಲವಲ್ಲಾ ಇವರು ಒಂದು ಮಾರ್ಗಸೂಚಿಯನ್ನು ಕೊಡುತ್ತಾರೆ ಅನುಷ್ಠಾನದಲ್ಲಿ ಇನ್ನೊಂದನ್ನು ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ ಈಗ ಯಾವುದೋ ಒಬ್ಬ ಅಧಿಕಾರಿಗಳಿಗೆ ನೀವು ಇದನ್ನು ಮಾಡಿ ಎಂದು ಆ ಪವರ್ ನ್ನು ಕೊಡುವುದಿಲ್ಲ ನೀವು ಇದನ್ನು ಮಾಡಿ ಎಂದು ಹೇಳುವುದಿಲ್ಲ ತಕ್ಷಣ ಅವನು ನನಗೆ ಅಧಿಕಾರ ಇಲ್ಲ ಸ್ವಾಮಿ, ಇದು ನನ್ನ purview ಗೆ ಬರುವುದಿಲ್ಲವೆಂದು ಹೇಳುತ್ತಾನೆ ಬರುವುದಿಲ್ಲವೆಂದು ಹೇಳಿದರೆ ಅವನನ್ನು transfer ಮಾಡಿ, suspend ಮಾಡಿ ಎಂದು ಹೇಳಿದ್ದೇವೆ ಆಧರೆ suspend ಮಾಡಬೇಕಾದರೂ ಕೂಡ ನಿಮ್ಮ guidelines ನಲ್ಲಿ ನೀವು ಕೊಟ್ಟಂತಹ ಮಾರ್ಗಸೂಚಿಯಲ್ಲಿ ಅದು ಬರುತ್ತದೆಯೋ ಹೇಗೆ ಹೇಳಬೇಕು ಅದರ ಬಗ್ಗೆ ಯೋಚನೆ ಮಾಡಬೇಕು ಇಲ್ಲಿ ಅಧಿಕಾರಿಗಳನ್ನು ಟಾರ್ಗೆಟ್ ಮಾಡಿ ಅಧಿಕಾರಿಗಳನ್ನು ಬೈದರೆ, ಸಾಮನ್ಯ ಜನರು ಖುಷಿ ಪಡುತ್ತಾರೆ ಅದಕ್ಕೆ ಅವರಿಗೆ

ಬೈಯುವುದು ಇಲ್ಲಿ ವಿರೋಧಪಕ್ಷದವರು ಜನ ಇವರಿಗೆ ಬೈಯುತ್ತಾರೆಂದು ತಿಳಿದುಕೊಂಡು ನಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಇವತ್ತಿನ ದಿವಸ ಅಲ್ಲಿ ಹೋದಲ್ಲಿ ಅಧಿಕಾರಿಗಳಿಗೆ ಬೈದು ಅಲ್ಲಿ ಸಮಾಧಾನಪಡಿಸುವುದು ಯಾರು corrupt ಇದ್ದಾರೆ ನೀವು ಅವರಿಗೆ ಶಿಕ್ಷೆಯನ್ನು ಕೊಡಿ ಅವರನ್ನು ಡಿಸ್‌ಮಿಸ್ ಮಾಡಿ ಇದಕ್ಕೆ ಯಾರು ಅಡ್ಡ ಬರುತ್ತಾರೆ ಆದರೆ ಇದನ್ನು ತಿಳಿದುಕೊಳ್ಳದೆ ಏನಾದರೂ ಒಂದು ಮಾಡುವಂತಹದ್ದು ಸರಿಯಲ್ಲ ಈಗಾಗಲೇ ಬಹಳಷ್ಟು ಜನರು ಹೇಳಿದ್ದಾರೆ ಪತ್ರಿಕೆಯಲ್ಲಿ ಬಂದಿದೆ, ನಾನು ಅದನ್ನ ಹೇಳಿದರೆ ಇವರಿಗೆ ಹಿಡಿಸುವುದಿಲ್ಲ ಸುಮಾರು ೧೨೧ ಆಶ್ವಾಸನೆಗಳಲ್ಲಿ ೪೩ಕ್ಕಿಂತಲೂ ಹೆಚ್ಚಿನ ಆಶ್ವಾಸನೆಯನ್ನು ಕೊಟ್ಟಿಲ್ಲವೆಂದು ಈಗಾಗಲೇ ಬಹಿರಂಗವಗಿದೆ ನವೇ ಅಲ್ಲ Economic experts ಕೂಡ ಈ ಮಾತನ್ನು ಹೇಳುತ್ತಾರೆ ಕೇಳಿದಾಗ ಅವರೆಲ್ಲರೂ ಹೇಳಿದ್ದಾರೆ, ತಪ್ಪಿಸಿಕೊಳ್ಳುವುದಕ್ಕೆ ಇದನ್ನು ಹೇಳುತ್ತಾರೆ ಅದರಲ್ಲಿ ಏನಿದೆ ಎಂಬುದರ ಬಗ್ಗೆ ಆಮೇಲೆ ನಾವು ಹೇಳುತ್ತೇವೆ ಇದು ನಿನ್ನೆ ರಾತ್ರಿ ಬಂದಿದೆ, ಈಗ ನಮ್ಮಲ್ಲಿರತಕ್ಕಂತಹ ಅಂಕಿ ಅಂಶ ಮತ್ತು ನೀವು ಒದಗಿಸಿಕೊಟ್ಟಿರುವಂತಹ documents ಅದು ಯಾವುದೇ ಇರಬಹುದು Performance budget ನಲ್ಲಿ Finance Department ಬಿಟ್ಟರೆ ಉಳಿದದರಲ್ಲಿ economic survey ಇದೆ ಉಳಿದಂತಹ ಅಂಕಿ ಅಂಶಗಳನ್ನು ಇಲಾಖೆಯವರು ಒದಗಿಸಿಕೊಟ್ಟಿರುವುದನ್ನು ನಾವು ನೋಡಿದಾಗ ನೀಉವ ಇವತ್ತು ಹೋಗುವಂತಹ ದಾರಿ ಸರಿಯಲ್ಲ Development ಬಗ್ಗೆ ನಿಮಗೆ ಆಸಕ್ತಿ ಇಲ್ಲ Social sector ಕೂಡ ಅಷ್ಟೆ ಈಗ ಮನೆಗಳನ್ನು ಕಟ್ಟಿಸಿಕೊಡುವಂತಹದ್ದು, ನಿಮಗೆ ಗೊತ್ತಿದೆ ಹಿಂದೆ ೧೯೯೧ ರ ಸೆನ್ಸ್ಸ ಪ್ರಕಾರ ಇಡೀ ರಾಜ್ಯದಲ್ಲಿ ಒಂದು ಸರ್ವೆ ಮಾಡಿ, ೧೧ ಲಕ್ಷ ಕುಟುಂಬಗಳಿಗೆ ಮನೆ ಇಲ್ಲ ಅವರಿಗೆ ಮನೆಗಳನ್ನು ಒದಗಿಸಿಕೊಡಬೇಕೆಂಬ ಬಗ್ಗೆ ಸರ್ವೆಯನ್ನು ಮಾಡಿದರು ಆಗ ಮುಖ್ಯಮಂತ್ರಿಯಾದ ಎಸ್ ಎಂ ಕೃಷ್ಣರವರು ೧೧ ಲಕ್ಷ ಕುಟುಂಬಗಳಿಗೆ ೨೦೦೪ರ ಒಳಗಾಗಿ ಕಂಪ್ಲೀಟ್ ಮನೆಗಳನ್ನು ಕಟ್ಟಿಕೊಡಬೇಕು ತದನಂತರ ೨೦೦೧ರ ಸೆನ್ಸಸ್

ಪ್ರಕಾರ ಅದನ್ನು ಮುಂದೆ ಮಾಡಬೇಕೆಂದು ನಿರ್ಧಾರ ತೆಗೆದುಕೊಂಡರು ಈಗ ೨೦೦೧ ರ ಸೆನ್ಸಸ್ ಪ್ರಕಾರ ಇವರು ಕೂಡ ಸರ್ವೆಯನ್ನು ಮಾಡಿರುವುದಿಲ್ಲ ಅಷ್ಟೇ ಏಕೆ, ಏನು ೧೧ ಲಕ್ಷ ಜನರನ್ನು ಗುರುತಿಸಿತ್ತು, ಅದರಲ್ಲಿ ೯ ಲಕ್ಷ ಜನರಿಗೆ ಮನೆಯನ್ನು ಕಟ್ಟಿಸಿಕೊಟ್ಟಿದ್ದೇವೆ ಉಳಿದವರಿಗೆ next allocation ಮಾಡುವುದರಲ್ಲಿ ಅದರ ಪ್ರಕಾರ ಮಾಡಿದ್ದೇವೆ ಇವರು ಅಧಿಕಾರಕ್ಕೆ ಬಂದ ಮೇಲೆ ೧ ವರ್ಷದಲ್ಲಿ ಒಂದು ಹೊಸ ಮನೆಗಳು ಬರಲಿಲ್ಲ Allocation ಮಾಡಿರುವಂತಹದ್ದು ಏನು ಪಂಚಾಯತ್‌ರಾಜ್‌ರವರು ಮಾಡಿದ್ದಾರೋ ಇನ್ನು ಆ ಬಗ್ಗೆ ಪಟ್ಟಿಯನ್ನು ಮಾಡುವುದರಲ್ಲಿಯೇ ಇದ್ದಾರೆ Beneficiary ಯನ್ನು ಹುಡುಕುವುದರಲ್ಲಿಯೇ ಇದ್ದಾರೆ, ರಾಜೀವಗಾಂಧಿ ಕಾರ್ಪೋರೇಷನ್ ನಿಂದ ದುಡ್ಡು ಹೋಗುವುದರಲ್ಲಿಯೇ ಇದೆ ಇದು ಅವರು ಬಡವರ ಬಗ್ಗೆ ಮಾಡಿರುವುದು ಅಲ್ಲಿ ಕೃಷಿರ ಬಗ್ಗೆ ಮತ್ತು ನಮ್ಮ ರೈತರ ಬಗ್ಗೆ ಕಾಳಜಿಯನ್ನು ತೋರಿಸಿಲ್ಲ ನೀರಿನ ಅಲೋಕೇಷನ್ ನೀರಾವರಿಗೆ ಹಣವನ್ನು ಕೊಡುವುದರ ಬಗ್ಗೆ ಪಂಪ್‌ಸೆಟ್ energy ಗೆ ಮಾಡುವುದಕ್ಕೆ ಮತ್ತು power generationಗೆ ಹಣ ಕೊಡುವುದನ್ನು allocation ಮಾಡಿದ್ದಾರೆ ಅಥವಾ ಕೃಷಿಗೆ ಏನು ಮಾಡಿದ್ದಾರೆ ಅವೆಲ್ಲವು ಹೋದರೂ ಕೂಡ ಬಡವರ ಕಾರ್ಯಕ್ರಮಕ್ಕೂ ಕೂಡ ಇದೇ ರೀತಿಯಾಗಿ ಮಾಡಿದ್ದಾರೆ ಒಂದು ಏನೆಮದರೆ, ನಾವು ಏನೋ ಮಠ, ಮಂದಿರಗಳಿಗೆ ಹಣವನ್ನು ಕೊಡುತ್ತಿರಲಿಲ್ಲ Endowment head ನಲ್ಲಿ ೧೦-೨೦ ಕೋಟಿ ರೂಪಾಯಿಗಳನ್ನು ಕೊಟ್ಟು ಆರಾಧನ ಸ್ಕೀಮ್ ನಲ್ಲಿ ಬಡವರಿಗೆ ೧೦-೨೦-೩೦ ಸಾವಿರ ರೂಪಾಯಿಗಳಲ್ಲಿ ಪ್ರಾರ್ಥನಾ ಮಂದಿರ ಇವೆಲ್ಲವನ್ನು ಮಾಡಿಕೊಳ್ಳಲಿ ಎಂದು ಆ ಒಂದು ಯೋಜನೆಯನ್ನು ಬಡವರಿಗಾಗಿ ತಂದಿದ್ದೇವೆ ಆದರೆ ಅದನ್ನು ಇವರು ಬಿಟ್ಟರು ಅಲ್ಲಿ ಹಣವನ್ನು ಕೊಡುವುದನ್ನು ಕಡಿಮೆ ಮಾಡಿದರು ಆದರೆ ಇವರು ತಮಗೆ ಇಚ್ಛೆ ಬಂದಂತೆ ಹಣವನ್ನು ಕೊಟ್ಟರು ಮತ್ತು ಇನ್ನು ಎಷ್ಟು ಅನೌನ್ಸ್ ಮಾಡುತ್ತಾರೋ ಗೊತ್ತಿಲ್ಲ ಏಕೆಂದರೆ ಈ ಬಗ್ಗೆ ಇವರು ರಿಪ್ಲೈಯನ್ನು ಸಹ ಕೊಡಬೇಕಾಗುತ್ತದೆ ಪ್ರಾರಂಭದಲ್ಲಿ ಬಜೆಟ್‌ನಲ್ಲಿ ಸ್ವಲ್ಪ ಕೊಟ್ಟಿದ್ದಾರೆ

ಇನ್ನೂ ಅನೇಕ ಬೇಡಿಕೆಗಳು ಸಹ ಬಂದಿವೆ ಅದಕ್ಕೆ ಅವರು ಎಷ್ಟು ಕೊಡುತ್ತಾರೋ ಗೊತ್ತಿಲ್ಲ ಏಕೆಂದರೆ ಈ ಬಗ್ಗೆ ಇವರು ರಿಪ್ಲೈಯನ್ನು ಸಹ ಕೊಡಬೇಕಾಗುತ್ತದೆ ಪ್ರಾರಂಭದಲ್ಲಿ ಬಜೆಟ್‌ನಲ್ಲಿ ಸ್ವಲ್ಪ ಕೊಟ್ಟಿದ್ದಾರೆ ಇನ್ನೂ ಅನೇಕ ಬೇಡಿಕೆಗಳು ಸಹ ಬಂದಿವೆ ಅದಕ್ಕೆ ಅವರು ಎಷ್ಟು ಕೊಡತುತ್ತಾರೋ ಗೊತ್ತಿಲ್ಲ ಮತ್ತು ಎಲ್ಲೆಲ್ಲೆ ಹುಡುಕಿ, ಹುಡುಕಿ ಹಣವನ್ನು ಕೊಟ್ಟಿದ್ದಾರೆ ಈ ದೇಶದಲ್ಲಿ ಮಹಾತ್ಮ ಗೌತಮಬುದ್ದ ಹುಟ್ಟಿ ೨೫೫೦ ವರ್ಷಗಳು ಆಯಿತು ಅವರ birthday celebration ನಡೆದಿದೆ ಏತಕ್ಕಾಗಿ ಇವರ ಕಿವಿಗೆ ಬಿದ್ದಿಲ್ಲವೋ ಗೊತ್ತಿಲ್ಲ ಗೌತಮಬುದ್ದನ ಅವಶೇಷಗಳು ಇಡೀ ರಾಜ್ಯದಲ್ಲಿ ಇದೆ ಸಿದ್ದಾಪುರದಲ್ಲಿ ಮಸ್ಕಿನಲ್ಲಿ ಇರಬಹುದು, ಗುಲ್ಬರ್ಗಾದಲ್ಲಿ ಇರಬಹುದು, ಇದನ್ನು ನೀವು ಅನೇಕ ಕಡೆಗಳಲ್ಲಿ ಕಾಣಬಹುದು ಅದರ ಬಗ್ಗೆ ಇವರಿಗೆ ಚಿಂತೆಯೂ ಇಲ್ಲ ಮನುಷ್ಯ ಯಾವುದೇ ಒಂದು ತತ್ವದಲ್ಲಿ ಅಭ್ಯಾಸವನ್ನು ಮಾಡುತ್ತಿದ್ದಾರೆ ಗಮನವು ಆ ಕಡೆಗೆ ಜಾಸ್ತಿ ಹರಿಯುತ್ತದೆ ಇದರ ಬಗ್ಗೆ ಚಿಂತನ ಇಲ್ಲ ಇವತ್ತು ಕೇಂದ್ರ ಸರ್ಕಾರದವರು ಸ್ವಲ್ಪ ಮಟ್ಟಿಗೆ ಬುದ್ದನ ೨೫೫೦ ನೇ ಹುಟ್ಟುಹಬ್ಬದ ಬಗ್ಗೆ ಒಂದು ಸಮಾರಂಭ ಮಾಡಿದ್ದಾರೆ

ಕೇಂದ್ರ ಸರ್ಕಾರದವರು ಸ್ವಲ್ಪ ಮಟ್ಟಿಗೆ ೨೫೫೦ ಅವರ ಹುಟ್ಟುಹಬ್ಬದ ಬಗ್ಗೆ ಸಮಾರಂಭ ಆದರೆ ಇವತ್ತು ರಾಜ್ಯದಲ್ಲಿ ಆ ಬಗ್ಗೆ ಏನೂ ಮಾಡಲಿಲ್ಲ ಯಾವುದೊಂದು ಪೀಠವು ಇಲ್ಲ, ಪಾಠವೂ ಇಲ್ಲ, ಕನಿಷ್ಟ ಪೀಠ ಬೇಡ, ಈ ನಿಮ್ಮ ಸಿಲಬಸ್ ನಲ್ಲಿ ಪಾಠವನ್ನಾದರೂ ಹೇಳಿ, ಜನರಿಗೆ ಗೊತ್ತಾಗಲಿ, ಈ ದೇಶದಲ್ಲೊಬ್ಬ ಬಹಳ ಸೈಂಟಿಫಿಕ್ ರಿಲಿಜನ್ ಅನ್ನು ಕೊಟ್ಟಂಥ ಮಹಾಪುರುಷ, ಅಂಧಶ್ರದ್ದೇಯನ್ನು ತೆಗೆದುಹಾಕಿದಂಥ ಎಲ್ಲಾ ಪ್ರಯತ್ನಗಳನ್ನು ಮಾಡಿದಂಥ ಮಹಾಪುರುಷ, ಅಂಥವರ ಫಿಲಾಸಫಿ, ಬಸವಣ್ಣವನವರು ಇರಬಹುದು, ಬುದ್ಧ ಇರಬಹುದು ಅನೇಕ ಮಹಾಪುರುಷರು ಯಾರು, ತತ್ವದ ದೃಷ್ಟಿಯಿಂದ ನೀತಿಯ ದೃಷ್ಟಿಯಿಂದ ನೀತಿಯ ದೃಷ್ಟಿಯಿಂದ ಸಮಾಜದ ಒಂದು ಐಕ್ಕತೆಯ ದೃಷ್ಟಿಯಿಂದ ನೀತಿಯ ದೃಷ್ಟಿಯಿಮದ ಸಮಾಜದ ಒಂದು ಐಕ್ಯತೆಯ ದೃಷ್ಟಿಯಿಂದ ಅಂತಹ ವಿಚಾರಧಾರೆಗೆ ಬೆಳವಣಿಗೆ ಕೊಟ್ಟರೆ ಒಳ್ಳೆಯದು ಆದರೆ

ನೀವೇನು ಕೊಡುತ್ತಿದದೀರಿ, ಅನೇಕ ಕಡೆ ಎಲ್ಲಾ ಕಡೆ ಎಂದು ನಾವು ಹೇಳುವುದಿಲ್ಲ ಅನೇಕ ಕಡೆ ನಿಮ್ಮ ಫಿಲಾಸಫಿಗೆ ಹೊಂದಿಕೊಂಡು ಯಾರಿದ್ದಾಯಿಟಿ ಅಥವಾ ಬಿ ಜೆ ಪಿ ಅಜಂಡಾ ಏನಿದೆ, ನಿಜವಾಗಲೂ ಈ ಬಜೆಟ್ ರೇವಣ್ಣನವರು ಹೇಳಿದಂತೆ ಇದು ಬಿಜೆಪಿ ಬಜೆಟ್ ಪಾಪ ಅವರು ಹೇಳಿದರು ಇದರಲ್ಲಿ ನಮ್ಮದೇನೂ ಇಲ್ಲ, ಎಂದು ಅವರು ಹೇಳಿದ್ದಾರೆ, ಇದರಲ್ಲಿ ಬದಲಾವಣೆ ಆಗದೇ ಹೋದರೆ, ಅಥವಾ ಇದರಲ್ಲಿ ಅನೇಕ ಬದಲಾವಣೆಯನ್ನು ತರದೇ ಹೋದರೆ ನಾನೇ ಸವತಃ ಧರಣಿ ಮಾತುತ್ತೇನೆಂದು ಹೇಳಿದ್ದಾರೆ ಅವರಿಗೆ ನಾನೇ ಶಹಭಾಸ್‌ಗಿರಿಯನ್ನು ಕೊಡುತ್ತೇನೆ, ಇಷ್ಟೊತ್ತಿನವರೆಗೆ ಅವರು ಇಲ್ಲೇ ಇದ್ದರು ಏಕೆಂದರೆ ಅವರು ಹೇಳಿದರು, ನೀವು ಎಜುಕೇಷನ್ ಗೆ ಒತ್ತು ಕೊಡಬೇಕಾಗಿತ್ತು ಹಾಸ್ಟೆಲ್ ಗಳಿಗೆ ಕೊಡಬೇಕಾಗಿತ್ತು, ಬೀದಿ ಮಕ್ಕಳಿಗೆ ಕೊಡಬೇಕಾಗಿತ್ತು ಕೇಮದ್ರಸರ್ಕಾರದವರು ಅಸಂಘಟಿತ ಕಾರ್ಮಿಕರಿಗೆ ಸೆಕ್ಯುರಿಟಿ ಕೊಡಬೇಕೆಂದು insurance ಮಾಡಿದರು ಅದನ್ನು ನೀವು ತಿರುಚಿ ಮುರುಚಿ ಇದರೊಳಗೆ ತಂದು ನಿಮ್ಮದೇ ಆದಂಥ ಯೋಜನೆಯನ್ನು ಹಾಕಿದಿರಿ ಹೇಗೆ ಈಗ ಸಿದ್ಧರಾಮಯ್ಯನವರು explain ಮಾಡಿದರಲ್ಲ, ೧೧ ೫೦% interest ಇದ್ದುದನ್ನು ಹೋದ ಸಮ್ಮಿಶ್ರ ಸರ್ಕಾರ ಧರಂಸಿಂಗ್ ರವರ ನೇತೃತ್ವದಲ್ಲಿ ೬% ಗೆ ತಂದಿತು, ನೀವೇನು ಮಾಡಿದಿರಿ, ೬%, ೭% ಕೇಂದ್ರಸರ್ಕಾರದವರು ನಬಾರ್ಡ್ ಯೋಜನೆಗಳಿಗೆ, ಸಹಕಾರಿಇ ಸಂಘಗಳಿಗೆ ಕೊಡುತ್ತಿರುವಂಥಾದ್ದು ಅದನ್ನು ೪% ಮಾಡಿಎಇರಿ ಅಂದರೆ ಎಷ್ಟು ವ್ಯತ್ಯಾಸ ಸ್ವಾಮಿ. ೩% ಆ ೧೧ ೫೦% ಯಿಂದ ೬% ಗೆ ತಂದರಲ್ಲ ಅದು ೫ ೫೦% ರೈತರ ಪರ ಹೆಚ್ಚಿನ ಹಣ ಕೊಟ್ಟವರು ಹಿಂದಿನ ದರಂಸಿಂಗ್ ರವರ ಸರ್ಕಾರವೋ, ಏನು ನಿಮ್ಮ ಸರ್ಕಾರವೋ ಹೇಳಿ, ಆದರೂ ತಮ್ಮ ಬೆನ್ನು ಬಡಿದುಕೊಳ್ಳುವುದನ್ನು ಯಡಿಯೂರಪ್ಪನವರು ಬಿಡುವುದೇ ಇಲ್ಲ ನನ್ನದು ಬೇರೆ, ನನ್ನದು ಬೇರೆ, ಏನು ಸ್ವಾಮಿ ನಿಮ್ಮದು?

ಅಧ್ಯಕ್ಷರು ಖರ್ಗೆಯವರೇ ಸ್ವಲ್ಪ ಬೇಗ ಮುಗಿಸಿ ಇನ್ನೂ ಆ ಮನೆಗೆ ಬೇರೆ ಹೋಗಬೇಕು

ಶ್ರೀ ಎಸ್ ಮಲ್ಲಿಕಾರ್ಜುನ್ ಖರ್ಗೆ ಬೇಡವೆಂದರೆ ನಾನು ಇಲ್ಲಿಗೆ ಮುಗಿಸುತ್ತೇನೆ ಇಲ್ಲ ನಾನು ಬೇಗನೆ ಮುಗಿಸುತ್ತೇನೆ ಆದರೆ ಅವರು ಎಲ್ಲರನ್ನು ಮುಗಿಸಲಿಕ್ಕೆ ಹೊರಟಿದ್ದಾರಲ್ಲ,

ಅಧ್ಯಕ್ಷರು ಎಲ್ಲರಿಗೂ ಸಹಾಯ ಮಾಡಿ ಅವರನ್ನು ಉದ್ಧಾರ ಮಾಡಲಿಕ್ಕೆ ಹೊರಟಿದ್ದಾರೆ

ಶ್ರೀ ಎಸ್ ಮಲ್ಲಿಕಾರ್ಜುನ ಖರ್ಗೆ ಎಲ್ಲರಿಗೂ ೧೦.೦೦ ಲಕ್ಷ ರೂ, ೫೦.೦೦ ಲಕ್ಷ ರೂ, ೧ ಕೋಟಿ ರೂ ಗಳನ್ನು ಕೊಟ್ಟು ಮೂಗಿಗೆ ತುಪ್ಪ ಹಚ್ಚಿ ಚಾರ್ ಆಣೆಕಿ ಮುರ್ಗಿ, ಬಾರಹ್ ಆಣೆಕಿ ಮಸಾಲಾ ಎಂದು ಡೆವಲಪ್ಮೆಂಟ್ ಗೆ ೪ ಆಣೆ, ಉಳಿದ ಕೆಲಸಕ್ಕೆ ೧೨ ಆಣೆ ಅಂಥ ಬಜೆಟ್ ಇದು ಇದಕ್ಕೆ ಇವರದು growth oriented budget ಅಲ್ಲ development oriented budget ಅಲ್ಲ, ಇದರಿಂದ ಸಾರ್ವಜನಿಕರಿಗೆ ರೈತರಿಗೆ, ಬಡವರಿಗೆ ಲಾಭವಾಗುವುದಿಲ್ಲ, ಹಿಂದೆ ಬಡವರಿಗೆ ಮನೆ ಕಟ್ಟಿಸುವಾಗ ಈ ಟೀಕೆಗಳನ್ನು ಮಾಡುತ್ತಿದ್ದರು ವಿರೋಧ ಪಕ್ಷದಲ್ಲಿದ್ದಂಥ ಬಿಜೆಪಿ ಇರಬಹುದು ಅಥವಾ ಅನೇಕ ತನ್ನಂದತಾನೆ ಎಕನಾಮಿಸ್ಟ್ ಎಂದು ಹೇಳಿಕೊಳ್ಳುವಂಥ ಜನ ಬಹಳ ಸಲ ಬಡವರಿಗೆ ಆಶ್ರಯ ಸ್ಕೀಮ್ ಮನೆ ಕೊಡಲಿಕೆಕ ಟೀಕೆ ಮಾಡುತ್ತೇವೆ, ಆದರೆ ನೀವು ಮನ ಬಂದಂತೆ ದುಡ್ಡು ಚೆಲ್ಲುತ್ತೀರಲ್ಲಾ ಎಲ್ಲಿ ಬೇಕಲ್ಲಿ ಅಲ್ಲಿ, ನಮಗೆ ಕಡೆ ನವಾಬರು, ಮಹಾರಾಜರು ಮಾಡುತ್ತಾರಲ್ಲ, ಯಾರಾದರೂ ಹೋಗಿ ಒಂದು ವಅರ್ಜಿ ಕೊಟ್ಟು ಏನು ಬೇಉ ನಿಮಗೆ ಅಂದರೆ,ನನಗೆ ತೊಂದರೆ ಇದೆ ಎಂದರೆ ತೆಗೆದುಕೊ ನಿನಗೆ ಒಂದು ಕೋಟಿ, ಇನೊಬ್ಬರು ನನಗೆ ಅಂದರೆ ನಿನಗೆ ೫೦,೦೦ ಲಕ್ಷ ರೂ, ಹೀಗೆ ಹಂಚಿ ನನ್ನ ಬಜೆಟ್ ಒಳ್ಳೆಯದು ಇದೆ ಎಂದರೆ ಇವತ್ತಿನ ದಿವಸ ಯಾರು ಮೆಚ್ಚುತ್ತಾರೆ? ಇದರಿಂದ ಏನು ಅಭಿವೃದ್ಧಿಯಾಗುತ್ತದೆ? ಮೈನರ್ ಇರಿಗೇಷನ್ ಅವರಿಗೆ ಸಂಬಂಧಪಟ್ಟಿದ್ದು, ಹಿಮದೆ ನಬಾರ್ಡ್‌ನಿಂದ ಕೋಟ್ಯಾಂತರ ರೂಪಾಯಿ ಬರುತ್ತಿತ್ತು ಅವರಿಬ್ಬರ ಜಗಳದಲ್ಲಿಮುನಿಸಿಕೊಂಡು ದುಡ್ಡನ್ನು ನಬಾರ್ಡ್‌ನಿಂದ ತರುವುದನ್ನೇ ಬಿಟ್ಟರು ಹೋಗಲಿ ಬಿಡಿ, ಅದರಿಂದೇ ನಾಯ್ತು ನಮ್ಮ ಕಡೆ ಒಂದು

ಗಾದೆ ಮಾತು ಹೇಳುತ್ತಾರೆ ಯಾರ ಮೇಲೋ ಮುನಿಸಿಕೊಂಡು ರಾತ್ರಿಯೆಲ್ಲ ಉಪವಸ ಬಿದ್ದರಂತೆ, ಹಾಗೆ ನೀವು ನೀವು ಕಚ್ಚಾಡಿಕೊಂಡು ಇಲಲಿ ಸಣ್ಣ ನೀರಾವರಿ ಯೋಜನೆ ಅನೇಕ ಕಡೆ ಬೇಕಾಗುವಂಥ ಯೋಜನೆ, ಮೈನರ್ ಇರಿಗೇಷನ್, ಎಲ್ಲಿ ಮೇಜರ್ ಇರಿಗೇಷನ್ ಪಾತ್ರ ಇಲ್ಲ ಅಥವಾ ಅಚ್ಚುಕಟ್ಟು ಇಲ್ಲ ಅಂಥ ಕಡೆ ಪ್ರಮುಖವಾಗಿ ಮೈನರ್ ಇರಿಗೇಷನ್ ಕೆಲಸ ಮಾಡುತ್ತಿದೆ ಅದಕ್ಕೆ ಹೆಚ್ಚಿನ ಹಣ ಅಉದ ನಬಾರ್ಡ್ ಇರಬಹುದು, ರಾಜ್ಯ ಸರ್ಕಾರ ಕೊಡತಕ್ಕಂಥದ್ದು ಇರಬಹುದು, ಅವರೆಡೂ ಸೇರಿಸಿ ಹೆಚ್ಚು ಹಣ ಕೊಡಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಹೆಚ್ಚಿಗೆ ಕೊಡಿ, ನಾವು ಹಿಂದೆ ಒಂದು ಪ್ರಸ್ತಾಪ ಇಟ್ಟಿದ್ದೆವು ಮೂರು ಕಾರ್ಪೋರೇಷನ್ಸ್ ಇವೆ, ಕಾವೇರಿ, ಕೃಷ್ಣಾ ಮತ್ತು ಕರ್ನಾಟಕ ಜಲನಿಗಮ, ಈ ಮೂರು ನಿಗಮದಿಂದ ಆ jurisdictionನಲ್ಲಿ ವ್ಯಾಪ್ತಿಯಲ್ಲಿ ಕನಿಷ್ಠ ಅಂದರೆ ಒಂದೊಂದು corporation ನಿಂದ ಕೆಲವು ೫೦ ಕೋಟಿ ರೂ ಇಡಿ ಏಕೆಂದರೆ ಸಾವಿರಾರು ಕೋಟಿ ದೊಡ್ಡ ಯೋನೆಗಳಿಗೆ ಇಡುತ್ತೀರಿ ಸಣ್ಣ ನೀರಾವರಿ ಯೋಜನೆಗಳಿಗೆ ಅಥವಾ ಗಂಗಾ ಕಲ್ಯಾಣಕ್ಕೆ Special Component Plan ನಲ್ಲಿಟ್ಟರೆ SC/ST ಗಳಿಗೆ ಅನುಕೂಲವಾಗುತ್ತದೆ, ಅಂಥ ಕಡೆ ೫೦ ೦೦ ಕೋಟಿ ರೂ ತೆಗೆದು ಗಂಗಾ ಕಲ್ಯಾಣ ಯೋಜನೆಗಳನ್ನು ಮಾಡಿದರೆ ಏನು ತಾಪತ್ರಯ ಇದೆ? ಯಾರಾದರೂ ಬೇಡವೆನ್ನುತ್ತಾರೆಯೆ? ಇಂಥ ಕೆಲಸಗಳನ್ನು ಮಾಡಿ, ಅದನ್ನು ಬಿಟ್ಟು ಅವನಿಗೆ ಖುಷಿ ಪಡಿಸಲಿಕ್ಕೆ ಯಾವುದೋ ನಿಮಗೆ ಫೋಟೋ ಕೊಡುತ್ತೇನೆ ನಿಮಗೆ ಬಟ್ಟೆ, ಸೈಕಲ್ ಕೊಡುತ್ತೇನೆಂದರೆ ಅವರು ಆರ್ಥಿಕವಾಗಿ ಬಲಶಾಲಿಯಾಗಬೇಕು, ಯಾವುದೇ ಒಂದು ಸಮಾಜ ಮುಂದೆ ಬರಬೇಕಾದರೆ ಆ ಸಮಾಜದಲ್ಲಿ ಮಾನಸಿಕ ಬಲ ಇರಬೇಕು, ಇಲ್ಲವೇ ಅವರ ಬಳಿ ಮನುಷ್ಯ ಬಲವಿರಬೇಕು ಅಥವಾ ಆರ್ಥಿಕ ಬಲ ಇರಬೇಕು ಈ ಮೂರು ಬಲದಲಿ ಒಂದು ಬಲವಾದರೂ ಇಲ್ಲದೆ ಹೋದರೆ ಆ ಸಮಾಜ, ಆ ವರ್ಗ ಮುಂದೆ ಬರಲಿಕ್ಕೆ ಸಾಧ್ಯವಿಲ್ಲ ಈಗೇನು ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯವರ ಹತ್ತಿರ ಆರ್ಥಿಕ ಬಲ್ಲ, ಮಾನಸಿಕ ಬಲವೂ ಇದೆ, ಉಳಿದವರ ಹತ್ತಿರ ಮನುಷ್ಯ ಬಲವೂ ಇದೆ,

ನಾವೆಲ್ಲರೂ ಕೂಡ ಸರ್ಕಾರಿ ಶಾಲೆ ಹೋಗಿ ಪಡೆದುಕೊಂಡೆವು ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ ಇಂದ್ದರ ಬಗ್ಗೆ ನೀವು ಚಿಂತನೆ ಮಾಡಬೇಕು ಇದಕ್ಕೆ ಚಿಂತನೆ ಮಾಡಿ , ಇಂದದಕ್ಕೆ ಹಣ ಒದಗಿಸಿಕೊಟ್ಟು ಅವರ ಕಲ್ಯಾಣ ಮತ್ತು ವಿಶೇಷವಾಗಿ ಅವರ per capita income growth ಆಗುತ್ತದೆಯೆ ಇಲ್ಲವೇ ಆ ಕಡೆ ನೋಡಬೆಕೆ ಹೊರತಾಗಿ ನಾನು ಏನೋ ಈ ಚುನಾವಣೆ ದೃಷ್ಟಿಕೋನ ಇಟ್ಟುಕೊಂಡು ಇವೆಲ್ಲಾ ಮಾಡಿರುವ ಪ್ಲಾನ್ ಏನೆಂದರೆ ಕೊನೆಗೆ ಅವರಿಬ್ಬರಲ್ಲಿ ಏನಾದರೂ ಜಗಳ ಬಂತು ಎಂದರೆ ಇದು " ನಾನು ಮಾಡಿದ ಬಜೆಟ್" ಎಂದು ಹೇಳಿಕೊಂಡೇ ಹೋಗಬೇಕು ಎಂದು ಅವರು ಹೊರಟಿದ್ದು ಇದು ಖಂಡಿತ ಅವರನ್ನು ಕೇಳಿ, ಬೇಕಾದರೆ ಅವರು ಇಲ್ಲಿ ಹೇಳುವುದಿಲ್ಲ, ನಾಳೆ ಹೊರಗಡೆ ಬೇಕಾದರೆ ಹೇಳುತ್ತಾರೆ ನಮ್ಮ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ ಸ್ಥಳೀಯ ಚುನಾವಣೆ ದೃಷ್ಟಿಯಿಂದಲೇ, ಅದಕ್ಕಾಗಿ ಹೇಳಿದ್ದಾರೆ, ಸದಾನಂದ ಗೌಡರು ಹೇಳಿದ್ದಾರೆನ್ನುವ ಮಾತನ್ನು ಹೇಳಿದ್ದಾರೆ ಅಂದರೆ ಇವೆಲ್ಲವನ್ನು ಕೂಡ ಚುನಾವಣೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಅಥವಾ ನಮ್ಮ ನಮ್ಮ ಸಮ್ಮಿಶ್ರ ಸರ್ಕಾರದಲ್ಲಿ ಬಿರುಕು ಬಂದಾಗ ನಾನು ಹೊರಗಡೆ ಹೋದಾಗ ಇದು ನನ್ನ ಬಜೆಟ್ ಎಂದು ಹೇಳಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಇವತ್ತಿನ ದಿವಸ ಇಂಥ ಬಜೆಟ್ಟನ್ನು ಅವರು ಮಂಡಿಸಿದ್ದಾರೆ ಅದಕ್ಕಾಗಿ ನಾನು ತಮ್ಮ ಮೂಲಕ ಅವರಿಗೆ ಒಂದು ನಾಲ್ಕು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ ಮುಖ್ಯಮಂತ್ರಿಗಳು ಇದ್ದಾರೆ, ತಾವು ಮಾಡಬೇಕು ಈಗಾಗಲೇ ಸಿದ್ಧರಾಮಯ್ಯನವರು ಕೇಳಿದ್ದಾರೆ, ಅನೇಕ ಜನ ನಮ್ಮ ನಾಯಕರು ಮಾತನಾಡಿ ಇದರ ಬಗ್ಗೆ ಕೇಳಿದ್ದಾರೆ ಇದಕ್ಕೆ ನೀವು ಏನೇ ಮಾಡಿ, ನೀವು ಕುಳಿತು ಚರ್ಚೆ ಮಾಡಿ ಇದಕ್ಕೆ ನೀವು ಸಬ್ಸಿಡಿ ರೂಪದಲ್ಲಿ ಕೊಡುವಿರೋ ಯಾವ ರೀತಿಯಾಗಿ ಕೊಡುತ್ತಿಈರೋ ಅಥವಾ ಕಾರ್ಖಾನೆಯವರನ್ನು ಕರೆಸಿ ಬೆಲೆಯನ್ನು ಫಿಕ್ಸ್ ಮಾಡಿ ಸಹಾಯ ಮಾಡತಕ್ಕಂಥದ್ದು ಮಾಡುತ್ತೀರೋ ಅದು ಮಾಡಬೇಕು ಇದಕ್ಕೆ ಪ್ರಥಮ ಆದ್ಯತೆ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ ಎರಡನೆಯದು ಈ ಸಮಾಜ ಕಲ್ಯಾಣ ಇಲಾಖೆಯಲ್ಲಿ ಅನೇಕ ಶಾಲೆಗಳಿಗೆ, ಕಾಲೇಜುಗಳಿಗೆ

fees or scholarships ಮುಟ್ಟಿಲ್ಲ ಸಮಾಜಕಲ್ಯಾಣ ಇಲಾಖಾ ಕಾರ್ಯದರ್ಶಿ, ಹಣಕಾಸು ಇಲಾಖಾ ಕಾರ್ಯದರ್ಶಿಯವರನ್ನು ಕೂರಿಸಿ ಈ ಹಣ ಎಷ್ಟು ಬಿಡುಗಡೆ ಮಾಡಬೇಕು? ಸುಮಾರು ೨೮ ಕೋಟಿ ರೂ ಗಳ ಮೇಲಿದೆ ತಕ್ಷಣ ಆ ಹಣವನ್ನು ಬಿಡುಗಡೆ ಮಾಡಬೇಕು, ಆಮೇಲೆ ಈ ಆಶ್ರಯ ಮನೆಗಳಿಗೆ ೬೦೦ ಕೋಟಿ, ರೂ ಇಡುತ್ತೇವೆ ೩ ಲಕ್ಷ ಮನೆಗಲನ್ನು ಕಟ್ಟಿಸುತ್ತೇವೆಂದು ಹೇಳಿದ್ದಿರಿ, ಆಧರೆ ಅದು ಏನೂ ಆಗಿಲ್ಲ, ಅನುಷ್ಠಾನದಲ್ಲಿಯೂ ಬರುತ್ತಿಲ್ಲ ಹದ ಬಗ್ಗೆ ಕೂಡ ಇನ್ನೂ ಕಮಿಟಿಗಳು ಆಗಿಲ್ಲ ಇವೆಲ್ಲವನ್ನು ಹಳ್ಳಿಗಳಲ್ಲಿ ಗ್ರಾಮಸಭೆ ಮಾಡಿ ಅಲ್ಲೇ ಕೊಡಬೇಕೆಂದು ಇದೆ, ಆದ್ದರಿಂದ ಬಹಳ ಅನಾಹುತ ಆಗುತ್ತಿದೆ ಕನಿಷ್ಠ ಪಕ್ಷ ಹೋದ ಸಲ ನಾವೇನು ಮಾಡಿಕೊಂಡಿದ್ದೇವೊ ಅದನ್ನು ನೋಡಿ ಯೋಚನೆ ಮಾಡಿ ಚರ್ಚೆ ಮಾಡಿ ಅದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳತಕ್ಕಂಥಾದ್ದು ಬಹಳ ಮುಖ್ಯ ಬಿ ಪಿ ಎಲ್ ಕಾರ್ಡ್ಸ್ ಬಗ್ಗೆಯಂತೂ ಎಲ್ಲಾ ಕಡೆ ಗಲಾಟೆ, ನಿಮಗೆ ಗೊತ್ತಿದೆ, ನಾವು ಹೇಳಬೇಕಾಗಿಲ್ಲ, ಖಂಡಿತವಾಗಿ ಆ ಒಂದು ವಿಷಯವನ್ನು ತೆಗೆದುಕೊಂಡು ಪ್ರತಿ ತಾಲ್ಲೂಕುಗಳಲ್ಲಿ ಹಳ್ಳಿಗಳಲ್ಲಿ ಇವತ್ತು ಈ ಬಗ್ಗೆ ಕೋಲಾಹಲವಾಗಿದೆ ಜೊತೆಜೊತೆಯಲ್ಲಿ ಅಲ್ಲಿರತಕ್ಕಂತಹ ಶಾಸಕರಿಗೂ ಕೂಡ ಇವತ್ತು ಜನ ಕೇಳುತ್ತಾರೆ ಅವರು ವ್ಯತ್ಯಾಸ ಮಾಡುವುದಿಲ್ಲ ಸರ್ಕಾರ ನೀವು ನಾವು ಅಂತ ಇಲ್ಲ ನೀವು ನಮ್ಮ ಪ್ರತಿನಿಧಿಗಳಿದ್ದೀರಿ, ಮಾಡಿ ಕೊಡಿ ಅಂತ ಕೇಳುತ್ತಾರೆ ಅದಕ್ಕೆ ಇದರ ಬಗ್ಗೆ ಹೆಚ್ಚಿನ ಗಮನ ಹರಿಸತಕ್ಕಂಥಾ ಬಹಳ ಮುಖ್ಯ ಎನ್ನತಕ್ಕಂತಹ ಮಾತನ್ನು ಇವತ್ತು ವಿಶೇಷವಾಗಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ ಆಮೇಲೆ ರೇಷನ್ ಕಡಿತ ಏನು ಮಾಡಿದ್ದೀರಿ ಅದನ್ನು ನೀವು restore ಮಾಡದೇ ಹೋದರೆ ಜನ ದಂಗೆ ಏಳುತ್ತಾರೆ ಇದು ಖಂಡಿತ, ಅದಕ್ಕಾಗಿ ಈ ರೇಸ್ ಕಡಿತವನ್ನು ತೆಗೆದು ಹಾಕಿ ಮೊದಲು ಯಾವ ರೀತಿ ಇತ್ತು ೨೫ ಕೆ ಜಿ, ಪ್ರತಿ ಕುಟುಂಬಕ್ಕೆ ಇತ್ತು ಅದನ್ನು restore ಮಾಡಬೇಕು, ಅದನ್ನು ಸರಿಪಡಿಸಬೇಕು ಎನ್ನತಕ್ಕಂತಹ ಮಾತನ್ನು ಹೇಳಿ ಬರಗಾಲಕ್ಕೆ ತಕ್ಷಣ ಹೆಚ್ಚಿನ ಹಣ ಬಿಡುಗಡೆ ಮಾಡಬೆಕು ಕುಡಿಯುವ ನೀರಿಗಾಗಿ ಮಾಡಬೇಕು ಕೆಲಸಕ್ಕಾಗಿ ಮಾಡಬೇಕು

ಮಾಡದೇ ಹೋದರೆ ಯಾರೂ ಕೂಡ ಬದುಕುವುದಿಲ್ಲವೆನ್ನತಕ್ಕ ಮಾತು ಇವತ್ತು ನಾನು ಹೇಳುವುದಕೆಕ ಇಚ್ಚೆ ಪಡುತ್ತಿದ್ದೇನೆ ಇನ್ನೂ ಅನೇಕ ವಿಷಯಗಳಿವೆ, ಆದರೆ ಸಮಯದ ಅಭಾವದಿಂದ ನಾನು ಅವುಗಳನ್ನು ಹೇಳುವುದಕ್ಕೆ ಇಚ್ಚೆ ಪಡದೇ ನಾನು ಒಂದೇ ಒಂದು ಕೇಳುತ್ತೇನೆ ಈಗಾಗಲೇ ಪ್ರಸ್ತಾವನೆ ಮಾಡಿದಂತೆ ಮಾನ್ಯ ಸಿದ್ಧರಾಮಯ್ಯನವರು ಪ್ರಸ್ತಾಪ ಮಾಡಿದ್ದಾರೆ ಏನೆಂದರೆ ಇದನ್ನು ತಾವು ಹೇಗೆ ಸರಿಪಡಿಸುತ್ತೀರಿ ಈ ನeleventh five year plan ನಲ್ಲಿ ಸಾಕಷ್ಟು ಹಣ ಒದಗಿಸಿದ್ದಾರೆ ನಮ್ಮ ರಾಜ್ಯಕ್ಕೂ ಕೂಡ ಅದರಲ್ಲಿ ವಿಶೇಷವಾಗಿ ನಿಮಗೆ ಹೇಳಬೇಕಾಗಿದ್ದರೆ Agriculture and allied activies 410 ಕೋಟಿ ರೂ General services ರೂ ೧೨೦೧ ಕೋಟಿ Rural developemtn and allied ರೂ ೪೫೮೭ ಕೋಟಿ ಆಮೇಲೆ Irrigation and buildings ರೂ ೨೪,೭೬೩ ಕೋಟಿ, Social services ರೂ ೩೨,೪೬೮ ಕೋಟಿ, Energy 12,248 ಕೋಟಿ, ಅದೇ ರೀತಿಯಾಗಿ Transport ರೂ ೧೧,೯೮೪ crores, Industry and minerals ರೂ.೧೧೨೪ crores ಇದನ್ನು ಪ್ರತಿವರ್ಷ Irrigation ಆಗಲಿ Energy ಆಗಲಿ ರೂ ೫ ಸಾವಿರ ಕೋಟಿಯಿಂದ ಕನಿಷ್ಟ ಒಂದೊಂದು sector ನಲ್ಲಿ ರೂ ೪ ಸಾವಿರ ಕೋಟಿ, ೫ ಸಾವಿರ ಕೋಟಿ ಹಣ ಬರುತ್ತದೆ ಅದಕ್ಕೆ ತಕ್ಕಂತೆ ತಮ್ಮ Annual Budget ನಲ್ಲಿ ಒದಗಿಸದೇ ಹೋದರೆ ಅಥವಾ ಆ ರೀತಿಯಾಗಿ plan size ಅನ್ನು increase ಮಾಡಿಕೊಳ್ಳದೇ ಹೋದರೆ ಇಷ್ಟೊಂದು ನಾವು ಮಾಡಿಯೂ ಪ್ರಯೋಜನವಿಲ್ಲ ಇವರಿಗೆ ೧೯ ಸಾವಿರ ಕೋಟಿ ರೂಪಾಯಿಗಳ plan ಅನ್ನು ಕೊಡುತ್ತೇವೆಂದಾಗ ಬಹುಶಃ ಅದನ್ನು ಕಟ್ ಮಾಡಿ ಆ size cut ಮಾಡಿಕೊಂಡು ರೂ ೧೬ ಸಾವಿರ some thing ಆಗಿದೆ ಏಕೆಂದರೆ ಅಷ್ಟು ನಮ್ಮಲ್ಲಿ resource ಇಲ್ಲವೆಂದು, ಹೀಗಾದರೆ ನವು ಬರತಕ್ಕಂತಹ ಹಣವನ್ನು ಕಳೆದುಕೊಳ್ಳುತ್ತೇವೆ ಏತಕ್ಕೆ ಕಳೆದುಕೊಳ್ಳುತ್ತಿದ್ದೇವೆಂದರೆ "Non plan expenditure ನಮ್ಮದು ಜಾಸ್ತಿ ಇದ್ದ ಕಾರಣ plan ನಲ್ಲಿ ನಾವು ಹೆಚ್ಚಿಗೆ ಹಣ ಕೊಡದೇ ಇರುವ ಕಾರಣ

ಇವತ್ತು ಕೇಂದ್ರ ಸರ್ಕಾರದಿಂದ ಬರತಕ್ಕಂತಹ ಅಥಾ ಅವರು ನಮ್ಮ ಮುಂದೆ ಇಟ್ಟಂತಹ ಯೋಜನೆಗಳನ್ನು ಕೂಡ ಪೂರಕವಾಗಿ ಸಹಾಯ ಮಾಡತಕ್ಕಂತಹ ಶಕ್ತಿ ನಮ್ಮಲ್ಲಿ ಇಲ್ಲ ಅದಕ್ಕೆ ಮಾನ್ಯ ಅಧ್ಯಕ್ಷರೇ ತಮ್ಮ ಮುಖಾಂತರ ಕನಿಷ್ಠ ಈಗಲಾದರೂ ಇಂತಹ core sector ಗಳಿಗೆ ಬಡತನ ನಿವಾರಣೆ ಮಾಡತಕ್ಕಂತಹ ಯೋಜನೆಗಳಿಗೆ ಅಭಿವೃದ್ಧಿಯಾಗತಕ್ಕಂತಹ ಯೋಜನೆಗಳಿಗೆ ಒತ್ತು ಕೊಟ್ಟು ಹಣವನ್ನು ಕೊಡತಕ್ಕಂಥಾದ್ದು ಮಾಡಿ, ಮಾನವ ಸಂಪನ್ಮೂಲಗಳನ್ನು ಹೆಚ್ಚಿಸತಕ್ಕಂಥಾದ್ದು ಮಾಡಿ, Education ಗೆ ನೀವು ಒತ್ತು ಕೊಡಿ, ಬಾಕಿಯದು ನಿಮ್ಮದು ಇರಲಿ, ರಾಮಮಂದಿರ, ಕೃಷ್ಣ ಮಂದಿರ, ಹನುಮಾನ್ ಮಂದಿರ ಎಲ್ಲಾ ಮಂದಿರಗಳು ನೀವು ಕಟ್ಟಿಸಿಕೊಳ್ಳಿ ಆಮೇಲೆ, ನಿಮ್ಮ ನಿಮ್ಮಲ್ಲಿ ಹಣ contribution ಮಾಡಿಕೊಂಡು, ಆದರೆ ಸರ್ಕಾರದ ಹಣ ಆ ರೀತಿಯಾಗಿ ದುರುಪಯೋಗವಗಬಾರದು ಈಗ ನವು ಕೇವಲ ಖುಷಿಪಡಿಸುವುದಕ್ಕೋಸ್ಕರ ಏನಾಗುತ್ತದೆ ನಾಳೆ ನಾವು ಇದನ್ನು ಹೇಳಿದ ತಕ್ಷಣ ಇವರು ಕಾಂಗ್ರೆಸ್ ನವರು ವಿರೋಧ ಮಾಡಿದರು, ಮಲ್ಲಿಕಾರ್ಜುನ ಖರ್ಗೆಯವರು ಇಂತಹ ಯೋಜನೆಗಳಿಗೆ anti ಎಂದು ಪ್ರಚಾರ ಮಾಡುವುದು , ಅದಕ್ಕೆ ನಾನು ಹೇಳುತ್ತೇನೆ, ಜನ ಒಂದು ವಿಶ್ವಾಸವಿಟ್ಟು ಒಂದು trust ಇಟ್ಟು ಅಧಿಕಾರ ನಿಮಗೆ ಕೊಟ್ಟಿದ್ದಾರೆ ಆ ಹಣ ನೀವು ಬಹಳ ಒಳ್ಳೆಯ ರೀತಿಯಿಂದ ಉಪಯೋಗ ಮಾಡಬೇಕು, ಜನರ ವಿಶ್ವಾಸಕ್ಕೆ ಪಾತ್ರರಾಗತಕ್ಕಂತಹ ರೀತಿಯಲ್ಲಿ ಖರ್ಚು ಮಾಡಬೇಕೇ ಹೊರತು, ಖುಷಿ ಪಟ್ಟು ಮಹಾರಾಜರಂತೆ ಹಣ ಖರ್ಚು ಮಾಡತಕ್ಕಂಥಾದ್ದು ಸರಿಯಲ್ಲವೆನ್ನತಕ್ಕಂತಹ ಮಾತನ್ನು ಹೇಳಿ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಬಸವರಾಜ ರಾಯರೆಡ್ಡಿ ಮಾನ್ಯ ಅಧ್ಯಕ್ಷರೇ, ನಾನು ತಮ್ಮನ್ನು ಮೊದಲೇ ಕೇಳಿದ್ದೆ

ಅಧ್ಯಕ್ಷರು ದಯಮಾಡಿ ಕೇಳಿ ಸವಾಮಿ, ಈಗಾಗಲೇ ಉತ್ತರ ಪ್ರಾರಂಭವಾಗಬೇಕಾಗಿತ್ತು ಈಗ ಒಂದೂವರೆ ಗಂಟೆಯಾಗುತ್ತಾ ಬಂತು

ಅದಲ್ಲದೇ ಆ ಮನೆಗೆ ಹೋಗಿ ಬರಬೇಕು ಆದ್ದರಿಂದ ಮಾನ್ಯ ಉಪಮುಖ್ಯಮಂತ್ರಿಗಳು ಉತ್ತರ ಹೇಳುತ್ತಾರೆ, ಆಮೇಲೆ ಬೇಕಾದರೆ ತಾವು clarification ಕೇಳಿ, ಅವಕಾಶ ಮಾಡಿಕೊಡುತ್ತೇನೆ ದಯಮಾಡಿ ಸಹಕರಿಸಬೇಕು ಎಲ್ಲರಿಗೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ಇದೆ ಕೆಲವರೆಲ್ಲಾ ಚೆನ್ನಾಗಿ ತಯಾರಿ ಮಾಡಿಕೊಂಡು ಬಂದಿದ್ದರು ಅಂತ ಅನಿಸುತ್ತದೆ ಆಧರೆ ಸಮಯದ ಅಭಾವ ನಾನು ಬಹಳ ಜನರಿಗೆ front line ನಲ್ಲಿರುವವರಿಗೆ ಅವಕಾಶ ಕೊಟ್ಟುಬಿಟ್ಟೆ ಚೆನ್ನಾಗಿ ಮಾತನಾಡುತ್ತಾರೆ ಅಂತ ಆ ಕಾರಣದಿಂದ ಯಾರಿಗೆ ಅವಕಾಶ ಸಿಕ್ಕಿಲ್ಲ ಅವರಿಗೆ clarification ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ ದಯಮಾಡಿ ಸಹಕರಿಸಿ

ಶ್ರೀ ಬಸವರಾಜ ರಾಯರೆಡ್ಡಿ ಮಾನ್ಯ ಅಧ್ಯಕ್ಷರೇ ೫ ನಿಮಿಷ ಅವಕಾಶ ಮಾಡಿಕೊಡಿ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೇ, ಸುಮಾರು ೨೮ ಜನ ಸದಸ್ಯರು

ಅಧ್ಯಕ್ಷರು ಸಹಕರಿಸಿ, ಏಕೆಂದರೆ ಬಹಳ ಸಮಯವಾಗಿದೆ

ಶ್ರೀ ಎಸ್ ಯಡಿಯೂರಪ್ಪ ಈ ಮುಗಡ ಪತ್ರದ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿದ್ದಾರೆ

ಶ್ರೀ ಬಸವರಾಜ ರಾಯರೆಡ್ಡಿ ಮಾನ್ಯ ಅಧ್ಯಕ್ಷರೇ, ೫ ನಿಮಿಷ ಅವಕಾಶ ಮಾಡಿಕೊಡಿ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ವಿರೋಧ ಪಕ್ಷದ ನಾಯಕರು

ಶ್ರೀ ಎಸ್ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೇ, ಅವರಿಗೆ ೫ ನಿಮಿಷ ಅವಕಾಶ ಮಾಡಿಕೊಡಿ ಅವರು ಮಾತನಾಡಿದ ಮೇಲೆ ಮಾನ್ಯ ಉಪಮುಖ್ಯಮಂತ್ರಿಗಳು ಉತ್ತರ ಕೊಡಲಿ

ಶ್ರೀ ಬಿ ಎಸ್ ಯಡಿಯೂರಪ್ಪ ಮತ್ತು ಹಿರಿಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ, ಸಾಕಷ್ಟು ಬೆಳಕು ಚೆಲ್ಲಿದ್ದಾರೆ

ಅಧ್ಯಕ್ಷರು ತಮಗೆ clarification ಗೆ ಅವಕಾಶ ಮಾಡಿಕೊಡೋಣ

ಶ್ರೀ ಬಸವರಾಜ ರಾಯರೆಡ್ಡಿ ಮಾನ್ಯ ಅಧ್ಯಕ್ಷರೇ, ತಾವು ಈ ರೀತಿ ಮಾಡುವುದು ಸರಿಯಲ್ಲ

(ಗೊಂದಲ)

ಅಧ್ಯಕ್ಷರು ನಾನು ಮಾಡುತ್ತಿರುವುದು ಸರಿಯಾಗಿದೆ ತಾವು ಸುಮ್ಮನೇ ಏತಕ್ಕೆ ಮಾತನಾಡುತ್ತೀರಿ ನಾನು ಎಷ್ಟು ಹೇಳಿದರೂ ಕೇಳುವುದಿಲ್ಲ

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ ಮಾನ್ಯ ರಾಯರೆಡ್ಡಿಯವರೇ ಮೊದಲು ಕುರ್ಚಿ ಭದ್ರ ಮಾಡಿಕೊಳ್ಳಿ ಆಮೇಲೆ ಮಾತನಾಡಿ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ನಾನು ಅರ್ಥಸಚಿವರಾಗಿ ಮತ್ತು ಉಪಮುಖ್ಯಮಂತ್ರಿಯಾಗಿ

ಶ್ರೀ ಬಸವರಾಜ ರಾಯರೆಡ್ಡಿ ಮಾನ್ಯ ಅಧ್ಯಕ್ಷರೇ ತಾವು ಈ ರೀತಿ ಮಾಡುವುದು ನೋಡಿದರೆ ತಾವು ಲಿಂಗಾಯಿತರ ವಿರೋಧಿ ಎನ್ನುವ ಭಾವನೆ ನನಗೆ ಬರುತ್ತಿದೆ

ಅಧ್ಯಕ್ಷರು ನನಗೆ ಯವ ಜಾತಿನೂ ಇಲ್ಲ ಯಾವ ಮನವೂ ಇಲ್ಲ ಏನೂ ಇಲ್ಲ ಏನ್ರೀ ರಾಯರೆಡ್ಡಿಯವರೇ, ನೀವೆಲ್ಲ ಐದು ಸಾರಿ ಗೆದ್ದು ಬಂದಿದ್ದೀರಿ ಲಿಂಗಾಯತ ವಿರೋಧಿ ಅಂತೀರಲ್ಲ, ಏನ್ರೀ ಇದು ಕುಳಿತುಕೊಳ್ರೀ, ನಿಮ್ಮದು ಜಾಸ್ತಿಯಾಯಿತು ನಾನು ಲಿಂಗಾಯತ ವಿರೋಧಿಯಂತೆ, ಏನ್ರೀ ಆ ಪದವನ್ನು ತೆಗೆದು ಹಾಕಪ್ಪ

(ಲಿಂಗಾಯತ ವಿರೋಧಿ ಎನ್ನುವ ಪದವನ್ನು ಕಡತದಿಂದ ತೆಗೆದು ಹಾಕುವಂತೆ ಮಾನ್ಯ ಅಧ್ಯಕ್ಷರು ಸೂಚಿಸಿದರು)

ಅಧ್ಯಕ್ಷರು ಇಂತಹ ಸೀನಿಯರ್ ಮೆಂಬರ್ಸ್ ಈ ತರಹ ಮಾತನಾಡಿದರೆ ಹೇಗೆ ? ಮಾತನಾಡುವುದಕ್ಕೆ ಒಂದು ಮಿತಿ ಬೇಕು ದಯಮಾಡಿ ಸಹಕರಿಸಿ

ಶ್ರೀ ಬಿ ಎಸ್ ಯಡಿಯೂರಪ್ಪ ರಾಜ್ಯದ ಅಭಿವೃದ್ಧಿ ಕೆಲಸಕ್ಕೆ

ಅಧ್ಯಕ್ಷರು ದಯಮಾಡಿ ಸಹಕರಿಸಿ ಇದಕ್ಕಿಂತ ಹೆಚ್ಚು ನಾನು ಏನೂ ಹೇಳುವುದಕ್ಕೆ ಆಗುವುದಿಲ್ಲ ತಾವು ಉತ್ತರ ಕೊಡಿ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ಅಧ್ಯಕ್ಷರೇ, ಈ ಬಜೆಟ್ ಮೇಲೆ ೨೮ ಸದಸ್ಯರು ೨೦೦೭—೮ ರ ಮುಂಗಡ ಪತ್ರದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ ಸಹಜವಾಗಿ ಪ್ರತಿಪಕ್ಷದ ನಾಯಕರು, ಹಿಂದಿನ ಹಣಕಾಸು ಸಚಿವರಾದ ಸಿದ್ದರಾಮಯ್ಯ ಮಲ್ಲಿಕಾರ್ಜುನ ಖರ್ಗೆ, ದೇಶಪಾಂಡೆ ಮದೊ ಸಾಲಿನಲ್ಲಿರುವ ಬಹು ಹಿರಿಯರು ಈ ಚರ್ಚೆಯಲ್ಲಿ ಭಾಗವಹಿಸಿ ಮುಂಗಡಪತ್ರದ ಬಗ್ಗೆ ತಮ್ಮ ಸಲಹೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಇವರೆಲ್ಲರ ಅಭಿಪ್ರಾಯಗಳನ್ನು ನಾನು ಸದ್ಭಾವನೆಯಿಂದ ಸ್ವೀಕಾರ ಮಾಡಿದ್ದೇನೆ ರಾಜ್ಯದ ಹಣಕಾಸು ಸಚಿವರಾಗಿ ಇದು ನನ್ನ ಎರಡನೇ ಮುಂಗಡಪತ್ರ ಈ ಸಾರ್ವಜನಿಕ ಬದುಕಿನಲ್ಲಿ ಕಳೆದ ೩೦ ವರ್ಷಗಳಿಂದ ನಾನೇನು ಹೋರಾಟ ಮಾಡಿ ಬಂದೆ ಆ ಜನರ ಸಮಸ್ಯೆಗಳಿಗೆ ಸ್ಪಂದಿಸುವಂತಹ

ಒಂದು ಪ್ರಾಮಾಣಿಕ ಪ್ರಯತ್ನ, ಅಬಿವೃದ್ಧಧಿಯ ವೇಗೋತ್ಕರ್ಷಕ್ಕೆ ಇಂಬು ಕೊಡುವಂತಹ ಮುಂಗಡ ಪತ್ರವನ್ನು ಸಿದ್ಧಪಡಿಸಿ ಮಂಡನೆ ಮಾಡಿದ್ದೇನೆ ಅಂತ ವಿಶ್ವಾಸ ನನಗಿದೆ ನಾಡಿನ ಜನ ಮುಂಗಡಪತ್ರವನ್ನು ಮೆಚ್ಚಿದ್ದಾರೆ ಮಾಧ್ಯಮಗಳೂ ಪ್ರಶಂಸಿಸಿವೆ ಅವರದ್ದೇ ಆದ ಅಭಿಪ್ರಾಯಗಳನ್ನೂ ಹೇಳಿದೆ ಮೈತ್ರಿ ಸರ್ಕಾರದ ಎರಡನೇ ಮುಂಗಡಪತ್ರಕ್ಕೆ ವ್ಯಾಪಕವಾದ ಪ್ರತಿಕ್ರಿಯೆ ದೊರಕಿದೆ ಮನೆಮನೆಗಳಲ್ಲಿ ಗುಡಿಸಲಿನಲ್ಲಿ ರಸ್ತೆಯಲ್ಲಿ ಕುಂತಲ್ಲಿ-ನಿಂತಲ್ಲಿ ಆಯವ್ಯಯದ ಬಗ್ಗೆ ಚರ್ಚೆ ಪ್ರಶಂಸೆ, ನಮಗೇನು ಸಿಕ್ಕಿದೆ, ಯಾವ ಅನುಕೂಲವಾಗಿದೆ – ಈ ರೀತಿ ಚರ್ಚೆಯಾಗುತ್ತಿರುವುದನ್ನು ನಾನು ಪ್ರತ್ಯಕ್ಷ ನೋಡಿದ್ದೇನೆ ಅನುಭವವಾಗಿದೆ ಒಂದು ಮಧು ಕಳೆದ ಎರಡು ಆಯವ್ಯಯದಿಂದ ಕನಿಷ್ಟ ೩೦ ರಿಂದ ೩೫ ಲಕ್ಷ ಕುಟುಂಬಗಳಿಗೆ, ನೇರವಾಗಿ, ರೈತರಿಗೆ ನೇಕಾರರಿಗೆ, ಮೀನುಗಾರರಿಗೆ ಕೃಷಿ ಕಾರ್ಮಿಕರಿಗೆ ನಿರುದ್ಯೋಗಿ ಯುವಕರಿಗೆ ಪರಿಶಿಷ್ಟ ಜಾತಿ,ಪಂಗಡಗಳ ಹಿಂದುಳಿದ ವರ್ಗಗಳ ಜನರಿಗೆ ಅಲ್ಪಸಂಖ್ಯಾತರಿಗೆ ಸವಲತ್ತು ಸಿಕ್ಕಿರುವ ಅಂಕಿ ಅಂಶಗಳನ್ನು, ನಮ್ಮ ಕಾರ್ಯಕ್ರಮಗಳೇನಿವೆ ೨೦೦೦ ರೂನಿಂದ ೨೫ ಸಾವಿರ ರೂವರೆಗೆ ಯಾವರೀತಿ ಸವಲತ್ತು ಸಿಕ್ಕಿದೆ ಎಂಬುದನ್ನು ಅಂಕಿ ಅಂಶಗಳಿಂದ ನಾನು ಹೇಳಲು ಇಚ್ಛೆಪಡುತ್ತೇನೆ

ನಾನು ಗರೀಬಿಹಠರಾವೋ ಘೋಷಣೆ ಕೇಳಿದ್ದೆ ಅದೆಷ್ಟು ಕಾರ್ಯರೂಪವಾಯಿತು ಎಂಬುದನ್ನು ಪ್ರಸ್ತಾಪಿಸದೆ ಆ ರೀತಿಯ ಘೋಷಣೆ ಮಾಡುವುದರಲ್ಲಿ ನಮ್ಮ ಸಮ್ಮಿಶ್ರ ಸರ್ಕಾರಕ್ಕೆ ವಿಶ್ವಾಸವಿಲ್ಲ ರಾಜ್ಯದ ಜನರು ಪ್ರಜ್ಞಾವಂತರಾಗಿದ್ದಾರೆ ಅಧಿಕಾರದಲ್ಲಿದ್ದ ಜನ ಯಾವ ರೀತಿ ಭರವಸೆ ಕೊಟ್ಟರು ಎಷ್ಟರ ಮಟ್ಟಿಗೆ ನಮ್ಮ ಗರೀಬಿ ಹೋಯಿತು, ಎಷ್ಟರ ಮಟ್ಟಿಗೆ ಕುಮಾರಸ್ವಾಮಿ ಯಡಿಯೂರಪ್ಪನವರ ಸರ್ಕಾರ ಬಂದ ಮೇಲೆ ನಮಗೆ ಸವಲತ್ತು ಸಿಕ್ಕಿದೆ, ನಮ್ಮ ಬಗ್ಗೆ ಚಿಂತನೆ ಮಾಡುತ್ತಿದ್ದಾರೆ ಎಂಬುದನ್ನು ಪ್ರತ್ಯಕ್ಷ ನಾವು ನೋಡಿದಾಘ ನಮಗೆ ಮನವರಿಕೆಯಾಗಿದೆ

ಹಳ್ಳಿಗಳಿಗೆ ಮೂಲಭೂತ ಸವಲತ್ತು ಒದಗಿಸಿಕೊಡುವಂತಹ ಸುವರ್ಣ ಗ್ರಾಮ ಯೋಜನೆ ಎಂಬ ವಿಶೇಷ ಕಾರ್ಯಕ್ರಮ ಬಹುಶಃ

ದೇಶದಲ್ಲೇ ಮಾದರಿಯಾದುದು ಬಹುಶಃ ಸ್ವಾತಂತ್ರ್ಯಾನಂತರ ಕರ್ನಾಟಕದಲ್ಲಿ ಯಾವುದೇ ಒಬ್ಬ ಮುಖ್ಯಮಂತ್ರಿ ಸಮಯ ಬಿಡುವು ಮಾಡಿಕೊಂಡು ಹಳ್ಳಿಗಳಲ್ಲಿ ಉಳಿದು ಅಲಿನ ಕಷ್ಟ ಕಾರ್ಪಣ್ಯಗಳನ್ನು ತಿಳಿದು ಅದಕ್ಕೆ ಪರಿಹಾರ ಕೊಡಬೇಕೆಂಬ ಪ್ರಾಮಾಣಿಕ ಪ್ರಯತ್ನ ಕರ್ನಾಟಕ ಇತಿಹಾಸದಲ್ಲೇ ಇನ್ನೊಂದು ಸಿಗುತ್ತದೆ ಅಂತ ನನಗೆ ಅನ್ನಿಸುವುದಿಲ್ಲ ಅಂಥ ಪ್ರಯತ್ನ ಈಗ ನಡೆದಿರುವುದು

ಅಧ್ಯಕ್ಷರೇ, ಬಹಳ ಚರ್ಚೆ ನಡೆದಿದೆ ಕರ್ನಾಟಕದ ಯೋಜನಾ ಗಾತ್ರ ೨೦೦೬-೦೭ರ ಸಾಲಿನಲ್ಲಿ ೧೬,೧೬೬ ಕೋಟಿ ಇದ್ದುದು ೨೦೦೭-೦೮ ಸಾಲಿಗೆ ೧೭,೭೮೨ ಕೋಟಿ ಇದೆ ತಮಗೆಲ್ಲ ಗೊತ್ತಿರುವಂತೆ ನಾವು ಈ ವರ್ಷ ೧೧ನೇ ಪಂಚವಾರ್ಷಿಕ ಯೋಜನೆಯ ಮೊದಲ ವರ್ಷದಲ್ಲಿದ್ದೇವೆ ೧೦ನೇ ಪಂಚವಾರ್ಷಿಕ ಯೋಜನೆಯಡಿ ನಾವು ಕೈಗೊಂಡ ಹಲವು ಯೋಜನೆಗಳ non plan ಗೆ ವರ್ಗಾಯಿಸಲಾಗಿದೆ ಇದರ ಮೊತ್ತ ೧೨೬೩ ಕೋಟಿ, ಇದಲ್ಲದೆ ನೀರಾವರಿಗೆ ಸಂಬಂಧಿಸಿದ ಸಾಲಗಳನ್ನು ಈ ಹಿಂದೆ ಯೋಜನೆಯಡಿ ಸೇರಿಸಲಾಗುತ್ತಿದ್ದು ಈ ವರ್ಷ ಆ ಬಾಬಿನ ೮೧೩ ಕೋಟಿಯಷ್ಟು ಹಣವನ್ನು non plan ಗೆ ವರ್ಗಾಯಿಸಲಾಗಿದೆ ಅಂದರೆ ಒಟ್ಟು ೨೦೭೬ ಕೋಟಿಗಳನ್ನು plan ಇಂದ ಗೆ non plan ವರ್ಗ ಮಾಡಿರುತ್ತೇವೆ ಇದನ್ನು ಸೇರಿಸಿದರೆ ನಮ್ಮ ೧೯,೮೫೮ ಕೋಟಿಯಾಗಿತತು ನಾವು ಸಮರ್ಪ ಸುಧಾರಣ ಕ್ರಮ ಕೈಗೊಂಡಿರುವುದರಿಂದ ನಮ್ಮ plan size ೧೭,೭೮೨ ಕೋಟಿಯಾಗಿದೆ ಅಂದರೆ ನಾವು ಕೈಗೊಂಡಿರುವ ಕ್ರಮ ಸರಿಯಿದೆ, ಆದ್ದರಿಂದ ಸರಿಯಾಗಿ ಮಾಹಿತಿ ನೀಡದೆ ಸಾರ್ವಜನಿಕರಿಗೆ ತಪ್ಪು ಗ್ರಹಿಕೆ ಮೂಡುವಂತೆ ಮಾಡುವುದು ಸರಿಯಲ್ಲ

೨೦೦೬-೦೭ ರ ಯೋಜನಾಹಂಚಿಕೆಯನ್ನ ಪೂರ್ಣ ಒದಗಿಸಿದ್ದೇನೆ

ಶ್ರೀ ಸಿದ್ದರಾಮಯ್ಯ I am on a point of order

ಶ್ರೀ ಬಿ ಎಸ್ ಯಡಿಯೂರಪ್ಪ ಈ ವರ್ಷ ಕೈಗೊಂಡ ಕಾಮಗಾರಿಕೆ ಸಂಬಂಧಿಸಿದಂತೆ ಯಾವುದೇ ಬಿಲ್‌ಗಳು ಬಾಕಿ ಉಳಿದಿಲ್ಲ

ಶ್ರೀ ಸಿದ್ದರಾಮಯ್ಯ ನನ್ನ ಕ್ರಿಯಾಲೋಪಕ್ಕೆ ಅವಕಾಶ ಕೊಡುವುದಿಲ್ಲವೇ? ರಾಜ್ಯದ ಜನತೆಗೆ ತಪ್ಪು ಮಾಹಿತಿ ಹೋಗಬಾರದು

ಶ್ರೀ ಬಿ ಎಸ್ ಯಡಿಯೂರಪ್ಪ ನನ್ನ ವಿರುದ್ಧ privilege move ಮಾಡಲಿ ನಾಳೆ

ಶ್ರೀ ಸಿದ್ದರಾಮಯ್ಯ ಮಾಡಬೇಕಾಗಿತ್ತು, ಮಾಡಲಿಲ್ಲ ನಾವು

(ಗೊಂದಲ)

ಶ್ರೀ ಸಿದ್ದರಾಮಯ್ಯ ನಾನು ಮಾತನಾಡುವಾಗ ನೀವು ಎಷ್ಟು ಸಾರಿ ಎದ್ದು ಹೇಳಿದ್ದು?

(ಗೊಂದಲ)

ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶ ಕೊಡಿ

ಶ್ರೀ ಧರ್ಮಸಿಂಗ್ Point of Order, ಎಂದರೆ, ಅದಕ್ಕೇ ಅವಕಾಶವಿಲ್ಲ Point of Order ಎಂದು ಕೇಳುತ್ತಿದ್ದರೂ, ಅವಕಾಶ ಕೊಡಬಾರದೇ?

Mr Speaker What is his point of order?

ಶ್ರೀ ಧರ್ಮಸಿಂಗ್ ಅವರು ಮಾತನಾಡತಕ್ಕಂಥ ಕಾಲದಲ್ಲಿ privilege motion move Is it the way?

ಶ್ರೀ ಸಿದ್ದರಾಮಯ್ಯ ಇಲ್ಲಿ ಕುಳಿತಿದ್ದೀರಲ್ಲ, ನಾವು ಮಾತನಾಡುವಾಗ ನೀವು ಎಷ್ಟು ಸಾರಿ interfere ಆದದ್ದು? ನೀವು ಹೇಳಿದಂತೆಲ್ಲಾ ನಾವು ಕೇಳಿಕೊಂಡು ಇರಬೇಕೇ?

ಅಧ್ಯಕ್ಷರು ಯೀಲ್ಡ್ ಆಗದೇ ಇದ್ದರೆ

ಶ್ರೀ ಬಿ ಎಸ್ ಯಡಿಯೂರಪ್ಪ ಸನ್ಮಾನ್ಯ ಅಧ್ಯಕ್ಷರೆ, ನನಗೆ ಸಿದ್ದರಾಮಯ್ಯನವರ ಬಗ್ಗೆ ಗೌರವವಿದೆ ಅವರು ಹಣಕಾಸಿನ ಸಚಿವರಾಗಿ ಆಯವ್ಯಯವನ್ನು ಮಂಡಿಸುವ ಕಾಲದಲ್ಲಿ ಸಾಕಷ್ಟು ಅನುಭವವನ್ನು ಹೊಂದಿದ್ದಾರೆ ನಾನು ಹಣಕಾಸಿನ ಸಚಿವನಾಗಿ ಜವಾಬ್ದಾರಿಯಿಂದ, ಅಂಶಗಳ ಆಧಾರದ ಮೇಲೆ ಕೆಲವು ಮಾತನಾಡಿದ್ದೇನೆ ಅವರು clarifications ಕೇಳಿದರೆ, ನಾನು ಅದಕ್ಕೆ ಉತ್ತರ ಕೊಡುವುದಕ್ಕೆ ಸಿದ್ಧನಿದ್ದೇನೆ ನಾನು ಪೂರ್ಣ ಒಂದು ಗಂಟೆ ಕಾಲ ಉತ್ತರ ಕೊಡುವುದಕ್ಕಕೆ ಅವರು ಸಹಕರಿಸಲಿ ಸನ್ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತಿದ್ದೆ ಇಲ್ಲಿ ಬಹಳಷ್ಟು ವಿಷಯಗಳು ಚರ್ಚೆಯಾಗಿದೆ ಈ ಸದನದ ಮೂಲಕ ಈ ನಾಡಿನ ಜನರಿಗೆ ವಾಸ್ತವಿಕ ಸತ್ಯಾಂಶಗಳನ್ನು ತಿಳಿಸಬೇಕಾಗಿರುವುದು ನನ್ನ ಆದ್ಯ ಕರ್ತವ್ಯ ನಾನು ಏನು ಹೇಳಿದೆ? ನಾನು ಏನು ಹೇಳಿದ್ದೆ? ೨೦೦೬-೦೭ ನೇ ಸಾಲಿನಲ್ಲಿ ಯೋಜನಾ ಹಂಚಿಕೆಯನ್ನು ಪೂರ್ಣ ಒದಗಿಸಲಾಗಿದೆ ಯೋಜನಾ ಗಾತ್ರದಲ್ಲಿ ಯಾವುದೇ ಕಡಿತ ಮಾಡಿಲ್ಲ ವಿತ್ತೀಯ ಕೊರತೆಯನ್ನು ಕೇಂದ್ರದ ನಿಬಂಧನೆಯಂತೆ GSDPಯ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ಶೇಕಡ ಮೂರರ ಮಿತಿಯೊಳಗಿದೆ ಈ ವರ್ಷ ಕೈಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಯಾವುದೇ ಒಂದು ಪೈಸೆಯಷ್ಟು ಒಂದು ಬಿಲ್ಲು ಕೂಡ ಬಾಕಿ ಇಲ್ಲ ಹಿಂದಿನ ಇತಿಹಾಸವನ್ನು ನಾವು ನೋಡಿದ್ದೇವೆ ಮಾಡಿದಂತಹ ಕಾಮಗಾರಿಗಳ ಸಂಬಂಧ ಬಿಲ್ಲುಗಳಿಗೆ ಹಣ ಪಾವತಿ ಮಾಡಿದೆ, ಸರ್ಕಾರದ ಕೆಲಸವೆಂದರೆ ಗುತ್ತಿಗೆದಾರರು ಹತ್ತಿರ ಬರದಂಥ ಕಾಲವಿತ್ತು ಕಳೆದ ೧೪ ತಿಂಗಳುಗಳಲ್ಲಿ ನಾನು ಹಾಗೂ ಮುಖ್ಯಮಂತ್ರಿಗಳು ವಿಶೇಷ ಪ್ರಯತ್ನ ಮಾಡಿ ಈ ರಾಜ್ಯದಲ್ಲಿ ಹಿಂದೆ ಮಾಡಿದಂಥ ಕಾಮಗಾರಿಗಳು ಯಾವ್ಯಾವುದು ಇವೆಯೋ, ಕಳೆದ ೪-೫ ವರ್ಷಗಳಿಂದ ಯಾವ್ಯಾವ ಬಿಲ್ಲುಗಳು ಬಾಕಿ ಇದ್ದವೋ, ಆ ಎಲ್ಲಾ ಬಿಲ್ಲುಗಳನ್ನೂ ಪಾವತಿಸಿದ್ದೇವೆ ಬಹುತೇಕ ಯಾವುದೇ ಬಿಲ್ಲುಗಳು ಖಜಾನೆಯಲ್ಲಿ ಬಾಕಿ ಇಲ್ಲ, ಇದೊಂದು ದಾಖಲೆ ಅಲ್ಲವೇನು? ಈ ಜನರು

ಮೆಚ್ಚುವುದಿಲ್ಲವೇನು? ನಾನು ಅಂಕಿ ಅಂಶಗಳನ್ನು ಕೊಡುತ್ತೇನೆ ೨೦೦೬-೦೭ನೇ ಸಾಲಿನಲ್ಲಿ ಫೆಬ್ರವರಿ ಅಂತ್ಯದವರೆಗೆ ಯೋಜನಾ ವೆಚ್ಚ ಶೇಕಡ ೭೧ರಷ್ಟಾಗಿತ್ತು ಈ ಆರ್ಥಿಕ ವರ್ಷಕ್ಕೆ ಶೇಕಡ ೯೨ ರಷ್ಟಾಗುವುದಿದೆ ನಾವು ಮಾಡಿ ತೋರಿಸುತ್ತೇವೆ ಅಂಕಿ ಅಂಶಗಳನ್ನು ಕೊಡುತ್ತೇನೆ

ಶ್ರೀ ಧರ್ಮಸಿಂಗ್ ನೀವು ಕೊಟ್ಟಿಲ್ಲ ಎಲ್ಲಾ ಸುಳ್ಳು ಹೇಳುತ್ತಿದ್ದೀರಿ

ಶ್ರೀ ಬಿ ಎಸ್ ಯಡಿಯೂರಪ್ಪ ಪ್ರತಿಪಕ್ಷದ ನಾಯಕರಾಗಿದ್ದು ಮುಖ್ಯ ಮಂತ್ರಿಗಳಾಗಿದ್ದವರು ಹಾಗೆ ಹೇಳಿದರೆ ಹೇಗೆ ? ಅದಕ್ಕೆ ನಾನು ಆಮೇಲೆ ಉತ್ತರ ಕೊಡುತ್ತೇನೆ, ಸರ್ ಮಲ್ಲಿಕಾರ್ಜುನ ಖರ್ಗೆಯವರ ಹತ್ತಿರ, ಧರ್ಮಸಿಂಗ್ ರವರ ಹತ್ತಿರ, ಸಿದ್ದರಾಮಯ್ಯನವರ ಹತ್ತಿರ ಅತ್ಯಂತ ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ನಾನು ಒಬ್ಬ ಹಣಕಾಸು ಸಚಿವರಾಗಿ, ಅಂಕಿ-ಅಂಶಗಳನ್ನು ನಾನು ಕೊಡುತ್ತಿದ್ದೇನೆಂದರೆ, ನಾಳೆ ಇದು ಸುಳ್ಳು, ಸತ್ಯಕ್ಕೆ ದೂರವಾದಂಥಾದ್ದಿ ಎಂದು ನೀವು prove ಮಾಡಿದರೆ, ನಾನು ಈ ಕುರ್ಚಿಯಲ್ಲಿ ಹಣಕಾಸು ಸಚಿವನಾಗಿ ಕುಳಿತುಕೊಂಡು ಮುಂದುವರೆಯುವುದಕ್ಕೆ ಯೋಗ್ಯನಾಗುತ್ತೇನೆಯೇ? ನಾನು ಜವಾಬ್ದಾರಿಯಿಂದ ಮಾತನಾಡುವುದಿಲ್ಲವೇ? ಮಾರ್ಚ್ ಅಂತ್ಯಕ್ಕೆ ನಾನು ನಿಮಗೆ ಏನು ಹೇಳಿದ್ದೇನೆ? ಫೆಬ್ರವರಿ ಅಂತ್ಯಕ್ಕೆ ಯೋಜನಾ ವೆಚ್ಚ ನನ್ನ ಹತ್ತಿರ ಇರುವಂತಹ ಅಂಕಿ-ಅಂಶಗಳ ಆಧಾರದ ಮೇಲೆ ೭೧% ಆಗಿದೆ, ಈವರ್ಷದ ಅಂತ್ಯಕ್ಕೆ ೯೦% ಗಿಂತಲೂ ಹೆಚ್ಚಾಗುತ್ತದೆ ಅದು ೯೨% ದಾಟದರೆ ಆಶ್ಚರ್ಯ ಪಡಬೇಕಾಗಿಲ್ಲ ನೀವೇನು ಕಳೆದ ಎರಡು ತಿಂಗಳುಗಳಿಂದ ರಾಜ್ಯದ ಉದ್ದಗಲಕ್ಕೂ ಈ ಯೋಜನಾ ವೆಚ್ಚ ೩೫, ೪೦, ೪೫ ದಾಟಿಲ್ಲವೆಂದು ಹೇಳಿಕೊಂಡು ಬಂದಿದ್ದೀರಿ, ಇದು ಸತ್ಯಕ್ಕೆ ದೂರವಾಗಿರುವಂಥಾದ್ದು ನೂರು ಬಾರಿ ಸತ್ಯಕ್ಕೆ ದೂರವಾದ ಮಾತನ್ನು ಹೇಳಿ, ಅಸತ್ಯವನ್ನು ಸತ್ಯ ಮಾಡುವುದಕ್ಕೆ ಸಾಧ್ಯವಿಲ್ಲ ಈ ನಾಡಿನ ಜನರು ಪ್ರಜ್ಞಾವಂತರಾಗಿದ್ದಾರೆ ಹಿಂದೆ ಯಾರು ಏನು ಹೇಳಿದ್ದರು, ಈಗ ೧೪ ತಿಂಗಳುಗಳಿಂದ ಏನಾಗುತ್ತಿದೆ, ಅದನ್ನು ತಿಳಿದುಕೊಳ್ಳುವಂತಹ ಶಕ್ತಿ ಕನ್ನಡ

ನಾಡಿನ ಜನರಿಗೆ ಇದೆಯೆಂದು ಅತ್ಯಂತ ವಿನಮ್ರತೆಯಿಂದ ಈ ಮನಗೆ ನಾನು ಹೇಳುವುದಕ್ಕೆ ಇಚ್ಚೆಪಡುತ್ತೇನೆ ರಾಜಸ್ವದ ಸಂಗ್ರಹದಲ್ಲಿ ದಾಖಲೆ ಬೆವಣಿಗೆಯಾಗಿದೆ ಫೆಬ್ರವರಿ ಅಂತ್ಯಕ್ಕೆ ತೆರಿಗೆ ಸಂಗ್ರಹ ಶೇಕಡ ೯೨೧೭ ರಷ್ಟಾಗಿದ್ದು, ಆರ್ಥಿಕ ವರ್ಷದ ಅಂತ್ಯಕ್ಕೆ ಶೇಕಡ ೧೦೮ ರಷ್ಟಾಗುವ ಆಶಾಭಾವನೆ ಇದೆ ಇದಕ್ಕಿಂತಲೂ ನಾನು ಎಷ್ಟು ಖರ್ಚಾಯಿತು, ಏನಾಯಿತು, ಆ ಕುರಿತಾದ ವಿವರಗಳಿಗೆ ಹೋಗುವುದಕ್ಕೆ ಇಚ್ಚೆಪಡುವುದಿಲ್ಲ ನಿನ್ನೆ ನಮ್ಮ ಗೌರವಾನ್ವಿತ ಸದಸ್ಯರು ಪತ್ರಕೆಯಲ್ಲಿ ಬಂದಂತಹ ಒಂದು editorial ಅನ್ನು ಓದಿದರು ಅದು ಬಂದಿದೆ ಸತ್ಯವಾದಂತಹ ಮಾತು ಇವತ್ತು ಮಾಧ್ಯಮಗಳಲ್ಲಿ ಬಂದಿರುವಂತಹ ಕೆಲವು ಪ್ರತಿಕ್ರಿಯೆಗಳನ್ನು ನಾನು ನೋಡಿದ್ದೇನೆ ಈ ನಾಡಿನ ಜನರಿಗೆ ಕೆಲವು ದಾಖಲೆಗಳ ಮೂಲಕ ಮಾಧ್ಯಮದವರಿಗೂ ತಿಳಿಸುವುದಕ್ಕೆ ಇಚ್ಚೆಪಡುತ್ತೇನೆ "ಸರ್ವರಿಗೂ ಸನ್ಮಂಗಳ" ದಿನಾಂಕ ೧೭ ೩ ೦೭ರ ಸಂಯುಕ್ತ ಕರ್ನಾಟಕದ ಸಂಪಾದಕೀಯ, 'ಅನ್ಯ ವಿಚಾರಗಳೇನೇ ಇರಲಿ' ಹಣಕಾಸು ಸಚಿವರಾಗಿರುವ ಉಪಮುಖ್ಯಮಂತ್ರಿಗಳು ಶುಭ ಶುಕ್ರವಾರ ಮಂಡಿಸಿದ ಬಜೆಟ್ ನಲ್ಲಿ ಸಕಲರಿಗೂ ಸನ್ಮಂಗಳವನ್ನುಂಟು ಮಾಡುವ ಆಶಾದಾಯಕವಂತೂ ಎದು ಕಾಣಿಸುತ್ತಿದೆ ರೈತರ ಸಾಲ ಮನ್ನಾ ಅದು ೨೫,೦೦೦ ರೂಪಾಯಿಗಳ ಅಲ್ಪಾವಧಿ ಸಾಲಕ್ಕೆ ಸೀಮಿತವಾದರೂ, ಸಾರಾಯಿ ಹಾಗೂ ಲಾಟರಿಯನ್ನು ರದ್ದುಗೊಳಿಸುವ ನಿರ್ಧಾರವನ್ನು ಪ್ರಕಟಿಸಲು ಧಯರ್ಯ ಮಾಡಿದ ಮೈತ್ರಿ ಸರ್ಕಾರ ಅಭಿನಂದನೀಯ, ಎರಡನೆಯದು, "ಸಮಸ್ತರಿಗೂ ನೆರವಿನ ಭರವಸೆ" ದಿನಾಂಕ ೧೭ ೩ ೦೭ರ ಕನ್ನಡಪ್ರಭ ಪತ್ರಿಕೆಯ ಸಂಪಾದಕೀಯ 'ವಿತ್ತ ಖಾತೆಯ ಹೊಣೆಯನ್ನು ಹೊತ್ತಿರುವ ಉಪಮುಖ್ಯಮಂತ್ರಿ ಶ್ರೀ ಬಿ ಎಸ್ ಯಡಿಯೂರಪ್ಪನವರು ತಮ್ಮ ಎರಡನೇ ಬಜೆಟ್ ಅಭೂತಪೂರ್ವವಾದ ರೀತಿಯಲ್ಲಿರುತ್ತದೆಂದು ವಚನ ನೀಡಿದ್ದರು ಆ ವಚನವನ್ನು ಪಾಲಿಸಿದ್ದಾರೆ "ಸರ್ವಜಿತು ಬಜೆಟ್" – ದಿನಾಂಕ ೧೭–೩–೦೭ರ ವಿಜಯ ಕರ್ನಾಟಕದಲ್ಲಿ ಹೇಳಿರುವಂಥಾದ್ದು 'ಹೊಸ ಯೋಜನೆಗಳ ಖಜಾನೆ ಎಲ್ಲರನ್ನೂ ಸಂಪ್ರೀತಗೊಳಿಸುವ ಚಿಂತನೆ ಒಟ್ಟಾರೆ, ರಾಜ್ಯದ ಸವಾಂಗೀಣ ಅಭಿವೃದ್ಧಿಗೆ

ಪೂರಕ, ಕನ್ನಡ ನಾಡು ನುಡಿಯ ಏಳಿಗೆಗೆ ಪ್ರೇರಕ' ನಾನು ಪೂರ್ತಿ ಓದುವುದಕ್ಕೆ ಹೋಗುವುದಿಲ್ಲ ಎರಡೆರಡೇ sentence ಓದುತ್ತೇನೆ ಬಜೆಟ್ ಹತ್ತಕ್ಕೆ ಎಂಟು ಮಾರ್ಕ್ಸ್ ಕೊಟ್ಟಿದ್ದಾರೆ ಯಾರು? ದಿನಾಂಕ ೧೭ ೦೩ ೦೭ ರ ಕನ್ನಡ ಪ್ರಭದಲ್ಲಿ ಆರ್ಥಿಕ ತಜ್ಞರಾದ ಡಾ ಜಿ ತಮ್ಮಯ್ಯನವರು ಬರೆದ ಲೇಖನ "ಈ ಬಜೆಟ್ ಚೆನ್ನಾಗಿದೆ ನಾನು ಹತ್ತಕ್ಕೆ ಎಂಟು ಅಂಕಗಳನ್ನು ನೀಡುತ್ತೇನೆ ಕೃಷಿ ಕ್ಷೇತ್ರಕ್ಕೆ ಹೆಚ್ಚು ನೆರವು ನೀಡಲಾಗಿದೆ ಕೃಷಿಕರ ಸಾಲ ಬಾಧೆಯನ್ನು ಸ್ವಲ್ಪ ಕಡಿಮೆ ಮಾಡಲು ಪ್ರಯತ್ನ ಪಟ್ಟಿದ್ದಾರೆ ಶೇಕಡ ೪ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯನ್ನು ಮುಂದುವರೆಸಿದ್ದಾರೆ ಬಡವರು ಎತ್ತುಗಳನ್ನು ಖರೀದಿಸಲು, ಕೃಷಿ ಸಂಶೋಧನಾ ಸಂಸ್ಥೆಳ ಸ್ಥಾಪನೆಗೆ ಒತ್ತು ನೀಡಲಾಗಿದ" ಸ್ವಾಮಿ ಈ ೧೪ ತಿಂಗಳುಗಳಲ್ಲಿ ಒಬ್ಬ ಸಾಮಾನ್ಯ ಕಡು ಬಡವನ ಮನೆಗೆ ಏನೇನು ಸವಲತ್ತುಗಳು ಸಿಕ್ಕಿವೆ ಸ್ವಾಮಿ? ೧ ೪ ೦೬ರ ನಂತರ ಹುಟ್ಟಿದಂತಹ ಹೆಣ್ಣುಮಗುವಿನ ಹೆಸರಿನಲ್ಲಿ ಭಾಗ್ಯಲಕ್ಷ್ಮಿ ಯೋಜನೆಯನ್ನು ಹತ್ತು ಸಾವಿರ ರೂಪಾಯಿಗಳಷ್ಟು ರೇವಣಿ ಇಟ್ಟಿದ್ದೇವೆ ಅದೇ ಮನೆಯಲ್ಲಿರುವ ಗಂಡು ಮಗುವಾಗಲಿ, ಹೆಣ್ಣು ಮಗುವಾಗಲಿ, ಇರುವುದಕ್ಕೆ ಜಾಗ ಸರಿಯಾಗಿ ಇಲ್ಲದಿದ್ದರೂ, ಅದೇ ಕುಟುಂಬಕ್ಕೆ ಒಂದು ಬೈಸಿಕಲ್ ಕೊಟ್ಟಿದ್ದೇವೆ ಕ್ರಾಂತಿಕಾರಿ ಕೆಲಸ ೧೦೦ ರೂಪಾಯಿ ವೃದ್ಧಾಪ್ಯ ವೇತನ, ಅಂಗವಿಕಲರ ವೇತನ, ಸರಿಯಾಗಿ ಬೆಳಿಗ್ಗೆ ತಿಂಡಿ ತಿನ್ನುವುದಕ್ಕೂ ಸಾಕಾಗುತ್ತಿರಲಿಲ್ಲ, ಒಂದು ಹೊತ್ತಿನ ಊಟಕ್ಕೂ ಸಾಕಾಗುತ್ತಿರಲಿಲ್ಲ ಹೋದ ವರ್ಷ ಏನು ಮಾಡಿದೆವು? ೨೦೦ ರೂಪಾಯಿಗಳನ್ನು ಮಾಡಿದೆವು ಈ ವರ್ಷ ಏನು ಮಾಡಿದ್ದೇವೆ? ೪೦೦ ರೂಪಾಯಿಗಳನ್ನು ಮಾಡಿದ್ದೇವೆ ಇದು ಬಡವರ ಕೆಲಸ ಅಲ್ಲವೇನು?

ಶ್ರೀ ಅಂಜನಮೂರ್ತಿ ಹಣ ಬರಲಿಲ್ಲ, ಎಲ್ಲವೂ ಪೇಪರ್ ಮೇಲಿದೆ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ಕರ್ನಾಟಕದಲ್ಲಿ ನಮ್ಮ ಉನ್ನತ ಪರಂಪರೆಯ ನೆಲೆಗಟ್ಟನ್ನು ಸುಭದ್ರಗೊಳಿಸುವುದಕ್ಕೋಸ್ಕರ ಮತ್ತು ಉನ್ನತ ಸಂಸ್ಕೃತಿಯನ್ನು ಘೋಷಿಸುವುದಕ್ಕೋಸ್ಕರ ನಮ್ಮ ಸಮ್ಮಿಶ್ರ ಸರ್ಕಾರ ಬದ್ಧವಾಗಿದೆ

ಯಡಿಯೂರಪ್ಪ ಬಂದರೆ, ಬಿ.ಜೆ ಪಿ ಯವರು ಬಂದರೆ, ಆರ್ ಎಸ್ ಎಸ್ ಕಡೆಯವರು ಬಂದರೆ ಅಲ್ಪಸಂಖ್ಯಾತರು ಬದುಕಲು ಆಗುವುದಿಲ್ಲವೆಂದು ಬೊಬ್ಬೆ ಹೊಡಿದಿರಿ ಆದರೆ, ಅಲ್ಪಸಂಖ್ಯಾತರ ಮೂಗಿಗೆ ತುಪ್ಪ ಹಚ್ಚುವ ಕೆಲಸವನ್ನು ಯಡಿಯೂರಪ್ಪ ಮತ್ತು ಕುಮಾರಸ್ವಾಮಿ ಮಾಡಲಿಲ್ಲ ೨೦ ಕೋಟಿ ತೆಗೆದಿಟ್ಟಿದ್ದಿರಿ, ಹೋದ ವರ್ಷ ೫೦ ಕೋಟಿ ತೆಗೆದಿಟ್ಟಿದ್ದೆವೆಉ, ಈ ವರ್ಷ ೧೦೦ ಕೋಟಿ ಕೊಟ್ಟಿದ್ದೇವೆ ಇನ್ನೂ ಹೆಚ್ಚು ಸಂಪನ್ಮೂಲ ಬಂದರೆ ನಾನು ಇನ್ನೂ ಹೆಚ್ಚು ಆದ್ಯತೆಯನ್ನು ಅಲ್ಪಸಂಖ್ಯಾತರಿಗೆ ಕೊಡುವವನಿದ್ದೇನೆ ಸ್ವಾತಂತ್ರ್ಯ ಬಂದು ಕಳೆದ ೩೦-೪೦ ವರ್ಷದಿಂದ ಈ ದಾಳವನ್ನು ಉಪಯೋಗಿಸಿಕೊಂಡು ರಾಜಕಾರಣ ಮಾಡುವುದನ್ನು ಕೊನೆಗಾಣಿಸುತ್ತೇವೆ ಈ ಸಮ್ಮಿಶ್ರ ಸರ್ಕಾರದಲ್ಲಿ ಯಾರು ಏನು ಎಂಬುದು ಜನರಿಗೆ ಮನವರಿಕೆಯಾಗುವ ರೀತಿಯಲ್ಲಿ ಅವರ ಮನೆಯ ಬಾಗಿಲಿಗೆ ಆ ಸೌಲಭ್ಯವನ್ನು ಒದಗಿಸಲು ಬದ್ಧರಾಗಿದ್ದೇವೆ ಮಾಡಿ ತೋರಿಸುತ್ತೇವೆ ಇದು ಘೋಷಣೆಯಲ್ಲ ಹೃದಯಾಂತರಾಳದಿಂದ ಬರುತ್ತಿರುವ ಸತ್ಯವಾದ ಮಾತು ಎಂಬುದನ್ನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ ನಮ್ಮ ಬಜೆಟ್ ಬಗ್ಗೆ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸನ್ನು ನನಸಾಗಿಸುವ ಪ್ರಯತ್ನ ಸಂತಸದಾಯಕವೆಂದು ಹೇಳಿದ್ದಾರೆ ಈ ರೀತಿ ಮೂರ್‍ನಾಕು ಲೇಖನಗಳನ್ನೇನು ಬರೆದಿದ್ದಾರೆ

ಶ್ರೀ ಸಿದ್ಧರಾಮಯ್ಯ ಹೆಚ್ ಎಸ್ ಕೆ ಯವರೇನು ಬರೆದಿದ್ದಾರೆ?

ಶ್ರೀ ಯಡಿಯೂರಪ್ಪ ಅದನ್ನೂ ಓದೋಣ, ಯಾವುದೇ ವ್ಯಕ್ತಿಗಳು ಬರೆದಿದ್ದರೂ ಒಳ್ಳೆಯದನ್ನು ತೆಗೆದುಕೊಳ್ಳುತ್ತೇವೆ

ಶ್ರೀ ವಾಟಾಳ್ ನಾಗರಾಜ್ ಕೆಟ್ಟದನ್ನು ಬಿಟ್ಟುಬಿಡುತ್ತೇವೆ!

ಶ್ರೀ ಬಿ ಎಸ್ ಯಡಿಯೂರಪ್ಪ ಅದನ್ನು ಮಾಡುವ ಜನ ನೀವು ಅದು ನಿಮ್ಮ ೪೦ ವರ್ಷಗಳ ಆಡಳಿತ ವೈಖರಿ ನಾವು ಟೀಕೆ ಮಾಡಿದ್ದನ್ನು ಸರಿಪಡಿಸಿಕೊಂಡು ತಿದ್ದಿಕೊಳ್ಳುತ್ತೇವೆ ನಮಗೆ ನಿಮಗೂ ವ್ಯತ್ಯಾಸವೇನೆಂದರೆ ಯಾರು ಟೀಕೆ ಮಾಡಿದ್ದಾರೆ ಆ ಕಡೆಗೇ ಯಡಿಯೂರಪ್ಪ ಹೆಚ್ಚು ಆದ್ಯತೆಯನ್ನು ಕೊಡುವುದು ಬೆಳಿಗ್ಗೆ ೫ ಗಂಟೆಗೆದ್ದು ದೇವರ ಪೂಜೆ ಮಾಡುವುದಕ್ಕೂ ಮೊದಲು ಪೇಪರ್ ಓದಿ ಯಾವುದು ಟೀಕೆ ಟಿಪ್ಪಣಿಗಳಾಗಿದೆ, ಅವರ ಅನುಭವದ ಆಧಾರದ ಮೇಲೆ ಮಾಧ್ಯಮದ ಸ್ನೇಹಿತರು ಯಾವುದನ್ನು ಕೊರತೆಯೆಂದು ಗುರತಿಸಿದ್ದಾರೆ ಅದನ್ನು ಸರಿಪಡಿಸಿಕೊಡಲು ಶಕ್ತಿ ಕೊಡು ಎಂದು ದೇವರನ್ನು ಕೇಳಿಕೊಂಡು ನನ್ನ ಜೀವನ ಪ್ರಾರಂಭಮಾಡುತ್ತೇನೆ ಆದ್ದರಿಂದ ಕೊರತೆಗಳನ್ನು ಸರಿಪಡಿಸಿಕೊಳ್ಳುವಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ಕೇವಲ ಅರಿಕೆ ಮಾಡಿಕೊಳ್ಳುವುದರಿಂದ ಮಕ್ಕಳಾಗುವುದಿಲ್ಲ-ವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿ !

ಶ್ರೀ ಬಿ ಎಸ್ ಯಡಿಯೂರಪ್ಪ ಡೆಕ್ಕನ್ ಹೆರಾಲ್ಡ್‌ನಲ್ಲಿ "The budget has proposed some positive measures to boost agriculture, horticulture and tourism in particular for the first time taken concrete steps to address the backwardness of north Karnataka with a special financial assistance of Rupees 1571 crores " This is the Editional in Deccan Herald dated 17 3 2007 ತಾವು ಅನೇಕ ಟೀಕೆ ಟಿಪ್ಪಣಿಗಳನ್ನು ಮಾಡಿದ್ದೀರಿ ರಾಜ್ಯದ ಹಣಕಾಸಿನ ದೃಢತೆ ಮತ್ತು ಸಂಪನ್ಮೂಲ ಸಂಗ್ರಹಣೆ ಹಾಗೂ ಸಾಮರ್ಥ್ಯದ ಬಗ್ಗೆ ಕೆಲವು ಸದಸ್ಯರು ಟೀಕೆ ಮಾಡಿದ್ದಾರೆ ರಾಜ್ಯದ ವಿತ್ತೀಯ ಶಿಸ್ತು, ಸಂಪನ್ಮೂಲ ಸಂಗ್ರಹಣೆ ಮತ್ತು ಹಣಕಾಸು ನಿರ್ವಹಣೆ ಬಗ್ಗೆ ನಾನು ಸ್ವಯಂ ಪ್ರಮಾಣ ಪತ್ರವನ್ನು ಕೊಟ್ಟುಕೊಳ್ಳುವಂತಹ ದುಸ್ಸಾಹಸ ಮಾಡುವುದಿಲ್ಲ ಆದರೆ, ಈ

ಮನೆಯಲ್ಲಿರುವಂತಹ ಇಷ್ಟು ವರ್ಷ ಅನುಭವವಿರುವಂತಹ ಮುಖ್ಯಮಂತ್ರಿಗಳಾಗಿ, ಜೀವನ ಪೂರ್ತಿ ಸಚಿವರಾಗಿ ಈ ನಾಡಿನ ಅಭಿವೃದ್ಧಿಗಾಗಿ ಹಗಲುರಾತ್ರಿ ದುಡಿದಂತಹ ನಿಮ್ಮನು, ಕೇಳುತ್ತೇನೆ, ಈ ಹಣಕಾಸಿನ ನಿರ್ವಹಣೆಯ ಬಗ್ಗೆ, ಸಂಪನ್ಮೂಲ ಸಂಗ್ರಹಣೆಯಲ್ಲಿ ಸಾಧನೆ ಮತ್ತು ವಿತ್ತೀಯ ಶಿಸ್ತಿನ ಬಗ್ಗೆ ಮುಕ್ತಕಂಠದಿಂದ ಪ್ರಶಂಸೆಯನ್ನು ಭಾರತೀಯ Reserve Bank, Planning Commission ನವರು ಮಾಡಿದ್ದಾರೆ ಅವರೇನು ನಮ್ಮ ಚಿಕ್ಕಪ್ಪ ದೊಡ್ಡಪ್ಪನವರ ಮಕ್ಕಳಲ್ಲ ರಾಜ್ಯದ ಆರ್ಥಿಕ ಸದೃಢತೆಯನ್ನು ಪರಿಗಣಿಸಿ

ಶ್ರೀ ಸಿದ್ಧರಾಮಯ್ಯ ೨೦೦೪-೦೫ಮತ್ತು ೨೦೦೫-೦೬ ರಲ್ಲೂ ಅದನ್ನು ಮಾಡಿದೆ ನೀವು ಹಣಕಾಸು ಮಂತ್ರಿಯಾಗಿ ಎರಡು ವರ್ಷ ಇದ್ದಿರಿ ೨೦೦೪-೦೫ ಮತ್ತು ೨೦೦೫-೦೬ರಲ್ಲಿ world bank ನವರು ಪ್ರಶಂಸೆ ಮಾಡಿಲ್ಲವೇ? ICRA ನವರು ನಮಗೆ A A A Certificate ಕೊಟ್ಟಿಲ್ಲವೇ? ೨೦೦೫-೦೬ರಲ್ಲಿ ನಮಗೆ fiscal incentive ಎಂದು ಕೇಂದ್ರ ಸರ್ಕಾರದವರು ೯೩೮ ಕೋಟಿ ಕೊಟ್ಟಿಲ್ಲವೇ? ಆದ್ದರಿಂದ ಇದು ನೀವು ಬಂದು ಮಾಡಿರುವುದಲ್ಲ It is continuing

ಶ್ರೀ ಬಿ ಎಸ್ ಯಡಿಯೂರಪ್ಪ ನಾನು ಅತ್ಯಂತ ವಿನಯದಿಂದ ಮಾಜಿ ಹಣಕಾಸಿನ ಸಚಿವರಾದ ಸಿದ್ದರಾಮಯ್ಯನವರಿಗೆ ಹೇಳಲು ಇಚ್ಛೆಪಡುತ್ತೇನೆ ನೀವು ಹಣಕಾಸು ಸಚಿವರಾಗಿ ಮಾಡಿದಂತಹ ಕೆಲಸವನ್ನು ನಾನು ಸಾರ್ವಜನಿಕ ಸಭೆಗಳಲ್ಲಿ ಮುಕ್ತಕಂಠದಿಂದ ಹೊಗಳಿದ್ದೇನೆ ಆ ಓದಾರ್ಯವನ್ನು ನೀವೂ ತೋರಿಸಿ ಆ ದೊಡ್ಡತನವನ್ನು ನೀವೂ ತೋರಿಸಿ ನೀವೇನು ಮಾಡಿದಿರಿ, ನಿಮ್ಮ ಕಾಲದಲ್ಲೇನು ಸಾಧನೆಯಾಗಿತ್ತು ಅದಕ್ಕಿಂತ ಎರಡು ಹೆಜ್ಜೆ ಮುಂದೆ ಕಳೆದ ೧೪ ತಿಂಗಳ ಅಧಿಕಾರದ ಅವಧಿಯಲ್ಲಿ ಹೋಗಿದ್ದೇವೆ

ಶ್ರೀ ಸಿದ್ದರಾಮಯ್ಯ ಅದಕ್ಕೆ ಅಂಕಿ ಅಂಶವನ್ನು ಕೊಟ್ಟು ಸಾಭೀತುಪಡಿಸಿ

ಶ್ರೀ ಬಿ ಎಸ್ ಯಡಿಯೂರಪ್ಪ ಹೇಳುತ್ತೇನೆ, ರಾಜ್ಯದ ಆರ್ಥಿಕ ಸದೃಢತೆಯನ್ನು ಪರಿಗಣಿಸಿ I C R A ಸಂಸ್ಥೆ LA+ ಶ್ರೇಣಿ ನೀಡಿದೆ CRISIl ಸಂಸ್ಥೆ AA ಶ್ರೇಣಿ ನೀಡಿದೆ ಇದು ರಾಷ್ಟ್ರದ ಇತರ ಇಲ್ಲಾ ರಾಜ್ಯಗಳಿಗಿಂತ ಅಧಿಕ ಶ್ರೇಣಿಯಾಗಿದೆ That is very very important ಇಡೀ ದೇಶದಲ್ಲಿ ಆರ್ಥಿಕ ನಿರ್ವಾಹಣೆಯ ಬಗ್ಗೆ ಈ ಸಂಸ್ಥೆಗಳು ಕೊಟ್ಟಿರುವ certificates number one ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯೆಂದು ನಾವು ವಾಲ್ ಪೋಸ್ಟ್ ಮಾಡಿ ಹಂಚಿಕೊಳ್ಳಲಿಲ್ಲ ಈ ಗೌರವವನ್ನೇನು ನಮಗೆ ಕೊಟ್ಟಿದ್ದಾರೆ ಅದನ್ನು ಉಳಿಸಿಕೊಂಡು ಬೆಳಸಿಕೊಂಡು ಆ ನಾಡಿನ ಜನಗೆಗೆ ಪ್ರಾಮಾಣಿಕವಾಗಿ ಸೇವೆ ಮಾಡುವುದು ಹೇಗೆ ಎಂದು ಹಗಲು ರಾತ್ರಿ ಮುಖ್ಯಮಂತ್ರಿಯವರೂ ನಾನು ಯೋಚನೆ ಮಾಡುತ್ತಿದ್ದೇವೆ ನಾವು ಬೆನ್ನು ತಟ್ಟಿಕೊಂಡಿಲ್ಲ, ಅಹಂಕಾರದಿಂದ ಮೈಮರೆತಿಲ್ಲ, ಇನ್ನೂ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ ಅದಕ್ಕೆ ಶಕ್ತಿಕೊಡು ಭಗವಂತ ಎಂದು ಪ್ರಾರ್ಥನೆ ಮಾಡುತ್ತಿದ್ದೇವೆ "ನಾನು" ಎಂಬ ಶಬ್ದ ನನ್ನ ಜೀವನದಲ್ಲಿ ಎಲ್ಲೂ ನನ್ನ ಬಾಯಿಯಿಂದ ಬಂದಿಲ್ಲ ಇದು ಯಡಿಯೂರಪ್ಪನವರ ಬಜೆಟೋ ಕುಮಾರಸ್ವಾಮಿಯವರ ಬಜೆಟೋ ಎಂದು ಇಲ್ಲಿ ಚರ್ಚೆಯಾಗುತ್ತಿದೆ ಇಷ್ಟು ವರ್ಗಗಳ ಅನುಭವವಿರುವ ನಿಮ್ಮ ಬಾಯಿಯಲ್ಲಿ ಇದು ಯಡಿಯೂರಪ್ಪನವರ ಬಜೆಟ್, ಇದು ಕುಮಾರಸ್ವಾಮಿಯವರ ಬಜೆಟ್ ಅಲ್ಲ, ಅದು ಹಾಗಾಗಿದೆ, ಅದು ಹೀಗಾಗಿದೆಯೆಂದು ಹೇಳಿದ್ದೀರಿ ಹಣಕಾಸು ಸಚಿವರಾಗಿ ನಾನಿಲ್ಲಿ ಬಿ ಜೆ ಪಿ, ಜೆ ಡಿ ಎಸ್ ಪರವಾಗಿ ಕುಳಿತ್ತಿದ್ದೇನೆ ಈ ನಾಡಿನ ಜನರ ಪರವಾಗಿ ಕಸ್ಟೋಡಿಯನ್ ಆಗಿ ಇಲ್ಲಿ ಕುಳಿತಿದ್ದೇವೆ ಆದ್ದರಿಂದ ಇದು ಬಿ ಜೆ ಪಿ, ಜೆ ಡಿ ಎಸ್ ಸಮ್ಮಿಶ್ರ ಸರ್ಕಾರದ ಬಜೆಟ್ ಒಳ್ಳೆಯದಾಗಿದ್ದರೆ ಎರಡೂ ಪಕ್ಷಕ್ಕೆ ಗೌರವ ಸಿಗುತ್ತದೆ, ಕೊರತೆಯಾಗಿದ್ದಾರೆ

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ಅದಕ್ಕೇ ನಿನ್ನೆ ತಮಗೆ ಒಂದು ಪೇಪರ್ ಕೊಟ್ಟಿ ಅದನ್ನು ತಾವು ನೋಡದೇ ಬೇರೆ ಕಡೆ ಬಿಸಾಕಿದಿರಿ ನಿಮ್ಮ ಗತಿ "ಊಪರ್ ಸೇರ್ವಾನಿ ಅಂದರ್ ಪರಿಷಾನಿ" ರೀತಿಯಾಗಿದೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಪತ್ರಿಕೆಗಳಲ್ಲಿ ಬರತಕ್ಕ ವರದಿಗಳೇನಿದೆ ಬಹಳ ವಿಷಯಗಳನ್ನು ದಾರಿ ತಪ್ಪಿಸಿ ಬರೆಸತ್ತಕ್ಕವರಿದ್ದಾರೆ ಆ ಪತ್ರಿಕೆಗಳಲ್ಲಿ ಬರುವ ವರದಿಯ ಆಧಾರದ ಮೇಲೆ ಇಲ್ಲಿ ಕುಳಿತಿರುವ ನಮ್ಮನ್ನು ಯಾವುದೇ ರೀತಿಯ ಭಿನ್ನಾಭಿಪ್ರಾಯವನ್ನು ತಂದು ಚುನಾವಣೆ,ಚುನಾವಣೆಯೆಂದು ಪ್ರತಿನಿತ್ಯ ಕನಸನ್ನೇನು ಕಾಣುತ್ತಿದ್ದಾರೆ ಆ ಕನಸು ಅವರಿಗೆ ಕನಸಾಗಿಯೇ ಇರುತ್ತದೆಂದು ಹೇಳಲು ಬಯಸುತ್ತೇನೆ

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ಕನ್ನಡ ಪ್ರಭ ಎಂಬ ಪತ್ರೆಕೆಯ ಮುಖಪುಟದಲ್ಲೇ ಅವರಿಂದ ಬರೆಸುವ ಶಕ್ತಿ ಯಾರಿಗೂ ಇನ್ನೂ ಇಲ್ಲ ಅವರದ್ದೇ ಸ್ವತಂತ್ರ್ಯವಾದ ವಿಚಾರಗಳಿವೆ Indian Express Emergency ಕಾಲದಿಂದ ಹಿಡಿದು ತನ್ನದೇ ಆದಂತಹ ವಿಚಾರವನ್ನಿಟ್ಟುಕೊಂಡು ಬಂದಂತಹ ಪೇಪರ್ ಆಗಿದೆ ಆದ್ದರಿಂದ ನಾವು ಬರೆಸುತ್ತೇವೆಯೇ? ನಿಮಗೂ ಬರೆಸಲು ಆಗುವುದಿಲ್ಲ ನಮಗೂ ಬರೆಸಲು ಆಗುವುದಿಲ್ಲ

ಶ್ರೀ ಬಿ ಶಿವರಾಂ ಹಾಗಾದರೆ ಇದುವರೆಗೆ ಯಡಿಯೂರಪ್ಪನವರು ಪತ್ರಿಕೆಗಳಲ್ಲಿ ಹೇಳಿರುವ ಪ್ರಶಂಸೆಗಳ ಬಗ್ಗೆ ಹೇಳಿದರಲ್ಲಾ ಅದನ್ನೂ ಯಾರಾದರು ಹೇಳಿ ಬರೆಸಿದರೇ?

ಶ್ರೀ ಬಿ ಎಸ್ ಯಡಿಯೂರಪ್ಪ ನಾನು ಈಗಾಗಲೇ ಸ್ಪಷ್ಟಮಾಡಿರುವಂತೆ ಫೆಬ್ರವರಿ ಅಂತ್ಯಕೆಕ ಶೇಕಡ ೭೧ರಷ್ಟು ವೆಚ್ಚವಾಗಿ ಮಾರ್ಚ್ ಅಂತ್ಯಕ್ಕೆ ೯೦-೯೨% ವೆಚ್ಚವಾಗುವ ಅಂದಾಜಿದೆ ನಾನು ಲಭ್ಯವಿರುವ ಅಂಕಿ ಅಂಶಗಳ ಆಧಾರದ ಮೇಲೆ ಹಣಕಾಸಿನ ಸಚಿವನಾಗಿ ಈ ಮಾತನ್ನು ಹೇಳಿದೇನೆ Accountant Generalರವರಿಂದ ವರದಿ ಲಭ್ಯವಾದ ಬಳಿಕ ಸ್ಪಷ್ಟ ಚಿತ್ರಣ ದೊರೆಯುತ್ತಿದೆ ಕುರುಡ ಆನೆ ಮುಟ್ಟಿ

ನೋಡಿದಾಗ ಅದು ಏನೇನೋ ರೀತಿಯಲ್ಲಿ ಅವನಿಗೆ ಕಾಣುತ್ತಿದೆ ಹಾಗೆ ನಮ್ಮ ವಿರೋಧ ಪಕ್ಷದ ಕೆಲವು ಮುಂಡರುಗಳು ಆನೆ ಮುಟ್ಟಿ ನೋಡಿ ಅವರದ್ದೇ ಆದ ಕಲ್ಪನೆಯ ರೀತಿ ಈ ಬಜೆಟ್ ಬಗ್ಗೆ ನಾವು ಮಾಡಿರುವ ಸಾಧನೆಯ ಬಗ್ಗೆ ಹೇಳುತ್ತೀರಿ ನಿಮ್ಮದೇ ಆದ ವಿಚಾರಗಳನ್ನು ಮಂಡನೆ ಮಾಡಲು ನಿಮಗೆ ಸ್ವಾತಂತ್ರ್ಯವಿದೆ ಆದರೆ, ನಮ್ಮ ಮಾಲೀಕರು ಮತದಾರರು ಎಂಬುದನ್ನು ನೀವು ಮರೆಯಬೇಡಿ ಈ ಸದನದಲ್ಲಿ ನಡೆಯುತ್ತಿರುವ ಒಂದೊಂದು ಚರ್ಚೆ, ಒಂದೊಂದು ಮಾತು, ಅಭಿಪ್ರಾಯದ ಬಗ್ಗೆ ವಾಸ್ತವಿಕ ಸತ್ಯ ಸಂಗತಿಯೇನು ಎಂಬುದನ್ನು ತಿಳಿದುಕೊಳ್ಳುವ ಶಕ್ತಿ ಅವರಿಗೆ ಇದೆ

ಯಡಿಯೂರಪಪ್ ಮತ್ತು ಕುಮಾರಸ್ವಾಮಿ ಬಂದ ಮೇಲೆ ಈ ದುಡ್ಡು ಎಲ್ಲಿಂದ ಬಂತು ? ಮೊದಲು ಈ ರೀತಿ ಬಂದಂತಹ ದುಡ್ಡು ಎಲ್ಲಿಗೆ ಹೋಗುತ್ತಿತ್ತು? ಏಕೆ ಪ್ರಗತಿಯಾಗಿಲ್ಲ? ರಾಜ್ಯದ ಉದ್ದಗಲಕ್ಕೂ ಈ ವಿಷಯ ಚರ್ಚೆಯಾಗುತ್ತಿದೆ 'ಈ ಬಜೆಟ್ ಅಭಿವೃದ್ಧಿಗೆ ಪೂರಕವಲ್ಲ, ಬೆಳವಣಿಗೆಗೆ ಸಹಾಯಕವಾಗಿಲ್ಲ' ಎನ್ನುವ ಮಾತುಗಳನ್ನು ಹೇಳಿದ್ದೀರಿ ಸ್ವಾಮಿ, ಒಂದೇ ಒಂದು ಮಾತನ್ನು ಕೊನೆಯ ಪಕ್ಷ ನಮ್ಮ ಕಾಂಗ್ರೆಸ್ ಸ್ನೇಹಿತರಿಂದ ನಾನು ಬಯಸಿದ್ದೆ ರಾಜ್ಯದ ಒಟ್ಟು ೧೭೬ ತಾಲ್ಲೂಕುಗಳ ಪೈಕಿ ೧೧೪ ತಾಲ್ಲೂಕುಗಳ ಸಮತೋಲಿತ ಅಭಿವೃದ್ಧಿಗೆ ವಿಶೇಷ ಅಭಿವೃದ್ಧಿ ಯೋಜನೆಗೆ ರೂಪಿಸಿ ಎಂಬ ಶಿಫಾರಸ್ಸನ್ನು ಡಾ ನಂಜುಂಡಪ್ಪನವರು ೨೦೦೨ರಲ್ಲಿ ಮಾಡಿದ್ದರು ಅದನ್ನು ನೀವು ಕಸದ ಬುಟ್ಟಿಗೆ ಹಾಕಿದ್ದಿರಿ ನೀವು ಅದರ ಬಗ್ಗೆ ಯೋಚನೆ ಮಾಡಿದ್ದೀರಾ?

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಯಡಿಯೂರಪ್ಪನವರೆ,

ಶ್ರೀ ಬಿ ಎಸ್ ಯಡಿಯೂರಪ್ಪ ನೀವು ಆಮೇಲೆ ಮಾತನಾಡುತ್ತಿದ್ದೀರಿ

ಶ್ರೀ ಬಿ ಎಸ್ ಯಡಿಯೂರಪ್ಪ ಏನ್ ಸಾರ್ ಇದು? ನೀವು ಕೊನೆಯಲ್ಲಿ ಉತ್ತರ ಕೊಡಿ ನಿಮಗೆ ಟೀಕೆ ಕೊಡುವುದಕ್ಕೆ ಅಧಿಕಾರವಿದೆ ಎಂದಾದರೆ, ನಾನು ಮಾತನಾಡುವುದಕ್ಕೆ ಅಧಿಕಾರವಿಲ್ಲವೇ?

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಎಸ್ ಎಂ ಕೃಷ್ಣನವರ ಕಾಲದಲ್ಲಿ ಅದರ ಶಿಫಾರಸ್ಸುಗಳನ್ನು ಜಾರಿಗೆ ತರಲಿಲ್ಲವೇ? ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಯಲವನ್ನು ಯಾರು ಮಾಡಿದರು? ಬೀದರ್‌ನಲ್ಲಿ ಪಶು ವಿಶ್ವವಿದ್ಯಾನಿಲಯವನ್ನು ಯಾರು ಮಾಡಿದರು?? ಅದನ್ನು ನೀವು ಮಾಡಿದಿರಾ? ಮಾನ್ಯ ನಂಜುಂಡಪ್ಪನವರ ವರದಿ ಜಾರಿಗೆ ನೀವು ಇವತ್ತು ಒಂದು ನಯಾಪೈಸೆ ಕೂಡ ಕೊಟ್ಟಿಲ್ಲ . ನಿಮಗೇನೂ ಹಕ್ಕಿಲ್ಲ ಮಾನ್ಯ ಅಧ್ಯಕ್ಷರೆ, ಅವರು ವಿರೋಧ ಪಕ್ಷದವರು ಹೇಳಿದರು ಎಂದು ಹೇಳುತ್ತಾರೆ ಅದನ್ನು ನಾವು ಹೇಳಿಲ್ಲ ಮಾನ್ಯ ಸದಾನಂದಗೌಡರು ಮೊನ್ನೆ ಬಿ ಜೆ ಪಿ ಶಾಸಕರ ಸಭೆಯೊಂದನ್ನು ಮಾಡಿದರು ಅಲ್ಲಿ ಅವರು ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮಾನ್ಯ ಯಡಿಯೂರಪ್ಪನವರ ಬಜೆಟ್ ಅನ್ನು ತೆಗೆದುಕೊಂಡು ಹೋಗೋಣ' ಎಂದು ಹೇಳಿದ್ದಾರೆ ನೀವು ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಬನ್ನಿ ನೋಡೋಣ ೮೦ ಬಿ ಜೆ ಪಿ ಶಾಸಕರಿದ್ದರೂ ಕೂಡ ಕಳೆದ ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಮಚಾಯಿತಿ ಚುನಾವಣೆಗಳಲ್ಲಿ ಒಂದೇ ಒಂದು ತಾಲ್ಲೂಕು ಪಮಚಾಯಿತಿಯಲ್ಲಾಗಲಿ ಅಥವಾ ಜಿಲ್ಲಾ ಪಂಚಾಯಿತಿಯಲ್ಲಾಗಿಲಿ ಸಹ ತಾವ ಅಧಿಕಾರಕ್ಕೆ ಬರಲಿಲ್ಲ ಅದೇ ಗತಿ ಮುಂದಕ್ಕೂ ಕೂಡ ಬರುತ್ತದೆ

(ಗೊಂದಲ)

ಇದು ಬಿ ಜೆ ಪಿ ಯ ಅಜೆಂಡಾ ಆಗಿದೆ ಎಲ್ಲಾ ಸ್ವಾಮಿಗಳಿಗೂ ಮತ್ತು ಮಠಗಳಿಗೂ ಹಣ ಕೊಟ್ಟು 'ಗುಡಿಸಲಿನಲಿ ಮಾತನಾಡಿಕೊಳ್ಳುತ್ತಿದ್ದಾರೆ' ಎಂದು ಹೇಳಿಕೊಳ್ಳುತ್ತಿದ್ದೀರಿ ಗುಡಿಸಲಿನಲ್ಲಿ ಜನ ಸಾಯುತ್ತಿದ್ದಾರೆ ಮೇವು ಸಿಗುತ್ತಿಲ್ಲ ಬರಗಾಲದ ಕೆಲಸ ಆಗುತ್ತಿಲ್ಲ, ಒಂದು ನಯಾಪೈಸೆ ಸಹ ಬಿಡುಗಡೆ ಮಾಡಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ ಹೊಟ್ಟೆ ಉರಿಯಿಂದ ಈ ಮಾತನ್ನು ಹೇಳುತ್ತಿದ್ದೀರಿ

ಶ್ರೀ ಅರಗ ಜ್ಞಾನೇಂದ್ರ ಕಳೆದ ವಿಧಾನಸಭೆಯಲ್ಲಿ ನಿಮ್ಮ ಸ್ಥಾನ ಏನೆಮಬುದನ್ನು ಜನರು ತೋರಿದಿದ್ದಾರೆ ಈ ಸಾರಿ ಮತ್ತೊಂದು ಸ್ಥಾನವನ್ನು ಜನ ತೋರಿಸುತ್ತಾರೆ ಅಷ್ಟೆ ಇದು ಖಂಡಿತ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಧರ್ಮಸಿಂಗ್ ಅವರಿಗೆ ಸಿಟ್ಟು ಬರುವುದಕ್ಕೆ ಕಾರಣವಿದೆ ಅವರ ಹೃದಯ ಶುದ್ಧವಿದೆ ಯಡಿಯೂರಪ್ಪನವರ ಬಗ್ಗೆ, ಮಾನ್ಯ ಕುಮಾರಸ್ವಾಮಿಯವರ ಬಗ್ಗೆ, ಈ ಬಜೆಟ್ ಬಗ್ಗೆ ಅವರು ಒಳಗೊಳಗೆ ಸಂತೋಷ ಪಟ್ಟರೂ ಸಹ, ಮಾನ್ಯ ವಿರೋಧ ಪಕ್ಷದ ನಾಯಕರಾಗಿ ಅವರು ಇದನ್ನು ವಿರೋಧ ಮಾಡಲೇಬೇಕು ಅದು ನಿಮ್ಮ ಧರ್ಮ ಆ ಧರ್ಮವನ್ನು ನೀವು ಮಾಡಿದ್ದೀರಿ

(ಗೊಂದಲ)

ಅಧ್ಯಕ್ಷರು ಎಲ್ಲರೂ ದಯಮಾಡಿ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಧರ್ಮಸಿಂಗ್ ರವರು ಹೇಳುವುದು ನಿಜವಾಗಿದೆ Local bodies elections ನಲ್ಲಿ, ಪುರಸಭೆ, ನಗರಸಭೆ ಪಂಚಾಯಿತಿಗಳಲ್ಲಿ ನಿಮ್ಮ ಮಟ್ಟಕ್ಕೆ ನಾವು ಏರಿಲ್ಲ ಇದನ್ನು ಇಲ್ಲಿ ಕುಳಿತಿರುವ ಎಲ್ಲರೂ ಗಮನಿಸಬೇಕು ಈ ಬಾರಿ ಅವರನ್ನು ನೆಲ ಕಚ್ಚುವಂತೆ ಮಾಡುತ್ತೇವೆ ಎಂದು ಸಂಕಲ್ಪ ತೊಡಬೇಕು ಆ ರೀತಿ ಉತ್ತರ ಕೊಡಬೇಕು ಅವರು ಹೇಳಿದ್ದು ಸರಿ ಇದೆ ಸತ್ಯವನ್ನೇಕೆ ಮರೆ ಮಾಡಬೇಕು? ನೀವು ಹೇಳಿದ್ದು ನೂರಕ್ಕೆ ನೂರರಷ್ಟು ಸರಿಯಿದೆ ನಾವು ಈ ರಾಜ್ಯದಲ್ಲಿ ೭೯ ಜನ ಎಂ ಎಲ್ ಎ ಗಳು ಗೆದ್ದಿದ್ದೇವೆ, ೧೭ ಜನ ಎಂ ಪಿ ಗಳು ಗೆದ್ದಿದ್ದೇವೆ ದೆಹಲಿಗೆ ಹೋಗಿ 'B

Form' ತಂದರೆ ಕಾಂಗ್ರೆಸ್‌ನ ಸ್ನೇಹಿತರು ಗೆದ್ದು ಬರುವಂತಹ ಒಂದು ಕಾಲವಿತ್ತು ಆದರೆ ಈಗ ಕರ್ನಾಟಕದಲ್ಲಿ ಕಾಂಗೆಸ್‌ನ ಸ್ಥಿತಿ ಏನಾಗಿದೆ? ಅದನ್ನೂ ನೀವು ಯೋಚನೆ ಮಾಡಬೇಕಲ್ಲ? ನೀವು ಹೇಳುವುದು ಸರಿಯಿದೆ 'ಯಡಿಯೂರಪ್ಪನವರ, ಬರೀ ಎಂ ಪಿ ಸೀಟ್ ಗೆದ್ದರೆ ಆಗುವುದಿಲ್ಲ ಬರೇ ಎಂ ಎಲ್ ಎ ಗೆದರೆ ಆಗುವುದಿಲ್ಲ, ಪುರಸಭೆ, ನಗರಸಭೆ ಮತ್ತು ಇತರ ಲೋಕಲ್ ಬಾಡಿಗಳ ಬಗ್ಗೆಯೂ ನೀವು ಗಮನ ಕೊಟ್ಟು, ನೀವು ಬೆಳೆಯಬೇಕು, ಕೆಲಸ ಮಾಡಬೇಕು ಎನ್ನುವ ನಿಮ್ಮ ಮನದಾಳದಲ್ಲಿರುವಂತಹ ಭಾವನೆಯನ್ನು ವ್ಯಕ್ತಪಡಿಸಿದ್ದೀರಿ ಆ ಕಡೆಗೆ ವಿಶೇಷ ಗಮನವನ್ನು ನಾವು ಕೊಡತ್ತೇವೆ ಇದರಲ್ಲಿ ತಪ್ಪೇನೂ ಇಲ್ಲ

ಶ್ರೀ ಧರ್ಮಸಿಂಗ್ ಆ ರೀತಿ ನಾನು ಹೇಳಲಿಲ್ಲ ೨೦೦೪ರ ಚುನಾವಣೆಯಲ್ಲಿ ನಿಮ್ಮ ೭೯ ಶಾಸಕರು ಅರಿಸಿ ಬಂದಿದ್ದರು ಆದರು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯಲ್ಲಿ ನಿಮ್ಮ ಗತಿ ಏನಾಯಿತು?

ಶ್ರೀ ಬಿ ಎಸ್ ಯಡಿಯೂರಪ್ಪ ಸರಿ ಇಲ್ಲ

ಶ್ರೀ ಧರ್ಮಸಿಂಗ್ ಅಲ್ಲಿ ಒಂದು ಕಡೆಯಾದರೂ ನೀವು ಬಂದಿರಾ? ಅದೇ ಗತಿ ನಿಮಗೆ ಮುಂದಕ್ಕೂ ಕೂಡ ಆಗುತ್ತದೆ

ಶ್ರೀ ಬಿ ಎಸ್ ಯಡಿಯೂರಪ್ಪ ಸಾರ್, ನಾನು ಇಷ್ಟು ತಿಳಿದುಕೊಂಡಿದ್ದೇನೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮ ಮಾಲೀಕರು ಜನ ಮುಗ್ಧ ಜನರನ್ನು ಹಳ್ಳಿಯಲ್ಲೇ ಬಿಟ್ಟು, ವರ್ಷಕ್ಕೊಮ್ಮೆ ಚುನಾವಣೆ ಬಂದಾಗ ಅವರ ಬಳಿ ಹೋಗಿ, ಅವರ ಮೂಗಿಗೆ ತುಪ್ಪ ಹಚ್ಚಿ, ಅದನ್ನು ಮಾಡುತ್ತೇನೆ, ಇದನ್ನು ಮಾಡುತ್ತೇನೆ ಎಂಬ ಆಶ್ವಾಸನೆ ಕೊಡುವುದು ಬೇಡ, ಕಾಂಗ್ರೆಸ್ ಪಾರ್ಟಿ ಬಳ ದೊಡ್ಡ ಪಾರ್ಟಿ, ನೂರಾರು ವರ್ಷಗಳ ಕಾಲದ ಇತಿಹಾಸ ಇರುವಂತಹ ಪಾರ್ಟಿ ಜನರ ಮನವೊಲಿಸಿ BJP/JD[S] ಕಡೆಗೆ ಅವರ ಗಮನ ಬರುವಂತೆ ಮಾಡುವುದಕ್ಕೆ ನಮಗೆ ೫೦ ವರ್ಷಗಳೇ ಬೇಕಾಯಿತು

ಅದು ಕಡಿಮೆ ಅವಧಿಯಲ್ಲ ಮಹಾತ್ಮ ಗಾಂಧಿ ಹೆಸರು, ಜವಾಹರಲಾಲ್ ನೆಹರೂ ಹೆಸರು, ಇಂದಿರಾಗಾಂಧಿ ಹೆಸರು

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ನೂರಾರು ವರ್ಷಗಳ ಇತಿಹಾಸ ಹೊಂದಿರುವ ಪಾರ್ಟಿ ನಮ್ಮದು

ಶ್ರೀ ಬಿ ಎಸ್ ಯಡಿಯೂರಪ್ಪ ಅದನ್ನು ನಾನು ಒಪ್ಪುತ್ತೇನೆ ಇಲ್ಲವೆಂದು ನಾನು ಹೇಳುವುದಿಲ್ಲ ನಿಮ್ಮನ್ನು ಟೀಕೆ ಮಾಡಿದರೆ ನೀವು ಬೇಜಾರು ಮಾಡಿಕೊಳ್ಳಬೇಕು ನಾನು ನಿಮ್ಮನ್ನು ಟೀಕೆ ಮಾಡುತ್ತಿಲ್ಲ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದಂತಹ ಹಿರಿಯರ ಹೆಸರಿನಲ್ಲಿ, ಅವರ ಆಶೀರ್ವಾದದಿಂದ ಇದುವರೆಗೂ ನೀವು ಅಧಿಕಾರದಲ್ಲಿದ್ದಿರಿ ಅದಕ್ಕಾಗಿಯೇ ಅವತ್ತು ಮಹಾತ್ಮ ಗಾಂಧೀಜಿಯವರು ಹೇಳಿದರು ಚುನಾವಣೆ ಬಂತು ಎಂದು, ಕಾಂಗ್ರೆಸ್ ಎಂಬ ಹೆಸರಿಟ್ಟುಕೊಂಡು, ಆ ಹೆಸರಿನಲ್ಲಿ ಓಟು ತೆಗೆದುಕೊಂಡು, ನಮ್ಮ ಹೆಸರನ್ನು ಉಪಯೋಗಿಸಬೇಡಿ, ಬೇರೆ ರಾಜಕೀಯ ಪಕ್ಷ ಕಟ್ಟಿ ಎಂದು ಕಾಂಗ್ರೆಸ್ ಕಟ್ಟಿದಂತಹ ದೊಡ್ಡವರೆಲ್ಲಾ ಅವತ್ತೇ ಹೇಳಿದ್ದರು ಆದರೆ ನಿಮಗೆ ಗೊತ್ತಿತ್ತು ಕಾಂಗ್ರೆಸ್ ಬಿಟ್ಟು ಬೇರೆ ಪಕ್ಷದ ಹೆಸರನ್ನು ಹೇಳಿದರೆ, ನಿಮ್ಮ ಅಡ್ರೆಸ್ ಇರುವುದಿಲ್ಲ ಎಂದು ಹೇಳಿ ಅದೇ ಹೆಸರನ್ನು ಉಳಿಸಿಕೊಂಡು ಬಂದಿರಿ ಆದರೆ ಇವತ್ತು ನಿಮ್ಮ ಅಡ್ರೆಸ್ automatically ಹೋಗುತ್ತಿದೆ ಆ ಪುಣ್ಯ ಇತ್ತಲ್ಲಾ ಸ್ವಾಮಿ, ಈಗಲೂ ನಾನು ನಿಮಗೊಂದು ಕಿವಿ ಮಾಥು ಹೇಳುತ್ತೇನೆ, ದಯಮಾಡಿ ಬೇಸರ ಮಾಡಿಕೊಳ್ಳಬೇಡಿ, ಬೇಸರ ಮಾಡಿಕೊಂಡರೆ ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ ಆ ಕಾಂಗ್ರೆಸ್‌ನ, ಆ ತ್ಯಾಗ ಮಾಡಿದಂತಹ ಹಿರಿಯರ ಪುಣ್ಯ ಏನಿತ್ತೋ, ಅದು ಸ್ವಲ್ಪವೇ ಸ್ವಲ್ಪ ಉಳಿದಿದೆ ಅದನ್ನು ಪೂರ್ತಿಯಾಗಿ ಕಳೆಯುವಂತಹ ಪ್ರಯತ್ನಕ್ಕೆ ನೀವು ಕೈ ಹಾಕಬೇಡಿ ಈಗಲಾದರೂ ಜವಾಬ್ದಾರಿಯಿಮದ ಜನರ, ಬಡವರ ಸಮಸ್ಯೆಗಳನ್ನು ಬಗೆಹರಿಸುವ ಕಡೆಗೆ ಗಮನ ಕೊಡಿ ಬರೇ ಘೋಷಣೆಯಲ್ಲೇ ಕಾಲ ಕಳೆಯುವುದಕ್ಕೆ ಆಗುವುದಿಲ್ಲ ಕಳೆದ ೧೪ ತಿಂಗಳ ನಮ್ಮ ಸಾಧನೆ, ೪೦ ತಿಂಗಳಿನಲ್ಲಿ ನಾವು ಬಡವರಿಗಾಗಿ ಮಾಡುವಂತಹ ಕಾರ್ಯಕ್ರಮಗಳ

ಆಧಾರದ ಮೇಲೆ ಜನ ಓಟು ಕೊಡುತ್ತಾರೆಯೇ ವಿನಃ, ಪೊಳ್ಳು ಘೋಷಣೆ ಮೇಲೆ ಯಾವುದೇ ರಾಜಕೀಯ ಪಕ್ಷಕ್ಕೆ ಓಟು ಕೊಡುವಂತಹ ಕಾಲ ಹೋಗಿದೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಯಡಿಯೂರಪ್ಪನವರು ಬಹಳ ಜೋರಾಗಿ ಹೇಳಿದರು ನಮ್ಮ ಪಕ್ಷಕ್ಕೆ ಜನ ಬೆಮಬಲ ಇದೆ, ನಾವು ೭೯-೮೦ ಜನ ಆರಿಸಿ ಬಂದಿದ್ದೇವೆ, ಸುಮಾರು ೧೬-೧೭ ಜನ ಪಾರ್ಲಿಮೆಂಟ್ ಸದಸ್ಯರು ಆರಿಸಿ ಬಂದಿದ್ದೇವೆ ಎಂಬ ಮಾತನ್ನು ಅವರು ಹೇಳಿದರು ಎಷ್ಟು ಮತಗಳನ್ನು ತಾವು ತೆಗೆದುಕೊಂಡಿರಿ ಸ್ವಾಮಿ? ಕಾಂಗ್ರೆಸ್ ೩೯% ಓಟು ತೆಗೆದುಕೊಂಡರೆ, ೨೭% ಬಿ ಜೆ ಪಿ ತೆಗೆದುಕೊಂಡರು, ೧೫% ಜೆ ಡಿ[ಎಸ್] ನವರು ತೆಗೆದುಕೊಂಡರು ಇಬ್ಬರು ಪಡೆದ ಶೇಕಡವಾರು ಮತಗಳನ್ನು ಗಣನಿಗೆ ತೆಗೆದುಕೊಂಡರೂ ಸಹ ಕಾಂಗ್ರೆಸ್ ನ ಸಮೀಪಕ್ಕೆ ಬರುವುದಿಲ್ಲ ನಾನು ಈ ಮಾತನ್ನು ಏತಕ್ಕಾಗಿ ಹೇಳುತತಿದ್ದೇನೆ ಎಂದರೆ ನಮ್ಮ ದುರ್ದೈವ, ನಾವು ೩೯% ಓಟುಗಳನ್ನು ತೆಗೆದುಕೊಂಡರೂ ಸಹ ಕೇವಲ ೬೦ ಜನರು ಮಾಥ್ರ ಆರಿಸಿ ಬಂದೆವು ಜನ ಬೆಂಬಲ ಯಾರಿಗಿದೆ? ಎಂಬ ಬಗ್ಗೆ ಸ್ವಲ್ಪ ನಾನಿಲ್ಲಿ ಹೇಳುತ್ತಿದ್ದೇನೆ ಜನ ಬೆಂಬಲ ಯಾರಿಗಿದೆ ಎಂಬುದು ಇದರಲ್ಲಿ ಗೊತ್ತಾಗುತ್ತದೆ ಅದನ್ನು ಬಿಟ್ಟು ನೀವು ಸುಮ್ಮನೆ, ಮ್ಯಾಜೀಕ್ ಫಿಗರ್ ಬಂದಿರುವುದನ್ನು ಹಿಡಿದುಕೊಂಡು, ಅದನ್ನೇ ನಮ್ಮ ಬೆಂಬಲ ಎಂದು ಹೇಳುವುದಕ್ಕೆ ಹೋಗಬೇಡಿ ಬಿ ಜೆ ಪಿ ಅಜೆಂಡಾವೇ ಬೇರೆ, ಆರ್ ಎಸ್ ಎಸ್ ಅಜೆಂಡಾವೇ ಬೇರೆ ಹಿಂದಿನ ಜನಸಂಘ ಇವತ್ತಿನ ಬಿ ಜೆ ಪಿ ಅಲ್ಲ ಎಲ್ಲೋ ಸಾಂದರ್ಭಿಕವಾಗಿ, ಗಾಂಧರ್ವ ವಿವಾಹವಾಗಿದೆಯೋ ಹೊರತಾಗಿ, ನಿಮ್ಮದು ಪರ್ಮನೆಂಟ್ ವಿವಾಹವೇನಲ್ಲ ನಿಮ್ಮದು ಯಾವಾಗ ಬೇಕೋ ಆಗ divorce ಆಗುತ್ತಿದೆ ಮತ್ತೊಮ್ಮೆ ನೀವೊಂದು 'ಕಡೆಗೆ, ಅವರೊಂದು ಕಡೆಗೆ ಹೋಗುತ್ತೀರಿ ಇದು ಈ ಸಮ್ಮಿಶ್ರ ಸರ್ಕಾರದ ಕೊನೆಯ ಬಜೆಟ್ ಆಗಲಿದೆ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಬಹಳ ಮಾರ್ಮಿಕವಾಗಿ ಈ ಮಾತನ್ನು ಹೇಳಿದ್ದಾರುಎ

ಅವರ ಮಾತನ್ನು ಸುಳ್ಳು ಮಾಡುವಂಥದ್ದು ಈ ಕಡೆಗೆ ಕುಳಿತಿರುವ JD[S] & BJP ಸದಸ್ಯರ ಮತ್ತು ಮುಖಂಡರುಗಳ ಜವಾಬ್ದಾರಿಯಾಗಿದೆ

(ಗೊಂದಲ)

ಒಂದು ನಿಮಿಷ ಸಾರ್, ಅವಸರ ಮಾಡಬೇಡಿ

ಶ್ರೀ ಡಿ ಕೆ ಶಿವಕುಮಾರ್ ಇದನ್ನು ಬೇಕಾದರೆ ನಿಮ್ಮ ಪಾರ್ಟಿ ಮೀಟಿಂಗ್ ನಲ್ಲಿ ಹೇಳಿಕೊಳ್ಳಿ ಈ ಬೋಧನೆ ನಮಗೆ ಬೇಡ, ಅವರಿಗೆ ಹೇಳಿಕೊಳ್ಳಿ

(ಗೊಂದಲ)

ಶ್ರೀ ಹೆಚ್ ಸಿ ಬಾಲಕೃಷ್ಣ ನೀವು ಹಗಲು ಗನಸು ಕಾಣುತ್ತಿದ್ದೀರಲ್ಲಾ, ಆದ್ದರಿಂದ ಅವರು ಈ ಮಾತನ್ನು ಇಲ್ಲಿ ಹೇಳಲೇಬೇಕಾಗಿದೆ ಪಾರ್ಟಿ ಮೀಟಿಂಗ್ ನಲ್ಲಿ ನಾವು ಬೇರೆ ಹೇಳಿಕೊಳ್ಳುತ್ತೇವೆ

(ಗೊಂದಲ)

ಶ್ರೀ ಎಂ ಪಿ ವೆಂಕಟೇಶ್ ಮಾನ್ಯ ಡಿ ಕೆ ಶಿವಕುಮಾರ್ ರವರೆ, ಮಾನ್ಯ ಸಿದ್ದರಾಮಯ್ಯನವರು ನಮ್ಮ ಪಕ್ಷದಿಂದ ನಿಂತಿದ್ದಾಗ ಬಂದ ಮತವೆಷ್ಟು? ಕಾಂಗ್ರೆಸ್‌ನಿಂದ ನಿಂತಿದ್ದಾಗ ಬಂದ ಮತವೆಷ್ಟು? ಆಗ ನಿಮ್ಮ ಕಥೆ ಏನಾಯಿತು? ಎಲ್ಲಿಗೆ ಹೋದರಿ ನೀವು?

(ಗೊಂದಲ)

ಶ್ರೀ ಹೆಚ್ ಬಾಲಕೃಷ್ಣ ನೀವು ಅಗಲು ಕನಸು ಕಾಣುತತಿದ್ದೀರಲ್ಲ ಅದಕ್ಕೆ ಇಲ್ಲಿ ಹೇಳಲೇ ಬೇಕು, ನಮ್ಮ ಪಾರ್ಟಿ ಮಿಟಿಂಗ್ ನಲ್ಲಿ ಹೇಳಿಕೊಳ್ಳುತ್ತೇವೆ

(ಗೊಂದಲ)

ಶ್ರೀ ವೆಂಕಟೇಶ್ ಡಿ ಕೆ ಶಿವಕುಮಾರ್ ರವರೆ, ಸಿದ್ಧರಾಮಯ್ಯನವರು ನಮ್ಮ ಪಕ್ಷದಲಿದ್ದಾಗ ಮಾತನಾಡಿದಷ್ಟು, ನಿಮ್ಮ ಪಕ್ಷಕ್ಕೆ ಬಂದು ಮಾತನಾಡುವಾಗ ನಿಮ್ಮ ಕತೆ ಏನಾಯಿತು ? ಎಲ್ಲಿಎ ಹೋದಿರೆ ಹೇಳಿ, ನೀವು ತಪ್ಪಿಗೆ ಹೋದಿರಿ

ಶ್ರೀ ಹೆಚ್ ಬಾಲಕೃಷ್ಣ ಇಲ್ಲಿ ಹಗಲು ಕನಸು ಕಾಣುತ್ತಿದ್ದಾರೆ

ಅಧ್ಯಕ್ಷರು ಅವರು ಉತ್ತರ ಹೇಳುವುದಕ್ಕೆ ಅವಕಾಶ ಕೊಡಿ

ಶ್ರೀ ದಿನೇಶ್ ಗುಂಡೂರಾವ್ ಮುಂದಿನ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ನಿಮ್ಮದಲು ಈಗಲೇ ಹೊಂದಾಣಿಕೆ ಹೋಗಿದೆ, ಹೊಂದಾಣಿಕೆ ಎಲ್ಲಿದೆ? ಮೊನ್ನೆ ದಿವಸ ದೇವೇಗೌಡರು, ನಮಗೂ ಬಿಜೆಪಿಗು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಹೊಂದಾಣಿಕೆ ಇಲ್ಲವೆಂದು ಹೇಳಿದರಲ್ಲ ಸಿದ್ಧರಾಮಯ್ಯನವರನ್ನು ಸೋಳಿಸುವುದಕ್ಕೋಸ್ಕರ ಒಂದಾಗಿರಿ ಅದರಲ್ಲೂ ವಿಫಲವಾದರಿ .

(ಗೊಂದಲ)

ಶ್ರೀ ಹೆಚ್ ಬಾಲಕೃಷ್ಣ ದಿನೇಶ್ ಗುಂಡೂರಾವ್ ರವರೆ, ನಮ್ಮ ಹಣಪಾಡಿಗೆ ಏನೋ ಮಾಡಿಕೊಳ್ಳುತ್ತೇವೆ ನಿಮ್ಮದನ್ನು ನೋಡಿಕೊಳ್ಳಿ

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ ಕೋಮುವಾದಿ ಪಕ್ಷವನ್ನು ಬೆಳೆಸುತ್ತಿದ್ದೀರಿ, ನೀವು ನಿರ್ನಾಮವಾಗುತ್ತೀರಿ, ಅದರ ಬಗ್ಗೆ ಯೋಚನೆ ಮಾಡಿ (ಗೊಂದಲ)

ಶ್ರೀ ಹೆಚ್ ಆಂಜನೇಯ ಅಲ್ಲ, ಬಿಜೆಪಿ ಕೋಮುವಾದಿಗಳಾದರೆ, ನೀವು ಯಾಗಿವಾದಿಗಳು

(ಗೊಂದಲ)

ಶ್ರೀ ದಿನೇಶ ಗುಂಡೂರಾವ್ ಮಾತನಾಡುವುದಕ್ಕೆ ಏನು ನೈತಿಕತೆ ಇದೆ ರೀ, ಇಷ್ಟು ವರ್ಷ ಕಾಂಗ್ರೆಸ್ ನಲ್ಲಿದ್ದುಕೊಂಡು ಎಲ್ಲಾ ಅಧಿಕಾರವನ್ನು ಅನುಭವಿಸಿ ಈಗ ನೀವು ದಣಿಗಳಾಗಿದ್ದಿರಿ, ಈಗ ಏತಕ್ಕೆ ಮಾತನಾಡುತ್ತೀರಿ ಸುಮ್ಮನೆ ಕುಳಿತುಕೊಳ್ಳಿ ಈ ಪಕ್ಷದಲ್ಲಿದ್ದುಕೊಮಡು ಯೂತ್ ಕಾಂಗ್ರೆಸ್ ಅಧ್ಯಕ್ಷ ಎಸ್ ಸಿ ಎಸ್ ಟಿ ಅಭಿವೃದ್ಧಿ ನಿಗಮದ ಅಧ್ಯಕ್ಷ, ಎರಡು ಸಾರಿ ಟಿಕೇಟ್ ಸಿಕ್ಕಿ, ಈಗ ಮಾತನಾಡುತ್ತಿದ್ದಾರೆ, ಅವರಿಗೆ ಯಾವ ನೈತಿಕತೆ ಇದೆ, ಸುಮ್ಮನೆ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) ಅಧ್ಯಕ್ಷರೆ, ಇಲ್ಲಿ ಅವರು ಬಜೆಟ್ ಮೇಲೆ ಮಾತನಾಡತಕ್ಕಂತ ಸಂದರ್ಭದಲ್ಲಿ ಆಗೊಮ್ಮೆ ಕೆಣಕುವುದು ಮಾತನಾಡತಕ್ಕಂತಹದ್ದು ಸಹಜ, ಆದರೆ ನಾವು ಪ್ಯಾಲೇಸ್ ಗ್ರಂಡ್ ನಲ್ಲಿ, ಸಾರ್ವಜನಿಕ ಸಭೆಗಳಲ್ಲಿ ಮಾತನಾಡುವ ಮಾಧ್ಯಮಗಳ ಮೂಲಕ ಕೆಣಕುವುದು ಅದಕ್ಕೆ ಉತ್ತರ ಬಂದ ತಕ್ಷಣವೇ ನೀವು ಪಾರ್ಟಿ ಮೀಟಿಂಗ್ ನಲ್ಲಿ ಹೇಳಿರಿ ಎನ್ನುವುದು, ಪಾರ್ಟಿ ಮೀಟಿಂಗ್ ನಲ್ಲಿ ಹೇಳುವುದು ಬೇಡ, ಸಾರ್ವಜನಿಕ ಸಭೆಯ ಮಾತುಗಳನ್ನ ಇಲ್ಲಿ ಮಾತನಾಡುವುದು ಬೇಡ ಬಜೆಟ್ ಗೆ ಅವಕಾಸ ಕೊಟ್ಟರೆ ಸರಿಯಾದ ಉತ್ತರ ಬರುತ್ತದೆ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ ,ಡಾ ನಂಜುಂಡಪ್ಪ ವರಿದಯನ್ನು ಜಾರಿಗೆ ತರುವುದಕ್ಕೋಸ್ಕರ ೮ ವರ್ಗಗಳ ಒಂದು ಕಾರ್ಯಕ್ರಮವನ್ನು ರೂಪಿಸಿ, ಮೊದಲನೆ ವರ್ಷಕ್ಕೆ, ಈ ವರ್ಷ ರೂ ೧೫೭೧ ಕೋಟಿಗಳನ್ನು ನಾವು ತೆಗೆದು ಇಟ್ಟಿದ್ದೇವೆ ಆ ಭಾಗದಲ್ಲಿರುವ ಎಲ್ಲಾ ನಮ್ಮ ಪ್ರತಿಪಕ್ಷದ ಸದಸ್ಯರು ಹಾಗೂ ಈ ಬಾಗದವರು ಸಹಕಾರವನ್ನು ಕೊಟ್ಟರೆ ಒಂದು ಸಚಿವ ಸಂಪುಟದ ಉಪ ಸಮಿತಿಯನ್ನು ಮಾಡುತ್ತೇನೆ ಡಾ ರವೀಂದ್ರರವರು ಎಲ್ಲವನ್ನು ನೋಡಿಕೊಳ್ಳಬೇಕೆಂದು ಹೇಳಿದ್ದೇವೆ, ಅದರ ಜೊತೆಗೆ ಒಂದು ಸಚಿವ ಸಂಪುಟದ ಉಪಸಮಿತಿಯನ್ನು ಮಾಡಿ ತಿಂಗಳಿಗೊಮ್ಮೆ ರಿವ್ಯು ಮಾಡಿ, ಈ ರೂ ೧೫೭೧ ಕೋಟಿಗಳು ಪೂರ್ಣವಾಗಿ ಮಾರ್ಚ್ ಕೊನೆಗೆ

ಖರ್ಚಾಗಬೇಕೆಂಬುದು ನಮ್ಮ ಸದುದ್ದೇಶವಾಗಿದೆ ಆ ಕಾರ್ಯಕ್ರಮಗಳು ಹೇಗಿರಬೇಕೆಂಬುದರ ಬಗ್ಗೆ ಪ್ಲಾನಿಮಗ್ ಆಗಲೇ ನಡೆಯುತ್ತಿದೆ ಅದನ್ನು ಅನುಷ್ಠಾನಗೊಳಿಸುವುದಕ್ಕೆ ನಾವು ಆದ್ಯತೆಯನ್ನು ಕೊಡುತ್ತೇವೆ

ಶ್ರೀ ಸಿದ್ಧರಾಮಯ್ಯ ಅದು ಪ್ಲಾನ್ ನಲ್ಲಿದೆಯಾ ನಾನ್ ಪ್ಲಾನ್ ನಲ್ಲಿದೆಯಾ?

ಶ್ರೀ ಯಡಿಯೂರಪ್ಪ ಅವರು ಹಣಕಾಸಿನ ಸಚಿವರಾಗಿದ್ದರು ಅವರಿಗೆಲ್ಲಾ ಗೊತ್ತಿದೆ, ಸಮಯವನ್ನು ಏತಕ್ಕೆ ವ್ಯರ್ಥ ಮಾಡುವುದು?

ಶ್ರೀ ಸಿದ್ದರಾಮಯ್ಯ ಈಗ ನೀವು ಹೇಳುತ್ತಿದ್ದೀರಿ, ಜನರೆಲ್ಲಾ ಗೊತ್ತಾಗಬೇಕಲ್ಲ, ರೂ ೧೫೭೧ ಕೋಟಿ, ರೂ ೧೭೭೮೨ ಒಳಗೆ ಇದೆಯೆ? ಅದು ಈ ಕಡೆ ಆ ಕಡೆ ಎರಡೂ ಕಡೆ ಇರುವುದಕ್ಕಾಗುತ್ತದೆಯೆ? ರೂ ೪೭,೯೫೦ ಕೋಟಿ ಖರ್ಚಿನಲ್ಲಿ ಅದು ಎಲ್ಲಿದೆ ಎಂದು ಸ್ವಲ್ಪ ಅಕೌಂಟ್ ಹೇಳಿ ಇದು ಅಡಿಷನಲ್ಲಾ ಅಥವಾ ಅದರೊಳಗಡೆ ಇದೆಯಾ?

ಶ್ರೀ ಬಿ ಎ ಯಡಿಯೂರಪ್ಪ ಹೇಳುತ್ತೇನೆ ಸರ್, ಹೋದ ಸಾರಿ ನಾನು ಆಯವ್ಯಯ ಮಂಡನೆ ಮಾಡಿದಾಗಲೂ ತಾವು ಇದೇ ಮಾತನ್ನು ಹೇಳಿದಿರಿ ನೀವೇನೆಂದು ಗೊತ್ತು ನಾನೇನು ಎಂದು ಜನಕ್ಕೆ ಗೊತ್ತಿದೆ

ಶ್ರೀ ಸಿದ್ದರಾಮಯ್ಯ ಜಗತ್ತಿಗೆಲ್ಲಾ ಗೊತ್ತಿದೆ, ರಾಜ್ಯಕ್ಕು ಗೊತ್ತಿದೆ

ಶ್ರೀ ಬಿ ಎಸ್ ಯಡಿಯೂರಪ್ಪ ನೀವೇನು ಮಾಡಿರೆಂದು ಗೊತ್ತಿದೆ, ನಾನೇನು ಮಾಡಿದೆ ಎಂದು ಗೊತ್ತಿದೆ, ಆ ಚರ್ಚೆ ಇಲ್ಲಿ ಬೇಡ, ನಾನು ಬಹಳ ಸ್ಪಷ್ಟವಾಗಿ ಒಂದು ಮಾತನ್ನು ಹೇಳುತ್ತೇನೆ ಈ ರೂ ೧೫೭೧ ಕೋಟಿಗಳಿಗೆ ಲೆಕ್ಕ ಶೀರ್ಷಿಕೆ ಏನೆಂದು ಹೇಳಿದ್ದೇವೆ, ಪ್ಲಾನ್ ನಲ್ಲಿದೆ, ಒಂದೊಂದು ಪೈ ವ್ಯರ್ಥವಾಗದಂತೆ ಖರ್ಚು ಮಾಡುತ್ತೇವೆ ನಾಳೆ ಮಾಧುಸ್ವಾಮಿಯವರು ಇಲ್ಲೆ ಕುಳಿತಾಗ

ಶ್ರೀ ಸಿದ್ದರಾಮಯ್ಯ Do you agree with me? ೩೧೪೫ ಕೋಟಿ ಒಳಗಡೆ ಸೇರಿದೆಯಾ ಇಲ್ಲಾವಾ? ನೀವು ೩೦೦ ಕೋಟಿ ನೀರಾವರಿಗೆ ಹೇಳಿದ್ದಿರಿ, ಅದರೊಳಗಡೆ ಇದೆಯಾ ಇಲ್ಲವಾ ಹೇಳಿ

•

ಶ್ರೀ ಬಿ ಎಸ್ ಯಡಿಯೂರಪ್ಪ ನಾನು ಡಾ ನಂಜುಂಡಪ್ಪ ವರದಿಯ ಅನುಷ್ಠಾನದ ಬಗ್ಗೆ ಹೇಳುತ್ತಿದ್ದೇನೆ

ಶ್ರೀ ಸಿದ್ದರಾಮಯ್ಯ ಅನುಷ್ಠಾನ ಬೇರೆ, You have not kept Rs 1575 crore as additional [ಗೊಂದಲ] ಹಣಕಾಸಿನ ಸಚಿವರು ಉತ್ತರ ಕೊಡುತ್ತಾರೆ ನೀವೇಕೆ ಎದ್ದು ನಿಂತುಕೊಳ್ಳುತ್ತೀರಿ

(ಗೊಂದಲ)

ಅಧ್ಯಕ್ಷರು ಏನಾದರೂ ಇದ್ದರ, ಕ್ಲಾರಿಫಿಕೇಶನ್ ಕೇಳುವಾಗ ಕೇಳಬಹುದು

ಶ್ರೀ ಬಿ ಎಸ್ ಯಡಿಯೂರಪ್ಪ ಏನು ಕ್ಲಾರಿಫಿಕೇಷನ್ ಸರ್, ಗೊತ್ತಿದ್ದು ಸುಮ್ಮ ಸುಮ್ಮನೆ ಪ್ರಶ್ನೆ ಕೇಳುತ್ತಿದ್ದರೆ ಏನಾಗುತ್ತದೆ ಸರ್? ಹಿರಿಯ ಹಣಕಾಸಿನ ಸಚಿವರಾಗಿದ್ದಂತಹ ನಮ್ಮ ಸಿದ್ದರಾಮಯ್ಯನವರಿಗೆ ಅತ್ಯಂತ ವಿನಯದಿಂದ ಒಂದು ವಿಚಾರವನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ೮ ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆ ಚಿತ್ರಣವೆಂದು ಪ್ರತ್ಯೇಕವಾಗಿ ನಿಮಗೆಲ್ಲರಿಗೂ ದಾಖಲೆಗಳನ್ನು ಕೊಟ್ಟಿದ್ದೇನೆ ಪ್ರತಿಯೊಂದು ಬಾಬಿನಲ್ಲು ಏನೇನು ಖರ್ಚು ಮಾಡುತ್ತೇವೆಂದು ಲೆಕ್ಕ ಶೀರ್ಷಿಕೆಯಲ್ಲಿ ಹೇಳಿದ್ದೇವೆ, ಇದಿಷ್ಟು ಪ್ಲಾನ್ ನಲ್ಲಿ ಸೇರಿದೆ ಇದರಲ್ಲಿ ಏನಾದರು ಕೊರತೆ ಕಂಡಾಗ ನೀವು ಹೇಳಿ, ನಿಮಗೆ ಸರಿಯಾದಂತಹ ಉತ್ತರವನ್ನು ನಾನು ಕೊಡುತ್ತೇನೆ ಆದುದರಿಂದ ನಾನು ಎರಡು ವಿಷಯವನ್ನು ಹೇಳುತ್ತಿದ್ದೇನೆ ಒಂದು ಈ ಪೂರ್ಣ ಹಣ ಮಾರ್ಚ್ ಒಳಗಡೆ ಖರ್ಚಾಗಬೇಕು ಇದಕ್ಕಾಗಿ ನಾಳೆಯು ವಿಶೇಷವಾಗಿ ಸಚಿವ ಸಂಪುಟದ ಉಪಸಮಿತಿಯನ್ನು ಮಾಡುತ್ತೇವೆ, ತಿಂಗಳಿಗೊಮ್ಮೆ ರಿವ್ಯು ಮಾಡುತ್ತೇವೆ, ಮಾಡಿ ತೋರಿಸುತ್ತೇವೆ, ಯಾವುದನ್ನು ನೀವು ಮಾಡಲಿಲ್ಲವೊ

ಅದನ್ನು ಇ ಸಮಿರ ಸರ್ಕಾರ ಮಾಡಿದೆ ಎಂದು ಹೇಳುತ್ತೇನೆ, ಆ ಹೈದ್ರಾಬಾದ್ ಕರ್ನಾಟಕದ ಜನ ತಲೆ ಎತ್ತಿ ಓಡಾಡುವಂತೆ ಮಾಡುತ್ತೇವೆ, ಅದು ನಿಮ್ಮ ಕೈಯಲ್ಲಿ ಆಗಲಿಲ್ಲ, ಅದನ್ನು ನಾವು ಮಾಡುತ್ತಿದ್ದೇವೆ, ಅದರ ಬಗ್ಗೆ ಈಗ ಚರ್ಚೆ ಬೇಡ ಎರಡನೆಯದು, ಕೃಷಿ, • ನೀರಾವರಿ, ಗ್ರಾಮೀಣಾಭಿವೃದ್ಧಿ, ಮೂಲ ಸೌಕರ್ಯ ಅಭಿವೃದ್ಧಿ, ಶಿಕ್ಷಣ, ಆರೋಗ್ಯ ಸಮಾಜ ಕಲ್ಯಾಣ ಹಾಗೂ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗೋಸ್ಕರ ಕಳೆದ ಹಾಗೂ ಈ ವರ್ಷದಲ್ಲಿ ನಾವು ಮಾಡಿದಷ್ಟು ಕಾರ್ಯಕ್ರಮಗಳನ್ನು ಅಧಿಕಾರದಲ್ಲಿದ್ದವರ್‍ಯರು ಮಾಡಲಿಲ್ಲ ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಎಷ್ಟೊಂದು ವಿಪುಲವಾದ ಅವಕಾಶವಿತ್ತು ಏತಕ್ಕೆ ಸ್ವಾಮಿ ಹಿಮದೆ ಇದ್ದವರಿಗೆ ಮಾಡಬೇಕೆನಿಸಲಿಲ್ಲ? ಎಷ್ಟು ಇಟ್ಟಿದ್ದವು ಸ್ವಾಮಿ? ಇವತ್ತು ರೂ ೧೪೮ ಕೋಟಿಗಳನು ರಾಜ್ಯದ ಪ್ರವಾಸೋದ್ಯಮಕ್ಕೆ ಇಟ್ಟಿದ್ದೇವೆ ನೀವು ರೂ ೨೦ಕೋಟಿ ಇಟ್ಟಿದ್ದಿರಿ, ಖರ್ಚಾದ್ದು ಎಷ್ಟೆಂದು ನಾನು ಹೇಳುವುದಿಲ್ಲ ಖರ್ಚಾಗದೆ ಇರುವುದಕ್ಕೆ ಸಂಬಂಧಪಟ್ಟ ಸಚಿವರು ಕೊಡಬೇಕಾಗುತ್ತದೆ, ಕುಂಭಕರ್ಣ ನಿದೆಯಲ್ಲಿರುವ ಅಧಿಕಾರಗಳು ಎದ್ದೇಳಬೇಕಾಗುತ್ತದೆ ನಾನು ಮತ್ತು ಮುಖ್ಯಮಂತ್ರಿಗಳು ಕುಳಿತುಕೊಂಡು ಏಪ್ರಿಲ್ ಎರಡನೇ ವಾರದಲ್ಲಿ ಸಭೆ ಮಾಡಿದೆವು ಯಾವ ಅಧಿಕಾರಿ ಇದಕ್ಕೆ ಆಸಕ್ತಿ ತೋರಿಸುವುದಿಲ್ಲ ಒಂದು ಸಾರಿ ನಾವು ಬಜೆಟ್ನಲ್ಲಿ ಕಾರ್ಯಕ್ರಮವನ್ನು ಘೋಷಣೆ ಮಾಡಿದ ಮೇಲೆ ೨೪ ಗಂಟೆಯಲ್ಲಿ ಆ ಬಗ್ಗೆ ಸರ್ಕಾರಿ ಆಜ್ಞೆ ಹೊರಡಬೇಕು, ಕಷ್ಟವೇನಿದೆ? ನನಗೆ ಈ ಸಾರಿ ವಿಶ್ವಾಸವಿದೆ ಹಣಕಾಸಿನ ಸಮಸ್ಯೆ ಇದ್ದಾಗ ಬರಗಾಲ ಎದುರಿಸಬೇಕಾದರೆ ಕುಡಿಯುವ ನೀರಿನ ಹಾಹಾಕಋವಿರಬೇಕಾದರೆ ೫ನೇ ವೇತನ ಆಯೋಗದ ವರದಿಯನ್ನು ಸಮಪೂರ್ಣವಾಗಿ ಅನುಷ್ಠಾನಗೊಳಿಸಿದ್ದರ ಬಗ್ಗೆ ನಮ್ಮ ಸರ್ಕಾರಿ ನೌಕರರು ಆನಂದಭರಿತರಾಗಿದಾರೆ ನಾವು ದಿವಸಕ್ಕೆ ಇನ್ನು ಒಂದೆರಡು ಗಮಟೆ ಹೆಚ್ಚು ಕೆಲಸ ಮಾಡುವುದಕ್ಕೆ ಸಿದ್ದರಿದ್ದೇವೆಂದು ಮುಖ್ಯಮಂತ್ರಿಗಳು ಹಾಗು ನಮ್ಮ ಹತ್ತಿರ ಒಂದು ಹೇಳಿದ್ದಾರೆ ಅಧಿಕಾಋಇಗಳು ಗಮನ ಕೊಡುತ್ತಾಋಎ, ಸರ್, ಇವರು ಮೂರು ತಿಂಗಳಿರುತ್ತಾರೆ, ಆರು ತಿಂಗಳಿರುತ್ತಾಋಒ, ಆ ಪ್ರಚಾರಗಳು, ಆ ಹೇಳಿಕೆಗಳನ್ನು ಕೇಳಿ ಅವರಿಗು

ಅನುಮಾನವಿತ್ತು ಬೆಳಿಗ್ಗೆ ಎದ್ದರೆ ಇವರಿಗೆ ಇನ್ನು ೨ ತಿಂಗಳು ಗಡುವು ಎಂದು ಹೇಳುತ್ತಿದ್ದರು ಇವರು ಪ್ರತಿ ತಿಂಗಳಿಗೊಂದು ಸಾರಿ ನಮಗೆ ಆಯಸ್ಸನ್ನು ನಿಶ್ಚಯ ಮಾಡುತ್ತಿದ್ದರು, ಈ ತಿಂಗಳಾಯಿತು, ಮುಂದಿನ ತಿಂಗಳಿಗೆ ಹೋಗುತ್ತದೆ ಎಂದು ಇವರು ಪಾಪ ಕಾಯುತ್ತಲೇ ಇದ್ದಾರೆ, ೪೦ ತಿಂಗಳವರೆಗೆ ಹೀಗೆ ಕಾಯಬೇಕಾಗುತ್ತದೆ, ನಿಮಗೆ ಬೇರೆ ದಾರಿ ಇಲ್ಲ, ೪೦ ತಿಂಗಳ ಪೂರ್ಣ ಆಳ್ವಿಕೆ ಮಾಡಿ ತೋರಿಸುತ್ತೇವೆ ೨೦೦೬-೦೭ನೇ ಸಾಲಿನಲ್ಲಿ ಒದಗಿಸಿದಂತಹ ಹಣ ಖರ್ಚು, ಇವೆಲ್ಲದರ ಬಗ್ಗೆ ನಮ್ಮ ಈ ಮುಂದಿನ ಸಾಲಿನಲ್ಲಿ ಕುಳಿತಿರುವ ಮಾನ್ಯ ಮಾಧುಸ್ವಾಮಿಯವರು ಮತ್ತು ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಇರಬಹುದು, ಎಲ್ಲರೂ ಹೇಳಿದ್ದಾರೆ ಕಳೆದ ನಾಲ್ಕು ವರ್ಷಗಳಲ್ಲಿ February ತಿಂಗಳವರೆಗೆ ಯೋಜನೆ ಮತ್ತು ಯೋಜನೇತರ ವೆಚ್ಚಗಳಾಗಿರುವುದು ಈ ಕೆಳಕಂಡಿಂತಿದೆ ೨೦೦೩-೦೪ ರಲ್ಲಿ February ಕೊನೆಯವರೆಗೆ ೭೫% ಆಗಿದೆ ನನ್ನದು ಇನ್ನು ಮಾರ್ಚ್ ಮುಗಿದಿಲ್ಲ

ಶ್ರೀ ಸಿದ್ದರಾಮಯ್ಯ ೨೦೦೩-೦೪, ೨೦೦೪-೦೫, ೨೦೦೫-೦೬ ಅವೆಲ್ಲಾ ಅಕೌಂಟ್ ಆಗಿವೆ, ಅಕೌಂಟ್ ಹೇಳಿ February ಏಕೆ ಹೇಳುತ್ತೀರಿ?

ಶ್ರೀ ಬಿ ಎಸ್ ಯಡಿಯೂರಪ್ಪ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ೨೦೦೩-೦೪, ೨೦೦೪-೦೫, ೨೦೦೫-೦೬, ಮತ್ತು ೨೦೦೬-೦೭ ರಲ್ಲಿ ಇದ್ದರೆ, ಒಂದು ಪರ್ಸೆಂಟ್ ಹಿಂದೆ ಮುಂದೆ ನಾವೂ ಮಾಡಿದ್ದೇವೆ ನಾವೇನು ಹಿಂದೆ ಬಿದ್ದಿಲ್ಲ February ಕೊನೆಯವರೆಗೆ ಇದೆ ಯಾರೋ ಹೇಳಿದರಂತೆ ನವೆಂಬರ್‌ವರೆಗೆ ೩೩% ಆಗಿದೆ ಎಂದು ಪತ್ರಿಕೆಯಲ್ಲಿ ಬಂದಿದೆ ಅಭಿವೃದಿ ಕಾರ್ಯ ೩೩% ಆಗಿದೆ, ಯಾವನ್‌ರಿ ಅವನು ಹೇಳಿದವನು?

ಶ್ರೀ ಮಲ್ಲಿಕಾರ್ಜುನ ಖರ್ಗೆ ಯಾವನೋ ಎಂದು ಹೇಳಿದರೆ, no no

ಶ್ರೀ ಎಸ್ ಧರ್ಮ್‌ಸಿಂಗ್ ನೀವು ಏನು achievement ಮಾಡಿದ್ದೀರಿ? ನಿಮಗೆ ನಾಚಿಕೆ ಆಗುವುದಿಲ್ಲವೇ? ನಾನು ಹೇಳಿದ್ದು ಸುಳ್ಳು ಎಂದು ಹೇಳುತ್ತಿದ್ದೀರಿ ಪತ್ರದ ಉತ್ತರ ಹೇಳುವುದಕ್ಕಾಗುವುದಿಲ್ಲ ಯಾವನೋ ಏಕೆ ಹೇಳುತ್ತಾನೆ?

ಶ್ರೀ ಆರ್ ಅಶೋಕ್ ಅವರಿಗೆ ಮಾತನಾಡುವುದಕ್ಕೆ ಅವಕಾಸ ಕೊಡಿ ಪದೇ ಪದೇ ಈ ತರಹ ಮಾಡುವುದು ಒಳ್ಳೆಯದಲ್ಲ ಅವರು ಮಾತನಾಡುವಾಗ ಮಾನ್ಯ ಉಪ ಮುಖ್ಯಮಂತರಿಗಳು ಕೇಳಲಿಲ್ಲವಾ?

ಶ್ರೀ ಬಿ ಎಸ್ ಯಡಿಯೂರಪ್ಪ ನಾನು ತಪ್ಪು ಎಂದು ಹೇಳುತ್ತಿದ್ದೇನೆ ಯಾವನೋ ಆರ್ಥಿಕ ತಜ್ಞ ಹೇಳಿದ್ದು ಸರಿ ಅಲ್ಲವೆಂದು ನಾನು ಹೇಳುತ್ತಿದ್ದೇನೆ ನಾನು ನಿಮ್ಮ ಬಗ್ಗೆ ಹೇಳಲಿಲ್ಲ ಯಾವನೋ ಆರ್ಥಿಕ ತಜ್ಞ ಹೇಳಿದ್ದಂತೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ನೀವು ಯಾರ ಬಗ್ಗೆ ಹೇಳಿದ್ದು ಎಂದು ನನಗೆ ಗೊತ್ತಿದೆ ಯಾರೋ ರಸ್ತೆಯಲ್ಲಿ ಹೋಗುವವರು ಹೇಳಲಿಲ್ಲ

ಅಧ್ಯಕ್ಷರು ಯಡಿಯೂರಪ್ಪನವರೇ ಕೋಪ ಮಾಡಿಕೊಳ್ಳುವ ಅಗತ್ಯವಿಲ್ಲ ಪತ್ರಕೆಯಲ್ಲಿ ಬಂದಿರುತ್ತದೆ, ಯಾರೋ ಹೇಲಿರುತ್ತಾರೆ, ಅದಕ್ಕೆ ಏಕೆ ನೀವು ಹೀಗೆ ಮಾಡುತ್ತೀರಿ? ನಿಮ್ಮ ವಿಚಾರಗಳನ್ನು ನೀವು ಸ್ಪಷ್ಟವಾಗಿ ಹೇಳಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ಈ ಜನ ಈ ರಾಷ್ಟ್ರದಲ್ಲಿ ಎಷ್ಟು ಹೆಸರುವಸಿ ಇದ್ದಾರೆ ಇಲ್ಲ ಎನ್ನುವುದು ಪ್ರಕಾಶ್ ರವರಿಗೆ ಗೊತ್ತು ಅಥವಾ ಈ ಹೇಳಿಕೆ ಫತ್ರಿಕೆಯಲ್ಲಿ ಬಂದಿದ್ದು ಸುಳ್ಳಾ ಅಥವಾ ಇದರ ಬಗ್ಗೆ ಅವರು ವಿಶ್ಲೇಷಣೆ ಮಾಡಿದ್ದು ಸುಳ್ಳಾ? ಎನ್ನತ್ಕಂಥದ್ದು ಹೇಳಬೇಕು ಯಾವನೋ ಅವರು ಎಂದರೆ, ಶ್ರೀ L C Jain, former planning member One of the top economist, one of the panchayath institution ಕರೆದುಕೊಂಡು ಬಂದು, ಮಾನ್ಯ ಹೆಗಡೆಯವರ ಕಾಲದಲ್ಲಿ

Palace Ground ನಲ್ಲಿ ಒಂದು ದೊಡ್ಡ ಭೆ ಮಾಡಲಿಲ್ಲ? ಎಲ್ಲರಿಗೂ ಬುದ್ಧಿವಾದ ಹೇಳಲಿಲ್ಲ? ಆದ ಅವ ಯಾವನು ಇದ್ದ ಈಗ ಹೇಳುತ್ತೇನೆ Sir, JD(S) – BJP Government goes to shool The result at the end of the budget here would read , Reasons They have not been able to implement even 35% of promises made in the 2006-07 budget Counted as Deputy C M B S Yadiyurappa's dream budget, it made 121 promises One year down the line, hardly 42 have been implemeted or been issued Government order Miks 34 71% This is a shocking breech of trust The budget is Government's commitment, to what it shall do within one year It needs a certain amount of serious homework But they are taking everybody for a ride Can a surgeion put his patient on the table and then say the tools are not ready? Former Planning Commission Memer, L C Jain ಇವರು ಯಾರು ? ಹಾದಿಯಲ್ಲಿ ಹೋಗುವವರಾ?

ಶ್ರೀ ಬಿ ಎಸ್ ಯಡಿಯೂರಪ್ಪ ಆ ಜೈನ್ ಯಾರು ಯಾವ Planning Commission ಮೆಂಬರ್ ಬಗ್ಗೆನೂ ನಾನು ಮಾತನಾಡುತ್ತಿಲ್ಲ ನಾನು ಸನ್ಮಾನ್ಯ ಧರ್ಮ್‌ಸಿಂಗ್ ಬಗ್ಗೆ ಆಗಲಿ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಬಗ್ಗೆಯಾಗಲಿ, ಮಾನ್ಯ ಸಿದ್ಧರಾಮಯ್ಯನವರ ಬಗ್ಗೆಯಾಗಲಿ ಮಾತನಾಡಿಲ್ಲ ಯಾವರು ಎಷ್ಟೇ ದೊಡ್ಡ economic expert ಇದ್ದರೂ ಸಹ ವಾಸ್ತವಿಕ ಸತ್ಯ ಸಂಗತಿಗಳನ್ನು ತಿರುಚಿ ಹೇಳಿದರೆ, ಅದನ್ನು ನಾನು ಖಂಡನೆ ಮಾಡುತ್ತೇನೆ As a Finance Minister ನನ್ನ ಹತಿರ ಇರುವ ಅಂಕಿ ಅಂಶಗಳನ್ನು February ಕೊನೆಯಲ್ಲಿ ಏನಿದೆ, ಜನವರಿ ಕೊನೆಯಲ್ಲಿ ಏನು ಖರ್ಚಾಗಿದೆ, ಪ್ರತಿ ವಾರಕ್ಕೊಮ್ಮೆ ನಾವು review ಮಾಡುತ್ತಿದ್ದೇವೆ ಅದರ ಆಧಾರದ ಮೇಲೆ ಈ ಅಂಕಿ ಅಂಶಗಳು ಸತ್ಯ,ಕೆ ದೂರವಾದುದು

ಎಂದು ಹೇಳುತ್ತಿದ್ದೇನೆ ಹೊರತು, ಬರೆ ಯಾವುದೇ ಮಾತನ್ನು ನಾನು ಹೇಳುತ್ತಿಲ್ಲ ೨೦೦೬-೦೭ ರ account ಇನ್ನು ಮುಗಿದಿಲ್ಲ ಕೇವಲ ಹೋಲಿಕೆ ಮೇಲೆ ನಾವು ಚರ್ಚೆ ಮಾಡುತ್ತಿದ್ದೇವೆ ಅಗತ್ಯ ಬಿದ್ದರೆ, ಈ ನಾಡಿನ ಜನರಿಗೆ ತಪ್ಪು ಮಾಹಿತಿ ಕೊಟ್ಟು ತಪ್ಪು ದಾರಿಗೆ ಎಳೆದರು ಎಂದು L C Jain ಮೇಲೆ ಮಾನನಷ್ಟ ಮೊಕದ್ದಮೆ ಹೂಡುವುದಕ್ಕೂ ನನ್ನ ಸರ್ಕಾರ ಸಿಕ್ಕವಿದೆ

ಶ್ರೀ ಬಿ ಆರ್ ಪಾಟೀಲ್ ಒಬ್ಬ ಗಾಂಧಿವಾದಿ, ಒಬ್ಬ ಅರ್ಥ ತಜ್ಞ ಅವರ ಮೇಲೆ ಮಾನನಷ್ಟ ಮೊಕದ್ದಮೆ ಹಾಕುತ್ತಾರಂತೆ

ಶ್ರೀ ಸಿದ್ದರಾಮಯ್ಯ ಮಾನ್ಯ ಅಧ್ಯಕ್ಷರೆ, L C Jain ರವರ ಬಗ್ಗೆ ಮತ್ತು ಅವರು ಹೇಳಿರತಕ್ಕಂಥದ್ದರ ಬಗ್ಗೆ ನಿರಾಕರಣೆ ಮಾಡಬಹುದು ಅವರು ಈ ದೇಶದಲ್ಲಿ ಒಬ್ಬ ಗೌರವಾನ್ವಿತ ವ್ಯಕ್ತಿ ಅವರಿಗೆ ಈ ದೇಶದ ಬಗ್ಗೆ ಮತ್ತು ಗ್ರಾಮೀನಾಭಿವೃದ್ಧಿ ಬಗ್ಗೆ, ಹಳ್ಳಿನಾಡಿನ ಅಭಿವೃದ್ಧಿ ಬಗ್ಗೆ ಬಗ್ಗೆ planning ಅನುಭವ ಇರತಕ್ಕಂತಹವರು ಅವರು ಮಾಡಿರತಕ್ಕಂಥದ್ದು ಸರಿ ಇಲ್ಲ ಬೇರೆ figures ಇಡಲೇ? ಎಂದು ಹೇಳಲಿ ಅವರು ಈ ತರಹ ಅವರಿಗೆ ಅಗೌರವವಾಗಿ ಮಾತನಾಡತ್ಕಂದದ್ದು ಇದೆಯಲ್ಲಾ, ಇಷ್ಟು ವರ್ಷ ನೀವು ಸೀನಿಯರ್ ಲೀಡರ್ ಆಗಿ, ಇದು ನಿಮಗೆ ಶೋಭೆ ತರತಕ್ಕಂಥದ್ದು ಅಲ್ಲಿ ಡಾ ತಿಮ್ಮಯ್ಯನವರ ಮೇಲೆ ಹೇಳಿದಿರಿ, ಡಾ ತಿಮ್ಮಯ್ಯನವರು Planning Member ಆಗಿದ್ದರು ಅವರು ನಮಗೆ ೧೦ ರಿಂದ 8 marks ಕೊಟ್ಟಿದ್ದಾರೆಂದು ಹೇಳಿದಿರಿ ನಾವು ಅದನ್ನು ಕಂಡಮ್ ಮಾಡುವುದಕ್ಕೆ ಹೋದೆವಾ? ಅವರು ಅವರ ಅಭಿಪ್ರಾಯವನ್ನು ಹೇಳಿದ್ದಾರೆ L C Jain ರವರು ಅವರ ಅಭಿಪ್ರಾಯವನ್ನು ಹೇಳಿದ್ದಾರೆ ಅದು ಪತ್ರಿಕೆಯಲ್ಲಿ ಬಂದಿದೆ, ನೀವು ಇದನ್ನು ನಿರಾಕರಣೆ ಮಾಡಿ, ಆದರೆ L C Jain ರವರ ಬಗ್ಗೆ ಇಷ್ಟು ಲಘುವಾಗಿ, ಇಷ್ಟು ಕೆಟ್ಟದಾಗಿ ಮಾತನಾಡುವುದು ಸರಿಯಿಲ್ಲ ಯಡಿಯೂರಪ್ಪನವರೇ You don't talk like this

ಶ್ರೀ ಬಿ ಎಸ್ ಯಡಿಯೂರಪ್ಪ ಈ ಸರ್ಕರಕ್ಕೆ, ಸಮ್ಮಿಶ್ರ ಸರ್ಕಾರದ ಬಗ್ಗೆ, ನಾವು ಮಾಡುತ್ತಿರುವ ಒಳ್ಳೆಯ ಕೆಲಸದ ಬಗ್ಗೆ, ತಪ್ಪು ಮಾಹಿತಿಗಳನ್ನು ಕೊಡುವಂತಹ ಪ್ರಯತ್ನ ಅವರು ಮಾಡಿದ್ದಾರೆ ಎಷ್ಟೇ experts ಇದ್ದರೂ ಸಹ, economic expert ಇರಬಹುದು, ಒಬ್ಬ ಹಣಕಾಸಿನ ಸಚಿವನ ಬಳಿ ಕೇಳಬೇಕಾಗಿತ್ತು ಅವರು statement ಮಾಡುವುದಕ್ಕೆ ಮುಂಚೆ ನಮ್ಮ ಹಣಕಾಸಿನ ಇಲಾಖೆಯ ಅಧಿಕಾರೊಗಳೊಂದಿಗೆ ಸಮಾಲೋಚನೆ ಮಾಡಬೇಕಾಗಿತ್ತು ಕೊಟ್ಟಿರುವಂತಹ ಹೇಳಿರುವಂತಹ ಅಂಕಿ ಅಂಶಗಳು ಸರಿ ಹೌದೋ ಇಲ್ಲವೆಂದು ತಿಳಿದುಕೊಳ್ಳದೆ, ಈ ರೀತಿ ಹೇಳಿಕೆ ಕೊಡುವಂಥೆದ್ದು ಸರಿಯಲ್ಲ ಆ ರೀತಿ ಹೇಳಿಕೆಗಳನ್ನು ಕೊಡುವಂತಹ ಸಂದರ್ಭಗಳು ಬಂದಾಗ ಯಾರೋ ಒಬ್ಬಿಬ್ಬರಿಗೆ ಸರ್ಕಾರ ಹೇಳುತ್ತದೆ, ಕೇಳುತ್ತದೆ ಎಂದು ಭಯ ಬಂದರೆ ಅವರು ಮಾತನಾಡುವಾಗ ಎಚ್ಚರ ವಹಿಸುತ್ತಾರೆ ಯಾರು ಎಷ್ಟೇ ದೊಡ್ಡವರಿರಬಹುದು ಇದು ನನ್ನ ಸ್ಪಷ್ಟವಾದಂತಹ ಅಭಿಪ್ರಾಯ

ಶ್ರೀ ಎನ್ ಧರ್ಮ್‌ಸಿಂಗ್ ಅವರು Economist ಅದು ಸಂಘ ಪರಿಹಾರ ಅಲ್ಲ ನಿಮಗೆ ಕೇಳಿ ಮಾಡುವುದಕ್ಕೆ ಇದು ಸಂಘ ಪರಿಹಾರ ಅಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ ನೀವು ಏಕೆ ಸಂಘ ಪರಿಹಾರಕ್ಕೆ ನೆನಪು ಮಾಡಿಕೊಳ್ಳುತ್ತೀರಿ? Performance Budget ನ್ನು ಏಕೆ ಮಂಡಿಸಲಿಲ್ಲವೆಂದು ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವಾಗ ಕೇಳಿದ್ದೇನೆ ಈ Performance Budgetನ್ನು ಜೂನ್ ತಿಂಗಳ ಸಮಯದಲ್ಲಿ ಆಯವ್ಯಯದ ಪ್ರತಿಯೊಂದು ಬೇಡಿಕೆ ಮೇಲೆ ಚರ್ಚೆ ನಡೆಯುವಂತಹ ಸಂದರ್ಭದಲ್ಲಿ ಎಲ್ಲ ಇಲಾಖೆಗಳು ಮಂಡಿಸುತ್ತವೆ ಆಯವ್ಯಯವನ್ನು ಮಾರ್ಚ್ ತಿಂಗಳಲ್ಲಿ ಮಂಡಿಸುವಾಗ ವರ್ಷ ಮುಗಿದಿರುವುದಿಲ್ಲ ಆ ಕಾರಣಕ್ಕಾಗಿ Performance Budget ನ್ನು ನೀಡಲಾಗುವುದಿಲ್ಲ ಎನ್ನುವಂಥದ್ದು ಕಳೆದ ಹತ್ತಾರು ವರ್ಷಗಳಿಂದ ಅದಿಕಾರದಲ್ಲಿರುವಂತಹ ನಿಮಗೆ ಅನುಭವಕ್ಕೆ ಬಂದಿರುವಂಥದ್ದು

ಆ ಕಾರಣದಿಂದ ಪರ್ ಫಾರ್ಮೆನ್ಸ್ ಬಜೆಟ್‌ನ್ನು ಏಕೆ ಇಟ್ಟಿಲ್ಲವೆಂದರೆ ಜೂನ್‌ನಲ್ಲಿ ಸಮಗ್ರವಾದಂಥ ಚರ್ಚೆಯ ಕಾಲದಲ್ಲಿ ನಾನು ಇಡುತ್ತೇನೆ ಮತ್ತೆ ಅವೊತ್ತು ವ್ಯಾಪಕವಾದಂಥ ಚರ್ಚೆಗಳಾದರೆ ನಮ್ಮಲ್ಲಿರುವಂಥ ಕೊರತೆಗಳನ್ನು ಸರಿಪಡಿಸಿಕೊಂಡು ಅಧಿಕಾರಿಗಳಿಗೂ ಸಹ ಎಲ್ಲಿ ತಪ್ಪಾಗಿದೆ ಎಂದು ಗೊತ್ತಾದರೆ ಒಳ್ಳೆಯದು ದಯದ್ರ್ಯೆವವೆಂದರೆ ಕಳೆದ ಹದಿನಾಲ್ಕು ತಿಂಗಳಿನಿಂದ ವ್ಯಾಪಕವಾದಂಥ ಚರ್ಚೆಯೇ ಆಗಲಿಲ್ಲ ಅಧಿಕಾರಿಗಳಿಗೆ ನಾವು ಏನು ಮಾಡಿದರೂ ನಡೆಯುತ್ತದೆ ಎನ್ನುವ ಅರ್ಥ ಬಂತು ನಮ್ಮ ಮಂತ್ರಿಗಳು ಹೊಸಬರು ಇದ್ದರು ಅವರಿಗೆ ಏನು ಮಾಡಬೇಕು ಎಂಬ ಬಗ್ಗೆ ತಿಳಿದುಕೊಳ್ಳಲು ಆಕಡೆಯಿಂದ ಮಾರ್ಗದರ್ಶನ ಮಾಡಬೇಕಾದಂಥ ಕೆಲಸ ಆಗಲಿಲ್ಲ ಇನ್ನಾದರೂ ಜೂನ್‌ನಲ್ಲಿ ವ್ಯಾಪಕವಾದಂಥ ಚರ್ಚೆಯಾದರೆ ಆ ಒಂದು ಪರ್ ಫಾರ್ಮೆನ್ಸ್ ಬಜೆಟ್ ಇಟ್ಟಾಗ ಸಾಕಷ್ಟು ಚರ್ಚೆ ಮಾಡೋಣ ಆ ಸಮಯದಲ್ಲಿ ನಾವು ಇಡುವುದಕ್ಕೆ ಸಿದ್ಧರಿದ್ದೇವೆ ಜನರು ಬರಕ್ಕೆ ತುತ್ತಾಗಿದ್ದಾರೆ, ನೀವು ಏನು ಮಾಡಿದಿರಿ ಎಂದು ನಮ್ಮನ್ನು ಕೇಳುತ್ತಲೇ ಇರುತ್ತೀರಿ ಅನೇಕ ಬಾರಿ ನಮ್ಮ ಕಂದಾಯ ಸಚಿವರು ಸಮರ್ಪಕವಾದಂಥ ಉತ್ತರವನ್ನು ಈ ಬಗ್ಗೆ ಕೊಟ್ಟಿದ್ದಾರೆ ಕಳೆದ ವರ್ಷ ಬರಗಾಲಕ್ಕೆ ಕೇಂದ್ರ ಸರ್ಕಾರದ ಪಾಲಾದಂಥ ೩೪೦ ಕೋಟಿ ಮತ್ತು ನಮ್ಮ ರಾಜ್ಯ ಸಕಾರದ ಪಾಲಾದಂಥ ೧೫೦ ಕೋಟಿ ರೂಪಾಯಿಗಳನ್ನು ನಾವು ನೀಡಿದ್ದೇವೆ ಇನ್ನೂ ಅದರ ಬಗ್ಗೆ ಅಗತ್ಯತೆ ಇದೆ ಅದಕ್ಕೆ ಏನು ಹೆಚ್ಚು ಮಾಡುವುದಕ್ಕೆ ಸಾಧ್ಯವೆದೆಯೋ ಆ ಬಗ್ಗೆ ಹೆಚ್ಚು ವಿಶೇಷವಾದಂಥ ಗಮನವನ್ನು ಕೊಡುವವರಿದ್ದೇವೆ ಇನ್ನು ನಮ್ಮ ಹಿರಿಯಾದಂಥ ಗೌರವಾನ್ವಿತ ಹಿರಿಯ ಸದಸ್ಯರು ಮಾತನಾಡುತ್ತಾ ಯಡಿಯೂರಪ್ಪನವರೆ, ನೀವು ಮಠಮಾನ್ಯಗಳಿಗೆ, ಗುಡಿ ಗುಂಡಾರಗಳಿಗೆ ಹಣವನ್ನು ನೀಡುತ್ತಿದ್ದೀರಿ ಎಮದು ಹೇಳಿದ್ದೀರಿ ಯಾವ ಮಠಾಧಿಪತಿಗಳು, ಕೆಲವು ಸಂಘಸಂಸ್ಥೆಗಳು ಸರ್ಕಾರ ಮಾಡಬೇಕಾದಂಥ ಕೆಲಸವನ್ನು ಹಗಲು ರಾತ್ರಿ ಪ್ರಮಾಣಿಕವಾಗಿ ಮಾಡುತ್ತಿದಾರೆ, ಅವರೇನೂ ಅಪೇಕ್ಷೆ ಪಡದಿದ್ದರೂ ಕೂಡ ಕಿಂಚಿತ್ ಅವರಿಗೆ ಸರ್ಕಾರದ ಕಡೆಯಿಂದ ಅಂಥವುಗಳನ್ನು ಗುರುತಿಸಿ ಸ್ವಲ್ಪ ಹಣವನ್ನು ಕೊಡುವಂಥ ಪ್ರಯತ್ನ

ಮಾಡಿದ್ದೇವೆ ಇನ್ನೂ ಅನೇಕ ಬೇರೆ ಬೇರೆ ಹಿಂದುಳಿದ, ಬೇರೆ ಬೇರೆ ಸಂಸ್ಥೆಗಳಿಗೆ ನಾವು ಕೊಡಬೇಕಾಗಿದೆ ನಾನು ಹೇಳುತ್ತೇನೆ, ನಾನು ಮತ್ತು ಮುಖ್ಯಮಂತ್ರಿಗಳು ಈ ಬಗ್ಗೆ ಯೋಚನೆ ಮಾಡುತ್ತೇವೆ ಸುಮಾರು ನಲವತ್ತೆಂಟು, ಐವತ್ತು ಸಾವಿರ ಕೋಟಿ ರೂಪಾಯಿಗಳ ಬಜೆಟ್ ನಲ್ಲಿ ಪ್ರತಿ ವರ್ಷ ಮುಯಮಂತ್ರಿಗಳೆ, ಅವರು ಕೊಡಲಿಲ್ಲವೆಂದು ನಾವೇಕೆ ಯೋಚನೆ ಮಾಡೋಣ, ಅವರು ಕೊಡಲಿಲ್ಲವೆಂದರೂ ಒಂದಿನ್ನೂರು ಕೋಟಿ ರೂಪಾಯಿಗಳನ್ನು ತೆಗೆದು ಇಟ್ಟುಬಿಡೋಣ ಯಾವ ಯವ ಸಂಘ ಸಂಸ್ಥೆಗಳು ಒಳ್ಳೆಯ ಕೆಲಸವನ್ನು ಮಾಡುತ್ತಾರೆ ಅವರಿಗಗೆಲ್ಲಾ ಕೊಟ್ಟು ಅವರು ಇನ್ನೂ ಹೆಚ್ಚು ಉತ್ಸಾಹದಿಂದ ನಮ್ಮ ಜನರ ಅಭಿವೃದ್ಧಿಗಾಗಿ ಕೆಲಸ ಮಾಡುವುದಾದರೆ ಮಾಡಲಿ ನಾವು ಇದನ್ನು ಮಾಡುವುದಕ್ಕೆ ಸಿದ್ಧರಿದ್ದೇವೆ ನಮ್ಮ ಸಂಸ್ಕೃತಿ, ಪರಂಪರೆಯನ್ನು ಗೌರವಿಸುವಂಥಾದ್ದು ನಾವು ನಂಬಿಕೊಂಡು ಬಂದಿರುವಂಥ ವಿಚಾರ ಅದಕ್ಕಾಗಿ ನಾನು ಕೊಟ್ಟಿದ್ದೇವೆ ಅವರು ಸಮಾಜಕ್ಕೆ ಸಲ್ಲಿಸಿರುವಂಥ ಸೇವೆ ಮತ್ತು ಸಾಧನೆಗಳನ್ನು ಆಧರಿಸಿ ಆ ರೀತಿ ಅಗತ್ಯ ಇರುವಂಥ ಸಂಸ್ಥೆಗಳಿಗೆ ಸಹಾಯ ಮಾಡಿರುವಂಥದ್ದು ನಿಜ ಆದುದರಿಂದ ಮೈತ್ರಿಯ ಲಕ್ಷ್ಮಣರೇಖೆಯನ್ನು ದಾಟದೇ ಅಭಿವೃದ್ಧಿಗಾಗಿ ನಾವು ಒಟ್ಟಾಗಿ ಕೆಲಸ ಮಾಡುವಂಥ ಪ್ರಯತ್ನವನ್ನು ನಾವು ಮಾಡಿದ್ದೇವೆ ನಾನು ನನ್ನ ಮೊದಲನೆಯ ಆಯವ್ಯಯದಲ್ಲಿ ಗೋಪಾಲಕೃಷ್ಣ ಅಡಗರ ಬಗ್ಗೆ ಮಾತು ಹೇಳಿದ್ದೆ ಅನ್ನವನು ಕೊಡು ಮೊದಲು, ಬಟ್ಟೆಯನು ಕೊಡು ಉಡಲು, ಕಟ್ಟಿಕೊಂಡು ಮನೆಗಳನು ಇದು ಮೊದಲು, ಆಮೇಲೆ ಉಳಿದುದೆಲ್ಲಾ, ನೀವು ಬಿಚ್ಚು ಮನಸ್ಸಿನಿಂದ ಯೋಚನೆ ಮಾಡುವುದಾದರೆ ಯಾವ ಮಾತನ್ನು ನಾನು ಹೇಳಿದ್ದೇನೋ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ನೀವು ಸರಿಯಾಗೇ ಹೇಳಿದಿರಿ, ನಾವೂ ಅದನ್ನೇ ಹೇಳುತ್ತಿರುವುದು ಮೊದಲು ಅನ್ನ ಬಟ್ಟೆ ಕೊಡಿ ಆಮೇಲೆ ಮಠಮಾನ್ಯಮಂದಿರಗಳಿಗೆ ಹಣ ಕೊಡಿ

ಶ್ರೀ ಜಗದೀಶ್ ಶೆಟ್ಟರ್ ಆ ಮಠದವರು ವಿದ್ಯೆ ಕೊಡುತ್ತಿದ್ದಾರೆ

ಶ್ರೀ ಬಿ ಎಸ್ ಯಡಿಯೂರಪ್ಪ ಬೆಳಗಾವಿಯಲ್ಲಿ ಐತಿಹಾಸಿಕ ಅಧಿವೇಶನವನ್ನು ನಾವು ಮಾಡಿದೆವು ಬಹುಶಃ ಮೊಟ್ಟ ಮೊದಲ ಬಾರಿವಿ ನಮ್ಮ ಮುಖ್ಯಮಂತ್ರಿಗಳು ಮತ್ತು ನಾವು ಒಟ್ಟಾಗಿ ಸೇರಿ ರಾಜಧಾನಿಯಾದ ಬೆಂಗಳೂರಿನ ಹೊರಗೆ ಒಂದು ಐತಿಹಾಸಿಕ ಅಧಿವೇಶನವನ್ನು ಬೆಳಗಾಂನಲ್ಲಿ ಮಾಡಿದ್ದೇವೆ ನಾನು ಒಂದೇ ಮಾತನ್ನು ಹೇಳುತ್ತೇನೆ ಇವೊತ್ತೇನಾದರೂ ಡಾ ನಂಜುಂಡಪ್ಪ ವರದಿಯನ್ನು ಜಾರಿಗೆ ತರಬೇಕು, ಇದಕ್ಕೆ ಪ್ರತ್ಯೇಕವಾಗಿ ಹಣವನ್ನು ಇಡಬೇಕು ಎಂದು ಪ್ರೇರಣೇ ಸಿಕ್ಕಿದ್ದು ಬೆಳಗಾಂನ ಅಧಿವೇಶನದಲ್ಲಿ, ಅವೊತ್ತು ಮುಖ್ಯಮಂತ್ರಿಗಳು ಮತ್ತು ನಾವು ಒಟ್ಟಾಗಿ ಡಾ ನಂಜುಂಡಪ್ಪ ವರದಿಯನ್ನು ಜಾರಿಗೊಳಿಸುವುದಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳನ್ನಾದರೂ ತೆಗೆದಿಡುತ್ತೇವೆ, ಇದನ್ನು ನಾನು ಹೇಳಿದ್ದೇನೆ ಬಜೆಟ್‌ಗೆ ಮುಂಚೆಯೇ ಹೇಳಿಬಿಟ್ಟಿರಿ ಎಂದಿರಿ ಹೇಳಿದ್ದು ನಿಜ, ಇಷ್ಟು ದೊಡ್ಡ ಪ್ರಮಾಣದ ಹಣವನ್ನು ಇಟ್ಟಿದ್ದೇವೆ ಮತ್ತೆ ಅಲ್ಲಿಗೆ ಹೋದಾಗ ಒಂದು ಮಾತನ್ನು ಹೇಳಿದ್ದವು

ಶ್ರೀ ಸಿದ್ದರಾಮಯ್ಯ ಎಲ್ಲಿ ಇಟ್ಟಿದ್ದೀರಿ?

ಶ್ರೀ ಬಿ ಎಸ್ ಯಡಿಯೂರಪ್ಪ ಸ್ವಾಮಿ ನೀವು ಆ ಭಾಗಕ್ಕೆ ಹೋಗಿ ಆ ಭಾಗದಲ್ಲಿ ನೀವು ಹೋದಾಗ, ಯಡಿಯೂರಪ್ಪ ಮತ್ತು ಕುಮಾರಸ್ವಾಮಿ ಸೇರಿಕೊಂಡು ೧೫೭೫ ಕೋಟಿ ರೂಪಾಯಿ ಗಳನ್ನು ಇಟ್ಟಿದ್ದರು? ನೀವ್ಯಾಕೆ ಹಿಂದೆ ಇಡಲಿಲ್ಲ, ನಿಮಗೇನು ದಾಡಿಯಾಗಿತ್ತು ಎಂದು ಕೇಳಿದರೆ ನೀವು ಏನು ಅವರಿಗೆ ಉತ್ತರ ಕೊಡುತ್ತೀರಿ? ಏನು ಉತ್ತರ ಕೊಡುತ್ತೀರಿ ಸ್ವಾಮಿ ನೀವು?

ಶ್ರೀ ಸಿದ್ದರಾಮ್ಯಯ ನಾವು ಇಟ್ಟಿದ್ದೇವೆ ಎಂದು ಹೇಳಲಿಲ್ಲ, ಇಟ್ಟಿರಲಿಲ್ಲ ಆದರೆ ನೀವು ಹೇಳಿದ್ದೀರಿ, ಇಟ್ಟಿಲ್ಲ ನೀವು ಹೋದರೆ ಯಡಿಯೂರಪ್ಪನವರೆ, ಜನಗಳು ಕೇಳುತ್ತಾರೆ

ಶ್ರೀ ಬಿ ಎಸ್ ಯಡಿಯೂರಪ್ಪ ನೀವು ಈ ಬಜೆಟ್ ನ್ನು ಒಪ್ಪದಿದ್ದರೆ ನಾನು ನಿಮ್ಮ ಬಗ್ಗೆಯೇ ಅನುಮಾನ ಪಡಬೇಕಾಗುತ್ತದೆ

ಶ್ರೀ ಸಿದ್ದರಾಮಯ್ಯ ಎಲ್ಲಿ ಇಟ್ಟಿದ್ದೀರಿ ತೋರಿಸಿ

ಶ್ರೀ ಬಿ ಎಸ್ ಯಡಿಯೂರಪ್ಪ ಏನು ತೋರಿಸೋದು

ಶ್ರೀ ಸಿದ್ದರಾಮಯ್ಯ ಎಲ್ಲಿದೆ ತೋರಿಸಿ ಎಂದರೆ ತೋರಿಸುವುದಕ್ಕಾಗುವುದಿಲ್ಲವೆಮದರೆ ಹೇಗೆ?

ಶ್ರೀ ಬಿ ಎಸ್ ಯಡಿಯೂರಪ್ಪ ಹೆಡ್ ಆಫ್ ಅಕೌಂಟ್ ನಲ್ಲಿದೆ ನಿಮಗೆ ಓದುವುದಕ್ಕಾಗುವುದಿಲ್ಲವೇನು?

ಶ್ರೀ ಸಿದ್ದರಾಮಯ್ಯ ಬರಿ ಹೆಡ್ ಆಫ್ ಅಕೌಂಟ್ ತೋರಿಸಿದರೆ, ದುಡ್ಡು ಎಲ್ಲಿದೆ?

ಶ್ರೀ ಬಿ ಎಸ್ ಯಡಿಯೂರಪ್ಪ ದುಡ್ಡನ್ನು ತಂದು ನಿಮ್ಮ ಮನೆಯಲ್ಲಿಡಬೇಕೆ?

ಶ್ರೀ ಸಿದ್ದರಾಮಯ್ಯ ದುಡ್ಡು ನಿಮ್ಮ ಮನೆಯಲ್ಲೂ ಇರುವುದಿಲ್ಲ, ನಮ್ಮ ಮನೆಯಲ್ಲೂ ಇರುವುದಿಲ್ಲ, ಆದರೆ ಬಜೆಟಲ್ಲಿ ಇರಬೇಕಲ್ಲ ಈತ ೧೫೭೧ ಕೋಟಿ ಅದು ನಿಮ್ಮ ಪ್ಲಾನ್ ನ ಒಳಗಡೆ ಇದೆಯೆ ಅಥವಾ ಇಲ್ಲವೆ? ಹೇಳಿ

ಶ್ರಿ ಬಿ ಎಸ್ ಯಡಿಯೂರಪ್ಪ ಪ್ಲಾನ್ ಒಳಗಡೆ ಇದೆ ನೂರು ಸಲ ಹೇಳುತ್ತಿದ್ದೇನೆ

ಶ್ರೀ ಸಿದ್ದರಾಮಯ್ಯ ಪ್ಲಾನ್ ಒಳಗಡೆ ಇದೆ, ಅದು ೧೭೭೨ ಕೋಟಿಯೊಳಗಡೆ ಇದೆ

ಶ್ರೀ ಬಿ ಎಸ್ ಯಡಿಯೂರಪ್ಪ ಅದು ಎಲ್ಲಾದರೂ ಇರಲಿ, ಪ್ಲಾನ್ ಒಳಗಡೆ ಇದೆ

ಶ್ರೀ ಸಿದ್ದರಾಮಯ್ಯ ಎಲ್ಲಾದರೂ ಇರಲಿ ಎಂದರೆ ಹೇಗೆ ? ೧೭೭೨ ಕೋಟಿಯೊಳಗೆ ಇದೆ ಅಂದಮೇಲೆ ಸೆಪರೇಟ್ ನೀವು ಅಡಿಶನಲ್ ಅಮೌಂಟ್ ಕೊಟ್ಟಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ ಸ್ವಲ್ಪ ತಡಿಯಿರಿ ಸ್ವಾಮಿ ನಾನು ನಿಮ್ಮನ್ನು ಕೇಳುತ್ತೇನೆ ಪ್ಲಾನ್ ಸೈಸ್‌ನಲ್ಲಿ ಡಾ ನಂಜುಂಡಪ್ಪ ವರದಿಯನ್ನು ಅನುಷ್ಠಾನ ಮಾಡುವುದಕ್ಕೋಸ್ಕರ ಅದರಲ್ಲಿಯೇ ತೆಗೆದಿಟ್ಟಿದ್ದೇವೆ ಎಂದಿಟ್ಟುಕೊಳ್ಳಿ ನೀವ್ಯಾಕೆ ಹಿಂದೆ ಪ್ಲಾನ್ ನಲ್ಲಿಯೇ ತೆಗೆದಿಟ್ಟಿರಲಿಲ್ಲ?

ಶ್ರೀ ಸಿದ್ದರಾಮಯ್ಯ ನಾವು ಇಟ್ಟಿದ್ದೆವು ಎಂದು ಹೇಳುತ್ತಿಲ್ಲವಲ್ಲ I am not claiming ನಾನು ಇಟ್ಟಿದ್ದೆ ಎಂದು ಹೇಳುವುದಿಲ್ಲ ಆಧರೆ ನೀವು ಇಟ್ಟಿದ್ದೀರಿ ? Whether it s an additional amount or it s included in the plan size? ಎಂದು ಹೇಳಿದ್ದೀರಿ ಎಲ್ಲಿ ಇಟ್ಟಿದ್ದೀರಿ?

ಶ್ರೀ ಜಗದೀಶ್ ಶೆಟ್ಟರ್ ಡಾ ನಂಜುಂಡಪ್ಪ ವರದಿಯನ್ನು ಅನುಷ್ಠಾನ ಮಾಡುವುದಕ್ಕೆ ನೀವು ಯಾರೂ ಇದುವರೆಗೆ ನೀವು ಧೈರ್ಯ ಮಾಡಿರಲಿಲ್ಲ ಕೊನೆಗೆ ಅಲ್ಲೊಂದು ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಿ ನಂಜುಂಡಪ್ಪನವರ ವರದಿಯನ್ನು ಅನುಷ್ಠಾನ ಮಾಡುತ್ತೇವೆ ಎಂದು ಪ್ರತಿಪಕ್ಷದ ನಾಯಕರು ಹೇಳಿದ್ದರು ಯಾರೂ ಆ ಧೈರ್ಯವನ್ನೇ ಮಾಡಿರಲಿಲ್ಲ ೧೫೦೦ ಕೋಟಿಯಷ್ಟು ಹಣವನ್ನು ಇಡುವಂಥ ಧೈರ್ಯವನ್ನು ಹಿಂದೆ ಯಾರೂ ಮಾಡಿರಲಿಲ್ಲ ನಾವು ಇಟ್ಟಿದ್ದೇವೆ ಮತ್ತು ಅದನ್ನು ಖರ್ಚು ಮಾಡಿ ತೋರಿಸುತ್ತೇವೆ ೧೫೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನಂಜುಂಡಪ್ಪನವರ ವರದಿಯನ್ನು ಅನುಷ್ಠಾನ ತೋರಿಸುತ್ತೇವೆ ಹಿಂದೆ ಯಾರೂ ಇದಕ್ಕಾಗಿ ಹಣವಿಡುವ ಧೈರ್ಯವನ್ನೇ ಮಾಡಿರಲಿಲ್ಲ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಈಗ ಅವರಿಗೆ ಮಿಸ್ – ಅಂಡರ್ ಸ್ಟ್ಯಾಂಡಿಂಗ್ ಆಗುತ್ತಿದೆ ಇಲ್ಲಿ ನಮ್ಮ ವಾದದೇನೆಂದರೆ ನೀವು ತೋರಿಸಿರುವ ೧೭ ಸಾವಿರ ಕೋಟಿ ರೂಪಾಯಿಗಳ ಪ್ಲಾನ್ ನಲ್ಲಿ ೧೫೦೦ ಕೋಟಿ ರೂಪಾಯಿ ಸೇರಿದೆಯೇ ಹೊರತು ಅಡಿಶನಲ್ ಆಗಿ ಇಲ್ಲ ಅಡಿಶನಾಲಿಟಿ ಎಂದರೆ ಹೇಗೆ ಬರಬೇಕು, ಸಮಾನತೆ ತರುವ ದೃಷ್ಟಿಯಿಂದ, ನಿಮ್ಮೆಲ್ಲರಿಗೂ ಒಂದೊಂದು ಕೊಟ್ಟಮೇಲೆ ಅಸಮಾನತೆ ಇರತಕ್ಕಂಥ ಏರಿಯಾಗೆ ಇನ್ನೊಂದು ಅಡಿಶನಲ್ ಕೊಡತಕ್ಕಂಥಾದ್ದು ಆಗಬೇಕಾಗಿತ್ತು

ಅದು, ನಾವು ಕೇಳಿದ್ದು, ೧೭ ಸಾವಿರ ಪ್ಲಾನ್ ಔಟ್ ಲೇಯಲ್ಲಿಯೇ ಇದು ಸೇರಿದ್ದರೆ ನೀವು ಹೇಗೆ ಅಡಿಶನಲ್ ಆಗಿ ಕೊಟ್ಟಂತೆ ಆಗುತ್ತದೆ? ಇದು ಒಂದು ವಿಚಾರ ಪದೇ ಪದೇ ಶೆಟ್ಟರ್ ರವರು ಹಿಂದೆ ಯಾರೂ ಇಲ್ಲಿರಲಿಲ್ಲವೆಂದು ಹೇಳುತ್ತಿದ್ದಾರೆ ಸ್ವಾಮಿ, ನಮ್ಮ ಕಾಲದಲ್ಲಿ ಇಂಬ್ಯಾಲೆನ್ಸ್ ಇದೆಯೆಂದು ತಿಳಿದುಕೊಂಡೇ ಡಾ ನಂಜುಂಡಪ್ಪ ಸಮಿತಿಯ್ನು ರಚನೆ ಮಾಡಿದ್ದು, ಸರ್ವೆ ಮಾಡಿದ್ದು, ರಿಪೋರ್ಟ್ ಕೊಟ್ಟಿದ್ದು, ಒಂದೆರಡು ಯೂನಿವರ್ಸಿಟಿಗಳನ್ನು ಮಾಡಿರಬಹುದು, ಅಡಿಶನಲ್ ಲೋನ್ ತೆಗೆದುಕೊಂಡಿರಬಹದು, ಇವು ಮಾಡಿರವುದು ಆದರೆ ನಾವು ಏನನ್ನೂ ಮಾಡಿಲ್ಲವೆನ್ನತಕ್ಕಂಥ ಮಾತನ್ನು ಅವರು ಹೇಳಬಾರುದು ಇದು ಒಂದು ಮಾಡಿದ್ದೇ ನಾವು, ಮೂಲಭೂತವಾಗಿ ಅಸಮಾನತೆಯನ್ನು ತೆಗೆದುಹಾಕುವುದಕ್ಕೋಸ್ಕರವಾಗಿಯೇ ಆ ರಿಪೋರ್ಟ್ ತಂದ್ದು ಇವೊತ್ತು ಆ ರಿಪೋರ್ಟ್ ಇಲ್ಲದಿದ್ದರೆ ಇವೊತ್ತು ನಂಜುಂಡಪ್ಪ ವರದಿ ಎಂದು ಎನ್ನುತ್ತಿರಲಿಲ್ಲ ಮತ್ತೆ ನೀವು ಹೇಗೆ ಹಣವನ್ನು ಹಂಚುತ್ತಿದ್ದರೆಂದರೆ ಮಹಾರಾಜರು ಹಂಚಿದಂತೆ ಡಿಸ್ಕಿಶನ್ ಅಮೌಂಟ್ ಹಂಚಿಬಿಡುತ್ತಿದ್ದಿರಿ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತಿದ್ದ, ಒಲ್ಲದ ಮೊಸರಲ್ಲಿ ಕಲ್ಲು ಹುಡುಕುತ್ತಾರಂತೆ ಏನ್ ಸ್ವಾಮಿ ಅಧ್ಯಕ್ಷರೆ, ನಆನು ಒಂದು ಸಂಗತಿಯನ್ನು ಹೇಳುವವನಿದ್ದೇನೆ ಇವರೇನು ಹೇಳುತ್ತಿದ್ದಾರೆ, ಯಡಿಯೂರಪ್ಪನವರೆ, ಪ್ಲಾನ್ ನಲ್ಲಿದೆ, ಅದರಲ್ಲಿರುವ ದುಡ್ಡನ್ನೇ ತೆಗೆದು ನಂಜುಡಪ್ಪನವರ ವರದಿ ಅನುಷ್ಠಾನಕ್ಕೆ ಎಂದು ತೆಗೆದುಕೊಟ್ಟಿದದೀರಿ ಎಂದಿದ್ದಾರೆ ೨೦೦೨ ಆದಮೇಲೆ ನಂಜುಂಡಪ್ಪ ವರದಿ ಬಂದಮೇಲೆ ಅಂಕಿ ಅಂಶಳೊಂದಿಗೆ ನಾನು ಇಲ್ಲಿ ನಿಮ್ಮ ಎದುರಿಗೆ ನಿಂತಿದ್ದೇನೆ, ಆ ಏರಿಯಾಗೆ ಹಿಂದುಳಿದ ಆ ಪ್ರದೇಶಕ್ಕೆ ಪ್ರತಿ ನೀವು ಎಷ್ಟು ಹಣವನ್ನು ತೆಗೆದಿಟ್ಟಿದಿರಿ ಮತ್ತು ಎಷ್ಟು ಖರ್ಚು ಮಾಡಿದ್ದೀರಿ, ಈ ಸಮ್ಮಿಶ್ರ ಸರ್ಕಾರ ಬಂದಮೇಲೆ ಎಷ್ಟು ತೆಗೆದಿಟ್ಟಿದ್ದೇವೆ ಮತ್ತು ಎಷ್ಟು ಖರ್ಚು ಮಾಡಿದ್ದೇವೆ

ಇವತ್ತು ಬೆಂಗಾಂನಲ್ಲಿ ವಿಧಾನಸೌಧ ಕಟ್ಟುವುದಕ್ಕೆ ೨೫೦ ಕೋಟಿ ರೂಪಾಯಿ ಇಟ್ಟಿದ್ದೇವೆ, ಇದರಲ್ಲಿ ನಾವು ಸೇರಿಸಿಲ್ಲ ಸ್ವಾಮಿ Regular programme ಇದೆ ಹೈದರಾಬಾದ್ ಕರ್ನಾಟಕದ ಅಭಿವೃದ್ಧಿ ಇದೆ ಆ ಹಣವನ್ನು ತೆಗೆದು ನಾವು ಇದರಲ್ಲಿ ಸೇರಿಸಿಲ್ಲ ಆಗಿ ಪ್ರತಿವರ್ಷ ಏನು ಇವರು ಕೊಡುತತಿದ್ದರು, ಅದರ ಜೊತೆಗೆ ಆದ್ಯತೆ ಮೇಲೆ ಈ ಹಣವನ್ನು ತೆಗೆದಿಟ್ಟಿದ್ದೇವೆ

ಶ್ರೀ ಸಿದ್ಧರಾಮಯ್ಯ mislead ಮಾಡುವುದು ಬೇಡ, ಒಂದು ವಿಚಾರವನ್ನು ಒಪ್ಪಿಕೊಳ್ಳೋಣ ೨೦೦೭-೦೮ನೇ ಸಾಲಿಗೆ ೧೭೭೮೨ ಕೋಟಿ ರೂಪಾಯಿಯ ಬಜೆಟ್ ಇದೆ ಅದರೊಳಗಡೆ ೧,೫೭೧ ಕೋಟಿ ರೂಪಾಯಿಯನ್ನು ನಂಜುಂಡಪ್ಪ ವರದಿ ಆಧಾರದ ಮೇಲೆ ಖರ್ಚು ಮಾಡುತ್ತೇವೆ ಎಂದು ಹೇಳಿಬಿಟ್ಟರೆ ಮುಗಿದುಹೋಯಿತು That is the correct possition

ಶ್ರೀ ಬಿ ಎಸ್ ಯಡಿಯೂರಪ್ಪ ಆಮೇಲೆ ನೀರಾವರಿ ಕ್ಷೇತ್ರದ ಬಗ್ಗೆ ಒಂದು ಹೇಳಿದರು, ನೀವು ಹಣವನ್ನೆ ಕೊಟ್ಟಿಲ್ಲ, ನೀವು ದುಡ್ಡು ಇಟ್ಟಿಲ್ಲವೆಂದು ಹೇಳಿಕೊಂಡು ಬಂದರು Allocation for major, medium and minor irrigation ನ್ಲಿ ೨೦೦೩-೦೪ ರಲ್ಲಿ major and medium irrigation worksಗೆ ೬೯೦ ೭೨ ಕೋಟಿ ರೂಪಾಯಿ ಇಟ್ಟಿದ್ದರು, minor irrigationಗೆ ೧೦೯ ೮೮ ಕೋಟಿ ರೂಪಾಯಿ ಆಯಿತು ೨೦೦೪-೦೫ ನೇ ಸಾಲಿನಲ್ಲಿ major and medium irrigation ಗೆ ೧,೦೮೦ ೫೫ ಕೋಟಿ ರೂಪಾಯಿ, minor irrigation ಗೆ ೧೯೭ ೨೯ ಕೋಟಿ, Total 1,2777 85 ಕೋಟಿ ರೂಪಾಯಿ ೨೦೦೫-೦೬ ನೇ ಸಾಲಿನಲ್ಲಿ major and medium irrigation ೧,೯೬೩ ೯೪ ಕೋಟಿ ರೂಪಾಯಿ ೧೭೭ ೨೭ ಕೋಟಿ ರೂಪಾಯಿ, ಒಟ್ಟು ೨,೧೪೧ ೧೬ ಕೋಟಿ ರೂಪಾಯಿ ೨೦೦೬-೦೭ನೇ ಸಾಲಿಗೆ ೨,೪೨೬ ೬೯ ಕೋಟಿ ರೂಪಾಯಿ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ಒಂದು ನಿಮಿಷ, ನಿಮ್ಮನ್ನು ತೃಪತ್ತಪಡಿಸುವುದಕ್ಕೆ ಆಗುವುದಿಲ್ಲ, ನನಗೆ ಕಷ್ಟವಾಗುತ್ತದೆ, ನೀವು ಏನು ಹೇಳುತ್ತೀರೋ ಅದಕ್ಕೆ ನಾನು ಒಪ್ಪಿಕೊಂಡು ಬಿಡುತ್ತೇನೆ ೨೦೦೬-೦೭ ನೇ ಸಾಲಿನಲ್ಲಿ ೨,೪೨೬ ೬೯ ಕೋಟಿ ರೂಪಾಯಿ ನಾನು major and medium irrigation ನಲ್ಲಿ ಅವತ್ತಿನಿಂದ ಇವತ್ತಿನವರೆಗೆ actual works ಗೆ ಖರ್ಚು ಮಾಡುತ್ತಿರುವುದನ್ನು ಹೇಳುತ್ತಿರುವುದು ೨೦೦೭-೦೮ನೇ ಸಾಲಿನಲ್ಲಿ major and medium irrigation works ೨,೮೬೩ ೬೪ ಕೋಟಿ ರೂಪಾಯಿ ಇಟ್ಟಿದ್ದೇವೆ Minor irrigationಗೆ ೭೬೭ ೧೭ ಕೋಟಿ ರೂಪಾಯಿ ಇಟ್ಟಿದ್ದೇವೆ ಒಟ್ಟು ೩,೬೩೦ ಕೋಟಿ ರೂಪಾಯಿ ಇಟ್ಟಿದ್ದೇವೆ ಇವರದು ಏನು point ಎಂದರೆ debt service, last year ಬಡ್ಡಿ adjustment ಗೆ ೧,೫೪೭ ೯೩ ಕೊಟಿ ರೂಪಾಯಿ ಇತ್ತು ಈ ಬಾರಿ ಅದಕ್ಕೆ ೮೧೩ ೦೩ ಕೋಟಿ ರೂಪಾಯಿ ಆಯಿತು ಎಂದರೆ ಸಾಲದ ಮೇಲಿನ ಬಡ್ಡಿ ಹೊರೆ ಹೇಗೆ ಕಡಿಮೆ ಮಾಡಿಕೊಂಡು ಬಂದಿದ್ದೇವೆ ಎನ್ನುವುದಕ್ಕೆ ತಾವು appreciate ಮಾಡಬೇಕು 11th Finance ಪ್ರಾರಂಭವಾದಗ ಬಡ್ಡಿ ಬೇರೆ ತೋರಿಸಿದ್ದೇವೆ ಆದರೆ ಈ ಕಾಮಗಾರಿಕೆ ಕೊಟ್ಟಂತಹ ಹಣ ಅತ್ಯಂತ ಹೆಚ್ಚಿನದು ಆದುದರಿಂದ ತಾವೇನು irrigationಗೆ ಕಡಿಮೆ ಹಣ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದೀರಿ, ಅದು ಸತ್ಯಕ್ಕೆ ದೂರವಾದಂತಹ ಸಂಗತಿ ೨೦೦೬-೦೭ ರಲ್ಲಿ ನೀರಾವರಿ ಕಾಮಗಾರಿಗೆ ೨,೭೩೨ ೬೫ ಕೋಟಿ ರೂಪಾಯಿ, ಈ ಸಾರಿ ೩,೧೪೫ ೭೭ ಕೋಟಿ ರೂಪಾಯಿ ಎಂದರೆ ಹೋದವರ್ಷಕ್ಕಿಂತ ಈ ವರ್ಷ ೪೧೩ ೧೨ ಕೋಟಿ ರೂಪಾಯಿ ಆಯಿತು ಎದರೆ ಸಾಲದ ಮೇಲಿನ ಬಡ್ಡಿ ಹೊರೆ ಹೇಗೆ ಕಡಿಮೆ ಮಾಡಿಕೊಂಡು ಬಂದಿದ್ದೇವೆ ಎನ್ನುವುದಕ್ಕೆ ತಾವು appreciate ಮಾಡಬೇಕು 11th Finance ಪ್ರಾರಂಭವಾದಾಗ ಬಡ್ಡಿ ಬೇರೆ ತೋರಿಸಿದ್ದೇವೆ, ಆದರೆ ಈ ಕಾಮಗಾರಿಗೆ ಕೊಂಟ್ಟಂತಹ ಹಣ ಅತ್ಯಂತ ಹೆಚ್ಚಿನದು, ಆದುದರಿಂದ ತಾವೇನು irrigationಗೆ ಕಡಿಮೆ ಹಣ

ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದೀರಿ, ಅದು ಸತ್ಯಕ್ಕೆ ದೂರವಾದಂತಹ ಸಂಗತಿ, ೨೦೦೬-೦೭ ರಲ್ಲಿ ನೀರಾವರಿ ಕಾಮಗಾರಿಕೆ ೨,೭೩೨ ೬೫ ಕೋಟಿ ರೂಪಾಯಿ, ಈ ಸಾರಿ ೩,೧೪೫ ೭೭ ಕೋಟಿ ರೂಪಾಯಿ ಎಂದರೆ ಹೋದವರ್ಷಕ್ಕಿಂತ ಈ ವರ್ಷ ೪೧೩ ೧೨ ಕೋಟಿ ರೂಪಾಯಿ works ಗೆ ಹೆಚ್ಚುವರಿಯಾಗಿ ಇಟ್ಟಿದ್ದೇವೆ ಈ ಅಂಕಿ ಅಂಶವನ್ನು ನೀವು ಯಾವಾಗ ಹೇಳುತ್ತೀರಿ, ನಿಮಗೆ prove ಮಾಡುವುದಕ್ಕೆ ಯಾವ ಭಾಷೆಯಲ್ಲಿ ಹೇಳಬೇಕು ಅದನ್ನು ಹೇಳುವುದಕ್ಕೆ ನಾನು ready ಇದ್ದೇನೆ ತಾವೂ ದಯವಿಟ್ಟು ಕೊನೆಯಲ್ಲಿ ಮಾತನಾಡಿ

ಶ್ರೀ ಸಿದ್ದರಾಮಯ್ಯ ಇವತ್ತು 1th 5 year plan ನಲ್ಲಿ ಎಷ್ಟು ಹೇಳಿದ್ದಾರೆ

(ಗೊಂದಲ)

ಅಧ್ಯಕ್ಷರು ಸಿದ್ದರಾಮಯ್ಯನವರೆ, ತತ್‌ಕ್ಷಣ ಮಧ್ಯದಲ್ಲಿ ಮಾತನಾಡಿದರೆ ಅವರಿಗೆ ಉತ್ತರ ಹೇಳುವುದಕ್ಕೆ ತೊಂದರೆಯಾಗುತ್ತದೆ, clarification ಕೇಳುವಾಗ ಕೇಳಿ

ಶ್ರೀ ಬಿ ಎಸ್ ಯಡಿಯೂರಪ್ಪ ರೈತರು ಸಹಕಾರಿ ಸಂಘದಿಂದ ಪಡೆದಂತಹ ಸಾಲಕ್ಕೆ ದೇಶದಲ್ಲೆ ಮೊದಲ ಬಾರಿಗೆ ೪% ಬಡ್ಡಿಗೆ ಕೊಟ್ಟಂತಹ ಹೆಗ್ಗಳಿಕೆ ನಮ್ಮದು ಇಡೀ ದೇಶದಲ್ಲಿ ಯಾವುದೇ ರಾಜ್ಯದಲ್ಲಿ ಈ ಕೆಲಸವನ್ನು ಯಾರು ಮಾಡಲಿಲ್ಲ ಅಷ್ಟೇ ಅಲ್ಲ ಈ ರೀತಿ ೪% ಬಡ್ಡಿಗೆ ಸಾಲವನ್ನು ನೀಡುವಂತಹ ಕೆಲಸವನ್ನು ನೇಕಾರರಿಗೆ ಮತ್ತು ಮೀನುಗಾರರಿಗೆ ವಿಸ್ತರಣೆ ಮಾಡಿದ್ದೇವೆ

ಶ್ರೀ ಎನ್ ಧರ್ಮ್‌ಸಿಂಗ್ ಬಿಡುಗಡೆ ಮಾಡಿಲ್ಲ, ಸುಮ್ಮನೆ ಕೊಟ್ಟಿದ್ದೇವೆ ಎಂದು ಹೇಳುವುದಾ? ಸುಳ್ಳು ಹೇಳುತ್ತೀರಲ್ಲ

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ ನಾವು ೬% ಮಾಡಿದ್ದೆವು ಅದನ್ನು ವಿಸ್ತರಣೆಯನ್ನು ಮಾಡಿಲ್ಲ ನೇಕಾರರಿಗೆ ವಿಸ್ತರಣೆ ಅವರ ಸರ್ಕಾರದಿಂದ ಆಯಿತಾ?

ಅಧ್ಯಕ್ಷರು ಅವರು ಉತ್ತರ ಕೊಟ್ಟನಂತರ clarification ಕೇಳಿ, ಮಧ್ಯ ಮಧ್ಯದಲ್ಲಿ ಎದ್ದರೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಉತತರವನ್ನು ಕೊಟ್ಟನಂತರ ತಾವು ಸ್ಪಷ್ಟೀಕರಣವನು ಕೇಳುವುದಕ್ಕೆ ಅವಕಾಶವನ್ನು ಕೊಡುತ್ತೀರಿ ಯಾರಾದರೂ ಒಂದು ವಿಜಯವನ್ನು ಪ್ರಸ್ತಾಪ ಮಾಡುವಾಗ ೩೬ ಪ್ರಶ್ನೆಗಳನ್ನು ನಡೆಉವೆ ಕೇಳಿದರೆ ಅವರ ಯೋಜನಾ ಲಹರಿ ನಿಂತು ಹೋಗುತ್ತದೆ ಆದುದರಿಂದ

(ಗೊಂದಲ)

ಶ್ರೀ ಎಸ್ ಧರ್ಮ್‌ಸಿಂಗ್ ಎಲ್ಲಾ ಮಂತ್ರಿಗಳು ಹೇಳಬೇಕಾಗಿತ್ತು

ಶ್ರೀ ಎಂ ಪಿ ಪ್ರಕಾಶ್ ಹಾಗೂ ಕೂಡ ಹೇಳಿದ್ದೇವೆ, ಹೀಗೂ ಕೂಡ ಹೇಳುತ್ತೇವೆ ಮಧ್ಯದಲ್ಲಿ ಪ್ರವೇಶ ಮಾಡಿದಾಗ ತೊಂದರೆಯಾಗುತ್ತದೆ ಸ್ಪಷ್ಟೀಕರಣ ಕೇಳುವುದಕ್ಕೆ ಅವಕಾಶ ಇದೆ ನೀವು ಅದನ್ನು ಗುರುತು ಮಾಡಿಕೊಂಡು ಇಂತಿಂತಹ ವಿಚಾರಗಳಲ್ಲಿ ತಮ್ಮ ಹೇಳಿದ್ದಿರಿ ಎಂದು ಕೇಳಿ ಒಂದು ಮಾತಿಗೆ ಪ್ರತಿ ಉತ್ತರವಾದರೆ, ಮುಂದೆ ಉತ್ತರಿಸುವುದು ಕಷ್ಟವಾಗುತ್ತದೆ ದಯವಿಟ್ಟು ಸಹಕಾರ ನೀಡಬೇಕು ಅವರ ಉತ್ತರ ಆದನಂತರ ಸ್ಪಷ್ಟೀಕರಣ ಕೇಳಿ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ಪ್ರತಿಪಕ್ಷದಲ್ಲಿ ನಮ್ಮ ಸ್ನೇಹಿತರು ಯಾರು ಕುಳಿತಿದ್ದಾರೆ, ಅವರು ಯಡಿಯೂರಪ್ಪನವರೆ, ನಿಮಗೆ ಸುವರ್ಣಾವಕಾಸಶ ಸಿಕ್ಕಿತು" ಎಂದು ಹೇಳಿದರು

ಪ್ರತಿ ಪಕ್ಷದಲ್ಲಿ ನಮ್ಮ ಸ್ನೇಹಿತರು ಕುಳಿತ್ತಿದ್ದಾರೋ, ಅವರು ನನಗೆ ಯಡಿಯೂರಪ್ಪನವರೆ, ನಿಮಗೆ ಸುವರ್ಣಾಕಾಶ ಸಿಕ್ಕಿತು ಹಣಕಾಸಿನ ಸ್ಥಿತಿ ಚೆನ್ನಾಗಿತ್ತು, ಬೇಕಾದದ್ದು ಮಾಡುವುದಕ್ಕೆ ಅವಕಾಶವಿತ್ತು, ಮಾಡಲಿಲ್ಲವೆಂದು ಹೇಳಿದರು, ನಿಮಗೆ ಸುವರ್ಣಾವಕಾಶ ಸಿಗಲಿಲ್ಲವೇ? ನೀವು ೬-೭ ಬಾರಿ ಬಜೆಟ್ ಮಂಡನೆ ಮಾಡಲಿಲ್ಲವಾ ? ಆಗ ಶೇ ೪ರ ಬಡ್ಡಿಯಲ್ಲಿ ಏಕೆ ಸಾಲವನ್ನು ಕೊಡಬೇಕೆಂದು ಅನಿಸಲಿಲ್ಲ? ಆಗ ಡಾ ನಂಜುಡ್ಡನವರ ವರಿಯನ್ನು ಅನುಷ್ಠಾನಕ್ಕೆ ತರಬೇಕೆಂದು ಏಕೆ ಅನಿಸಲಿಲ್ಲ? ಆಗ ಡಾ ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಕ್ಕೆ ತರಬೇಕೆಂದು ಏಕೆ ಅನಿಸಲಿಲ್ಲ? ಈಗ ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತನ್ನು ಕೊಡಬೇಕೆಂದು ಏಕೆ ಅನಿಸಲಿಲ್ಲ? ಆಗ ನೇಕಾರರ, ಮೀನುಗಾರರ ಮೂಗಿಗೆ ತುಪ್ಪ ಹಚ್ಚಿ, ಓಟನ್ನು ತೆಗೆದುಕೊಳ್ಳುತ್ತಿದ್ದರಲ್ಲಾ, ಈಗ ಅವರ ಕಷ್ಟಕ್ಕೆ ನೆರವಾಗಬೇಕೆಂದು ಏಕೆ ಅನಿಸಲಿಲ್ಲ? ನಾವು ಅದನ್ನು ಮಾಡಿದ್ದೇವೆ ನಾವು ಹೆಮ್ಮೆಯಿಂದ ಹೇಳುತತೇವೆ, ಹತ್ತು ಸಾರಿ ಎದೆ ತಟ್ಟಿಕೊಮಡು ಹೇಳುತ್ತೇವೆ ನೀವು ಏಕೆ ಒದ್ದಾಡುತ್ತೀರಾ? ನಾವು ಮಾಡಿರುವ ಒಳ್ಳೆಯ ಕೆಲಸವನ್ನು ಹೇಳುತ್ತಿದ್ದೇವೆ ನೀವು ಏಕೆ ಒದ್ದಾಡುತ್ತೀರಾ? ನಾವು ಮಾಡಿರುವ ಒಳ್ಳೆಯ ಕೆಲಸನವನ್ನು ಹೇಳುತ್ತಿದ್ದೇವೆ ನೀವು ಅದನ್ನು ಒಪ್ಪಬಹುದು, ಒಪ್ಪದೇ ಇರಬಹುದು, ನಾವು ರೈತರಿಗೆ, ನೇಕಾರರಿಗೆ, ಮೀನುಗಾರರಿಗೆ, ಶೇ ೪ರ ಬಡ್ಡಿಯಲ್ಲಿ ಸಾಲವನ್ನು ಕೊಟ್ಟಿದ್ದೇವೆ ಲಕ್ಷಾಂತರ ಕಡು ಬಡವರು ಈ ಸಾರಾಯಿಯಿಂದ ತನ್ನ ಮನೆಯಲ್ಲಿ ಹಂಡತಿ ಹಗಲು ರಾತ್ರಿ ದುಡಿದಂಧ ದುಡ್ಡನ್ನು ಕಿತ್ತುಕೊಂಡು,ಆ ಕುಟುಂಬದ ವ್ಯವಸ್ಥೆ ಹಾಳಾಗಿತ್ತು ಅದನ್ನು ಸರಿಪಡಿಸುವುದಕ್ಕೋಸ್ಕರ ಕಳೆದ ನಾಲ್ಕರು ವರ್ಷಗಳಿಂದ, ಅನೇಕರು ಸಾರಾಯಿ ರದ್ದಾಗಿ ಒತ್ತಾಯ ಮಾಡುತ್ತಿದ್ದರು ಇದರಿಂದ ದೊಡ್ಡ ಪ್ರಮಾಣದ ಆದಾಯವೂ ಬರುತ್ತಿತ್ತು ಸ್ತ್ರೀಶಕ್ತಿ, ಸ್ವಸಹಾಯ ಗುಂಪುಗಳು, ಮುಖ್ಯಮಂತ್ರಿಗಳು ಹೋದಾಗ, ನಾನು ಹೋದಾಗ, ನಮ್ಮ ಸಚಿವಸಂಪುಟದ ಸದಸ್ಯರು ಹೋದಾಗ ಅಲ್ಲಿ ಅವರು ನೀವು ನಮಗೆ ಏನೂ ಉಪಕಾರ ಮಾಡಬೇಡಿ, ನಮ್ಮನ್ನು ಸಾರಯಿಯಿಂದ ಮುಕ್ತರವನ್ನಾಗಿ ಮಾಡಿಯೆಂದು ಕೇಳುತ್ತಿದ್ದರು ಆ ಕಾರಣಕ್ಕಾಗಿ ಜುಲೈ ಮೊದಲ

ವಾರದಿಂದ ಕರ್ನಾಟಕ ರಾಜ್ಯ ಸಾರಾಯಿ ಮುಕ್ತ ರಾಜ್ಯವಾಗುತ್ತದೆ ಈ ಸಾಲ ಮನ್ನಾ ಆಗಲಿ, ಸಾರಾಯಿ ಲಾಟರಿ ರದ್ದಾಘಲಿ, ಈ ತೀರ್ಮಾನವನ್ನು ದಿಢೀರ್ ಎಂದು ತೆಗೆದುಕೊಂಡಂದ್ದಲ್ಲಾ ಕಳೆದ ೧೧,೧೨ ತಿಂಗಳುಗಳಿಂದ ಹಳ್ಳಿ, ಹಳ್ಳಿಗೆ ಮಾನ್ಯ ಮುಖ್ಯಮಂತ್ರಿಯವರುಮ ನಾನು ಮತ್ತುನಮ್ಮ ಸಚಿವ ಸಂಪುಟದ ಸದಸ್ಯರು ಸುತ್ತಿ ಸುತ್ತಿ ಜನರ ಭಾವನೆಗಳನ್ನು ಅರ್ಥ ಮಾಡಿಕೊಮಡು, ಬರಗಾಲಕ್ಕೆ ತುತ್ತಾಗಿರುವಂಥ, ಆ ಸಾರಾಯಿ ಕುಡಿತದಿಂದ ಯಾವ್ಯಾವ ಕುಟುಂಬಗಳು ಸರ್ವನಾಶವಾಗಿ, ಕರುಳು ಕಿತ್ತು ಬರುವಂಥ ದೃಶ್ಯವಿತ್ತೋ, ಇದನ್ನು ಮನವರಿಕೆ ಮಾಡಿಕೊಂಡು ಸಾರಾಯಿ ರದ್ದು ಮಾಡಿದ್ದೇವೆ ಕೆಲವರು ಅಟೋರಿಕ್ಷಾ ಓಡಿಸುವಂಥವರ ಕುಟುಂಬದ ನಾಲ್ಕೈದು ಜನ ಹೆಣ್ಣು ಮಕ್ಕಳು ಬಂದು, ಯಡಿಯೂರಪ್ಪನವರೆ, ಏಪ್ರಿಲ್ ೧ನೇ ತಾರೀಖಿನಿಮದ ಲಾಟರಿ ರದ್ದು ಆಗುತ್ತದಾ? ಎಂದು ಕೇಳಿದರು, ಅವರು ನಮ್ಮ ಯಜಮಾನರು ದಿನಕ್ಕೆ ೧೨೫ರೂಪಾಯಿಗಳಿಗೆ ಅಟೋರಿಕ್ಷಾವನ್ನು ಬಾಡಿಗೆಗೆ ತೆಗೆದುಕೊಮಡು ಬರುತ್ತಾರೆ ನಮಗೆ ಸ್ವಂತ ಆಟೋರಿಕ್ಷಾವನ್ನು ತೆಗೆದುಕೊಳ್ಳುವುದಕ್ಕೆ ಶಕ್ತಿ ಇಲ್ಲ ಇವರು ೫೦ ರೂಪಾಯಿಗಳ on line lottery ಎಂದು ಹೇಳುತ್ತಾನೆ, ಮಧ್ಯಾಹ್ನದವರೆಗೆ ದುಡಿದ್ದು ಹಾಳು ಮಾಡುತ್ತಾನೆ , ಮತ್ತೆ petrol ಹಾಕಿಸಿಕೊಂಡು ಆಟೋರಿಕ್ಷಾವನ್ನು ಓಡಿಸುತ್ತಾನೆ ಮತ್ತೆ ಸಾಯಂಕಾಲದ ವೇಳೆಗೆ ೭೦ ೮೦ರೂಪಾಯಿಗಳನ್ನು ದುಡಿಯುತ್ತಾನೆ, ಮತ್ತೆ ಮನೆಗೆ ಬರುತ್ತಾನೆ ನಾವು ನೆಮ್ಮದಿಯಾಗಿ ಬದುಕುವುದಕ್ಕೆ ಆಗುತ್ತಾ ಇಲ್ಲ ನೀವು ನಮಗೆ ಏನೂ ಕೊಡಬೇಡಿ ನಮ್ಮನ್ನು ಈ online lottery ಯಿಂದ ಮುಕ್ತರನ್ನಾಗಿ ಮಾಡಿಯೆಂದು ಕೇಳುತ್ತಾರೆ ಇವರು Factory ಗೆ ಹೋಗಿ ದುಡಿಯುತ್ತಾರೆ, ಏನೋ ಒಂದು ಆಸೆ, ಈ ಸಂಕಷ್ಟವನ್ನು ಅರ್ಥಮಾಡಿಕೊಂಡು ಮುಖ್ಯಮಂತ್ರಿಯವರಿಗೆ ಮತ್ತು ನನಗೆ ಈ ಸಾರಾಯಿ ನಿಷೇಧವಾಗದೆಂದು ಎಂಥೆಂತ ಒತ್ತಡಗಳು ಬಂತು, ಇದು ಎಲ್ಲಿಯವರೆಗೆ ಚರ್ಚೆಯಾಯಿತು ಸಾರಾಯಿ ನಿಷೇಧ ಮಾಡಬೆಡಿಯೆಂದು ಕಾರ್ಮಿಕರು ೪೦,೫೦ ಸಾವಿರ ಜನರು ಸೇರಿದಾಗ, ನಾನು ಆ ಸಭೆಗೆ ಹೋಗಿದ್ದೆ ಆ ಸಭೆಯಲ್ಲಿ ಹೇಳಿದಂಥ ಮಾತು ಏನು? ಇದು ನಾಲ್ಕಾರು ದಿವಸಕ್ಕೆ

ಬಜೆಟ್ ಮಂಡನೆ ಮಾಡಬೇಕು ಸಾರಾಯಿ ನಿಷೇಧದ ಬಗ್ಗೆ ಯೋಚನೆ ಮಾಡುತ್ತಿದ್ದೇವೆ ಇನ್ನು ಅಂತಿಮ ತೀರ್ಮಾನವನ್ನು ತೆಗೆದುಕೊಂಡಿಲ್ಲವೆಂದು ಹೇಳಿದೆ ಇದಕ್ಕೆ ಏನು ಟೀಕೆ, ಟಿಪ್ಪಣಿಗಳು, ಮಾನ್ಯ ಕುಮಾರಸ್ವಾಮಿ, ಮುಖ್ಯಮಂತ್ರಿಯವರು, ಉಪ ಮುಖ್ಯಮಂತ್ರಿಯವರು ಸಾರಾಯಿ ನಿಷೇಧ ಮಾಡುವುದಿಲ್ಲ, ಏನೋ ನಡೆಸುತ್ತಿದ್ದಾರೆ ಅವರು ಮಾಡುತ್ತೇನೆಂದು ಹೇಳುತ್ತಿದ್ದಾರೆ ಬೆದರಿಕೆ ಇನ್ನು ಏನೋ ಇದೆ ನಾವು ಯಾವುದಕ್ಕೂ ಬಗ್ಗಲಿಲ್ಲ ಕಳೆದ ಬಾರಿ wholesale agent ನ್ನು cancel ಮಾಡುವ ಕಾಲದಲ್ಲಿ ಅನೇಕ ಒತ್ತಡಗಳು ಬಂತು Excise ನಲ್ಲಿ

ಶ್ರೀ ಧರ್ಮಸಿಂಗ್ ನಾವು ವಿರೋಧ ಮಾಡಿಲ್ಲ, ತಾವೇ ಮಾನ್ಯ ಬಂಗಾರಪ್ಪನವರನ್ನು ಕರೆದುಕೊಂಡು ಹೋಗಿ ಅರಮನೆ ಆವರಣದಲ್ಲಿ ಚಿಂತನೆ ಮಾಡುತ್ತೇವೆಂದು ತಾವೇ ಹೇಳಿದ್ದೀರಿ ಅವರೊಂದು ಹೇಳಿಕೆಯನ್ನು ಹೇಳಿದ್ರು ನಾವು ಏನೂ ಇದರ ಬಗ್ಗೆ ಹೇಳಿಲ್ಲ ಇದರ ಬಗ್ಗೆ ನಿತ್ಯ ಒಂದೊಂದು ಹೇಳಿಕೆಯನ್ನು ಮಾಡುತ್ತಿದ್ದೀರಿ, ನೀವು ಇದನ್ನು ಅಧ್ವಾನ ಮಾಡಿದ್ದೀರೆಂದು ಹೇಳಿದ್ದೇವೆ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ನಾನು ಹೇಳುತ್ತಿದ್ದೇನೆಂದರೆ, on line lottery ರದ್ದು ಮಾಡುವುದು, ಸಾರಾಯಿ ರದ್ದು ಮಾಡುವುದು ಪೂರ್ವಪರ ಯೋಚನೆ ಮಾಡಿ, alternate ಆಗಿ ಸಂಪನ್ಮೂಲವನ್ನು ಕ್ರೋಢೀಕರಣ ಹೇಗೆ ಮಾಡಬೇಕು? ನಮ್ಮ ಅಭಿವೃದ್ಧಿ ಕಾರ್ಯಕ್ಕೆ ಇದು ಯಾವುದು ಅಡ್ಡಿಯಾಗದಂತೆ ಯಾವ ರೀತಿ ದೃಡ ಹೆಜ್ಜೆಯನ್ನು ಇಡಬೇಕೆಂಬುದೆಲ್ಲವನ್ನು' ಸಮಾಲೋಚನೆಯನ್ನು ಮಾಡಿಕೊಂಡು, ಈ ನಿರ್ಧಾರವನ್ನು ಮಾಡಿದ್ದೇವೆ ಈ ಅರ್ರ್ಯಾಕ್ ಅನ್ನು ಬಂದ್ ಮಾಡಿದ ಮೇಲೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಂಡು ಅದಕ್ಕೆ ಬೇರೆ ರೀತಿ ಕಳ್ಳಬಟ್ಟಿಗೆ ಅವಕಾಶವಾಗದಂತೆ, ವಿಶೇಷ ಕಾನೂನಿಗೆ ಅವಕಾಶವನ್ನು ಕೊಟ್ಟು, ಸರಿಯಾದ enforcement ಕಡೆಗೆ ಗಮನವನ್ನು ಕೊಟ್ಟು

ಯಾವುದೇ ಕಾರಣಕ್ಕೂ ಕಳ್ಳಬಟ್ಟಿ ಮಾಡುವುದಕ್ಕೆ, ಮತ್ತೆ ಲಾಟರಿ ಬೇರೆ ರೂಪದಲ್ಲಿ ಪ್ರಾರಂಭವಾಗುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ ಆ ರೀತಿ ಏನಾದರೂ ಆಗುತ್ತಿರುವ ಘಟನಾವಳಿಗಳನ್ನು ನಮ್ಮ ಗಮನಕ್ಕೆ ತಮದರೆ ಉಗ್ರವಾದಂಥ ಶಿಕ್ಷೆ ಕೊಡುವಂಥ, ಬಿಗಿ ಮಾಡುವಂಥ, ಕಾನೂನು ಕ್ರಮವನ್ನು ತೆಗೆದುಕೊಳ್ಳುತ್ತೇವೆ "ಸಂಧ್ಯಾ ಸುರಕ್ಷಾ ಯೋಜನೆ" ಯನ್ನು ಏಪ್ರಿಲ್ ೧ ರಿಂದ ಕರ್ನಾಟಕ ರಾಜ್ಯದಲ್ಲಿ ೬೦ ವರ್ಷಗಳು ದಾಟಿದ ೨೦ ಸಾವಿರ ರೂಪಾಯಿಗಳ ಒಳಗೆ ಆದಾಯವಿರುವಂಥ ಅವರಿಗೆ ಮಕ್ಕಳು ಇರಬಹುದು, ವೃದ್ಧಾಪ್ಯ ವೇತನವನ್ನು ಕೊಡುವುದಕ್ಕೆ ಮಕ್ಕಳು ಇದ್ದರೆ ಕೊಡುವುದಿಲ್ಲವೆಂದು ಇತ್ತು ಅದಕ್ಕೋಸ್ಕರ Date of Birth ಪತ್ರವನ್ನು ಪಡೆಯಲು ಯಾರಿಗೋ ೧೦೦ ರೂ, ೨೦೦ ರೂಪಾಯಿಗಳ ಲಂಚವನ್ನು ಕೊಡುವ ಅಗತ್ಯವಿಲ್ಲ Voters list ನ Date of Birth ನ ಆಧಾರ ಅವನದು ಒಂದೇ ಒಂದು condition. ಬ್ಯಾಂಕ್ ನಲ್ಲಿ ೧೦,೦೦೦ ರೂಪಾಯಿಗಳಿಗಿಂತ ಹೆಚ್ಚು deposit ಅವನ ಹೆಸರಿನಲ್ಲಾಗಲಿ, ಅವನ ಹೆಂಡತಿ ಹೆಸರಿನಲ್ಲಾಗಲಿ ಇರಕೂಡದು ಅವರಿಗೆ ಮಕ್ಕಳು ಇದ್ದರೂ ಚಿಂತೆ ಇಲ್ಲ, ಅವನು ಬಡವನೆಂದು declare ಮಾಡಿಕೊಂಡರೆ ಸಾಕು ವಯಸ್ಸಾದಂಥ ಯಜಮಾನರಿಗೆ ೪೦೦ ರೂಪಾಯಿಗಳನ್ನು ಕೊಡುತ್ತೇವೆ ಒಂದು ಕಾಲವಿತ್ತು, ಬಡವರು divide ಆದರೆ ಅಪ್ಪ ಅಮ್ಮ ಯಾರ ಮನೆಯಲ್ಲಿ ಇರಬೇಕೆಂದು ಆದರೆ ಜಗಳ ಆಗುತ್ತದೆ, ಏಕೆಂದರೆ ಯರಿಗೂ ಇಷ್ಟವಿಲ್ಲ ಅವರಿಗೆ ಅನ್ನವನ್ನು ಹಾಕಬೇಕಲ್ಲಾ ಆದರೆ ಇನ್ನು ಮೇಲೆ ಪೈಪೋಟಿ ಶುರುವಾಗುತ್ತದೆ, ಅಪ್ಪ ನನ್ನ ಜೊತೆಯಲ್ಲಿ ಇರಬೇಕು, ಅಮ್ಮ ನನ್ನ ಜೊತೆಯಲ್ಲಿ ಇರಬೇಕು, ಏಕೆಂದರೆ ಅವರಿಗೆ ೪೦೦ ರೂಪಾಯಿಗಳು ಬರುತ್ತದಲ್ಲಾ ಅವರಿಗೆ ಎರಡು ಹೊತ್ತು ಊಟ ಗ್ಯಾರಂಟಿಯಾಯಿಗು ಇಂತಹ ಏಳೂವರೆ ಲಕ್ಷ ಬಡವರ ಕುಟುಂಬಕ್ಕೆ ಅನುಕೂಲವನ್ನು ಮಾಡಿಕೊಊಡತ್ತಿದ್ದೇವೆ ಇದಕ್ಕೆ ೨೫೦ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ "ಅಮೃತ ಯೋಜನೆ" ವಿಧವೆಯರಿಗೆ, ದೇವದಾಸಿಯರಿಗೆ ಅನುಕೂಲವಾಗುವ ರೀತಿಯಲ್ಲಿ ಈ ಯೋಜನೆಗೆ ೫೦ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ ನಾವು ೧೦,೦೦೦ ರೂಪಾಯಿಗಳನ್ನು

ಆಕಳು, ಎಮ್ಮೆಯನ್ನು ಕೊಂಡುಕೊಳ್ಳುವುದಕ್ಕೆ, ಕೊಡುತ್ತೇವೆ ನಾವು ಕೆ.ಎಂ.ಎಫ್ ನವರನ್ನು ಮಾಡಿಕೊಂಡಿದ್ದೇವೆ ಅವರು ೧೦,೦೦೦ ರೂಪಾಯಿಗಳ ಸಾಲವನ್ನು ಕೊಟ್ಟು, ಅವರಮೂಲಕ ಅನುಕೂಲವನ್ನು ಮಾಡಿಕೊಡುವ ಯೋಜನೆಯನ್ನು ಮಾಡುತ್ತಿದ್ದೇವೆ "ಆದರ್ಶ ವಿವಾಹ" ವೆಂದು ಹೇಳಿದಂಥ ಉದ್ದೇಶ ಮದುವೆ ಎನ್ನುವ ಕಾರಣಕ್ಕಾಗಿ, ಒಣ ಪ್ರತಿಷ್ಠೆಗೆ ಒಳಗಾಗಿ ಸರ್ವನಾಶವಾಗುತ್ತಿದೆ ಆ ಹೆಣ್ಣು ಮಗುವಿನ ಹೆಸರಿನಲ್ಲಿ ಮದುವೆಯಾದ ತಕ್ಷಣ, ಮದುವೆಯಾದ ಹೆಣ್ಣು ಮಗುವಿಗೆ ತಹಶೀಲ್ದಾರರಿಂದ report ತರಿಸಿಕೊಂಡು, ೧೦,೦೦೦ ರೂಪಾಯಿಗಳನ್ನು ಮಾಡಿ, ಎರಡು ವರ್ಷಗಳ ನಂತರ ಆ ಹುಡುಗಿ ಆ ದುಡ್ಡನ್ನು ತೆಗೆದುಕೊಳ್ಳಬೇಕು ಅದಕ್ಕೆ ೧೦ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ, ಇದು ಸಾಲದಿದ್ದರೆ, ಇನ್ನೂ ಹೆಚ್ಚು ಹಣವನ್ನು ನಾವು ಕೊಡುತ್ತೇವೆ

ಈಗ ಅದೆಂಥ ಬಜೆಟ್, ಏನು ಇದೆ? ಯಡಿಯೂರಪ್ಪನವರೆ, ಮಹಿಳಾ ಸಹಲೀಕರಣವೆಂದು ಏನೇನೊ ಹೇಳಿದ್ದೀರಾ, ಏನು ಇದೆ? ಏನೇನು ಕಾರ್ಯಕ್ರಮ ಇದರಲ್ಲಿ ಇದೆಯೆಂದರೆ, "ಭಾಗ್ಯಲಕ್ಷ್ಮಿ ರೇವಣೆ ಯೋಜನೆ" ಯಡಿ ಎರಡು ಲಕ್ಷ ಹೆಣ್ಣು ಮಕ್ಕಳಿಗೆ ಸೌಲಭ್ಯವನ್ನು ಮಾಡುವುದಕ್ಕೋಸ್ಕರ ೨೨೫ ಕೊಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ ಸ್ತ್ರೀ ಶಕ್ತಿ, ಸ್ವಸಹಾಯ ಗುಂಪುಗಳಿಗೆ, ಶೇ ೪ರ ಬಡ್ಡಿದರದಲ್ಲಿ ಸಾಲವನ್ನು ಕೊಡುತ್ತಾ ಇದ್ದೇವೆ, ಇದಕ್ಕೆ ೧೫ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದದೇವೆ "ಸಂಧ್ಯಾ ಸುರಕ್ಷಾ ಯೋಜನೆ" ಯಲ್ಲಿ ಶೇ ೫೦ರಂತೆ ೪೦೦ ರೂಪಾಯಿಗಳ ಭತ್ಯೆ ಏನು ಸಿಗುತ್ತಿದೆ ಇದರಿಂದ ಹೆಣ್ಣುಮಕ್ಕಳಿಗೆ ಅನುಕೂಲವಾಗುತ್ತದೆ, ವಿಧವಾ ವೇತನದ ಬಗ್ಗೆ ಇತಿಹಾಸದಲ್ಲಿ ಯಾರೂ ಮಾಡಲಿಲ್ಲ ಇದು ೨೦೦ ರೂಪಯಿಗಳು ಇದ್ದುದ್ದನ್ನು ಮಾನ್ಯ ಮುಖ್ಯಮಂತ್ರಿಯವರು ಇದು ಆಗಲೇ ಬೇಕು ಎಂದು, ನಿರ್ಣಯ ಮಾಡಿದ್ದರಿಂದ ಅವರು ಎರಡು ಹೊತ್ತು ನೆಮ್ಮದಿಯಿಂದ ಊಟ ಮಾಡಬೇಕೆಂದು ಅವರಿಗೆ ೪೦೦ ರೂಪಾಯಿಗಳನ್ನು ಕೊಡುತ್ತೇವೆ ಲನೇ

ತರಗತಿಯಲ್ಲಿ ಓದುತ್ತಿರುವ ಬಿ ಪಿ ಎಲ್ ಕುಟುಂಬಗಳ ಒದು ಮುಕ್ಕಾಲು ಲಕ್ಷ ವಿದ್ಯಾರ್ಥಿನಿಯರಿಗೆ ಉಚಿತ ಬೈಸಿಕಲ್ ಅನ್ನು ಕೊಡುತ್ತೇವೆ

ಮಾನ್ಯ ಜೆ ಸಿ ಮಾಧುಸ್ವಾಮಿಯವರು ಕೃಷಿ ಬಗ್ಗೆ objection ಮಾಡಿದರು, ಇದಕ್ಕೆ ಹೆಚ್ಚು ಹಣ ಕೊಡಬೇಕೆಂದು ಹೇಳಿದರು ನಾನು ಈ ಮಾತನ್ನು ಒಪ್ಪುತ್ತೇನೆ, ಈ ಬಗ್ಗೆ ಎರಡು ಮಾತಿಲ್ಲ ಇದಕ್ಕೆ ಏಕೆ ಕೊಡುವುದಕ್ಕೆ ಆಗಲಿಲ್ಲವೆಂದರೆ, ಕಾರಣ ಇಷ್ಟೆ, ಇವತ್ತು ರೈತರ ಸಾಲ ಮನ್ನಾ ಯೋಜನೆಯನ್ನು ಮೈ ಮೇಲೆ ಹಾಕಿಕೊಂಡಾಗ, ಮಾಡಬೇಕೆಂದು ನಿರ್ಧಾರ ಮಾಡಿದಾಗ, ಬರಗಾಲಕ್ಕೆ ಸಿಕ್ಕಂಥ ಅವರಿಗೆ ಅನುಕೂವನ್ನು ಮಾಡಬೇಕೆಂದು, ತೀರ್ಮಾನ ಮಾಡಿದಾಗ, ನಾವು ಕೃಷಿಗೆ ಹೆಚ್ಚಿನ ನಿರೀಕ್ಷೆಯಂತೆ ಹಣವನ್ನು ಕೊಡುವುದಕ್ಕೆ ಆಗಲಿಲ್ಲ ಇದಕ್ಕೆ ಜಾಸ್ತಿ ಕೊಟ್ಟಿದ್ದರೂ ನನಗೆ ಸಮಾಧಾನವಿಲ್ಲ, ಸಂಪನ್ಮೂಲ ಹೆಚ್ಚು ಬೆಳದರೆ, ನಮ್ಮ ಆದ್ಯತೆ ರೈತರಿಗೆ ಹಣ ಕೊಡುವುದಕ್ಕೆ ಕೃಷಿಗೆ ಹೆಚ್ಚು ಆದ್ಯತೆಯನ್ನು ಕೊಡುವಂಥಾದ್ದನ್ನು ಮಾಡುತ್ತೇವೆ ಆದರೆ ಮಾನ್ಯ ಮಾಧುಸ್ವಾಮಿಯವರೆ ನಾನು ಒಂದು ಅಂಕಿ ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ

೨೦೦೬-೦೭ ಸಾಲಿನಲ್ಲಿ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಒದಗಿಸಿದ್ದಂಥ ಹಣ ೯೩೬.೨೨ ಕೋಟಿ ರೂಪಾಯಿಗಲು ಅಂದರೆ, ಯೋಜನಾ ವೆಚ್ಚ ಶೇಕಡ ೫.೭೯ ರಷ್ಟು ಈ ವರ್ಷ ಅಂದರೆ, ೨೦೦೭-೦೮ ರಲ್ಲಿ ಇದಕ್ಕಾಗಿ ಒದಗಿಸಿರುವ ಹಣ ೧,೨೫೫ ಕೋಟಿ ರೂಪಾಯಿಗಳು ಅಂದರೆ ಶೇಕಡ ೭.೬ ರಷ್ಟು ಒದಗಿಸಿದ್ದೇವೆ ಆದರೂ ಸಹ ತೃಪ್ತಿ ಇಲ್ಲ, ಹೆಚ್ಚು ಹಣವನ್ನು ಒದಗಿಸಬೇಕು ಎನ್ನುವ ನಿಮ್ಮ ಸಲಹೆಯನ್ನು ನಾನುಒಪ್ಪಿಕೊಳ್ಳುತ್ತೇನೆ ಆದರೆ, ಈ ವರ್ಷಕ್ಕೆ ನಾವು ಹೋದ ವರ್ಷಕ್ಕಿಂತ ೩೧೮ ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಟ್ಟಿದ್ದೇವೆ ದನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ

ಸಣ್ಣ ನೀರಾವರಿ ಮತ್ತು ನೀರಾವರಿ ಯೋಜನೆಗಳಿಗೆ ನಾವು ಹೆಚ್ಚಿನ ಒಂದು ಆದ್ಯತೆಯನ್ನು ಕೊಟ್ಟಿದ್ದೇವೆ ಹೇಳಬೇಕಾದಂಥಾದ್ದು ಇನ್ನೂ

ತುಂಬಾ ಸಂಗತಿಗಳಿವೆ ವಿದ್ಯುತ್ ಕ್ಷೇತ್ರದ ಬಗ್ಗೆ ನಾವು ಸಾಕಷ್ಟು ಚಿಂತನೆಯನ್ನು ಮಾಡಿದ್ದೇವೆ ಇತ್ತೀಚಿನ ೧೦ ವರ್ಷಗಳಲ್ಲಿ ವಿದ್ಯುತ್ ಕ್ಷೇತ್ರಗಳಲ್ಲಿ ಅಗತ್ಯ ಪ್ರಮಾಣದಲ್ಲಿ ಬಂಡವಾಳ ಹೂಡಿಕೆಯಾಗಿಲ್ಲ ಎಂದು ಮಾಧುಸ್ವಾಮಿಯವರು ಮತ್ತು ಇತರ ಎಲ್ಲ ಸದಸ್ಯರು ಹೇಳಿರುವ ಮಾತನ್ನು ನಾನು ಒಪ್ಪುತ್ತೇನೆ ೨೦೦೩-೦೪ರಲ್ಲಿ ಇದಕ್ಕಾಗಿ ೨,೩೬೩೯೪ ಕೋಟಿ ರೂಪಾಯಿಗಳನ್ನು ಕೊಡಲಾಗಿತ್ತು, ೨೦೦೪-೦೫ ರಲ್ಲಿ ೩,೦೨೬ ಕೋಟಿ ರೂಪಾಯಿಗಳನ್ನು ಇಡಲಾಗಿತ್ತು, ೨೦೦೫-೦೬ ರಲ್ಲಿ ೩,೧೯೩ ಕೋಟಿ ರೂಪಾಯಿಗಳನ್ನು ಇಡಲಾಗಿತ್ತು, ೨೦೦೬-೦೭ ರಲ್ಲಿ ೪,೬೭೫ ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು ಈ ವರ್ಷಕ್ಕೆ ಅಂದರೆ, ೨೦೦೭-೦೮ ಕ್ಕೆ ೪,೬೬೧ ಕೋಟಿ ರೂಪಾಯಿಗಳ ಅನುದಾನವನ್ನು ನಾವು ಇಟ್ಟಿದ್ದೇವೆ ಇನ್ನು, ಶಿಕ್ಷಣ ಇಲಾಖೆಯ ಬಗ್ಗೆ ಬಹಳಷ್ಟು ಚರ್ಚೆಯಾಯಿತು ಅಂಕಿ ಅಂಶಗಳನ್ನು ಹೇಳಿ ನಾನು ನಿಮಗ್ಯಾರಿಗೂ ಬೇಸರ ಮಾಡುವುದಕ್ಕೆ ಇಷ್ಟಪಡುವುದಿಲ್ಲ ಆದರೆ ಇಷ್ಟು ಮಾತ್ರ ನಿಜ ಶಿಕ್ಷಣ ಕ್ಷೇತ್ರಕ್ಕೆ ನಾವು ಕೊಟ್ಟಿರುವಂಥ ಒತ್ತನ್ನು ಹಿಂದೆ ಯಾರೂ ಕೊಟ್ಟಿಲ್ಲ ೨೦೦೪-೦೫ರಲ್ಲಿ ಶಿಕ್ಷಣ ಕ್ಷೇತ್ರಕ್ಕೆ ೪,೧೮೪ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ, ೨೦೦೫-೦೬ರಲಿ ೪,೫೭೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ, ಹೋದ ವರ್ಷ ಅಂದರೆ ೨೦೦೬-೦೭ ರಲ್ಲಿ ೫,೫೦೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ, ಈ ವರ್ಷಕ್ಕೆ ಅಂದರೆ ೨೦೦೭-೦೮ ಕ್ಕೆ ೬,೫೪೦ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ಇದು ಶಿಕ್ಷಣ ಇಲಾಖೆಗೆ ಯೋಜನಾ ಬಾಬ್ತಿಯಲ್ಲಿ ನೀಡಿರುವ ಅನುದಾನ

ಶ್ರೀ ಮಲ್ಲಿಕಾರ್ಜುನ ಖರ್ಗೆ ರೇವಣ್ಣನವರೆ, ಧರಣಿ ಕೂಡುತ್ತೇವೆ ಎಂದು ನೀವು ಹೇಳಿದ್ದಿರಿ ಈಗ ಧರಣಿ ಕೂಡಬೇಕಲ್ಲವೇ? ನಿಮ್ಮ ಜೊತೆಯಲ್ಲಿ ಧರಣಿ ಕೂರಲು ನಾವೆಲ್ಲ ರೆಡಿಯಾಗಿ ಬಂದಿದ್ದೇವೆ ಶಿಕ್ಷಣಕ್ಕೆ, ಕೃಷಿಗೆ, ನೀರಾವರಿಗೆ ಅವರು ಆದ್ಯತೆಯನ್ನು ಕೊಟ್ಟಿಲ್ಲ ಅಕದ್ದಾಗಿ ಧರಣಿ ಕೂರಬೇಕಲ್ಲವೇ?

ಶ್ರೀ ಹೆಚ್ ಡಿ ರೇವಣ್ಣ ಇವತ್ತೂ ಹೇಳುತ್ತಿದ್ದೇನೆ, ಸ್ವಾತಂತ್ರ್ಯ ಬಂದು ೬೦ ವರ್ಷಗಳಾದರೂ ನಮಮ್ ರಾಜ್ಯದಲ್ಲಿನ ೬೮ ತಾಲೂಕುಗಳಲ್ಲಿ ಇನ್ನೂ ಕೂಡ ಪ್ರಥಮ ದರ್ಜೆ ಕಾಲೇಜುಗಳಿಲ್ಲ ನಂಜುಂಡಪ್ಪನವರ ವರದಿಯ ಬಗೆ ಮಾತನಾಡುತ್ತೀರಿ ೩೯ ತಾಲ್ಲೂಕುಗಳು ನಂಜುಂಡಪ್ಪನವರ ವರದಿಯಲ್ಲಿ ಸೇರಿವೆ ಅಲ್ಲಿ ಇವತ್ತು ಪ್ರಥಮ ದರ್ಜೆ ಕಾಲೇಜು ಇಲ್ಲ ಮುಖ್ಯಮಂತ್ರಿಗಳು ಕೊಡುತ್ತೇವೆ ಎಮದು ಹೇಳಿದ್ದಾರೆ ಅದಕ್ಕಾಗಿ ನಾನು ಹೆಚ್ಚಿಗೆ ಮಾತನಾಡುವಂಥ ಅವಶ್ಯಕತೆ ಇಲ್ಲ ೧೯ Last year ಕಾಲೇಜುಗಳನ್ನು ಕೊಟ್ಟಿದ್ದಾರೆ, ಈ ವರ್ಷವೂ ಕೊಡುತ್ತೇವೆ ಎಂದು ಹೇಳಿದ್ದಾರೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮುಂದೆ ನಿಮ್ಮ chance ಇದೆ ಎಂದ ಕೂಡಲೇ ಸುಮ್ಮನಾಗಿ ಬಿಟ್ಟಿರಿ

ಶ್ರೀ ಹೆಚ್ ಡಿ ರೇವಣ್ಣ C M ಮಾಡಿ ಎಂದು ಇಲ್ಲಿ ಯಾರೂ ಮುಂದಿಲ್ಲ ಅಂಥವರು ನಿಮ್ಮಲ್ಲಿಯೇ ಇದ್ದಾರೆ ಅವರಿಗೆ ದೇವರು ಒಳ್ಳೆಯದು ಮಾಡಲಿ

ಶ್ರೀ ಬಿ ಎಸ್ ಯಡಿಯೂರಪ್ಪ ಹಿಂದುಳಿದ ವರ್ಗಕ್ಕೆ ೨೦೦೫-೦೬ರಲ್ಲಿ ಹೊಸದಾಫಿ ಹಾಸ್ಟೆಲ್ ಗಳನ್ನು ಮಂಜೂರು ಮಾಡಿದ್ದರು ೨೦೦೬-೦೭ರಲ್ಲಿ ನಾವು ೫೬ ಹಾಸ್ಟೆಲ್ ಗಳನ್ನು ಕೊಟ್ಟಿದ್ದೇವೆ ೨೦೦೭-೦೮ ರಲ್ಲಿ ೭೫ ಹಾಸ್ಟೆಲ್ ಗಳನ್ನು ಕೊಡುತ್ತೇವೆ ಮೂರು ವರ್ಷದ ಹಿಮದೆ ನೀವು ಕೇವಲ ೪ ಹಾಸ್ಟೆಲ್ ಗಳನ್ನು ಮಾತ್ರ ಕೊಟ್ಟಿದ್ದೀರಿ ೨೦೦೪-೦೫ರಲ್ಲಿ ಹೊಸದಾಗಿ ೨೫ ಹಾಸ್ಟೆಲ್ ಗಳು, ೨೦೦೫-೦೬ರಲ್ಲಿ ೪ ಹಾಸ್ಟೆಲ್ ಗಳು, ೨೦೦೬-೦೭ರಲ್ಲಿ ಹಾಸ್ಟೆಲ್ ಗಳನ್ನು ಕೊಟ್ಟಿದ್ದರೆ, ಅದೇ ರೀತಿ, SC/ST ಯವರಿಗೆ ಮಂಜೂರಾದ ಹೊಸ ಹಾಸ್ಟೆಲ್ ಗಳ ಬಗ್ಗೆ ಹೇಳುವುದಾದರೆ, ನಾವೇ ಅವರ ವಾರಸುದಾರರು, ನೀವು ಏನು ಮಾಡಲೇ ಇಲ್ಲ ಎಂದು ಹೇಳುತ್ತಿದ್ದಿರ ೨೦೦೨-೦೩ ರಿಂದ ೨೦೦೫-೦೬ ರವರೆಗೆ ಒಂದೂ ಹೊಸ ಹಾಸ್ಟೆಲ್ ಅನ್ನು ಹಿಂದೆ ಅಧಿಕಾರದಲ್ಲಿದ್ದವರು ಕೊಡಲಿಲ್ಲ

ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎ ವಿ ಉಮಾಪತಿಯವರು ಮಾತನಾಡಲು ಎದ್ದುನಿಂತರು)

ಶ್ರೀ ಬಿ ಎಸ್ ಯಡಿಯೂರಪ್ಪ ದಯಮಾಡಿ ತಾವು ಆಮೇಲೆ ಮಾತನಾಡಿ ಈ ರೀತಿಯಾದರೆ ಆಗುವುದಿಲ್ಲ ನೀವು ನಂತರ ಮಾತನಾಡಿ ನಾನು ಆಗಿಲ್ಲ, ದಯಮಾಡಿ ಅವರಿಗೆ ಹೇಳಿ ಅಧ್ಯಕ್ಷರೇ,

ಅಧ್ಯಕ್ಷರು ಆಮೇಲೆ clarification ಕೇಳಿ, ಮಧ್ಯೆ ಮಧ್ಯೆ ನೀವು ಪ್ರತಿಯೊಂದಕ್ಕೂ ಆದರೆ interfere ಕಷ್ಟವಾಗುತ್ತದೆ

ಶ್ರೀ ಬಿ ಎಸ್ ಯಡಿಯೂರಪ್ಪ ಆಯಿತು, ನೀವು ಹೇಳುವುದನ್ನೂ ಮಾಡೋಣ ಯಾರು ಕೊಡುತ್ತಾರೋ ಅವರನ್ನು ನೀವು ಕೇಳಬೇಕು ಹಿಂದೆಲ್ಲಾ ಕೇಳಿದಿರಿ, ಹಿಂದಿನ ಸರ್ಕಾರಗಳು ಕೊಡಲಿಲ್ಲ ನೀವು ಕೇಳದೇ, ನಾವು ಧಾರಾಳವಾಗಿ ಕೊಡುತ್ತೇವೆ ನಿಮ್ಮ ಸಲಹೆಯನ್ನು ನಾನು ಸ್ವೀಕಾರ ಮಾಡುತ್ತೇನೆ ಆಗುವುದಿಲ್ಲ ಎಂದು ನಾನು ಎಲ್ಲಿ ಹೇಳಿದ್ದೇನೆ ೨೦೦೨-೦೩ ರಿಂದ ೨೦೦೫-೦೬ರವರೆಗೆ ಒಂದೂ ಹೊಸ SC/ST ಹಾಸ್ಟೆಲ್ಲನ್ನು ಕೊಡಲಿಲ್ಲ ೨೦೦೬-೦೭ ರಲ್ಲಿ ನಾವು ೫೦ ಹೊಸ SC/ST ಹಾಸ್ಟೆಲ್‌ಗಳನ್ನು ಕೊಟ್ಟಿವು, ಈ ವರ್ಷ ಅಂದರೆ, ೨೦೦೭-೦೮ ರಲ್ಲಿ ೮೫ ಹಾಸ್ಟೆಲ್‌ಗಳನ್ನು ಕೊಡುತ್ತಿದ್ದೇವೆ ನವೋದಯ ಮತ್ತು ಮೊರಾರ್ಜಿ ದೇಸಾಯಿ ರೆಸಿಡೆನ್ಷಿಯಲ್ ಸ್ಕೂಲ್ ಗಳ ಬಗ್ಗೆ ಹೇಳುವುದಾದರೆ, ೨೦೦೧-೦೨ರಲ್ಲಿ ಒಂದೂ ಕೊಡಲಿಲ್ಲ ೨೦೦೨-೦೩ರಲ್ಲಿ ಒಂದೂ ಕೊಡಲಿಲ್ಲ, ೨೦೦೩-೦೪ರಲ್ಲಿ ಒಂದೂ ಕೊಡಲಿಲ್ಲ, ೨೦೦೪-೦೫ರಲ್ಲಿ ೩೧ ಕೊಟ್ಟಿರು, ೨೦೦೫-೦೬ರಲ್ಲಿ ೪೫ ಕೊಟ್ಟರು, ೨೦೦೬-೦೭ರಲ್ಲಿ ನಾವು ಅಧಿಕಾರಕ್ಕೆ ಬಂದ ಮೇಲೆ ೫೧ ರೆಸಿಡೆನ್ಷಿಯಲ್ ಸ್ಕೂಲುಗಳನ್ನು ಕೊಟ್ಟಿವು, ಈ ಸಲ ೫೯ ಕೊಡುತ್ತಿದ್ದೇವೆ, ಖಾಸಗಿ ವಿದ್ಯಾ ಸಂಸ್ಥೆಗಳಲ್ಲಿ ವೃತ್ತಿ ಶಿಕ್ಷಣ ವ್ಯಾಸಂಗ ಮಾಡುತ್ತಿರುವಂಥ SC/ST ವಿದ್ಯಾರ್ಥಿಗಳ ಶುಲ್ಕ ಮರುಪಾವತಿ ಸಂಬಂಧವಾಗಿ ಮಾನ್ಯ ವಿರೋಧ ಪಕ್ಷ ನಾಯಕರು ಪ್ರಸ್ತಾಪ ಮಾಡಿದರು ಮತ್ತು ಆ ಬಗ್ಗೆ ಇಲ್ಲಿ ಚರ್ಚೆಯಾಯಿತು ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ನೀಡಿರುವ ಮಾಹಿತಿಯಂತೆ, ಶುಲ್ಕ

ಪಾವತಿಗಾಗಿ ಯಾವುದೇ ಪ್ರಕರಣ ಬಾಕಿಯಿಲ್ಲ, ನಾವು ಪೂರ್ಣವಾಗಿ ಪಾವತಿ ಮಾಡಿದ್ದೇವೆ ಅದನ್ನು ಹಿಂದೆ ಕೊಟ್ಟಿರಲಿಲ್ಲ ನಾವು ಎಲ್ಲವನ್ನು ಪಾವತಿ ಮಾಡಿದ್ದೇವೆ ಅಕಸ್ಮಾತ್ ಒಂದೆರಡು ಉಳಿದಿದ್ದರೆ, ಅದನ್ನು ನನ್ನ ಗಮನಕ್ಕೆ ತಂದರೆ, ಅದನ್ನೂ ಪಾವತಿ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ ಬಾಕಿ ಯಾವುದೂ ಇಲ್ಲ ೨೦೦೭-೦೮ ನೇ ಸಾಲಿಗೆ ಶುಲ್ಕ ಮರುಪಾವತಿಗಾಗಿ ನಾವು ೧೩೩ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ ಕಳೆದ ವರ್ಷಕ್ಕಿಂತ ೩೮ ಕೋಟಿ ರೂಪಾಯಿಗಳನ್ನು ಇದಕ್ಕೆ ಈ ವರ್ಷ ಹೆಚ್ಚಿಗೆ ಇಟ್ಟಿದ್ದೇವೆ ಹಿಂದುಳಿದ ವರ್ಷಗಳ ವಿದ್ಯಾರ್ಥಿಗಳ ಶುಲ್ಕ ಮರುಪಾವತಿ ವಿಚಾರದಲ್ಲಿ ೭೭.೪೩ ಕೋಟಿ ರೂಪಾಯಿಗಳ ಬಾಕಿ ಇದೆ ಎಂದು ಮಾಹಿತಿ ಇದೆ, ಈ ಬಗ್ಗೆ, ಏಪ್ರಿಲ್ ತಿಂಗಳ ಮೊದಲನೇ ವಾರದಲ್ಲಿ ಅಧಿಕಾರಿಗಳ ಸಭೆ ಕರೆದು ಅದನ್ನು ಸರಿಪಡಿಸುವಂಥ ಪ್ರಯತ್ನವನ್ನು ನಾನು ಮಾಡುತ್ತೇನೆ

ಗ್ರಾಮೀಣ ಕುಡಿಯುವ ನೀರಿನ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ೨೦೦೪-೦೫ಮ ೨೦೦೫-೦೬ರಲ್ಲಿ ಏನಾಗಿದೆ ಎನ್ನುವುದನ್ನು ನಾನು ಹೇಳುವುದಿಲ್ಲ ಅದರ ವಿವರಗಳ ಅಗತ್ಯವಿಲ್ಲ ಆದರೆ ೨೦೦೬-೦೭ರಲ್ಲಿ ಮಾರ್ಚ್ ೨೦೦೭ರವರೆಗೆ ನಾವು ೧೭೯ ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ, ಅದರಲ್ಲಿ ೧೩೨ ಕೋಟಿ ರೂಪಾಯಿಗಳು ಖರ್ಚಾಗಿದೆ ತೋಟಗಾರಿಕಾ ಮಿಷನ್ ನಡಿಯಲ್ಲಿ ಬಿಡುಗಡೆಯಾದಂಥ ಅನುದಾನ ಮತ್ತು ವೆಚ್ಚದ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ರಾಜ್ಯದಲ್ಲಿ ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆಯು ೨೦೦೫-೦೬ನೇ ಸಾಲಿನಲ್ಲಿ ಮಂಜೂರಾಗಿ, ೨೦೦೬ರ ಮಾರ್ಚ್ ತಿಂಗಳಲ್ಲಿ ಆರಂಭವಾಗಿದೆ ಈ ಯೋಜನೆಯಲ್ಲಿ ಮಳೆಗಾಲದ ಪ್ರಾರಂಭದಲ್ಲಿ ಅಂದರೆ ಜೂನ್, ಜುಲೈನಲ್ಲಿ ತೆಗೆದುಕೊಳ್ಳುವ ಕಾರ್ಯಕ್ರಮವಾಗಿರುವುದರಿಂದ ಜುಲೈ ಅಂತ್ಯದೊಳಗಾಗಿ ನವು ಪೂರ್ಣ ಅನುದಾನವನ್ನು ಬಳಸುತ್ತೇವೆ ಮತ್ತು ಈ ಅನುದಾನವು ಮಿಷನ್ ನಿರ್ದೇಶಿತ ಬ್ಯಾಂಕ್ ಖಾತೆಯಲ್ಲಿರುವುದರಿಂದ ಇದು lapse ಆಗುವ ಪ್ರಶ್ನೆಯೇ ಇಲ್ಲ ಇನ್ನು, ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳಿಗೆ ೪% ಬಡ್ಡಿ

ದರದಲ್ಲಿ ಸಾಲ ಕೊಡಬೇಕು ಎಂದು ಯೋಜನೆಯ ಮಾಡಿದ್ದೇವೆ ರಾಜ್ಯದಲ್ಲಿರುವಂಥ ಒಟ್ಟು ಸ್ತ್ರೀಶಕ್ತಿ ಗುಂಪುಗಳ ಸಂಖ್ಯೆ ೧ ೨೦ ಲಕ್ಷ ಒಟ್ಟು ಸದಸ್ಯರ ಸಂಖ್ಯೆ ೧೭ ೭೨ ಲಕ್ಷ ಉಳಿತಾಯ ೪ ೩೨ ಕೋಟಿ ರೂಪಾಯಿಗಳು ಬ್ಯಾಂಕ್ ನಲ್ಲಿ ರೇವಣಿಯಿಟ್ಟ ಗುಂಪುಗಳ ಸಂಖ್ಯೆ ೮೯,೨೦೨ ಬ್ಯಾಂಕುಗಳಿಂದ ಪಡೆದ ಸಾಲದ ಮೊತ್ತ ೪೮೫ ೬೪ ಕೋಟಿ ರೂಪಾಯಿಗಳು ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಗೆ ವಿತರಣೆ ಮಾಡಿರುವಂಥ ಸಾಲದ ಒಟ್ಟು ಮೊತ್ತ ೧,೨೨೨ ೯೬ ಕೋಟಿ ರೂಪಾಯಿಗಳು ಈಗಾಗಲೇ ತಿಳಿಸಿದಂತೆ ನೇಕಾರರಿಗೆ ಶೇಕಡ ೪ರ ಬಡ್ಡಿ ದರದಲ್ಲಿ ಸಾಲ ಹಾಗೂ ಬಡ್ಡಿ ಮನ್ನಾ ಸಂಬಂಧ ೧೦ ೮೦ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ ಅದನ್ನು ಪೂರ್ಣವಾಗಿ ಬಿಡುಗಡೆ ಮಾಡಿದ್ದೇವೆ ಅಧ್ಯಕ್ಷರೇ ನಮ್ಮ ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆಗಳೆಲ್ಲಕ್ಕೂ ಒಟ್ಟಾರೆ ಉತ್ತರ ಕೊಡುವಂಥ ಪ್ರಯತ್ನವನ್ನು ಮಾಡಿದ್ದೇನೆ ಈ ಸಂದರ್ಭದಲ್ಲಿ ಸರ್ಕಾರದಿಂದ ಕೆಲವು ಹೊಸ ಕಾರ್ಯಕ್ರಮಗಳ ಘೋಷಣೆಯನ್ನು ನಾನು ಮಾಡುತ್ತಿದ್ದೇನೆ

ರಾಜ್ಯದಲ್ಲಿ ಅನುಷ್ಠನದಲ್ಲಿರುವ ವಿವಿಧ ರೈಲ್ವೆ ಯೋಜನೆಗಳನ್ನು ಕಾಲಬದ್ಧವಾಗಿ ಪೂರ್ಣಗೊಳಿಸುವುದಕ್ಕೋಸ್ಕರ ಜಂಟಿ ಸದನ ಸಮಿತಿಯನ್ನು ಆವು ಮಾಡುವವರಿದ್ದೇವೆ ಅದಕ್ಕೆ ಹೆಚ್ಚಿನ ಅನುದಾನ ಕೊಟ್ಟು ಕೇಂದ್ರ ಸರ್ಕಾರಕ್ಕೆ ಒತ್ತಾಯ ತಂದು, ಈ ರೈಲ್ವೆ project ಗಳ ಪೂರ್ಣ ಮಾಡಬೆಕೆನ್ನುವ ಸಲಹೆ ಎರಡೂ ಮನೆಯಿಂದ ಬಂದಿತ್ತು ಆ ಕಡೆ ನಾನು ವಿಶೇಷವಾದಂಥ ಗಮನವನ್ನು ಕೊಡುತ್ತಿದ್ದೇನೆ ಅಂಗನವಾಡಿ ಕಾರ್ಯಕರ್ತಕರಿಗೆ ಭತ್ಯೆ ೨೦೦ ರೂ ಗಳಷ್ಟು ಹೆಚ್ಚು ಮಾಡಿದ್ದೇವೆ ಅಂಗನವಾಡಿ ಸಹಾಯಕರ ಭತ್ಯೆ ೧೦೦ ರೂ ಜಾಸ್ತಿ ಮಾಡಿದ್ದೇನೆ ೪೫ ವರ್ಷ ಮೀರಿದ ದೇವದಾಸಿಯರಿಗೆ ೪೦೦ ರೂ ಗಳ ಮಾಸಾಶನ ಕರ್ನಾಟಕದಲ್ಲಿರುವಂಥ ೨೨,೮೭೩ ಮಂದಿ ದೇವದಾಸಿಯರ ಪೈಕಿ ೪೫ ವರ್ಷ ಮೇಲ್ಪಟ್ಟ ೧೬,೪೭೧ ಮಂದಿಗೆ ಇದರಿಂದ ಪ್ರಯೋಜನ ದೊರೆಯುತ್ತದೆ ಆದ್ದರಿಂದ, ದೇವದಾಸಿಯರಿಗೆ ೪೦೦ ರೂ ಗಳನ್ನು ಮಾಸಾಶನವಾಗಿ ಕೊಡುತ್ತಿದ್ದೇವೆ ನಮ್ಮ ಕೆ ಆರ್,ಪೇಟೆಯದು ಇದರಲ್ಲಿ

ಸೇರಿಸಬೇಕಾದರೆ miss ಆಗಿತ್ತು ಆ Polytechnic College ಅನ್ನು ಆಗಿ ಮೇಲ್ದರ್ಜೆಗೇರಿಸಬೇಕೆನ್ನುವುದನ್ನು ಕೈಬಿಟ್ಟಿದ್ದನ್ನು ಈಗ ಮಾಡುತ್ತಿದ್ದೇವೆ ಬಹಳ ಮುಖ್ಯವಾಗಿ ವಾಟಾಳ್ ನಾಗರಾಜ್ ಗೆ ಮತ್ತು ನಮ್ಮ ಎಂ ಪಿ ಪ್ರಕಾಶ್ ಎಲ್ಲರು ಕುಳಿತು ಚರ್ಚೆಗಳಾಗಿ ತಮ್ಮ ಸಲಹೆಗಳನ್ನು ಕೊಟ್ಟಿದ್ದಿರಿ ಸುವರ್ಣ ಕರ್ನಾಟಕ ರಾಜ್ಯೋತ್ಸವ ಕನ್ನಡಿಗರ ಬಗ್ಗೆ ಚರ್ಚೆಯಾಗುತ್ತಿರುವಂಥ ಕಾಲದಲ್ಲಿ, ಏನು ಯಡಿಯೂರಪ್ಪನವರೆ, ಕಲಾವಿದರ ಬಗ್ಗೆ ನೀವು ಏನು ಮಾಡಿದಿರಿ ಎಂದು ಕೇಳಿದ್ದಿರಿ ಅದು ನನ್ನ ಕಿವಿಗೆ ಬಿತ್ತು ಬಹಳಷ್ಟು ಸದಸ್ಯರು ಬಜೆಟ್ ಮಂಡನೆ ಮಾಡಿದಾಗಿನಿಂದಲೂ ಹೇಳುತ್ತಿದ್ದರು ಹಾಗಾಗಿ, ಆ ಅಶಕ್ತ ಕಲಾವಿದರ ಮಾಸಾಶನ ೫೦೦ ರೂ ಇದ್ದದನ್ನು ೧೦೦೦ ರೂ ಗಳಿಗೆ ಏರಿಸಿದ್ದೇವೆ ಕೊಬ್ಬರಿಯನ್ನು ಬೆಮಬಲ ಬೆಲೆಯಲ್ಲಿ ಖರೀದಿ ಮಾಡುತ್ತಿದ್ದೆವು, ಆ 'ಖರೀದಿ ಮಾಡುವಂಥ ಅವಧಿ ಈ ತಿಂಗಳಿಗೆ ಮುಗಿದುಹೋಗುತ್ತಿದೆ ಅದನ್ನು ಏಪ್ರಿಲ್ ೧೫ರ ವರೆಗೆ ಅದರ ಬೆಂಬಲ ಬೆಲೆಯನ್ನು ವಿಸ್ತರಣೆ ಮಾಡಿದ್ದೇವೆ ಬಹಳ ಮುಖ್ಯವಾಗಿ ಸುಮಖುಉ ಎರಡೂವರೆ ಸಾವಿರದಷ್ಟು ಲಂಬಾಣಿ ತಾಂಡಗಳಿವೆ ಅವರ ಅಭಿವೃದ್ಧಿ ಬಗ್ಗೆ ಚಿಂತನೆ ನಡೆದಿರಲಿಲ್ಲ ಯಾವುದೋ ಕಾರಣಕ್ಕೋಸ್ಕರ ಅದಕ್ಕೆ ಸ್ವಲ್ಪ ಹಿನ್ನಡೆಯಾಗಿತ್ತು ಮೊದಲ ಬಾರಿಗೆ ಬಂಜಾರ್ ಅಭಿವೃದ್ಧಿ ನಿಗ ಮಾಡಿ ಅದಕ್ಕೆ ೧೦ ಕೋಟಿ ರೂ ಗಳನ್ನು ತೆಗೆದಿಟ್ಟಿದ್ದೇವೆ ಬೆಂಗಳೂರಿನಲ್ಲಿ ಬಂಜಾರ ಸಮಾಜದ್ದು site ಇದೆ, ಅಲ್ಲಿ ಬಂಜಾರ ಭವನ ಕಟ್ಟಲಿಕ್ಕೋಸ್ಕರ ೩ ಕೋಟಿ೫ ರೂ ಗಳನ್ನು ಕೊಡುತ್ತಿದ್ದೇನೆ ಈ ಬಂಜಾರ್ ಸಮುದಾಯದ ಗುರುಗಳಾದಂಥ ಸೇನಾಭಾಯಿಯವರ ಜನ್ಮಸ್ಥಳ ಹೊನ್ನಾಳಿ ತಾಲ್ಲೂಕು ಸೂರೆಗೊಂಡನಕೊಪ್ಪ ಆಗಿದ್ದು ಅದರ ಅಭಿವೃದ್ಧಿಗೆ ೧ ಕೋಟಿ ರೂಪಾಯಿಯನ್ನು ನಾನು ತೆಗೆದಿಡುತ್ತಿದ್ದೇನೆ ಉಪ್ಪಾರ ಸಮಾಜದ ಅಭಿವೃದ್ಧಿಗೋಸ್ಕರ ೫ ಕೋಟಿ ರೂಪಾಯಿಗಳು, ಈ ಸವಿತಾ ಸಮಾಜದಲ್ಲಿ ಕೆಲಸ ಮಾಡುತ್ತಿರುವಂಥವರಿಗೆ ಪರಿಹಾರ ಬಹಳ ಕಡಿಮೆ ಇತ್ತು ಅದಕ್ಕೆ ಇನ್ನೂ ಹೆಚ್ಚಿವರಿಯಾಗಿ ೩ ಕೋಟಿ ರೂಪಾಯಿಗಳ ನೆರವು ಕೊಡುತ್ತಿದ್ದೇವೆ ನವದತ್ತಿ ಯಲ್ಲಮ್ಮ ಕ್ಷೇತ್ರಾಭಿವೃದ್ಧಿಗೆ ೨ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ

ಬೆಂಗಳೂರಿನಲ್ಲಿ ಬಾಳೆಹೊನ್ನೂರು ಶಿಕ್ಷಣ ಅಭಿವೃದ್ಧಿ ಸಂಸ್ಥೆಗೆ ೧ ಕೋಟಿ ರೂ ಗಳನ್ನು ಕೊಡುತ್ತಿದ್ದೇವೆ ಚಾಮರಾಜನಗರ ಜಿಲ್ಲೆಯ ಹರಗನಹಳ್ಳಿಯಲ್ಲಿ ಸಿದ್ಧಲಿಂಗೇಶ್ವರ ಜನ್ಮಸ್ಥಾನದ ಅಭಿವೃದ್ಧಿಗೆ ೨ ಕೋಟಿ ರೂ ಗಳನ್ನು ಕೊಡುತ್ತಿದ್ದೇವೆ ಗಾಂಧಿ ಭವನದ ನಿರ್ವಹಣೆ ಹಾಗೂ ಇತರ ಚಟುವಟಿಕೆಗಳಿಗೆ ೧೦ ಲಕ್ಷ ರೂ ಗಳನ್ನು ಕೊಡುತ್ತಿದ್ದೇವೆ, ಚಿತ್ರದುರ್ಗದಲ್ಲಿ ನಿಜಲಿಂಗಪ್ಪ ಸ್ಮಾರಕ ಪೂರ್ಣಗೊಳಿಸುವುದಕ್ಕೋಸ್ಕರ ೧ ಕೋಟಿ ರೂ ಗಳನ್ನು ತೆಗೆದಿಟ್ಟಿರಲಿಲ್ಲ, ಈಗ ತೆಗೆದಿಟ್ಟಿದ್ದೇವೆ ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕು ಸಿದ್ದನಬೆಟ್ಟದಲ್ಲಿ ಔಷಧಿ, ಸಸ್ಯ ಮತ್ತು ಗಿಡಮೂಲಿಕೆಗಳ ಅಭಿವೃದ್ಧಿಗಾಗಿ ಮತ್ತು ಅಲ್ಲಿ ರಸ್ತೆ, ಕುಡಿಯುವ ನೀರಿನ ವ್ಯವಸ್ಥೇಗಾಗಿ ೫ ಕೋಟಿ ರೂ ಗಳನ್ನು ಕೊಡುತ್ತಿದ್ದೇವೆ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ವಿವೇಕಾನಂದ ಪೀಠ ಸ್ಥಾಪಿಸುವುದಕ್ಕೋಸ್ಕರ ೨ ಕೋಟಿ ರೂ ಗಳನ್ನು ಕೊಡುತ್ತಿದ್ದೇವೆ ಚನ್ನವೀರ ಕಣವಿಯರ ಸಮಗ್ರ ಸಾಹಿತ್ಯ ಮರುಮುದ್ರಣಕ್ಕೆ ೫೦ ಲಕ್ಷ ರೂ ಗಳನ್ನು ಕೊಡುತ್ತಿದ್ದೇವೆ ಚಿಕ್ಕನಾಯಕನ ಹಳ್ಳಿ ಶ್ರೀಕಂಠಯ್ಯ ಜನ್ಮಶತಮಾನೋತ್ಸವ ಭವನ ನಿರ್ಮಾಣ ಮಾಡುವುದಕ್ಕೆ ಒಂದೂವರೆ ಕೋಟಿ ರೂ ಗಳನ್ನು ಕೊಡುತ್ತಿದ್ದೇವೆ ಮೈಸೂರು ಮಲ್ಲಿಗೆ ಖ್ಯಾತಿಯ ಕೆ ನರಸಿಂಹಸ್ವಾಮಿ, ಹುಯಿಲುಗೋಳ ನಾರಾಯಣರಾವ್, ಡಿ ಎಸ್ ಕರ್ಕಿ, ಡಾ ರಂ ಶಿ ಮುಗಳಿ, ಡಾ ಎಂ ಗೋಪಾಲಕೃಷ್ಣ ಅಡಿಗ ಅವರುಗಳ ಪುಸ್ತಕಗಳ ಮುದ್ರಣಕ್ಕೆ ತಲಾ ೧೦ ಲಕ್ಷ ರೂ ಗಳಂತೆ ೫೦ ಲಕ್ಷ ರೂ ಗಳನ್ನು ಕೊಡುತ್ತಿದ್ದೇವೆ ಡಿವಿಜಿ ಹಾಗೂ ವಿ ಕೃ ಗೋಕಾಕ್ ಪ್ರತಿಷ್ಠಾನ ಸ್ಥಾಪನೆಗೆ ೨೦ ಲಕ್ಷ ರೂ ಗಳಂತೆ ೪೦ ಲಕ್ಷ ರೂ ಗಳನ್ನು ಕೊಡುತ್ತಿದ್ದೇವೆ ಗೌರಿಬಿದನೂರಿನಲ್ಲಿ ಡಾ ಹೆಚ್ ನರಸಿಂಹಯ್ಯ ಸ್ಮಾರಕ ಭವನ ನಿರ್ಮಾಣ ಮಾಡುವುದಕ್ಕೆ ೧ ಕೋಟಿ ರೂ ಗಳನ್ನುಕೊಡುತ್ತಿದ್ದೇವೆ, ಡಿ ಎಸ್ ವೆಂಕಟಣ್ಣಯ್ಯನವರ ಜನ್ಮಸ್ಥಳ ಚಿತ್ರದುರ್ಗದ ತಳಕು ಗ್ರಾಮದ ಅಭಿವೃದ್ಧಿಗೆ ಒಂದೂವರೆ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ ಮಾಗಡಿಯಲ್ಲಿ ಕೆಂಪೇಗೌಡರು ಕಟ್ಟಿಸಿದಂಥ ಹಾಗೂ ಪ್ರಸಿದ್ಧವಾದಂಥ ಮತ್ತು ಶಿಥಿಲಗೊಂಡಿರುವಂಥ ಕೋಟೆಯ ಜೀರ್ಣೋದ್ಧಾರಕ್ಕಾಗಿ ೨ ಕೋಟಿ ರೂ ಗಳನ್ನು ಕೊಡುತ್ತಿದ್ದೇವೆ

ಬೆಂಗಳೂರಿನ ಮಿಥಿಕ್ ಸೊಸೈಟಿ ಶತಮಾನೋತ್ಸವ ಆಚರಣೆಗೆ ೧ ಕೋಟಿ ರೂ ಗಳನ್ನು ಕೊಡುತ್ತಿದ್ದೇವೆ ಬೆಂಗಳೂರಿನ Scouts and Guides ಭವನ ಪೂರ್ಣಗೊಳಿಸುವುದಕ್ಕೋಸ್ಕರ ೬೦ ಲಕ್ಷ ರೂ ಗಳನ್ನು ಕೊಡುತ್ತಿದ್ದೇವೆ ಕೊಡಗು ಕಿತ್ತಳೆ ಬೆಳೆಗಾರರ ಸಹಕಾರ ಸಂಘದ ಸಾಲ ಮನ್ನಾ ಮತ್ತು ಪುನಶ್ಚೇತನಕ್ಕಾಗಿ ೫ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ ತೀರ್ಥಹಳ್ಳಿಯಲ್ಲಿ ಅಡಿಕೆ ಸಂಶೋಧನಾ ಕೇಮದ್ರಕ್ಕೆ ೨ ಕೋಟಿ ರೂ ಗಳನ್ನು ಕೊಡುತ್ತಿದ್ದೇವೆ ಮುಧೋಳದ ರನ್ನ ಸ್ಮಾರಕ ಭವನ ಪೂರ್ಣಗೊಳಿಸುವುದಕ್ಕೆ ೫೦ ಲಕ್ಷ ರೂ ಗಳನ್ನು ಕೊಡುತ್ತಿದ್ದೇವೆ ಹೊಸಪೇಟೆ ಮುನಿರಾಬಾದ್ ಮುನಿರಾಬಾದ್ ಸರ್ವಜ್ಞ ಪೀಠದ ಸಂಶೋಧನಾ ಕೇಂದ್ರಕ್ಕೆ ೧೦ ಲಕ್ಷ ರೂ ಗಳನ್ನು ಕೊಡುತ್ತಿದ್ದೇವೆ ಶಿರಾಳಕೊಪ್ಪ, ಕಾರ್ಕಳ ಮಹಿಳಾ ಪಾಲಿಟೆಕ್ನಿಕ್, ಹಾಗೂ ಲಿಂಗಸೂರು, ಹಾವೇರಿ, ಗದಗ ಬಾಗಲಕೋಟೆ, ಶಿಕಾರಿಪುರ, ರಾಮನಗರ ಮತ್ತು ಚಿತ್ರದುರ್ಗದಲ್ಲಿ Polytechnic College ಪ್ರಾರಂಭ ಮಾಡುವುದಕ್ಕೋಸ್ಕರ ೬ಕ್ಕೆ ಒಂದೊಂದು ಕೋಟು ರೂ ಗಳಂತೆ ೬ ಕೋಟಿ ರೂ ಗಳನ್ನು ಕೊಡುತ್ತಿದ್ದೇವೆ ಬೆಂಗಳೂರಿನ ಗೋಖಲೆ ಸಾರ್ವಜನಿಕ ವ್ಯವಹಾರಗಳ ಸಂಸ್ಥೆಯ ಚಟುವಟಿಕೆಗೆ ೧ ಕೋಟಿ ರೂ ಗಳನ್ನು ಕೋಡುತ್ತಿದ್ದೇವೆ ಐತಿಹಾಸಿಕ ಮತ್ತು ಪರಂಪರೆ ಕಥಾವಸ್ತುವುಳ್ಳ ಚಲನಚಿತ್ರ ನಿರ್ಮಾಣವನ್ನು ಪ್ರೋತ್ಸಾಹಿಸುವುದಕ್ಕೋಸ್ಕರ ಚಿತ್ರವೊಂದಕ್ಕೆ ೨೫ ಲಕ್ಷ ರೂ ಗಳಂತೆ

(ಗೊಂದಲ)

ಶ್ರೀ ಸಿದ್ದರಾಮಯ್ಯ ಇದು ಬಜೆಟ್‌ನ ಲಕ್ಷಣವೇ? ಅದರ ಪಾವಿತ್ರ್ಯವನ್ನೆಲ್ಲ ಹಾಳುಮಾಡಿಬಿಟ್ಟರಿ ಯಾರಾದರೂ ಈ ತರಹ ಮಾಡುತ್ತಾರೆಯೇ? ಯಡಿಯೂರಪ್ಪನವರೆ?

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ Can we call it a budget?

(ಗೊಂದಲ)

ಶ್ರೀ ಸಿದ್ದರಾಮಯ್ಯ This is too much, ಈ ರಾಜ್ಯದಲ್ಲಿ ಇಂಥ ದುಸ್ಥಿತಿ ಯಾವಾಗಲೂ ಸಹ ಬಂದಿರಲಿಲ್ಲ '

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ You cannot distribute like this

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ಮಲೆಮಹದೇಶ್ವ ಬೆಟ್ಟದಲ್ಲಿ ಜಾನಪದ ಅಧ್ಯಯನ ಕೇಂದ್ರಕ್ಕೆ ೨ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇನೆ ಚನ್ನಗಿರಿ ತಾಲ್ಲೂಕಿನ ಮೂಡಾ ಕೆರೆ ಯೋಜನೆ ಸಮೀಕ್ಷೆ ೨೫ ರೂಪಾಯಿಗಳನ್ನು ಕೊಡುತ್ತಿದ್ದೇವೆ

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಮತ್ತು ಶ್ರೀ ಬಿ ಆರ್ ಪಾಟೀಲ್, ಶ್ರೀ ಹೆಚ್ ವೈ ಮೇಟಿ, ಶ್ರೀ ಮಹದೇವ್, ಡಾ ಹೆಚ್ ಸಿ ಮಹದೇವಪ್ಪ ರವರುಗಳು ಸದನದ ಬಾವಿಗೆ ಆಗಮಿಸಿ ಧರಣಿನಿರತರಾದರು

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ಮುಂದೆ ಬರುವಂಥ ದಿವಸಗಳಲ್ಲಿ ಆಶ್ರಯ ಸಮಿತಿಯನ್ನು ಶಾಸಕರ ಅಧ್ಯಕ್ಷತೆಯಲ್ಲಿ ಮಾಡಬೇಕೆಂದು ನವು ತೀರ್ಮಾನ ಮಾಡಿದ್ದೇವೆ , ಮಾನ್ಯ ಅಧ್ಯಕ್ಷರ, ಇದಕ್ಕೆ ಮಂಜೂರಾತಿಯನ್ನು ನೀಡಬೇಕೆಂದು ನಾನು ವಿನಂತಿಯನ್ನು ಮಾಡುತ್ತಿದ್ದೇನೆ

(ಗೊಂದಲ)

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ರೈತರ ಸಾಲ ಮನ್ನಾ ಬಗ್ಗೆ ಏನೂ ಹೇಳಲಿಲ್ಲ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ರೈತರ ಸಾಲ ಮನ್ನಾ ಬಗ್ಗೆ ಮಾನ್ಯ ಹಣಕಾಸಿನ ಸಚಿವರು ಉತ್ತರದಲ್ಲಿ ಹೇಳಲಿಲ್ಲ

(ಗೊಂದಲ)

ಶ್ರೀ ಜೆ ಸಿ ಶ್ರೀರಾಮರೆಡ್ಡಿ ರೈತರ ಸಾಲ ಮನ್ನಾ ಬಗ್ಗೆ ಮಾನ್ಯ ಹಣಕಾಸಿನ ಸಚಿವರು ಉತ್ತರದಲ್ಲಿ ಹೇಳಲಿಲ್ಲ

(ಗೊಂದಲ)

ಶ್ರೀ ಜೆ ವಿ ಶ್ರೀರಾಮರೆಡ್ಡಿ ರೈತರ ಸಾಲ ಮನ್ನಾ ಬಗ್ಗೆ ಮಾನ್ಯ ಹಣಕಾಸಿನ ಸಚಿವರು ಉತ್ತರದಲ್ಲಿ ಹೇಳಲಿಲ್ಲ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ಸರ್, ರೈತರ ಸಾಲ ಮನ್ನಾ ಬಗ್ಗೆ ಹೇಳಲಿಲ್ಲ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) ಮಾನ್ಯ ಅಧ್ಯಕ್ಷರೆ,

೩೧ ೦೩ ೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ ೧ ರಿಂದ ೨೮ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ

(ಪ್ರತಿಯನ್ನು ಲಗತ್ತಿಸಿದೆ)

(ಗೊಂದಲ)

ಅಧ್ಯಕ್ಷರು (ಗೊಂದಲ) ಮಾಡಿದ್ದಾರೆ ನೀವು ಏನು ಹೇಳಬೇಕೋ ಅದನ್ನು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಹೇಳಿ Well ಗೆ ಬರುವುದು ಸರಿಯಲ್ಲ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ರೈತರ ಸಾಲ ಮನ್ನಾ ಬಗ್ಗೆ ಹೇಳಲಿಲ್ಲ

(ಗೊಂದಲ)

(ಈ ಹಂತದಲ್ಲಿ ಶ್ರೀ ಜಿ ವಿ ಶ್ರೀರಾಮರೆಡ್ಡಿ, ಶ್ರೀ ಜೆ ಸಿ ಮಾಧುಸ್ವಾಮಿ, ಶ್ರೀ ಎಸ್ ರಾಜೇಂದ್ರನ್ ಮತ್ತು ಶ್ರೀ ಕೆ ಜಯಪ್ರಕಾಶ್ ಹೆಗ್ಡೆರವರು ಸದನದ ಬಾವಿಗೆ ತೆರಳಿದರು)

ಅಧಯ್ಕಷರು ಬಜೆಟ್ ಅಲ್ಲವೋ, ಏನೋ ನೀವು ಅಲ್ಲಿ ಕುಳಿತುಕೊಂಡು ಕೇಬೇಕೇ ಹೊರತು Well ಗೆ ಬರತಕ್ಕಂಥದ್ದು ಸಂಪ್ರದಾಯ ಅಲ್ಲ (ಗೊಂದಲ) ನೀವು ನಿಮ್ಮ ಸ್ಥಾನಗಳಲ್ಲಿ ಕುಳಿತುಕೊಂಡು ಮಾತಾಡಿ (ಗೊಂದಲ)

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ (ತಮ್ಮ ಸ್ಥಾನದಿಂದ) (ಗೊಂದಲ) Endowment Department ಏಕಿದೆ, ಸುಟ್ಟು ಹಾಕಿ Endowment Department close ಮಾಡಿ

(ಗೊಂದಲ)

ಅಧ್ಯಕ್ಷರು ನಾನು ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ ಪ್ರಸ್ತಾವ ಏನೆಂದರೆ,

"ದಿನಾಂಕ ೩೧ ೦೩ ೨೦೦೮ರಂದು ಕೊನೆಗೊಳ್ಳುವ ಆರ್ಥಿಕ

ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ ೧ ರಿಂದ ೨೮ಕ್ಕೆ ಸಂಬಂಧಿಸಿದಂತೆ

ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ

(ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಬೇಡಿಕೆಗಳ

ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು "

ಪ್ರಸ್ತಾವವನ್ನು ಅಂಗೀಕರಿಸಲಾಗಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ ೪ – ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆ ಗೆ ೩೧-೩-೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೭,೭೪೪೩೨ ಲಕ್ಷ ರೂ ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೫ – ಒಳಾಡಳಿತ ಮತ್ತು ಸಾರಿಗೆ ಇಲಾಖೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಒಳಾಡಳಿತ ಮತ್ತು ಸಾರಿಗೆ ಇಲಾಖೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ

ರಾಜಸ್ವ ಖಾತೆಯಲ್ಲಿ ೧,೭೪,೪೩೪,೪೮ ಲಕ್ಷ ರೂಗಳಿಗಿಂತ ಮೀರದ ಮೊತ್ತದವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೦,೧೪೦.೦೦ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೧೨ – ವಾರ್ತಾ, ಪ್ರವಾಸದ್ಯಮ ಮತ್ತು ಯುವಜನ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೦೩–೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೪,೯೫೨.೩೪ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೦,೧೯೯.೦೦ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೨೮ – ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ

ರಾಜ್ಯಾಲರ ಶಿಫಾರಸ್ಸಿನ ಮೇರೆಗೆ ೩೧–೩–೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ " ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೦೪೭.೬೧ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೨೧ – ಜಲಸಂಪನ್ಮೂಲ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೦೩–೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಜಲಸಂಪನ್ಮೂಲ" ಸಂದಾಯ

ಮಾಡುವಲ್ಲಿ ಬರತಕಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೮,೬೫೧೭೭ ಲಕ್ಷ ರೂಗಳಿಂದ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೯೦೯೦೬೧೨ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೨೦ – ಲೋಕೋಪಯೋಗಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ “ಲೋಕೋಪಯೋಗಿ” ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೫೨,೬೫೫೧೪ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೩೭,೯೪೩೯೮ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೨೦–ಲೋಕೋಪಯೋಗಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ “ಲೋಕೋಪಯೋಗಿ” ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೫೨,೬೫೫೧೪ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೩೭,೯೪೩೯೮ ಲಕ್ಷ ರೂಗಳಿಗಿಂತ ಮೀರಿದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೨೪ ಇಂಧನ

ರಾಜ್ಯಪಾಲರ ಶಿಫಾರಸ್ಸಿನ ಮೇರೆ ೩೧–೩–೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ “ಇಂಧನ” ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ

೨,೧೭,೩೭೮೪೫ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩೫,೬೦೦ ೦೦ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೧೬ – ವಸತಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಸತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೭,೮೯೨ ೮೯ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩೨,೮೦೦ ೦೦ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಘಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೭ – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೪–೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೬೦,೦೬೪ ೨೫ ಲಕ್ಷ ರೂ ಗಳಿಗಿಂತ ಗಿಂತ ಮೀರದ ಮೊತ್ತವನನು ಮತ್ತು ಬಂಡವಾಳ ಖಾತೆಯಲ್ಲಿ ೧,೪೬,೩೬೭ ೦೦ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೨೨ – ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರೋಗ್ಯ ಮತ್ತು ಕುಟುಂಬ ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೫೮,೪೯ ೯೪ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೮,೪೪೦ ೦೦ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನುವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೨೩ – ಕಾರ್ಮಿಕ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾರ್ಮಿಕ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾಕ್ಕೆ ರಾಜಸ್ವ ಖಾತೆಯಲ್ಲಿ ೨೦,೪೪೫ ೬೧ ಲಕ್ಷ ರೂಗಳಿಗೀಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭೮೯ ೧೨ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೧೬ – ವಸತಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಸತಿ" ಸಂದಾಯ ಮಾಡುದಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೭,೯೨ ೯ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩೨,೮೦೦ ೦೦ ಲಕ್ಷ ರೂಗಳಿಗೀಂತ ಮೀರದ ಮೊತ್ತವನ್ನು (ಏಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೭ – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೬೦,೦೬೪,೨೫ ಲಕ್ಷ ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೪೬,೩೬೭ ೦೦ ಲಕ್ಷ ರೂ ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ – ೨೨ ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ" ಸಂದಾಯ ಮಾಡುವಲ್ಲಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೫೮,೪೯೯ ೯೪ ಲಕ್ಷ ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೮,೪೪೦ ೦೦ ಲಕ್ಷ ರೂ ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೨೩ – ಕಾರ್ಮಿಕ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾರ್ಮಿಕ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೦,೪೪೫ ೬೧ ಲಕ್ಷ ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭೮೯ ೧೨ ಲಕ್ಷ ರೂ ಗಳಿಗಿಂತ ಮೀರದ

ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೧೩ – ಆಹಾರ ಮತ್ತು ನಾಗರೀಕ ಸರಬರಾಜು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆಹಾರ ಮತ್ತು ನಾಗರೀಕ ಸರಬರಾಜು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೬೪,೪೯೭ ೫೪ ಲಕ್ಷ ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬೫೦ ೦೦ ಲಕ್ಷ ರೂ ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೮ – ವಾಣಿಜ್ಯ ಮತ್ತು ಕೈಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ವಾಣಿಜ್ಯ ಮತ್ತು ಕೈಗಾರಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೨೬,೫೯೩ ೫೦ ಲಕ್ಷ ರೂ ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೦೧ – ಕೃಷಿ ಮತ್ತು ತೋಟಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕೃಷಿ ಮತ್ತು ತೋಟಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೪೦,೮೨೧ ೭೭ ಲಕ್ಷ ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೩೩೦ ೦೫ ಲಕ್ಷ

ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೦೬ – ಮೂಲಭೂತ ಸೌಕರ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೂಲಭೂತ ಸೌಕರ್ಯ" ಸಂದಾಯ ಮಾಢುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧೦ ೫೦ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೪೧,೭೩೪ ೦೦ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೦೧ – ಕೃಷಿ ಮತ್ತು ತೋಟಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕೃಷಿ ಮತ್ತು ತೋಟಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೪೦,೮೨೧ ೭೭ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೩೩೦ ೦೫ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೦೬ – ಮೂಲಭೂತ ಸೌಕರ್ಯ

ರಾಜ್ಯಪಾಲರ ಶಿಫಾರ್ಸಿನ ಮೇರೆಗೆ ೩೧-೩-೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೂಲಭೂತ ಸೌಕರ್ಯ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧೦ ೫೦ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೪೧,೭೩೪ ೦೦ ಲಕ್ಷ ರೂಗಳಿಗಿಂತ

ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೧೦– ಸಮಾಜ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಮಾಜ ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೨೪,೯೧೮ ೫೯ ಲಕ್ಷ ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೭,೬೨೮ ೫೦ ಲಕ್ಷ ರೂ ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೨ – ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೮೭,೩೫೧ ೯೨ ಲಕ್ಷ ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಲ ಖಾತೆಯಲ್ಲಿ ೨,೨೬೯ ೫೭ ಲಕ್ಷ ರೂ ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೦೨ – ಪಶುಸಂಗೋಪನೆ ಮತ್ತು ಮೀನುಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪಶುಸಂಗೋಪನೆ ಮತ್ತು ಮೀನುಗಾರಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೩,೭೩೩ ೫೫ ಲಕ್ಷ ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೦೧೫ ೦೦ ಲಕ್ಷ

ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೨೫ – ಕನ್ನಡ ಮತ್ತು ಸಂಸ್ಕೃತಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೨೦೦೮ ರಂದು ಕೊನೆಗೊಳುವ ಆರ್ಥಿಕ ವರ್ಷದಲ್ಲಿ "ಕನ್ನಡ ಮತ್ತು ಸಂಸ್ಕೃತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೨,೭೦೨.೧೯ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೧೩೦.೦೦ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೦೯–ಸಹಕಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೨೦೦೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲಿ "ಸಹಕಾರ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯೦,೩೯೬.೭೦ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೫೯೭.೦೦ ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು .(ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕ, ೨೦೦೭

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ ಎಸ್ ಯಡಿಯೂರಪ್ಪ (ಹಣಕಾಸು ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ೨೦೦೭ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ

ಅಧ್ಯಕ್ಷರು ಪ್ರಸ್ತಾವ ಏನೆಂದರೆ ,

"೨೦೦೭ ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು "

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಗಯಿತು

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ,

೨೦೦೭ ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ

ಅಧ್ಯಕ್ಷರು ವಿಧೇಯಕವನ್ನು ಮಂಡಿಸಲಾಗಿದೆ

(ಗೊಂದಲ)

ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, ೨೦೦೭

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ ಎಸ್ ಯಡಿಯೂರಪ್ಪ (ಹಣಕಾಸು ಮಂತ್ರಿಗಳು) ಮಾನ್ಯ ಅಧ್ಯಕರೆ, ೨೦೦೭ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರಿರುತ್ತೇನೆ

ಅಧ್ಯಕ್ಷರು ಪ್ರಸ್ತಾವ ಏನೆಂದರೆ ,

"೨೦೦೭ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಲಸು ಅನುಮತಿ ನೀಡುವುದು "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ, ೨೦೦೭ ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ

ಅಧ್ಯಕ್ಷರು ವಿಧೇಯಕವನ್ನು ಮಂಡಿಸಲಾಗಿದೆ

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದಪಡಿ) ವಿಧೇಯಕ, ೨೦೦೭

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ ಎಸ್ ಯಡಿಯೂರಪ್ಪ (ಹಣಕಾಸು ಮಂತ್ರಿಗಳು) ಸಾರಿಗೆ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ೨೦೦೭ ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ

ಅಧ್ಯಕ್ಷರು ಪ್ರಸ್ತಾವ ಏನೆಂದರೆ ,

"೨೦೦೭ ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತೇನೆ "

ಅಧ್ಯಕ್ಷರು ವಿಧೇಯಕವನ್ನು ಮಂಡಿಸಲಾಗಿದೆ

(ಗೊಂದಲ)

ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, ೨೦೦೭

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ ಎಸ್ ಯಡಿಯೂರಪ್ಪ (ಹಣಕಾಸು ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ೨೦೦೭ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ)

ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ

ಅಧ್ಯಕ್ಷರು ಪ್ರಸ್ತಾವ ಏನೆಂದರೆ ,

" ೨೦೦೭ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾನ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ,

೨೦೦೭ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ

ಅಧ್ಯಕ್ಷರು ವಿಧೇಯಕವನ್ನು ಮಂಡಿಸಲಾಗಿದೆ

(ಗೊಂದಲ)

ವಿಧೇಯಕಗಳನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇವೆ

ಪ್ರಸ್ತಾವನವನ್ನು ಮಂಡಿಸಲಾಗಯಿತು

ಅಧ್ಯಕ್ಷರು ಪ್ರಸ್ತಾವ ಏನೆಂದರೆ,

"೨೦೦೭ ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಪರ್ಯಾಲೋಚಿಸುವುದು "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೧ ಹಾಗೂ ೩

ಅಧ್ಯಕ್ಷರು "ಖಂಡ ೧ ಹಾಗೂ ೩ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೧ ಹಾಗೂ ೩ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಗಯಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು ಪ್ರಸ್ತಾವ ಏನೆಮದರೆ ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಗೊಂದಲ)

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕ್ಕೆ ಸೇರಿಸಲಾಗಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ,

೨೦೦೭ ರ ಕರ್ನಾಟಕ ಧನ ವಿನಿಯೋಗ (ಏಖಾನುದಾನ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ

ಅಧ್ಯಕ್ಷರು ಪ್ರಸ್ತಾವ ಏನೆಂದರೆ,

"೨೦೦೭ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ (ಹಣಕಾಸು ಮಂತ್ರಿಗಳು) ಮಾನ್ಯ ಅಧ್ಯಕ್ಷರೆ,

೨೦೦೭ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು ಪ್ರಸ್ತಾವ ಏನೆಂದರೆ,

"೨೦೦೭ ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ರಿಂದ ೩೦

ಅಧ್ಯಕ್ಷರು "ಖಂಡ ೨ ರಿಂದ ೩೦ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತವೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಗಯಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು ಪ್ರಸ್ತಾವ ಏನೆಂದರೆ ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನಎಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ,

೨೦೦೭ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನ ಅಂಗೀಕರಿಸಬೇಕೆಂದು ಕೋರುತ್ತೇನೆ

ಅಧ್ಯಕ್ಷರು ಪ್ರಸ್ತಾವ ಏನೆಂದರೆ ,

"೨೦೦೭ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸುವುದು "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, ೨೦೦೭
ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು) (ಸಾರಿಗೆ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ೨೦೦೭ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ

ಪ್ರಸ್ತಾಪವನ್ನು ಮಂಡಿಸಲಾಯಿತು

ಅಧ್ಯಕ್ಷರು ಪ್ರಸ್ತಾವ ಏನೆಂದರೆ, "೨೦೦೭ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಅಧ್ಯಕ್ಷರು " ಖಂಡ ೨ ರಿಂದ ೭ರವರೆಗೆ ಎರಡೂ ಸೇರಿದಂತೆ ಈ ವಇಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಇಂದ ೭ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಗಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) ಸಾರಿಗೆ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ೨೦೦೭ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ

ಅಧ್ಯಕ್ಷರು ಪ್ರಸ್ತಾವ ಏನೆಂದರೆ, "೨೦೦೭ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, ೨೦೦೭

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ೨೦೦೭ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚನೆಬೇಕೆಂದು ಕೋರುತ್ತೇನೆ

ಪ್ರಸ್ತಾವವನ್ನು ಮಂಡಿಸಲಾಗಯಿತು

ಅಧ್ಯಕ್ಷರು ಪ್ರಸ್ತಾವ ಏನೆಂದರೆ, "೨೦೦೭ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಅಧ್ಯಕ್ಷರು "ಖಂಡ ೨ ರಿಂದ ೫ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೫ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಗಯಿತು)

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ೨೦೦೭ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ

ಅಧ್ಯಕ್ಷರು ಪ್ರಸ್ತಾವ ಏನೆಂದರೆ, "೨೦೦೭ರ ಕರ್ನಾಟಕ ತೆರಿಗೆ ಕಾನೂನುಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ರಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, ೨೦೦೭

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ ಎಸ್ ಯಡಿಯೂರಪಪ್ (ಉಪ ಮುಖ್ಯ ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ೨೦೦೭ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು ಪ್ರಸ್ತಾವ ಏನೆಂದರೆ, "೨೦೦೭ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಅಧ್ಯಕ್ಷರು "ಖಂಡ ೨ ರಿಂದ ೫ ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೫ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು ಪ್ರಸ್ತಾವ ಏನೆಂದರೆ, " ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನಯೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ೨೦೦೭ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ

ಅಧ್ಯಕ್ಷರು ಪ್ರಸ್ತಾವ ಏನೆಂದರೆ, "೨೦೦೭ರ ಕರ್ನಾಟಕ ತೆರಿಗೆ ಕಾನೂನುಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಸ್ಟಮಪು (ಮೂರನೇ ತಿದ್ದುಪಡಿ) ವಿಧೇಯಕ, ೨೦೦೭

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ ಎಸ್ ಯಡಿಯೂರಪಪ್ (ಉಪ ಮುಖ್ಯ ಮಂತ್ರಿಗಳು) (ಕಂದಾಯ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ೨೦೦೭ರ ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋಡುರತ್ತೇವೆ

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು ಪ್ರಸ್ತಾವ ಏನೆಂದರೆ, "೨೦೦೭ರ ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಅಧ್ಯಕ್ಷರು " ಖಂಡ ೨ ರಿಂದ ೪ ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೪ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು ಪ್ರಸ್ತಾವ ಏನೆಮದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ,ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) (ಕಂದಾಯ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ೨೦೦೭ರ ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ

ಅಧ್ಯಕ್ಷರು ಪ್ರಸ್ತಾವ ಏನೆಂದರೆ, "೨೦೦೭ರ ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು ಈಗ ಸದನವನ್ನು ಮತ್ತೆ ೪ ೩೦ ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವು ಮಧ್ಯಾಹ್ನ ೩ ೪೧ ಗಂಟೆಗೆ ಮುಕ್ತಾಯಗೊಂಡು ಪುನಃ ಸಾಯಂಕಾಲ ೪ ೩೦ಕ್ಕೆ ಸಮಾವೇಶಗೊಳ್ಳುವುದು)

ಪಡಿತರ ಚೀಟಿಗಳ ವಿವರಣೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	೩೧೯ (೧೯೩೧)
ಸದಸ್ಯರ ಹೆಸರು	ಶ್ರೀ ಶಿವಕುಮಾರ್ ಡಿ ಕೆ (ಸಾತನೂರು)
ಉತ್ತರಿಸುವ ಸಚಿವರು	ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕನಕಪುರ ತಾಲ್ಲೂಕಿನಲ್ಲಿ ಹಂಚಿಕೆ ಎಷ್ಟು ಪಡಿತರ ಚೀಟಿಯನ್ನು ಹಂಚಿಕೆ ಮಾಡಲಾಗಿದೆ	ಕನಕಪುರ ತಾಲ್ಲೂಕಿನಲ್ಲಿ ಮಾಡಿರುವ ಪಡಿತರ ಚೀಟಿ

ಪಡಿತರ ಚೀಟಿ ಹಂಚಿಕೆಯಲ್ಲಿ ಸಂಖ್ಯೆ ಈ ಕೆಳಕಂಡಂತಿರುತ್ತದೆ –

ಎಎಫ್ವೈ ಬಿಪಿಎಲ್ ಎಪಿಎಲ್

ಅನ್ನಪೂರ್ಣ ೩೨

ಕನಕಪುರ ಟೌನ್ ೪೧೦

೩೫೬೫

೪೦೨೨

ಒಟ್ಟು ೮೦೨೯

(ವಿವರ ಒದಗಿಸುವುದು)

ಸಾತನೂರು ಕ್ಷೇತ್ರ ೭೫ ೨೮೬೨ ೨೧೧೮೧ ೧೨೪೯೪ ೩೬೬೧೨

ಕನಕಪುರ ಕ್ಷೇತ್ರ	೨೦೬	೧೨೭೮	೨೧೩೬೮	೧೨೫೯೭	೩೫೪೪೯
ಒಟ್ಟು	೩೧೩	೪೫೫೦	೪೬೫೭೧	೨೮೬೫೬	೮೦೦೯೦

ಆ) ಆ ಪೈಕಿ ಬಿಪಿಎಲ್ –ಎಪಿಎಲ್ ವಿತರಣೆ ಮಾಡಿರುವ ಬಿಪಿಎಲ್-ಎಪಿಎಲ್ ಪಡಿತರ ಚೀಟಿಗಳ ಮಾಡಿರುವುದೆಷ್ಟು (ಮಾಹಿತಿ ನೀಡುವುದು),

ಪಡಿತರ ಚೀಟಿ ವಿತರಣೆ ವಿವರ ಈ ಕೆಳಕಂಡಂತಿರುತ್ತದೆ

	ಬಿಪಿಎಲ್ ಕಾರ್ಡುಗಳು	ಎಪಿಎಲ್ ಕಾರ್ಡುಗಳು
ಪಟ್ಟಣ	೪೦೨೨	೩೫೬೫
ಗ್ರಾಮಾಂತರ	೪೨೫೪೯	೨೫೦೯೧

ಇ) ಬಿಪಿಎಲ್ – ಎಪಿಎಲ್ ಪಡಿತರ ಚೀಟಿಯಲ್ಲಿ ಆಹಾರ ಪದಾರ್ಥ ಹಾಗೂ ಸೀಮೆಎಣ್ಣೆ ಹಂಚಿಕೆಯಲ್ಲಿ ಉಂಟಾಗಿರುವ ಗೊಂದಲ ಸರ್ಕಾರದ ಗಮನಕ್ಕೆ ಬಂದಿದೆಯೇ, — ಹೌದು

ಈ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ಕ್ರಮವೇನು?

ಫೆಬ್ರವರಿ ೨೦೦೭ರ ಮಾಹೆಯಿಂದ ಬಿಪಿಎಲ್ ಪಡಿತರಚೀಟಿದಾರರಿಗೆ ಯೂನಿಟ್ ಪದ್ಧತಿಯಡಿ ಆಹಾರಧಾನ್ಯ ಹಂಚಿಕೆ ಮಾಡಲಾಗಿರುತ್ತದೆ ಮಾರ್ಚ್ ೨೦೦೭ರ ಮಾಹೆಗೆ ವರ್ಗ ಬದಲಾವಣೆ ಕೋರಿ ಬಂದಿದ್ದ ೧೩,೧೨೮ ಪಡಿತರ ಚೀಟಿಗಳಿಗೂ ಸಹ ಆಹಾರಧಾನ್ಯಗಳನ್ನು ಬಿಡುಗಡೆ ಮಾಡಲಾಗಿರುತ್ತದೆ

(ಸದನವು ಪುನಃ ಸಂಜೆ ೫.೨೪ ಗಂಟೆಗೆ ಸಭೆ ಸೇರಿತು)

(ಮಾನ್ಯ ಉಪಾಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು)

ಪ್ರಶ್ನೋತ್ತರ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಪ್ರಶ್ನೆ ಸಂಖ್ಯೆ ೩೧೬ (೨೨೬೨)

ಉಪಾಧ್ಯಕ್ಷರು ಮಾನ್ಯ ಹಾಲಪ್ಪನವರೆ, ಈ ಪ್ರಶ್ನೆಗೆ ಮಾನ್ಯ ಉತತರಿಸುತ್ತಾರೆ ಆದರೆ ಅವರು ಈಗ ಕೌನ್ಸಲ್ ನಲ್ಲಿ ಇದ್ದಾರೆ ಅವರು ಬಂದ ಕೂಡಲೇ ನಾನು ಮತ್ತೆ ತಮ್ಮನ್ನು ಕರೆಯುತ್ತೇನೆ

ಶ್ರೀ ಹೆಚ್ ಹಾಲಪ್ಪ ಆಯಿತು ಸಾರ್

(ಪ್ರಶ್ನೆ ಸಂಖ್ಯೆ ೩೧೭ (೨೨೬೧) ಕೇಳಬೇಕಾದ ಮಾನ್ಯ ಸದಸ್ಯರಾದ ಪ್ರಕಾಶ್ ಬಾಬಣ್ಣ ಹುಕ್ಕೇರಿಯವರು ಸದನದಲ್ಲಿ ಹಾಜರಿರಲಿಲ್ಲ)

(ಪ್ರಶ್ನೆ ಸಂಖ್ಯೆ ೩೧೯ (೧೯೩೧) ಕೇಳಬೇಕಾದ ಮಾನ್ಯ ಸದಸ್ಯರಾದ ಡಿ ಕೆ ಶಿವಕುಮಾರ್ ರವರು ಸದನದಲ್ಲಿ ಹಾಜರಿರಿಲ್ಲ)

ಮೀನುಗಾರಿಕಾ ಇಲಾಖೆ ಮನೆಗಳ ವಿತರಣೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩	೧೭೦೫
ಸದಸ್ಯರ ಹೆಸರು	ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ)
ಉತ್ತರಿಸಬೇಕಾದ ಸಚಿವರು	ಬಿ ನಾಗರಾಜ್ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಪ್ರಶ್ನೆ	ಉತ್ತರ
ಅ) ೨೦೦೬-೦೭ನೇ ಸಾಲಿನಲ್ಲಿ ಮೀನುಗಾರಿಕಾ ಇಲಾಖೆಯಿಂದ ವಸತಿ ಹೀನ ಮೀನುಗಾರರಿಗೆ ವಸತಿ ಸೌಲಭ್ಯವನ್ನು ಕಲ್ಪಿಸುವ ಯೋಜನೆ ಸರ್ಕಾರದ ಗಮನದಲ್ಲಿದೆಯೇ,	ಹೌದು
ಆ) ವಸತಿ ವಿತರಣೆಯಲ್ಲಿ ತೆಗೆದುಕೊಂಡಿರುವ ಮಾನದಂಡಗಳೇನು ,	ಅರ್ಹ ನಿರ್ವಸತಿ ಮೀನುಗಾರರ ಬೇಡಿಕೆ ಪರಿಶೀಲಿಸಿ ವಿಧಾನಸಭಾ ಕ್ಷೇತ್ರ/ ತಾಲ್ಲೂಕುವಾರು ಮನೆಗಳನ್ನು ಹಂಚಿಕೆ ಮಾಡಲಾಗಿದೆ
ಇ) ೨೦೦೬-೦೭ನೇ ಸಾಲಿನಲ್ಲಿ ಮೀನುಗಾರರಿಗೆ ಬಿಡುಗಡೆಯಾಗಿರುವ ಮನೆಗಳು ಸಂಖ್ಯೆ ಎಷ್ಟು (ಕ್ಷೇತ್ರವಾರು ವಿವರ ನೀಡುವುದು)	೨೦೦೬-೦೭ನೇ ಸಾಲಿನಲ್ಲಿ ಮೀನುಗಾರರಿಗೆ ೨೬೬೦ ಮನೆಗಳನ್ನು ಹಂಚಿಕೆಯಾಗಿರುತ್ತದೆ ಕ್ಷೇತ್ರವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ
ಈ) ಈ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು? ಆಯ್ಕೆ	ಕ್ಷೇತ್ರವಾರು ಹಂಚಿಕೆಯಾದ ಮನೆಗಳಿಗೆ ಫಲಾನುಭವಿಗಳ ಪ್ರಗತಿಯಲ್ಲಿರುತ್ತದೆ ಆಯ್ಕೆ ಮಾಡಲಾದ ಫಲಾನುಭವಿಗಳಿಗೆ ಮನೆಗಳ ನಿರ್ಮಾಣ ಕೈಗೊಳ್ಳಲು ಸೂಚನೆ ನೀಡಲಾಗಿದೆ ಇದಕ್ಕೆ ಪ್ರಸಕ್ತ ಸಾಲಿನಲ್ಲಿ ರೂ ೧೦.೦೦ ಕೋಟಿ ಅನುದಾನ ಒದಗಿಸಲಾಗಿದೆ

ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಆರ್ ಧ್ರುವನಾರಾಯಣ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ೧೭೦೫ ರ ಅನುಬಂಧ

ಕ್ರ ಸಂ	ಮಂಜೂರಾದ ಜಿಲ್ಲೆ	ತಾಲ್ಲೂಕು /ಕ್ಷೇತ್ರ	ಮನೆಗಳ ಸಂಖ್ಯೆ	ಕ್ರ ಸಂ	ಮಂಜೂರಾದ ಜಿಲ್ಲೆ	ತಾಲ್ಲೂಕು /ಕ್ಷೇತ್ರ	ಮನೆಗಳ ಸಂಖ್ಯೆ
೧	ಬಾಗಲಕೋಟೆ ೧	ಬಾದಾಮಿ ೧೫	೨		ಬೆಂಗಳೂರು ೧	ಆನೇಕಲ್೨೫	
೨	ಹುನಗುಂದ ೧೦				(ನಗರ) ೨	ಬೆಂಗಳೂರು (ಉ)೨೦	
೩	ಬಾಗಲಕೋಟೆ ೧೦		೩		ಬೆಂಗಳೂರು ಉ)		೨೫
೪	ಬೀಳಗಿ ೧೦					ಒಟ್ಟು	೭೦
೫	ಜಮಖಂಡಿ ೧೫						
೬	ಮಧೋಳ ೧೦						
೭	ಗುಳೇದಗುಡ್ಡ ೫	೩ ಬೆಂಗಳೂರು	೧		ಚನ್ನಪಟ್ಟಣ ೧೦	೭೫	(ಗ್ರಾ)
೨	ಕನಕಪುರ ೧೦						
೩	ದೊಡ್ಡಬಳ್ಳಾಪುರ	೧೦					
೪	ಸಾತನೂರು ೧೦						
೨	ಬಳ್ಳಾರಿ	೧ ಸಿರುಗುಪ್ಪ	೧೫		೫ ಮಾಗಡಿ	೧೦	
೨	ಹೊಸಪೇಟೆ ೧೦	೬	ನೆಲಮಂಗಲ ೧೦				
೩	ಹಡಗಲಿ ೧೦	೭	ಹೊಸಕೋಟೆ ೧೦				
೪	ಕೂಡ್ಲಿಗಿ ೧೦	೮	ರಾಮನಗರ ೧೫				
೫	ಕೊಟ್ಟೂರು ೧೦	೯	ದೇವನಹಳ್ಳಿ ೫				
೬	ಸಂಡೂರು ೧೦		ಒಟ್ಟು ೯೦				
೭	ಕುರುಗೋಡು ೫						
೮	ಬಳ್ಳಾರಿ ೧೦	೬	ಬಿಜಾಪುರ	೧	ಸಿಂಧಗಿ	೧೦	
						ಒಟ್ಟು	೮೦
೨	ಮುದ್ದೇಬಿಹಾಳ ೧೦						
೩	ಬಿಜಾಪುರ ೧೦						
೫	ಬೆಳಗಾವಿ	೧ ಬೈಲಹೊಂಗಲ	೧೦		೪ ಇಂಡಿ	೧೦	
೨	ಸದಲಗ ೧೦	೫	ಬಸವನ ಬಾಗೇವಾಡಿ ೧೦				
೩	ಸೌದತ್ತಿ ೧೦	೬	ಹೂವಿನ ಹಪ್ಪರಗಿ ೧೦				
೪	ಚಿಕ್ಕೋಡಿ ೧೦	೭	ಬಳ್ಳೊಳ್ಳಿ ೧೦				
೫	ಹುಕ್ಕೇರಿ ೧೦		ಒಟ್ಟು ೭೦				
೬	ರಾಮದುರ್ಗ ೧೦						
೭	ಕಿತ್ತೂರು ೧೦	೭ ಬೀದರ್	೧ ಬಬಸವಕಲ್ಯಾಣ ೧೦				
೮	ಬಾಗೇವಾಡಿ ೧೦	೨	ಬೀದರ್ ೧೦				
೯	ಗೋಕುಲ್ ೧೦	೩	ಭಾಲ್ಕಿ ೧೦				
೧೦	ಕಾಗವಾಡ ೧೦	೪	ಔರಾದ್ ೫				
೧೧	ಅಥಣಿ ೧೦	೫	ಹಲಸೂರು ೧೦				
			ಒಟ್ಟು ೧೧೦		೬ ಹುಮಸಾಬಾದ್ ೫		
			ಒಟ್ಟು ೫೦				
೮	ಚಾಮರಾಜನಗರ	೧ ಗುಂಡ್ಲುಪೇಟೆ	೧೦	೧೩	ಗದಗ ೧ ಶಿರಹಟ್ಟಿ	೫	
೨	ಯಳಂದೂರು ೧೦	೨	ಮುಂಡರಗಿ ೫				
೩	ಚಾಮರಾಜನಗರ	೧೦		೩	ಗದಗ ೫		
೪	ಸಂತೆಮರಳ್ಳಿ ೧೦	೪	ರೋಣ ೧೦				
೫	ಕೊಳ್ಳೇಗಾಲ ೧೦	೫	ನರಗುಂದ ೫				
೫	ಹಸೂರು ೧೦		ಒಟ್ಟು ೩೦				

೯ ಚಿಕ್ಕಮಗಳೂರು ೧ ಕಡೂರು ೧೦ ೧೪ ಗುಲ್ಬರ್ಗ ೧ ಜೇವರ್ಗಿ ೧೦
೨ ಬೀರೂರು ೧೦ ೨ ಅಪ್ಜಲಪುರ ೧೦
೩ ತರೀಕೆರೆ ೧೦ ೩ ಶಹಾಪುರ ೧೦
೪ ಶೃಂಗೇರಿ ೧೦ ೪ ಗುರುಮಿಟಕಲ್ ೧೦
೫ ಮೂಡಿಗೆರೆ ೧೦ ೫ ಆಳಂದ ೧೦
೬ ಚಿಕ್ಕಮಗಳೂರು ೧೦ ೬ ಚಿಂಚೋಳಿ ೧೦
ಒಟ್ಟು ೬೦ ೭ ಕಮಲಾಪುರ ೧೦
೮ ಶಹಾಬಾದ್ ೧೦
ಒಟ್ಟು ೮೦
೧೦ ಚಿತ್ರದುರ್ಗ ೧ ಚಿತ್ರದುರ್ಗ ೧೦
೨ ಹೊಸದುರ್ಗ ೫ ೧೫ ಹಾಸನ ೧ ಅರಸೀಕೆರೆ ೧೦
೩ ಹಿರಿಯೂರು ೧೦ ೨ ಹಾಸನ ೧೦
೪ ಮಾಯಕೊಂಡ ೧೦ ೩ ಚನ್ನರಾಯಪಟ್ಟಣ ೧೦
೫ ಭರಮಾಸಾಗರ ೧೦ ೪ ಅರಕಲಗೂಡು ೧೦
೬ ಹೊಳಲ್ಕೆರೆ ೫ ೫ ಬೇಲೂರು ೧೦
ಒಟ್ಟು ೫೦ ೬ ಹೊಳೆನರಸೀಪುರ ೧೦
೭ ಗಂಡಸಿ ೧೦
೧೧ ದಾವಣಗೆರೆ ೧ ಚನ್ನಗಿರಿ ೧೦ ೮ ಶ್ರವಣಬೆಳಗೊಳ ೧೦
೨ ಹೊನ್ನಾಳಿ ೪೦ ೯ ಸಕಲೇಶಪುರ ೧೦
೩ ಹಿರಹರ ೧೦ ಒಟ್ಟು ೯೦
೪ ಜಗಳೂರು ೨೦
೫ ಹರಪನಹಳ್ಳಿ ೧೦ ೧೬ ಹಾವೇರಿ ೧ ರಾಣಿಬೆನ್ನೂರು ೧೫
೬ ದಾವಣಗೆರೆ ೧೦ ೨ ಹಾವೇರಿ ೧೫
ಒಟ್ಟು ೧೦೦ ೩ ಹಾನಗಲ್ ೧೫
೪ ಶಿಗ್ಗಂವ – ಸವಣೂರು ೧೦
೧೨ ಧಾರವಾಡ ೧ ಧಾರವಾಡ (ಗ್ರಾ) ೫ ೫ ಹಿರೇಕೆರೂರು ೧೦
೨ ಹುಬ್ಬಳ್ಳಿ (ಗ್ರಾ) ೧೦ ೬ ಬ್ಯಾಡಗಿ ೧೫
೩ ಕಲಘಟಗಿ ೧೦ ಒಟ್ಟು ೮೦
೪ ಕುಂದಗೋಳ ೫
೧೩ ಕೊಪ್ಪಳ ೧ ಗಂಗಾವತಿ ೧೦ ೨೧ ಚಡಿಕೇರಿ ೧ ವಿರಾಜಪೇಟೆ ೫
೨ ಕೊಪ್ಪಳ ೧೦ ೨ ಮಡಿಕೇರಿ ೫
೩ ಕನಕಗಿರಿ ೧೦ ೩ ಸೋಮವಾರಪೇಟೆ ೫
೪ ಯಲಮಿರ್ಗ ೧೦ ಒಟ್ಟು ೧೫
೫ ಕುಷ್ಟಗಿ ೧೦
ಒಟ್ಟು ೫೦ ೨೨ ರಾಯಚೂರು ೧ ದೇವದುರ್ಗ ೧೦
೨ ರಾಯಚೂರು ೧೦ ೧೮ ಕೋಲಾರ
೧ ಮುಳಬಾಗಿಲು ೧೦ ೩ ಕಲ್ಟಲ ೧೦
೨ ಗೌರಿಬಿದನೂರು ೧೦ ೪ ಲಿಂಗಸಗೂರು ೧೦
೩ ಬೇತಮಂಗಲ ೧೦ ಒಟ್ಟು ೪೦
೪ ಶಿಡ್ಲಘಟ್ಟ ೩೦
೫ ಬಾಗೇಪಲ್ಲ ೧೦ ೨೩ ಶಿವಮೊಗ್ಗ
೧ ಶಿವಮೊಗ್ಗ ೧೫
೬ ಚಿಕ್ಕಬಳ್ಳಾಪುರ ೧೦ ೨ ಸಾಗರ ೧೦
೭ ಕೋಲಾರ ೧೦ ೩ ಸೊರಬ ೧೦
೮ ಚಿಂತಾಮಣಿ ೧೦ ೪ ಶಿಕಾರಿಪುರ ೧೪೦
೯ ಮಾಲೂರು ೧೦ ೫ ಭದ್ರಾವತಿ ೧೦
೧೦ ಶ್ರೀನಿವಾಸಪುರ ೧೦ ೬ ಹೊಳೆಹೊನ್ನೂರು ೨೦
ಒಟ್ಟು ೧೧೦
೭ ತೀರ್ಥಹಳ್ಳಿ೨೫

೮ ಹೊಸನಗರ ೧೦

ಒಟ್ಟು ೨೪೦

೧೯ ಮಂಡ್ಯ — ೧ ಮಂಡ್ಯ ೧೦
೨ ಮದ್ದೂರು ೧೦ — ೨೪ ತುಮಕೂರು ೧ ಕುಣಿಗಲ್ ೧೦
೩ ಕಿರುಗಾವಲು ೧೦ — ೨ ತಿಪಟೂರು ೧೦
೪ ಕೆ ಆರ್ ಪೇಟೆ ೧೦ — ೩ ಕೊರಟಗೆರೆ ೧೦
೫ ಮಳವಳ್ಳಿ ೧೦ — ೪ ತುರವೇಕೆರೆ ೧೦
೬ ಕೆರೆಗೋಡು ೧೦ — ೫ ಗುಬ್ಬಿ ೧೦
೭ ಶ್ರೀರಂಗಪಟ್ಟಣ ೧೦ — ೬ ಸಿರಾ ೧೦
೮ ನಾಗಮಂಗಲ ೧೦ — ೭ ಚಿಕ್ಕನಾಯಕನಹಳ್ಳಿ ೧೦
೯ ಪಾಂಡವಪುರ ೧೦ — ೮ ಕಳ್ಳಂಬೆಳ್ಳ ೧೦
ಒಟ್ಟು ೯೦

೯ ಬೆಳ್ಳಾವಿ ೧೦
೧೦ ತುಮಕೂರು ೧೦
೨೦ ಮೈಸೂರು ೧ — ಹುಣಸೂರು ೧೦
ಒಟ್ಟು ೧೦೦

೨ ಟಿ ನರಸೀಪುರ ೧೦
೩ ನಂಜನಗೂಡು ೧೦ ೨೫ — ಉಡುಪಿ ೧ ಕಾಪು ೮೦
೪ ಪೆರಿಯಾಪಟ್ಟಣ ೧೦ — ೨ ಉಡುಪಿ ೬೦
೫ ಹೆಚ್ ಡಿ ಕೋಟೆ ೧೦ — ೩ ಬ್ರಹ್ಮಾವರ ೫೦
೬ ಕೆ ಆರ್ ನಗರ ೧೦ — ೪ ಕುಂದಾಪುರ ೧೦೦
೭ ಬನ್ನೂರು ೧೦ — ೫ ಹೈಂದೂರು ೪೦
೮ ಚಾಮರಾಜ ೧೦ — ೬ ಕಾರ್ಕಳ ೨೦
೯ ನರಸಿಂಹರಾಜ ೧೦
ಒಟ್ಟು ೩೫೦
ಒಟ್ಟು ೧೦೦

೨೧ ದಕ್ಷಿಣ ಕನ್ನಡ ೧ ಉಳ್ಳಾಲ ೨೫
೨ ಮಂಗಳೂರು ೨೫ ೨೭ — ಉತ್ತರ ಕನ್ನಡ ೧ ಕಾರವಾರ ೬೫
೩ ಸೂರತ್ಕಲ್ ೨೫ — ೨ ಅಂಕೋಲ ೫೫
೪ ಮಲ್ಕಿ – ಮೂಡಬಿದರೆ ೨೦ — ೩ ಕುಮಟ ೩೫
೫ ಬಂಟ್ವಾಳ ೨೫ — ೪ ಭಟ್ಕಳ್ ೫೦
೬ ಸುಳ್ಯಾ ೧೫ — ೫ ಹಳಿಯಾಳ ೨೦
೭ ಪುತ್ತೂರು ೧೫ — ೬ ಸಿರ್ಸಿ ೨೫
೮ ವಿಟ್ಲ ೨೦ — ಒಟ್ಟು ೨೫೦
೯ ಬೆಳ್ತಂಗಡಿ ೨೦

ಒಟ್ಟು ೧೯೦
ಒಟ್ಟು ಹುಮ್ಲಾ ೨೬೬೦

ಶ್ರೀ ಆರ್ ಧ್ರುವನಾರಾಯಣ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ ನಾನು ಅವರಿಗೆ ೨೦೦೬–೦೭ನೇ ಸಲಿನಲ್ಲಿ ಮೀನುಗಾರಿಕಾ ಇಲಾಖೆಯಿಂದ ವಸತಿಹೀನ ಮೀನುಗಾರಕೆ ವಸತಿ ಸೌಲಭ್ಯವನ್ನು ಕಲ್ಪಸುವ ಯೋಜನೆಯ ಅಡಿಯಲ್ಲಿ ಮನೆಗಳ ವಿತರಣೆಯಲ್ಲಿ ಅನುಸರಿಸಿರತಕ್ಕಂಥ ಮಾನದಂಡಗಳೇನು, ಎಂದು ಕೇಳಿದ್ದೇನೆ ಮಾನ್ಯ ಸಚಿವರು ಅರ್ಹ ನಿರ್ವಸತಿ ಮೀನುಗಾರರ ಬೇಡಿಕೆ ಪರಿಶೀಲಿಸಿ ಮನೆಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಉತ್ತರಿಸಿದ್ದಾರೆ

ಇದನ್ನು ಪರಿಶೀಲಿಸಿದಾಗ ಬಹಳಷ್ಟು ಅಸಮತೋಲನ ಇರುವುದು ಕಂಡು ಬರುತ್ತದೆ ೧೩೦ ಕ್ಷೇತ್ರಗಳಿಗೆ ತಲಾ ಯತ್ತತ್ತು ಮನೆಗಳನ್ನು ಹಂಚಿಕೆ ಮಾಡಲಾಗಿದೆ, ೧೧ ಕ್ಷೇತ್ರಗಳಿಗೆ ತಲಾ ೧೫ ಮನೆಗಳನ್ನು ಕೊಟ್ಟಿದ್ದಾರೆ, ೧ ಕ್ಷೇತ್ರಕ್ಕೆ ೧೪೦ ಮನೆಗಳನ್ನು ಅವರು ಹಂಚಿಕೆ ಮಾಡಿದ್ದಾರೆ ಮನೆಗಳ ವಿತರಣೆಗೆ ತಾವು ಅನುಸರಿಸಿರತಕ್ಕಂಥ ಮಾನದಂಡ ಏನಿದೆ ಏಬ ಬಗ್ಗೆ ಮಾನ್ಯ ಸಚಿವರು ಸರಿಯಾಗಿ ವಿವರಣೆ ಕೊಡಬೇಕು, ಈ ಬಗ್ಗೆ ಸದನಕ್ಕೆ ತಿಳಿಸಿಕೊಡಬೆಕು ಎಂದು ಕೋರುತ್ತೇನೆ

ಶ್ರೀ ಬಿ ನಾಗನಾಜ ಶೆಟ್ಟಿ ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಇರುವಂತಹ ಬಡ ಮೀನುಗಾರರ ಕುಟುಂಬಗಳಿಗೆ ಹೊಂದಿಕೊಂಡು ಎಲ್ಲಾ ಕ್ಷೇತ್ರಗಳಿಗೆ ಮನೆಗಳನ್ನು ವಿತರಣೆ ಮಾಡಲಾಗಿದೆ ಇನ್ನೂ ಅನೇಕ ಕ್ಷೇತ್ರಗಳ ಬಗ್ಗೆ ವಿವರಗಳನ್ನು ನಾನು ಅವರಿಗೆ ಒದಗಿಸಿದ್ದೇನೆ ನಮ್ಮ ಮಾಹಿತಿ ಪ್ರಕಾರ ಹೆಚ್ಚಿನ ಅವಶ್ಯಕತೆ ಇದೆ ಎಂದು ಕಂಡು ಬಂದ ಕಡೆಗೆ ಹೆಚ್ಚಿನ ಮನೆಗಳನ್ನು ನಾವು ಕೊಟ್ಟಿದ್ದೇವೆ ಇದ್ಕೆ ಪ್ರಥಮ ಕಂತಿನ ಹಣವನ್ನು ಬಿಡುಗಡೆ ಮಾಡಿದ್ದೇವೆ ಇನ್ನು ಮುಂದೆಯೂ ಕೂಡ ಮನೆಗಳನ್ನು ಹಂಚಿಕೆ ಮಾಡಲಿದ್ದೇವೆ ತಮಗೆ ಅವುಗಳ ಅವಶ್ಯಕತೆ ಇದ್ದರೆ, ಅರ್ಹರಿದ್ದರೆ, ಅವರ ಹೆಸರುಗಳನ್ನು ಕೊಟ್ಟರೆ ಅವರಿಗೆ ಮನೆಗಳನ್ನು ಕೊಡುವಂತಹ ವ್ಯವಸ್ಥೆ ಮಾಡುತ್ತೇವೆ

ಶ್ರೀ ಜೆ ಸಿ ಮಾಧುಸ್ವಾಮಿ ನಾವ್ಯಾರೂ ಎಂ ಎಲ್ ಎ ಗಳಲ್ಲವೇ ? ನೀವು ಯಾವ ರೀತಿಯಾಗಿ ಮನೆಗಳನ್ನು ಹಂಚಿದ್ದೀರಿ ? ಒಂದು ಕ್ಷೇತ್ರಕ್ಕೆ ೧೪೦, ಕ್ಷೇತ್ರಕ್ಕೆ ೮೦,ಒಂದು ಕ್ಷೇತ್ರಕ್ಕೆ ೬೦, ಕೆಲವು ಕಡೆಗಳಲ್ಲಿ ೧೦ ಮನೆಗಳನ್ನು ಹಂಚಿದ್ದೀರಿ ಇದಕ್ಕೇನು ಮಾನದಂಡವಿಲ್ಲವೇ? ಇಡೀ ದೇಶದ ವ್ಯವಹಾರವೆಲ್ಲಾ ಹೀಗೆಯೇ ನಡೆಯಬಹುದೇ? ಮನೆಗಳ ಹಂಚಿಕೆಗೆ ಏನು ಮಾನದಂಡ ಇಟ್ಟುಕೊಂಡಿದ್ದೀರಿ ? ಇದೆಲ್ಲಾ ನಿಮ್ಮಪ್ಪನ ಮನೆ ಆಸ್ತಿಯೇ? ಸರ್ಕಾರದ ದುಡ್ಡು ಎಂದರೆ ನಿಮ್ಮಪ್ಪನ ಮನೆ ಆಸ್ತಿಯೇ? ಒಂದು ಕ್ಷೇತ್ರಕ್ಕೆ ೧೪೦ ಕೊಟ್ಟು, ಮತ್ತೆ ತಂದು ನೀವು ಕೊಡುತ್ತಿದ್ದೀರಾ? ಅಲ್ಲಿ ನಿಮ್ಮನ್ನು ಹೇಳುವವರು ಕೇಳುವವರು ಯಾರೂ ಕೂಡ ಇಲ್ಲವೆಂದುಕೊಡಿರಾ?

ಉಪಾಧ್ಯಕ್ಷರು ಮಾನ್ಯ ಹಾಲಪ್ಪನವರೆ, ಈ ಪ್ರಶ್ನೆಗೆ ಮಾನ್ಯ ಉತತರಿಸುತ್ತಾರೆ ಆದರೆ ಅವರು ಈಗ ಕೌನ್ಸಲ್ ನಲ್ಲಿ ಇದ್ದಾರೆ Non-sense ಶಿಕಾರಪುರಕ್ಕೆ ೧೪೦ ಮನೆಗಳು, ನಮಗೆ ಮಾತ್ರ ಹತ್ತತ್ತು ಮನೆಗಳನ್ನು ಹಂಚಿಕೆ ಮಾಡಲಾಗಿದೆ ಈ ರೀತಿ ನೀವು ಹೇಗೆ ಕೊಡುತ್ತೀರಿ?

(ಮಾನ್ಯ ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ)

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ What is this going on?

(ಗೊಂದಲ)

ಅವರು ಮಂತ್ರಿಗಿರಿ ಮಾಡುತ್ತಿದ್ದಾರೋ ಅಥವಾ ಚಪರಾಸಿ ಕೆಲಸ ಮಾಡುತ್ತಿದ್ದಾರೋ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ ನಿಮಗೇನು ಬೇಕು ಅದನ್ನು ಕೇಳಿ, ಅದನ್ನು ಬಿಟ್ಟು ಆ ರೀತಿಯ ಪದ ಪ್ರಯೋಗ ಮಾಡುವುದು ಸರಿಯಲ್ಲ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ಆ ಪದವಲ್ಲದೆ ಇನ್ನೇನು ಪದ ಬಳಸಬೇಕು? ಹತ್ತನೇ ಸಲ ನಾವು ಈ ಸನದಲ್ಲಿ ಕೇಳುತ್ತಿದ್ದೇವೆ ರಸ್ತೆಯಲ್ಲೂ ಅದೇ ಕಾರ್ಯಕ್ರಮ ದೇವಸ್ಥಾನದಲ್ಲೂ ಅದೇ ಕಾರ್ಯಕ್ರಮ ನಿಮ್ಮ ಸರ್ಕಾರ ಬಂದ ಮೇಲೆ ಎಲ್ಲದರಲ್ಲೂ ಈ ರೀತಿಯ ತಾರತಮ್ಯ ಮಾಡುತ್ತಿದ್ದೀರಿ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮನೆಗಳ ವಿತರಣೆಗೆ ಏನು ಮಾನದಂಡ ಅನುಸರಿಸಲಾಗಿದೆ ಎಂಬುದನ್ನು ಅವರು ಹೇಳಲಿ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ನಮಗೇನು ಭಿಕಷೆ ಕೊಡುತ್ತಿದ್ದಾಋುಎಯೇ ?

(ಗೊಂದಲ)

ಉಪಾಧ್ಯಕ್ಷರು ಒಂದು ನಿಮಿಷ ಅವರು ಅನುಸರಿಸಿರುವ ಮಾನದಂಡವೇನು, ಎಂಬ ಬಗ್ಗೆ ಅವರೇನು ಹೇಳುತ್ತಾರೆ, ಕೇಳೋಣ ಇರಿ

(ಗೊಂದಲ)

ಶ್ರೀ ಸಿದ್ದರಾಮಯ್ಯ ಮಾನ್ಯ ಉಪಾಧ್ಯಕ್ಷರೆ, ಸರ್ಕಾರದ ಹಣ ಖರ್ಚು ಮಾಡಬೇಕಾದರೆ, ಸರ್ಕಾರದ ಕಾಯಕ್ರಮಗಳನ್ನು ಜಾರಿ ಮಾಡಬೇಕಾದರೆ, ಏನಾದರೂ ಅಳತೆಗೋಲು ಅಥವಾ ಮಾನದಂಡಗಳು ಇರಬೇಕಲ್ಲವೇ?

(ಗೊಂದಲ)

ಉಪಾಧ್ಯಕ್ಷರು ಮಾನ್ಯ ಅಂಜನಮೂರ್ತಿಯವರೆ, ನೀವು ಒಂದು ನಿಮಿಷ ಕುಳಿತುಕೊಳ್ಳಿ ಮಾನ್ಯ ಸಿದ್ದರಾಮಯ್ಯನವರು ಏನೋ ಕೇಳುತ್ತಿದ್ದಾರೆ ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ ನೀವು ಆಮೇಲೆ ಕೇಳಿ

(ಗೊಂದಲ)

ಶ್ರೀ ಸಿದ್ದರಾಮಯ್ಯ ಈಗ ಸರ್ಕಾರದ ಹಣ ಖರ್ಚು ಮಾಡಬೇಕಾದರೆ, ಸರ್ಕಾರದ ಕಾರ್ಯಕ್ರಮಗಳನ್ನು ಜಾರಿಮಾಡಬೇಕಾದರೆ ಏನಾದರೂ ಒಂದು ಅಳೆತೆಗೋಲು, ಮಾನದಂಡಗಳಿರಬೇಕಲ್ಲ ? ಇದು ಎಲ್ಲಾ ಕಡೆ ಈ ತರಹ ನಡೆಯುತ್ತಿದೆ, ಇದು ಸರಿಯಾದ ಕ್ರಮವಲ್ಲ,

ಸರ್ಕಾರದ ಹಣ ಖರ್ಚು ಮಾಡುವಾಗ ಅವರು MLA ಅಲ್ಲವೇ? ಪಕ್ಕದವರಿಗೆ ೫೦ ಮನೆ ಇನ್ನೊಬ್ಬರಿಗೆ ೧೦೦ ಮನೆ, ಇವರಿಗೆ ೧೫೦ ಮನೆ ಹೀಗೆಲ್ಲಾ ಕೊಟ್ಟರೆ, ಏನು ಮಂತ್ರಿಯಾದ ತಕ್ಷಣವೆ, ಸರ್ಕಾರದಲ್ಲಿದ್ದೇನೆಂದು ಸ್ವೇಚ್ಛೆಯಾಗಿ ಖರ್ಚು ಮಾಡಬಹುದು ಬೇರೆ ವಿರೋಧಪಕ್ಷದವರನ್ನು ನೆಗ್‌ಲೆಗ್ಟ್ ಮಾಡಬಹುದೆಂದು ಇದೆಯಾ? ಇದಕ್ಕೂ ಒಂದು ಮೀತಿ ಇರಬೇಕಲ್ಲ ? ಏನು ಬೇಕಾದರು ಇದೆಯಾ? ಯಾವ ಮಾನದಂಡವನ್ನಿಟ್ಟುಕೊಂಡು ಮಾಡಿದದಿರಿ ಹೇಳಿ ನೋಡೋಣ ? What is the yardstick? ಅವರು ಹೇಳಲಿ

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ ಮಾನ್ಯ ಉಪಾಧ್ಯಕ್ಷರೆ, ಹಿರಿಯ ಸದಸ್ಯರಿದಯಿಎ ಈ ವಿಷಯವನ್ನು ಅರ್ಥಮಾಡಿಕೊಂಡು ಮಾತನಾಡಬೇಕು, ನನ್ನದೊಂದು ಉಪ ಪ್ರಶ್ನೆ ಇದೆ

ಉಪಾಧ್ಯಕ್ಷರು ಹೆಗ್ಡೆಯವರೆ, ನಿಮ್ಮನ್ನು ಆಮೇಲೆ ಕರೆಯುತ್ತೇನೆ ಮಾತನಾಡಿ

ಶ್ರೀ ಜೆ ವಿ ಶ್ರೀರಾಮರೆಡ್ಡಿ ಉಪಾದ್ಯಕ್ಷರೆ, ಹೆಗ್ಡೆಯವರು ಉತ್ತರವನ್ನು ಕೊಡುವುದಕ್ಕೆ ಸಾಧಯವಿಲ್ಲ ಸಂಬಂಧಪಟ್ಟ ಮಂತ್ರಿಯೇ ಕೊಡಬೇಕು, ಪ್ರಶ್ನೋತ್ತರದಲ್ಲಿ ಮಂತ್ರಿಗಳು ಉತ್ತರವನ್ನು ಕೊಡಬೇಕು ಹೆಗ್ಡೆಯವರು ಏತಕ್ಕೆ ಕೊಡುತ್ತಾರೆ?

ಉಪಾಧ್ಯಕ್ಷರು ಅವರು ಸಹ ನಿಮ್ಮಂತೆ ಉಪ ಪ್ರಶ್ನೆಯಯನ್ನು ಕೇಳುವುದಕ್ಕೆ ಹೊರಟಿದ್ದಾರೆ, ಅದನ್ನು ನಾವು ಅಲ್ಲಿಗಳೆಯುವುದಿಲ್ಲ, ಈಗ ಸಿದ್ಧರಾಮಯ್ಯನವರು ಅದಕ್ಕೆ ಮಾನದಂಡವೇನೆಂದು ಕೇಳಿದ್ದಾರೆ ಮಂತ್ರಿಗಳು ಉತ್ತರವನ್ನು ಕೊಡಲಿ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಉಪಾಧ್ಯಕ್ಷರೆ, ಇಲ್ಲಿ ಜಿಲ್ಲಾವಾರು, ಕ್ಷೇತ್ರವಾರು ಹಂಚಿಕೆಯಾಗಿದೆ ರಾಜ್ಯದ ಎಲ್ಲಾ ಕ್ಷೇತ್ರಗಳಿಗೆ ಹತ್ತತ್ತು ಮನೆಗಳು, ಇದರಲ್ಲಿ ಶಿಕಾರಿಪುರಕ್ಕೆ ೧೪೦ ಮನೆಗಳು, ಅಂದರೆ ಇವರಿಗೆ

ಯಾರ್ಯಾರು ಬೇಕು, ಯಾವ್ಯಾವ ಮಂತ್ರಿಗಳು, ಇವರಿಗೆ ಬೇಕಾದವರು, ಮುಖಂಡರುಗಳಿಗೆ ಇವರು ಈ ರೀತಿ ಹಂಚಿಕೆಕೊಂಡರೆ, ಇದೇನಿದು ಸ್ವಂತ ಮನೆಯ ಆಸ್ತಿಯೇ? ಇದು ಯಾರದ್ದು? ಇದು ರಾಜ್ಯವೇ? ರಾಜ್ಯ ನಡೆಯುತ್ತಿದೆಯೇ? ಇದು ವ್ಯವಸ್ಥಿತವಾಗಿದೆಯೇ? ಮೈತ್ರಿ ಸರ್ಕಾರ ಎಂದು ಇವರಿವರೇ ಹಂಚಿಕೊಳ್ಳುವುದಕ್ಕೆ ಇದೇನಿದು ಲೂಟಿಯೇ? ರಾಜ್ಯವನ್ನು ಲೂಟಿ ಮಾಡುತ್ತಿದ್ದಾರಾ? ನಾಗರಾಜ ಶೆಟ್ಟರೆ, ನಿಮ್ಮ ಕ್ಷೇತ್ರಕ್ಕೂ ಇಲ್ಲ, ಬೇರೆಯವರ ಕ್ಷೇತ್ರಕ್ಕೆ ಎಲ್ಲ ಈ ತರಹ ಹೊರಟರೆ ಇದಕ್ಕೊಮುದ ನೀತಿ ಬೇಡವೇ? ಪ್ರತಿಯೊಂದರಲ್ಲೂ ರಸ್ತೆ ಕೊಡುತ್ತೀರಾ, ಕೆಲವರಿಗೆ, ಪ್ಯಾಕೇಜ್ ಕೊಡುತ್ತೀರಾ ಕೆಲವರಿಗೆ

ಉಪಾಧ್ಯಕ್ಷರು ವಾಟಾಳ್ ನಾಗರಾಜ್‌ರವರೆ, ಮಾಧುಸ್ವಾಮಿಯವರು ಕೇಳಿರುವ ಪ್ರಶ್ನೆ ಅದೆಯೇ, ಸಿದ್ಧರಾಮಯ್ಯನವರು ಹೇಳಿರುವುದು ಅದೆಯೇ, ನೀವು ಕೇಳುತ್ತಿರುವ ಪ್ರಶ್ನೆ, ಯಾವ ಮಾನದಂಡವನ್ನು ಉಪಯೋಗಿಸಿಕೊಂಡು ಈ ಮನೆಗಳನ್ನು ಕೊಟ್ಟಿದ್ದೀರೆಂಬುದಾಗಿದೆ ಈಗ ಎಲ್ಲರೂ ಅದೇ ಪ್ರಶ್ನೆಯನ್ನು ಕೇಳಿದರೆ ಅವರು ಏನೆಂದು ಉತ್ತರವನ್ನು ಕೊಡಬೇಕು? ಅವರು ಯಾವ ಮಾನದಂಡವನ್ನು ಉಪಯೋಗಿಸಿದ್ದಾರೆಂದು ಕೇಳೋಣ, ಸುಮ್ಮನೆ ಎಲ್ಲರೂ ಎದ್ದುನಿಂತುಕೊಂಡು ಕೈ ತೋರಿಸಿದ ಕೂಡಲೆ ಒಂದೇ ವಿಷಯದ ಮೇಲೆ ೨೦ ಜನ ಹೇಗೆಂದರೆ ಹಗೆ ಮಾತನಾಡಿದರೆ ಪ್ರಯೋಜನವೇನಾಗುತ್ತದೆ? ಅಲ್ಲ ಸಮಸ್ಯೆ ಒಂದೆ ತಾನೆ?

(ಗೊಂದಲ)

ಶ್ರೀ ಜೆ ವಿ ಶ್ರೀರಾಮರೆಡ್ಡಿ ಅವರು ಅವರಿಗೆ ಇಷ್ಟ ಬಂದಂತೆ ಹೇಗೆಂದರೆ ಹಾಗೆ ಮಾಡಬಹುದು?

(ಗೊಂದಲ)

ಉಪಾಧ್ಯಕ್ಷರು ಈಗ ಅವರೇನು ಹೇಳುತ್ತಾರೋ ಕೇಳೋಣ, ಸಮಸ್ಯೆ ಒಂದೇ ಅಲ್ಲವಾ, ದ್ರುವನಾರಾಯಣರವರಿಗೆ ಆಗಿರುವ ಸಮಸ್ಯೆ

ನಮಗೂ ಆಗಿದೆ, ಹೀಗಾಗಿ ಎಲ್ಲರಿಗೂ ಸಮಸ್ಯೆ ಆಗಿದೆ, ಅದಕ್ಕೆ ಏನು ಉತ್ತರ ಕೊಡುತ್ತಾರೋ ನೋಡೋಣ ಮಂತ್ರಿಗಳು ಟೆನ್ಷನ್ ಮಾಡಿಕೊಳ್ಳಬೇಕಾಗಿಲ್ಲ, ಸಮಸ್ಯೆಗೆ ಪರಿಹಾರ ಕೊಡುವ ರೀತಿಯಲ್ಲಿ ಮಾತನಾಡಬೇಕು

ಶ್ರೀ ನಾಗರಾಜ ಶೆಟ್ಟಿ ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಬಹಳ ಗೌರದಿಂದ ಹೇಳುತ್ತೇನೆ, ಅನೇಕ ಹಿರಿಯ ಸದಸ್ಯರು, ಕೆಲವು ನಾನ್ ಸೆನ್ಸ್ ನಂತರ ಅವಾಚ್ಯ ಶಬ್ದಗಳನ್ನು ಉಪಯೋಗಿಸಿದರು, ಅದನ್ನೆಲ್ಲಾ ತಾವು ಕಡತದಿಂದ ತೆಗೆಸಬೇಕು

ಉಪಾಧ್ಯಕ್ಷರು ಕಡತದಿಂದ ತೆಗೆಸಿ ಹಾಕಿದೆ ಬಿಡಿ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ಏತಕ್ಕೆ ತೆಗೆಸುತ್ತೀರಿ, ನಾನೇನು ಅನ್ ಪಾರ್ಲಿಮೆಂಟ್ ವರ್ಡ್ ಅನ್ನು ಉಪಯೋಗಿಸಿದ್ದೇನೆ ?

(ಗೊಂದಲ)

ಉಪಾಧ್ಯಕ್ಷರು ಮಾಧುಸ್ವಾಮಿಯವರೆ, ಅಪ್ಪನ ಮಗ, ಚಪರಾಸಿ ಅವೆಲ್ಲಾ ಬಳಸುವಿದಿಲ್ಲ, ಕೇಳುವ ವಿಚಾರವನ್ನು ಕೇಳಿ, ನಾಗರಾಜ ಶೆಟ್ಟರೆ ನೀವು ಹೇಳಿ

(ಗೊಂದಲ)

ಶ್ರೀ ನಾಗರಾಜ ಶೆಟ್ಟರು ಚಪರಾಸಿ, ಅಪ್ಪನ ಹಣ, ನಾನ್ಸೆಸ್ ಇದನ್ನೆಲ್ಲಾ ಕಡತದಿಂದ ತೆಗೆಸಬೇಕು ಸರ್

ಉಪಾಧ್ಯಕ್ಷರು ಆಗಲೆ ಅದು ಆಯಿತು ಮುಂದಕ್ಕೆ ಹೋಗಿ

ಶ್ರೀ ನಾಗರಾಜ ಶೆಟ್ಟರ್ ನಾವು ಗೌರವಸ್ಥಕುಟುಂಬದಿಂದ ಬಂದವರು, ನೋವಾಗುತ್ತದೆ

ಶ್ರೀ ಜೆ ಸಿ ಮಾಧುಸ್ವಾಮಿ ಏನ್ರೀ ಗೌರವ ಇದೆ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಹಿರಿಯ ಸದಸ್ಯರಿದ್ದಾರೆ, ಅನುಭವಿಗಳಿದ್ದಾರೆ, ಆದರೆ ಪ್ರಶ್ನೆಗಳಲ್ಲಿ ಯಾವುದಾದರು ಉಪ ಪ್ರಶ್ನೆ ಕೇಳುವುದಿದ್ದರೆ, ಕೇಳುವುದಕ್ಕೂ ಸೌಜನ್ಯವಾದ ಒಂಧು ಭಾಷೆಯು ಇದೆ, ಮಾಧುಸ್ವಾಮಿಯವರಿಗೆ ಆ ಭಾಷೆ ಹೊಸತಲ್ಲ, ಅವರು ಕೇಳುತ್ತಾರೆ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ಹೆಗ್ಡೆಯವರು ಉತ್ತರ ಕೊಡಬೇಕಾದ ಅವಶ್ಯಕತೆ ಇಲ್ಲ, ಮಂತ್ರಿಗಳು ಉತ್ತರ ಕೊಡಲಿ ನಾವು ಕುಳಿತುಕೊಳ್ಳುತ್ತೇವೆ, ನಾವು ಕೇಳುತ್ತೇವೆ

(ಗೊಂದಲ)

ಉಪಾಧ್ಯಕ್ಷರು ಸಮಸ್ಯೆಯನ್ನು ಹೀಗೆ ಮುಂದುವರೆಸಿಕೊಂಡು ಹೋಗುವುದಾದರೆ ಉತ್ತರವೇ ಸಿಗುವುದಿಲ್ಲ ಕೊನೆಗೆ ಇದಕ್ಕೆ ಒಂದು ಅಂತ್ಯವಾಗಬೇಕಲ್ಲ ?

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಂತ್ರಿಗಳು ಉತ್ತರವನ್ನು ಕೊಡಲಿ ನಮ್ಮದೇನೂ ತಕರಾರಿಲ್ಲ (ಗೊಂದಲ) ಮಂತ್ರಿಗಳು ಉತ್ತರವನ್ನು ಕೊಟ್ರೆ ನಾವು ಕೇಳುತ್ತೇವೆ, ಅವರ (ಸದಸ್ಯರ) ಉತ್ತರ ನಮಗೆ ಬೇಕಾಗಿಲ್ಲ

(ಗೊಂದಲ)

ಶ್ರಿ ಆರಗ ಜ್ಞಾನೇಂದ್ರ ಉಪಾಧ್ಯಕ್ಷರೆ, ಅವರು ಹೀಗೆ ಹರ್ಟ್ ಆಗುವ ರೀತಿಯಲ್ಲಿ ಮಾತನಾಡುವುದಾದರೆ ನಾವು ಮಾತನಾಡಬೇಕಾಗುತ್ತದೆ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಂತ್ರಿಗಳು ಉತ್ತರವನ್ನು ಕೊಡಲಿ, ಇಲ್ಲ ಆಗುವುದಿಲ್ಲ, ಮೊದಲು ಅವರು (ಸದಸ್ಯರು) ಕುಳಿತುಕೊಳ್ಳುವುದಕ್ಕೆ ಹೇಳಿ

(ಗೊಂದಲ)

ಉಪಾಧ್ಯಕ್ಷರು ಶ್ರೀರಾಮರೆಡ್ಡಿಯವರೆ ನೀವು ಕುಳಿತುಕೊಳ್ಳಿ, ಅರಗ ಜ್ಞಾನೇಂದ್ರರವರೆ, ನೀವು ಕುಳಿತುಕೊಳ್ಳಿ, ಈಗ ಮಾತನಾಡುತ್ತಲೇ ಇದ್ದರೆ ಅದಕ್ಕೆ ಕೊನೆಯೇ ಇಲ್ಲ, ಸಮಸ್ಯೆಗಳಿಗೆ ಏನಾದರು ಒಂದು ದಾರಿಯನ್ನು ಹುಡುಕಿಕೊಳ್ಳಬೇಕಲ್ಲ ?

(ಗೊಂದಲ)

ಶ್ರೀ ಜೆ ವಿ ಶ್ರೀರಾಮರೆಡ್ಡಿ ಅವರು ಉತ್ತರ ಕೊಡಲಿ ನಾವು ಕುಳಿತುಕೊಳ್ಳುತ್ತೇವೆ

ಉಪಾಧ್ಯಕ್ಷರು ನೀವು ಕುಳಿತುಕೊಳ್ಳದೆ ಅವರು ಹೇಗೆ ಉತ್ತರವನ್ನು ಕೊಡುತ್ತಾರೆ

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) " ಉಪಾಧ್ಯಕ್ಷರೆ, ಅವರಿಗೆ ನಮ್ಮ ಉತ್ತರಗಳು ತೃಪ್ತಿದಾಯಕವಾಗಿ ಇಲ್ಲದಿರಬಹುದು ಉತ್ತರ ತೃಪ್ತಿದಾಯಕವಾಗಿಲ್ಲದಿರುವ ಸಮದರ್ಭದಲ್ಲಿ ತಾವು ಯಾವ ಮಾನದಂಡವನ್ನು ಉಪಯೋಗಿಸಿರಿ ಯಾವುದನ್ನು ನಿರ್ಣಯ ಮಾಡಿದ್ದೀರಿ ಎಂದು ಕೇಳತಕ್ಕಂತಹ ಅಧಿಕಾರ ಎಲ್ಲರಿಗು ಇದೆ ಆ ಮಾನದಂಡದ ಬಗ್ಗೆ ಅವರು ವಿವರಿಸಬೇಕಾಗಿತ್ತು, ಸದಸ್ಯರಲ್ಲದೆ ಇರುವವರು ಸುಮ್ಮನೆ ಕೇಳಬಹುದೇ ವಿನಹ, ಮಂತ್ರಿಗಳೆ ಸರ್ಕಾರದ ಪರವಾಗಿ ಉತ್ತರವನ್ನು ಕೊಡಡಬೇಕಾಗುತ್ತದೆ, ಉತ್ತರವನ್ನು ಕೊಡುತ್ತಾರೆ ಈ ಸಂದರ್ಭದಲ್ಲಿ ಭಾವೋದ್ವೇಗಕ್ಕೆ ಒಳಗಾಗಿ ಪ್ರಯಶಃ ಹಿರಿಯರಾದ ಮಾಧುಸ್ವಾಮಿಯವರು ಮಾತನಾಡಿರಬಹುದು ನಾನ್ಸೆನ್ಸ್, ಚಪ್ರಾಸಿ

ಮೊದಲಾದ ಶಬ್ದಗಳನ್ನು ದಯವಿಟ್ಟು ಕಡತದಿಂದ ತೆಗೆಸಿರಿ ಒಂದೊಂದು ಸಲ ಮಾತನಡುತ್ತಿರುತ್ತೇವೆ, ಆದುದರಿಂದ ಆ ಶಬ್ಧಗಳನ್ನು ಕಡತದೀಮದ ವಾಪಸ್ ತೆಗೆದುಕೊಳ್ಳುವುದರ ಜೊತೆಗೆ ಮಾನದಂಡ ಏನಿದೆ, ಯಾವುದಕ್ಕೆ ನಿರ್ಣಯ ಮಾಡುತ್ತಿರುತ್ತೇವೆ, ಮೀನುಗಾರರ ಕೋ ಅಪರೇಟಿವ್ ಸೊಸೈಟಿ ರಿಜಿಸ್ಟರ್ ಆಗಿರಬಹುದು, ಎಷ್ಟು ನದಿಗಳು ಅಲ್ಲಿ ಬಂದಿರುತ್ತವೆ,ಸದಸ್ಯರು ಎಷುಟ ಜನರಿರುತ್ತಾರೆ, ಆ ಸದಸ್ಯರ ಅರ್ಜಿಗಳು ಎಷ್ಟು ಬಂದಿವೆ, ಅದರ ಅಗತ್ಯವೇನಿದೆ, ಇಂತಹ ವಿಚಾರಗಳ ಮಾನದಂಡದ ಒಂದು ಉಪಕ್ರಮದಲ್ಲಿ ಬರುತ್ತವೆ ಅದನ್ನು ನಾವು ವಿವರಿಸಿ ಹೇಳಿ, ಆದುದರಿಂದ ಪ್ರತಿಯೊಂದು ವಿಷಯದಲ್ಲೂ ಕೂಡ ಭಾವೋದ್ವೇಗಕ್ಕೆ ಒಳಗಾಗುವುದು ಬೇಡ, ಸದನ ಮತ್ತೆ ಪ್ರಶ್ನೋತ್ತರವನ್ನು ಮುಂದುವರೆಸುವುದು

ಶ್ರೀ ನಾಗರಾಜ ಶೆಟ್ಟಿ ಮಾನ್ಯ ಉಪಾಧ್ಯಕ್ಷರೆ, ಪ್ರಧಮವಾಗಿ ನಮ್ಮ ಹಿರಿಯ ನಾಯಕರು ಹೇಳಿದ ಹಾಗೆ ಆ ಶಬ್ದಗಳನ್ನು ಕಡತದಿಮದ ತೆಗೆದುಹಾಕಬೇಕು

ಉಪಾಧ್ಯಕ್ಷರು ಈಗ ಅದಾಯಿತು, ಮತ್ತೆ ಅದನ್ನು ಕೆದಕುವುದಕ್ಕೆ ಹೋಗಬೇಡಿ ಸಮಸ್ಯೆ ಬಂದಾಗ ನಾವು ಏನಾದರೂ ಒಂದು ಪರಿಹಾರವನ್ನು ಹುಡುಕಿಕೊಳ್ಳಬೇಕಲ್ಲ, ಒಂದು ವಿಷ ಗಳಿಗೆಯಲ್ಲಿ ಏನೋ ಒಂದು ಸಮಸ್ಯೆ ಆಗಿಹೋಗಿಬಿಟ್ಟಿದೆ, ತಾವು ಎಂತಹದ್ದು ತಾವು ಮಾತನಾಡುವುದು, ಸುಮ್ಮನೆ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಅಂತಹ ಶಬ್ದವನ್ನು ಅವರು ಪ್ರಯೋಗ ಮಾಡಿದ್ದಕ್ಕೆ ಕ್ಷಮೆ ಕೇಳಬೇಕು

(ಗೊಂದಲ)

ಉಪಾಧ್ಯಕ್ಷರು ತಾವೇನು ಉತ್ತರ ಕೊಡಬೇಕೊ ಅದನ್ನು ಕ್ಲೀನ್ ಆಗಿ ಕೊಡಿ, ನೀವು ಟೆನ್ಷನ್ ಮಾಡಿಕೊಳ್ಳಬೇಡಿ, ಆರಾಮವಾಗಿ, ಫ್ರೀ ಆಗಿ ಉತ್ತರವನ್ನು ಕೊಡಿ

(ಗೊಂದಲ)

ಉಪಾಧ್ಯಕ್ಷರು ನೀವು tention ಮಾಡಿಕೊಳ್ಳಬೇಡಿ ಆರಾಮವಾಗಿರಿ, ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಬೇಕಾದರೆ ಇನ್ನು ಅರ್ಧ ಗಂಟೆ ಸಮಯ ಗೆಗೆದುಕೊಳ್ಳಿ ಸ್ವಲ್ಪ ಶಂತಿಯಿಂದ ಉತ್ತರ ಕೊಡಿ ಏಕೆ tention ಮಾಡಿ ಕೊಳ್ಳುತ್ತಿರಿ?

ಶ್ರೀ ಬಿ ನಾಗರಾಜ ಶೆಟ್ಟಿ ನಾನು ಉತ್ತರ ಕೊಡುವುದಕ್ಕೆ ತಯಾರಾಗಿದ್ದೇನೆ ನಾನು ಶಾಂತಿಯಿಂದಲೇ ಇದ್ದೇನೆ

ಶ್ರೀ ಎಂ ಪಿ ಪ್ರಕಾಶ್ ಕಡತದಿಂದ ತೆಗೆಸಿದ್ದೇವೆಂದು ಒಂದು ಮಾತು ಹೇಳಿ

ಉಪಾಧ್ಯಕ್ಷರು ಅವರು ಹೇಳುವುದಕ್ಕಿಂತ ಮುಂಚಿತವಾಗಿ ಕಡತದಿಂದ ತೆಗೆಸಿದ್ದೇನೆ ಎಂದು ಹೇಳಿದ್ದೇನೆ

ಶ್ರೀ ಬಿ ನಾಗರಾಜ ಶೆಟ್ಟಿ ಮನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಕೇಳಿದಂತಹ ಅನೇಕ ಪ್ರಶ್ನೆಗಳಿಗೆ ಉತ್ತರ ಹೇಳುತ್ತಿದ್ದೇನೆ ಮೊದಲನೇ ಕಂತಿನಲ್ಲಿ ೨೬೭೯ ಮನೆಗಳನ್ನು ಬಿಡುಗಡೆ ಮಾಡಿದ್ದೇವೆ ನಮ್ಮ ವಿಧಾನ ಸಭೆ ಹಾಗೂ ವಿಧಾನಪರಿಷತ್ತಿನ ಸದಸ್ಯರುಗಳ ಕೇಳಿದ ಆಧಾರದ ಮೇಲೆ ಎಲ್ಲೆಲ್ಲಿ ಮೀನುಗಾರಿಕೆ ಅವಶ್ಯಕತೆ ಇದೆಯೇಒ, ಎಲ್ಲಿ ಎಷ್ಟು ಕೆರೆಗಳಿವೆ, ಎಲ್ಲಿ ಎಷ್ಟು ಜಲಾಶಯಗಳಿವೆ, ಮತ್ತು ವಿಶೇಷವಾಗಿ ಕರಾವಳಿ ಪ್ರದೇಶದ ಅಂದರೆ, ಉತ್ತರ ಕನ್ನಡ ಉಡುಪಿ ಮತ್ತು ದಕ್ಷಿಣ ಕರಾವಳಿ ಪ್ರದೇಶಕ್ಕೆ ಹೆಚ್ಚಿನ ಮನೆಗಳ ಅವಶ್ಯಕತೆ ಇರುವುದರಿಂದ, ಕರಾವಳಿ ಪ್ರದೇಶದಲ್ಲಿ ಹೆಚ್ಚಿನ ಮೆಗಳು ಮಳೆಗಾಲದಲ್ಲಿ ನಾಶವಾಗುವುದರಿಂದ ಅವರಿಗೆ ಒಂಧು ಮಾಡುವುದಕ್ಕೋಸ್ಕರ permanent solution ನಾವು ಮನೆಗಳನ್ನು ಮಾಡುಪಾಗಿಟ್ಟಿದ್ದೇವೆ ಎರಡನೆಯದಾಗಿ ಶಿಕಾರಪುರದ ಬಗ್ಗೆ ಹೇಳಿದರು, ಅಲ್ಲಿ ಕೂಡ ಒಂದು ಲೇನ್ ಮಾಡಿ ಮೀನು ಗಾರರಿಗೆ ಹೊಸದಾದ ಒಂದು project ತಯಾರು ಮಾಡುತ್ತಿದ್ದೇವೆ ಕಳೆದ ಹತ್ತಾರು ವರ್ಷಗಳಿಂದ ಈ ಬೇಡಿಕೆ ಇದೆ ನಾನು ಅದರ ಬಗ್ಗೆ ಹೆಚ್ಚಿನ

post mortem ಮಾಡುವುದಕ್ಕೆ ಹೋಗುವುದಿಲ್ಲ ಹತ್ತಾರು ವರ್ಷಗಳಿಂದ ಮನೆಗಳಿಗೆ ಅರ್ಧ ಹಣವನ್ನು ಕೊಟ್ಟು ಮನೆಗಳನ್ನು ಕಟ್ಟಿ ಮನೆಗಳು ಅಲ್ಲಿಯೇ ನಿಂತಿವೆ ಬಾಕಿ ಹಣ ಕೊಟ್ಟಿಲ್ಲ ಮನೆಗಳನ್ನು ಪೂರ್ತಿ ಮಾಡುವ ಹಾಗಿಲ್ಲ ಬಿಡುವ ಹಘಿಲ್ಲ, ಆ ರೀತಿ ಆಗಬಾರದು ಒಂದು ವಿಶೇಷವಾದ ಯೋಜನೆಯನ್ನು ಹಾಕಿ, ಒಂದೊಂದು ಗುಂಪು ಮನೆಗಳನ್ನು ಕಟ್ಟಿ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಒಂದು ಯೋಜನೆಯನ್ನು ನಾವು ತಯಾರು ಮಾಡಿದ್ದೇವೆ ಆ ಕಾರಣಕ್ಕಾಗಿ ನಾವು ಶಿಕಾರಪುರದಲ್ಲಿ ಪ್ರಾರಂಭ ಮಾಡಿದ್ದೇವೆ ಅಷ್ಟೆ ಅದಕ್ಕೋಸ್ಕರ ಈಗ ಮಂಗಳೂರು, ಉಡುಪಿ, ಉತ್ತರ ಕನ್ನಡ ಈ ಜಿಲ್ಲೆಗಳಲ್ಲಿ ಮಾಡಿದ್ದೇವೆ ನಾನು ಮಾನ್ಯ ಸದಸ್ಯರುಗಳಿಗೆ ಸ್ಪಷ್ಟವಾಗಿ ಹೇಲಿದ್ದೇನೆ ಎಲ್ಲೆಲ್ಲಿ ನಿಜವಾದ ಅರ್ಹರಿದ್ದಾರೆ ಅವರ ಹೆಸರುಗಳನ್ನು ಕೊಡಿ, ಅದರಲ್ಲಿ ಬಹಳ ಸ್ಪಷ್ಟವಾಗಿದೆ, ಕೆಲವು ರೂಲ್ಸ್ ಅಡ್ ರೆಗ್ಯುಲೇಷನ್ಸ್ ಇದೆ ಅದರ ಅಡಿಯಲ್ಲಿ ಮಾನ್ಯ ಶಾಸಕರ ಒಪ್ಪಿಗೆ ಮೇರೆಗೆ ಆ ಪಟ್ಟಿಯನ್ನು ತಯಾರು ಮಾಡಿ ನಾವು ಮನೆಗಳನ್ನು ಕೊಡುತ್ತಿದ್ದೇವೆ ಅದೇ ರೀತಿ ಮನೆಗಳನ್ನು ಕೊಡುತ್ತೇನೆ ಎಮದು ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ

ಶ್ರೀ ಆರ್ ದ್ರುವನಾರಾಯಣ ಮಾನ್ಯ ಉಪಾಧ್ಯಕ್ಷರೆ ಸಚಿವರು ಉತ್ತರ ಕೊಟ್ಟಿದ್ದಾಋಎ ನಿಜವಾಗಿಯೂ ಅವರು ಮಾನದಂಡಗಳನ್ನು ಅನುಸರಿಸುತ್ತಿಲ್ಲ ಏಕೆಂದರೆ ಆಶ್ರಯ, ಅಂಬೇಡ್ಕರ್, ಮತ್ತು ಇಂದಿರಾ ಆವಾಸ್ ಮನೆಗಳಿಗೆ ಗ್ರಾಮ ಸಂಪರ್ಕ ಸಭೆ ಕರೆಯಬೇಕೆಂದು ಯಾವ ರೀತಿ ಮಾನದಂಡ ಇದೆಯೋ ಹಗೆ ಇಲ್ಲಿ ಯಾವ ಮಾನದಂಡ ಇಲ್ಲದೆ ಹೋದರೂ ಕೂಡ ಚಾಮರಾಜನಗರ ಜಿಲ್ಲಕ್ಷೇತ್ರಗಳಲ್ಲಿ ಮೀನುಗಾರರ ಸಂಖ್ಯೆ ಬಹಳಷ್ಟು ಇದೆ ಮೀನುಗಾರರ ಸಂಘಗಳಿವೆ ನಾನು ಮಾನ್ಯ ಸಚಿವರಿಗೆ ೨೦೦ ಜನರ ಸದಸ್ಯತ್ವವುಳ್ಳ ಸಂಘದ ಮೀನುಗಾರರ ಪಟ್ಟಿಯನ್ನು ಕೊಟ್ಟಿದ್ದೇನೆ ಅವರು ನಮ್ಮ ಕ್ಷೇತ್ರಕ್ಕೆ ಕೊಟ್ಟಿರತಕ್ಕಂಥದ್ದು ಹತ್ತು ಮನೆಗಳು ಮಾತ್ರ, ತಮಗೆ ಗೊತ್ತಿರುವ ಹಾಗೆ ನಮ್ಮ ಜಿಲ್ಲೆ ಅತ್ಯಂತ ಹಿಂದುಳಿದಿರುವ ಜಿಲ್ಲೆ ಡಾ ನಂಜುಂಡಪ್ಪ ವರದಿ ಆದಾರದ ಪ್ರಕಾರ ಚಾಮರಾಜನಗರದಲ್ಲಿ most backward talluks ಐದು ಕ್ಷೇತ್ರಗಳು ಬಹಳ ಹಿಂದುಳಿದಿವೆ

ಅಂಥದ್ದರಲ್ಲಿ ಅವರು ನಮ್ಮನ್ನು ಕಡೆಗಣಿಸಿದ್ದಾರೆ ಶಿಕಾರಿಪುರ ಮುಂದುವರೆದ ತಾಲ್ಲೂಕು ಅದು Most improved taluk ಅದು ಉತ್ತರ ಕನ್ನಡ ಇರಬಹುದು, ದಕ್ಷಿಣ ಕನ್ನಡ ಇರಬಹುದು, ಮತ್ತು ಉಡುಪಿ ಈ ಜಿಲ್ಲೆಗಳಲ್ಲಿ ಸಾಕಷ್ಟು ಮನೆಗಳನ್ನು ಕೊಟ್ಟಿದ್ದಾರೆ ಯಾವುದೇ ತರಹದ ಮಾನದಂಡಗಳನ್ನು ಅವರು ಅನುಸರಿಸಿಲ್ಲ ಅವರಿಗೆ ಮನೆಗಳನ್ನು ಕೊಟ್ಟಿರುವುದಕ್ಕೆ ನಮ್ಮ ವಿರೋಧ ಇಲ್ಲ ಉಡುಪಿ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಕೊಡುವುದಕ್ಕೆ ನಮ್ಮ ವಿರೋಧ ಇಲ್ಲ ಆದರೆ ನಮ್ಮಲ್ಲಿ ಅತ್ಯಂತ ಹಿಂದುಳಿದ ಜಿಲ್ಲೆ ಜೊತೆಗೆ ಮೀನುಗಾರರ ಸಂಖ್ಯೆ ಅತಿ ಹೆಚ್ಚಿನ ಸಂಖ್ಯೆಯಲ್ಲಿದೆ ಅದನ್ನು ಪಟ್ಟಿ ಸಮೇತ ನಾನು ಅವರಿಗೆ ಕೊಟ್ಟಿದ್ದೇನೆ ಮಾನ್ಯ ಉಪಾಧ್ಯಕ್ಷರೆ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ನಮ್ಮ ಜಿಲ್ಲೆಗೆ ಅತಿ ಹೆಚ್ಚಿನ ಮನೆಗಳನ್ನು ಕೊಡಬೇಕು, ಮತ್ತು ನನ್ನ ಮತ ಕ್ಷೇತ್ರಕ್ಕೆ ಕೂಡ ಕೊಡಬೇಕು ಇನ್ನು ಮುಂದೆ ಸರಿಯಾದ ರೀತಿಯಲ್ಲಿ ಮಾನದಂಡಗಳನ್ನು ಅವರು ಅನುಸರಿಸಬೇಕು ಎನ್ನತಕ್ಕಂಥದ್ದು ನನ್ನ ಒತ್ತಾಯ

ಶ್ರೀ ಬಿ ನಾಗರಾಜಶೆಟ್ಟಿ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಒಳ್ಳೆಯ ಸೂಚನೆಯನ್ನು ಕೊಟ್ಟಿದ್ದಾಖಿುಎ ಮುಂದಿನ ದಿನಗಳಲ್ಲಿ ಅವರು ಕೊಟ್ಟಿರುವಂತಹ ಸಲಹೆಯನ್ನು ಪರಿಶೀಲಿಸುತ್ತೇನೆ ಆದರೆ ತಾವು ಅಪ್ಪಣೆ ಕೊಟ್ಟರೆ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಚೆ ಪಡುತ್ತೇನೆ ಏಕೆಂದರೆ, ನಾವೂ ಕೂಡ ಆ ಬದಿಯಲ್ಲಿದ್ದೆವು, ಆಗ ನಮಗೆ ಒಂದು ಮನೆ ಸಿಗಲಿಲ್ಲ ಈಗ ನಾನು ಪ್ರತಿಯೊಂದು ಜಿಲ್ಲೆಗೆ ಕೂಡ ಮನೆಗಳನ್ನು ಕೊಟ್ಟಿದ್ದೇನೆ ಅದರ ಪಟ್ಟಿಯನ್ನು ಎಲ್ಲರಿಗೂ submit ಮಾಡಿದ್ದೇವೆ ನಾನು ಯಾವುದೇ ರೀತಿಯ ತಾರತಮ್ಯ ಮಾಡಿಲ್ಲವೆಂದು ತಮ್ಮ ಮೂಲಕ ಅವರಿಗೆ ಹೇಳುವುದಕ್ಕೆ ಇಚ್ಚೆ ಪಡುತ್ತೇನೆ

ಡಾ ಕೆ ಅನ್ನದಾನಿ ತಾರತಮ್ಯವಾಗಿಲ್ಲ ಹೆಚ್ಚು ಕಡಿಮೆ ಅಂತೂ ಆಗಿದೆ

ಶ್ರೀ ಜಿ ಸಿ ಮಾಧುಸ್ವಾಮಿ ಪಟ್ಟಿ ನಮ್ಮ ಮುಂದೆ ಇದೆ ಚಿತ್ರದುರ್ಗ ಜಿಲ್ಲೆಯಲ್ಲಿ ಹೊಸದುರ್ಗಕ್ಕೆ ಮತ್ತು ಹಿರಿಯೂರಿಗೆ ಏನು ವ್ಯತ್ಯಾಸ ಇದೆ ಎಂದು ಹೇಳಬೇಕು ಹೊಳಲ್ಕೆರೆಗೆ ಮತ್ತು ಭರಮಸಾಗರಕ್ಕೆ ಇರುವ ವ್ಯತ್ಯಾಸವನ್ನು ಹೇಳಬೇಕು ಹೊಳೆ ಹೊನ್ನೂರಿಗೆ ಇರುವ ವ್ಯತ್ಯಾಸವನ್ನು ಹೇಳಬೇಕು ಅವರು ಹೇಳಿದ ೧೪೦ ಮನೆಗಳ ಪ್ಯಾಕೇಜ್ ಯಾವ ಸಮುದ್ರ ಯಾವತ್ತು ಅಲ್ಲಿ ಮಳೆ ಹೆಚ್ಚಾಗಿ ಆಗಿತ್ತು, ಎಂದು ಹೇಳಬೇಕು

ಉಪಾಧ್ಯಕ್ಷರು ಮಾಧುಸ್ವಾಮಿಯವರೆ, ನಿಮ್ಮ ಪ್ರಶ್ನೆ ಬಹಳ important ಎಂದು ಕಾಣುತ್ತದೆ ಇದನ್ನು ಅರ್ಧ ಗಂಟೆ ಚರ್ಚೆಗೆ ಇಟುಕೊಳ್ಳೋಣ ಬಿಡಿ

ಶ್ರೀ ಜೆ ಸಿ ಮಾಧುಸ್ವಾಮಿ ಪ್ರಶ್ನೆ ಇರುವುದು ಮನೆಯದಲ್ಲ ಪ್ರಶ್ನೆ ಇರುವುದು ನೀತಿಯದು

ಉಪಾಧ್ಯಕ್ಷರು ಅವರು ಹೇಳಿರುವ ವಿಚಾರಕ್ಕೆ ಅವರು ಉತ್ತರ ಕೊಡುತ್ತಾರೆ ಒಂದೊಂದು ಪ್ರಶ್ನೆಗೆ ಸಮಸ್ಯೆ ಬಗೆಹರಿಯದೆ ಹೋದರೆ ಹೇಗೆ ?

ಶ್ರೀ ಜೆ ಸಿ ಮಾಧುಸ್ವಾಮಿ ಒಂದು ಕಡೆ ಐದು ಮನೆ ಕೊಡುವುದು, ಒಂದು ಕಡೆ ೧೪೦ ಮನೆ ಕೊಡುವುದು, ಈಗ ಅವರು ಏನು ಹೇಳಿದ್ದಾರೆ, ಶಿಕಾರಿಪುರಕ್ಕೆ ಏನು package ಇಟ್ಟಿದ್ದಾರೆ ಬೇರೆ ಕಡೆ ಯಾವ ಯಾವ package ಇಲ್ಲ ಎನ್ನುವುದನ್ನು ಈ ಸಭೆಯ ಮುಂದೆ ಇಡಬೇಕು, ಅದು ಏನೇನು ಮಾಹಿತಿ ಇದೆ ಅದನ್ನು ದಯಮಾಡಿ ಸಭೆಯ ಮುಂದಿಡಬೇಕು ಯಾವ ಆಧಾರದ ಮೇಲೆ ಮನೆ ಕೊಟ್ಟಿದ್ದಾರೆ, ಏನು guide lines follow ಮಾಡಿದ್ದಾರೆ, ನಾನು South Canara ಬಗ್ಗೆ ಕೇಳಲಿಲ್ಲ Coast areaದ್ದು ನಾನು ಕೇಳಲಿಲ್ಲ ನನಗೆ ಗೊತ್ತಾಗುತ್ತದೆ ಈಗ ನೀವು ಬಯಲು ಸೀಮೆಯಲ್ಲಿ ಒಂದು ತಾಲ್ಲೂಕಿನಲ್ಲಿ ೨೫ ಮನೆ,

ಒಂದು ತಾಲ್ಲೂಕಿನಲ್ಲಿ ೧೦ ಮನೆ, ಒಂದು ತಾಲ್ಲೂಕಿನಲ್ಲಿ ೫ ಮನೆ, ಇನ್ನೊಂದು ತಾಲ್ಲೂಕಿನಲ್ಲಿ ೫೦ ಮನೆ

ಉಪಾಧ್ಯಕ್ಷರು ನಿಮ್ಮ ಬಳಿ ಮಾಹಿತಿ ಇದೆಯಾ? ಅವರು ಮಾಹಿತಿ ಕೊಡುತ್ತೇನೆಂದು ಹೇಳಿದ್ದಾರೆ ಇಲ್ಲವೆಂದರೆ ಅವರ chamber ಗೆ ಹೋಗಿ ಒಂದು ಮೀಟಿಂಗ್ ಮಾಡಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಿ

ಶ್ರೀ ವಾಆಳ್ ನಾಗರಾಜ್ ನಮ್ಮಲ್ಲಿಯೂ ಸುವರ್ಣವತಿ ಜಲಾಶಯ ಇದೆ ಚಿಕ್ಕ ಹೊಳೆ ಜಲಾಶಯ ಇದೆ, ಮೀನುಗಾರರಿದ್ದಾರೆ ನಮಗೆ ಸರಿಯಾಗಿ ಒಂದೊಂದು ಕ್ಷೇತ್ರಕ್ಕೆ ೧೦-೧೦ ಮನೆಗಳನ್ನು ಕೊಟ್ಟಿದದಾಖುಎ ಮಾನ್ಯ ನಾಗರಾಜ ಶೆಟ್ಟಿಯವರು ಈ ತರಹ ಪಕ್ಷಪಾತ ಮಾಡುತ್ತಾರೆಂದು ನಾನು ಕಂಡಿರಲಿಲ್ಲ ನೀವು ಹೀಗೆ ಮಾಡಬಾರದು ಇದು ಮಾಡುವುದರಿಂದ ಏನಾಗುತ್ತದೆ ಎಂದರೆ, ಈ ಸದನಕ್ಕೆ ಅಗೌರವವಾಗುತ್ತದೆ, ಮತ್ತು ರಾಜ್ಯಕ್ಕೂ ಅಗೌರವವಾಗುತ್ತದೆ ಒಳ್ಳೆಯ ಸೂಚನೆ ಅಲ್ಲ ಇದು

ಉಪಾಧ್ಯಕ್ಷರು ನಾಗರಾಜ್ ರವರೇ, ನನ್ನದೊಂದು ಸಣ್ಣ ಒಂದು ಸಲಹೆ, ನಾವು ಈ ವಿಚಾರದಲ್ಲಿ ಬಹಳ ಚಿಕ್ಕವರು ನಿಮ್ಮ ಅನುಭವ ನಮಗಿಲ್ಲ ನಮ್ಮ ಬೆನ್ನು ಈಗ ನಮಗೆ ಕಾಣುವುದಿಲ್ಲ ಬೆನ್ನು ಎಲ್ಲಿದೆ ಎಂದು ತಾವು ಹೇಳಿಕೊಟ್ಟಿದ್ದೀರಿ ಎಲ್ಲಿ ತಪ್ಪು ಮಾಡಿದ್ದಾರೆಂಬುದು ಅವರಿಗೆ ಸ್ವಲ್ಪ ಮನದಟ್ಟಾಗಿದೆ ಅವರು ಅದನ್ನು ಸರಿ ಮಾಡುತ್ತೇನೆಂದು ಹೇಳಿದ ಮೇಲೆ ಕೂಡ ನಾವು ಪದೇ ಪದೇ ಅದನ್ನೇ ಕೇಳುತ್ತಾ ಹೋದರೆ ಹೇಗೆ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅವರು ಅದನ್ನು ಸರಿ ಮಾಡುತ್ತೇನೆಂದು ಹೇಳಲಿಲ್ಲ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಉಪಾಧ್ಯಕ್ಷರೆ, ಸಂಸದೀಯ ವ್ಯವಹಾರಗಳು ಸಚಿವರು ಇಲ್ಲಿದ್ದಾರೆ, ನಮ್ಮ ಕಲಾಪಗಳು ನಿಯಮಾವಳಿಗಳ ಚೌಕಟ್ಟಿನ ಒಳಗೆ ನಡೆಯಬೇಕಾಗುತ್ತದೆ ಅವರ

ಪ್ರಶ್ನೆಯಲ್ಲಿ ಕ್ಷೇತ್ರವಾರು ವಿವರಗಳು ಕೊಡಿ ಎಂದು ಹೇಳಿದ್ದಾರೆ, ಇವರು ಎಲ್ಲ ಕ್ಷೇತ್ರಗಳ ವಿವರಗಳನ್ನು ಕೊಟ್ಟಿದ್ದಾಋಾಎ ಮಾನ್ಯ ಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಯಾವುದೇ ತಾರತಮ್ಯ ಮಾಡಿಲ್ಲವೆಂದು ಹಏಳಿದರು ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಎದ್ದು ನಿಂತು ಉದಾಹರಣೆಗೆ ಚಿತ್ರದುರ್ಗ ಜಿಲ್ಲೆ ತೆಗೆದುಕೊಂಡಿದ್ದಾಋಾಎ ಹಿರಿಯೂರಿಗೆ ಮತ್ತು ಹೊಸದುರ್ಗಕ್ಕೆ ಏನು ವ್ಯತ್ಯಾಸ, ಇಲ್ಲಿ ಜಾಸ್ತಿ ಮನೆಗಳನ್ನು ಕೊಟ್ಟಿದ್ದೀರಿ, ಅಲ್ಲಿ ಕಡಿಮೆ ಮನೆಗಳನ್ನು ಕೊಟ್ಟಿದ್ದೀರಿ ಅದಕ್ಕೆ ಕಾರಣ ಕೊಡಿ ಎಂದು ಕೇಳಿದರು ಅವರು ಕೇಳತಕ್ಕಂತಹ ಉದ್ದೇಶ, ಅವರು ಕರಾವಳಿ ಮತ್ತು ಬಯಲು ಸೀಮೆಗಳ ಬಗ್ಗೆ ಕೇಲುತ್ತಿಲ್ಲ ಒಂದೇ ಜಿಲ್ಲೆಯಲ್ಲಿ ಎರಡು ಕ್ಷೇತ್ರಗಳ ಮಧಯೆ ತಾರಮ್ಯ ಮಾಡಿದ್ದೀರಿ ನಾನೇನು ಹೇಳುತ್ತೇನೆಂದರೆ, ಯಾರೇ ಆಗಲಿ, ನೀವು ತಾರತಮ್ಯ ಮಾಡಲಿಲ್ಲವೆಂದು ಉತ್ತರ ಹೇಳಿ, ಅಂಕಿ ಸಂಖ್ಯೆಗಳು ನೀವು ಹೇಳತಕ್ಕಂತಹ ವಿಚಾರದ ಸತ್ಯಕ್ಕೆ ದೂರವಾಗಿದ್ದರೆ, privilegeಗೆ ಒಳಗಾಗುತ್ತೀರಿ ನಾವು ಸದನವನ್ನು ಸಂತೆಯಲ್ಲಿ ವ್ಯಾಪಾರವನನು ನಡೆಸಿಕೊಂಡು ಹೋಗುವ ಹಗೆ ನಡೆಸಿಕೊಂಡು ಹೋಗುವುದ್ಕೆ ಬರುವುದಿಲ್ಲ ಎಲ್ಲರೂ ಹೇಳುವುದು, ಎಲ್ಲರೂ ಕೂಗುವುದು, ಹಾಗಾದರೆ ತೋಳು ಬಲ ಮತ್ತು ಗಂಟಲು ಬಲ ಜಾಸ್ತಿಯಾದರೆ ನಮಗೆ ಅಷ್ಟು ಕೂಗುವುದಕ್ಕಾಗುವುದಿಲ್ಲ ನಾವು ನಿಗ್ರಹಿಸಬೇಕು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಿದ್ದಾರೆ, ಮಾನ್ಯ ಹಿರಿಯ ಸದಸ್ಯರು ಭಾವೋದ್ವೇಗಕ್ಕೆ ಒಳಗಾಗಿ ಕೆಲವು ಪದಗಳನ್ನು ಉಪಯೋಗಿಸಿದ್ದಾರೆ ಅದನ್ನು ತೆಗೆಸಿ ಎಂದು ತಾವು ಆಜ್ಞೆ ಮಾಡಿದಿರಿ ಹೌದು ಸದಭಿರುಚಿ ದೃಷ್ಟಿಯಿಂದ ಸದನದ ಕಲಾಪಗಳ ಹಿರಿಮೆ ಕಾಪಾಡುವ ದೃಷ್ಟಿಯಿಂದ ಅದು ಇರಬಹುದು ಅವರದೂ ನಮ್ಮದೂ ಯಾರದೂ ಆಕ್ಷೇಪಣೆ ಇಲ್ಲ ಅದು ಎಲ್ಲರಿಗೂ ಅನ್ವಯಿಸಬೇಕ್ಕಲ್ಲ ಮಂತ್ರಿಗಳಾದವರು ಸರ್ಕಾರದ ವತಿಯಿಂದ ಜವಾಬ್ದಾರಿಯುತವಾಗಿ ಇಡೀ ರಾಜ್ಯದ ಬೊಕ್ಕಸದಲ್ಲಿರುವಂತಹ ಹಣಕ್ಕೆ ಇವರು ಟ್ರಸ್ಟೀಸ್ ಸರ್ಕಾರ ಎಂದರೆ ದೇವದಸ್ಥಾನದ ಧರ್ಮದರ್ಶಿಗಳು ಇದ್ದ ಹಘೆ ಇಡೀ ಸರ್ಕಾರದ ಹಣ ಇವರ ಕೈಯಲ್ಲಿ ಇಟ್ಟಿರುತ್ತೇವೆ ಸಂಖ್ಯಾ ಬಲ ಹೆಚ್ಚಿರುವ ಕಾರಣದಿಂದ

ನಮ್ಮ ನಂಬಿಕೆಗೆ ಅರ್ಹರಾಗಿ ಆಡಳಿತವನ್ನು ನಡೆಸಿಕೊಂಡು ಸರ್ಕಾರ ಎಂದು ಹೇಳಿ ಆ ಹಣದ ಉಸ್ತುವಾರಿ ನೋಡಿಕೊಳ್ಳತಕ್ಕಂಥದ್ದು ಅಷ್ಟೆ ತಾರತಮ್ಯ ಇದೆ ಎಂದು ಹೇಳಿ ಅವರು ಅಂಕಿ ಅಂಶಗಳನ್ನು ತೋರಿಸುವಾಗ ಅವರಿಗೆ ಇರತಕ್ಕಂಥದ್ದು ಎರಡೇ ಮಾರ್ಗ ಅವರು ಅನದನು ಸಮರ್ಥಿಸಿಕೊಳ್ಳಬೇಕು ಹೊಸದುರ್ಗಕ್ಕೆ ಮತ್ತು ಹಿರಿಯೂರಿಗೆ ಏನು ವ್ಯತ್ಯಾಸ ಇದೆ, ಯಾವ ಕಾರಣಗಳಿಗಾಗಿ ಅದನ್ನು ಮಾಡಬೇಕಾಯಿತು, ಎಲ್ಲಿ ಎಡವಿದ್ದೇವೆಂದು ಒಪ್ಪಿಕೊಳ್ಳಬೇಕು ಮಾನ್ಯ ಪ್ರಕಾಶ್ ರವರಿಗೆ ಗೊತ್ತಿದೆ Confuciuse ಎಂಬ ಚೈನದ ಒಬ್ಬ ಮಹಾನ್ ಚಿಂತಕ ಮಾತನ್ನು ಹೇಳುತ್ತಾನೆ ತಪ್ಪು ಮಾಡಿದಾಗ ತಪ್ಪು ಒಪ್ಪಿಕೊಂಡರೆ ಒಂದೇ ತಪ್ಪಾಗುತ್ತದೆ ತಪ್ಪನ್ನು ಮಾಡಿ ನಿರಾಕರಿಸಿದರೆ, ಮಾಡಿದ್ದು ಒಂದು ತಪ್ಪು, ನಿರಾಕರಣೆ ಮಾಡಿದ್ದು ಒಂದು ತಪ್ಪು ಎರಡು ತಪ್ಪುಗಳಾಗುತ್ತವೆ ತಪ್ಪು ಎಲ್ಲರೂ ಮಾಡಿರುತ್ತಾರೆ ಸಹಜ ಆಗಿರಬಹುದು ಒಂದು ಆವೇಶದಲ್ಲಿ ಆಗಿರಬಹುದು, ಉನ್ಮಾದದಲ್ಲಿ ಆಗಿರಬಹುದು, ಯಾರಿಗೋ ಸಹಾಯ ಮಾಡಬೇಕೆಂದು ಆಗಿರಬಹುದು, ಅದನ್ನು ಒಪ್ಪಿಕೊಂಡರೆ ತಪ್ಪಾಗುವುದಿಲ್ಲ ತಪ್ಪುಗಳನ್ನು ಮಾಡಿ ಅದನ್ನೆಲ್ಲ ಸಮರ್ಥನೆ ಮಾಡಿಕೊಂಡು ಅದೆಲ್ಲಾ ರೆಕಾರ್ಡ್‌ಗೆ ಹೋಗತಕ್ಕಂಥದ್ದು ತಾರತಮ್ಯ ಇಲ್ಲವೆಂದು ಹೇಳತಕ್ಕಂದಾದ್ದು, ತಾರತಮ್ಯ ಇಲ್ಲಿ ಕಾಣತಕ್ಕಂಥದ್ದು, ಇದಕ್ಕೆ ನಾವು ಭಾಗಿಗಳಾಗಿ ಇಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ ತಾವು ದಯಮಾಡಿ ನಮ್ಮ ನೆರವಿಗೆ ಬರಬೇಕು

ಅಧ್ಯಕ್ಷರೇ, ಶಿಡ್ಲಘಟ್ಟ, ಬಾಗೇಪಲ್ಲಿ, ಬೇತಮಂಗಲಕ್ಕೂ ಏನು ವ್ಯತ್ಯಾಸ ? ಶಿಡ್ಲಘಟ್ಟಕ್ಕೆ ೨೦ ಮನೆಗಳನ್ನು ಕೊಡುತ್ತಾರೆ, ಬೇತಮಂಗಲ ಮತ್ತು ಬಾಗೇಪಲ್ಲಿಗೆ ಹತ್ತತ್ತು ಮನೆಗಳನ್ನು ಕೊಟ್ಟಿದ್ದಾರೆ ಶಿವಮೊಗ್ಗೆ ಡಿಸ್ಟ್ರಿಕ್ಟ್ ನಲ್ಲಿ ಬೇರೆಯವರಿಗೆಲ್ಲಾ ಹತ್ತತ್ತು ಮನೆಗಳನ್ನು ಕೊಟ್ಟು ತೀರ್ಥಹಳ್ಳಿಗೆ ಮತ್ತು ಶಿಕಾರಿಪುರಕ್ಕೆ ಮಾತ್ರ ಜಾಸ್ತಿ ಮನೆಗಳನ್ನು ಕೊಟ್ಟಿದ್ದಾಋಎ ಶಿವಮೊತಗ್ಗಕ್ಕೆ ಇಲ್ಲ ಶಿಕಾರಪುರ, ಸೊರಬ, ಭದ್ರಾವತಿ, ಹೊಳೆಹೊನ್ನೂರು, ತೀರ್ಥಹಳ್ಳಿ ಮತ್ತು ಹೊಸನಗರ, ಇವೆಲ್ಲಾ ಶಿವಮೊಗ್ಗ ಜಿಲ್ಲೆಯಲ್ಲಿಯೇ ಇರುವುದು ತಾನೆ ನೀವು ಮನೆ ಕೊಟ್ಟಿರುವುದು ಯಾವ ಮಾನದಂಡ? ಶಿಡ್ಲಪಟ್ಟ

ಮತ್ತು ಬಾಗೇಪಲ್ಲಿಗೆ ಏನು ವ್ಯತ್ಯಾಸ? ಶಿಡ್ಲಘಟ್ಟದಲ್ಲೇನಾದರೂ ಸಮುದ್ರವಿದೆಯೇ? ನದಿ ಹರಿಯುತ್ತಿದೆಯೆ ? ನಮ್ಮಲ್ಲಿ ಬಾಗೇಪಲ್ಲಿ ಪಕ್ಕದಲ್ಲಿ ಚಿತ್ರಾವತಿ ನದಿ ಹುರಿಯುತ್ತದೆ ನಾವು ಅಲ್ಲಿ ಡ್ಯಾಂ ಬೇರೆ ಕಟ್ಟಿದ್ದೇವೆ

ಶ್ರೀ ಜೆ ಸಿ ಮಾಧುಸ್ವಾಮಿ ದೇವನಹಳ್ಳಿಗೆ ೫ ಮನೆಗಳನ್ನು ಕೊಟ್ಟಿದ್ದಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ದೇವನಹಳ್ಳಿಗೆ ೫, ಬೇರೆಯವರಿಗೆಲ್ಲಾ ೧೫, ಏನು ಸಾರ್ ವ್ಯತ್ಯಾಸ ?

ಉಪಾಧ್ಯಕ್ಷರು 'ನೀವೆಲ್ಲರೂ ಕೇಳಿದ್ದೀರಿ, ಎಲ್ಲರ ಸಮಸ್ಯೆ ರೀತಿಯದ್ದಾಗಿದೆ ಅದರ ಬಗ್ಗೆಯೇ ಪ್ರತಿಯೊಬ್ಬರು, ಹೇಳುತ್ತಾ ಹೋಗಬೇಡಿ ದಯವಿಟ್ಟು ಸಹಕರಿಸಿ ಈಗ ಮಾನ್ಯ ಮಂತ್ರಿಗಳು ಏನು ಉತ್ತರ ಕೊಡುತ್ತಾರೆ ನೋಡೋಣ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ ಕೇವಲ ಒಂದು ಪ್ರಶ್ನೆಗೆ ಒಂದು ಗಂಟೆ ತೆಗೆದುಕೊಳ್ಳುವುದೇ ಹೇಳಿ

ಶ್ರೀ ಕೆ ಎನ್ ರಾಜಣ್ಣ ಮಾನ್ಯ ಉಪಾಧ್ಯಕ್ಷರೆ ಇದಕ್ಕೆ ಪೂರಕವಾಗಿ ದಾವಣಗೆರೆ ಜಿಲ್ಲೆಯದ್ದನ್ನು ಸ್ವಲ್ಪ ನೋಡಿ ಚೆನ್ನಗಿರಿಗೆ ಹತ್ತು, ಹೊನ್ನಾಳಿಗೆ ನಲವತ್ತು ಕೊಟ್ಟಿದ್ದಾರೆ ಚೆನ್ನಗಿರಿಗೂ ಹೊನ್ನಾಳಿಗೂ ಎಷ್ಟು ದೂರ ಇದೆ ಸ್ವಾಇ, ಏನು ವ್ಯತ್ಯಾಸ ಸ್ವಾಮಿ? ಹರಿಹರಕ್ಕೆ ಹತ್ತು, ಜಗಳೂರಿಗೆ ಇಪ್ಪತ್ತು ಕೊಟ್ಟಿದ್ದಾರೆ ಜಗೂರಿನಲ್ಲಿ ಬರತಕ್ಕಂಥ ಪ್ರದೇಶವೆಲ್ಲಾ ಬರಗಾಲ ಪೀಡಿತ ಪ್ರದೇಶ ಅಲ್ಲಿಗೆ ಇಪ್ಪತ್ತು, ಹರಪನಹಳ್ಳಿಗೆ ಹತ್ತು ದಾವಣಗೆರೆಗೆ ಹತ್ತು ಇದರಲ್ಲಿ ತಾರಮ್ಯವಿಲ್ಲವೆ? ಇನ್ನು ವಇರಾಜಪೇಟೆಗೆ ಐದು, ಮಡಿಕೇರಇಗೆ ಯದು, ಸೋಮವಾರಪೇಟೆಗ ಐದು ಕೊಟ್ಟಿದ್ದಾರೆ ಇನ್ನು ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್ ನಲ್ಲಿ ಇರತಕ್ಕಂಥ ತಾಲ್ಲೂಕುಗಳಿಗೆ ಐದೈದು ಕೊಟ್ಟಿದ್ದಾರೆ ದೇವನಹಳ್ಳಿಗೆ ಕೇವಲ ಐದು ಚಂದ್ರಣ್ಣನವರು ಇಲ್ಲಿಯೇ ಕುಳಿತಿದ್ದಾರೆ ಹೀಗಿರುವಾಗ ತಾರತಮ್ಯ ಮಾಡಿಲ್ಲವೆಂದು ಮಂತ್ರಿಗಳು ಹೇಗೆ ಹೇಳುತ್ತಾರೆ?

ಉಪಾಧ್ಯಕ್ಷರು ಮಾನ್ಯ ಮಂತ್ರಿಗಳೆ, ಈಗ ತಮಗೆ ಅರ್ಥವಾಯಿತಲ್ಲಾ ಎಲ್ಲಾ ಜಿಲ್ಲೆಗಳಲ್ಲೂ ಹೆಚ್ಚು ಕಡಿಮೆಯಾಗಿರುವುದು ಎಲ್ಲ ಜಿಲ್ಲೆಗಳಲ್ಲೂ ಇದೇ ಸಮಸ್ಯೆ

ಶ್ರೀ ಎ ಬಿ ಪಾಟೀಲ್ ಮಾನ್ಯ ಉಪಾಧ್ಯಕ್ಷರೆ, ಇವರು ತಾರತಮ್ಯ ಮಾಡಿಲವಲವೆಮದು ಹೆಲಿದ್ದಾಋಎ ಹುಕ್ಕೇರಿ ತಾಲ್ಲೂಕಿನಲ್ಲಿ ಎರಡು ಮತಕ್ಷೇತ್ರವಿದೆ ಹುಕ್ಕೇರಿಗೆ ಕೊಟ್ಟಿದ್ದಾರೆ, ಆದರೆ ನಮ್ಮಲ್ಲಿ ಎರಡು ನದಿ ಹರಿಯುತ್ತಾದೆಯಾದರೂ ಅಲಿಗೆ ಕೊಟ್ಟೇ ಇಲ್ಲ

ಉಪಾಧ್ಯಕ್ಷರು ಮಾನ್ಯ ಮಂತ್ರಗಳೆ, ಸಮಸ್ಯೆ ಸ್ವಲ್ಪ ಜಾಸ್ತಿಯೇ ಆಗಿದೆ ಸ್ವಲ್ಪ ಇದರ ಬಗ್ಗೆ ತಾವು ನೋಡಬೇಕು ನೋಡಿ ಸರಿ ಮಾಡುತ್ತೇನೆ ಎಂದು ಹೇಳಿಬಿಡಿ

ಶ್ರೀ ಎನ್ ನಾಗರಾಜ್ ಶೆಟ್ಟಿ (ಮೀನುಗಾರಿಕೆ ಸಚಿವರು) ಮಾನ್ಯ ಅಧ್ಯಕ್ಷರೆ, ನಾನು ಸರಿ ಮಾತುತ್ತೆನೆ

ಶ್ರಿ ಕೆ ಆಬಯಚಂದ್ರ ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರ ಕರಾವಳಿಯಲ್ಲಿ ಬರುತ್ತದೆ ನನಗೆ ಕಡಿಮೆ ಮನೆ ಕೊಟ್ಟಿದ್ದಾರೆ ಆದರೆ ಮಾನ್ಯ ಮಂತ್ರಿಗಳ ಕ್ಷೇತ್ರ ಕರಾವಳಿಯಲ್ಲಿ ಬರುವುದಿಲ್ಲ ಅವರಿಗೆ ೨೫ ಮನೆಗಳನ್ನು ಕೊಟ್ಟಿದ್ದಾರೆ ನಮಗೆ ೨೦ ಮನೆ ಮಂಗಳೂರು ನಗರಕ್ಕೆ ೨೫ ಮನೆ ಕಾಂಗ್ರೆಸ್ ಮತ್ತು ಬಿ ಜೆ.ಪಿ ಎಮದು ತಾರತಮ್ಯ ಮಾಡಿದ್ದಾರೆ ಇದು ಯಾವ ನ್ಯಾಯ ? ಇದೇ ತರಹ ಮಾಡುತ್ತಿದ್ದಾರೆ ಇಡೀ ಜಿಲ್ಲೆಯಲ್ಲಿ ನಾನೊಬ್ಬ ಕಾಂಗ್ರೆಸ್ ಶಾಸಕ ಇರುವುದು ನಮಗೆ ಈ ರೀತಿಯಲ್ಲಿ ಅನ್ಯಾಯ ಮಾಡಿದರೆ ಹೇಗೆ ?

(ಗೊಂದಲ)

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ-ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಮಾತ್ರ ಐದೈದು ಕೊಟ್ಟು ಉಳಿದ ಜಿಲ್ಲೆಗಳಲ್ಲಿ ಹತ್ತತ್ತು ಮನೆಗಳನ್ನು ಕೊಟ್ಟಿದ್ದಾರೆ

ಉಪಾಧ್ಯಕ್ಷರು ಈಗ ಎಲ್ಲಾ ಕುಳಿತುಕೊಳ್ಳಿ, ಮಂತ್ರಿಗಳು ಈಗ ಉತ್ತರ ಹೇಳುತ್ತಾರೆ

ಶ್ರೀ ಎನ್ ನಾರರಾಜಶೆಟ್ಟಿ ಮಾನ್ಯ ಉಪಾಧ್ಯಕ್ಷರೆ, ಈಗ ಈ ಮನೆಗಳ ಹಂಚುವಿಕೆಯಲ್ಲಿ ಈಗ ಎರಡನೆಯ ಪಟ್ಟಿ ಕೂಡ ತಯಾರಾಗುತ್ತಿದೆ ಯಾರು ಯಾರಿಗೆ ಕಡಿಮೆ ಸಿಕ್ಕಿದೆ ಅವರಿಗೆ ಎರಡನೆಯ ಪಟ್ಟಿಯಲ್ಲಿ ಬರುತ್ತಿದೆ ಇದು ಏಕೆಂದರೆ ಹಿಂದೆ ಯಾವ ಯಾವ ಅಪ್ಲಿಕೇಶನ್ ಇತ್ತು ಅದು ಒಂದು, ಎರಡನೆಯದಾಗಿ ಹೆಚ್ಚಿನ ಕೆರೆಗಳು ಯಾವ ಪ್ರದೇಶದಲ್ಲಿದೆ, ಹೆಚ್ಚಿನ ಜಲಾಶಯಗಳು ಎಲ್ಲಿದೆ, ಈಗಾಗಲೇ ನಾನು ಹೇಳಿದ ಹಾಗೆ, ಉದಾಹರಣೆಗೆ ಹೇಳಬೇಕೆಂದರೆ ಶಿಕಾರಿಪುರದಲ್ಲಿ ಎರಡು ಜಲಾಶಯಗಳಿವೆ ಎಲ್ಲಿಕಡಿಮೆ ಮನೆ ಕೊಟ್ಟಿದೆ ಅವರಿಗೆ ಬೇಕಾದಂಥ ವ್ಯವಸ್ಥೆ ಮಾಡುತ್ತೇವೆ ಅವರಿಗೆ ಕೊಡುತ್ತೇನೆ ಮನೆಗೇನೂ ತೊಂದರೆ ಇಲ್ಲವೆಮದು ಹೇಳಬಯಸುತ್ತೇನೆ

ಉಪಾಧ್ಯಕ್ಷರು ಈಗ ಉತ್ತರ ಕೊಟ್ಟಿದ್ದಾರೆ ಮುಂದಿನ ಪ್ರಶ್ನೆ ತೆಗೆದುಕೊಳ್ಳುತ್ತೇನೆ ಹಾಲಪ್ಪನವರೆ ತಾವು ಪ್ರಶ್ನೆ ಕೇಳಿ

ಶ್ರೀ ಜೆ ಸಿ ಮಾಧುಸ್ವಾಮಿ No, No I demand for privilege It is breach of privilege

ಉಪಾಧ್ಯಕ್ಷರು ಯಾವುದಕ್ಕೋಸ್ಕರ ಪ್ರಿವಿಲೇಜ್ ರೀ, ಯಾವ ಆಧಾರದ ಮೇಲೆ ಮಾಡಬೇಕು ? ಏತಕ್ಕೋಸ್ಕರ ಮಾಡಬೇಕು ? ನೀವು ಹೇಳತಕ್ಕಂಥ ಸಮಸ್ಯೆಗೆ ಉತ್ತರವನ್ನು ಹೇಳುತ್ತಾರಲ್ಲ ಮತ್ತೆ ಪ್ರಿವಿಲೇಜ್ ಏನಿದೆ ಇದರಲ್ಲಿ?

ಶ್ರೀ ಜೆ ಸಿ ಮಾಧುಸ್ವಾಮಿ ಏನ್ ಉತ್ತರ ಹೇಳಿದ್ದಾರೆ ಅವರು ? ಎಲ್ಲಿದೆ ಸೆಕೆಂಡ್ ಲಿಸ್ಟ್ ?

ಉಪಾಧ್ಯಕ್ಷರು ಈಗ ಅವರು ಅಡಿಶನಲ್ ಲಿಸ್ಟ್ ಮಾಡಿ ಸರಿ ಮಾಡುತ್ತೇನೆ ಎಂದು ಹೇಳಿದ್ದಾರಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಉಪಾಧ್ಯಕ್ರೆ, ದಯಮಾಡಿ ಕೇಳಿ, ಯಾರನ್ನು ಅರ್ಜಿ ಕೇಳಿದ್ದರು? ಅರ್ಜಿ ಕೊಡಿ ಎಂದು ಯಾರ ಗಮನಕ್ಕೆ ತಂದಿದ್ದರು? ನಾವು ಏತಕ್ಕೆ ಕೊಟ್ಟಿಲ್ಲ ಎಂಬ ಬಗ್ಗೆಯೂ ಹೇಳಬೇಕಲ್ಲ ನಾಳೆ ನಮ್ಮ ಕ್ಷೇತ್ರದಲ್ಲಿ ಜನರು ಕೇಳುತ್ತಾರೆ, ಶಾಸಕರಾಗಿ ನೀವು ಅರ್ಜಿಯನ್ನೇ ಕೊಡಿಸಿಲ್ಲವಲ್ಲ ಎಂದು ಕೇಳುತ್ತಾರೆ

ಉಪಾಧ್ಯಕ್ಷರು ಮಾಧುಸವಾಮಿಯವರೆ, ತಾವು ಹಿರಿಯರು, ನಿಮಗೆ ನಾನು ಹೇಳುತ್ತೇನೆ ನಿಮ್ಮ ಸಮಸ್ಯೆ ಏನು ಎಂಬುದನ್ನು ಅವರ ಗಮನಕ್ಕೆ ತಂದಿದ್ದೀರಿ ಅವರ ಗಮನಕ್ಕೆ ತಂದ ಮೇಲೆ ಸಮಸ್ಯೆ ಬಗೆಹರಿಸುತ್ತೇನೆಂದು ಸಚಿವರು ಒಪ್ಪಿಕೊಂಡಿದ್ದಾರಲ್ಲ ಇನ್ನು ಎರಡ್ಮೂರು ದಿವಸಲ್ಲಿ ಮಾಡಿಕೊಡುತ್ತಾರೆ

ಶ್ರೀ ಸಿದ್ದರಾಮಯ್ಯ ಮಾನ್ಯ ಉಪಾಧ್ಯಕ್ಷರೇ, ಆ ರೀತಿ ಕೇವಲ ಹೇಳಿಬಿಟ್ಟರೆ ಆಗುವುದಿಲ್ಲ ಇಲ್ಲಿ ಅವರದು ತಪ್ಪಾಗಿದೆ ಬಹಳ ಸ್ಪಷ್ಟವಾಗಿ ತಪ್ಪಾಗಿರತಕ್ಕಂಥದ್ದು ಗೊತ್ತಾಗಿದೆ ಈಗ ಗುಳೇದಗುಡ್ಡಕ್ಕೆ ಕೇವಲ ಐದು ಮನೆಗಳನ್ನು ಕೊಟ್ಟಿದ್ದೀರಿ

ಉಪಾಧ್ಯಕ್ಷರು ಈಗ ಇದರ ಮೇಲೆ ಚರ್ಚೆ ಮಾಡೋಣ ಬಿಡಿ ಒಂದು ಗಂಟೆ ಚರ್ಚೆ ಮಾಡೋಣ ಆದರೆ ಈಗ ಇದನ್ನು ಕೈಬಿಟ್ಟುಬಿಡಿ

ಶ್ರೀ ಸಿದ್ಧರಾಮಯ್ಯ ಚರ್ಚೆ ಎಂದಲ್ಲ ಇದರ ಬಗ್ಗೆ ರಿಕ್ಟಿಫೈ ಮಾಡಬೇಕಲ್ಲ

ಉಪಾಧ್ಯಕ್ಷರು ಈಗ ಅವರು ರೆಕ್ಟಿಫೈ ಮಾಡುತ್ತೇವೆ ಎಂದು ಹೇಳಿದ್ದಾರಲ್ಲ

ಶ್ರೀ ಸಿದ್ದರಾಮಯ್ಯ ಎಲ್ಲಿ ಹೇಳಿದ್ದಾರೆ? ಅವರು ಹೇಳಿರುವುದು ಇನ್ನೊಂದು ಪಟ್ಟಿ ಬರತುತ್ತದೆಂದು ಆದರೆ ಈ ಪಟ್ಟಿಯಲ್ಲಿ ತಪ್ಪಾಗಿರುವುದನ್ನು ರೆಕ್ಟಿಫೈ ಮಾಡಬೇಕು ಅವರು ಮಾಡಿರುವ ತಪ್ಪನ್ನು ಒಪ್ಪಿಕೊಳ್ಳಬೇಕೋ ಬೇಡವೋ ?

ಶ್ರೀ ಎಸ್ ನಾಗರಾಜಶೆಟ್ಟಿ ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಮಾಧುಸ್ವಾಮಿಯವರು ಪಟ್ಟಿ ಕೊಡಬೇಕೆಂದು ಕೇಳಿದ್ದಾರೆ ನಮ್ಮ ಎಲ್ಲ ಅಧಿಕಾರಿಗಳಿಗೆ ಈಗಾಗಲೇ ಹೇಳಿದದೇವೆ, ಶಾಸಕರ ಹತ್ತಿರ ಮಾತನಾಡಿ ಪಟ್ಟಿಯನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ ಪಟಿ ತೆಗೆದುಕೊಮಡು ತಮಗೆ ಕಳುಹಿಸುತ್ತೇವೆ

ಶ್ರಿ ಜೆ ಸಿ ಮಾಧುಸ್ವಾಮಿ ೧೦ಮನೆ ಕೊಡಿ ಎಮದು ಮಾತ್ರ ಅಧಿಕಾರಿಗಳು ನಮ್ಮನ್ನು ಕೇಳಿದ್ದಾಋಎ ಅದಕ್ಕಿಂತಲೂ ಒಂದು ಮನೆ ಜಾಸ್ತಿ ಕೊಡಿ ಎಂದು ಕೇಳಿದ್ದರೆ ನಾನು ಈ ಮನೆ ಸದಸ್ಯನಾಗಿ ಉಳಿಯುವುದಿಲ್ಲ ಅವರು ಏನಾಗುತ್ತಾರೆ ಎಂದು ಇಲ್ಲಿ ಹೇಳಬೆಕು ಇದು ನನನ್ ಛಾಲೆಂಜ್ ಅವರ ಆಫೀಸರ್ ಬಂದು ಹತ್ತು ಮನೆ ಪಟ್ಟಿ ಕೊಡಿ ಎಂದು ಕೇಳಿರುವುದಕ್ಕೇ ನಾನು ಹತ್ತು ಮನೆ ಪಟ್ಟಿಯನ್ನು ಮಾತ್ರ ಕೊಟ್ಟಿದ್ದೇವೆ depending on the applications ನಾವು ಮನೆಯನ್ನು ಅಲಾಟ್ ಮಾಡುತ್ತೇವೆ ಎಂದು ಹೇಳುವುದಕ್ಕೆ ಅವರಿಗೆ ಅಧಿಕಾರವಿಲ್ಲ He can not say ಆದಕಾರಣ It is my right I am moving it for privilege ಮಂತ್ರಿಗಳು ಈ ಬಗ್ಗೆ ಅಲ್ಲಿಗೆ ಬಂದು ವಿವರಿಸಲಿ ದಯಮಾಡಿ ತಾವು ಪ್ರಿವಿಲೇಜ್ ಗೆ ರೆಫರ್ ಮಾಡಬೇಕು

ಉಪಾಧ್ಯಕ್ಷರು ನೀವು ಏನಾದರೂ ಮಾಡಿಕೊಳಿ, ಈಗ ನೆಕ್ಸ್ಟ ಹಾಲಪ್ಪನವರೆ, ನೀವು ಮಾತನಡಿ

ಶ್ರೀ ಜೆ ಸಿ ಮಾಧುಸ್ವಾಮಿ ಈ ರೀತಿ ಹೇಳಿದರೆ ಆಗುವುದಿಲ್ಲ ನೀವು ಹೇಳಬೇಕು you must say

ಉಪಾಧ್ಯಕ್ಷರು . ಮಂತ್ರಿಗಳು ಉತ್ತರ ಕೊಡುತ್ತೇವೆಮದು ಹೇಳಿದ್ದಾರಲ್ಲ ಅಷ್ಟು ಹೇಳಿದರೂ ಪ್ರಿವಿಲೇಜ್ಗೆ ಮೂವ್ ಮಾಡಿದರೆ ಹೇಗೆ?

ಶ್ರೀ ಜೆ ವಿ ಶ್ರೀರಾಮರೆಡ್ಡಿ ಮಾನ್ಯ ಮಂತ್ರಿಗಳು ತಾರತಮ್ಯ ಮಾಡಿಲ್ಲವೆಂದು ಹೇಳಿದ್ದಾರೆ ಈ ರೀತಿ ಹೇಳಿರುವುದರಿಂದ ಇದು ಪ್ರಿವಿಲೇಜ್ ಆಗುತ್ತದೆ ಕೆರೆ ಸಂಖ್ಯೆ ತರಿಸಲಿ

ಶ್ರೀ ಜೆ ಸಿ ಮಾಧುಸ್ವಾಮಿ ಕೆರೆ ಸಂಖ್ಯೆ ತರಿಸಲಿ ಯಾರು ಯಾರಿಂದ ಎಷ್ಟು ಮನೆಗಳಿಗಾಗಿ ಅರ್ಜಿ ಬಂದಿದೆ ಆ ವಿವರಗಳನ್ನು ತರಿಸಲಿ ಈ ಸಭೆಯ ಮುಂದೆ ಅವೆಲ್ಲಾ ಬರಬೇಕು It must be discussed

ಉಪಾಧ್ಯಕ್ಷರು ಮಾಧುಸ್ವಾಮಿಯವರೆ, ಈಗ ಆಗಿರತಕ್ಕಂಥ ಸಮಸ್ಯೆಯನ್ನು ಅವರು ಅರ್ಥ ಮಾತಿಕೊಂಡಿದ್ದಾರೆ ತಾರತಮ್ಯ ಇಲ್ಲಿ ಆಗಿದೆ ಎನ್ನುವುದಕ್ಕಿಂತ ಹೆಚ್ಚಾಗಿ ವ್ಯತ್ಯಾಸಗಳಾಗಿವೆ ಎಂಬುದನ್ನು ಈಗ ಅವರು ತಿಳಿದುಕೊಂಡಿದ್ದಾಋಎ ಅದನ್ನು ಸರಿ ಮಾಡಕೊಂಡಿರುತ್ತೇನೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರಲ್ಲ ಮತ್ತೇನು ಪ್ರಿವಿಲೇಜ್ ?

ಶ್ರೀ ಜೆ ವಿ ಶ್ರೀರಾಮರೆಡ್ಡಿ ಮಾನ್ಯ ಮಂತ್ರಗಳು ಕೆರೆಗಳು ಎಂದು ಹೇಳಿದರು ನಮ್ಮ ಕೋಲಾರ ಜಿಲ್ಲೆಯಲ್ಲಿ ೪ ಸಾವಿರ ಕೆರೆಗಳಿವೆ ಮಾನ್ಯ ಮಂತ್ರಗಳು ತಾರತಮ್ಯದ ಉತ್ತರ ಕೊಟ್ಟು ಸದನವನ್ನು ತಪ್ಪು ದಾರಿಗೆ ಎಳೆದಿದ್ದಾರೆ

ಶ್ರೀ ಜಿ ಚಂದ್ರಣ್ಣ ಶಾಸಕರು ಪತ್ರ ಕೊಟ್ಟರೆ ಅದಕ್ಕೆ ಬೆಲೆ ಕೊಡಬೇಕು ಎಂದು ಅವರಿಗೆ ಗೊತ್ತಾಗಬೇಕು ಅದೇ ಅವರಿಗೆ ಗೊತ್ತಿಲ್ಲ

ಶ್ರೀ ಎಂ ಪಿ ಪ್ರಕಾಶ್ (ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆ ಹಾಗೂ ವಿರೋಧ ಪಕ್ಷದ ನಾಯಕರು ಹೇಳಿದಂಥ ವಿಚಾರದಲ್ಲಿ ಕೆಲವು ಕ್ಷೇತ್ರಗಳಿಗೆ ಮಾತ್ರ ಬಹಳ ಪಕ್ಷಪಾತದಿಂದಲೇ ಆಗಿದೆ ಆದ್ದರಿಂದ ಈ ಮನೆಗಳನ್ನು ಹಂಚುವ ವಿಚಾರದಲ್ಲಿ ಮಾನದಂಡನೇನು ಎಂದು ಕೇಳಿ ಅದರ ಮೇಲೆಯೇ ಚರ್ಚೆಆಗಿದೆ ನಾವೆಲ್ಲರೂ ಕೂಡ ಇದ್ದೆವು ಮಾನ್ಯ ಸಿದ್ದರಾಮಯ್ಯನವರು, ಮತ್ತು ನಾವೆಲ್ಲಾ ಮಂತ್ರಿಗಳಾಗಿದ್ದೆವು ಆ ಸಂದರ್ಭದಲ್ಲಿ ಒಂದು ಅಭಿಪ್ರಾಯಕ್ಕೆ ಏನು ಬಂದೆವೆಂದರೆ, ಈಗ ಕೊಟ್ಟಿರತಕ್ಕಂಥಾದ್ದು ಕೊಟ್ಟಾಗಿದೆ ಹೆಚ್ಚಿವರಿಯಾಗಿ ಮನೆಗಳನ್ನು ಕೊಟ್ಟು ಯಾವ ಕ್ಷೇತ್ರಗಳಿಗೆ ಪಕ್ಷಪಾತ ಅಥವಾ ಅನ್ಯಾಯವಾಗಿದೆ ಅದನ್ನು

ಸರಿಪಡಿಸುತ್ತೇವೆ ಎನ್ನತಕ್ಕಂಥ ಮಾತನ್ನೂ ಹೇಳಿದರು ಈಗ ಅಕಸ್ಮಾತ್ ಕೊಟ್ಟಿರುವುದು ತಪ್ಪಾಗಿದೆಯೆಂದರೆ ಇದೇ ಪಟ್ಟಿಯಲ್ಲಿ ಆಗದೇ ಇದ್ದರೂ ಕೂಡ ಹೆಚ್ಚುವರಿ ಮನೆಗಳನ್ನು ಕೊಟ್ಟು ಎಲ್ಲರಿಗೂ ಕೂಡ ಮಾನದಂಡದ ರೀತಿಯಲ್ಲಿ ಅದನ್ನು ಮಾಡಿಕೊಡುತ್ತಾರೆ ಎರಡನೆಯದಾಗಿ ನಾನು ಹೇಳುವುದೇನೆಂದರೆ, ಯಾವುದಾದರೂ ಹೇಲಿಕೆ ಇನ್-ಅಕ್ಯುರೇಟ್ ಆಗಿದ್ದಾರೆ, ಅದು ಸರಿಯಾಗಿಲ್ಲದಿದ್ದರೆ, it does not leade to a privilege ಏಕೆಂದರೆ ಅದು ಬಹಳ ಮುಖ್ಯವಾಗಿ ನಮ್ಮಲ್ಲಿಯೇ ಆಗಿರತಕ್ಕಂಥದ್ದು ಇದೆ , ನಮ್ಮಲ್ಲಿ Inaccurate statement by a Minister Making inaccurate statement or furnishing wrong information to the House does not amount to a breach of privilege ಆದ್ದುದರಿಂದ ಇಲ್ಲಿ ಏನಾದರೂ ಅಕಸ್ಮಾತ್ ತಾವು

ಶ್ರೀ ಕೆ ಎನ್ ರಾಜಣ್ಣ ಹಾಗಾದರೆ ಎಲ್ಲ ವಿಚಾರಕ್ಕೂ ಈ ರೀತಿ ಸುಳ್ಳು ಹೇಳಿಕೊಂಡು ಹೋಗುತ್ತಿರಬಹುದೆ?

ಶ್ರೀ ಎಂ ಪಿ ಪ್ರಕಾಶ್ ಸುಳ್ಳು ಹೇಳುವುದು ಬೇರೆ

ಶ್ರೀ ಜೆ ಸಿ ಮಾಧುಸ್ವಾಮಿ ಸುಳ್ಳು ಹೇಳುರುವುದು, application ಆಧಾರದ ಮೇಲೆ ಮಾಡಿದ್ದೇನೆ ಎಂದು ಸುಳ್ಳು ಹೇಳಿರುವುದು Application ಕೊಟ್ಟಿಲ್ಲ ಹತ್ತು ಮನೆಗೆ right ಮಾಡಿ ಕೊಡಿ ಎಂದು ಕಳುಹಿಸಿರುವುದು ಸುಳ್ಳು ಹೇಳಿರುವುದು, ಕೆರೆಗಳ ಸಂಖ್ಯೆ Ministerಗೆ ಗೊತ್ತಿಲ್ಲ ಕೋಲಾರ ಅಥವಾ ತುಮಕೂರಿನಲ್ಲಿ ಮನೆಗಳು, ಕೆರೆಗಳು ಎಷ್ಟಿದೆ ಎಂದು ಅವರಿಗೆ ಅದೆಲ್ಲಾ ಸುಳ್ಳು He says on the basis of reservoirs, on the basis of application, on the basis of coastal area ಅದೆಲ್ಲಾ ಈಗ ಸುಳ್ಳು Inaccurate statement ನಾವು ಕೇಳಿಲ್ಲ ಸುಳ್ಳು ಹೇಳಿದ್ದಾರೆ

ಶ್ರೀ ಎಂ ಪಿ ಪ್ರಕಾಶ್ ಈಗ ಇದನ್ನು ಬಗೆಹರಿಸುವುದಕ್ಕೆ ಇನ್ನೊಂದು ಪಟ್ಟಿಯನ್ನು ತಯಾರು ಮಾಡಿ, ಎಲ್ಲೆಲ್ಲಿ ಅನ್ಯಾಯವಾಗಿದೆ ಅಲ್ಲಿ ಸರಿಪಡಿಸುತ್ತಾರೆ

ಶ್ರೀ ಸಿದ್ದರಾಮಯ್ಯ ನೀವು ಈಗ ಏನು ಮಾಡುತ್ತೀರಿ ಎಂದರೆ ಒಂದು ಕಡೆ regional imbalance ಸರಿಮಾಡುತ್ತೇವೆ ಎಂದು ಹೊರಡುತ್ತೀರಿ ಯಾರೂ ಮಾಡಲಿಲ್ಲ, ನಾವು ಮಾಡುತ್ತೇವೆ ಎನ್ನುತ್ತಿದ್ದೀರಿ ನಂಜುಂಡಪ್ಪ ವರದಿಯಲ್ಲಿ ಯಾವುದು most backeard, more backward, backward ಎಂದಿದೆ ಅಲ್ಲಿಗೆ ಮನಸೋಯಿಚ್ಛೆ ಯದ್ವಾತದ್ವಾ ಕೊಟ್ಟುಬಿಡುತ್ತೀರಿ ಹಾಗಾದರೆ imbalance ಸರಿ ಮಾಡುವುದು ಹೇಗೆ? Consider ಮಾಡುವುದು ಹೇಗೆ? ಅದಕ್ಕೆ ಏನಾದರೂ ಆಧಾರ ಇದೆಯಾ? ನೀವು ದೊಡ್ಡದಾಗಿ ಹೇಳುವುದು ಏನಾದರೂ ಹತ್ತು ಮನೆ ಜಾಸ್ತಿಯಾಗಿದೆ ಎಂದರೆ ಅರ್ಥ ಮಾಡಿಕೊಳ್ಳೋಣ ಮಾನ್ಯ ಯಡಿಯೂರಪ್ಪನವರ ಕ್ಷೇತ್ರವಾದ ಶಿಕಾರಿಪುರಕ್ಕೆ ೧೪೦ ಮನೆ ಕೊಟ್ಟು, ಇನ್ನೊಂದು ಕಡೆ ೫ ಮನೆ ಕೊಟ್ರೆ, ಇದನ್ನು ಸಣ್ಣ ತಾರತಮ್ಯ ಎಂದು ತೀರ್ಮಾನ ಮಾಡಬೇಕಾ?

ಶ್ರೀ ಎಂ ಪಿ ಪ್ರಕಾಶ್ ಅದನ್ನು ಸರಿಪಡಿಸೋಣ

ಶ್ರೀ ಸಿದ್ದರಾಮಯ್ಯ ೧೪೦ ಮನೆ ಕೊಟ್ಟುಬಿಟು ಹೇಗೆ ಸರಿಪಡಿಸುವುದು?

ಉಪಾಧ್ಯಕ್ಷರು ಎರಡನೆ ಪಟ್ಟಿಯಲ್ಲಿ ಸರಿಪಡಿಸುತ್ತೇನೆ ಎಂದು

ಶ್ರೀ ಸಿದ್ದರಾಮಯ್ಯ ಅವರು Finance Minister, Party leader ಇದ್ದಾರೆ

ಉಪಾಧ್ಯಕ್ಷರು ಕುಳಿತುಕೊಳ್ಳಿ, ಮಧ್ಯದಲ್ಲಿ ಏಕೆ ಮಾತನಾಡುತ್ತೀರಿ ? ಆಮೇಲೆ ಮಾತನಾಡಿ ಈಗ ಆಗಲ್ಲ

ಶ್ರೀ ಸಿದ್ದರಾಮಯ್ಯ It is not correct, ಈ ರೀತಿ ಮಾಡಬಾರದು ಇದು ಸರಿಯಿಲ್ಲ

ಉಪಾಧ್ಯಕ್ಷರು ನೀವು ಮಾತನಾಡಬೇಕಾದರೆ ಮಾತನಡಿ ಸುಮ್ಮನೆ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ ನಾನು ಹವಸರು ಹೇಳುವುದಕ್ಕೆ ಹೋಗಿಲ್ಲ ೨೦೦ ಮನೆಗಳನ್ನು ಒಂದು ಕ್ಷೇತ್ರದಲ್ಲಿ ಕೊಟ್ಟಿದ್ದಾರೆ

ಶ್ರೀ ಸಿದ್ದರಾಮಯ್ಯ ಗೊತ್ತಿರುವುದು, ಹಳೆಯದೆಲ್ಲಾ ಕತೆ ಇದೆ

ಶ್ರೀ ಎಂ ಪಿ ಪ್ರಕಾಶ್ ಅದನ್ನು ಸರಿಪಡಿಸೋಣವೆಂದು

ಶ್ರೀ ಸಿದ್ದರಾಮಯ್ಯ ಅದನ್ನು ಒಪ್ಪಿಕೊಂಡು ಮಾಡಬೇಕಾ?

ಶ್ರೀ ಎಂ ಪಿ ಪ್ರಕಾರ್ಶ ಒಪ್ಪಿಕೊಳ್ಳಬಾರದು ತಾವು ಹೇಳುವುದರಲ್ಲಿ ತರ್ಕ ಇದೆ ನ್ಯಾಯ ಇದೆ ಆದ್ದರಿಂದ ಹೆಚ್ಚಿನ ಮನೆಗಳನ್ನು ತಂದು ಅನ್ಯಾಯವಾಗಿರುವ ಕಡೆಯಲ್ಲಿ ಸರಿಪಡಿಸುವುದಕ್ಕೆ

(ಗೊಂದಲ)

ಒಬ್ಬರು ಮಾನ್ಯ ಸದಸ್ಯರು ಕರಾವಳಿ ಮೀನುಗಾರರಿಗೆ

ಉಪಾಧ್ಯಕ್ಷರು ಬಿಡಿ ಅದು, ತಾವು ಆಮೇಲೆ ಮಾತನಾಡಿ ಸಮಸ್ಯೆ ಮೇಲೆ ಸಮಸ್ಯೆ ಉದ್ಭವವಾಗುತ್ತದೆ

(ಗೊಂದಲ)

ಒಬ್ಬರು ಮಾನ್ಯ ಸದಸ್ಯರು ಕರಾವಳಿ ಮೀನುಗಾರರಿಗೆ ಯಾವ ಕಾರಣಕ್ಕೂ ತೊಂದರೆಯಾಗಬಾರದು ಒಳನಾಡಿನ ಮೀನುಗಾರರಿಗೆ ಯಾವ ಸೌಲಭ್ಯವನ್ನು ಕೊಡುತ್ತೀರೋ ಕೊಡಿ

ಉಪಾಧ್ಯಕ್ಷರು ಮಾತನಾಡಿ, ಯಾರೋ ಬಿಡಬೇಡಿ, ಎಲ್ಲರೂ ಮಾತನಾಡಿ

ಶ್ರೀ ಎಂ ವೈ ಮೇಟಿ ಎಲ್ಲಾ ವಿಷಯದಲ್ಲಿ ಎಲ್ಲಾ ಸರ್ಕಾರಗಳು ತಾರತಮ್ಯ ಮಾಡಿದ್ದಾಋಎ -ಹಿಂದಿನ ಸರ್ಕಾರದಲ್ಲಿ ಏನು ಕೊಟ್ಟಿದ್ದರು ಎಂದು ಎಲ್ಲಾ ಕಡತಗಳನ್ನು ತೆಗೆದುನೋಡಿ ಅದು ಸಣ್ಣ ನೀರಾವರಿ ಇಲಾಖೆ PWD ಇರಬಹುದು, ಇರಬಹುದು, ಮೀನುಗಾರಿಕೆ ಇಲಾಖೆ ಇರಬಹುದು, ಎಲ್ಲಾ ಇಲಾಖೆಯಲ್ಲಿ ಇದು ನಡೆದಿದೆ ಯಾರ್‍ಯಾರ ಕ್ಷೇತ್ರಕ್ಕೆ ಎಷ್ಟೆಷ್ಟು ಕೊಟ್ಟಿದ್ದಾರೆ ಏನಾನಾಗಿದೆ ಎಂದು ಎಲ್ಲಾ ತೆಗೆಸಿ

ಉಪಾಧ್ಯಕ್ಷರು ಇದನ್ನು ಹೇಳುವುದಕ್ಕೆ ನಿಂತುಕೊಂಡಿರಾ? ನಾನು ಏನೋ ಹೊಸದಾಗಿ ಹೇಳುತ್ತಾರೆ ಎಂದುಕೊಂಡೆ

ಶ್ರೀ ಎಂ ವೈ ಮೇಟಿ ಯಾವ್ಯಾವ ಸರ್ಕಾರದವರು ಏನೇನು ಕೊಟ್ಟಿದ್ದಾರೆ, ಯಾರ್‍ಯರಿಗೆ ಏನೇನು ಕೊಟ್ಟಿದ್ದಾಋಎ ಎಂದು ತೆಗೆದುನೋಡಿ ಎಲ್ಲರ ಕಾಲದಲ್ಲೂ ನಡೆದಿದ್ದೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಹಿಂದಿನದೆಲ್ಲಾ ತೆಗೆಸಿಬಿಡಿ

ಉಪಾಧ್ಯಕ್ಷರು ಇವರು ಅರ್ಥ ಮಾಡಿಕೊಳ್ಳವುದಿಲ್ಲವೆಂದರೆ ನಾವೇನು ಮಾಡುವುದಕ್ಕೆ ಆಗುತ್ತದೆ? ರಾತ್ರಿ ೨ ೦೦ ಗಂಟೆಯಾಗಲಿ ಬಿಡಿ ಏನು ಮಾಡುವುದಕ್ಕೆ ಆಗುತ್ತದೆ? ಕೇಳಿದ ಪ್ರಶ್ನೆಯನ್ನೇ ಕೇಳುತ್ತಾ ಹೋದರೆ ಇನ್ನು ಸಾಕಷ್ಟು ಪ್ರಶ್ನೆಗಳು ಇವೆ ಅತೀ ಮುಖ್ಯವಾದಂತಹ ಸಾರ್ವಜನಿಕರಿಗೆ ಮತ್ತು ರಾಜ್ಯಕ್ಕೆ ಅನುಕೂಲವಾಗುವಂತಹ ಪ್ರಶ್ನೆಗಳು ಇವೆ

(ಗೊಂದಲ)

ಶ್ರಿ ಜೆ ವಿ ಶ್ರೀರಾಮರೆಡ್ಡಿ ಇದು privilege ಆಗುತ್ತದೆ, ಇದನ್ನು Committee ಗೆ refer ಮಾಡಿ ಇಲ್ಲವೆಂದರೆ ನಾವು move ಮಾಡುತ್ತೇವೆ

ಶ್ರೀ ಬಿ ನಾಗರಾಜ ಶೆಟ್ಟಿ ಇದು ತಪ್ಪಿನಲ್ಲಿ ಸರಿ ಮಾಡತುತ್ತೇವೆ

ಶ್ರೀ ಜೆ ಸಿ ಮಾಧುಸ್ವಾಮಿ It is not inaccurate reply Gross like Misleading the House

ಉಪಾಧ್ಯಕ್ಷರು ಮಾಧುಸ್ವಾಮಿಯವರೆ, to err is human ನೀವು ದೊಡ್ಡವರು, ನಿಮಗೆ ಅರ್ಥವಾಗಿದೆ ನಿಮಗೆ ನಾವು ಹೆಚ್ಚಿಗೆ ಹೇಳಬಾರದು ತಾವು ಅನುಭವ ರಾಜಕಾರಣಿಗಳು ಒಂದು ತಪ್ಪಾಗಿದೆ, ಅದನ್ನು ಸರಿ ಮಾಡುತ್ತೇವೆಂದು ಹೇಳುತ್ತಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಉಪಾಧ್ಯಕ್ಷರೆ , ನನ್ನ ಮಾತನ್ನು ದಾಖಲೆಯಿಂದ ತೆಗೆಯಿರಿ ಎಂದಾಗ ನನಗೂ ಅವಮಾನವಾಗಿರುತ್ತದೆ ನಾನು ತಪ್ಪು ಮಾಡಿದ್ದೇನೆ ಎಂದು ಒಪ್ಪಿಕೊಂಡಿದ್ದೇನೆ ಅಲ್ಲವಾ? ನೀವು ಹೇಳಿಬಿಟ್ಟರೆ ನಮಗೆ ಏನೂ ಅನಿಸುವುದಿಲ್ಲ ಮಾತನಾಡಿದ್ದನ್ನು ದಾಖಲುಎಯಿಂದ ತೆಗೆದರೆ ಅವಮಾನ

ಉಪಾಧ್ಯಕ್ಷರು ಮಾನ್ಯ ಪ್ರಕಾಶ್ ರವರು ತಮಗೆ ಹೇಳಿದರು ಆವೇಶದಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ಸಾಮಾನ್ಯವಾಗಿ ಕೆಲವು languages ಬರುತ್ತಿರುತ್ತವೆ Out of the way ಕೂಡ ಮಾತನಾಡುತ್ತಿರುತ್ತೇವೆ

(ಗೊಂದಲ)

ಉಪಾಧ್ಯಕ್ಷರು ಈಗ ಏಕೆ ಅದನ್ನು ಸುಮ್ಮನೆ ದೊಡ್ಡದು ಮಾಡುತ್ತೀರಿ?

ಶ್ರಿ ಜೆ ಸಿ ಮಾಧುಸ್ವಾಮಿ ಮಾನ್ಯ ಉಪಾಧ್ಯಕ್ಷರೆ, I accept ಮಾನ್ಯ ಪ್ರಕಾಶ್ ರವರು ಹೇಳಿದ ತಕ್ಷಣ ನಾನು ಆಯಿತು ಎಂದು ಒಪ್ಪಿಕೊಂಡೆ ಏಕೆ? I know, I have erred, ಆದರೆ Minister mislead ಮಾಡಿದ್ದಾರೆ

ಉಪಾಧ್ಯಕ್ಷರು ಅವರು ತಪ್ಪು ಎಂದು ಒಪ್ಪಿಕೊಂಡಿದ್ದಾರಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ Now, I am charging him Please refer it to Privilege Committee ಇದನ್ನು privilegeಗೆ ದಯಮಾಡಿ refer ಮಾಡಬೇಕು

ಉಪಾಧ್ಯಕ್ಷರು ಆಗಿರತಕ್ಕಂಥ ತಪ್ಪುಗಳನ್ನು ಸರಿ ಮಾಡತುತ್ತೇನೆ ಎಂದು ಹೇಳುತ್ತಿದ್ದಾರಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ನಮಗೆ ಬೇಕಾಗಿಲ್ಲ ಈ case ಅನ್ನು ತಾವು privilege ಗೆ ತೆಗೆದುಕೊಳ್ಳಬೇಕು ನನಗೆ ಸಂಬಂಧ ಇಲ್ಲ, ಈ ಸಭೆಗೆ ಸುಳ್ಳು ಮಾಹಿತಿ ಕೊಟ್ಟಿದ್ದಾರೆ ನಾನು charge ಮಾಡುತ್ತಿದ್ದೇನೆ ಅಕಸ್ಮಾತ್ ನಮ್ಮದು ತಪ್ಪಿದ್ದರೆ, ನಮ್ಮ ಮೇಲೆ action ಆಗಲಿ Prove ಆದರೆ ಅವರ ಮೇಲೆ action ಆಗಬೇಕಲ್ಲ

ಉಪಾಧ್ಯಕ್ಷರು ಈಗ ಮುಂದಿನ ಪ್ರಶ್ನೆ ಹಾಲಪ್ಪನವರು

ಶ್ರೀ ಜೆ ಸಿ ಮಾಧುಸ್ವಾಮಿ No, I am prepared to under go action

ಉಪಾಧ್ಯಕ್ಷರು You see, subject is not connected to individual

ಶ್ರೀ ಎಂ ಪಿ ಪ್ರಕಾಶ್ ನಾನು ಇಷ್ಟೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದನ್ನು ಸರಿಪಡಿಸಬೇಕೆಂದು ಕೇಳುತ್ತಿದ್ದಾರೆ

ಶ್ರೀ ಜೆ ವಿ ಪ್ರಕಾಶ್ ನಾನು ಇಷ್ಟೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದನ್ನು ಸರಿಪಡಿಸಬೇಕೆಂದು ಹೇಳುತ್ತಿದ್ದಾರೆ

ಶ್ರೀ ಜೆ ವಿ ಶ್ರೀರಾಮರೆಡ್ಡಿ ಇದನ್ನು Privilege Committee ಗೆ refer ಮಾಡಲೇಬೇಕು

ಶ್ರಿ ಜೆ ಸಿ ಮಾಧುಸ್ವಾಮಿ ಎಲ್ಲಾ Minister ಈ ರೀತಿ ಮಾಡಿದರೆ ನಾವು ಇಲ್ಲಿ ಕೆಲಸ ಮಾಡುವುದಕ್ಕಾಗುತ್ತದಾ?

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಉಪಾಧ್ಯಕ್ಷರೆ, ಇದು ಮುಕ್ತಾಯವಾಗಲಿ ಎನ್ನುವುದಕ್ಕಾಗಿಯೇ ಒಂದು ಪರಿಹಾರವನ್ನು ಹೇಳಿದಿರಿ ಹಿಂದೆ ಕೂಡ ಇಂತಹ ಉದಾಹರಣೆಗಳು ಆಗಿವೆ ಒಂದು ವೇಳೆ ಇದು ಆಗಿಯೇ ತೀರಬೇಕು ಎನ್ನುವುದಾದರೆ, privilege ತಾವು ಕಳುಹಿಸುವುದಾದರೆ, ತಾವು privilege notice ಕೊಡಿ

ಶ್ರೀ ಜೆ ಸಿ ಮಾಧುಸ್ವಾಮಿ ಅವರು ಅಲ್ಲಿ ಕುಳಿತಿದ್ದಾರೆ He can suo motu refer

ಶ್ರೀ ಎಂ ಪಿ ಪ್ರಕಾಶ್ ಮಾಡಬಹುದು, but ಕೊಡಬಹುದು

ಶ್ರೀ ಕೆ ಆರ್ ರಮೇಶ್ ಕುಮಾರ್ I do not want to aggravate the situation You are the Minister for Parliatmentary Affairs Generally Parliamentary Affairs Minister ಆಗಿರುವವರು he plays the role of a coordinator ಏನೋ ಮಾಡಿ, ಅವರಿಗೆ ಸಹಾಯ ಮಾಡಬಹುದು ಇದು ಏನಾಗುತ್ತದೆ privilege ಗೆ ಎಂದರೆ ಅವರು ಬರೆದುಕೊಡಬೇಕಾಗಿಲ್ಲ This is a thing that has happened right in front of this House ನಾನು ಏನು ಹೇಳುತ್ತೇನೆ ಎಂದರೆ ಇದೆಲ್ಲಾ ಏಕಾಗುತ್ತದೆ ಗೊತ್ತಾ? ಮೊದಲಿಗೆ Deputy Minsiters, State Ministers, Cabinet Minister ಇರುತ್ತಾರೆ Parliamentary Secretaries appoint ಮಾಡುತ್ತೇವೆ ಯಾರೂ ಕೂಡ ಬಂದವರು direct ಆಗಿ ಮಂತ್ರಿಗಳಾಗುತ್ತಿರಲಿಲ್ಲ ಸ್ವಲ್ಪ ಇಲ್ಲಿ ಕುಳಿತು, ಕಲಿತು, ತಿಳಿದುಕೊಂಡು training ತೆಗೆದುಕೊಂಡು ಬರುತ್ತಿದ್ದರು ಈಗ ಏನಾಗುತ್ತದೆ ಎಂದರೆ, unfortunately, for various compulsions and social factors ನಾವು ಮಂತ್ರಿಮಂಡಲ ರಚನೆ ಮಾಡುತ್ತೇವೆ ಆಗ ಆವರಿಗೆ ಅಧಿಕಾರದ ಅಹಂ ಇರುತ್ತದೆ ಹೊರತು ತಿಳಿದುಕೊಳ್ಳಬೇಕು ಎನ್ನುವ ನಮ್ರತೆ ಇರುವುದಿಲ್ಲ Briefing ತೆಗೆದುಕೊಳ್ಳಬೇಕು, ಯಾರು Member, ಏನೇನು ಉಪಪ್ರಶ್ನೆಗಳು

ಬರಬಹುದು ಎಂದು ನೋಡಬೇಕು ಸ್ವಲ್ಪ Houseಗೆ ಗೌರವ ಕೊಡಬೆಕು ಎನ್ನುವುದು ಇದ್ದರೆ parlıamentary practıces ಶ್ರದ್ಧಾ ಭಕ್ತಿ ಇದ್ದರೆ, ಅನ್ನು ಅರ್ಥ ಮಾಡಿಕೊಳ್ಳಬೇಕು ಇದು ನಮ್ಮನ್ನು ಮರ್ಯಾದೆಯಾಗಿ ನಡೆಸಿಕೊಂಡು ಹೋಗುವುದಕ್ಕೆ ರೂಪಿಸುವುದು ಎಂದು ತಿಳಿದುಕೊಂಡು ಬಿಟ್ಟರೆ ಏನೂ ಸಮಸ್ಯೆಯಾಗುವುದಿಲ್ಲ ಎಲ್ಲರೂ ಕೂಡ ಅವರವರ ಇಷ್ಟಕ್ಕೆ ನಾವು ಪಾಳೆಯಗಾರರು ಎನ್ನುವ ಮನೋಭಾವದಿಂದ ನಡೆಸುವುದಾದರೆ Parlıamentary Democracy ಅಗತ್ಯವಿರುವುದಿಲ್ಲ ಇಲ್ಲಿ the questıon of prıvıleg ಅಲ್ಲ ಹಿಂದಿನ ಸರ್ಕಾರ, ಈ ಸರ್ಕಾರ, they are all dıfferent thıngs It ıs not a matter ofr argument ನಾವ್ಯಾರು ಕೂಡ ಸರ್ವಜ್ಞರಲ್ಲ ಅನುಭವದಿಂದ ಕಲಿತಿದ್ದೇವೆ, ಇನ್ನೂ ಕಲಿಯಬೇಕಾದ್ದು ಬೇಕಾದಷ್ಟು ಇದೆ ಇಷ್ಟೆಲ್ಲಾ ಕಲಿತರೂ ಕೂಡ ಎಲ್ಲೋ ಒಂದು ಕಡೆ ಬಹಳ ಸಣ್ಣವಾಗಿ ಕಾಣುತ್ತೇವೆ ನಮಗಿಂತಲೂ ಹೆಚ್ಚು ತಿಳಿದವರು ಇರುತ್ತಾರೆ ಸ್ವಲ್ಪ ನಮ್ರತೆ ಇದ್ದರೆ ಎಲ್ಲಾ problem solve ಆಗುತ್ತದೆ ಅವರು ಏನು ಮಾಡಿದರು, ಜಲಾಶಯಗಳು, ಕೆರೆಗಳು ಅವೆಲ್ಲಾ ıncorrect ದಯಮಾಡಿ ಸಹಿಸಿಕೊಳ್ಳಬೇಕು ನನಗೂ ಹೊಸದು, ಸರಿ ಮಾಡುತ್ತೇನೆಂದರೆ ಮುಗಿದುಹೋಯಿತು

ಉಪಾಧ್ಯಕ್ಷರು ಕೈಬಿಟ್ಟುಬಿಡಿ ಮುಂದಿನ ವಿಚಾರಕ್ಕೆ ಹೋಗೋಣ ಇನ್ನು ೧೪ ಪ್ರಶ್ನೆಗಳು ಇವೆ, ಬಹಳ ımportant ನಾಗರೀಕರಿಗೆ ಅನುಕೂಲವಾಗುವಂಥಾದ್ದು ರಾಜ್ಯಕ್ಕೆ ಸಂಬಂಧಪಟ್ಟಂತಹ ವಿಚಾರ ನೀವು ಏಕೆ ಈ ರೀತಿ ಮಾಡುತ್ತೀರೋ ನನಗೆ ನಿಜವಾಗಲೂ ಅರ್ಥವಾಗುವುದಿಲ್ಲ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಉಪಾಧ್ಯಕ್ಷರೆ, ನಾನು ನಿಮ್ಮ ಸಹಾಯಕ್ಕೆ ಬರುತ್ತೇನೆ ಇದು ಹಕ್ಕುಚ್ಯುತಿ ಆಗುವುದಂತೂ ಸರಿ ಅದರಲ್ಲಿ ಏನೂ ಅನುಮಾನವಿಲ್ಲ ಆದೆ ಮಾನ್ಯ ಸಚಿವರಿಗೆ ತಮ್ಮ ಮೂಲಕ ನಾನು ಕೇಳುವುದೇನೆಂದರೆ, ಈ ಪಟ್ಟಿ ಕೊಟ್ಟಿರುವುದರಲ್ಲಿ ತಪ್ಪಾಗಳಾಗಿವೆ

ತಪ್ಪಾಗಿರುವುದನ್ನು ಒಪ್ಪಿಕೊಂಡು ಈ ತಪ್ಪನ್ನು ನಾನು ಸರಿಪಡಿಸುತ್ತೇನೆ ಎಂದು ಅವರು ಹೇಳಲಿ ಎಂದು ಕೇಳಿಕೊಳ್ಳುತ್ತೇನೆ

ಉಪಾಧ್ಯಕ್ಷರು ಆಗಲೇ ಹೇಳಿದರು ಆಫಿದೆ recordನಲ್ಲಿ ಇದೆ

ಶ್ರೀ ಎಂ ಪಿ ಪ್ರಕಾಶ್ ಹಿರಿಯರಾದ ಮಾನ್ಯ ರಮೇಶ್ ಕುಮಾರ್ ರವರು ಹೇಳಿದ ಮೇಲೆ ನಾನು ಮಾಧುಸ್ವಾಮಿಗಳಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ ಏನೇ ಮನಸ್ಸಿನಲ್ಲಿ ಇದ್ದರೂ ಕೂಡ ಕೊನೆಯನ್ನು ಮೊದಲು ಮನಸ್ಸಿನಲ್ಲಿ ಇಟ್ಟುಕೊಳ್ಳಬೆಕು ದಾರವನ್ನು ಸೂಚಿಯಲ್ಲಿ ಇಟ್ಟು ಹೊಲೆಯಬೇಕಾಗಿದ್ದರೆ ದಾರಕ್ಕೆ ಗಂಟು ಹಾಕಬೇಕು ಎಂದು ಇದೆ ಆದುದರಿಂದ ಕೊನೆ ಎನ್ನುವಂಥದ್ದು ಏನೆಂದರೆ ನಿಮ್ಮ ಉದ್ದೇಶ ನೆರವೇರಬೇಕಾಗಿದೆ ಆದುದರಿಂದ ಅದನ್ನು ಸರಿಪಡಿಸುತ್ತೇವೆಂದು ಹೇಳಿದ್ದೇವೆ ದಯವಿಟ್ಟು ಇದನ್ನು ಬಹಳ ದೊಡ್ಡದಾಗಿ ಮಾಡದೇ, ಹಿಂದೆ ಕೂಡ ಈ ರೀತಿಯಾಗಿ ಅನೇಕ ಪ್ರಸಂಗಗಳಲ್ಲಿ ಕೈಬಿಟ್ಟಿದ್ದೇವೆ ನಾವು ಅದನ್ನು ಸರಿಪಡಿಸುತ್ತೇವೆ ಎಂದು ಹೇಳಿದ್ದಾರೆ, ಅದನ್ನು ಮಾಡಿಸೋಣ, ಮಾನ್ಯ ಮಾಧುಸ್ವಾಮಿಯವರೆ ಅದು ಬೇಡ

ಉಪಾಧ್ಯಕ್ಷರು ಈಗ ಹಾಲಪ್ಪನವರು

ಶ್ರೀ ಜೆ ಸಿ ಮಾದುಸ್ವಾಮಿ ಇಂತಹ ವಿಷಯ ಅನೇಕ ಸಲ ಚರ್ಚೆ ಮಾಡಿದ್ದೇವೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಉಪಾಧ್ಯಕ್ಷರೆ, ಇಂಥ ವಿಷಯ ಇಲ್ಲಿ ಅನೇಕ ಬಾರಿ ಚರ್ಚೆ ಮಾಡಿದ್ದೇವೆ

ಶ್ರೀ ಮಹಿಮಾ ಪಟೇಲ್ (ಚನ್ನಗಿರಿ) ಮಾನ್ಯ ಅಧ್ಯಕ್ಷರೆ, ಸಾಮಾನ್ಯವಗಿ ನಾವು ನಮಗೆ ಕಡಿಮೆಯಾದಾಗ ಮಾತ್ರ ಪ್ರತಿಭಟನೆಯನ್ನು ಮಾಡುತ್ತೆವೆ ನಮಗೆ ಜಾಸ್ತಿಯಾದಾಗ ಪ್ರತಿಭಟನೆ ಮಾಡುವುದಕ್ಕೆ ಹೋಗುವುದಿಲ್ಲ ನಾವು ಸದಸ್ಯರು ಅನದ್ನು ಕಲಿತುಕೊಳ್ಳಬೇಕಾಗುತ್ತದೆ ವಿನಾ ಕಾರಣ ನಮಗೆ ಏನಾದರೂ ಜಾಸ್ತಿಕೊಟ್ಟಾಗಲೂ ಕೂಡ,

ಅನ್ಯಾಯವಾಗಿ ನಮಗೆ ಜಾಸ್ತಿಯಾಗಿದೆಯೆಂದು ನಾವೆಲ್ಲಾ ಸದಸ್ಯರು ಪ್ರತಿಭಟನೆಯನ್ನು ಮಾಡುವುದನ್ನು ಕಲಿತುಕೊಳ್ಳಬೇಕು

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಉಪಾಧ್ಯಕ್ಷರೆ, ನಾವು ಅಷ್ಟು ದೊಡ್ಡ ಮನುಷ್ಯರಾಗಿ ಬೆಳೆದಿಲ್ಲ ನಾವಿನ್ನು ಚಿಕ್ಕವರು, ನಮ್ಮ ಕ್ಷೇತ್ರಗಳಿಗೆ ಏನಾದರೂ ಜಾಸ್ತಿ ಬಂದರೆ ನಮ್ಮ ಜನರು ಮೆಚ್ಚುತ್ತಾರೆಂದು ತಿಳಿದುಕೊಂಡಿದ್ದೇವೆ ನಾವು ಅಷ್ಟೊಂದು ಬೆಳೆದಾಗ ಅದನ್ನೇ ಹೇಳುತ್ತೇವೆ ಈಗ ನಮ್ಮ ಪ್ರಶ್ನೆ ಇರುವಂಥಾದ್ದು, ಇದು ಮೊದಲ ಸಲ ಅಲ್ಲ ಇಲ್ಲಿ ಮಂತ್ರಿಗಳು, ನಾವೆಲ್ಲಾ Business Advisory Committeee ಯಲ್ಲಿ ಕುಳಿತುಕೊಂಡು, Road ಕೊಡುವಾಗ, ಮನೆ ಕೊಡುವಾಗ, ಮನೆ ಕೊಡುವಾಗ, ಎಲ್ಲಾ ಚರ್ಚೆಗಳು ಆಗಿವೆ ಮಾನ್ಯ ಎಂ ಪಿ ಪ್ರಕಾಶರವರೆ, ತಾವು ಜೀವಂತ ಸಾಕ್ಷಿ ಇಲ್ಲಿ ಮಾನ್ಯ ಶಿವರಾಂರವರು raise ಮಾಡಿ ಆಗಿದೆ ಬೇರೆಯವರೆಲ್ಲಾ raise ಮಾಡಿ ಆಗಿದೆ ಹೊರಗಡೆ ಬೇಕಾದಷ್ಟು ಬಾರಿ ಚರ್ಚೆಯಾಗಿದೆ, ಇಂಥಾದ್ದೆಲ್ಲಾ ಮುಂದೆ ಆಗುವುದಿಲ್ಲವೆಂದು ಮಾನ್ಯ ಬಿ ಎಸ್ ಯಡಿಯೂರಪ್ಪನವರು ಹೇಳಿಕೆ ಕೊಟ್ಟು ಆಗಿದೆ ನೀವು ನಮ್ಮನ್ನು ಸಮಾಧಾನ ಮಾಡಿ ಆಗಿದೆ But where are we heading? ನೀವೇ ಹೇಳಿ ನಮಗೆ ಈ ೧೦ ಮನೆಗಳಿಂದ ಏನೂ ಆಗ ಬೇಕಾಗಿಲ್ಲ ಇದರಿಂದ ನಾವು ಏನೂ ರಾಜಕೀಯ ಮಾಡುವುದಿಲ್ಲ ಒಬ್ಬ ಮಂತ್ರಿಗೆ ಇಷ್ಟೊಂದು ಧಾರ್ಷ್ಟ್ಯತೆ ಬರುತ್ತದೆ, ಒಬ್ಬ ಮಂತ್ರಿಗೆ ನಾನು responsible ಅಲ್ಲವೆನ್ನುವ ಭಾವನೆ ಬರುತ್ತದೆ ಒಬ್ಬ ಮಂತ್ರಿಗೆ ನಾನು ಏನು ಬೇಕಾದರೂ ಮಾಡಬಹುದೆಂಬ ಭಾವನೆ ಬಂದರೆ, ನಾಳೆ ಈ ರಾಜ್ಯದ ಗತಿ ಏನು ಆಗಬಹುದು? ತಾವು ಹೇಳಿ ಇದು ಬಿಡಿ I am not bothered ನಾನು ಹೇಳುತ್ತಿದ್ದೇನೆ ಒಬ್ಬ Minister ಗೆ ಗೊತ್ತಿರಬೇಕು, I am responsible to some other authority, which is this House Guidelines ಇದೆಯಾ, ತಂದು ಮುಂದೆ ಇಡಲಿ He is my good friend ಪ್ರಶ್ನೆ ಅದಲ್ಲ He must try to learn things ಎರಡು ಮನೆ ಐದು ಮನೆ, ಹತ್ತು ಮನೆ, ಮಿನಿಸ್ಟರ್ ಎಲ್ಲೊ ಯಾರಿಗೋ

consıderatıon ಕೊಟ್ಟರೆ ಕೇಳುವಷ್ಟು ನಾವು ಸಣ್ಣವರಲ್ಲ ೫ ಮನೆ ಇರಲಿ, ೧೪೦ ಮನೆ ಇರಲಿ, ೫ ಮನೆ ಇರಲಿ ೮೦ ಮನೆ ಇರಲಿ, ತುಮಕೂರು ಜಿಲ್ಲೆ ೧೦೦ ಮನೆಗಿಗೆ ಸೀಮಿತವಾಗಬೇಉ, ಆರು ತಾಲ್ಲೂಕು ಇರುವವರು ೨೪೦ ಮನೆಗಳನ್ನು ತೆಗೆದುಕೊಳ್ಳಬೇಕೆಂದರೆ, ಹಾಗಾದರೆ ತುಮಕೂರುನಲ್ಲಿ ಇರುವ ನಾವುಗಳು ನಾಲಾಯಕ್ ಎಂ ಎಲ್ ಎ ಗಳಾ? ನಾಳೆ ನಮ್ಮ ಜಿಲ್ಲೆಯಲ್ಲಿ ಇದನ್ನು ಹಿಡಿದುಕೊಂಡು ತುಮಕೂರು ಜಿಲ್ಲೆಯ ಶಾಸಕರು ಕತ್ತೆ ಕಾಯುತ್ತಿದ್ದರಾ, ಎಂದರೆ ನಾವು ಏನು ಹೇಳಬೇಕು? ನಾವು ಹೇಳುತ್ತೇವೆ, ಕೇಳಲಿ ಸೌಂಧ್ ಕೆನರಾಕ್ಕೆ ಇಷ್ಟು ಮನೆಗಳನ್ನು ಕೊಟ್ಟಿದ್ದಾರೆ ಏಕೆ ಕೊಟ್ಟಿದಾರೆಂದರೆ, ಅಲ್ಲಿ ಮೀನುಗಾರರು ಇದ್ದಾರೆ, ಅಲ್ಲಿ ಕಡಲು ಇದೆ ಕೊಟ್ಟಿದ್ದಾರೆ ಕೊಟಿದ್ದಾರೆ ಬಿಡು, ಎಂದು ಹೇಳುತ್ತೇವೆ ತುಮಕೂರು = ಕೋಲಾರಕ್ಕೂ, ತುಮಕೂರು = ಚಿತ್ರದುರ್ಗಕ್ಕೂ, ತುಮಕೂರು = ದಾವಣಗೆರೆಗೂ, ದಾವಣಗೆರೆಗೂ ಹಾವೇರಿಗೂ ವ್ಯತ್ಯಾಸವಿರುವುದನ್ನು ತಾವು ȷustıfy ಮಾಡಿಕೊಳ್ಳುತ್ತೀರಾ? I dıd not speak a word about the coatal areas Yes, they desrve ıt We can understand But where ıs thıs?

ಶ್ರೀ ಸಿ ಎಸ್ ಪುಟ್ಟೇಗೌಡ ಮಾನ್ಯ ಉಪಾಧ್ಯಕ್ಷರೆ, ನಾವು ಬಹಳ ಜನ ನೋಡುತ್ತಿದ್ದೇವೆ ನಮ್ಮ ಸ್ಥಿತಿ ಎಲ್ಲಿಗೆ ಬಂದಿದೆಯೆಂದರೆ, ಕೆಲವು ಶಾಸಕರದ್ದು, ಬಹಳ ಜನ ಮಂತ್ರಿಗಳ ಹತ್ತಿರ ಹೋದಾಗ, ನಾವೆಲ್ಲಾ ಶಾಸಕರು ಎಲ್ಲೊ ಒಂದು ಕಡೆ ಅನ್ಯೆಶ್ಯರ ಹಾಗೆ ಕಾಣುತತಿದ್ದೇವೆ ಅವರ ಹಾಗೆ ನಾವು ಗೆದ್ದು ಬಂದಿದ್ದೇವೆ, ಗೆದ್ದು ಬಂದಿರುವ ಶಾಸಕರೆಂದು ನೋಡುವ ಸೌಜನ್ಯ ಕೂಡ ಬಹಳ ಜನರಿಗೆ ಇಲಲ ಇದು ಬಹಳ ಮುಖ್ಯವಾದ ವಿಚಾರ ಇದನ್ನು ಬರೀ ಮಾನ್ಯ ನಾಗರಾಜ ಶೆಟ್ಟರಿಗೆ ಹೇಳುವ ವಿಚಾರವಲ್ಲ, ಬಹಳ ಜನ ಪುಣ್ಯಾತ್ಮರು ಮಂತ್ರಿಗಳು ಅವರ ಹತ್ತಿರ ನಾವು ಹೋದಾಗ ನಮ್ಮನ್ನು ಹೇಗೆ ನೋಡುತ್ತಾರೆಂದರೆ, ೫೦ ವರ್ಷಗಳ ಹಿಂದೆ ಆಸ್ಪೃಶ್ಯರಿಗೆ ಹೊರಗಡೆ ಊಟಕ್ಕೆ ಇಡುತ್ತಿದ್ದರಲ್ಲಾ, ಹಾಗೆ ನಮ್ಮನ್ನು ಮಂತ್ರಗಳು ನೋಡುತ್ತಾಋಎ ಇದೆಲ್ಲವನ್ನು ಕಲಿಯಬೇಕು, ನಾವೆಲ್ಲಾ ಗೆದ್ದು ಬಂದಿರುವುದ್ರಿಂದ ೨೨೪ ಜನ ಸೇರಿ ಈ ಸದನ ಆಗಿ, ಮತ್ತೆ

ಯವುದೋ ಒಂದು ಪಾರ್ಟಿ ಬಹುಮತ ಆಗಿ ಮಂತ್ರಿಯಾಗಿರುತ್ತಾರೆಂಬ ನೆನಪು ಎಲ್ಲಿರಗೂ ಇರಬೇಕು, ಬಹುಶಃ ಮಾನ್ಯ ನಾಗರಾಜ ಶೆಟ್ಟರು ಹೀಗೆ ಆಗಬಾರದು ೧೪೦ ಕ್ಕೆ ೫೯ರ ಅಂತರವನ್ನು ನೋಡಿದಾಗ ಯಾರಿಗಾದರೂ ರೋಷ, ಆವೇಶ ಬರುತ್ತದೆ ಇದು ಎಲ್ಲಾ ಮಂತ್ರಿಗಳಿಗೂ ಆದರ್ಶವಾಗಬೇಕು, ಒಬ್ಬರಿಗಲ್ಲ ಬೇರೆಯವರು ಕೂಡ ನಮ್ಮ ಹಾಗೆ ನಾಲ್ಕು ಜನರಿಗೆ ಕೈ ಮುಗಿದು ಗೆದ್ದು ಬಂದಿದ್ದಾರೆಂಬುದನ್ನು ದಯಮಾಡಿ ಸರ್ಕಾರ ನಡೆಸುವಂಥವರು ತಿಳಿದುಕೊಳ್ಳಬೇಕು

ಉಪಾಧ್ಯಕ್ಷರು ಮಾನ್ಯ ಹೆಚ್ ಹಾಲಪ್ಪನವರೆ, ಪ್ರಶ್ನೆಯನ್ನು ಕೇಲಿ

ಶ್ರೀ ಹೆಚ್ ಹಾಲಪ್ಪ ಸಹಕಾರ ಸಚಿವರು ಇಲ್ಲ

ಉಪಾಧ್ಯಕ್ಷರು ನೀವು ಪ್ರಶ್ನೆಯನ್ನು ಕೇಳಿ

ಸಂಘದಲ್ಲಿ ಆಡಿಟ್ ಆಗದೇ ಇರುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩೧೬ - ೨೨೬೨

ಸದಸ್ಯರ ಹೆಸರ - ಶ್ರೀ ಹಾಲಪ್ಪ ಹೆಚ್ (ಹೊಸನಗರ)

ಉತ್ತರಿಸುವ ಸಚಿವರು – ಶ್ರೀ ಜೆ ಟಿ ದೇವೇಗೌಡ

ಕ್ರ.ಸಂ **ಪ್ರಶ್ನೆಗಳು** **ಉತ್ತರಗಳು**

ಅ ಹೊಸನಗರ ತಾಲ್ಲೂಕಿನಲ್ಲಿ ನೋಂದಣಿ ಸಂಖ್ಯೆ

ಅಲಗೆರೆ ಮಂಡ್ರಿ ಹೆಚ್ ಸಿ ಎಸ್ ಹೆಚ್ ೬/೨೧೫೮/೯೪-೯೫

ಬಟ್ಟೆಮಲ್ಲಪ್ಪ ಬಾಪೂಜಿ ದಿನಾಂಕ ೨೯-೮-೧೯೯೪ ರಂದು ಆ

ಹತ್ತಿ ಮತ್ತು ಕೈಮಗ್ಗ ಸಂಘವು ಸಂಘವು ನೋಂದಣಿಯಾಗಿದ್ದು

ಎಂದಿನಿಮದ ಅಸ್ತಿತ್ವದಲ್ಲಿದೆ ಅಲ್ಲಿಂದ ಸಂಘವು ಅಸ್ತಿತ್ವದಲ್ಲಿರುತ್ತದೆ

ಆ ಈ ಸಂಘದಲ್ಲಿರುವ ಒಟ್ಟು ಈ ಸಂಘದಲ್ಲಿ ಒಟ್ಟು ೮೦೫

ಸದಸ್ಯರ ಸಂಖ್ಯೆ ಎಷ್ಟು? ಸದಸ್ಯರು ಇರುತ್ತಾರೆ

ಇ ಈ ಸಂಘದಲ್ಲಿ ಸದಸ್ಯರಾಗಲು ರಂತೆ ೧೮ ವರ್ಷ

ಸಂಘದ ಬೈಲಾ ಸಂಖ್ಯೆ ೫

ಅರ್ಹತೆಗಳೇನು?

ಮೇಲ್ಪಪ್ಪವರು ಕಾರ್ಯವ್ಯಾಪ್ತಿಯಲ್ಲಿ

ವಾಸಿಸುತ್ತಿರುವ ಇಂಡಿಯನ್ ಕಾಂಟ್ರಾಕ್ಟ್ ಆಕ್ಟ್ ಪ್ರಕಾರ ಒಪ್ಪಂದ

ಮಾಡಿಕೊಳ್ಳಲು ಅರ್ಹರಿರುವ

ರೇಷ್ಮೆ ಮತ್ತು ಹತ್ತಿ

ಕೈಮಗ್ಗದ ನೇಕಾರರು

ಸದಸ್ಯರಾಗಲು ಅರ್ಹರಿರುತ್ತಾರೆ

ಈ ಈ ಸಂಘದ ಬೈಲಾ ಸಂಖ್ಯೆ ೨ ರಮತೆ

ಒಟ್ಟು ೬ ಉದ್ದೇಶಗಳನ್ನು

ಕಾರ್ಯಚಟುವಟಿಕೆಗಳಾವವು ಹೊಂದಿರುತ್ತವೆ

ಹಾಗೂ ಇದುವರೆವಿಗೂ
ಬೇಕಾಗುವ
ಕೈಗೊಂಡಿರುವ
ಸಾಧನಗಳೇನು?
ಬರುವ ನೇಕಾರರ
ಬೇಕಾಗುವ ನಗದು
ಒದಗಿಸುವುದು
ಸ್ಪೆಸಿಫಿಕೇಷನ್ ಮತ್ತು
ಸಂಘದವರು ಕೊಟ್ಟ ಕಚ್ಚಾ
ರೇಷ್ಮೆಗಳಿಂದ ಸದಸ್ಯರುಗಳು
ತಯಾರಿಸಿಕೊಡುವುದು
ಬೋರ್ಡಿನವರು ಸಂಸ್ಥಾನದ ರೇಷ್ಮೆ
ತಯಾರಿಸಿ ಅದನ್ನು ಸಂಘದ
ಉತ್ಪಾದನೆ ಮಾಡಿದ
ಕೊಡುತ್ತಿದ್ದಾರೆ ಹಾಗೂ
ಸಂಘದವರು

೧ ಸಂಘಕ್ಕೆ ಮತ್ತು ಸಂಗದ ಸದಸ್ಯರಿಗೆ
ನಿಧಿಗಳನ್ನು ಪಡಯುವುದು
೨ ಕಾರ್ಯವ್ಯಾಪ್ತಿಯಲ್ಲಿ
ಸದಸ್ಯರುಗಳ ಕೈಗಾರಿಕೆಗೆ
ಅಥವಾ ಸಾಲ
೩ ಸಂಘದವರು ತಿಳಿಸಿದ
ಡಿಸೈನುಗಳ ಮೇಲೆ
ಸಾಮಾನುಗಳಿಂದ ಹತ್ತಿ
ಸರತುಗಳನ್ನು
೪ ಹ್ಯಾಂಡ್ಲೂಂ
ಮತ್ತು ಹತ್ತಿ ಮಾಲು
ಸದಸ್ಯರಿಗೆ ಕೊಟ್ಟು, ಅವರು
ಬಟ್ಟೆಯನ್ನು ಸಂಘಕ್ಕೆ ವಾಪಸ್
ಉತ್ಪಾದನೆಯ ಹಾಲಿಯನ್ನು

ಕೊಡುತ್ತಿರುವುದು ಕಂಡು

ಬರುತ್ತಿದೆ

ಜಿಲ್ಲಾ ಪಂಚಾಯತಿಯವರ

ವಿಶೇಷ ಘಟಕ

ಯೋಜನೆಯಡಿ ನೇಕಾರರ

ಕಾಲೋನಿಯಲ್ಲಿ ಮನೆ

ನಿರ್ಮಿಸಲು ೪ ಜನ

ಸದಸ್ಯರಿತೆ ಪ್ರತಿಯೊಬ್ಬರಿಗೆ

ರೂ ೧೪,೦೦೦-೦೯ ಬಡ್ಡಿ

ರಹಿತ ಸಾಲ,

೧೪,೦೦೦-೦೦

ಸಬಸ್ಸಿಡಿಯಂತೆ ಕೊಟ್ಟಿರುತ್ತಾರೆ

ಇದಲ್ಲದೇ ನೇಕಾರರ

ಕಾಲೋನಿಯ ೩ ಜನ ಸದಸ್ಯರಿಗೆ

ಪ್ರತಿ ಸದಸ್ಯರಿಗೆ

ರೂ ೧೮,೦೦೦-೦೦ ಗಳಂತೆ ಸಾಲ

ಕೊಟ್ಟಿರುತ್ತಾರೆ

ಉ ಹಾಲಿ ಇರುವ ಆಡಳಿತ ಸಂಘದಲ್ಲಿ ಈ

ಕೆಳಕಂಡಂತವರು ಹಾಲಿ ಆಡಳಿತ

ಮಂಡಳಿಯ ಸದಸ್ಯರು ಯಾರು ಮಂಡಳಿಯ

ಸದಸ್ಯರಾಗಿರುತ್ತಾರೆ (೧)

ಯಾರು ಹಾಗೂ ಅವರೆಲ್ಲಾ ನೈಜ ಎನ್ ವೇದಾಂತಪ್ಪ,

ಅಧ್ಯಕ್ಷರು, (೨) ಶ್ರೀಧರ್,

ನೇಕಾರರೇ, ನೇಕಾರಕೆಯಲ್ಲಿ ಅವರ ಉಪಾಧ್ಯಕ್ಷರು (೩)

ಹೆಚ್ ಎ ಅಶೋಕ್, ನಿರ್ದೇಶಕರು

ಅರ್ಹತೆಗಳೇನು, ಇವರೆಲ್ಲರೂ (೪) ಚಿದಂಬರ್ ಹೆಚ್ ಜಿ

(೫) ಹಾಲೇಶ್ ಪಿ (೬)

ಕೈಮಗ್ಗ ಹೊಂದಿದ್ದಾರೆಯೇ, ಕುಮಾರ್ ಗೌಡ (೭) ವಿರೂಪಾಕ್ಷಪ್ಪ (೮) ಶ್ರೀಮತಿ

ಎಷ್ಟು ಸದಸ್ಯರ ಬಳಿ ಕೈಮಗ್ಗಗಳಿವೆ ರಂಮ್ಲತ್ (೯) ಶ್ರೀಮತಿ ಲೀಲಾವತಿ ಇವರು

(ವಿವರ ಒದಗಿಸುವುದು) ನೇಕಾರರೆಂದು ದೃಢೀಕರಣ ನೀಡಿ

ಚುನಾಯಿತರಾಗಿರುತ್ತಾರೆ ಈ ಪೈಕಿ ೨ ಜನ ಮಹಿಳಾ

ನಿರ್ದೇಶಕರು ಮಾತ್ರ ಕೈಮಗ್ಗ ಹೊಂದಿರುತ್ತಾರೆ

ಊ ಈ ಸಂಘವು ಎಷ್ಟು ೧೯೯೬-೯೭ರಿಂದ ೨೦೦೫-೦೬ ರವರೆಗೆ

ವರ್ಷದಿಂದ ಆಡಿಟ್ ಆಗಿಲ್ಲ ಆಡಿಟ್ ಅನ್ನು ಸಂಘದ ಲೆಕ್ಕ ಪುಸ್ತಕಗಳು

ಹಾಗೂ ಆಡಿಟ್ ಆಗದಿರಲು ಲಭ್ಯವಿಲ್ಲದ ಕಾರಣ ಆಡಿಟ್ ಆಗಿದೆ

ಕಾರಣಗಳೇನು?

ಸತತವಾಗಿ ಕೋರಿದ್ದರೂ ಸಹ ಸದರಿ

ಸಂಘ ಇದುವರೆಗೂ ಅವುಗಳನ್ನು ಲೆಕ್ಕ

ಪರಿಶೋಧನಾ ಇಲಾಖೆಗೆ ನೀಡಿರುವುದಿಲ್ಲ

ಋ ಈ ಸಂಘದ ಪ್ರತಿವರ್ಷದ ಸಂಘದ ಕಳೆದ ೫ ವರ್ಷಗಳ ವಾರ್ಷಿಕ ವಹಿವಾಟು ಈ

ವಾರ್ಷಿಕ ವಹಿವಾಟು ಎಷ್ಟು (ವರ್ಷಾವಾರು ಮಾಹಿತಿ ಒದಗಿಸುವುದು)	ಕೆಳಕಂಡಂತೆ ಇರುತ್ತದೆ

ವ್ಯಾಪಾರ ವಹಿವಾಟು	ಖರೀದಿ	ಮಾರಾಟ ಲಾಭ
೨೦೦೧-೦೨	೧೧೪	೧೧೬
೨೦೦೨-೦೩	೧೧೪	೧೧೭
೨೦೦೩-೦೪	೧೧೧	೧೧೩
೨೦೦೪-೦೫	೧೦೬	೧೦೮
೨೦೦೫-೦೬	೦೭೪	೦೭೬

೨೦೦೩-೦೪ ನೇ ಸಾಲಿನಲ್ಲಿ

ಈ ಂಘದ ಒಟ್ಟು ೬೪

ನೇಕಾರರಿಗೆ ವಸತಿ

ಆರ್ಯಗೌರವಗಳನ್ನು

ಅನುಬಂಧದಲ್ಲಿ (A)

ಲಗತ್ತಿಸಿದೆ

ಎ ಈ ಸಾಲಿನಲ್ಲಿ ಪುನಃ ಮನೆಗಳೇನಾದರೂ ಒದಗಿಸಲು ಉದ್ದೇಶವಿದೆಯೇ — ಇಲ್ಲ

ಏ ಈ ಫಲಾನುಭವಿಗಳನ್ನು — ಕೇಂದ್ರ ಸರ್ಕಾರದ

ಮಾರ್ಗಸೂಚಿಯನ್ವಯ

ಆಯ್ಕೆ ಮಾಡಲು ಇರುವ — ಫಲಾನುಭವಿಗಲನ್ನು

ಆಯ್ಕೆ ಮಾಡಲು

ಮಾನದಂಡಗಳೇನು? — ಈ ಕೆಳಕಂಡ

ಮಾನದಂಡಗಳನ್ನು

ಅನುಸರಿಸಲಾಗುವುದು –

೧ ಫಲಾನುಭವಿಯು
ನೇಕಾರ ಸಹಕಾರ
ಸಂಘದ ಸದಸ್ಯನಾಗಿರಬೇಕು
೨ ಕೈಮಗ್ಗ ನೇಯ್ಗೆ
ವೃತ್ತಿಯಿಂದ ಕನಿಷ್ಟ
ಶೇಕಡ ೫೦ ರಷ್ಟು ವಾರ್ಷಿಕ
ವರಮಾನವನ್ನು
ಹೊಂದಿರಬೇಕು
೩ ನಿವೇಶನವು ಪತಿ ಪತ್ನಿಯ
ಹೆಸರಿನಲ್ಲಿ ಜಂಟಿ ಖಾತೆ
ಹೊಂದಿರಬೇಕು
೪ ಫಲಾನುಭವಿಯು ವಸತಿ
ರಹಿತರಾಗಿರಬೇಕು
೫ ಘಟಕ ವೆಚ್ಚಕ್ಕಿಂತ
ಹೆಚ್ಚುವರಿಯಾದ
ಮೊತ್ತವನ್ನು ಫಲಾನುಭವಿಯು
ಭರಿಸಲು
ಶಕ್ತನಾಗಿರಬೇಕು
೬ ಇದೇ ರೀತಿಯ
ಸೌಲಭ್ಯವನ್ನು ರಾಜ್ಯ ಸರ್ಕಾರ
ಅಥವಾ ಕೇಂದ್ರ ಸರ್ಕಾರದ
ಯಾವುದೇ
ಯೋಜನೆಯಲ್ಲಿ ಈ ಹಿಂದೆ
ಪಡೆದಿರಬಾರದು

ಐ ಈ ಸಂಘದಲ್ಲಿ ಅವ್ಯವಹಾರ ೧೯೯೬-೯೭ರಿಂದ ೨೦೦೫-೦೬ ನೇ ಸಾಲಿನವರೆಗೆ

ಗಳು ಏನಾದರೂ ಜರುಗಿದೆಯೇ? ಸಂಘದ ಆಡಿಟ್ ಆಗದೇ ಇರುವುದರಿಂದ ಸಂಘದಲ್ಲಿ

ದುರುಪಯೋಗವಗಿದೆ

(ಅವ್ಯವಹಾರ) ಎಂದು

ನಿಖರವಾಗಿ ಹೇಳಲು ಕಷ್ಟ

ಸಾಧ್ಯ

ಒ ಜರುಗಿದ್ದರೆ ಅವು ಯವುವು

(ವಿವರಗಳನ್ನು ಒದಗಿಸುವುದು) ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೨೨೬೨ಕ್ಕೆ ಅನುಬಂಧ
ಜಿಲ್ಲಾ ಪಂಚಾಯತ್, ಶಿವಮೊಗ್ಗಯ
೨೦೦೩-೦೪ನೇ ಸಲಿನಲ್ಲಿ ವಸತಿ ಕಾರ್ಯಾಗಾರಗಳನ್ನು ಪಡೆದ ಪಟ್ಟಿ

ಕ್ರ ಸಂ	ಫಲಾನುಭವಿಯ ಹೆಸರು	ತಂದೆ/ಗಂಡನ ಹೆಸರ	ಜಾತಿ	ಕಸಬು	ಸದಸ್ಯತ್ವ ಸಂಖ್ಯೆ	ಗ್ರಾಮ	ಷರಾ
೧	೨	೩	೪	೫	೬	೭	೮
೧	ಲಕ್ಷ್ಮಿ	ಆರುಮುಗಂ	ವಡ್ಡ ಭೋವಿ	೨೯೨	ಹರಿದ್ರಾವತಿ		
೨	ಶೈಲಜಾ	ಸೋಮಶೇಖರ	ಲಿಂಗಾಯತ		೩೦೦	ಬಟ್ಟೆಮಲ್ಲಪ್ಪ	
೩	ಬಸಪ್ಪ	ಶಿವಪ್ಪಗೌಡ	ಲಿಂಗಾಯತ		೧೬೧	ಬಟ್ಟಿಮಲ್ಲಪ್ಪ	
೪	ಎಸ್/ಎಸ್ ಉಷಾ		ಸೂರ್ಯನಾರಾಯಣಬ್ರಾಹ್ಮಣ			೨೯೩	ಬಟ್ಟಿಮಲ್ಲಪ್ಪ
೫	ಕನ್ನಮ್ಮ	ತಿಮ್ಮಪ್ಪ	ಈಡಿಗ		೪೮೩	ಬಟ್ಟಿಮಲ್ಲಪ್ಪ	
೬	ಹೆಚ್ ಯು ಹಸನ್ ಸಾಬ್ ಮುಡುಬ		ಹೆಚ್ ವೈಹಸನ್ ಸಾಬ್		ಮುಸ್ಲೀಂ		೩೪

೭ ಇಷ್ಟಾಬ್ ಪೀರ್ ಸಾಬ್	ಮುಸ್ಲೀಂ	೫೦	ಅಲಗೇರಿಮಂಡ್ರಿ
೮ ಅಸ್ಮತ್ ಐಲೀಶ್	ಮುಸ್ಲೀಂ	೧೫೩	ಬಟ್ಟಮ್ಲಲಪ್ಪ
೯ ಸಲೀಮಾ ಮೊಹದ್ದೀನ್	ಮುಸ್ಲೀಂ	೫೧೮	ಬಟ್ಟೆಮಲ್ಲಪ್ಪ
೧೦ ಹಾಲಪ್ಪ ಶಿವಪ್ಪಗೌಡ	ಲಿಂಗಾಯತ	೧೨೩	ಹರಿದ್ರಾವತಿ
೧೧ ಸುವರ್ಣ ಬಸವರಾಜು	ಎಸ್ ಟಿ	೩೫೧	ಮುಡುಬ
೧೨ ಹೆಚ್ ಕೆ/ಅಬ್ದುಲ್ಲಾ	ಅಹಮದ್ ಬ್ಯಾರಿಮುಸ್ಲೀಂ	೪೯೩	ಹರಿದ್ರಾವತಿ
೧೩ ಬೋಜರಾಜಶೆಟ್ಟಿ	ಶಿವರಾಮಶೆಟ್ಟಿ ನಾಡಶೆಟ್ಟಿ	೪೯	ಬಟ್ಟೆಮಲ್ಲಪ್ಪ
೧೪ ರಾಜು ಕೃಷ್ಣಪ್ಪಶೆಟ್ಟಿ	ನಾಡಶೆಟ್ಟಿ	೦೩	ಬಟ್ಟೆಮಲ್ಲಪ್ಪ
೧೫ ರುದ್ರಪ್ಪಗೌಡ	ಕೊಲ್ಲಪ್ಪಗೌಡ ಲಿಂಗಾಯತ	೨೩	ಅಲಗೇರಿಮಂಡ್ರಿ
೧೬ ಸುಬ್ರಮಣ್ಯರಾಜಣ್ಣ	ಭಕ್ತಡ್	೪೯೪	ಅಡ್ಡವಾಳಕೊಪ್ಪ
೧೭ ಶಕುಂತಲ ವೆಂಕಟೇಶ್	ಈಡಿಗ	೫೮೧	ಅಲಗೇರಿಮಂಡರಿ
೧೮ ಹಾಲೇಶ್ ಚನ್ನವೀರಪ್ಪಗೌಡ	ಲಿಂಗಾಯತ	೧೭೦	ಬಟ್ಟೆಮಲ್ಲಪ್ಪ
೧೯ ಎನ್ ಮಲ್ಲೇಶಪ್ಪ	ಗುರುಶಾಂತಪ್ಪಲಿಂಗಾಯತ	೩೦	ಬಟ್ಟೆಮಲ್ಲಪ್ಪ
೨೦ ರಾಮು ಕೊಲ್ಲೂರಪ್ಪ	ಈಡಿಗ	೫೩	ಬಟ್ಟೆಮಲ್ಲಪ್ಪ
೨೧ ಖತೀಜಾ ಅಬ್ಬಾಸ್	ಮುಸ್ಲೀಂ	೫೬೭	ಅಲಗೇರಿಮಂಡ್ರಿ
೨೨ ಉಸ್ಮಾನ್ ಬಾಷಾ	ಮೊಹೀನ್ ಸಾಬ್ಮುಸ್ಲೀಂ	೫೮೪	ಮುಡುಬ
೨೩ ಹೆಚ್ ವಿ ದಾಸಪ್ಪ ಗೌಡ	ಭದ್ರೇಗೌಡ ಲಿಂಗಾಯತ	೪೯೫	ಹರಿದ್ರಾವತಿ
೨೪ ಗಂಗಮ್ಮ ಬಂಗಾರಪ್ಪ	ಕುಣುಬಿ	೪೯೬	ಅಡ್ಡವಾಳಕೊಪ್ಪ
೨೫ ನಾಗರಾಜ ಹೊನ್ನಮ್ಮ	ಹಂದೀಕೋಗಿ	೨೨೩	ಬಟ್ಟೆಮಲ್ಲಪ್ಪ
೨೬ ಭಾಗ್ಯಲಕ್ಷ್ಮಿ ಉಮಾನುಹೇಶ್ವರ್	ಲಿಂಗಾಯತ	೫೫೭	ಹೆಚ್ ಹುಣಸ ಹಳ್ಳಿ
೨೭ ಕಮಲಮ್ಮ ಹಾಲಪ್ಪಗೌಡ	ಲಿಂಗಾಯತ	೫೮೩	ಅಲಗೇರಿಮಂಡ್ರಿ
೨೮ ಸಂಜೀವ ಬಂಡಾರಿ	ಜೋಗಪ್ಪಭಂಡಾರಿಭಂಡಾರಿ	೫೭೮	ಹರಿದ್ರಾವತಿ
೨೯ ಗಿರೀಶ ಪುಟ್ಟೇಗೌಡ	ಲಿಂಗಾಯತ	೧೩೩	ಅಲಗೇರಿಮಂಡ್ರಿ

೩೦ ರೇಣುಕಾ ಬಸಪ್ಪ	ಹಂದಿಜೋಗಿ ೩೩೩	ಬಟ್ಟೆಮಲ್ಲಪ್ಪ	
೩೧ ತನುಜಾ ಹೆಚ್ ಯು ಸುರೇಶ್	ಲಿಂಗಾಯತ	೧೩೪	ಹೆಚ್ ಹುಣಸ ಹಳ್ಳಿ
೩೨ ದೇವಮ್ಮ ಶಿವಣ್ಣ	ಹಂದಿಜೋಗಿ ೫೯೭	ಬಟ್ಟೆಮಲ್ಲಪ್ಪ	
		೫೧೫	ಬಟ್ಟೆಮಲ್ಲಪ್ಪ
೩೩			
		೨೪೯	ಬಟ್ಟೆಮಲ್ಲಪ್ಪ
೩೪ ಅಬುಲ್ ಅಜೀಜ್	ಬಿ ಆರ್ ಇಸ್ಮಾಯಿಲ್ಮುಸ್ಲೀಂ		
೩೫ ಚಂದ್ರಶೇಖರ	ಲಿಂಗಾಯತ	೨೪೯	ಬಟ್ಟೆಮಲ್ಲಪಪ್
೩೬ ಎನ್ ರುದ್ರೇಗೌಡ	"	೪೬	ಹರಿದ್ರಾವತಿ
೩೭ ಕೊಲ್ಲಪ್ಪಗೌಡ	"	೨೪	ನಂದಿಗ
೩೮ ನಾಗಪ್ಪ	"	೨೫೧	ದೊಂಬೆಕೊಪ್ಪ
		೧೬೦	
೩೯			
		೨೯	
೪೦ ಶೆಟ್ಟಿ	ನಾಡಶೆಟ್ಟಿ		
		೧೯೯	ಹಾರಿದ್ರಾವತಿ
೪೧ ರತ್ನಮ್ಮ ಶಿವಪ್ಪ	ಈಡಿಗ		
		೨೨೫	ದೊಂಬೆಕೊಪ್ಪ
೪೨ ಮುಕುಂದಪ್ಪ	ಹೊಳೆನಾಯಕ "		
		೫೯೯	ಹರಿದ್ರಾವತಿ
೪೩ ಗೌಡ ಹಾಲಪ್ಪಗೌಡ	ಲಿಂಗಾಯಿತ		
		೧೪೯	ಶೂಂರಿಕೊಪ್ಪ
೪೪ ಎನಸ್ ಶಂಕರಪ್ಪ	ನಾಗಪ್ಪಗೌಡ "		
		೪೦೩	ಶುಂರಿಕೊಪ್ಪ
೪೫ ಸುಳಿಗೋಡು ನಾಗಪ್ಪ	ನಿಧ್ದಪ್ಪ "		
		೪೯೨	ದೊಂಬೆಕೊಪ್ಪ
೪೬ ಗೋಪಮ್ಮ ಕುಪ್ಪನಾಯಕ	ಈಡಿ		
		೬೦೦	ನಂಬುವಳ್ಳಿ
೪೭ ಕುಮಾರಗೌಡ	ಶಿವಲಿಂಗಪ್ಪಗೌಡಲಿಂಗಾಯಿತ		
೪೮ ರೇವಣ್ಣ ಚನ್ನಬಸಪ್ಪ	"	೬೦೧	ದೊಂಬೆಕೊಪ್ಪ
೪೯ ಕುಸುಮ ರುದ್ರಪ್ಪಗೌಡ	"	೬೩	ನಂದಿಗ
		೧೧೨	ಘಂಟಿನಕೊಪ್ಪ
೫೦ ಹೆಚ್ ಎಂ ವಿಜಯ್	ಮೇಘರಾಜ್ "		
		೪೨೨	ಹರಲಾಳು
೫೧ ಮನೋಹರ	ತಿಮ್ಮಪ್ಪ ಮೋಚಿ		
		೧೪೦	ದೊಂಬೆಕೊಪ್ಪ
೫೨ ವೀರಬದ್ರಪ್ಪ	ಚನ್ನಬಸಪ್ಪ ಲಿಂಗಾಯಿತ		

೫೩ ಗಿರಿಜಮ್ಮ ಚಂದ್ರಪ್ಪ	ಭರ್ತ್ತಡ		೩೪೨	ಮಾರಿಗುಡ್ಡ
೫೪ ವೀರಬ್ರಪ್ಪಗೌಡ	ದೇವಪ್ಪಗೌಡ	ಲಿಂಗಾಯಿತ	೩೬೪	ದೊಂಬೆಕೊಪ್ಪ
೫೫ ಎಂ ಎಸ್ ಬಯದೇವಪ್ಪ	ಶಾಂಬೀರಪ್ಪಗೌಡ	"	೬೦೨	ಬಟ್ಟೆಮಲ್ಲಪ್ಪ
೫೬ ಬಿ ಹೆಚ್ ನಾಗವೇಣಿ	ಕುಮಾರ್	ಈಡಿಗ	೫೦೭	ಮುಂಬಾರು
೫೭ ಈಶ್ವರಪ್ಪಗೌಡ	ವೀರಪ್ಪಗೌಡ	ಲಿಂಗಾಯಿತ	೩೫೯	ದೊಂಬೆಕಪ್ಪ
೫೮ ಲೀಲಾವತಿ ಶಿವಾನಂದ	"		೪೭	ಮಾರುತಿಪುರ
೫೯ ರೇಣುಕ ನಿಂಗಪ್ಪ	"		೫೦೬	ಲಿಂಗನಕೊಪ್ಪ
೬೦ ಪ್ರತಿಮ ರಾಜಪ್ಪಗೌಡ	"		೨೯೬	ಮಜ್ಜಾನ
೬೧ ಕೆ ಯು ದಿನೇಶ್	ಉಮಾವತಿ	"	೬೦೩	ಹೆಚ್ ಮನವಳ್ಳಿ
೬೨ ಎ ಹೆಚ್ ದೇವಪ್ಪ ಗೌಡ	ಹಾಲಪ್ಪಗೌಡ	"	೩೮೭	ಅಲಗೇರಿಮಂಡ್ರ
೬೩ ಬೈರನಾಯ್ಕ	ಗಿಡ್ಡಾನಾಯ್ಕ	ಈಡಿಗ	೫೦೫	ಹಿರೇಮೈತಿ
೬೪ ಕುಮಾರಿ ರತ್ನ	ಶಂಕರಪ್ಪಗೌಡ	ಲಿಂಗಾಯಿತ	೨೧೭	ಸೋನಲೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಹಕಾರ ಸಚಿವರ ಪರವಾಗಿ ನಾನು ಉತ್ತರವನ್ನು ಕೊಡಲು ತಮ್ಮ ಅಪ್ಪಣೆಯನ್ನು ಕೇಳಿದ್ದೇನೆ ಸನ್ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಲಾಗಿದೆ

ಶ್ರೀ ಹೆಚ್ ಹಾಲಪ್ಪ ಮಾನ್ಯ ಉಪಾಧ್ಯಕ್ಷರೆ, ಸರ್ಕಾರದವರು ಉತ್ತರವನ್ನು ಒದಗಿಸಿದ್ದಾರೆ ಇದು ಒಂದು co-operative society, ಮಾನ್ಯ ಉಪಾಧ್ಯಕ್ಷರೆ, ನಾನು ಯಾರಿಗೆ ಪ್ರಶ್ನೆ ಕೇಳಬೇಕು?

ಉಪಾಧ್ಯಕ್ಷರು ಮಂತ್ರಿಗಳು ಇದ್ದಾರಲ್ಲಾ

ಶ್ರೀ ಹೆಚ್ ಹಾಲಪ್ಪ ಈ ರೀತಿ ಗಲಾಟೆ ಮಾಡುತ್ತಿದ್ದರೆ, ನಾವು ಹೇಗೆ ಮಾತನಾಡುವುದು?

ಉಪಾಧ್ಯಕ್ಷರು ಹಾಗೆ, ನೀವು ಮಾತನಾಡುತ್ತಲೇ ಇರಬೇಕು ನೀವು ಮಾತನಾಡಿ, ಯಾರು ಸುಮ್ಮನೆ ಕುಳಿತುಕೊಳ್ಳುವುದಿಲ್ಲ ನೀವು ಮಾತನಾಡಬೆಕು

ಶ್ರಿ ಹೆಚ್ ಹಾಲಪ್ಪ ಮಾನ್ಯ ಅಧ್ಯಕ್ಷರೆ, ಇದು ಒಂದು co-operative society ಗೆ ಸಂಬಂಧಪಟ್ಟಿದ್ದು ನಾನು ಅಡಿಟ್ ಏಕೆ ಆಗಿಲ್ಲವೆಂದು ಕೇಳಿದ್ದೇನೆ ಅದರಲ್ಲಿ ಲೆಕ್ಕಪತ್ರಗಲೂ ಲಭ್ಯವಿಲ್ಲದ ಕಾರಣ, ಕಳೆದ ೧೦ ವರ್ಷಗಳಿಂದ ಆಡಿಟ್ ಆಗಿಲ್ಲವೆಮದು ಹೇಳಿದ್ದಾರೆ ಇಲ್ಲಿ ಲೆಕ್ಕಪತ್ರಗಳು ಇಲ್ಲದಿದ್ದರೆ ಹಾಗೇ ಬಿಟ್ಟು ಬಿಡುವುದಾ? ಅದಕ್ಕೆ ಮಾನ್ಯ ಮಂತ್ರಿಗಳು ಮತ್ತು ಸರ್ಕಾರ ಏನು ಉತ್ತರವನ್ನು ಹೇಳುತ್ತಾರೆಂಬುದು ಒಂದು ಇನ್ನು ಮುಂದುವರೆದು ಹೇಳುತ್ತಾರೆ, ನಾನು ಈ ಸೊಸೈಟಿ ವ್ಯವಹಾರಗಳ ಬಗ್ಗೆ ಕೇಳಿದ್ದೆ ಅದನ್ನು ೨೦೦೧ರಿಂದ ೨೦೦೭ರವರೆಗೆ ಅದರ ವಹಿವಾಟುಗಳ ಬಗ್ಗೆ ಕೊಟ್ಟಿದ್ದಾರೆ, ಹಾಗಾದರೆ ಆ ಲೆಕ್ಕಪತ್ರಗಳು ಎಲ್ಲಿದೆ? ಅದು ಎಲ್ಲಿಂದ ಬಂತು? ಒಂದು ಕಡೆ ಲೆಕ್ಕಪತ್ರಗಳು ಲಭ್ಯವಿಲ್ಲವೆಂದು ಹೇಳುತ್ತಾರೆ ಅದೇ ಮುಂದುವರೆದ ಉತ್ತರದಲ್ಲಿ ಹೇಳುತ್ತಾರೆ ಅದರ ಎಲ್ಲಾ ದಾಖಲಾತಿಗಳನ್ನು ಕೊಟ್ಟಿದ್ದಾರೆ ಅದಕ್ಕೆ ಸರ್ಕಾರ ಉತ್ತರವನ್ನು ಹೇಳಬೇಕೆಂದು ನಾನು ತಮ್ಮ ಮೂಲಕ ಕೇಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಉಪಾದ್ಯಕ್ಷರೆ, ಮಾನ್ಯ ಸದಸ್ಯರ ಭಾವನೆ ಅರ್ಥವಾಗಿದೆ ೧೯೯೪-೯೫ ಮತ್ತು ೧೯೯೫-೯೬ ನೇ ಸಾಲಿನ ಲೆಕ್ಕಪರಿಶೋಧನೆ ಮುಗಿದಿರುತ್ತದೆ ೧೯೯೬-೯೭ ರಿಮದ ೧೯೯೭-೯೮ ಹಾಗೂ ೧೯೯೮-೯೯ ಅಂದರೆ ಮೂರು ವರ್ಷಗಳ ಲೆಕ್ಕ ಪರಿಶೋಧನೆಯ ಕೆಲಸ ಮುಕ್ತಾಯ ಹಂತದಲ್ಲಿ ಇದೆ ಸೂಕ್ತ ದಾಖಲೆಗನ್ನು ಒದಗಿಸದೇ ಇದ್ದುದರಿಂದ ಅದಕ್ಕೆ ಸ್ವಲ್ಪಮಟ್ಟಿಗೆ ವಿಳಂಬವಾಗಿದೆ ೧೯೯೯-೨೦೦೦ ದಿಂದ ಇತ್ತೀಚಿನವರೆಗೆ ಲೆಕ್ಕಪರಿಶೋಧನೆ ಈಗಾಗಲೇ ಪ್ರಾರಂಭವಾಗಿದೆ ಇನ್ನು ಎರಡು ತಿಂಗಳೊಳಗಾಗಿ ವರದಿಯನ್ನು ಅವರು ಕೊಡುತ್ತಾರೆ ಅವರು ಕೊಟ್ಟ ತಕ್ಷಣ ತಮಗೆ ಅದನ್ನು ಒದಗಿಸಿಕೊಡುತ್ತೇವೆ

ಶ್ರೀ ಹೆಚ್ ಹಾಲಪ್ಪ ಮಾನ್ಯ ಉಪಾಧ್ಯಕ್ಷರೆ, ಹೆಚ್ಚು ಮನೆಗಳನ್ನು ಕೊಡುವ ಉದ್ದೇಶವೇನಾದರೂ ಇದೆಯಾ? ಎಂದು ಕೇಳಿದ್ದೇವೆ ಅದಕ್ಕೆ ಉತ್ತರ ಇಲ್ಲವೆಂದು ಹೇಳಿದ್ದಾರೆ ಆದರೆ ತಪ್ಪು ಮಾಹಿತಿಯನ್ನು ಮಾನ್ಯ ಮಂತ್ರಿಯವರ ಮೂಲಕ ಸರ್ಕಾರಕ್ಕೆ ಹೇಳಿಸುತ್ತಿದ್ದಾರೆ, ಏಕೆಂದರೆ ೫೪ ಫಲಾನುಭವಿಗಳ ಪಟ್ಟಿಯನ್ನು ತಯಾರು ಮಾಡಿ, ಸ್ಯಾಕ್ಷನ್ ಗೆ ಜಿಲ್ಲಾ ಪರಿಷತ್ತಿಗೆ ಹೋಗಿದೆ ಜಿಲ್ಲಾ ಪರಿಷತ್ತಿನ ಸ್ಥಾಯಿ ಸಮಿತಿಯಲ್ಲಿ ೧೪ ೩ ೦೭ರಲ್ಲಿ discuss ಮಾಡಿದ್ದಾರೆ ಅವರು ವಾಪಸ್ಸು ಹಿಂದಕ್ಕೆ ಹಾಕಿದ್ದಾರೆ ಇಲ್ಲಿ ಮನೆಗಲನ್ನು ಕೊಡುವ ಪ್ರಸ್ತಾಪವಿಲ್ಲವೆಂದು ಏಕೆ ಸುಳ್ಳು ಹೇಳುತ್ತಾರೆ? ಇದಕ್ಕೆ ಮಾನ್ಯ ಮಂತ್ರಿಯವರು ಉತ್ತರವನ್ನು ಹೇಳಬೇಕು

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಉಪಾಧ್ಯಕ್ಷರೆ, ಈ ವಿಷಯದಲ್ಲಿ ಜಿಲ್ಲಾ ಪಂಚಾಯತಿಗೆ ಕಳುಹಿಸಿಕೊಟ್ಟಿದ್ದಾರೆಂಬ ಬಗ್ಗೆ ಫಲಾನುಭವಿಗಳನ್ನು ಆಯ್ಕೆ ಮಾಡಲು ಇರುವ ಮಾನದಂಡಗಳೇನು? ಎಂದು ಕೇಳಿದ್ದಾರೆ ಅದಕ್ಕೆ ನಾವು ಉತ್ತರವನ್ನು ಕೊಟ್ಟಿದ್ದೇವೆ

ಶ್ರೀ ಹೆಚ್ ಹಾಲಪ್ಪ ಆ ಪ್ರಶ್ನೆ ಎ ನಲ್ಲಿ ಇದೆ

ಶ್ರಿ ಎಂ ಪಿ ಪ್ರಕಾಶ್ ಈ ಕೆಳಕಂಡ ಮಾನದಂಡಗಳು, ೧ ಫಲಾನುಭವಿಯು ನೇಕಾರ ಸಹಕಾರ ಸಂಘದ ಸದಸ್ಯರಾಗಿರಬೇಕು

ಶ್ರೀ ಹೆಚ್ ಹಾಲಪ್ಪ ಅದಲ್ಲ, ಪ್ರಶ್ನೆ ಏ ನಲ್ಲಿ ಈ ಸಾಲಿನಲ್ಲಿ ಪುನಃ ಮನೆಗಳೇನಾದರೂ ಒದಗಿಸಲು ಉದ್ದೇಶವಿದೆಯೇ? ಎಮದು ಕೇಳದಿದೆ, ಅದಕ್ಕೆ ಇಲ್ಲವೆಮದು ಉತ್ತರವನ್ನು ಕೊಟ್ಟಿದ್ದಾರೆ

ಶ್ರೀ ಎಂ ಪಿ ಪ್ರಕಾಶ್ ಈ ಸಂಘದಲ್ಲಿ ಅವ್ಯವಹಾರ ಜರುಗದೆಯೇ? ಎನ್ನುವಂಥಾದ್ದಕ್ಕೆ ೧೯೯೬-೯೭ ರಿಂದ ೨೦೦೫-೦೬ ನೇ ಸಾಲಿನವರೆಗೆ ಸಂಘದ ಆಡಿಟ್ ಆಗದೇ ಇರುವುದರಿಂದ ಸಂಘದಲ್ಲಿ ದುರುಪಯೋಗವಾಗಿದೆಯೆಂದು ನಿಖರವಾಗಿ ಹೇಳುವುದಕ್ಕಾಗುವುದಿಲ್ಲವೆಂದು ಹೇಳಿದ್ದೇನೆ

ಶ್ರೀ ಹೆಚ್ ಹಾಲಪ್ಪ ಅದಕ್ಕೂ ಮುಂಚೆ ಎ ಪ್ರಶ್ನೆಯನ್ನು ನೋಡಿ, ಇದರಲ್ಲಿ ಈ ಸಾಲಿನಲ್ಲಿ ಮನೆಗಳನ್ನು ಒದಗಿಸುವ ಉದ್ದೇಶವಿದೆಯೇ? ಎಂದು ಕೇಳಿದ್ದೇನೆ ಅದಕ್ಕೆ ಉತ್ತರ ಇಲ್ಲವೆಂದು ಹೇಳಿದ್ದೀರಿ, ಇಲ್ಲವೆಂದ ಮೇಲೆ file ಜಿಲ್ಲಾ ಪರಿಷತ್ತಿಗೆ ಹೋಗಿದೆಯಲ್ಲಾ, ಇಲ್ಲಿ ೫೪ ಫಲಾನುಭವಿಗಳ ಪಟ್ಟಿ ಹೋಗಿದೆಯಲ್ಲಾ?

ಶ್ರೀ ಎಂ ಪಿ ಪ್ರಕಾಶ್ ಈ ವಿಚಾರದಲ್ಲಿ ಈಗ ನನ್ನ ಹತ್ತಿರ ಮಾಹಿತಿ ಇಲ್ಲ ಅವರು ಜಿಲ್ಲ ಪಂಚಾಯತಿಗೆ ಕಳುಹಿಸಿಕೊಟ್ಟಿದ್ದಾರೆಂಬ ಮಾಹಿತಿ ನನ್ನ ಬಳಿ ಮಾಹಿತಿ ಇಲ್ಲದೇ ಇರುವುದರಿಂದ

ಶ್ರೀ ಹೆಚ್ ಹಾಲಪ್ಪ ನನ್ನ ಹತ್ತಿರ ನಂಬರ್ ಇದೆ, ಕೊಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಇಲ್ಲಿ ಉತ್ತರದಲ್ಲಿ ಇಲ್ಲವೆಂದು ಹೇಳಿದ್ದಾರೆ ತಾವು ಕಳುಹಿಸಿಕೊಟ್ಟಿದ್ದಾರೆಂದು ಹೇಳಿದ್ದೀರಿ

ಶ್ರೀ ಹೆಚ್ ಹಾಲಪ್ಪ ಮಾನ್ಯ ಉಪಾಧ್ಯಕ್ಷರೆ, ಈಗ ಮಾನ್ಯ ಎಂ ಪಿ ಪ್ರಕಾಶ್ ರವರು ಉತ್ತರವನ್ನು ಕೊಡುತ್ತಾರೆ, ನಾವು ಮಾತನಾಡುವುದು ಬೇಡ ಅಲ್ಲಿ ಬಾಪೂಜಿ ಹತ್ತಿ ಮತ್ತು ಕೈಮಗ್ಗ ಸಹಕಾರ ಸಂಘವೆಂದು ಇದೆ ಅಲ್ಲಿ ಬಾಪೂಜಿಯೂ ಇಲ್ಲ, ಹತ್ತಿಯೂ ಇಲ್ಲ, ಕೈಮಗ್ಗವೂ ಇಲ್ಲ ತಾವು ಅಷ್ಟು ಗಮನಿಸಿದರೆ ಸಾಕು ಅದರ ಮೇಲೆ ಇಲಾಖೆಯ enquiry ಯನ್ನು ಮಾಡಿಸಿಕೊಡಿ ಸಾಕು ಇದರ ಬಗ್ಗೆ ಎಷ್ಟು ಮಾತನಾಡಿದರೂ ಇದರಲ್ಲಿ ಏನೂ ಇಲ್ಲ ಇದರಲ್ಲಿ ಜೀವ ಇಲ್ಲ

ಶ್ರೀ ಎಂ ಪಿ ಪ್ರಕಾಶ್ ನಾನು ಖಂಡಿತವಾಗಿಯೂ ಈ ಬಗ್ಗೆ ಅಧಿಕಾರಿಗಳು ಈಗ ಇಲ್ಲೇ ಇದ್ದಾರೆ ಆ ರೀತಿಯಾಗಿ ಏನಾದರೂ ಜಿಲ್ಲಾ ಪಂಚಾಯತ್ ಗೆ ಕಳುಹಿಸಿಕೊಟ್ಟಿದ್ದು, ಇದರ ಉತ್ತರ ಸಮರ್ಪಕವಾಗಿ ಇಲ್ಲದೇ ಇದ್ದರೆ, ಖಂಡಿತವಾಗಿಯೂ ಅವರ ಜೊತೆಗೆ ಮಾತನಾಡತಕ್ಕಂಥಾದ್ದು, ಮತ್ತೆ ನಿಖರವಾದ ವರದಿಯನ್ನು ದಿ ೨ ೪ ೦೭ ರಂದು ಕೊಡುವಂತೆ ವ್ಯವಸ್ಥೆ ಮಾತುತ್ತೇನೆ

೨೦೦೬-೦೭ನೇ ಸಾಲಿನಲ್ಲಿ ಅಂಗನವಾಡಿ ಶಿಕ್ಷಕಿಯರ ನೇಮಕಾತಿಯಾಗಿರುವ ಸಂಖ್ಯೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೧೯೯೦
ವಿಧಾನಸಭೆ ಸದಸ್ಯರ ಹೆಸರು ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ
ಉತ್ತರಿಸುವವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು

ಕ್ರಮ ಪ್ರಶ್ನೆ ಉತ್ತ
ಸಂಖ್ಯೆ

ಅ] ೨೦೦೬-೦೭ನೇ ಸಾಲಿನಲ್ಲಿ ೨೦೦೬-೦೭ನೇ
ಸಾಲಿನಲ್ಲಿ ೫೪೬೨ ಅಂಗನವಾಡಿ
ಅಂಗನವಾಡಿ ಶಿಕ್ಷಕಿಯರ ಕಾರ್ಯಕರ್ತೆಯರನ್ನು
ಆಯ್ಕೆ ಮಾಡಲಾಗಿದೆ
ನೇಮಕಾತಿಯಾಗಿರುವವರ ಜಿಲ್ಲಾವಾರು ವಿವರವನ್ನು
ಅನುಬಂಧ-೧ ರಲ್ಲಿ
ಸಂಖ್ಯೆ ಎಷ್ಟು (ಜಿಲ್ಲವಾರು ಒದಗಿಸಿದೆ
ವಿವರ ನೀಡುವುದು)

ಆ] ೨೦೦೬-೦೭ನೇ ಸಾಲಿನಲ್ಲಿ ಸಿದ್ದಾಪುರ ತಾಲ್ಲೂಕಿನಲ್ಲಿ
೩೪, ಯಲ್ಲಾಪುರ
ಉತ್ತರಕನ್ನಡ ಜಿಲ್ಲೆಯಲ್ಲಿ ತಾಲ್ಲೂಕಿನಲ್ಲಿ-೧೨,
ಅಂಗನವಾಡಿ
ಅಂಗನವಾಡಿ ಶಿಕ್ಷಕಿಯರನ್ನು ಕಾರ್ಯಕರ್ತೆಯರನ್ನು
ಆಯ್ಕೆಮಾಡಲಾಗಿದೆ
ಎಲ್ಲೆಲ್ಲಿ ನೇಮಕಾತಿ ಮಾಡಲಾಗಿದೆ ಈ ಆಯ್ಕೆ ವಿವರವನ್ನು
ಅನುಬಂಧ-೨
(ತಾಲ್ಲೂಕುವಾರು ವಿವರ ರಲ್ಲಿ ಒದಗಿಸಿದೆ

ನೀಡುವುದು{,

ಇ] ಇದುವರೆವಿಗೂ ಶಿಕ್ಷಕಿಯರ ಕಾರ್ಯಕರ್ತೆಯರ ಆಯ್ಕೆಸಮಿತಿಗೆ ನೇಮಕಾತಿ ಆದೇಶ ನೀಡದೇ ಉಚ್ಚನ್ಯಾಯಾಲಯದಿಂದ ತಡೆಯಜ್ಞೆ ಇರಲು ಕಾರಣವೇನು?

ಅಂಗನವಾಡಿ ಮಾನ್ಯ ಇರುವ ಕಾರಣ ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಪ್ರಕ್ರಿಯೆಯನ್ನು ತಡೆಹಿಡಿಯಲಾಗಿದೆ ತಡೆಯಾಜ್ಞೆಗೆ ಮುಂಚಿನ ಅವಧಿಯಲ್ಲಿ ಆಯ್ಕೆ ಮಾಡಲಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ

ಈ] ಸರ್ಕಾರ ಈ ಬಗ್ಗೆ ತೆಗೆದು ತೆರವುಗೊಳಿಸಲು ಅಗತ್ಯ ವಿವರ- ಕೊಂಡಿರುವ ಕ್ರಮವೇನು?

ತಡೆಯಾಜ್ಞೆ ಗಳೊಂದಿಗೆ ಪ್ರಮಾಣಪತ್ರ ಸಲ್ಲಿಸಲಾಗಿದೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಉತ್ತರವನ್ನು ದೊರಕಿಸಿದ್ದಾರೆ ನಮ್ಮ ರಾಜ್ಯಕ್ಕೆ ಕಳೆದ ವರ್ಷಗಳಲ್ಲಿ ಸುಮಾರು ಹನ್ನೊಂದುವರೆ ಸಾವಿರ ಅಂಗನವಾಡಿಗಳು ಬಂದು ನಿಜವಾಗಿ ಅಂಗನವಾಡಿಯು ಮಕ್ಕಳಿಗೆ ಗ್ರಾಮೀಣ ಪ್ರದೇಸದ ಮಕ್ಕಳಿಗೆ ಸಾಕಷ್ಟು ಅನುಕೂಲವಾಗಿದೆ ಆದರೆ ಒಂದು ಸಮಸ್ಯೆಯಾಗಿರುವುದೆಂದರೆ, ಅದರೊಳಗೆ ಶಾಸಕರ ಅಧ್ಯಕ್ಷತೆಯ ಸಮಿತಿಯಲ್ಲಿ ಆಯ್ಕೆ ಮಾಡಿರುವುದೆಂದರೆ, ಅದರೊಳಗೆ ಶಾಸಕರ

ಅಧ್ಯಕ್ಷತೆಯ ಸಮಿತಿಯಲ್ಲಿ ಆಯ್ಕೆ ಮಾಡಿರುವುದರೊಳಗೆ ಸುಮಾರು ಐದಾರು ಸಾವಿರ ಆಯ್ಕೆ ಆಗಿದಿದ್ದರೆ, ಇನ್ನು ಐದಾರು ಸಾವಿರ ಅಂಗನವಾಡಿ ಕಾರ್ಯಕರ್ತೆಯವರನ್ನು ಆಯ್ಕೆ ಮಾಡುವುದು ಬಾಕಿ ಇದೆ ಈ ಬಾಕಿ ಇರುವಂಥಾದ್ದಕ್ಕೆ ಕೋರ್ಟ್‌ನ ತಡೆಯಾಜ್ಞೆ ಇದೆ ಹಾಗಾಗಿ ಬಾಕಿ ಇದೆಯೆನ್ನುವ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾಋುಎ ನಾನು ಈ ಸಂದರ್ಭದಲ್ಲಿ ವಿಕೇಂದ್ರೀಕರಣ ವ್ಯವಸ್ಥೆ ಎನ್ನುವುದು, ಯಾವ್ಯಾವ ಗೊಂದಲಕ್ಕೆ ಈಡಾಗುತ್ತದೆಯೆನ್ನುವುದಕ್ಕೆ ಇದೊಂದು ಉದಾಹರಣೆಯಾಗಿದೆ ವಿಕೇಂದ್ರೀಕರಣ ವ್ಯವಸ್ಥೇ ಇರಲೇ ಬೇಕು, ನಾವು ಅದನ್ನು ಬಲಪಡಿಸಲೇ ಬೇಕು ಅದರ ಬಗ್ಗೆ ಯಾವುದೇ ರೀತಿಯ ಭಿನನಾಭಿಪ್ರಾಯವಿಲ್ಲ ಆದರೆ ಅದರಲ್ಲಿ ಒಂದು ಪರಸ್ಪರ ಹೊಂದಾನೀಕೆ ತಿಳುವಳಿಕೆ ಇಲ್ಲದೇ ಹೋದರೆ, ನಾವು ಕಳೆದ ಆರೆಂಟು ತಿಂಗಳುಗಳಿಂದ ನಮ್ಮ ಅಂಗನವಾಡಿಯ ಮಕ್ಕಳಿಗೆ ಕಾರ್ಯಕರ್ತೆಯರಿಲ್ಲದೇ ಸಹಾಯಕಿಯವರಿಂದ ಶಿಕ್ಷಣವನ್ನು ಕೊಡುವ ಸ್ಥಿತೆಇಗೆ ಬಂದಿದೆ ಅವರ ಆಯ್ಕೆ ಮಾಡಿದಿದ್ದರೂ ಅವರ ನೇಮಕಾತಿ ಆದೇಶವನ್ನು ಕೊಡುವುದಕ್ಕೆ ತೊಂದರೆಯಾಗಿದೆ ಹಾಗಾಗಿ ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ಈ ರೀತಿಯಾಗಿ ಗೊಂದಲವಾಗದ ಹಾಗೆ ನೋಡಿಕೊಳ್ಳುವಂಥ ಒಂದು ಭಾಗವಿದೆ ಆದರೆ ಅದಕ್ಕಿಂತ ಮುಖ್ಯವಾಗಿ ನಾನು ಮಾನ್ಯ ಸಚಿವರಲ್ಲಿ ಕೇಳಲಿಚ್ಚಿಸುವುದೇನೆಂದರೆ, ಈಗ ಕೋರ್ಟ್‌ನಲ್ಲಿ ಇರುವಂಥ ತಡೆಯಾಜ್ಞೆಯನ್ನು ತೆರವುಗೊಳಿಸುವುದಕ್ಕೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ ಮತ್ತೆ ಇದು ಎಷ್ಟು ದಿವಸಗಳಲ್ಲಿ ತೆಯಾರಾಗಬಹುದು, ಅದರ ಆದೇಶವನ ಯಾವಾಗ ಕೊಡುವುದಕ್ಕೆ ಸಾಧ್ಯವಿದೆಯೆಂದು ತಿಳಿಸೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಹೆಚ್ ಕೆ ಕುಮಾರಸ್ವಾಮಿ ೨೦೦೫-೦೬ನೇ ಸಾಲಿಗೆ ೧೧,೩೧೩ ಅಂಗನವಾಡಿ ಕೇಂದ್ರ ಗಳನ್ನು ಸರ್ಕಾರ ಮಂಜೂಉರ ಮಾಡಿತ್ತು ಅದರಲ್ಲಿ ಆಯ್ಕೆ ಸಮಿತಿಯಿಂದ ೫,೪೬೨ ಕೇಂದ್ರಗಳ್ಳಿಗೆ ಅಮಗನವಾಡಿ ಕಾರ್ಯಕರ್ತೆಯರ ಆಯ್ಕೆ ಈಗಾಗಲೇ ಮುಗಿದಿದ್ದು, ಆದೇಶವನ್ನು ಕೂಡ ಕೊಟ್ಟಿದ್ದೇವೆ ಇನ್ನು ೫,೮೫೧ ಕೇಂದ್ರಗಳಿಗೆ

ಆಯ್ಕೆಯಾಗಬೇಕಾಗಿದೆ ಅಷ್ಟರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಬಂತು ಆದ್ದರಿಂದ ಅದು ಹಾಗೇ ಬಾಕಿ ಉಳಿದಿದೆ ಆದರೆ ಸಂಸ್ಥೆಗಳು ನಿಲ್ಲಬಾರದು ಎನ್ನುವ ಉದ್ದೇಶದಿಂದ ಬಾಲವಿಕಾಸ ಸಂಸ್ಥೆಗಳ ಮೂಲಕ ಸಹಾಯಕಿಯರನ್ನು ಆಯ್ಕೆ ಮಾಡಿ ನಾವು ಸಂಸ್ಥೆಗಳನ್ನು ನಡೆಸುತ್ತಿದ್ದೇವೆ ಈಗ ತಡೆಯಾಜ್ಞೆ ತೆರವಿಗೆ ಸರ್ಕಾರ ಪ್ರಮಾಣ ಪತ್ರ ಸಲ್ಲಿಸಿದ್ದು, ನಮ್ಮ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ ಉಚ್ಚ ನ್ಯಾಯಾಲಯದ ಆಜ್ಞೆಯನ್ನು ನಾವು ಕಾಯುತ್ತಿದ್ದೇವೆ ಅ ದು ಬಂದ ತಕ್ಷಣ ನವು ಏನು ಕ್ರಮವನ್ನು ಮಾಡಬೇಕೋ ಅದನ್ನು ಮಾಡುತ್ತೇವೆ

ಶ್ರೀ ಬಸವರಾಜ ರಾಯರೆಡ್ಡಿ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ಕೊಪ್ಪಲ ಜಿಲ್ಲೆಯದನ್ನು ನಾನು ಉದಾಹರಣೆಗಾಗಿ ಹೇಳುತ್ತೇನೆ ಕೊಪ್ಪಳ ಜಿಲ್ಲೆಯಲ್ಲಿ ೯೭೩ ಅಂಗನಫಾಡಿ ಕಾರ್ಯಕರ್ತೆಯರನ್ನು ಆಯ್ಕೆ ಮಾಡಲಾಗಿದೆ ಎಂದು ಹೇಳಿದ್ದಾರೆ ಆದರೆ ಒಬ್ಬರನ್ನು ಕೂಡ ಆಯ್ಕೆ ಮಾಡಿಲ್ಲ Not even one ಅಂಗನವಾಡಿ ಕಾರ್ಯಕರ್ತೆಯರ ಒಂದೇ ಒಂದು recruitment ನಮ್ಮಲ್ಲಿ ಆಗಿಲ್ಲ ಅಂಗನವಾಡಿ ಸಹಾಯಕಿಯರನ್ನು ಆಯ್ಕೆ ಮಾಡಲಾಗಿದೆ ಅಂಗನವಾಡಿ ಕಾರ್ಯಕರ್ತರನ್ನು ಆಯ್ಕೆ ಮಾಡಿಲ್ಲ ಮಂತ್ರಿಗಳು ಅದರ ಬಗ್ಗೆ ಹೇಳಲಿ ಎರಡನೆಯದಾಗಿ, ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಸಮಿತಿಗೆ ಹೈಕೋರ್ಟ್ ಸತೆಯಾಜೆ ಕೊಟ್ಟಿದ್ದು ಏಕೆ? M L A ಗಳನ್ನು ಅದಕ್ಕೆ Chairman ಮಾಡಿದ್ದೀರಿ ದಯಮಾಡಿ M L A ಗಳನ್ನು Chairman ಮಾಡಬೇಡಿ ದಯವಿಟ್ಟು ಅವರನ್ನು ಆ ಸಮಿತಿಯಿಂದ ತೆಗೆದು ಹಾಕಿ ಅಂಗನವಾಡಿ ಕಾರ್ಯಕರ್ತರು ಮಹಿಳೆಯರು ಮಹಿಳೆಯರನ್ನು select ಮಾಡಲು ಪುರುಷ M L A ಗಳು ಏಕೆ? ಅವರು ಅಲ್ಲಿ ಏನು ಮಾಡುತ್ತಾರೆ? ಯಾರನ್ನಾದರೂ ಮಹಿಳೆಯರನ್ನು Chairman ಮಾಡಿ ಶಾಸಕರನ್ನು ಮಾಡುವ ಅವಶ್ಯಕತೆ ಇಲಲ ದಯಮಾಡಿ, ಶಾಸಕರನ್ನು ಹೊರತುಪಡಿಸಿ, ಯಾರಾದರೂ ಮಹೆಳೆಯರನ್ನು ನೇಮಕ ಮಾಡುವಂತೆ ಆದೇಶವನ್ನು ಬದಲಾವಣೆ ಮಾಡಬೇಕು ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ

ಶ್ರೀ ಜೆ ಪಿ ಶ್ರೀರಾಮರೆಡ್ಡಿ Medical test ಮಾಡಿಸುತ್ತೀರಾ ಎಂದು ಕೇಳುತ್ತಿದ್ದೇನೆ

ಉಪಾಧ್ಯಕ್ಷರು ಅದು ಅವರ ವೈಯಕ್ತಿಕ ಅಭಿಪ್ರಾಯ

ಶ್ರಿ ಕೆ ಜಯಪ್ರಕಾಶ ಹೆಗ್ಡೆ ಅದು ಅವರ ವೈಯಕ್ತಿಕ ಅಭಿಪ್ರಾಯ ಎಂದು ಅವರು ಹೇಳಲಿ

ಶ್ರಿ ಬಸವರಾಜ ರಾಯರೆಡ್ಡಿ M L A ಗಳ ಹಣೆಬರಹ ಎಲ್ಲಿಗೆ ಬಂದಿದೆ ಎಂದು ನೋಡಿ ಅಂಗನವಾಡಿ ಕಾರ್ಯಕರ್ತೆಯರನ್ನು ಅವರು ಆಯ್ಕೆ ಮಾಡಬೇಕು ಎಂದರೆ is it not a shame?

ಉಪಾಧ್ಯಕ್ಷರು M L A ಗಳು Chairman ಆಗುವುದು ಬೇಡ ಎನ್ನುವುದನ್ನು ಯಾರು ಒಪ್ಪುತ್ತಾರೆ ಎಂದು ಕೇಳಿ

ಶ್ರಿ ಬಸವರಾಜ ರಾಯರೆಡ್ಡಿ M L A ಗಳು ಹೋಗಿ ಅಂಗನವಾಡಿ ಕಾರ್ಯಕರ್ತರನ್ನು select ಮಾಡಬೇಕೇ? ಸರ್ಕಾರಕ್ಕೆ ಒಂದು ಸ್ವಲ್ಪ ಮರ್ಯಾದೆ ಬೇಡವೇ?

ಶ್ರೀ ಜೆ ಸಿ ಮಾದುಸ್ವಾಮಿ ದಯವಿಟ್ಟು ಅವರೊಬ್ಬರನ್ನು change ಮಾಡಿಬಿಡಿ

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ ಸನ್ಮಾನ್ಯ ರಾಯರೆಡ್ಡಿಯವರೇ, ಈ ಆದೇಶವನ್ನು ಈ ಸರ್ಕಾರ ಮಾಡಿದ್ದಲ್ಲ ಈ ಮಂತ್ರಿಗಳು ಮಾಡಿದ್ದಲ್ಲ ೧೦ ವರ್ಷದ ಹಿಂದೆ ಇದ್ದಂಥ ಸರ್ಕಾರ ಮಾಡಿದಂಥ ಆದೇಶ ಅದು

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ ಯಾರೇ ಮಾಡಿರಲಿ, ಅದನನು ಈಗ ಬದಲಾವಣೆ ಮಾಡಿ ಶಾಸಕರನ್ನು chairman ಮಾಡಬೇಡಿ

ಶ್ರೀ ಕೆ ಜಯಪ್ರಕಾಶ ಹೆಗ್ಡೆ ಆಗ ಅವರೂ ಇದ್ದರು

ಶ್ರೀ ಬಸವರಾಜ ರಾಯರೆಡ್ಡಿ ಈ ಸಮಿತಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ ಶಾಸಕರನ್ನು ಅತಿ ಕೆಳಮಟ್ಟಕ್ಕೆ ಇಳಿಸಬೇಡಿ

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ ಆಗ ಅವರೂ ಇದ್ದರು ಅದನ್ನು ಅವರು ಮರೆತಿರಬಹುದು

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ ಆಗ ನಾನು ಇರಲಿಲ್ಲ ನಾನು MP ಯಾಗಿ ಹೋದೆ ಇವತ್ತೂ ನಾನು ಆ ಸಮಿತಿಯಲ್ಲಿ ಇಲ್ಲ ಇವತ್ತೂ ನಾನು chairman ಆಗಿಲ್ಲ ಶಾಸಕರನ್ನು ಈ ಮಟ್ಟಕ್ಕೆ ಇಳಿಸಬೇಡಿ

ಶ್ರೀ ಜೆ ವಿ ಶ್ರೀರಾಮರೆಡ್ಡಿ ಅದು ಅವರ ವೈಯಕ್ತಿಕ ಅಭಿಪ್ರಾಯ ರಾಯರೆಡ್ಡಿಯವರಿಗೆ ಬೇಡ ಎಂದರೆ, ಅವರ ಕ್ಷೇತ್ರದಲ್ಲಿ ಬೇರೆಯವರನ್ನು ಮಾಡಿ ಆದರೆ, ನಾವು ಅದನ್ನು ಒಪ್ಪುವುದಕ್ಕೆ ತಯಾರಿಲ್ಲ ರಾಯರೆಡ್ಡಿಗೆ ಬೇಡವೆಂದರೆ, ಅವರು ಬೇಕಾದರೆ ಬಿಟ್ಟುಬಿಡಲಿ, ಆದರೆ ನಮಗೆಲ್ಲ ಬೇಕು

ಉಪಾಧ್ಯಕ್ಷರು ಶ್ರೀರಾಮರೆಡ್ಡಿಯವರೇ, ಮಹಿಳೆಯರನ್ನು chairman ಮಾಡಿ ಎಮದು ಅವರು ಅವರ ಅಭಿಪ್ರಾಯವನ್ನು ಕೊಟ್ಟಿದ್ದಾರೆ

ಶ್ರೀ ಬಸವರಾಜ ರಾಯರೆಡ್ಡಿ M L A ಗಳನ್ನು Chairman ಮಾಡಬೇಡಿ M L A s are becoming cheap ಅಂಗನವಾಡಿ ಕಾರ್ಯಕರ್ತರನ್ನು ಮಾಡಲು ನಾವು ಕುಳಿತುಕೊಳ್ಳಬೇಕೇ?

ಶ್ರೀ ಜೆ ವಿ ಶ್ರೀರಾಮರೆಡ್ಡಿ ರಾಯರೆಡ್ಡಿಯವರು ಕುಳಿತುಕೊಳ್ಳುವುದು ಬೇಡ ರಾಯರೆಡ್ಡಿಯವರಿಗೆ ಬೇಕಾಗಿಲ್ಲ

ಶ್ರೀ ಜಯಪ್ರಕಾಶ ಹೆಗ್ಡೆ ನಾನು ರಾಯರೆಡ್ಡಿಯವರಿಗೆ ಏನು ಉತ್ತರ ಹೇಳಲು ಬಯಸುತ್ತೇನೆ ಎಂದರೆ, ಅಂಗನವಾಡಿ ಕಾರ್ಯಕರ್ತರನ್ನು ಆಯ್ಕೆ ಮಾಡುವಂಥಾದ್ದು cheap ಎನ್ನುವುದು ಅವರ ಮನಸ್ಸಿನಲ್ಲಿದ್ದರೆ, ಅದು ಗೌರವ ಎಂದು ನಾವು ಭಾವಿಸುತ್ತೇವೆ It is not a small thing ಅಂಗನವಾಡಿ ಕಾರ್ಯಕರ್ತರಿಗೆ ಗೌರವವಿದೆ

ಶ್ರೀ ಬಸವರಾಜ ರಾಯರೆಡ್ಡಿ ಅವರಿಗೆ ಗೌರವವಿದೆ ನಿಜ

ಶ್ರೀ ಕೆ ಜಯಪ್ರಕಾಶ ಹೆಗ್ಡೆ ಅವರನ್ನು ಆಯ್ಕೆ ಮಾಡುವುದೂ ಗೌರವವೇ ಯಾರಾದರೂ ನಾಲ್ಕು ಬಡ ಮಹಿಳೆಯರಿಗೆ ಕೆಲಸ ಕೊಡುವಂಥಾದ್ದು ಅದು

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ ಅವರಿಗೆ ಬೇಕಿಲ್ಲ ಎಮದರೆ, ಅವರು ಸಮಿತಿಗೆ ರಾಜೀನಾಮೆ ಕೊಡಬಹುದು ಎಂದು ಇದೆ ಏಕೆಂದರೆ, ರಾಯಚೂರು ಕ್ಷೇತ್ರದ ಶಾಸಕರಾದ ಸನ್ಮಾನ್ಯ ಪಾಪರೆಡ್ಡಿಯವರು ಅದಕ್ಕೆ ರಾಜೀನಾಮೆ ಕೊಟ್ಟಿದ್ದಾರೆ ರಾಯರೆಡ್ಡಿಯವರೂ ಕೊಡಬಹುದು ಅದಕ್ಕೆ ಅವಕಾಶ ಉಂಟು

ಉಪಾಧ್ಯಕ್ಷರು ಅವರು ಆಗಲೇ ರಾಜೀನಾಮೆ ಕೊಟ್ಟಿದ್ದಾರಂತೆ

ಶ್ರೀ ಬಸವರಾಜ ರಾಯರೆಡ್ಡಿ ಆ ಕಾನೂನು ತಿದ್ದುಪಡಿಯಾದದ್ದು ಕೂಡ ನಾನು ರಾಜೀನಾಮೆ ಕೊಟ್ಟಮೇಲೆಯೇ ನಾನು Chairman ಆಗಿಲ್ಲ ಅದರಿಂದ ಶಾಸಕರಿಗೆ ಗೌರವ ಬರುವುದಿಲ್ಲ

ಉಪಾಧ್ಯಕ್ಷರು ಆಯಿತು ಬಿಡಿ ಈಗ ಮುಂದೆ ಹೋಗೋಣ

ಶ್ರೀ ಜೆ ವಿ ಶ್ರೀರಾಮರೆಡ್ಡಿ ಅಂಗನವಾಡಿ ಕಾರ್ಯಕತ್ರರು ಗೌರವಸ್ಥರಲ್ಲವೇ? ಅವರು ಗೌರವಸ್ಥರು ಎಂದಾದರೆ ಶಾಸಕರೂ ಗೌರವಸ್ಥರೇ

ಉಪಾಧ್ಯಕ್ಷರು ಅದನ್ನು controversy ಮಾಡಬೇಡಿ

ಶ್ರೀ ಜೆ ವಿ ಶ್ರೀರಾಮರೆಡ್ಡಿ ಅವರನ್ನು insult ಮಾಡತಕ್ಕಂಥ ಮಾಡತಕ್ಕಂಥ ಅವಶ್ಯಕತೆಯಿಲ್ಲ ಅಂಗನವಾಡಿ ಕಾರ್ಯಕರ್ತರನ್ನು ಆಯ್ಕೆ ಮಾಡತಕ್ಕಂಥಾದ್ದು ಬಹಳ cheap ಕೆಲಸ ಎಂದರೆ ಏನು ಅರ್ಥ? ಮಹಿಳೆಯರಿಗೆ ಅಗೌರವ ಮಾಡಿದ ಹಾಗಲ್ಲವೇ? ಅಂಗನವಾಡಿ ಕಾರ್ಯಕರ್ತರನ್ನು select ಮಾಡುವುದು cheap ಎಂದು ಹೇಳಿದರೆ, ಅದು ಮಹೆಳೆಯರನ್ನು ನೀವು ಅವಮಾನ ಮಾಡಿದ ಹಗೆ ಅಂಗನವಾಡಿ ಕಾರ್ಯಕರ್ತಎಯರೂ ಮಹೆಳೆಯರೇ ಅಂಗನವಾಡಿ ಕಾರ್ಯಕರ್ತರಾಗಿ ಪುರುಷರನ್ನು ತೆಗೆದುಕೊಳ್ಳುವುದಿಲ್ಲ, ಮಹೆಳೆಯರನ್ನೇ ತೆಗೆದು ಕೊಳ್ಳುವುದು ಅವರನ್ನು ಆಯ್ಕೆ ಮಾಡುವುದು ಬಹಳ cheap ಎಂದು ಹೇಳಿದರೆ,

ಅಂಗನವಾಡಿ ಕಾರ್ಯಕರ್ತರು ಬಹಳ cheap ಇದ್ದಾರೆ, ಅವರ ಮಟ್ಟಕ್ಕೆ ನಾವು ಹೋಗಬಾರದು ಎಂದು ಅರ್ಥವೇ? ನಿಮಗೆ ಅದು ಬೇಡವೆಂದರೆ ನೀವು ರಾಜೀನಾಮಿ ಕೊಡಿ ವಕಾಲತ್ತು ಹಾಕಲಿಕ್ಕೆ ನೀವು ಯಾರು?

ಉಪಾಧ್ಯಕ್ಷರು ಅವರು ರಾಜೀನಾಮೆ ಕೊಟ್ಟಿದ್ದಾರಂತೆ ಅವರ ಅಭಿಪ್ರಾಯವನ್ನು ಅವರು ಸೂಚಿಸಿದ್ದರೆ M L A ಗಳು Chairman ಆಗಬಾರದು ಎನ್ನುವುದು ಅವರ ದೃಷ್ಟಿಯಲ್ಲಿ ಇರಬಹುದು

ಶ್ರೀ ಜೆ ವಿ ಶ್ರೀರಾಮರೆಡ್ಡಿ ಅದನ್ನು ನಾವು ಒಪ್ಪಲಿಕ್ಕೆ ತಯಾರಿಲ್ಲ ನಮಗೆ ಬೇಡ ಎಂದು ಅವರು ಬರೆದುಕೊಡಲಿಕ್ಕೆ ಹೇಳಿ

ಶ್ರೀ ಬಸವರಾಜ ರಾಯರೆಡ್ಡಿ ನಾನು ರಾಜೀನಾಮೆ ಕೊಟ್ಟಾಯಿತು

ಶ್ರೀ ಹೆಚ್ ಕೆ ಕುಮಾರಸ್ವಾಮಿ ಏಕೆ ಅನಾವಶ್ಯಕವಾಗಿ ಚರ್ಚೆ ಮಾಡುತ್ತೀರಿ? ಮಾನ್ಯ ರಾಯರೆಡ್ಡಿಯವರು ಅವರ ವೈಯಕ್ತಿಕ ಅಭಿಪ್ರಾಯವನ್ನು ಹೇಳಿದ್ದಾರೆ ಈಗ ಈ ವಿಷಯ Court ಮುಂದೆ ಇದೆ ಯಾವ ತೀರ್ಪನ್ನು ಕೊಡುತ್ತದೇ ಅದಕ್ಕೆ ನಾವು ತಲೆ ಬಾಗಬೇಕಾಗುತ್ತದೆ ಈರಿರುವ ಆಯ್ಕೆ ಸಮಿತಿಯನ್ನು court ರದ್ದು ಮಾಡಿದರೆ ಮುಂದೇನು ಮಾಡಬೇಕು ಎನ್ನುವುದು ಸರ್ಕಾರ ನಿರ್ಧಾರ ಮಾಡುತ್ತದೆ

ಶ್ರೀ ಕೆ ವಿಶ್ವೇಶ್ವರ ಹೆಗಡೆ ತಡೆಯಾಜ್ಞೆಯನ್ನು ತೆರವುಗೊಳಿಸುವುದಕ್ಕೆ ತೀವ್ರವಾದ ಪ್ರಯತ್ನವನ್ನು ಮಾಡಬೇಕು ಎನ್ನುವ ಆಗ್ರಹವನ್ನು ನಾನು ಮತ್ತೊಮ್ಮೆ ಮಾಡುತ್ತೇನೆ ಕೊಪ್ಪಳ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು, ಶಾಸಕರ ಅಧ್ಯಕ್ಷತೆಯಲ್ಲಿರುವಂಥ ಆಯ್ಕೆ ಸಮಿತಿಯನ್ನು ಪ್ರಶ್ನಿಸಿ High Courtಗೆ ಹೋಗಿರುವುದರಿಂದ ಈ ತಡೆಯಾಜ್ಞೆ ಬಂದಿದೆ ಅದಕ್ಕೇ ನಾನು ಆಗಲೇ ವಿಕೇಂದ್ರೀಕರಣ ವ್ಯವಸ್ಥೆಯ ಬಗ್ಗೆ, ಕೊಪ್ಪಳದ್ದು ಎಲ್ಲ ಹೇಳಿದೆ ಶಾಸಕರ ಅಧ್ಯಕ್ಷತೆಯಲ್ಲಿ ಇದನ್ನು ಏಕೆ ಆಯ್ಕೆ ಮಾಡಬೇಕು, ಇದಕ್ಕೆ ಜಿಲ್ಲಾ ಪಂಚಾಯತ್ ಸದಸ್ಯರನ್ನೂ Member ಮಾಡಬೇಕೆಂದು ಹೇಳಿ ಕೊಪ್ಪಳ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು High Court ಗೆ ಹೋದರು ಆ ಕಾರಣದಿಂದ

High Court ನಿಂದ ಈ ರೀತಿಯ ಆದೇಶ ಬಂತು ಸರ್ಕಾರ ಶಾಸಕರ ಅಧ್ಯಕ್ಷತೆಯಲ್ಲಿ ಮಾಡಿರುವಂಥ ಸಮಿತಿಯೇ ಅಂತಿಮವಾದಂಥಾದ್ದು ಮತ್ತು ಎಲ್ಲ ನಿಯಮಾವಳಿಗಳ ಪ್ರಕಾರ ಮಾಡಿದೆ ಎಂದು ಸರ್ಕಾರ ಈಗ Affidavit ಹಾಕಿದ್ದು, ಅದರ ವಾದ ನಡೆಯುತ್ತಿದೆ, ಅದನ್ನು ತ್ವರಿತವಾಗಿ ವಿಲೇವಾರಿ ಮಾಡಿಸಿ, ಆದಷ್ಟು ಬೇಗ ಅಂಗನವಾಡಿ ಕಾರ್ಯಕರ್ತರನ್ನು ನೇಮಕ ಮಾಡಿದರೆ ಮಕ್ಕಳಿಗೆ ಒಳ್ಳೆಯ ಕಾರ್ಯಕರ್ತರಿಂದ ಶಿಕ್ಷಣ ಸಿಗುವಂತಾಗುತ್ತದೆ ಈಗ ಸಹಾಯಕಿಯರಿಂದ ಶಿಕ್ಷಣ ಕೊಡಬೇಕಾದಂಥ ಸ್ಥಿತಿ ಇದೆ ಕಾರ್ಯಕರ್ತರಿಂದ ಶಿಕ್ಷಣ ಸಿಗುವಂತಾಗಲು ಇದನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡಿಸಬೇಕು

ಉಪಾಧ್ಯಕ್ಷರು ಇದು ಆದಷ್ಟು ಬೇಗ ನಿರ್ಧಾರವಾದರೆ ಒಳ್ಳೆಯದು

ಶ್ರೀ ಹೆಚ್ ಕೆ ಕುಮಾರಸ್ವಾಮಿ ಈಗ Court ನಲ್ಲಿ hearing ನಡೆಯುತ್ತಿದೆ ಆದಷ್ಟು ಬೇಗ ತೀರ್ಪು ಬರುವಂತೆ ಪ್ರಯತ್ನ ಮಾಡುತ್ತೇವೆ

ಶ್ರೀ ಬಸವರಾಜ ರಾಯರೆಡ್ಡಿ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾಋುಎ ಕಾರ್ಡುಗಳ ವಿತರಣೆಯನ್ನು ಯಾವ ಆಧಾರದ ಮೇಲೆ ನಿಗದಿಪಡಿಸಲಾಗಿದೆ ಎಂದು ನಾನು ಕೇಳಿದ್ದೇನೆ ಉತ್ತರದಲ್ಲಿ ಮಾನ್ಯ ಸಚಿವರು ಏನು ಹಏಳಿದ್ದಾಋುಎ ಎಂದರೆ, ಸ್ಥಿರ ದೂರವಾಣಿ ಹೊಂದಿರುವವರನ್ನು ಅನರ್ಹರು ಎಂದು ಪರಿಗಣಿಸುತ್ತೇವೆ ಎಂದು ಹೇಳಿದ್ದಾರೆ ಇವತ್ತು ದೂರವಾಣಿ ಎಲ್ಲರ ಮನೆಯಲ್ಲಿ ಇರುತ್ತದೆ ಅದು ದೊಡ್ಡ ವಿಚಾರವಲ್ಲ ಸಣ್ಣ ಸಣ್ಣ ಕೆಲಸ ಮಾಡುವವರ ಮನೆಯಲ್ಲಿಐಊ ದೂರವಾಣಿ ಇದೆ ಹಾಗಾಗಿ, ದೂರವಾಣಿಯನ್ನು ಆಧಾರವಾಗಿಟ್ಟುಕೊಂಡು select ಮಾಡುವುದು ತಪ್ಪು ದಯಮಾಡಿ ಇದನ್ನು ತೆಗೆದು ಹಾಕಬೇಕು ಒಂದು ಬೋರ್‌ವೆಲ್ ಹೊಂದಿ ನೀರಾವಿರ ಸೌಕರ್ಯ ಪಡೆಯುತ್ತಿರುವವರು ಅನರ್ಹರು ಎಂದು ಹೇಳಿದ್ದಾರೆ ಗಂಗಾ ಕಲ್ಯಾಣ ಯೋಜನೆಯಲ್ಲಿ ಬೋರ್‌ವೆಲ್ ಹಾಕಿಸಿಕೊಂಡಿರುತ್ತಾರೆ ಅಂಥವರಿಗೆ ಪಡಿತರ ಚೀಟಿ ಬೇಡವೇ? ಒಬ್ಬರಿಗೆ ಎರಡೂವರೆ ಎಕರೆ

ಜಮೀನು ಇರುತ್ತದೆ ಅವನು ಬೋರ್ ವೆಲ್ ಹಾಕಿಸಿಕೊಂಡಿರುತ್ತಾನೆ ಅದಕ್ಕಾಗಿ ಅವನಿಗೆ ಪಡಿತರ ಚೀಟಿ ಇಲ್ಲವೆಂದರೆ ತಪ್ಪಾಗುತ್ತದೆ ಇದನ್ನು ಕೂಡ ತೆಗೆಸಿ ಹಾಕಬೇಕು Income criteria ಮೇಲೆ ಮಾಡಬೇಕು ಎಂದು ಕೇಳುತ್ತೇನೆ ಇನ್ನೊಂದು ಮಾತನ್ನು ಹೇಳಿದ್ದಾರೆ 20 X 30 ಅಳತೆಯ ಜಾಗ ಯಾರಿಗೆ ಇರುತ್ತದೋ ಅವರಿಗೆ ಪಡಿತರ ಚೀಟಿ ಇಲ್ಲ ಎಂದು ಹೇಳಿದ್ದಾರೆ ಮಂತ್ರಿಗಳು ಅರ್ಥಮಾಡಿಕೊಳ್ಳಬೇಕಾಗುತ್ತದೆ ಆಶ್ರಯ ಯೋಜನೆಯಡಿಯಲ್ಲಿ ನೀವು ಮನೆಗಳನ್ನು ಯಾರಿಗೆ ಕೊಡುತ್ತೀರಿ ಎಂದರೆ who have a BPL card BPL card ಇದ್ದವರಿಗೆ ಮಾತ್ರ ಆಶ್ರಯ ಮನೆಗಳನ್ನು ಕೊಡುತ್ತೀರಿ ಆಶ್ರಯ ಮನೆಯ size ಎಷ್ಟಿದೆ ಎಂದರೆ 30 X 40 ಹಾಗಾದರೆ ಅವರಿಗೆ ಕಾರ್ಡು ಇಲ್ಲವೇ? ಹಾಗಾಗಿ, ದಯವಿಟ್ಟು ಇದನ್ನು ತೆಗೆಯಬೇಕು ಎಂದು ಕೇಳುತ್ತೇನೆ

ರಾಜ್ಯದಲ್ಲಿ ಬಿ ಪಿ ಎಲ್, ಎ ಪಿ ಎಲ್, ಅಂತ್ಯೋದಯ ಅನ್ನಪೂರ್ಣ ಲಕ್ಷ್ಮಿಯ ಹಾಗೂ ಇನ್ನಿತರ ಯೋಜನೆಗಳಲ್ಲಿ ವಿತರಿಸಲಾದ ಕಾರ್ಡುಗಳನ್ನು ಹೊಂದಿರುವವರ ಸಂಖ್ಯೆ ಎಷ್ಟು

ಚುಕ್ಕೆ ಗುರುತಿನ ಸಂಖ್ಯೆ ೨೦೦೨

ಸದಸ್ಯರ ಹೆಸರು ಶ್ರೀ ಬಸವರಾಜ್ ರಾಯರೆಡ್ಡಿ (ಯಲಬರ್ಗ)

ಉತ್ತರಿಸುವ ಸಚಿವರು ಶ್ರೀ ಗೋವಿಂದ ಎಲ್ ಕಾಜೋಳ
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು

ಪ್ರಶ್ನೆ	ಉತ್ತರ
ಅ) ರಾಜ್ಯದಲ್ಲಿ ಬಿಪಿಎಲ್, ಎಪಿಎಲ್, ವಿತರಿಸಲಾಗಿರುವ ತಾತ್ಕಾಲಿಕ ಪಡಿತರ	ಪ್ರಸ್ತುತ ರಾಜ್ಯದಲ್ಲಿ

ಅಂತ್ಯೋದಯ, ಅನ್ನಪೂರ್ಣ, ಕೂಪನ್ ಗಳಂತೆ
ಪಡಿತರ ಚೀಟಿಗಳ ಸಂಖ್ಯೆ (ಬೆಂಗಳೂರು

ಅಕ್ಷಯ ಹಾಗಿ ಇನ್ನಿತರ ಯೋಜನೆ ಅಪ ಪ್ರದೇಶ ಮತ್ತು
ಬೆಂಗಳೂರು ನಗರ ಜಿಲ್ಲೆಯ ೭ ನಗರ

ಗಳಲ್ಲಿ ವಿತರಿಸಲಾದ ಕಾರ್ಡುಗಳನ್ನು ಸಭೆಗಳು ಸೇರಿದಂತೆ)
ವಿವರ ಈ ಕೆಳಕಂಡಂತಿರುತ್ತದೆ –

ಹೊಂದಿರುವ ವರ ಸಂಖ್ಯೆ ಎಷ್ಟು ೧) ಅನ್ನಪೂರ್ಣ

೨) ಎಎವೈ ೧೧,೭೫,೯೧೨

೩) ಬಿಪಿಎಲ್

೪) ಎಪಿಎಲ್

ಒಟ್ಟು ೧,೧೮,೮೧,೯೧೦

(ಪ್ರತ್ಯೇಕವಾಗಿ ಜಿಲ್ಲಾವಾರು ವಿವರ ಜಿಲ್ಲಾವಾರು ವಿವರ
ಲಗತ್ತಿಸಿದೆ

ಒದಗಿಸುವುದು)

ಆ ಇವುಗಳನ್ನು ಯಾವ ಆಧಾರದ ಪಡಿತರ ಚೀಟಿಗಳನ್ನು
ಗುರುತಿಸಲು ಅಳವಡಿಸಿರುವ

ಮೇಲೆ ನಿಗದಿ ಪಡಿಸಲಾಗಿದೆ ಮಾನದಂಡಗಳ ವಿವರಗಳು
ಕೆಳಕಂಡಂತಿವೆ –

ಅನ್ನಪೂರ್ಣ
ಯೋಜನೆಯಡಿಯಲ್ಲಿ ೬೫ ವರ್ಷ ಅಥವಾ

ಅದಕ್ಕಿಂತ ಹೆಚ್ಚಿನ
ವಯೋಮಿತಿಯುಳ್ಳ ನಿರ್ಗತಿಕ ಹಾಗೂ

ಕೇಂದ್ರ ಅಥವಾ ರಾಜ್ಯ
ಸರ್ಕಾರಗಳಿಂದ ವೃದಾಪ್ಯ

ವೇತನವನ್ನು ಪಡೆಯದೇ
ಇರುವಂತಹ ವ್ಯಕ್ತಿಗಳು ಈ

ಚೀಟಿಯನ್ನು ಪಡೆಯಲು

ಒಳಪಟ್ಟ ಫಲಾನುಭವಿಗಳು

ಪಡೆಯಲು ಅನರ್ಹರು

ಅಧವಾ ಅದಕ್ಕಿಂತ ಹೆಚ್ಚು

ಹೊಂದಿರುವವರು

ಯೋಜನೆಯಡಿಯಲ್ಲಿ ಪಡಿತರ

ಅರ್ಹರಾಗಿರುತ್ತಾರೆ

ಕೆಳಕಂಡ ಮಾನದಂಡಗಳಿಗೆ

ಅಕ್ಷಯ ಪಡಿತರ ಚೀಟಿ

(೧) ಮೂರು ಹೆಕ್ಟೇರ್ ಭೂಮಿ

(೨) ಸ್ಥಿರ ದೂರವಾಣಿ ಹೊಂದಿರುವವರು

(೩) ಸ್ವಂತವಾಗಿ ಯಾರೇ ಡೀಸಲ್ / ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು (ಲೂನಾ/ಟಿವಿಎಸ್ ಹೊಂದಿರುವವರನ್ನು ಹೊರತುಪಡಿಸಿ)

(೪) ಬ್ಯಾಂಕ್ / ಸಹಕಾರಿ ಸಂಘಗಳಲ್ಲಿ ೧೦೦ ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು ,

(೫) ತಿಂಗಳಿಗೆ ರೂ ೧ ೦೦೦/- ಕ್ಕೆ ಕಡಿಮೆ ಇಲ್ಲದೆ ವೇತರನ ----- ಸರ್ಕಾರಿ/ಸರ್ಕಾರೇತರ/ ಖಾಸಗಿ ಸಿಬ್ಬಂದಿಗಳು

(೬) ಆದಾಯ ತೆರಿಗೆ ಪಾವತಿಯವರು ,

(೭) ರೆಜಿಸ್ಟ್ರಡ್ ಕಾಂಟ್ರಾಕ್ಟರ್ ಎಪಿಎಂಸಿ ಟ್ರೇಡರ್ಸ್ ಏಜೆಂಟ್ / Dealers in Seeds/ Fertilizers etc ,

ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಮಟ್ಟವನ್ನು ಕೂಡ ಸೀಕ್ಷೆ ಮಾಡಿ ನಿರ್ಣಯಿಸುವುದು

ತದನಂತರ ನೀಡಿದ ನಗರ ಪ್ರದೇಶಕ್ಕೆ ಮರ್ಗಸೂಚಿಗಳಲ್ಲಿ ಈ ಕೆಳಕಂಡ ಮಾನದಂಡಗಳನ್ನು ನಿಗದಿಪಡಿಸಲಾಗಿರುತ್ತದೆ

೧) 20' X 30' ಚದರ ಅಡಿ ಅಧವಾ ಅದಕ್ಕಿಂತ ಕಡಿಮೆ ಅಳತೆಯುಳ್ಳ ನಿವೇಶನ ಅಧವಾ ಸರ್ಕಾರದ ಯಾವುದೇ ಗೃಹ ನಿರ್ಮಾಣ ಯೋಜನೆ ಅಡಿಯಲ್ಲಿ ಉಚಿತವಾಗಿ ಮನೆ

ನೀಡಿರುವ ಕುಟುಂಬಗಳನ್ನು ಬಿಪಿಎಲ್ ಗೆ ಒಳಪಟ್ಟಿರುವರೆಂದು ಪರಿಗಣಿಸುವುದು

೨) ರಸ್ತೆ ಬದಿಯಲ್ಲಿ ಹಾಗೂ ಸಣ್ಣಪ್ರಮಾಣದ ಪೆಟ್ಟಿಗೆ ಅಂಗಡಿಯವರು ಇಟ್ಟುಕೊಂಡು ಜೀವನೋದಪಾಯಕ್ಕಾಗಿ ವ್ಯವಹಾರ ಮಾಡುತ್ತಿರುವವರು ಹೊರತುಪಡಿಸಿ ಉಳಿದ ಸ್ವಂತ ಅಥವಾ ಗೌರವಾನ್ವಿತ ಪಡಿತರ ಚೀಟಿಗೆ ಅರ್ಹರಿವರು

೩) ವಾಸದ / ವಾಣಿಜ್ಯ ಉದ್ದೇಶಕ್ಕಾಗಿ ನೀಡಲಾಗಿರುವ ಅಥವಾ ಪಡೆಯಲಾಗಿರುವ ಕಟ್ಟಡಗಳೀಮದ ಬರುವ ಬಾಡಿಗೆ ಮಾಸಿಕ ರೂ ೨೦೦೦ /- ಮೀರುವವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿರುವುದಿಲ್ಲ

ಗ್ರಾಮಾಂತರ ಪ್ರದೇಶದಲ್ಲಿ ಗರಿಷ್ಟ ೧೨,೦೦೦/- ರೂ ಗಳ ವಾರ್ಷಿಕ ವರಮಾನ, ಪಟ್ಟಣ

ಪ್ರದೇಶದಲ್ಲಿ ಗರಿಷ್ಟ ೧೭,೦೦೦/- ರೂ ಗಳ ವಾರ್ಷಿಕ ವರಮಾನ ಆದಾಯವುಳ್ಳ ಕುಟುಂಬಗಳಿಗೆ ಎಪಿಎಲ್ ಪಡಿತರ ಚೀಟಿಯನ್ನು ವಿತರಿಸಲಾಗಿರುತ್ತದೆ

ಇ ಈ ಮೇಲಿನ ವಿವಿಧ ಯೋಜನೆಗಳ ಮೂಲಕ ವಿವಿಧ ಯೋಜನೆಗಳಿಗಾಗಿ ರಾಜ್ಯ ಹಾಗೂ ಕೇಂದ್ರ .

ವಿತರಿಸಲಾದ ಪಡಿತರ ಚೀಟಿಗಳಿಗೆ ಸಂಬಂಧಿಸಿದಂತೆ ಸರ್ಕಾರ ಒದಗಿಸಲಾಗುತ್ತಿರುವ ಅನುದಾನದ

ಇದರ ಅನುಷ್ಠಾನಕ್ಕಾಗಿ ರಾಜ್ಯ ಹಾಗೂ ಕೇಂದ್ರ ವಿವರ ಕೆಳಕಂಡಂತಿದೆ -

ಸರ್ಕಾರದಿಂದ ಒದಗಿಸಲಾಗಿರುವ ಅನುದಾನವೆಷ್ಟು?

(ರೂ ಲಕ್ಷಗಳಲ್ಲಿ)

ಪಡಿತರ ಚೀಟಿ ವಿಧ		ಆಹಾರ ಸಹಾಯಧನ
ಮತ್ತು ಸಾಗಾಣಿಕೆ ವಚ್ಚದ		
ಅನುದಾನ		
ಕೇಂದ್ರ ರಾಜ್ಯ ಸರ್ಕಾರ		
ಸರ್ಕಾರ ೨೦೦೬-೦೭		
ಅನ್ನಪೂರ್ಣ ೭೭ ೫೧	೦	
ಅಂತ್ಯೋದಯ		೭೫,೦೦೦
ಬಿಪಿಎಲ್ (ಅಕ್ಷಯ) ೦		
ಎಪಿಎಲ್	೦ ೦	

ಈ ಪಡಿತರ ಚೀಟಿಗಳನ್ನು ಸಮರ್ಪಕವಾಗಿ ರಾಜ್ಯಾದ್ಯಂತ ಮನೆ ಮನೆ ಸಮೀಕ್ಷೆಯನ್ನು

ಹಾಗೂ ಅರ್ಹರಿಗೆ ಹಂಚಲು ತೆಗೆದುಕೊಂಡಿರುವ ಕ್ರಮವೇನು , ಅಳತೆಗೋಲು ಇಲ್ಲವಾದ್ದರಿಂದ ನಿಗದಿಪಡಿಸಿ ಕೆಳಕಂಡಂತೆ

ಕೈಗೊಂಡಿದ್ದು, ಅದರಂತೆ ವರಮಾನ ಮಾನದಂಡಗಳನ್ನು ಕ್ರಮ ಕೈಗೊಳ್ಳಲಾಗಿದೆ

೧) ವಿಧಾನ ಸಭಾ ಸದಸ್ಯರು / ವಿಧಾನ ಪರಿಷತರ ಸದಸ್ಯರು/ ಜಿಲ್ಲಾ ಪರಿಷತ್ ಸದಸ್ಯರು ತಾಲ್ಲೂಕು ಪಂಚಾಯತ್ ಸದಸ್ಯರುಗಳಿಗೆ/ಗ್ರಾಮ ಪಂಚಾಯತ್ ಕಾರ್ಯದರ್ಶಿಗಳಿಗೆ ಅಭಿಶಿಕ್ಷಣ (Orientation) ತರಬೇತಿ ನೀಡಲಾಗಿದೆ

(೨) ಮನೆ ಮನೆ ಸಮೀಕ್ಷೆಯನ್ನು ಮನೆ ಸಂಖ್ಯೆ ನೀಡಿ ಪ್ರತಿಯೊಂದು

ಕುಟುಂ-ಬವನ್ನು ಗುರುತಿಸಿದೆ

(ಇ) ಸಮೀಕ್ಷೆಯನ್ನು ಮಾಡಲು ತಂಡಗಳನ್ನು ರಚಿಸಲಾಗಿದೆ ಹಾಗೂ ಇವರಿಗೆ ತರಬೇತಿ ನೀಡಿದೆ

(ಈ) ತಂಡದ ಶಿಫಾರಸುಗಳ ಪಟ್ಟಿಯನ್ನು ಗ್ರಾಮ ಸಭೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವಾರ್ಡ್ ಸಭೆಗಳಲ್ಲಿ ಅನುಮೋದನೆ ಪಡೆದಿದೆ

(ಉ) ತಾತ್ಕಾಲಿಕ ಪಡಿತರ ಚೀಟಿ ಮುದ್ರಿಸಿ ಮನೆ ಮನೆಗೆ ಹೋಗಿ ಹಂಚಿಕೆ ಮಾಡಿದೆ

(ಊ) ಯಾವುದೇ ಲೋಪಗಳನ್ನು ಸರಿಪಡಿಸಲು ಅವಕಾಶ ನೀಡಿದೆ

(೭) ಹೆಬ್ಬಿಟ್ಟಿನ ಗುರತು ಹಾಗೂ ಭಾವಚಿತ್ರ-ಗಳನ್ನು ಸೆರೆಹಿಡಿದು ಶಾಶ್ವತಪಡಿತರ ಚೀಟಿ ನೀಡಲಾಗುವುದು

ಮನೆ ಮನೆ ಸಮೀಕ್ಷೆಯಲ್ಲಿ ಗುರುತಿಸಲಾದ ಫಲಾನುಭವಿಗಳಿಗೆ ಅರ್ಹತೆಗೆ ಅನುಗುಣವಾಗಿ ಅನ್ನಪೂರ್ಣ, ಅಂತ್ಯೋದ್ಯಮ, ಬಿಪಿಎಲ್ (ಅಕ್ಷಯ) ತಾತ್ಕಾಲಿಕ ಪಡಿತರ ಕೂಪನ್ ಗಳನ್ನು ವಿತರಿಸಲಗಿರುತ್ತದೆ ರಾಜ್ಯದಲ್ಲಿ ತಾತ್ಕಾಲಿಕ ಪಡಿತರ ಕೂಪನ್ ಗಳನ್ನು ವಿತರಿಸುವ ಸಂದರ್ಭದಲ್ಲಿ ಹಲವಾರು ರೀತಿಯ ಅಹವಾಲುಗಳನ್ನನು ಸ್ವೀಕರಿಸಲಾಗಿದ್ದು ಆ ಪೈಕಿ ಎಪಿಎಲ್ ಪಡಿತರ ಚೀಟಿಗಳನ್ನು ಪಡೆದಿರುವ ಕುಟುಂಬಗಳವರು

ಬಿಪಿಎಲ್ ಪಡಿತರ ಚೀಟಿಯನ್ನು ಕೋರಿ ಸಮೀಕ್ಷೆಯಲ್ಲಿ ತಮ್ಮ ಕುಟುಂಬನ್ನು ಸಮೀಕ್ಷೆ ಮಾಡಿಲ್ಲವೆಂದು, ವಿತರಸಿಲಾಗಿರುವ ತಾತ್ಕಾಲಿಕ ಪಡಿತರ ಕೂಪನ್ ನಲ್ಲಿ ಹೆಸರು, ಸಂಬಂಧ ಅಧವಾ ವಯಸ್ಸು ಇತ್ಯಾದಿ ಲೋಪದೋಷವಿದೆ ಎಂಬುದಾಗಿ ಸಾರ್ವಜನಿಕರು ಅಹವಾಲುಗಳನ್ನು ಸಲ್ಲಿಸಿರುತ್ತಾರೆ ರಾಜ್ಯಾದ್ಯಂತ ಒಟ್ಟು ೬೪ ೭೦ ಲಕ್ಷ ಅಹವಾಲುಗಳು ಸ್ವೀಕೃತ ಗೊಂಡಿದೆ ಎಲ್ಲಾ ಅಹವಾಲುಗಳನ್ನು ಪರಿಶೀಲಿಸಲಾಗಿದೆ ಅವುಗಳ ಪರಿಶೀಲನೆ ಕಾರ್ಯ ಮುಕ್ತಾಯವಾಗಿದೆ ಹಗೂ ವರ್ಗ ಬದಲಾವಣೆಗೆ ಅರ್ಹರಿಸುವ ಕುಟುಂಬಗಳಿಗೆ ತಾತ್ಕಾಲಿಕ ಪಡಿತರ ಕೂಪನ್ ಗಳನ್ನು ಮುದ್ರಿಸಿ ನೀಡಲು ಜಿಲ್ಲೆಗಳಿಗೆ ಆದೇಶಿಸಿದೆ

ಹೊಸದಾಗಿ ಪಡಿತರ ಚೀಟಿ ಕೋರಿ ಬಂದ ಅಹವಾಲುಗಳನ್ನು ಮರು ಪರಿಶೀಲಿಸಲು ತಿಳಿಸಿದೆ ನಂತರ ಖಾಯಂ ಪಡಿತರ ಚೀಟಿಯನ್ನು ವಿತರಿಸಲು ಕ್ರಮ ವಹಿಸಲಾಗುತ್ತಿದೆ

ಈ ಅರ್ಹರಾದವರೆಲ್ಲರಿಗೂ ಪಡಿತರ ಚೀಟಿಯನ್ನು ವಿತರಿಸಲಾಗಿದೆಯೇ ,

ಅಹವಾಲುಗಳನ್ನು ಪರಿಶೀಲಿಸಿದ ನಂತರ ವರ್ಗ ಬದಲಾವಣೆಗೆ ಸಂಬಂಧಿಸಿದ ಅರ್ಹ ಕುಟುಂಬಗಳಿಗೆ ತಾತ್ಕಾಲಿಕ ಚೀಟಿಗಳನ್ನು ನೀಡಲಾಗುತ್ತಿದೆ

ಉ ಹಾಗಿಲ್ಲದಿದ್ದಲ್ಲಿ, ಅರ್ಹರಾದ ಎಲ್ಲರಿಗೂ ಪಡಿತರ ಚೀಟಿಯನ್ನು ವಿತರಿಸಲು ಸರ್ಕಾರವು ತೆಗೆದುಕೊಂಡ ಕ್ರಮವೇನು?

ಸಾರ್ವಜನಿಕರಿಂದ ೬೪ ೭೦ ಲಕ್ಷ ಅಹವಾಲುಗಳನ್ನು ಸ್ವೀಕರಿಸಲಾಗಿದ್ದು, ಇದರಲ್ಲಿ ೧೫ ೭೦ ಲಕ್ಷ ವರ್ಗ ಬದಾವಣೆಗಾಗಿ ೪೧ ೩೬ ಲಕ್ಷ ಹೊಸ ಪಡಿತರ ಚೀಟಿಗಾಗಿ ೭೬೪ ಲಕ್ಷ ಇತರೆ ಅಹವಾಲುಗಳಿದ್ದು, ಅವುಗಳ ಪರಿಶೀಲನೆ ಕಾರ್ಯ ಮುಕ್ತಯವಾಗಿದೆ ಹಾಗೂ ಬರ್ಗ ಬದಲಾವಣೆ ಅರ್ಹರಿರುವ ಕುಟುಂಬಗಳಿಗೆ

ಕೂಪನ್ ಗಳನ್ನು ಮುದ್ರಿಸಿ ಆದೇಶಿಸಿದೆ ಹೊಸದಾಗಿ ಬಂದ ಅಹವಾಲುಗಳನ್ನು ತಿಳಿಸಿದೆ

ತಾತ್ಕಾಲಿಕ ಪಡಿತರ ನೀಡಲು ಜಿಲ್ಲೆಗಳಿಗೆ ಪಡಿತರ ಚೀಟಿ ಕೋರಿ ಮರು ಪರಿಶೀಲಿಸಲು

ಅನುಬಂಧ

ವಿತರಿಸಲಾಗಿರುವ ತಾತ್ಕಾಲಿಕ ಪಡಿತರ ಚೀಟಿ

ಜಿಲ್ಲೆಯ ಹೆಸರು	ಅನ್ನಪೂರ್ಣ	ಅಂತ್ಯೋದಯ	ಅಕ್ಷಯ	ಎಪಿಎಲ್	ಒಟ್ಟು
ಬಾಗಲಕೋಟೆ	೧೭೦೮	೪೬೭೦೨	೧೬೫೫೦೩	೧೫೧೬೨೮	೨೩೬೫೫೪೧
ಬೆಂಗಳೂರು(ಗ್ರಾ)	೨೪೨೩	೩೪೦೪೩	೨೫೨೪೨೬	೧೫೫೧೬೬	೪೪೪೦೪೮
ಬೆಂಗಳೂರು (ನ)	೭೬೩	೧೩೧೪೭	೧೪೬೮೨೬	೧೬೩೬೨೧	೩೨೪೩೫೭
ಬೆಳಗಾಂ	೦	೯೨೮೨೫	೪೫೨೫೯೮	೩೮೮೬೬೦	೯೩೪೦೮೩
ಬಳ್ಳಾರಿಂ	೬೫೭೭೮	೧೬೮೨೮೨	೨೦೪೧೩೪	೪೩೮೩೯೪	
ಬೀದರ್	೧೫೯೬	೪೪೯೦೧	೧೪೩೪೪೫	೧೩೨೮೭೫	೩೨೨೮೧೭
ಬಿಜಾಪುರ	೨೭೫	೫೫೩೬೦	೧೬೨೯೭೬	೧೫೫೨೯೮	೩೭೩೯೦೯
ಚಾಮರಾಜ ನಗರ	೧೦೩೮	೩೬೦೩೫	೧೩೯೧೨೫	೬೫೬೯೯	೨೪೧೮೯೭
ಚಿಕ್ಕಮಗಳೂರು	೪೯೩	೨೩೩೩೦	೧೩೨೯೦೪	೧೦೨೩೧೭	೨೫೯೦೪೪
ಚಿತ್ರದುರ್ಗ	೦	೪೬೭೬೭	೧೮೦೮೧೪	೧೧೩೨೧೮	೩೪೦೭೯೯
ದ ಕನ್ನಡ	೩೫೧	೧೫೮೫೪	೧೩೩೬೪೬	೧೮೭೩೩೭	೩೩೭೨೮
ದಾವಣಗೆರೆ	೦	೫೩೨೯	೧೭೬೯೨೧		೧೭೫೩೬೨
ಧಾರವಾಡ	೯೯೦	೩೨೧೯೨	೧೬೫೯೮೦		೧೫೦೦೨೮
ಗದಗ	೩೭	೩೧೬೫೭	೮೭೫೭೭		೯೧೩೨೯
ಗುಲ್ಬರ್ಗಾ	೧೭೪೧	೧೦೧೪೦೫	೨೮೭೩೫೯	೨೬೫೭೮೬	೬೫೬೨೯೧
ಹಾಸನಂ		೨೪೭೨೮	೨೬೫೭೩೭	೧೩೧೦೧೨	೪೨೧೪೭೭
ಹಾವೇರಿ	೧೨೫೩	೪೯೫೯೭	೧೩೩೫೦೧	೧೦೨೪೬೯	೨೮೬೮೨೦
ಕೊಡಗು	೪೦೭	೫೧೨೬	೭೪೮೦೬	೫೪೦೮೩	೧೩೪೪೨೨

ಕೋಲಾರ	೪೧೫೭	೬೫೮೭೯	೨೯೯೮೩೬	೨೩೩೬೮೬	೬೦೩೫೫೮
ಕೊಪ್ಪಳ	೧೪೬	೪೧೬೮೦	೯೧೪೦೮	೧೧೦೩೯೪	೨೪೩೬೨೮
ಮಂಡ್ಯಂ	೩೭೨೦೮	೨೪೧೦೯೮	೧೬೧೮೨೬	೪೪೦೧೩೨	
ಮೈಸೂರು	೧೮೩೫	೪೭೯೯೧	೩೩೪೫೪೭	೨೫೦೮೭೧	೬೩೫೨೪೪
ರಾಯಚೂರು	೨೩೪೩	೬೦೨೭೯	೧೨೬೮೪೬	೧೬೭೨೨೯	೩೫೬೩೩೭
ಶಿವಮೊಗ್ಗ	೧೩೨೩	೪೦೬೬೬	೧೬೭೩೨೩	೧೫೯೬೦೪	೩೬೮೯೧೬
ತುಮಕೂರು	೧೫೫೮	೫೩೫೧೨	೩೪೬೪೭೪	೨೦೮೧೭೦	೬೦೯೭೧೪
ಉಡುಪಿ	೩೯೧	೧೭೮೫೫	೮೭೩೫೨	೧೦೯೨೨೦	೨೧೪೮೧೮
ಉ ಕನ್ನಡ	೬೨೪	೧೬೭೧೪	೧೪೮೯೨೯	೧೨೫೦೭೧	೨೯೧೩೩೮
ಒಟ್ಟು	೨೫೪೫೨	೧೧೫೪೬೬೦	೫೧೧೩೮೭೯	೪೩೧೬೧೩೩	೧೦೬೧೦೧೨೪
ಬೆಂಗಳೂರು ಅ ಪ	೦	೧೮೭೭೦	೨೦೦೯೬೧	೮೬೦೨೮೭	೧೦೮೦೦೧೮
ಬೆಂಗಳೂರು ನಗರ	೦	೨೪೮೨	೭೨೨೬೩	೧೧೭೦೨೩	೧೯೧೭೬೮
ಒಟ್ಟು	೨೫೪೫೨	೧೧೭೫೯೧೨	೫೩೮೭೧೦೩	೫೨೯೩೪೪೩	೧೧೮೮೧೯೧೦

ಇದನ್ನು ದಯವಿಟ್ಟು ತೆಗೆಯಬೇಕೆಂದು ಹೇಳುತ್ತೇನೆ ಇನ್ನು ಪಡಿತರ ಚೀಟಿಗಳನ್ನು ಸಮರ್ಪಕವಾಗಿ ಅರ್ಹರಿಗೆ ಹಂಚಲು ತೆಗೆದುಕೊಂಡ ಕ್ರಮವೇನು ಎಂದು ಕೇಳಿದರೆ, ರಾಜ್ಯಾದ್ಯಂತ ಮನೆ ಮನೆ ಸಮೀಕ್ಷೆಗಳನ್ನು ಕೈಗೊಂಡಿದ್ದು ಅದರಂತೆ ವರಮಾನ ಅಳತೆಗೋಲು ಇಲ್ಲವಾದ್ದರಿಂದ, ವರಮಾನ ಅಳತೆಗೋಲು ಇಲ್ಲವೆಂದರೆ ಏನು? ಮಾನದಂಡ ನಿಗದಿಪಡಿಸುವಂತೆ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ ಒಬ್ಬ ವ್ಯಕ್ತಿಯ ವರಮಾನವನ್ನು ಏನಿದೆ ಎಂದು ಸರ್ಕಾರಕ್ಕೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ? ವರಮಾನವನ್ನು ಏಕೆ ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ?

ಅದರ ಜೊತೆಗೆ ವಿಧಾನಸಭಾ ಸದಸ್ಯರು, ವಿಧಾನಪರಿಷತ್ ಸದಸ್ಯರು, ಜಿಲ್ಲಾಪರಿಷತ್ ಸದಸ್ಯರು, ತಲ್ಲೂಕು ಪಂಚಾಯತ್ ಸದಸ್ಯರಿಗೆ, ಗ್ರಾಮ ಪಂಚಾಯತ್ ಕಾರ್ಯದರ್ಶಿಗಳಿಗೆ ಅಭಿಶಿಕ್ಷಣ ತರಬೇತಿ ನೀಡಲಾಗಿದೆ ಎಂದು ಉತ್ತರದಲ್ಲಿ ತಿಳಿಸಿದ್ದೀರಿ ಯಾವ MLA ಗಳಿಗೆ ತರಬೇತಿ ಕೊಟ್ಟಿದ್ದೀರಿ ಎನ್ನುವುದನ್ನು ದಯಮಾಡಿ ಹೇಳಬೇಕು ಆಯಾ MLA ಗಳಿಗೆ ಕಾರ್ಡ್ ಕೊಡುವುದಕ್ಕೆ ತರಬೇತಿ ಕೊಡುತ್ತಾರಂತೆ ಸಮೀಕ್ಷಾ ತಂಡ ಮಾಡುತ್ತೆವೆ, ಆ ಸಮೀಕ್ಷಾ ತಂದಡವರು ಗ್ರಾಮ ಸಭೆ

ಮಾಡುತ್ತಾರೆಂದು ಹೇಳಿದ್ದೀರಿ ಇವತ್ತಿನವರೆಗೆ ಸಹ ಒಂದೂ ಗ್ರಾಮದಲ್ಲಿ ಕೂಡ ಗ್ರಾಮ ಸಭೆ ಆಗಿಲ್ಲ ಯಾರು ಈ ಸಮೀಕ್ಷಾ ತಂಡಕ್ಕೆ ಹಣ ಕೊಡುತ್ತಾರೋ ಅವರಿಗೆ ಹಸಿರು ಕಾರ್ಡು, BPL Card ಕೊಡುತ್ತಾರೆ ಇದು ಈ ನಿಮ್ಮ ಸರ್ಕಾರದಲ್ಲಿ ನಡೆದಿದೆಯೆಂದಲ್ಲ, ಯಾವಾಗಲೂ ನಡೆದಿದೆ ಹಿಂದಿನ ಸರ್ಕಾರಗಳಲ್ಲಿ ನಡೆದಿದೆ, ಹಿಂದೆ ನಡೆದಿದೆ, ಮುಂದೆಯೂ ನಡೆಯುತ್ತದೆ ನಿಮ್ಮ ಮೇಲೆ ನಾನು ಆರೋಪ ಮಾಡುತ್ತಿಲ್ಲ ಈ ತರಹದ ಉತ್ತರ ಕೊಡುವುದು ಸರಿಯಾಗುವುದಿಲ್ಲ ಇದನ್ನು ತಾವು ಹೇಳಬೇಕು ಇನ್ನು ಅರ್ಹ ಫಲಾನುಭವಿಗಳಿಗೆ card ಸಿಗದಿದ್ದರೆ ಅಹವಾಲುಗಳನ್ನು ಸ್ವೀಕಾರ ಮಾಡಿ ಅದನ್ನು ಪರಿಶೀಲನೆ ಮಾಡಿ ಅವರಿಗೆ ಕೊಡುತ್ತೇವೆನ್ನುವ ಮತನ್ನು ಹೇಳಿದದೀರಿ ಆ ಅಹವಾಲನ್ನು ಯಾವಾಗ ಮುಗಿಸುತ್ತೀರೆನ್ನುವುದು ಗೊತ್ತಾಗಬೇಕು ಇನ್ನು ಅನ್ನಪೂರ್ಣ ಎಷ್ಟು ? ಅಂತ್ಯೋದಯ ಎಷ್ಟು? ಅಕ್ಷಯ ಎಷ್ಟು ಅಂದರೆ BPL Card ರಾಜ್ಯದಲ್ಲಿ ಜಿಲ್ಲಾವಾರು ಮಾಹಿತಿ ಕೇಳಿದ್ದೇನೆ ೫೩ಲಕ್ಷದ ೮೭ಸಾವಿರದ ೧೦೩ BPL Card ಗಳನ್ನು ಕೊಟ್ಟಿದ್ದೇವೆಂದು ಉತ್ತರದಲ್ಲಿ ತಿಳಿಸಿದ್ದಾರೆ ತಮಗೆಲ್ಲ ಗೊತ್ತಿರುವ ಹಾಗೆ, ಹಿಂದಿನ ಮಾನ್ಯ ಎಸ್ ಎಂದ ಕೃಷ್ಣರವರ ಸರ್ಕಾರ, ದಿವಂಗತ ಜೆ ಹೆಚ್ ಪಟೇಲರ ಸರ್ಕಾರವಿದ್ದಾಗ ೬೮ ಲಕ್ಷ ಕುಟುಂಬಗಳಿಗೆ BPL Card ಕೊಟ್ಟಿದೆ ೬೮ ಲಕ್ಷ BPL Card ಇದ್ದುದನ್ನು ಈಗ ೫೩ ಲಕ್ಷಗಳಿಗೆ ಏಕೆ ಇಳಿಸಿದ್ದೀರಿ? ಎನ್ನುವುದು ಗೊತ್ತಾಗಬೇಕು

ಶ್ರೀ ಗೋವಿಂದ ಎಂ ಕಾರಜೋಳ ಮಾನ್ಯ ಅಧ್ಯಕ್ಷರೆ, ದೂರವಾನಿ ಹೊಂದಿರುವವರಿಗೆ ಕೊಡುವುದಿಲ್ಲವೆನ್ನುವುದು, ಕೊಳವೆ ಬಾವಿ ಇರುವವರಿಗೆ ಕೊಡುವುದಿಲ್ಲ , ಕೊಳವೆ ಬಾವಿ ಎಂದರೆ ನೀರಾವರಿ, ನೀರಾವರಿಗೆ ಆದಾಯ ಹೆಚ್ಚಿರುತ್ತದೆ ಎನ್ನುವುದು, ಜೊತೆಗೆ 20X30 ಜಾಗ ಎಂದರೆ ಈ ಆಶ್ರಯ ಯೋಜನೆ ಮತ್ತು ಸಹಕಾರಿ ಗೃಹ ನಿರ್ಮಾಣ ಮಂಡಳಿಯಿಂದ ಕೊಟ್ಟವರಿಗೂ ಕೂಡ ಪರಿಗಣಿಸುತ್ತೇವೆಂದು ನಾವು ಉತ್ತರದಲ್ಲಿ ಹಏಳಿದ್ದೇವೆ ತಾವು ಸ್ವಲ್ಪ ಮುಂದೆ ಹೋಗಿ ನೋಡಿದರೆ ಗೊತ್ತಾಗುತ್ತದೆ ಅವರಿಗೆ ಕೊಡುತ್ತೇವೆ ಅಂಥ ಏನೂ ಸಮಸ್ಯೆ ಇಲ್ಲ ಆದರೆ ಎಲ್ಲದ್ದಕ್ಕಿಂತಲೂ ಮುಖ್ಯವಾಗಿರುವುದು ಆದಾಯದ ಮಿತಿ

ಆದಾಯದವೇ ಮಾನದಂಡವಾಗಿರುತ್ತದೆ ಆ ಆಧಾರದ ಮೇಲೆಯೇ ನವು ಕೊಡತಕ್ಕ ಕೆಲಸ ಮಾಡಿದ್ದೇವೆ ಪಡಿರತರ ಚೀಟಿಗಳನ್ನು ಸಮರ್ಪಕವಾಗಿ ಅರ್ಹರಿಗೆ ಹಂಚಲು ತೆಗೆದುಕೊಂಡುರುವ ರಮ ಏನು ಎಂದು ಪ್ರಶ್ನೆ ಕೇಳಿದ್ದೀರಿ ಮನೆ ಮನೆ ಸಮೀಕ್ಷೆ ಮಾಡಿಸಿದ್ದೇವೆ, ಮಾಡಿಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ ಈ ವಿಧಾನವನ್ನು ಶಾಸಕರ ಕಡೆಯಿಂದ ಆಯಾಯ ಕ್ಷೇತ್ರದಲ್ಲಿ ಬಿಡುಗಡೆ ಮಾಡಲಿಕ್ಕೆ, ಹಂಚಿಸಲಿಕ್ಕೆ ಪ್ರಾರಂಭ ಮಾಡುವಾಗ ಸಾಂಕೇತಿಕವಾಗಿ ಕಾರ್ಯಕ್ರಮ ಮಾಡಿದ್ದೇವೆಂಬುದನ್ನು ಅವರು ಆ ರೀತಿ ಹೇಳಿದ್ದಾರೆ ಹಾಗೆಯೇ, ಹಿಂದೆ ಎಸ್ ಎಂ ಕೃಷ್ಣರವರ ಸರ್ಕಾರವಿದ್ದಾಗ, ಜೆ ಹೆಚ್ ಪಟೇಲರ ಸರ್ಕಾರವಿದ್ದಾಗ ೬೮ ಲಕ್ಷ ಕಾರ್ಡುಗಳನ್ನು ಕೊಟ್ಟಿದ್ದೇವೆಂದು ಮಾನ್ಯ ಸದಸ್ಯರು ಹೇಳಿದರು ಈಗಲೂ ಕೂಡ ೫೩ ಲಕ್ಷ ಎಂದು ಹೇಳಿರುವುದು ತಪ್ಪಾಗುತ್ತದೆ ಏಕೆಂದರೆ BPL ಒಟ್ಟು ನೋಡಬೇಕಾಗುತ್ತದೆ IAY, ಅನ್ನಪೂರ್ಣ, BPL ಹೀಗೆ ಈ ಮೂರನ್ನೂ ಸೇರಿಸಿ ನಾವು ಈಗಾಗಲೇ ಗುರುತಿಸಿರತಕ್ಕಂಥದ್ದು ರಾಜ್ಯದಲ್ಲಿ ಮನೆ ಮನೆ ಸಮೀಕ್ಷೆ ಮಾಡಿ ೬೬ ಲಕ್ಷ ೮೮ ಸಾವಿರದ ೬೨೬ ಎನ್ನತಕ್ಕಂಥದ್ದು ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ ಅದರಲ್ಲಿ ಈಗಾಗಲೇ ೬೫ ಲಕ್ಷ ೮ ಸಾವಿರದ ೪೬೭ cards ಅನ್ನು ಹಂಚಿಕೆ ಮಾಡಲಾಗಿದೆ ಅದೂ ಅಲ್ಲದೆಯೇ ಇನ್ನೂ ಹೆಚ್ಚಿಗೆ ಬೇಡಿಕೆ ಮೇಲೆ ಅರ್ಜಿಗಳು ಬಂದಿವೆ ಅರ್ಜಿಗಳು ೬೮ ಲಕ್ಷ ೭೦ ಸಾವಿರದ ಅರ್ಜಿಗಳು ಬೇಡಿಕೆ ಬೇಡಿ ಬಂದಿವೆ ಅದರಲ್ಲಿ ವರ್ಗ ಬದಲಾವಣೆ ಅಂದರೆ, ನನ್ನ ಹತ್ತಿರ ಮೊದಲು APL ಇತ್ತು, BPL ಇತ್ತು ನನ್ನದು BPL ಬದಲಾಗಿ APL ಆಗಿದೆ ಎಂದು ಬಂದಂಥ ಅರ್ಜಿಗಳ ಸಂಖ್ಯೆ ೧೫ ಲಕ್ಷದ ೭೦ ಸಾವಿರ ಅದರಲ್ಲಿ ಈಗಾಗಲೇ ಪರಿಶೀಲನೆ ಮಾಡಿ ನೋಡಲಾಗಿ ೮ ಲಕ್ಷದ ೬೬ ಸಾವಿರ ಕುಟುಂಬಗಲು ಅರ್ಹರಿದ್ದಾರೆ ಅವರಿಗೆ ಕೊಡತಕ್ಕಂಥ ವ್ಯವಸ್ಥೆ ಮಾಡುತ್ತಿದ್ದೇವೆ ಈಗ distribution ಪ್ರಾರಂಭವಾಗಿದೆ ಆದರೆ, ಇನ್ನೂ ಸಹ ಒಂದೇ ವರ್ಷದಲ್ಲಿ ಹೊಸ ಅರ್ಜಿಗಳು ಬಂದಿದೆ ೨೦೦೫ರಲ್ಲಿ ಮನೆ ಮನೆ survey ಮಾಡಿಸಿದ ತಕ್ಷಣ ೨೦೦೬ರಲ್ಲಿ ಈ ಸಮ್ಮಿಶ್ರ ಸರ್ಕಾರ ಆಡಳಿತಕ್ಕೆ ಬಂದ ಮೇಲೆ, ಈ ಖಾತೆಯನ್ನು ನಾನು

ವಹಿಸಿಕೊಂಡ ಮೇಲೆ immediately ಕೊಡಬೇಕೆನ್ನುವ ಕಾರಣಕ್ಕಗಿ ಕೊಡುವುದನ್ನು ಪ್ರಾರಂಭ ಮಾಡಿದ್ದೇವೆ ಮಾಡಿದಾಗ, ಅರ್ಜಿಗಳು ಬಂದಿರುವುದರಲ್ಲಿ ನಮಗೆ ಬಂದಿಲ್ಲ, ನಮಗೆ ಬಂದಿದೆ, ಹೆಸರು ತಪ್ಪಗಿದೆ, ವಯಸ್ಸು ತಪ್ಪಾಗಿದೆ, address ತಪ್ಪಾಗಿದೆ, Fair price shop ನ ವಿಳಾಸ ತಪ್ಪಾಗಿದೆ ಎನ್ನುವ ೬೪ ೭೦ ಲಕ್ಷ ಅರ್ಜಿಗಳು ಬಂದಿವೆ ಅದರಲ್ಲೇನು ವರ್ಗ ಬದಲಾವಣೆ ಕೇಳಿದ್ದರು, ೮೬೬ ಲಕ್ಷ ಜನರಿಗೆ ಕೊಡಲಿಕ್ಕೆ ಪ್ರಾರಂಭ ಮಾಡಿದ್ದೇವೆ ಇವತ್ತು ೬೫೮೮ + ೮೬೬ ಅನ್ನು ಕೂಡಿಸಿದರೆ ಹೆಚ್ಚಾಗುತ್ತದೆನ್ನುವುದನ್ನು ತಾವು ಗಮನಿಸಬಹುದು ಸಾಕಷ್ಟು ಹೆಚ್ಚಾಗುತ್ತದೆ ಆದರೆ, ಇದು ಇಷ್ಟಕ್ಕೇ ಮುಗಿದಿಲ್ಲ ೨೦೦೬ರಲ್ಲಿ ನಾವು ಕೊಡಲಿಕ್ಕೆ ಪ್ರಾರಂಭ ಮಾಡಿದ ಮೇಲೆ ಒಂದೇ ವರ್ಷದಲ್ಲಿ ಕುಟುಂಬಗಳ ಸಂಖ್ಯೆ ಶೇಕಡ ೨೫ ರಷ್ಟು ಹೆಚ್ಚಾಗಿದ್ದು ಇಷ್ಟು ಹೊಸ ಅರ್ಜಿಗಳು ಬಂದಿವೆ ಒಂದೇ ವರ್ಷದಲ್ಲಿ ಶೇಕಡ ೨೫ ರಷ್ಟು ಕುಟುಂಬಗಳ ಸಂಖ್ಯೆ ಹೆಚ್ಚಾಗಲಿಕ್ಕೆ ಸಾಧ್ಯವಿಲ್ಲ ಅದಕ್ಕಾಗಿ ಇದು ಈ ಮನೆಯ ಎಲ್ಲಾ ಸದಸ್ಯರ ಸಮಸ್ಯೆ ಮತ್ತು ಸಾರ್ವಜನಿಕರ ಸಮಸ್ಯೆಯಾಗಿದೆ ಮೇಲ್ಮನೆ ಮತ್ತು ಕೆಳಮನೆಯ ಎಲ್ಲಾ ಸದಸ್ಯರಿಗೆ ನಾನು ಇಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅವರವರ ಕ್ಷೇತ್ರದಲ್ಲಿ ಯಾರ್‍ಯಾರಿಗೆ ಕಾರ್ಡುಗಳು ಸಿಕ್ಕಿಲ್ಲವೆಮದು ಅನಿಸುತ್ತದೆ, ಅಂಥವರ ಒಂದು ಯಾದಿ ಕಳುಹಿಸಿಕೊಟ್ಟರೆ ಕೂಡಲೆ ನವು ಪರಿಶೀಲನೆ ಮಾಡಿಸಿ, ಅವರಿಗೆ ಕೊಡಿಸುವ ವ್ಯವಸ್ಥೆ ಮಾಡುತ್ತೇವೆ ಇದೊಂದು ಗಂಭೀರವಾದ ಸಮಸ್ಯೆಯಾಗಿದೆ ಜನರು ಹೆಚ್ಚು ಕಾರ್ಡುಗಳನ್ನು ತೆಗೆದುಕೊಳ್ಳಬೇಕೆನ್ನುವ ಕಾರಣಕ್ಕಾಗಿ ಹೆಚ್ಚು ಪೈಪೋಟಿ ಆಗುತ್ತಿದೆ ಇದರಲ್ಲಿ ಬೇಡಿಕೆ ಬಂದುದೆಲ್ಲವೂ ಸತ್ಯ ಎಂದು ಹೇಳುವುದಕ್ಕಗುವುದಲ್ಲ ಅನರ್ಗರು ಕೂಡ ಕೊಟ್ಟಿದಾರೆ, ಶ್ರೀಮಂತರು ಸಹ ಕಾರ್ಡು ತೆಗೆದುಕೊಳ್ಳಬೇಕೆನ್ನುತ್ತಾರೆ ಆ ಕಾರಣಕ್ಕೋಸ್ಕರ ನನು ಇವತ್ತು ಈ ಮನೆಯ ಸದಸ್ಯರಿಗೆ ಒಂದು ಸಲಹೆಯನ್ನು ಕೊಡಲಿಕ್ಕೆ ಬಯಸುತ್ತೇನೆ ಅದೇನೆಂದರೆ, ತಾವೆಲ್ಲರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಯಾರಾದರೂ ಅನರ್ಹ ವ್ಯಕ್ತಿಯಗಳು ಇದ್ದರೆ, ಕಡಬಡವರ ಹೆಷರು ಬಿಟ್ಟಿದ್ದರೆ, ತಾವು ಅಂಥ ಪಟ್ಟಿಯನ್ನು ಕಳುಹಿಸಿಕೊಟ್ಟರೆ ಅವರಿಗೆ ಕಾರ್ಡು ಕೊಡಿಸುವ ವ್ಯವಸ್ಥೆಯನ್ನು ಮಾಡಲಾಗುವುದು

ಅದಲ್ಲದೆ, ತಾವೆಲ್ಲರೂ ಒಪ್ಪುವುದಾದರೆ, ಏಕೆಂದರೆ ಬಡವರ ಮೇಲೆ ಕಾರಜೋಳರವರು case ಹಾಕಲಿಕ್ಕೆ ತಯಾರಾಗಿದ್ದೀರಿ ಎಂದು, ಆ ಜನರ represent ಮಾಡತಕ್ಕಂಥವರು ಎಮದು ನನ್ನ ಮೇಲೆ ತಪ್ಪು ಅರ್ಥ ಮಾಡಕೊಳ್ಳಬೇಡಿ Fair price shop ನವರು ಇರಬಹುದು ತೆಗೆದುಕೊಳ್ಳುವ ಜನರು ಇರಬಹುದು, ಒಬ್ಬೊಬ್ಬರೇ ಇಟ್ಟುಕೊಳ್ಳುವ ಪ್ರಯತ್ನ ಮಾಡುತ್ತಾರೆಂದರೆ ಒಂದು ಶಾಸನ ತಂದು ಅಂಥವರ ಮೇಲೆ ಕಠಿಣ ಶಿಕ್ಷೆಗೆ ಗುರಿಪಡಿಸಲಿಕ್ಕೆ ಆವೆಲ್ಲ ಒಪ್ಪಿದರೆ ಅದನ್ನೂ ಸಹ ಮಾಡಲಿಕ್ಕೆ ನಾನು ಹಿಂದೆ ಸರಿಯುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಇನ್ನು unit system ಬಗ್ಗೆ ಬಹಳ ಜನರು ಟೀಕೆಯನ್ನು ಮಾಡುತ್ತಿದದಾರೆ ಬಡವರಿಗೆ ಅನ್ಯಾಯ ಮಾಡಬೇಕೆಂದು unit system ಅನ್ನು ಮಾಡಿರುವುದಿಲ್ಲ ಈ ಕಾರ್ಡುಗಳನ್ನು ಪ್ರತಿಯೊಬ್ಬರೂ ಒಂದೊಂದು ಕಾರ್ಡುಗಳನ್ನು ತೆಗೆದುಕೊಳ್ಳಬೇಕೆಂದು ಏನು ಪ್ರಯತ್ನ ಮಾಡುತ್ತಿದ್ದರೋ ಅದನ್ನು ತಡೆಗಟ್ಟುವ ಸಲುವಾಗಿ unit system ಮಾಡಿದ್ದೇವೆ Unit system ನಲ್ಲಿ ಇನ್ನೊಂದು ಹೊಸ ಅವಕಾಶ ಏನು ಮಾಡಿದ್ದೇವೆಂದರೆ, ಮೊದಲು ೧೨ ವರ್ಷದ ಕೆಳಗಿನವರಿಗೆ ಆಹಾರ ಧಾನ್ಯ ಕೊಡುತ್ತಿರಲಿಲ್ಲ ಅವರನನು ಕುಟುಂಬದ ಸದಸ್ಯರು ಎಂದು ಪರಿಗಣಿಸಿದರೂ ಸಹ ಅವರಿಗೆ ಆಹಾರ ಧಾನ್ಯ ಕೊಡುತ್ತಿರಲಿಲ್ಲ ಈಗ ನಾನೇನು ಮಾಡಿದ್ದೇನೆಂದರೆ, ಜನವರಿ ೧೧,೨೦೦೭ ರಂದು ಒಂದು ಆದೇಶ ಮಾಡಿ, ಕುಟುಂಬದಲ್ಲಿರುವ ಸಣ್ಣ ಮಕ್ಕಳಿದ್ದರೂ ಕೂಡ ಒಂದು unit ಎಂದು ಪರಿಗಣಿಸಿ ಅವರಿಗೂ ಸಹ ಕೊಡಲಿಕ್ಕೆ ವ್ಯವಸ್ಥೆಯನ್ನು ಮಾಡಿದ್ದೇವೆ ಅದಕ್ಕಾಗಿ, unit system ನಲ್ಲಿ ಬಹಳ ಅನ್ಯಾಯವಾಗುತ್ತದೆ, ಬಹಳ ಜನರಿಗೆ ಅನ್ಯಾಯವಾಗುತ್ತದೆನ್ನುವ ಪ್ರಶ್ನೆ ಇಲ್ಲಿ ಇಲ್ಲ ಅನ್ಯಾಯವಾಗುವುದು ಕಡಿಮೆಯಾಗುತ್ತದೆ ಒಬ್ಬೊಬ್ಬರು ಒಂದೊಂದು ಕಾರ್ಡು ತೆಗೆದುಕೊಳ್ಳಬೇಕೆನ್ನುವುದನ್ನು ತಡೆಗಟ್ಟಲಿಕ್ಕೆ ಸಾಧ್ಯವಾಗುತ್ತದೆ ಅದಕ್ಕಾಗಿ ಮಾನ್ಯ ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ನಮಗೆ ತಮ್ಮ ಸಲಹೆ ಸೂಚನೆಗಳನ್ನು ದಯವಿಟ್ಟು ಕೊಡಿ

ಶ್ರೀ ಬಸವರಾಜ ರಾಯರೆಡ್ಡಿ ಮಾನ್ಯ ಉಪಾಧ್ಯಕ್ಷರೆ, ವರಮಾನದ ಮಾನದಂಡವನ್ನಿಟ್ಟುಕೊಂಡು ಮಾಡಿದ್ದೇವೆಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಿದರು ವರಮಾನದ ಮಾನದಂಡ ಇಟ್ಟುಕೊಂಡು ಮಾಡಿದ್ದರೆ ಬಹಳ ಸಂತೋಷ ನನಗೆ ಉತ್ತರದಲ್ಲಿ ಏನು ಕೊಟ್ಟಿದ್ದೀರಿ ಅದನ್ನು ನಾನು repeat ಮಾಡುತ್ತೇನೆ

(ಗೊಂದಲ)

ಶ್ರೀ ಗೋವಿಂದ ಎಂ ಕಾರಜೋಳ ನಾನು phone ಇದ್ದವರಿಗೆ ಇಲ್ಲ ಎಂದು ಹೇಳಲಿಲ್ಲ ಸೆಲ್ ಫೋನ್ ಇತ್ತು, ಸೆಲ್ ಫೋನ್ ತೆಗೆದಿದ್ದೇವೆ

ಶ್ರೀ ಬಸವರಾಜ ರಾಯರೆಡ್ಡಿ ಅದು ಆಯಿತು, ತಾವು ಏನು ಹೇಳಿದ್ದೀರೆಂದರೆ, ರಾಜ್ಯಾದ್ಯಂತ ಮನೆ ಮನ ಸಮೀಕ್ಷೆಯನ್ನು ಕೈಗೊಂಡಿದ್ದು ಅದರಂತೆ ವರಮಾನ ಅಳತೆಗೋಲು ಇಲ್ಲವಾದ್ದರಿಂದ,

ಶ್ರೀ ಗೋವಿಂದ ಎಂ ಕಾರಜೋಳ ಇಲ್ಲ, ಇಲ್ಲ

ಶ್ರಿ ಬಸವರಾಜ ರಾಯರೆಡ್ಡಿ ನೀವು ಕೊಟ್ಟ ಉತ್ತರದಲ್ಲಿದೆ

ಶ್ರೀ ಗೋವಿಂದ ಎಂ ಕಾರಜೋಳ ಬಹುಶಃ typing error ಏನಾದರೂ ಆಗಿರಬೇಕೆಂದು ನನಗನ್ನಿಸುತ್ತದೆ

ಶ್ರೀ ಬಸವರಾಜ ರಾಯರೆಡ್ಡಿ ಮುಂದೆ ಹೇಳುತ್ತೇನೆ " ಇಲ್ಲವಾದ್ದರಿಂದ ಮಾನದಂಡವನ್ನು ನಿಗದಿಪಡಿಸಿ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ (೧) ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ತು ಸದಸ್ಯರು ಜಿಲ್ಲಾ ಪರಿಷತ್ತು ಸದಸ್ಯರು

ಶ್ರೀ ಗೊಂವಿಂದ ಎಂ ಆರಜೋಳ ಮಾನ್ಯ ಉಪಾಧ್ಯಕ್ಷರೆ, ಅದು typing error ಆಗಿರಬೇಕು ಮಾನದಂಡ ಇಲ್ಲವೆಂದಲ್ಲ

ಉಪಾಧ್ಯಕ್ಷರು Typing error ಎಂದು ಹೇಳಿದ್ದಾರಲ್ಲ

ಶ್ರೀ ಗೋವಿಂದ ಎಂ ಕಾರಜೋಳ ಮಾನ್ಯ ರಾಯರೆಡ್ಡಿಯವರೆ, typing error ಆಗಿದೆ ಮಾನದಂಡ ಮೇಲೆ ತೋರಿಸಿದದೇವಲ್ಲ

ಶ್ರೀ ಬಸವರಾಜ ರಾಯರೆಡ್ಡಿ Typing error ಎಂದರೆ ಇದು ತಪ್ಪಲ್ಲವೇ? ಮಾನ್ಯ ಮಂತ್ರಿಗಳೇ ನಿಮ್ಮ ಇಲಾಖೆಯ Principal Secretary ಯವರು ಏನು ಮಾಡುತ್ತಾಋಎ? Principal Secretary ಯವರು ಉತ್ತರ ತಯಾರು ಮಾಢಿ ನಿಮಗೆ submit ಮಾಡಬೇಕಾದರೆ ಉತ್ತರ ನೋಡುವುದಿಲ್ಲವೇ? ಹಾಗಾದರೆ, ಅವರು ಉತ್ತರವನ್ನು ನೋಡುತ್ತಾರೋ ಅಥವಾ ಇಲ್ಲವೇ? ಹಾಗಾದರೆ they are inefficient The Secretariat is inefficient

ಶ್ರೀ ಗೋವಿಂದ ಎಂ ಕಾರಜೋಳ ಉತ್ತರದಲ್ಲಿ ಮಾನದಂಡಗಳನ್ನು ತೋರಿಸಿದ್ದೇವೆ ಇಲ್ಲ ಎಂದು ಹೇಳುವುದಿಲ್ಲ ನಾನು ಒಪ್ಪಿದ್ದೆನೆ ಅದು typing error ಆಗಿದ' ಅದನ್ನು ತಿದ್ದಿಕೊಳ್ಳುತ್ತೇನೆ

ಉಪಾಧ್ಯಕ್ಷರು ಅದನ್ನು ಸರಿಪಡಿಸುತ್ತೇವೆಂದು ಹೇಳಿದ್ದಾರಲ್ಲ

ಶ್ರೀ ಎಂ ಪಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ದಯಮಾಡಿ phone ಇದ್ದವರಿಗೂ ಕೂಡ BPL card ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಮದು ಕೇಳಿಕೊಳ್ಳುತ್ತೆನೆ

ಶ್ರೀ ನೆ ಲ ನರೇಂದ್ರ ಬಾಬು (ರಾಜಾಜಿನಗರ) ನಾನು ಹಲವಾರು ಬಾರಿ ಹೇಳಿದ್ದೆ ತಾವು ದಯವಿಟ್ಟು ಈ ಒಂದು ಸಂದರ್ಭದಲ್ಲಿ ಹೇಳಬೇಕು ತಮಗೆ ಗೊತ್ತಿರುವ ಹಗೆ, ಬಹಳಷ್ಟು ಸಂದರ್ಭಗಳಲ್ಲಿ ಬೆಂಗಳೂರು ನಗರದ ಶಾಸಕನಾಗಿ ಕೇಳುತ್ತಿದ್ದೇನೆ ಏಕೆಂದರೆ, ನಿಮ್ಮ ಮಾತಿನ ಆಧಾರದ ಮೇಲೆ ಹಲವಾರು ಸಾರಿ ಜನರಿಗೆ ಕೊಡುತ್ತೇವೆಂದು ಹೇಳಿದೆವು ನಿಖರವಾದ date ಹೇಳಿದರೆ ಅನುಕೂಲ ಇಲ್ಲವೆಂದರೆ, ಪ್ರತಿಯೊಂದು ವಿಷಯದಲಲಿಯೂ ಜನರಿಗೆ ಉತ್ತರ ಕೊಡಲು ನಾವು ಅಸಹಾಯಕರಾಗಿದ್ದೇವೆ ಬೆಂಗಳೂರಿನಲ್ಲಿ ಬಡವರಿದ್ದಾರೆ ದಯವಿಟ್ಟು, BPL cards ಅನ್ನು ಯಾವಾಗಿನಿಂದ ವಿತರಣೆ

ಮಾಡುತ್ತೇವೆಂಬ ಬಗ್ಗೆ ತಾವು ಆದೇಶ ಕೊಡುತ್ತೀರಾ ಎಂಬ ಬಗ್ಗೆ ನಿಖರವಾದ ಉತ್ತರವನ್ನು, ಸ್ಪಷ್ಟೀಕರಣ ಕೊಡಬೇಕೆಂದು ವಿನಂತಿ ಮಾಡುತ್ತೇವೆ

ಶ್ರೀ ಗೋವಿಂದ ಎಂ ಕಾರಜೋಳ ಬೆಂಗಳೂರಿನಲ್ಲಿ ಹೊಸ ಅರ್ಜಿಗಳನ್ನು ತೆಗೆದುಕೊಳ್ಳುವುದಕ್ಕೆ ಏಪ್ರಿಲ್ ೨ನೇ ವಾರದಲ್ಲಿ ಪ್ರಾರಂಭ ಮಾಡುತ್ತೇವೆ ಸುಮಾರು ೫೨ ಕೇಂದ್ರಗಳನ್ನು ತೆರೆಯುತ್ತೇವೆ ಈಗಾಲೇ ಪ್ರಾರಂಭ ಮಾಡಬೇಕಾಗಿತ್ತು ವಿಳಂಬವಾಗಿದೆ ವಿಳಂಬ ಆಗಲಿಕ್ಕೆ ಕಾರನ ನಮ್ಮ ಇಲಾಖೆಯಲ್ಲಿ ಹೆಚ್ಚಿನ ಸಿಬ್ಬಂದಿ ಇಲ್ಲದ ಕಾರಣದಿಂದ ನಾವು ಬೇರೆ ಇಲಾಖೆಗೆ ವಿನಂತಿ ಮಾಡಿದ್ದೇವೆ ಮಾನ್ಯ ಆರೋಗ್ಯ ಸಚಿವರು ಅದಕ್ಕೆ ಬೇಕಾಗಿರುವಂಥ ಸಿಬ್ಬಂದಿಗಳನ್ನು ಬೆಂಗಳೂರು ಜಿಲ್ಲೆಯಲ್ಲಿ ಬೇರೆ ಬೇರೆ ಇಲಾಖೆಯಿಂದ ನಾನು ವ್ಯವಸ್ಥೆ ಮಾಡಿಕೊಡುತ್ತೇನೆಂದು ಹೇಳಿದ್ದಾರೆ ಅವರನ್ನು ಉಪಯೋಗಿಸಿಕೊಂಡು ಎರಡನೇ ವಾರದಲ್ಲಿ ಪ್ರಾರಂಭ ಮಾಡುತ್ತೇವೆ ಆದಷ್ಟು ಬೇಗ ಕೊಡಲು ಪ್ರಯತ್ನ ಮಾಡುತ್ತೇವೆ

ಶ್ರೀ ಕೆ ರಘುಪತಿ ಭಟ್ (ಉಡುಪಿ) ನಮ್ಮ ಕರಾವಳಿ ಭಾಗದಲ್ಲಿ ಸೀಮೆ ಎಣ್ಣೆಯ ಸಮಸ್ಯೆ ಬಹಳವಿದೆ Gas ಇದ್ದವರಿಗೆ ಸೀಮೆ ಎಣ್ಣೆ ಕೊಡುವುದಿಲ್ಲವೆಂದು ಹೇಳುವಂಥಾದ್ದನ್ನು ಮಾಡಿದ್ದಾರೆ ಎಕೆಲವೊಮ್ಮೆ ನಾವು SC/ST ಗಳಿಗೆ ನಗರಸಭೆಯಿಂದ ೧೮% ನಲ್ಲಿ gas ಕೊಟ್ಟಂಥದ್ದಿದ್ದೆ ಅಂಥ SC/ST ಗಳಿಗೆ ration card ಈಗ ನಲ್ಲಿ gas ಉಂಟು ಎಂದು ಇದ್ದ ಕೂಡಲೇ ಸೀಮೆ ಎಣ್ಣೆ ಕೊಡುವುದಿಲ್ಲವೆಂದು ಹೇಳುತ್ತಾರೆ ನಮ್ಮಲ್ಲಿ ಕರೆಂಟ್ ಹೋಗುವ ಸಮಸ್ಯೆ ಜಾಸ್ತಿ ಇದೆ ಸೀಮೆ ಎಣ್ಣೆ ಬೇಕು ಎಂದು ಹಳ್ಳಿಯ ಎಲ್ಲ ಹೆಂಗಸರೂ ಕೇಳುತ್ತಾರೆ ಕನಿಷ್ಟ ೨-೩ ಲೀಟರ್ ಆದರೂ ಎಲ್ಲವರಿಗೂ ಸೀಮೆ ಎಣ್ಣೆ ಕೊಡುವಂಥ ಒಂದು ಆದೇಶವನ್ನು ತಾವು ಮಾಡಬೇಕು ಅದು ಬಹಳ ದೊಡ್ಡ ಸಮಸ್ಯೆಯಾಗಿದೆ

ಶ್ರೀ ಎಂ ಟಿ ಬಿ ನಾಗರಾಜ (ಹೊಸಪೇಟೆ) ತಮ್ಮ ಮೂಲಕ ನಾನು ಆಹಾರ ಮಂತ್ರಿಗಳಲ್ಲಿ ಒಂದು ಉಪ ಪ್ರಸ್ನೆಯನ್ನು ನಾನು ಕೇಳುತ್ತೇನೆ

ತಾವೀಗ ಉತ್ತರದಲ್ಲಿ ಏನು ಹೇಳಿದ್ದೀರಿ ಎಂದರೆ BPL Card ಗೆ ಅರ್ಹತೆ ಇರುವ ನಿಜವಾದ ಬಡವರಿದ್ದಾರೆ, ಕೂಲಿಯಿಂದ ಜೀವನ ಮಾಡುವವರು, ಆರ್ಥಿಕವಾಗಿ ಹಿಂದುಳಿದವರು, ಯಾರಿಗೆ ಕಾರ್ಡ್ ಸಿಕ್ಕಿಲ್ಲ ಅಂಥವರು ಅರ್ಜಿಗಳನ್ನು ಕೊಡಿ ಎಂದು ಹೇಳಿ ಪತ್ರಿಕೆಗಳಲ್ಲಿ ಕೂಡ ಘೋಷಣೆ ಮಾಡಿದ್ದೀರಿ ಈಗಾಗಲೇ ಅಂದ ಫಲಾನುಭವಿಗಳು ಅರ್ಜಿಗಳನ್ನು ಕೊಟ್ಟು ಸುಮಾರು ೬ ತಿಂಗಳಾಗಿದೆ ಉದಾಹರಣೆಗೆ, ಹೊಸಕೋಟೆ ತಾಲ್ಲೂಕಿನಿಂದ ಇವತ್ತು ಸುಮಾರು ೫ ಸಾವಿರ BPL Cardಗೆ ಅರ್ಹತೆ ಇರುವ ಫಲಾನುಭವಿಗಳು ಅರ್ಜಿಯನ್ನು ಕೊಟ್ಟಿದ್ದಾರೆ ಇದುವರೆಗೂ ಕೂಡ ಆ ಬಗ್ಗೆ ಉತ್ತರವನ್ನು ಕೊಟ್ಟಿಲ್ಲ ನಿಜವಾದ ಅರ್ಹತೆ ಇರತಕ್ಕಂಥವರು ಕೊಟ್ಟ ಅರ್ಜಿಯ ಪರಿಶೀಲನೆ ಕೂಡ ಆಗಿಲ್ಲ

ಶ್ರೀ ಗೋವಿಂದ ಎಂ ಕಾರಜೋಳ ನಾನು ಹೇಳುವಂಥ ಸಂದರ್ಭದಲ್ಲಿಯೇ ಎಲ್ಲವೂ ಸತ್ಯವಲ್ಲ, ಅನರ್ಹರು, ಶ್ರೀಮಂತರೂ ಕೂಡ ಬೇಡುತ್ತಿದ್ದಾರೆಂದು ಹವಿಳಿದೆ ಮತ್ತೆ , ೪೧ ಲಕ್ಷ ಹೊಸ ಅರ್ಜಿಗಳು ಬಂದಿವೆ ಅವುಗಳನ್ನು ಪರಿಶೀಲನೆ ಮಾಡಲು ಸಮಯ ಬೇಕಾಗುತ್ತದೆ ಪರಿಶೀಲನೆಯಾದ ನಂತರ ಅದರಲ್ಲಿ ಯಾರು ಅರ್ಹ ಕುಟುಂಬಗಳು, ಬಡವರಿಗೆ ಬಿಟ್ಟುಹೋಗಿದೆ ಅವರಿಗೆ ಖಂಡಿತವಾಗಿ ಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ Gas ಇರುವವರಿಗೆ Kerosene ಕೊಡಬೇಕೆಂದು ತಾವು ಹೇಳಿದಿರಿ ಭಾರತ ಸರ್ಕಾರ ಏನು ಮಾಡಿದೆ ಎಂದರೆ, gas ಗೂ ಕೂಡ domestic consumption cylinders ಕೊಡುತ್ತದೆ, ಅದರ ಮೇಲೆಯೂ subsidy ಕೊಡುವುದರಿಂದ ಮತ್ತೆ kerosene ಗೂ ಕೊಡಬೇಕಾದರೆ, double subsidy ಯಾಗುತ್ತದೆ ಆ ಕಾರಣಕ್ಕಾಗಿ ಕೊಡಬಾರದೆನ್ನುವ ನಿರ್ಬಂಧವನ್ನು ಹಾಕಿದ್ದಾರೆ ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ ತಮಗೆ ದೀಪ ಹಚ್ಚುವ ಸಲುವಾಗಿ kerosene ಬೇಕಾಗಿದ್ದರೆ, white kerosene ಸಿಗುತ್ತದೆ ತಾವು ಮಾರುಕಟ್ಟೆಯಲ್ಲಿ white kerosene ಅನ್ನು purchase ಮಾಡಬಹುದು ಮಂಗಳೂರಿನಲ್ಲಿ ಸಾಕಷ್ಟು ಕೊಡಲು ಅವರು ತಯಾರಿದ್ದಾರೆ ಅದಲ್ಲದೆ ಈಗ ಬಾಗಲಕೋಟೆ

ಜಿಲ್ಲೆಯಲ್ಲಿ ಕೂಡ ಒಂದು agency ಕೊಟ್ಟಿದ್ದಾರೆ ನಿಮ್ಮ ಜಿಲ್ಲೆಯಲ್ಲಿ ಯಾರಾದರೂ ಮಾಡಲಿಕ್ಕೆಮುಂದೆ ಬಂದರೆ Oil Company ಯಿಂದ white kerosene agency ಯನ್ನು ನಿಮಗೆ ಕೊಡಿಸುತ್ತೇನೆ ಅಂಥವರು ಮುಂದೆ ಬಂದರೆ ತಾವು ಒಪ್ಪಿಸಿ

ರಾಜ್ಯವು ಕೃಷಿ ಕ್ಷೇತ್ರದಲ್ಲಿ ಅತೀ ಹಿಂದುಳಿಯಲು ಕಾರಣಗಳೇನು ?

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	೨೧೪೦
ಸದಸ್ಯರ ಹೆಸರು	ಶ್ರೀ ಶಿವಶಂಕರ ರೆಡ್ಡಿ ಎನ್ ಹೆಚ್ (ಗೌರಿಬಿದನೂರು)
ಉತ್ತರಿಸುವ ಸಚಿವುರ	ಬಂಡೆಪ್ಪ ಖಾಶೆಂಪೂರ ಕೃಷಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
೧	ರಾಜ್ಯವು ಕೃಷಿ ಕ್ಷೇತ್ರದಲ್ಲಿ ಅತೀ ಹಿಂದುಳಿಯಲು ಕಾರಣಗಳೇನು?	ರಾಜ್ಯವು ಕೃಷಿ ಕ್ಷೇತ್ರದಲ್ಲಿ ಹಿಂದುಳಿದಿಲ್ಲ ರಾಜ್ಯವು ಕೃಷಿ ಉತ್ಪಾದನೆಯಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸುವ ಸಾಧ್ಯತೆ ರಾಜ್ಯದಲ್ಲಿ ಶೇಕಡ ೭೫ ರಷ್ಟು ಕೃಷಿ ಕ್ಷೆತ್ರವು ಮಳೆಯನ್ನು ಅವಲಂಬಿಸಿರುವುದರಿಂದ ಕೆಲವು ವರ್ಷಗಳಲ್ಲಿ ಪ್ರಗತಿಯು ಕುಂಠಿತಗೊಂಡಿದೆ

೨ ಸಕಾಲದಲ್ಲಿ ರೈತರಿಗೆ ಉತ್ತಮ ಇಂತಹ ಯಾವುದೇ
ಪ್ರಕರಣಗಳು ವರದಿಯಾಗ-

ಮಟ್ಟದ ಬೀಜಗಳನ್ನು ನೀಡದೆ ದಿರುವುದರಿಂದ ಕ್ರಮ
ಕೈಗೊಳ್ಳುವ ಪ್ರಶ್ನೆ

ವಿಳಂಬ ಮಾಡುತ್ತಿರುವ ಉದ್ಭವಿಸುವುದಿಲ್ಲ

ಅಧಿಕಾರಿಗಳ ವಿರುದ್ಧ ಸರ್ಕಾರವು

ಇದುವರೆಗೂ ಕ್ರಮ ಕೈಗೊಳ್ಳದೆ

ಇರಲು ಕಾರಣವೇನು?

೩ ಯಾವ ಯಾವ ತಾಲ್ಲೂಕುಗಳನ್ನು ೨೦೦೬-೦೭ ನೇ
ಸಾಲಿನಲ್ಲಿ ರಾಜ್ಯದ ೧೨೮

ಬರಪೀಡಿತ ತಾಲ್ಲೂಕುಗಳೆಂದು ತಾಲ್ಲೂಕುಗಳನ್ನು ಬರ
ಪೀಡಿತ ತಾಲ್ಲೂಕುಗಳೆಂದು

ಪರಿಗಣಿಸಲಾಗಿದೆ? ಪರಿಗಣಿಸಲಾಗಿದ್ದು,
ವಿವರಗಳನ್ನು ಅನುಬಂಧಲ್ಲಿ

ನೀಡಲಾಗಿದೆ

೪ ಈ ತಾಲ್ಲೂಕುಗಳಲ್ಲಿನ ಕೃಷಿ ಈ ತಾಲ್ಲೂಕುಗಳಲ್ಲಿ ಕೃಷಿ
ಇಲಾಖೆಯ ವತಿಯಿಂದ

ರೈತರಿಗೆ ಸರ್ಕಾರವು ನೀಡುತ್ತಿರುವ ಶೇಕಡ ೭೫ ರಷ್ಟು
ರಿಯಾಯತಿ ದರದಲ್ಲಿ ಬಿತ್ತನೆ

ಸವಲತ್ತುಗಳೇನು? ಬೀಜಗಳನ್ನು ಸಣ್ಣ ಮತ್ತು
ಅತಿ ಸಣ್ಣ ರೈತರಿಗೆ

ಬರಪೀಡಿತ ತಾಲ್ಲೂಕುಗಳಲ್ಲಿ

ವಿತರಿಸಲಾಗಿದೆ

ಶ್ರೀ ಎನ್ ಹೆಚ್ ಶಿವಶಂಕರರೆಡ್ಡಿ ಉತ್ತರ ಒದಗಿಸಿದ್ದಾರೆ ಆದರೆ, ನನ್ನ ದೃಷ್ಟಿಯಲ್ಲಿ ಉತ್ತರ ಸರಿಯಲ್ಲ - ಇಡೀ ರಾಜ್ಯದಲ್ಲಿ subsidy ರಿಯಾಯಿತಿಯನ್ನು ಕೊಡುವ ಪ್ರತಿ ವರ್ಷ ಬೀಜವನ್ನೇನು ಕೊಡುತ್ತಾರೆ KSSC Modal agency ಅದರ ಮೂಲಕ ಕೊಡುತ್ತಿದ್ದಾರೆ ಪ್ರತಿ season ಗೂ ಕೂಡ ೨೦ರಿಂದ ೩೦ hybrid seeds company ಗಳು ಅರ್ಜಿ ಹಾಕುತ್ತವೆ ಒಂದು State Level Committee ಇರುತ್ತದೆ ಆ Committee ಯಲ್ಲಿ screen ಮಾಡಿ ತಾವು ಅವರಿಗೆ ಕೊಡುತ್ತೀರಿ ಇದರಲ್ಲಿ ಸಾಕಷ್ಟು ಕಂಪನಿಗಳಿಗೆ ಸರಿಯಾದಂಥ research background ಇರುವುದಿಲ್ಲ ಅನೇಕರು ಕೆಲವು influence ನಲ್ಲಿ ಕೂಡ ಅರ್ಜಿಗಳನ್ನು ಹಾಕಿ ಅನೇಕ ಸಂದರ್ಭಗಳಲ್ಲಿ ಕಳಪೆ ಬೀಜಗಳನ್ನು ಕೊಟ್ಟಿರುವ ನಿದರ್ಶನ ಇವೆ ನಮ್ಮ ತಾಲ್ಲೂಕಿನಲ್ಲಿ ಕಳೆದ ಸಾರಿ ಯಾವುದೋ ಒಂದು ಕಂಪನಿಯಲ್ಲಿ ಇಲಾಖೆ ಮುಖಾಂತರ ಬೀಜ ವಿತರಣೆ ಮಾಡಿದರು ಹೊಸೂರು ಹೋಬಳಿಯ ಸುಮಾಱುಲು ೪-೫ ಹಳ್ಳಿಗಳಲ್ಲಿ ನಮ್ಮಲ್ಲಿ ವಿಶೇಷವಾಗಿ ಮುಸುಕಿನ ಜೋಳ, ಸೂರ್ಯಕಾಂತಿಯನ್ನು ಬೆಳೆಯುತ್ತಾರೆ, ಅಲ್ಲಿ ಸುಮಾರು ೫೦೦ ಎಕರೆಯಲ್ಲಿ ಏನು ರೈತರು subsidy ಮುಖಾಂತರ ತೆಗೆದುಕೊಂಡಿದ್ದರು ಅದು ಮೊಳಕೆಯೇ ಬರಲಿಲ್ಲ ರೈತರು ಇದರ ಬಗ್ಗೆ ಸಾಕಷ್ಟು complaint ಕೊಟ್ಟರೂ ಇಲಖೆಯವರು crop loss ಗಾಗಿ ಆ ಸೀಟ್ ಕಂಪನಿಯವರ ಮೇಲೆ ಯಾವುದೇ action ತೆಗೆದುಕೊಳ್ಳುವುದಕ್ಕಾಗಲಿಲ್ಲ ರೈತರಿಗೆ ಲಕ್ಷಾಂತರ ರೂಪಾಯಿ loss ಆಯಿತು ಇದರಲ್ಲಿ ಒಂದು defect ಇದೆ ಎಂದು ನನಗನ್ನಿಸುತ್ತಿದೆ Seed quality ಗೆ ಕೆಲವು parameters ಇದೆ ಅದರಲ್ಲಿ genetic purity, germination, physical purity, moisture ಇದೆಲ್ಲವನ್ನೂ ನೀವು ensure ಮಾಡುತ್ತೀರಾ ಎಂದು ಹೇಳಿ ಅದರಲ್ಲಿ ಕಳುಹಿಸುತ್ತೀರಾ ಬ್ಯಾಗ್ ಮೇಲೆ ಇರುತ್ತದೆ Proper ಆಗಿ ಅದು screen ಆಗುತ್ತಿಲ್ಲವೆಂಬುದು ನನಗೆ ಬಂದಿರುವಂಥ ಮಾಹಿತಿ Field trials ನಲ್ಲಿ ಸರಿಯಾದ ಕಂಪನೀಸ್ ನವರಿಗೆ screening ಆಗಬೇಕು

ಕನಿಷ್ಠ ಅವರು ೩-೪ ವರ್ಷ seeds ತಯಾರು ಮಾಡುವ ಕಂಪನಿಯವರು field trials ನಲ್ಲಿ pass ಆದಂಥವರಿಗೆ eligibility ಕೊಟ್ಟರೆ ಸ್ವಲ್ಪ ಗುಣಮಟ್ಟ ಕಾಪಾಡಲಿಕ್ಕೆ ಸಾಧ್ಯವಾಗತ್ತದೆ ಹಾಗಾಗಿ, ಇದರ ಬಗ್ಗೆ re-consider ಮಾಡಬೇಕು Screening timeನಲ್ಲಿ ಕಂಪನಿಯವರು season ನಲ್ಲೇನು ಮಾಡುತ್ತಾರೆಂದರೆ, ಅರ್ಜಿ ಹಾಕುತ್ತಾರೆ ಆಮೇಲೆ ಆ parameters ಎಲ್ಲ ensure ಮಾಡಿಸಿ ಎಂದು ಹೇಳುತ್ತಾರೆ But, Field trials ನಲ್ಲಿ ಮಾಡಿ certify ಆಗಿರುವ ಕಂಪನಿಗಳಿಗೆ ಸರ್ಕಾರ ಅವಕಾಶ ಕೊಟ್ಟರೆ ಒಳ್ಳೆಯದು ಬಹಳಷ್ಟು failures ಆಗುವ chances ಇದೆ ಈ ತರಹ failures ಆಗಿರುವ ಸಂದರ್ಭದಲ್ಲಿ ಅಂದ ಕಂಪನಿಯವರ ಮೇಲೆ ಭಾರ ಹಾಕಿ ಕನಿಷ್ಠ ೫೦% crop loss ಆದರೂ ಕೂಡ ಆ ರೈತರಿಗೆ ಪರಿಹಾರ ಕೊಡುವ ಕೆಲಸವನ್ನು ಸರ್ಕಾರ ಮಾಡಬೇಕು ಸರ್ಕಾರ should stand guarantee KSSಯವರು, they stand guarantee for seed companies ಹಾಗಾಗಿ, ರೈತರಿಗಾಗುವ ನಷ್ಟವನ್ನು ತಡೆಯಲು ಇದನ್ನು ಮಾಡಬೇಕು ದಯಮಾಡಿ, ಬಗ್ಗೆ ತಾವು ಆಲೋಚನೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ ಅದರ ಜೊತೆಗೆ, drought affected taluks ಬಗ್ಗೆ ತಾವೇನು ಮಾಹಿತಿ ಕೊಟ್ಟಿದ್ದೀರಿ, ಬೆಳಗ್ಗೆ ಚರ್ಚೆಯಾಧ ಸಂದರ್ಭದಲ್ಲಿ ಕೇವಲ ೪೩% ಹಣ utilization ಆಗಿದೆ ಸಾಕಷ್ಟು ಹಣ ಹಾಗೇ ಉಳಿದಿದೆ ಅದು utilization ಆಗುವ ಬಗ್ಗೆ ಸರ್ಕಾರ ಹೆಚ್ಚಿಗೆ ಒತ್ತು ಕೊಡಬೆಕಾಗುತ್ತದೆ ಕೆಲವು ಕೃಷಿ ನೀತಿಗಳಲ್ಲಿ ಏನು reforms ತಂದಿದ್ದಾರೆ, ಆ ಬಗ್ಗೆ ತಾವು 8 points ಹೇಳಿದ್ದೀರಿ ಕೃಷಿಯಲ್ಲಿ ಕೂಡ ಈಗಾಗಲೇ ಆದ್ಯತೆ ಕಡಿಮೆಯಾಗಿದೆ ಇದರ ಬಗ್ಗೆ ಮಾನ್ಯ ಮಂತ್ರಿಗಳು enlighteen ಮಾಡಬೇಕು

ಶ್ರೀ ಬಂಡೆಪ್ಪ ಖಾಶೆಂಪೂರ್ ಸನ್ಮಾನ್ಯ ಸದಸ್ಯರು ಬಹಳ ಪ್ರಮುಖವಾಗಿ (ಅ) ಪ್ರಶ್ನೆ ಕೇಳಿದ್ದಾರೆ ಅದಕ್ಕೆ ಉತ್ತರವನ್ನೊದಗಿಸಿದ್ದೇವೆ ಏನೆಂದರೆ, ರಾಜ್ಯವು ಹಿಂದುಳಿದಿಲ್ಲ, ಆದಷ್ಟು ಮಟ್ಟಿಗೆ ನಾವು ಮುಂದೆ

ಬಂದಿದ್ದೇವೆಂದು ಹೇಳಿದ್ದೇವೆ ೧೯೫೬ರಲ್ಲಿ ೧೩ ಲಕ್ಷ ಟನ್ ಆಹಾರ ಉತ್ಪಾದನೆ ಇತ್ತು ಅದೇ ೧೯೭೦ ರಲ್ಲಿ ೭೦ ಲಕ್ಷ ಟನ್ ಆಹಾರ ಉತ್ಪದನೆ ಇದೆ ೨೦೦೦ ದಿಂದ ಇತ್ತೀಚಿಗೆ ಸುಮಾಯು ೧೦೦ ರಿಂದ ೧೧೦ ಲಕ್ಷ ಟನ್ ಆಹಾರ ಉತ್ಪಾದನೆ ಇದೆ ಹಾಗಾಗಿ, ಹಲವಾರು ಸಂಶೋದನೆಯಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಕೃಷಿ ಕ್ಷೇತ್ರ ಮುಂದುವರಿಯುತ್ತಿದೆ ಇನ್ನೂ ಬಹಳಷ್ಟು ಮುಂದೆಹೋಗಬೇಕಾಗಿದೆ ಅವರು seeds ಬಗ್ಗೆ ಕೇಳಿದರು ಈಗ ಮುಖಾಂತರ ಈ seeds company ಗಳನ್ನು ಕರೆದು ಸುಮಾರು ಅದಕ್ಕೆ ಅರ್ಹತೆಗಳನ್ನೆಲ್ಲ notify ಮಾಡಿದ್ದೇವೆ ಅವರಿಗೆ ಗೊತ್ತಿದೆ

ಇದರಲ್ಲಿ ಕೆಲವು ವಿಶೇಷತೆಗಳು ಇವೆ ಅವರು ಎಲ್ಲಾ ತಿಳಿದುಕೊಂಡಿದ್ದಾಯುವ ಖರೀಫ್ ಮತ್ತು ರಬ್ಬಿ ಯಲ್ಲಿ ನೋಡಿದರೆ, ಖರೀಪ್ ಟೆಂರ್ ಗಿಂತ ರಬ್ಬಿ ಟಂಡರ್ ನಲ್ಲಿ ನಾವು ಬಹಳಷ್ಟು changes ನ್ನು ತಂದಿದ್ದೇವೆ ಹೀಗಾಗಿ ಆಯಾಯ ಕಂಪನಿಗಳಿಗೆ ಏನೇನು ಅರ್ಹತೆಗಳು ಬೇಕೋ, research ಆಗಲಿ field trial ಆಗಲಿ ಇದರಲ್ಲಿ ನಾವು ಬಹಳಷ್ಟು ಅವರಿಗೆ condition ಹಾಕಿದ್ದೇವೆಮದು ಹೇಳುವುದಕ್ಕೆ ಬಯಸುತ್ತೇನೆ ತಾವು ಈಗ ಮುಸುಕಿನ ಜೋಳದ ಬಗ್ಗೆ ಹೇಳಿದಿರಿ ನಮ್ಮ ಮಾಜಿ ಸಚಿವರು ಇಲ್ಲಿಯೇ ಕುಳಿತಿದ್ದಾರೆ ಅವರು ಬಿಟ್ಟು ಹೋದಂಥ ಚಮತ್ಕಾರ, ಮೊನ್ನೆ ೨ ಕೋಟಿ ೬೧ ಲಕ್ಷ ರೂಪಾಯಿ ನಾವು ಆ ಕಂಪನಿಯ ಮುಖಾಂತರ ರೈತರಿಗೆ ವಾಪಸ್ ಕೊಡಿಸುವಂಥ ಪ್ರಯತ್ನ ಆಗಿದೆ

ಶ್ರೀ ಕೆ ಶ್ರೀನಿವಾಸ ಗೌಡ (ಕೋಲಾರ) ಚಮತ್ಕಾರ ಏನೂ ಇಲ್ಲ ಅವರು ಹಳಗೆ ಏನೂ ಕೊಡದೇ ಓಡಿ ಹೋಗಿದ್ದರು ನಾನೇ ಪ್ರಾರಂಭಿಸಿದೆ ನಾನು ಅವರನ್ನು ಕರೆದು ರಜಿ ಮಾಡಿ ಸುಮಾರು ಒಂದೂವರೆ ಕೋಟಿ ರೂಪಾಯಿಗಳನ್ನು ಕೊಡಿಸಿದೆ ಉಳಿದಿದ್ದು ಕೂಡ ಕೊಡಬೇಕೆಂದು ಆಯಿತು, ಅಷ್ಟರಲ್ಲಿ ಆಗ ನಮ್ಮ ಸರ್ಕಾರ ಹೋಯಿತು ನಾನು ಮಾಡಿದ್ದನ್ನು ಕೊಡಿಸಿದ್ದರೆ ಸಂತೋಷ ನಾನೇನು ಅದನ್ನು ಉಳಿಸಿ

ಹೋಗಿಲ್ಲ ರೈತರೂ ಕೂಡ ಆಗ ಸುಮ್ಮನಾಗಿದ್ದರು ನಾನೇ ರೈತರನ್ನು ಕರೆದು, ಕಂಪನಿಯವರನ್ನು ಕರೆದು ದುಡ್ಡು ಇಷ್ಟು ಕೊಡಬೇಕೆಂದು ಹೇಳಿ ಕಾರ್ಯದರ್ಶಿಗಳ ಸಮ್ಮುಖದಲ್ಲಿ ೨-೩ ಮೀಟಿಂಗ್ ಮಾಡಿ ಆ ಹಣವನ್ನು ಕೊಡಿಸಿದ್ದೆ ಆಗ ಅವರು ಅರ್ಧ ಹಣ ಕೊಟ್ಟಿದ್ದರು ಇನ್ನರ್ಧ ಹಣ ಕೊಡುವುದಕ್ಕೆ ಟೈಂ ಕೇಳುತ್ತಿದ್ದರು ಆದರೂ ಅವರು ಹಣ ಕೊಡಬೆಕೆನ್ನುವ ಒತ್ತಡವನ್ನು ನಾನು ಹೇರಿಕೊಂಡು ಬಂದಿದ್ದೆ ಈಗ ಅವರು ಆ ಹಣ ಕೊಡಿಸಿದ್ದರೆ ನಾನಂತೂ ಸಂತೋಷವನ್ನು ವ್ಯಕ್ತಪಡಿಸುತ್ತೇನೆ ಅದನ್ನು ನೀವು ಮಾಡಿದ್ದಲ್ಲ ನಾನು ಮಾಡಿದ್ದು

ಶ್ರೀ ಬಂಡೆಪ್ಪ ಕಾಂಶಂಪೂರ್ ನೀವು ಮಾಡಿರುವುದಕ್ಕೆ ನಾನು ಒಪ್ಪಿದ್ದೇನೆ ಆದರೆ, ಬಿಟ್ಟು ಹೋಗಿದ್ದೀರಿ ಎಂದು ಹೇಳಿದ್ದೆ

ಶ್ರಿ ಕೆ ಶ್ರೀನಿವಾಸ ಗೌಡ ಮಾನ್ಯ ಸದಸ್ಯರು ಕೃಷಿ ನೀತಿ ಬಗ್ಗೆ ಕೇಳಿದ್ದಾರೆ ಅದಕ್ಕೆ ನಿಮ್ಮ ಹಣಕಾಸು ಸಚಿವರು ಒಂದು ಪುಡಿಗಾಸು ಇಟ್ಟಿಲ್ಲ ನೀವು ಕೃಷಿ ನೀತಿಗೆ ಸಾವಿರ ಕೋಟಿ ರೂಪಾಯಿ ಬೇಕೆಂದು ಕೇಳಿದಿರಿ ನನಗೆ ಮಾತನಾಡಲು ಮಾನ್ಯ ಅಧ್ಯಕ್ಷರು ಅವಕಾಶ ಕೊಡಲಿಲ್ಲ ಕೃಷಿಯ ಮೇಲೆ ಬಹಳಷ್ಟು ಬೆಳಕು ಚೆಲ್ಲಬೇಕೆಂದು ಆಶೆಯಿತ್ತು ಅದನ್ನು ಮಾಡಿ ಇಷ್ಟು ಶ್ರಮ ವಹಿಸುವ ಅಗತ್ಯ ಏನಿತ್ತು? ಕೃಷಿ ನೀತಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಪ್ರಚಾರ ಗಿಟ್ಟಿಸಿದ್ದೇ ಗಿಟ್ಟಿಸಿದ್ದು ಅದಕ್ಕೆ ಕನಿಷ್ಟ ಮೂರು ಕಾಸು ಇಡಲಿಲ್ಲ ಇದನ್ನು ನೀತಿ ಎಂದು ಹೇಳಬೇಕೆ? ಪಂಚ ಸೂತ್ರಗಳನ್ನು ನೀವು ತಂದಿದ್ದೀರಿ, ಅದಕ್ಕೆ ನೀವು ಬಿಡಿಗಾಸನ್ನು ಇಟ್ಟಿದ್ದೀರಾ? ಇದನ್ನು ನೀವು ಯಾವ ಪುರುಷಾರ್ಥಕ್ಕೆ ತಂದಿದ್ದೀರೋ ನನಗಂತೂ ಅರ್ಥವಾಗುತ್ತಿಲ್ಲ ಬಜೆಟ್ ನಲ್ಲಿ ಅದಕ್ಕೆ ಹಣ ಮೀಸಲಿಡದೆ ಸುಮ್ಮನೆ ಪೇಪರ್ ನಲ್ಲಿ ತೋರಿಸುವುದಕ್ಕಷ್ಟೆ ಆಗಿದೆ ನೀವು ಮಂತ್ರಿಗಳು ಹಣಕಾಸು ಸಚಿವರ ಮೇಲೆ ಒತ್ತಡ ಹೇರಬೇಕಾಗಿತ್ತು ಅದಕ್ಕೆ ನಮ್ಮಂತವರಿಗೆ ಕೊಟ್ಟಿದ್ದರೆ ನೀವು ಕೊಡಲೇಬೇಕೆಂದು ಹಿಡಿಯುತ್ತಿದ್ದೆವು ಕೃಷಿ ನೀತಿ ಮಾಡಿರುವುದರಿಂದ

ರೈತರಿಗೆ ಮೂರು ಕಾಸಿನ ಉಪಯೋಗವಾಗಿಲ್ಲ ಏಕೆಂದರೆ, ಬಜೆಟ್ ನಲ್ಲಿ ಅದಕ್ಕೆ ದುಡ್ಡು ಇಟ್ಟಿಲ್ಲ

ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನ ಬಾಗೇವಾಡಿ) ಇದರಲ್ಲಿ ಬಹಳ ಮುಖ್ಯವಾದ ನಿಮ್ಮದೇ ಉತ್ತರ ಇದೆ " ಈ ರೀತಿ ರೈತರನ್ನು ಕಡೆಗಣಿಸಿ ರಾಷ್ಟ್ರದ ಮತ್ತು ರಾಜ್ಯದ ಕೃಷಿ ಆದಾಯ ಕಡಿಮೆಯಾಗುತ್ತಿದ್ದು ಇದರ ಬಗ್ಗೆ ಸರ್ಕಾರ ಎಚ್ಚೆತ್ತುಕೊಂಡು ಕೃಷಿಯನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಸರಕಾರದ ರೂಪುರೇಷೆಗಳೇನು ?" ಎಂದು ಅವರು ಕೇಳಿದ್ದಾರೆ ಅದರಲ್ಲಿ ನೀವು ೬ ನೇಯದ್ದು ನೋಡಿರಬಹುದು ಉತ್ತರ ಏನಿದೆ ಎಂದರೆ, to double the agricultural production and net income of a farmer in one decade ಅಂದರೆ ಇವತ್ತಿಗೂ ಹಿಡಿದೂ ಹತ್ತು ವರ್ಷ ಬೇಕೋ? ಈಗ ನೀವು ಎರಡನೇ ಕೃಷಿನೀತಿ ತಂದಿರುವುದು ಮಾನ್ಯ ಭೈರೇಗೌಡರವರು ತಂದಿರತಕ್ಕಂಥದ್ದು ಏನಾದರೂ ಆಯಿತೋ ಇಲ್ಲವೋ ಅಥವಾ ನಿಮ್ಮಿಂದ ಏನಾದರು ಆಗುತ್ತದೆಯೋ, ನೀವು ಒಂದು ಕೃಷಿ ನೀತಿ ತಂದು ಅನೌನ್ಸ್ ಮಾಡಿದ್ದೀರಿ ನಿಮಗೆ ಇನ್ನೂ ಹತ್ತು ವರ್ಷಬೇಕಾ? ಹತ್ತು ವರ್ಷ ನೀವು ಇರುತ್ತೀರಾ? ಅಥವಾ ನೀವಾಗಿ ಈ ರಾಜ್ಯದಲ್ಲಿ ಹೊಸದಾಗಿ ವಿಚಾರ ಮಾಡಿ ಹೊಸ ಕೃಷಿ ನೀತಿ ತರಬೇಕೆನ್ನುತ್ತೀರಾ? ಇದರ ಜೊತೆಗೆ adulterated seeds ಏನು ಕೊಡುತ್ತಾರಲ್ಲ ಅವರಿಗೆ ಎಷ್ಟು conviction ಆಗಿದೆ ನೀವು ಹೇಳಿಬಿಡಿ Adulterated drugs ಅಷ್ಟೇ ಅಲ್ಲ adulterated seeds ಏನು supply ಮಾಡುತ್ತಾರಲ್ಲ ಅವರಲ್ಲಿ ನೀವು ಒಬ್ಬೊರನ್ನಾದರೂ conviction ಮಾಡಿದ್ದೀರಾ? ಆ conviction ಮಾಡತಕ್ಕಂಥ laboratory ಕರ್ನಾಟಕದಲ್ಲಿದೆಯೇ?

ಶ್ರೀ ಬಂಡೆಪ್ಪ ಕಾಶಂಪೂರ್ ನಮ್ಮ ಮಾಜಿ ಕೃಷಿ ಸಚಿವರಾದ ಶ್ರೀ ಶ್ರೀನಿವಸ ಗೌಡರು ಹೇಳಿದರು ನನಗೆ ಅನ್ನಿಸಿದ ಹಗೆ ಅವರು ಬಜೆಟ್ ಬರಿ ಬುಕ್ ಓದಿದ್ದಾರೆ, ಬಾಕಿ ಏನೂ ಓದಿಲ್ಲ ಬರಿ ಬಜೆಟ್ ಬುಕ್ ಮಾತ್ರ ಓದಿದ್ದೀರಿ ಪೂರ್ವಭಾವಿಯಾಗಿ department ಗೆ ಏನೂ

ಕೊಟ್ಟಿದ್ದಾರೆಂದು ಓದಿಲ್ಲ ಅವರಿಗೆ ಗೊತ್ತಿದೆ ಇಡೀ ರಾಷ್ಟ್ರದಲ್ಲಿ ನಮ್ಮ ಸಮ್ಮಿಶ್ರ ಸರಕಾರ ರೈತರ ಬಗ್ಗೆ ಹಲವಾರು ಚಿಂತನೆಗಳನ್ನು ಮಾಡಿ ಇವತ್ತು ಎರಡನೇ ಬಾರಿಗೆ ಈ ಒಂಧು ಹೊಸ ಕೃಷಿ ನೀತಿ ಮುಖಾಂತರ ಹಲವಾರು ಯೋಜನೆಗಳನ್ನು ನವು ಹೊರ ತಂದೆವು ಹನಿ ನೀರಾವರಿಗೆ, ತಾವು ಬಜೆಟ್ ನಲ್ಲಿ ನೋಡಿದ್ದೀರಿ, ೮೫ಕೋಟಿ ರೂಪಾಯಿ ಈ ಬಜೆಟ್ ನಲ್ಲಿ ಕೊಟ್ಟಿದ್ದಾರೆ, ಈ ಹಇಂದೆ ಇದ್ದಂಧ ಯಾವ ಸರ್ಕಾರಗಳೂ ಕೂಡ ಕೊಟ್ಟಿರಲಿಲ್ಲ ನಾವೂ ಕೂಡ ಇನ್ನೂ ಹೆಚಚಿಗೆ ಕೇಳಿದ್ದೆವು ಆದರೆ, ಕೃಷಿ ನೀತಿಗೆ ಹಲವಾರು ಸ್ಕೀಂಗಳಲ್ಲಿ ಹಣ ಕೊಟ್ಟಿದದಾಋುಎ ಆದರೆ ನಾವು ಇನ್ನೂ ಕೆಲವು ಸ್ಕೀಂಗಳನ್ನು ಕೇಳಿದ್ದೆವು ಅದಕ್ಕೆ ಅವರು ಕೊಡುತ್ತೇವೆನ್ನುವ ಭರವಸೆ ಕೊಟ್ಟಿದ್ದಾರೆ ತಮಗೆ ಒಂದೇ ಒಂದು ಉದಾಹರಣೆ ಹೇಳುವುದಾದರೆ, ಹೋದ ವರ್ಷ ಬಜೆಟ್ ನಲ್ಲಿ ಇದೇ seeds subsidy scheme ನಲ್ಲಿ ೪೮೫ ಕೋಟಿ ಬಜೆಟ್ ನಲ್ಲಿ ನಿಗದಿತವಾಗಿತ್ತು ಆದರೆ ಖರೀಬ್ ಮತ್ತು ರಬ್ಬಿ ಸೇರಿ ಸುಮಾರು ನೂರು ಕೋಟಿಗಿಂತ ಹೆಚ್ಚಿನ ಹಣವನ್ನು ರೈತರ ವಿಚಾರದಲ್ಲಿ ವಿತರಣೆ ಮಾಡಿದ್ದೇವೆ Supplementary ನಲ್ಲಿ ತೆಗೆದುಕೊಂಡು ಮಾಡಿದ್ದೇವೆ ಅಲ್ಲವೆ? ಈ ರಾಜ್ಯದಲ್ಲಿ ಈ ಸಮ್ಮಿಶ್ರ ಸರಕಾರ ಏನು ಕೃಷಿ ನೀತಿ ತಂದಿದೆ ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಮತ್ರಿಗಳು ಸಮರ್ಥಿಸಿಕೊಂಡಿದ್ದಾರೆ ಹಲವಾರು ಸಭೆಗಳಲ್ಲೂ ಮತ್ತು ಇವತ್ತು ಕೂಡ ಹೇಳಿದ್ದಾರೆ ಕೃಷಿ ಇಲಾಖೆ ಇನ್ನು ಮುಂದಿನ ದಿನಗಳಲ್ಲಿ ಹೆಚ್ಚಿಗೆ ಕೊಡುತ್ತೇವೆಂದು ಮಾನ್ಯ ಮಹಾದೇವ ಸ್ವಮಿಯವರ ಉದಾಹರಣೆ ತೆಗೆದುಕೊಂಡು ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ ಮಾನ್ಯ ಶಿವಾನಂದ ಪಾಟೀಲ್ ರವರು ಹತ್ತು ವರ್ಷಕ್ಕೆ ಮಾಡುತ್ತೀರಾ ಎಂದು ಕೇಳಿದರು ನಾವು· ಇರಲಿ, ಇಲ್ಲದೆ ಹೋಗಲಿ, ಯೋಜನೆಗಳು ಕಾರ್ಯರೂಪಕ್ಕೆ ಮಾಡಿ ಮುಂದಿನ ದಿನಗಳಲ್ಲಿ ೫-೧೦ ವರ್ಷದ ಸ್ಕೀಂ ಮಾಡಿ ಆ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುವುದು

ಶ್ರೀ ಶಿವಾನಂದ ಎಸ್ ಪಾಟೀಲ್ ಕಳೆದ ಮೂರು ವರ್ಷಗಳಿಂದಲೂ production of agricultural products ಇಳಿಯುತ್ತಿದೆ ಹತ್ತು ವರ್ಷದಲ್ಲಿ ಮಾಡಲಾಗುವುದು ಎಂದು ನೀವು ಹೇಳುತ್ತೀರಿ

ಶ್ರೀ ಬಂಡೆಪ್ಪ ಕಾಂಶಂಪೂರ್ ಚಿಂತನೆ ನಡೆಸಲಗಿದೆ, ಯಾವುದೇ ಒಂದು ಯೋಜನೆ ಯಾಗಲೀ ಒಂದು ದಿವಸದಲ್ಲಿ ಆಗುವುದಿಲ್ಲ ೫-೧೦ ವರ್ಷ ಬೇಕಾಗುತ್ತವೆ

ಶ್ರೀ ಶಿವಾನಂದ ಎಸ್ ಪಾಟೀಲ್ ನಿಮ್ಮ ಜಿಲ್ಲೆಯಲ್ಲಿ sugar cane ಗೆ ಸಂಬಂಧಪಟ್ಟಹಾಗೆ burning problem ಇದೆ sugar cane developments ಗೆ ನಿಮ್ಮ ಬಜೆಟ್ ನಲ್ಲಿ ಹತ್ತು ಪೈಸೆಯಾದರೂ ಅನೌನ್ಸ್ ಮಾಡಿದಿರಾ? ನೀವು Agriculture Minister ಇದ್ದೀರಿ ನೀವೇ ಹೇಳಿ Horticulture Minister NHM ನಿಂದ funds draw ಮಾಡುವುದಕ್ಕಾಗುಇಲ್ಲ sugar Industries Minister ಅವರು ಪತ್ತೇ ಇಲ್ಲ ಅವರು ಮಾತನಾಡುವುದಿಲ್ಲ

ಶ್ರೀ ಬಂಡೆಪ್ಪ ಕಾಶಂಪೂರ್ ಅದು ಬೇರೆ subject ಇದಕ್ಕೆ ನೀವು ಬೇರೆ ಪ್ರಶ್ನೆ ಹಾಕಿ ಕೃಷಿ ನೀತಿಯ ಬಗ್ಗೆ ನಮ್ಮ ಪೂಜಿ ಸಚಿವರು ಏನು ಪ್ರಶ್ನೆ ಎತ್ತಿದ್ದಾರೆ, ಅದರಲ್ಲಿ ಹಲವಾರು ವಿಷಯಗಳು ಇವೆ

ಶ್ರೀ ಶಿವಾನಂದ ಎಸ್ ಪಾಟೀಲ್ ಕೃಷಿ ನೀತಯೊಳಗೆ ಅದು ಬರುವುದಿಲವೆ?

ಶ್ರೀ ಬಂಡೆಪ್ಪ ಕಾಶಂಪೂರ್ ಕೃಷಿ ನೀತಿಗೆ ನಾವೇನು ಕೇಳಿದ್ದೇವೆ, ಅದಕ್ಕೆ ಬೇಕಾದ ದುಡ್ಡು ಏನು ಇದೆ ಅದನ್ನು ಅವರು ಒದಗಿಸುತ್ತಾರೆ

ಶ್ರೀ ಜೆ ಸಿ ಮಾಧುಸ್ವಾಮಿ ಈವರೆಗೆ area expansion program ಇತ್ತು ಈಗ ಅದು constraint ಆಗಿದೆ ಮುಗಿಯಿತು, ಇನ್ನು ಭೂಮಿ ವಿಸ್ತಾರ ಮಾಡುವುದಕ್ಕಾಗುವುದಿಲ್ಲ, ಕೃಷಿ ಉತ್ಪನ್ನ ಜಾಸ್ತಿ ಮಾಡುವುದಕ್ಕಾಗುವುದಿಲ್ಲ ಈಗ ಇರುವ ಭೂಮಿಯಲ್ಲಿ ಜಾಸ್ತಿ ಉತ್ಪನ್ನ ತೆಗೆಯತಕ್ಕಂಥ ಕಾರ್ಯಕ್ರಮಗಳು ಏನಾದರೂ ಇದೆಯೆ ಎಮದು ಕೃಷಿ ನೀತಿಯಲ್ಲಿ ನೋಡಿದರೆ ಅಂಥಾದ್ದು ಏನು ಕಾಣಲಿಲ್ಲ ನೀವು ಸ್ವಲ್ಪ ಚೈನಾ ಮಾದರಿ ಇಂಥದ್ದನ್ನು ತೆಗೆದುಕೊಂಡಿ ನೋಡಿ ಇದಕ್ಕೆ ನೀವು ಏನಾದರೂ stress ಕೊಡಬೇಕು Per acre income ಅನ್ನು ಜಾಸ್ತಿ ಮಾಡುವುದಕ್ಕೆ ನೀವು ಏನಾದರೂ stress ಕೊಡದೇ ಹೋದಲ್ಲಿ agriculture ಅನ್ನು ಬಲಪಡಿಸುವುದಕ್ಕೆ ಸಾಧ್ಯವಿಲ್ಲ ಆ ಕಡೆಗೆ ನೀವು ಗಮನಹರಿಸುತ್ತೀರಾ?

ಶ್ರೀ ಎನ್ ಹೆಚ್ ಶಿವಶಂಕರ ರೆಡ್ಡಿ Subsidized seeds ಕೊಡುವುದರಲ್ಲಿ ಸ್ವಲ್ಪ ವ್ಯತ್ಯಾಸವಾಗುತ್ತಿದೆ ನಮ್ಮಲ್ಲಿ ಮುಸುಕಿನಜೋಳವೆಂದು ಹೇಳಿದೆನಲ್ಲ ಅದು ೧೫೦ ರಿಂದ ೪೦೦ ರೂಪಾಯಿನ ರೇಂಜ್ ಬೇರೆ ಬೇರೆ company ಗಳ ಬೆಲೆ difference ಇದೆ Subsidize ಏನು ಮಾಡುತ್ತಾರೆ, average rate ನಲ್ಲಿ fix ಮಾಡಿ ಅದಕ್ಕೆ subsidy ಕೊಡುತ್ತಾರೆ ಸಾಮಾನ್ಯವಾಗಿ ರೈತರು ಏನು ಮಾಡುತ್ತಾರೆಂದರೆ, ೧೫೦-೦೦ ರೂಪಾಯಿಗೆ ಸಿಗುವಂಥ ಕಡಿಮೆ ದರದಲ್ಲಿ ದೊರಕುವ seeds ಗೆ ಹೋಗುತ್ತಾರೆ ಅದರಲ್ಲಿ quality maintain ಆಗುವುದಿಲ್ಲ ಒಳ್ಳೆಯ ಕಂಪನಿಯ ಸೀಡ್ಸ್ ಗೂ ಕೂಡ ೭೫% subsidy ಕೊಡುವ ರೀತಿ ತಾವು ಮಾಡಿದರೆ, ರೈತರು ಒಳ್ಳೆಯ ಸೀಡ್ಸ್‌ಗೆ ಹೋಗುತ್ತಾರೆ Average ಮಾಡಿ subsidy ಕೊಟ್ಟಾಗ ಕಡಿಮೆ ದರವಿರುವ ಸೀಡ್ಸ್‌ಗೆ ಅವರು ಹೋಗುತ್ತಾರೆ ಹೀಗಾಗೆ ಮತ್ತೆ ಅವರು ಅಲ್ಲಿ failure ಆಗುವ ಸಂಬಂಧವಿದೆ ಒಳ್ಳೆಯ ಹೈಬ್ರಿಡ್ ಕಂಪನಿಗಳ ಸೀಡ್ಸ್ ಜಾಸ್ತಿ ರೇಟ್ಸ್ ಇರುತ್ತದೆ ರೈತರು ಜಾಸ್ತಿ ರೇಟ್ ಗೆ ಹೋಗುವ ಬದಲು ಕಡಿಮೆ ರೇಟ್ ಗೆ subsidy ಉಳಿಸಿಕೊಳ್ಳಲಿಕ್ಕೆ ಬರುತ್ತಾರೆ ತಾವೇನು

೭೫% ಘೋಷಣೆ ಮಾಡಿದ್ದಿರಿ ಒಳ್ಳೆಯ ಕಂಪನಿ ಸೀಡ್ಸ್ ಗೆ ಕೊಡುವುದಕ್ಕೆ ಏರ್ಪಾಡು ಮಾಡಿದರೆ, ರೈತರಿಗೆ ಅನುಕೂಲವಾಗುತ್ತದೆ

ಶ್ರೀ ಕೆ ಶ್ರೀನಿವಾಸ ಗೌಡ ಬಜೆಟ್ ನಲ್ಲಿರುವುದು agriculture allied services ಗೆ ೭೬% ಅಂದರೆ ೧೨೫೫ ಕೋಟಿ ಇಟ್ಟಿದ್ದಾರೆ ಅಂದರೆ Animal Husbandary, Fisheries, Sericulture, Horticulture, Agricultre ಗೆ ಇದರಲ್ಲಿ ಎಷ್ಟು ಬರಬಹುದು ಎಂದರೆ, ೬೫೦ ರಿಂದ ೭೦೦ ಕೋಟಿಗೆ ಮುಗಿದು ಹೋಯಿತು ನಾನು ಇದನ್ನು ಏಕೆ ಹೇಳುತ್ತೇನೆಂದರೆ, ನೀವು ಈ ಕೃಷಿ ನೀತಿಯನ್ನು implement ಮಾಡಲಿಕ್ಕೆ ಸಾವಿರ ಕೋಟಿಯನ್ನು ಕೇಳಿದ್ದೀರಿ ಇಲ್ಲಿ ಅದನ್ನು ಕೊಡಲಿಲ್ಲ ಆಮೇಲೆ Horticulture University ಮಾಡುವುದಕ್ಕೆ ಹೊರಟಿದ್ದೀರಿ ಸಿಮ್ಲಾ ನಲ್ಲಿ ೯೫% horticultural crops ಇದೆ ಅಲ್ಲಿ ಒಂದೇ ಒಂದು Horticulture College ಇದೆ ಕರ್ನಾಟಕದಲ್ಲಿ ಇದಕ್ಕೆ University ಮಾಡಲು ನೀವು ಹೊರಟಿದ್ದೀರಿ ಅಲ್ಲಿ ಮುಸುಕಿನ ಜೋಳ ಒಬ್ಬನು ಹಾಕಿರುತತಾನೆ, ಪಕ್ಕದಲ್ಲಿ ತರಕಾರಿ ಹಾಕಿರುತ್ತಾನೆ ಈ ನವರು ಹೋಗಿ ಮುಸುಕಿನ ಜೋಳ ನೋಡುವುದು, ಆ University ಹೋಗಿ ತರಕಾರಿಗಳನ್ನು ನೋಡುವುದು, ಕೋಸು, ಟೊಮೋಟೋ ನೋಡುವುದು ನೀವು ಮಂತ್ರಿಗಳಾಗಿದ್ದವರು ನೀವು ಕೃಷಿ ಮಂತ್ರಿಯಾಗಿರುವುದರಿಂದ ತಮಗೆ ಹೇಳುವುದೇನೆಂದರೆ, ಇವೆಲ್ಲಾ ಒಂದು ಅಗ್ರಿಕಲ್ಚರ್ ಯೂನಿವರ್ಸಿಟಿ ಅಡಿಯಲ್ಲಿಯೇ ಇರಬೇಕೆ ವಿನಃ ಒಂದೊಂದಕ್ಕೂ ಒಂದೊಂದು ಯೂನಿವರ್ಸಿಟಿ ಮಾಡಿಕೊಂಡು ನಾಳೆ ದಿವಸ ಅದರ ಮೂಲಭೂತ ಸೌಕರ್ಯಕ್ಕಾಗಿ ಕೊಡತಕ್ಕಂಥ ಹಣವನ್ನು ಇದರ ಮೂಲಕವೇ ಮಾಡಿದರೆ ಹೇಗೆ? ತೋಟಗಾರಿಕೆ ಮತ್ತು ಕೃಷಿ ಹಾಗೂ ಸಿರಿಕಲ್ಚರ್ ಇಲಾಖೆಯಗಳನ್ನು ಸ್ರ್ಂಧನ್ ಮಾಡಿ ಈ ರೀತಯಾಗಿ ಮಾಡುತ್ತಾ ಹೋದರೆ ಸಿರಿಕಲ್ಚರ್, ಫಿಷರೀಸ್ ಗೊಂದು ಯೂನಿವರ್ಸಿಟಿ ಬೇಕೆಂದು ನಾಳೆ ದಿವಸ ಕೇಳಬಹುದು ನಾನು ಏನು ಹೇಳುವುದಕ್ಕೆ ಇಷ್ಟಪಡುತ್ತೇನೆಂದರೆ, ಇವತ್ತಿನ ದಿವಸ ಕೇಂದ್ರ ಸರ್ಕಾರದಲ್ಲಿ

ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಮಾನ್ಯ ಸಚಿವರಾದ ಶ್ರೀ ಶರದ್ ಪವರ್ ರವರ ಕೈಯಲ್ಲಿರುವಂತೆ ಇಲ್ಲಿಯೂ ಕೂಡ ಆ ರೀತಿಯಾಗಿ ಅಂದರೆ, ಒಬ್ಬ ಮಂತ್ರಿಯ ಕೈಯಲ್ಲಿದ್ದರೆ ಅದರ ಬಗ್ಗೆ ಏನಾದರೂ ಮಾಡುವುದಕ್ಕೆ ಸಾಧ್ಯವಾಗುತ್ತದೆ ಆಧರೆ, ಒಂದೊಂದು ವಿಷಯಕ್ಕೆ ಸಂಬಂಧಪಟ್ಟಂತೆ ಒಂದೊಂದು ವಿಸ್ವವಿದ್ಯಾಲಯ ಮಾಡಿಕೊಂಡು ಹೋದರೆ ಉಪಯೋಗವಾಗುವುದಿಲ್ಲ ಇವತ್ತು ನಾನು ಜೋಳ ಮತ್ತು ಪಕ್ಕದಲ್ಲಿ ತರಕಾರಿ ಹಾಕಿದರೆ, ತರಕಾರಿ ನೋಡುವುದಕ್ಕೆ ಒಂದು ಯೂನಿವರ್ಸಿಟಿಯವರು ಮತ್ತು ಜೋಳ ನೋಡುವುದಕ್ಕೆ ಇನ್ನೊಂದು ಯೂನಿವರ್ಸಿಟಿಯವರು ಬರಬೇಕೇ? ಇದನ್ನು ತಾವು ಹೇಳಬೇಕಾಗಿತ್ತು

ಉಪಾಧ್ಯಕ್ಷರು ಮಾನ್ಯ ಶಿವಶಂಕರರೆಡ್ಡಿಯವರು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರ ಎಲ್ಲೆಲ್ಲಿಗೂ ಹೋಗುತ್ತಿದೆ ಮಾನ್ಯ ಸಚಿವರು ಏನು ಉತ್ತರ ಹೇಳಬೇಕೆಂಬುದೇ ಗೊತ್ತಾಗದ ರೀತಿಯಲ್ಲಿ ಮಾಡಿದ್ದೀರಿ

ಶ್ರೀ ಬಂಡೆಪ್ಪ ಕಾಂಶೆಪೂರ್ ಮಾನ್ಯ ಉಪಾಧ್ಯಕ್ಷರೆ, ಮುಸಿಕಿನ ಜೋಳಕ್ಕೆ ನೀಡುತ್ತಿರುವ ಸಬ್ಸಿಡಿ ರೇಟ್ ನಲ್ಲಿ ವ್ಯತ್ಯಾಸವಾಗುತ್ತದೆಂದು ಮಾನ್ಯ ಶಿವಶಂಕರರೆಡ್ಡಿಯವರು ಹೇಳಿದ್ದಾರೆ ಹಿಂದೆ ಮಾನ್ಯ ಶ್ರೀನಿವಾಸ ಗೌಡರು ಇದ್ದಾಗ ಒಂದು ನಿಯಮ ಮಾಡಿದ್ದರು ಅದೇನೆಂದರೆ, ಎಲ್ಲಾ ಪ್ರೈಸ್ ಗಳನ್ನು ಕನ್ಸಿಡರ್ ಮಾಡಿ ಎಲ್-೧ ಪ್ರಕಾರ ನಾವು ಸಬ್ಸಿಡಿ ಕೊಡಬೇಕೆಂದು ಮತ್ತು ಬಾಕಿ ಇರತಕ್ಕಂಥದನ್ನು ರೈತರು ಭರಿಸಬೇಕೆಂಬ ನಿಯಮ ಮಾಡಿದ್ದರು ಆದ್ದರಿಂದ, ಇದೇ ರೀತಿಯಾದ ಪದ್ಧತಿಯನ್ನು ಕಳೆದ ಎರಡು ವರ್ಷಗಳಿಮದ ಅನುಸರಿಸಿಕೊಂಡು ಬರಲಾಗುತ್ತಿದೆ ಮಾನ್ಯ ಮಾಜಿ ಸಚಿವರಿಗೆ ಕೃಷಿ ನೀತಿಯ ಬಗ್ಗೆ ಹೇಳುವುದೇನೆಂದರೆ, ಹಲವಾರು ಯೋಜನೆಗಳು ಈ ಒಂದು ಬಜೆಟ್ ನ್ಲಲಿ ರಿಪ್ಲೆಕ್ಟ್ ಆಗಿದೆ ತಾವೂ ಕೂಡ ನೋಡಿರಬೇಕು ಎತ್ತು ಬಂಡಿಗೆ ೨೦ ಕೋಟಿ ರೂಪಾಯಿ ಇದ್ದಂಥದು ಇವತ್ತಿನ ದಿವಸ ೫೦ ಕೋಟಿಗೆ ಹೆಚ್ಚಿಸಲಾಗಿದೆ ಮತ್ತೆ ಹನಿ ನೀರಾವರಿಗೆ ಜಾಸ್ತಿ ಹಣ ಬಂದಿದೆ ಹಾಗೆಯೇ, ಇನ್ನೂ ಕೆಲವು ಪ್ರಮುಖ ಸ್ಕೀಂಗಳನ್ನು ಮುಂದಿನ ದಿನಗಳಲ್ಲಿ ನಾವು ಮಾಡುತ್ತೇವೆಂದು ಹೇಳುತ್ತಾ ಹಿರಿಯ

ಸದಸ್ಯರಾದ ಮಾನ್ಯ ಮಾಧುಸ್ವಾಮಿಯವರು ಒಳ್ಳೆಯ ಪ್ರಶ್ನೆಯನ್ನು ಈಗ ಪ್ರಸ್ತಾಪ ಮಾಡಿದ್ದೀರಿ ಈಗ ಇರತಕ್ಕಂಥ ಜಮೀನುಗಳಲ್ಲಿ ಕೈಗಾರಿಕೆಗಳಿಗೆ ಮತ್ತು ವಸತಿಗೆ ಜಮೀನಗಳನ್ನು ತೆಗೆದುಕೊಂಡರೆ ಮುಂದಿನ ದಿನಗಳಲ್ಲಿ ಭೂಮಿ ಕಡಿಮೆಯಾದರೆ, ಉತ್ಪತ್ತಿ ಕೂಡ ಕಡಿಮೆಯಾಗುತ್ತದೆ ಆದ್ದರಿಂದ, ಮುಂದಿನ ದಿನಗಳಲ್ಲಿ quality of seeds ಮತ್ತು production ಅನ್ನು ಹೆಚ್ಚು ಮಾಡುವುದಕ್ಕೆ ನಮ್ಮ ಸಂಶೋಧನೆಯ ಬಗ್ಗೆ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಮಾಡಬೇಕಾಗಿದೆ ಈ ಒಂದು ನಿಟ್ಟಿನಲ್ಲಿ ಬಹಳಷ್ಟು ಕ್ರಮಗಳನ್ನು ತೆಗದುಕೊಳ್ಳುತ್ತೇವೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ

ಶ್ರೀ ಎ ಎಸ್ ಬಸವರಾಜ್ ಮಾನ್ಯ ಉಪಾಧ್ಯಕ್ಷರೆ, ನಾನು ಪ್ರಶ್ನಯನ್ನು ಮಾನ್ಯ ಕೃಷಿ ಸಚಿವರಿಗೆ ಕೇಲಿದ್ದೆ, ಇದಕ್ಕೆ ಉತ್ತರ ಬಂದಿಲ್ಲ ಆದರೆ, ಉತ್ತರ ಒದಗಿಸುವುದಕ್ಕೆ ಕಾಲಾವಕಾಶ ಬೇಕೆಂದು ಮಾನ್ಯ ಕೃಷಿ ಮಾರುಕಟಟ್ಟೆ ಸಚಿವರು ಕೇಳಿದ್ದಾರೆ ಆದ್ದರಿಂದ ಇವರ ಗಡಿ ಬಿಡಿಯಿಂದ ಇದಕ್ಕೆ ಉತ್ತರವನ್ನು ಯಾರು ಕೊಡಬೇಕೆಂಬುದು ಗೊತ್ತಿಲ್ಲದೆ ಈಗ ಕಾಲಾವಕಾಶ ಕೇಳಿದ್ದಾರೆಯೇ?

ಉಪಾಧ್ಯಕ್ಷರು ನಾನು ಈಗ ಮಾನ್ಯ ಎಂ ಟಿ ಬಿ ನಾಗರಾಜ್ ನವರು ಪ್ರಶ್ನೆ ಕೇಳುವಂತೆ ಹೇಳಿದ್ದೇನೆ ಆದರೆ, ತಮ್ಮ ಪ್ರಶ್ನೆಗೆ ಇನ್ನು ೨-೩ ದಿವಸಗಳಲ್ಲಿ ಉತ್ತರ ಒದಗಿಸುತ್ತೇನೆಂದು ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಸಮಯ ಕೇಳಿದ್ದಾರೆ ಈಗ ಎಂ ಟಿ ಬಿ ನಾಗರಾಜ್ ರವರ ಪ್ರಶ್ನೆ

ಹೊಸಕೋಟೆ ತಾ॥ ರಾಜ್ಯ ಸರ್ಕಾರಿ ತಾಕರರ ಗೃಹ ನಿರ್ಮಾಣ ಸಹಕಾರ ಸಂಘವು ಯಾವ ವರ್ಷದಲ್ಲಿ ಪ್ರಾರಂಭವಾಗಿದೆ ?

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೨೩೮ (೨೧೫೫)

ಸದಸ್ಯರ ಹೆಸರು ಶ್ರೀ ನಾಗರಾಜು ಎಂ ಟಿ ಬಿ

ಉತ್ತರಿಸ ಬೇಕಾದ ಸಚಿವರು ಶ್ರೀ ಜೆ ಟಿ ದೇವೇಗೌಡ (ಸಹಕಾರ

ಸಚಿವರು)

ಕ್ರ ಪ್ರಶ್ನೆ ಉತ್ತರ

ಸಂ

ಅ ಹೊಸಕೋಟೆ ತಾಲ್ಲೂಕು ರಾಜ್ಯಸದರಿ ಸಂಘವು
೨೦೦೧ನೇ ವರ್ಷದಿಂದ
ಸರ್ಕಾರಿ ನೌಕರರ ಗೃಹ ನಿರ್ಮಾಣ ಪ್ರಾರಂಭವಾಗಿರುತ್ತದೆ
ಸಹಕಾರ ಸಂಘವು ಯಾವ ವರ್ಷದಲ್ಲಿ
ಪ್ರಾರಂಭವಾಗಿದೆ ?

ಆ ಸಂಘವು ಪ್ರಾರಂಭಿವಾದಾಗಿನಿಂದ ಸಂಘವು ಇದುವರೆಗೆ
ಯಾವುದೇ ಜಮೀನುಗಳನ್ನು
ನಿದೇಶನಕ್ಕಗಿ ಯಾವ ಯಾವ ನಿವೇಶನಕ್ಕಗಿ
ಅಭಿವೃದ್ಧಪಡಿಸಲು ಖರೀದಿ
ಗ್ರಾಮಗಳ ಸರ್ವೆ ನಂ ಗಳಲ್ಲಿ ಎಷ್ಟು ಮಾಡಿರುವುದಿಲ್ಲ
ಜಮೀನು ಖರೀದಿಸಲಾಗಿದೆ?

ಇ ನಿವೇಶನಕ್ಕಗಿ ಜಮೀನನ್ನು ಸಂಘವು ಇದುವರೆಗೆ
ಯಾವುದೇ ಜಮೀನುಗಳನ್ನು
ಖರೀದಿಸಿದ್ದಲ್ಲಿ ಎಷ್ಟು ಜನರಿಗೆ ನಿವೇಶನಕ್ಕಗಿ
ಅಭಿವೃದ್ಧಿಪಡಿಸಲು ಖರೀದಿ ಮಾಡ-
ನಿವೇಶನ ಅಭಿವೃದ್ದಿಪಡಿಸಿ ದಿರುವುದರಿಂದ ಸಂಘದ
ಹೆಸರಿನಲ್ಲಿ ನಿವೇಶನ
ವಿತರಿಸಿದೆ? ಆ ಪೈಕಿ ಹಂಚಿಕೆ ಪ್ರಶ್ನೆ
ಉದ್ಭವವಾಗುವುದಿಲ್ಲ
ಪರಿಶಿಷ್ಟಜಾತಿ , ಪರಿಶಿಷ್ಟ ವರ್ಗದ
ಎಷ್ಟು ನೌಕರರಿಗೆ ನಿವೇಶನ
ಮಾಡಲಾಗಿದೆ

ಈ ಸರ್ಕಾರಿ ನೌಕರರಲ್ಲದವರಿಗೂ ಸಂಘದ ಹೆಸರಿನಲಿ ಇದುವರೆಗೆ ಯಾವುದೇ

ಸಂಘದ ಹೆಸರಿನಲ್ಲಿ ನಿವೇಶನ–ನಿವೇಶನ ನೀಡಿದಿರುವುದಿಲ್ಲ
ವನ್ನು ನೀಡಿರುವುದು ಸರ್ಕಾರದ
ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ
ಇದು ನಿಯಮಬಾಹಿರವಲ್ಲವೆ?

ಉ ಹಾಗಿದ್ದಲ್ಲಿ ಸರ್ಕಾರವು ಸಂಘದ ಸಂಘವು ಇದುವರೆಗೆ ಸದಸ್ಯರಿಗೆ ನಿವೇಶನಗಳ

ಮೇಲೆ ಕೈಗೊಂಡಿರುವ ಹಂಚಿಕೆ ಮಾಡಿರುವುದಿಲ್ಲ ಆದರೂ ಸಂಘದಲ್ಲಿ

ಕ್ರಮಗಳೇನು? ಕೆಲವು ಇತರೆ ಕಾನೂನು ಬಾಹಿರ ಚಟುವಟಿಕೆಗಳು

ಜರುಗಿರುವುದು ಕಂಡು ಬಂದಿದ್ದು ಈ ಬಗ್ಗೆ

ಸಹಕಾರ ಸಂಘಗಳ ಅಧಿನಿಯಮ ೧೯೫೯ರ

ಪ್ರಕರಣ ೬೪ ರಡಿಯಲ್ಲಿ ವಿಚಾರಣೆ ನಡೆಸಲು

ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ

ಶ್ರೀ ಎಂ ಟಿ ಬಿ ನಾಗರಾಜು ಸನ್ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಿ ಕೊಟ್ಟಿದ್ದಾರೆ ಹೊಸಕೋಟೆ ತಾಲ್ಲೂಕು ರಾಜ್ಯ ಸಹಕಾರ ನೌಕರರ ಗೃಹ ನಿರ್ಮಾಣ ಸಂಘ ೨೦೦೧ನೇ ಇಸವಿಯಲ್ಲಿ ಪ್ರಾರಂಭವಾಗಿರುತ್ತದೆ ಈ ಸಂಘ ಪ್ರಾರಂಭವಾದ ಮೇಲೆ ಸುಮಾರು ೩೨೫ ಸದಸ್ಯರ

ಸದಸ್ಯತ್ವವನ್ನು ಮಾಡಿಕೊಂಡು ಅವರಿಂದ ಸದಸ್ಯತ್ವ ಹಣವನ್ನೂ ಸಹ ವಸೂಲ್ಮಾಡಿದ್ದಾರೆ ಮತ್ತೆ ಗೃಹ ನಿರ್ಮಾಣ ಸಂಘದ ಸದಸ್ಯರಿಗೆ ನಿವೇಶನ ಕೊಡುತ್ತೇವೆಂದು ಹೇಳಿ ಭೂಮಿಯನ್ನು ಕೊಂಡುಕೊಳ್ಳುವುದಕ್ಕಾಗಿ ೩೨೫ ಸದಸ್ಯರುಗಳಿಂದ ಮುಂಗಡವಾಗಿ ಹಣವನ್ನು ಪಡೆದುಕೊಂಡಿದ್ದಾರೆ ಈ ಹಣದಿಂದ ಇವರು ಜಮೀನನ್ನು ಸಹ ಖರೀದಿ ಮಾಡಿದ್ದಾರೆ ಆದರೆ, ಖಾಸಗಿ ಹೆಸರಿನಲ್ಲಿ ಜಮೀನನ್ನು ಖರೀದಿ ಮಾಡಿ ಅಲ್ಲಿ ಬಡಾವಣೆಯನ್ನು ನಿರ್ಮಾಣ ಮಾಡುವುದಕ್ಕೆ ಜಿಲ್ಲಾಧಿಕಾರಿಯವರಿಂದ ಮಾಡಿಸಿದ್ದಾರೆ ಮತ್ತೆ ಬಿಎಂಆರ್‌ಡಿಎ ನಿಂದ ಅಪ್ರೂವಲ್ ಕೂಡ ಪಡೆದುಕೊಂಡಿದ್ದಾರೆ ಇವತ್ತು ಬಡಾವಣೆಯನ್ನು ಫಾರ್ಮೆಷನ್ ಮಾಡಿ ಖಾಸಗಿಯವರಿಗೆ ಮಾರಾಟ ಮಾಡಿದ್ದಾರೆ ಸದಸ್ಯತ್ವ ಪಡೆದುಕೊಂಡಿದ್ದಂಥ ೪೨೫ ಸದಸ್ಯರುಗಳಿಗೆ ಒಂದೂ ನಿವೇಶನವನ್ನೂ ಸಹ ಕೊಟ್ಟಿಲ್ಲ ಇವರ ಮುಂಗಡ ಹಣದಿಂದ ಅವರು ಜಮೀನನ್ನು ಖರೀದಿ ಮಾಡಿದ್ದಾರೆ ಮತ್ತೆ ಹೊಸಕೋಟೆ ತಾಲ್ಲೂಕು ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವೆಂದು ರಿಜಿಸ್ಟ್ರೇಷನ್ ಮಾಡಿದ್ದಾಋಎ ಇದು ನಕಲು ಸಂಘವಾಗಿದೆ ನೌಕರರು ಪ್ರತಿ ತಿಂಗಳೂ ಬರತಕ್ಕಂಥ ವೇತನದಲ್ಲಿ ಉಳಿತಾಯ ಮಾಡಿರತಕ್ಕಂಥ ಹಣದಿಂದ ನಿವೇಶನ ಪಡೆದುಕೊಳ್ಳಬೇಕೆಂದು ಇರತಕ್ಕಂಥ ನೌಕರರುಗಳಿಗೆ ಈ ನಕಲಿ ಸಂಘ ಮೋಸ ಮಾಡಿದೆ ಮತ್ತೆ ಮಾನ್ಯ ಸಚಿವರು ಇಲ್ಲಿ ಎನು ಉತ್ತರ ಕೊಟ್ಟಿದ್ದಾರೆಂದರೆ, ಸಂಘವು ಇದುವರೆಗೆ ಸದಸ್ಯರಿಗೆ ನಿವೇಶನಗಳ ಹಂಚಿಕೆ ಮಾಡಿರುವುದಿಲ್ಲ ಆದರೂ ಸಂಘದಲ್ಲಿ ಕೆಲವು ಇತರೆ ಕಾನೂನು ಬಾಹಿರ ಚಟುವಟಿಕೆಗಳು ಜರುಗಿರುವುದು ಕಂಡು ಬಂದಿದ್ದು, ಈ ಬಗ್ಗೆ ಸಹಕಾರ ಸಂಘಗಳ ಅಧಿನಿಯಮ ೧೯೫೯ ರ ಪ್ರಕರಣ ೬೪ರಡಿಯಲ್ಲಿ ವಇಚಾರಣೆ ನಡೆಸಲು ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ ,ಎಂದು ಉತ್ತರ ಕೊಟ್ಟಿದ್ದಾರೆ ಇಂಥ ನಕಲಿ ಸಂಘಗಳು ಎಲ್ಲಾ ತಾಲ್ಲೂಕುಗಳಲ್ಲಿ ಇವತ್ತಿನ ದಿವಸ ಪ್ರಾರಂಭವಾಗಿದೆ ಈ ರೀತಿಯಾಗಿ ನೌಕರರನ್ನು ವಂಚನೆ ಮಾಡತಕ್ಕಂಥ ಇಂಥ ಸಂಘಗಳು ಇವತ್ತಿನ ದಿವಸ ಸಾಕಷ್ಟು ಇವೆ ಆದ್ದರಿಂದ, ಸರಿಯಾದ ರೀತಿಯಲ್ಲಿ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ ಮಾಡಿ ವರದಿ ಪಡೆದು ಇಂಥ

ಸಂಘಗಳ ಮೇಲೆ ಕ್ರಮ ಜರುಗಿಸಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಇದರ ಬಗ್ಗೆ ಸರಿಯಾದ ರೀತಿಯಲ್ಲಿ ತನಿಖೆಯಾಗಬೇಕು ಇಂಥ ನಕಲಿ ಗೃಹ ನಿರ್ಮಾಣ ಸಹಕಾರ ಸಂಘಗಳು ಈ ಸಮಾಜದಲ್ಲಿ ನಿರ್ಮಾಣವಾಗಿ ಬಡ ನೌಕರರನ್ನು ವಂಚನೆ ಮಾಡತಕ್ಕಂಥ ಸಂಘಗಳ ಮೇಲೆ ಸರಿಯಾದ ರೀತಿಯಲ್ಲಿ ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ ಮತ್ತೆ ಈ ಸಂದರ್ಭದಲ್ಲಿ ಮಾನ್ಯ ಜಗದೀಶ್ ಶೆಟ್ಟರ್ ವರ ಗಮನಕ್ಕೆ ತರುವುದೇನೆಂದರೆ, ಹೊಸಕೋಟೆ ತಾಲ್ಲೂಕು ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದವರು ಏನು ಮಾಡಿದ್ದಾರೆಂದರೆ, ಪಕ್ಕದಲ್ಲಿರುವ ೮ ಎಕರೆ ಕೆರೆ ಅಂಗಳವನ್ನು ಸೇರಿಸಿಕೊಂಡು ಬಡಾವಣೆ ಮಾಡಿ ಖಾಸಗಿಯವರಿಗೆ ನಿವೇಶನಗಳನ್ನು ಹಂಚಿದ್ದಾರೆ ಇದರ ಬಗ್ಗೆ ಜಿಲ್ಲಾಧಿಕಾರಿಗಳ ಮೂಲಕ ತನಿಖೆ ಆಗಬೇಕೆಂದು ತಮ್ಮಲ್ಲಿಯೂ ಕೂಡ ವಿನಂತಿಮಾಡಿಕೊಳ್ಳುತ್ತೇನೆ

ಶ್ರೀ ಜಿ ಟಿ ದೇವೇಗೌಡ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕಂಥ ಸಂಘ ಬೈಲಾ ಉಲ್ಲಂಘನೆ ಮಾಡಿದ್ದಾರೆಂದು ತಿಳಿದು ಬಂದಿದೆ ಅವರು ಜಮೀನನ್ನು ಕ್ರಯಕ್ಕೆ ಪಡೆದಿಲ್ಲ ಡೆವಲಪ್ ರ್ಸ್ ಮೂಲಕ ನೇರವಾಗಿ ಸೈಟ್ ಗಳನ್ನು ಖರೀದಿ ಮಾಡಬೇಕೆಂದು ತೀರ್ಮಾನ ಮಾಡಿ ೨೨೦ ರೂಪಾಯಿಗಳಂತೆ ಒಂದು ಒಪ್ಪಂದ ಮಾಡಿಕೊಂಡಿದ್ದಾರೆಂದು ತಿಳಿದು ಬಂದಿದೆ ಅವರು ಬೈಲಾ ಉಲ್ಲಂಘನೆ ಮಾಡಿದ್ದಾರೆ, ಮತ್ತೆ ಸದಸ್ಯರುಗಳಿಂದ ಈಗಾಗಲೇ ೭೭ ಲಕ್ಷ ರೂಪಾಯಿಗಳನ್ನು ರೇವಣಿ ಪಡೆದುಕೊಂಡಿದ್ದು, ಇದರಲ್ಲಿ ೪೨ ಲಕ್ಷ ರೂಪಾಯಿಗಳನ್ನು ಡವಲಪ್‌ರ್‌ಗೆ ಪಾವತಿ ಮಾಡಿದ್ದಾರೆ ಬಾಕಿ ಇನ್ನು ೩೫ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದರು ಆಧರೆ, ಅದಕ್ಕೆ ಸ್ಟೇ ಮಾಡಿದ್ದೇವೆ ಇದರ ಬಗ್ಗೆ ತನಿಖೆ ಕೂಡ ನಡೆಸಲಾಗುತ್ತಿದೆ, ಮತ್ತೆ ಅಲ್ಲಿರುವ ಆಡಳಿತ ಮಂಡಳಿಯನ್ನು ರದ್ದು ಮಾಡಿ ಅಲ್ಲಿಗೆ ಒಬ್ಬ ಆಡಳಿತಾದಿಕಾರಿಯನ್ನು ನೇಮಕ ಮಾಡಿ ಅದರ ಮೇಲೆ ಸೂಕ್ತವಾಗಿ

ತುರ್ತು ಕ್ರಮವನ್ನು ತೆಗೆದುಕೊಂಡು ಸದಸ್ಯರುಗಳಿಗೆ ನ್ಯಾಯವನ್ನು ಒದಗಿಸುವ ಬಗ್ಗೆ ನಾವು ಪ್ರಮಾಣಿಕ ಪ್ರಯತ್ನವನ್ನು ಮಾಡುತ್ತೇವೆ ಅಲ್ಲಿರತಕ್ಕಂಥ ಸದಸ್ಯರ ರಕ್ಷಣೆ ಮಾಡುತ್ತೇವೆ ಮತ್ತು ಈ ರೀತಿಯಾಗಿ ಮಾಡಿರತಕ್ಕಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಆದ್ದರಿಂದ ಇದರ ಬಗ್ಗೆ ಯಾವುದೇ ರೀತಿಯ ಅನುಮಾನ ಬೇಡವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ

ಶ್ರೀ ಎಂ ಟಿ ಬಿ ನಾಗರಾಜ್ ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ಈಗಾಗಲೇ ೨೫ ನಿವೇಶನಗಳನ್ನು ಖಾಸಗಿಯವರಿಗೆ ಮಾರಾಟ ಮಾಡಿದ್ದಾರೆ ಮಾರಾಟ ಮಾಡಿರತಕ್ಕಂಥದ್ದರ ಬಗ್ಗೆ ದಾಖಲಾತಿಗಳು ನಮ್ಮಲ್ಲಿ ಇದೆ

ಶ್ರೀ ಜಿ ಟಿ ದೇವೇಗೌಡ ನಾವು ಸಂಪೂರ್ಣವಾಗಿ ತನಿಖೆಯನ್ನು ಮಾಡಿ ಏನು ತಪ್ಪು ಮಾಡಿದ್ದಾಋಎ, ಅದನ್ನು ಸಂಪೂರ್ಣ serutiny ಅದನ್ನು ಆಡಳಿತ ಮಂಡಳಿಯವರು ವಹಿಸಿಕೊಂಡು ಕೂಡಲೆ ಅದು ಸರ್ಕಾರದ ವಶಕ್ಕೆ ಬರುತ್ತದೆ, ಎಲ್ಲಾ ತನಿಖೆಯನ್ನು ಮಾಡಿ ತಪ್ಪಿತಸ್ಥಿರ ಮೇಲೆ ಕ್ರಮ ಕೈಗೊಳ್ಳುತ್ತೇವೆ

ಶ್ರೀ ಎಂ ಟಿ ಬಿ ನಾಗರಾಜು ಸಂಘಗಳು ಅವರು ಹೇಳಿದ ಹಾಗೆ ಬರೀ ಹೊಸಕೋಟೆಯಲ್ಲಿ ಇಲ್ಲ ಎಲ್ಲಾ ಕಡೆಗಳಲ್ಲೂ ಇವೆ ಈ ಬಗ್ಗೆಯೂ ಕೂಡ ಮಾನ್ಯ ಸಚಿವರು ಗಮನಹರಿಸಬೇಕು ಇದನ್ನು ತಾವು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ಈ ಮೂಲಕ ಒತ್ತಾಯವನ್ನು ಮಾಡುತ್ತೇನೆ ಹೌಸಿಂಗ್ ಸೊಸೈಟಿಗಳು ಉತ್ತಮವಾಗೆ ಕೆಲಸ ಮಾಡುವಂತಹ ಸಹಕಾರ ಸಂಘಗಳೂ ಇವೆ ಅದರಲ್ಲಿ ಯಾವ ರೀತಿಯಾಗಿ ಅಕ್ರಮಗಳು ನಡೆಸುತ್ತಿವೆ ಎನ್ನುವುದರ ಬಗ್ಗೆ ತುರ್ತು ಕ್ರಮವನ್ನು ಕೈಗೊಂಡು ಎಲ್ಲಾ Housing society ಗಳು ಕೂಡ ಸಕ್ರಮವಾಗಿ ನಡೆಯಬೇಕು ಈಗ ನಮ್ಮಲ್ಲಿ ಬಿಡಿ ಇದೆ ಅಲ್ಲಿಯೂ ಕೂಡ ವ್ಯವಸ್ಥಿತವಾಗಿ ನಿವೇಶನಗಳನ್ನು ಹಂಚುತ್ತಾರೆ ಅದೇ ರೀತಿಯಾಗಿ

ಸಹಕಾರ ಸಂಘದವರೂ ಕೂಡ ಮಾಡುತ್ತಿದ್ದಾರೆ ಯಾರು ಚೆನ್ನಾಗಿ ಮಾಡುತ್ತಾರೆ, ಅವರಿಗೆ ನಾವು ಬೆಂಬಲವನ್ನು ಕೊಡುತ್ತೇವೆ ಯಾರು ಅತಿಕ್ರಮವಾಗಿ ಅನ್ಯಾಯವನ್ನು ಮಾಡುತ್ತಾರೆ ಅವರ ಮೇಲೆ ಸರ್ಕಾರ ಕ್ರಮವನ್ನು ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಎಲ್ಲಾ Housing ಯವರು ಯಾವ ರೀತಿಯಾಗಿ ಕೆಲಸವನ್ನು ಮಾಡುತ್ತಾರೆಂದು ನೀವು ಒಂದೊಂದು ತನಿಖೆಯನ್ನು ಮಾಡಿಸಿ ವರದಿಯನ್ನು ಒಪ್ಪಿಸುವುದು ಒಳ್ಳೆಯದು ಏಕೆಂದರೆ, ಎಷ್ಟು ಸುಮಗಳು ಇವೆ, ಎಷ್ಟು ಂಘಗಳು ಬೈಲಾ ಪ್ರಕಾರ ನಡೆದುಕೊಳ್ಳುತ್ತಿವೆ ಎಷ್ಟು Housing Society ಗಳು ಜನರಿಗೆ ಮೋಸವನ್ನು ಮಾಡಿದ್ದಾರೆಂಬ ಬಗ್ಗೆ ಒಂದು ಪಟ್ಟಿಯನ್ನು ಕೊಡಬೇಕು

ಬೆಳಗಾವಿ ಜಿಲ್ಲೆಯಲ್ಲಿ ಬಿಡುಗಡೆ

ಚುಕ್ಕೆ ಗುರತಿನ ಪ್ರಶ್ನೆ ಸಂಖ್ಯೆ	೩೧೭ (೨೨೬೧)
ವಿಧಾನಸಭೆ ಸದಸ್ಯರ ಹೆಸರು	ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸದಲಗಿ)
ಉತ್ತರಿಸುವವರು	ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ

ಅ ಬೆಳಗಾವಿ ಜಿಲ್ಲೆಯಲ್ಲಿ ಬುದ್ಧಿಮಾಂದ್ಯ ಬೆಳಗಾವಿ ಜಿಲ್ಲೆಯಲ್ಲಿ ಸರ್ಕಾರದಿಂದ

ಮಕ್ಕಳಿಗಾಗಿ ಇರುವ ಸರ್ಕಾರಿ ಹಾಗೂನಡೆಯುತ್ತಿರುವ ಬುದ್ಧಿಮಾಂದ್ಯ ಮಕ್ಕಳ ಶಾಲೆ

ಖಾಸಗಿ (ಎನ್ ಜಿ ಓ) ಶಾಲೆಗಳೆಷ್ಟು ,ಇರುವುದಿಲ್ಲ
ಬುದ್ಧಿಮಾಂದ್ಯ ಮಕ್ಕಳಿಗಾಗಿ

ಈ ಶಾಲೆಗಳಲ್ಲಿರುವ ವಿದ್ಯಾರ್ಥಿ / ಇರುವ ಖಾಸಗಿ
ಶಾಲೆಗಳ ಸಂಖ್ಯೆಳ ಈ

ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು? ಶಾಲೆಗಳಲ್ಲಿ ಇರುವ
ವಿದ್ಯಾರ್ಥಿಗಳು

೨೪೭,ವಿದ್ಯಾರ್ಥಿನಿಯರು ೧೧೧ ಒಟ್ಟು ೩೫೮

ಆ ಇವುಗಳಲ್ಲಿ ಎಷ್ಟು ಸರ್ಕಾರಿ ಹಾಗು ೪ ಖಾಸಗಿ ಶಾಲೆಗಳಲ್ಲಿ
ಎರಡು ಶಾಲೆಗಳು

ಖಾಸಗಿ (ಎನ್ ಜಿ ಓ) ಶಾಲೆಗಳು ಸ್ವಂತ ಕಟ್ಟಡ
ಹೊಂದಿದ್ದು ಮತ್ತೆರಡು ಶಾಲೆಗಳು

ಸ್ವಂತ ಕಟ್ಟಡ ಹೊಂದಿವೆ, ಸ್ವಂತ ಬಾಡಿಗೆ ಕಟ್ಟಡದಲ್ಲಿ
ನಡೆಯುತ್ತಿದೆ ಒಂದು

ಕಟ್ಟಡ ಹೊಂದಿಲ್ಲದಿರಲು ಕಾರಣ ಶಾಲೆಗೆ ಸರ್ಕಾರದ
ನಿವೇಶನ

ಗಳೇನು (ವಿವರ ನೀಡುವುದು) ? ದೊರೆತಿರುವುದಿಲ್ಲ
ಇನ್ನೊಂದು ಶಾಲೆ

ಸ್ವಂತ ಕಟ್ಟಡ ಕಟ್ಟಲು
ಕ್ರಮ ಕೈಗೊಳ್ಳಲಾಗಿದೆ

ಇ ಇವುಗಳಿಗೆ ಪ್ರತಿವರ್ಷ ಕೇಂದ್ರ ಕೇಂದ್ರ ಸರ್ಕಾರ ಮತ್ತು
ರಾಜ್ಯ ಸರ್ಕಾರದಿಂದ

ಸರ್ಕಾರದಿಂದ ಮತ್ತು ರಾಜ್ಯ ಈ ಶಾಲೆಗಳಿಗೆ
ಬಿಡುಗಡೆಯಾಗುತ್ತಿರುವ

ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದ ವಿವರ ಮತ್ತು ಯಾವ ರೀತಿ

ಅನುದಾನವೆಷ್ಟು , ಯಾವ ರೀತಿ ಅನುದಾನ ಬಿಡುಗಡೆಯಾಗಿದೆ ಹಾಗೂ

ಅನುದಾನವು ಬಿಡುಗೆಯಾಗಿದೆ , ಉಪಯೋಗಿಸುವ ರೀತಿಯನ್ನು ಅನುಬಂಧ-ಯಾವ ರೀತಿ ಉಪಯೋಗಿಸಲ್ಪಟ್ಟಿದೆ? ೧ ರಲ್ಲಿ ನೀಡಲಾಗಿದ

ಈ ಈ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿ- ಈ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು
ರುವುದು ಸರ್ಕಾರದ ಗಮನಕ್ಕೆ ಬಂದಿ- ಸರ್ಕಾರದ ಗಮನಕ್ಕೆ ಬಂದಿದೆ ರಾಜ್ಯ ಅನು-
ದೆಯೇ , ಶಿಕ್ಷಕರ ಕೊರತೆಯಿದ್ದಲ್ಲಿ ದಾನಿಕ ಶಾಲೆಗಳ ಶಿಕ್ಷಕರ ಹುದ್ದೆಗಳನ್ನು
ಕೈಗೊಂಡಿರುವ ಕ್ರಮಗಳೇನು ? ತುಂಬುವ ಬಗ್ಗೆ ಪರಿಶೀಲಿಸಿ ಕ್ರಮ

ಕೈಗೊಳ್ಳಲಾಗುವುದು

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ಬೆಳಗಾಂ ಜಿಲ್ಲೆಯಲ್ಲಿ ಸರ್ಕಾರಿ ಬುದ್ಧಿಮಾಂದ್ರ ಶಾಲೆಗಳು ಇಲ್ಲವೆಂದು ಹೇಳಿದ್ದೀರಿ ಅಲ್ಲಿ ಬರೀ ಖಾಸಗಿ ಶಾಲೆಗಳು ಇವೆ ಈ ೪ ಖಾಸಗಿ ಶಾಲೆಗಳಲ್ಲಿ ಅಲ್ಲಿ ಕೇವಲ ೩೫೮ ಮಕ್ಕಳು ಮಾತ್ರ ಅಲ್ಲಿ ಕಲಿಯುತ್ತಿದ್ದಾಋಎ ಅಲ್ಲಿ ಬುದ್ಧಿಮಾಂದ್ಯ ಮಕ್ಕಳ ಸಂಖ್ಯೆ ಹೆಚ್ಚು ಇದೆ ಏಕೆ ಅಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಆಗಿಲ್ಲ ಇದಕ್ಕೆ ಕೇಂದ್ರ ಸರ್ಕಾರದ ಕಡೆಯಿಂದ ಸಹಾಯಧನವೂ ಕೂಡ ಬಂದಿಲ್ಲ ರಾಜ್ಯ ಸರ್ಕಾರದ ಕಡೆಯಿಂದ ಸಹಾಯಧನವು ಬಂದಿದೆ ಕೇಂದ್ರದಿಂದ ಅನುದಾನವು ಬಿಡುಗಡೆಯಾಗಿರುವುದಿಲ್ಲ ನೀವು ಕೇಂದ್ರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೀರೋ ಅಥವಾ ಇಲ್ಲವೋ ಅದನ್ನು ಸಲ್ಲಿಸದಿದ್ದರೆ ಕಾರಣವೇನು ? ತಾವು ಜಿಲ್ಲೆಯಲ್ಲಿ ಮೊರಾರ್ಜಿದೇಸಾಯಿ ರೆಸಿಡೆನ್ಸಿಯಲ್

ಶಾಲೆಯನ್ನು ತೆರೆಯುತ್ತಿದ್ದೀರಿ ಮಕ್ಕಳ ಅನುಕೂಲಕ್ಕಾಗಿ ಜಿಲ್ಲೆಗೊಂದು ಬುದ್ಧಮಾಂದ್ಯ ಸರ್ಕಾರದ ಕಡೆಯಿಂದಲ್ಲೂ ಒಂದು ಶಾಲೆಯನ್ನು ತೆರೆದರೆ ಅನುಕೂಲವಾಗುತ್ತದೆ ಅದನ್ನು ನವು ಹೇಳುತ್ತಾ ಹೋದರೆ ಅಲ್ಲಿಯ ಪರಿಸ್ಥಿತಿ ಏನಿದೆ, ಅಲ್ಲಿ ಶಿಕ್ಷಕರು ಇಲ್ಲ, ಯಾವಾಗ ನಿಮ್ಮ ಅಧಿಕಾರಿಗಳು ವಿಸಿಟ್ ಮಾಡುತ್ತಾರಲ್ಲ, ಆ ದಿವಸ ಮಕ್ಕಿಗೆ ಮೊದಲೇ ಹೇಳಿ ಶಾಲೆಯಲ್ಲಿ ಇರುವಂತಹ ವ್ಯವಸ್ಥೆ ಮಾಡುತ್ತಾರೆ ದಯವಿಟ್ಟು ನೀವು ಖಾಸಗಿಯವರೆ ಅವಕಾಶ ಕೊಡದೆ, ಇದಕ್ಕೆ ರಾಜ್ಯ ಸರ್ಕಾರದಿಂದ ೩೧ ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ ೩೫೮ ಮಕ್ಕಳಿಗೆ ೩೧ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕು ನೀವು ಪ್ರತಿಯೊಂದು ಮಗುವಿಗೆ ೮-೧೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ ದಯವಿಟು ನೀವು ಸರ್ಕಾರದ ಕಡೆಯಿಂದ ಜಿಲ್ಲೆಯಲ್ಲಿ ಅಂದರೆ - ಬೆಳಗಾಂ ಜಿಲ್ಲೆಗೆ ಒಂಧು ಬುದ್ಧಿಮಾಂದ್ಯ ಶಾಲೆಯನ್ನು ಇದೇ ವರ್ಷದಿಂದ ಪ್ರಾರಂಭ ಮಾಡಿದರೆ ಅನುಕೂಲವಾಗುತ್ತದೆ ದಯವಿಟ್ಟು ಮಾನ್ಯ ಸಚಿವರು ಸಮರ್ಪಕವಾಗಿ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ

ಶ್ರೀ ಹೆಚ್ ಕೆ ಕುಮಾರಸ್ವಾಮಿ ಮಾನ್ಯ ಉಪಾಧ್ಯಕ್ಷರೆ, ಬೆಳಗಾಂ ಜಿಲ್ಲೆಯಲ್ಲಿ ೪ ಬುದ್ಧಿಮಾಂದ್ಯ ಶಾಲೆಗಳು ನಡೆಯುತ್ತಿದೆ ೪ ಕೂಡ ಖಾಸಗಿಯವರ ಸಹಭಾಗಿತ್ವದಲ್ಲಿ ನಡೆಯುತ್ತಿದೆ ಅದರಲ್ಲಿ ಒಂದು ರಾಜ್ಯದ ಅನುದಾನದಲ್ಲಿ ನಡೆಯುತ್ತದೆ ಇನ್ನೆರಡು ಕೇಂದ್ರ ಸರ್ಕಾರದ ಅನುದಾನದಲ್ಲಿ ನಡೆಯುತ್ತಿದೆ ಇನ್ನು ಒಂದಕ್ಕೆ ಕೇಂದ್ರ ಸರ್ಕಾರದವರು ಅನುದಾನವನ್ನು ಕೊಡಬೇಕೆಂದು ಈಗಾಗಲೇ ನಾವು ಶಿಫಾರಸ್ಸು ಮಾಡಿದ್ದೇವೆ ಅಲ್ಲಿಂದ ಇನ್ನು ಕೂಡ ಬಂದಿರುವುದಿಲ್ಲ ಇಲ್ಲಿ ೩೫೮ ಮಕ್ಕಳು ಇದ್ದಾರೆ, ತಾವು ಕಟ್ಟಡದ ಬಗ್ಗೆಯೂ ಸಹ ಕೇಳಿದ್ದೀರಿ ಒಟ್ಟಾರೆ ರಾಜ್ಯದಲ್ಲಿ ಸುಮಾರು ೩೪ ಬುದ್ಧಿಮಾಂದ್ಯ ಶಾಲೆಗಳು ಇವೆ ಎಲ್ಲವನ್ನೂ ಕೂಡ ನಾವು ಸರ್ಕಾರೇತರ ಸಂಸ್ಥೆಗಳ ಮೂಲಕವೇ ನಡೆಸುತ್ತಿದ್ದೇವೆ ನೇರವಾಗಿ ಸರ್ಕಾರದವರು ಯಾವುದನ್ನು ಕೂಡ ನಡೆಸುತ್ತಿಲ್ಲ ಅಂಧರ ಶಾಲೆ, ಕಿವುಡರ ಶಾಲೆ ಇವುಗಳನ್ನು ಬಿಟ್ಟರೆ ಉಳಿದವೆಲ್ಲವೂ ಕೂಡ ಅದರಡಿಯಲ್ಲಿಯೇ ನಡೆಯುತ್ತಿದೆ ನಾವು ಈಗಾಗಲೇ ಅನುದಾನದ ಬಗ್ಗೆ

ಶಿಫಾರಸ್ಸನ್ನು ಮಾಡಿದ್ದೇವೆ ಶಿಫಾರಸ್ಸು ಬಂದ ನಂತರ ಅದಕ್ಕೂ ಕೂಡ ಕೊಡುವ ವ್ಯವಸ್ಥೆ ಮಾಡುತ್ತೇವೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಬುದ್ದಿಮಾಂದ್ಯರಿಗೆ admission ಕೊಡಿಸುವಲ್ಲಿ ಏನಾದರೂ ತೊಂದರೆ ಇದ್ದರೆ ಅವರನ್ನು ಕರೆದುಕೊಂಡು ಬಂದು ಇಲ್ಲಿ ಅಸೆಂಬ್ಲಿಗೆ ಸೇರಿಸಿಬಿಡಿ

ಶ್ರೀ ಸಿದ್ದರಾಮಯ್ಯ ಏನು ಹಾಗೆಂದರೆ ಇಲ್ಲಿರುವವರೆಲ್ಲ ಬುದ್ಧಿಮಾಂದ್ಯರೆಂದೋ?

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ೨೦೦೫-೦೬ ರಲ್ಲಿಯೂ ಕೂಡ-ಅನುದಾನ ಸಿಕ್ಕಿರುವುದಿಲ್ಲ ೨೦೦೬-೦೭ ರಲ್ಲಿಯೂ ಕೂಡ ರಾಜ್ಯ ಸರ್ಕಾರದ ಕಡೆಯಿಂದಲೂ ಕೂಡ ಅನುದಾನವೂ ಸಿಕ್ಕಿರುವುದಿಲ್ಲ ಕೇಂದ್ರದ ಕಡೆಯಿಂದಲೂ ಕೂಡ ಅನುದಾನ ಸಿಕ್ಕಿರುವುದಿಲ್ಲ ಹೀಗಾದರೆ ಶಾಲೆಯನ್ನು ನಡೆಸುವುದಾದರೂ ಹೇಗೆ? ಮಕ್ಕಳಿಗೆ ಊಟ ಮತ್ತು ಬಟ್ಟೆ, ಶಿಕ್ಷಕರ ಪಗಾರ, ಇವುಗಳನ್ನೆಲ್ಲಾ ಕೊಡಬೇಕಾಗುತ್ತದೆ ಇನ್ನು ಎರಡು ವರ್ಷಗಳ ಕಾಲ, ಈ ವರ್ಷದಿಂದ ಪ್ರಸ್ತಾವನೆಯನ್ನು ಸಲ್ಲಿಸುತ್ತೇವೆಂದು ಹೇಳುತ್ತೀರಿ ಆ ಎರಡು ಶಾಲೆಗಳಿಗೆ ಧನವೂ ಕೂಡ ಸಿಕ್ಕಿರುವುದಿಲ್ಲ

ಶ್ರೀ ಹೆಚ್ ಕೆ ಕುಮಾರಸ್ವಾಮಿ ಕೇಮದ್ರ ಸರ್ಕಾರ ಏನು ಮಾಡುತ್ತಿದೆ ಎಂದರೆ, ರಾಜ್ಯ ಸಕಾಖುಗಳಿಗೆ ಈ ಶಾಲೆಗಳನ್ನು ನೀವೇ ನಡೆಸಬೇಕು ಎಂದು ನಿರ್ದೇಶನವನು ಕೊಡುತ್ತಿದೆ ಉಪಾಧ್ಯಾಯರಿಗೆ ಮತ್ತು ಶಿಕ್ಷಕರಿಗೆ ಶೇಕಡ ೧೦೦ ರಷ್ಟು ಸಂಬಳವನ್ನು ನಾವು ಕೊಡುತ್ತಿದ್ದೇವೆ ಶಿಕ್ಷಕೇತರ ಸಿಬ್ಬಂದಿಯವರಿಗೆ ಶೇಕಡ ೫೦ ರಷ್ಟು ಸಂಬಳವನ್ನು ಕೊಡುತ್ತಿದ್ದೇವೆ ಕೇಮದ್ರ ಸರ್ಕಾರದವರು ಕೂಡ ತನ್ನ ಪಾಲನ್ನು ಕೊಡಬೇಕೆಂದು ನಾವು ಕೂಡ ಅವರ ಜೊತೆಯಲ್ಲಿ ವ್ಯವಹರಿಸುತ್ತಿದ್ದೇವೆ ಮುಂದಿನ ದಿನಗಳಲ್ಲಿ ಹೆಚ್ಚಿನ ಹಾಸ್ಟಲ್ ಗಳನ್ನು ಸರ್ಕಾರದವರು ಕೊಡಬೇಕೆಂದು ಹೇಳಿದ್ದೇವೆ ನಮ್ಮ ಇಲಾಖೆಯ ಕಡೆಯಿಂಧ ೧೦ ಶಾಲೆಗಳನ್ನು ತೆರೆಯಬೇಕೆಂಬುದರ ಬಗ್ಗೆ ಬಜೆಟ್ ನಲ್ಲಿ ಪ್ರಸ್ತಾಪವಾಗಿದೆ

ನಂತರದ ವಿದ್ಯಮಾನಗಳಲ್ಲಿ ಹೆಚ್ಚು ಬುದ್ಧಿಮಾಂದ್ರ ಮಕ್ಕಳ ಹಾಸಟಲ್ ನ್ನು ತೆರೆಯುವುದರ ಬಗ್ಗೆ ಸರ್ಕಾರ ಪ್ರಯತ್ನ ಮಾಡುತ್ತಿದೆ

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ಈ ವರ್ಷ ಬಜೆಟ್ ನಲ್ಲಿ ಹೇಳಿರುವ ಪ್ರಕಾರ ಶಾಲೆಗಳನ್ನು ತೆರೆಯುತ್ತೀರೆಂದು ಹೇಳುತ್ತಿದ್ದೀರಲ್ಲಾ, ಅದರಲ್ಲಿ ಬೆಳಗಾಂಗೆ ಒಂದು ಶಾಲೆಯನ್ನು ಕೊಡುತ್ತೀರಾ ಎಂದು ನಾನು ಕೇಳುತ್ತಿದ್ದೇನೆ ತಾವು ಈ ಸದನದಲ್ಲಿ ಹೇಳಬೇಕು ತಾವು ಬೆಳಗಾಂಗೆ ಕೊಡುತ್ತೇನೆಂದರೆ, ನಮ್ಮದು ಸಂಪೂರ್ಣವಾದ ಸ್ವಾಗತವನ್ನು ನಾನು ಮಾಡುತ್ತೇನೆ

ಶ್ರೀ ಹೆಚ್ ಕೆ ಕುಮಾರಸ್ವಾಮಿ ಬೆಳಗಾಂ ಜಿಲ್ಲೆಯಲ್ಲಿ ಈಗಾಗಲೇ ೪ ಇದೆ ಬಎಳಗಾಂ ದೊಡ್ಡ ಜಿಲ್ಲೆಯಾಗಿದೆ ದೇವದಾಸಿಯರು ಹೆಚ್ಚಿರುವಂತಹ ಜಿಲ್ಲೆಯಿದೆ ಅಗತ್ಯವೆಂದು ಕಂಡು ಬಂದರೆ ಇನ್ನೊಂದನ್ನು ಮಂಜೂರು ಮಾಡುತ್ತೇವೆ

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ಬುದ್ಧಿಮಾಂದ್ರ ಶಾಲೆಗೆ ನಾವು ವಿಶೇಷವಾದ ಗಮನವನ್ನು ಹರಿಸಬೇಕು ಏಕೆಂದರೆ ಅವರ ಬಗ್ಗೆ ತಮಗೆ ಗೊತ್ತಿದೆ ಮಕ್ಕಳ ಪರಿಸ್ಥಿತಿ ಇವತ್ತು ಮನೆಯಲ್ಲಿ ಅವರ ತಮದೆ ತಾಯಿಗಳು ಯಾವ ರೀತಿಯಾಗಿ ನೋಡುತ್ತಾರೆ ಎಂದು ತಮಗೆ ಗೊತ್ತಿದೆ Atleast ಅವರಿಗೆ ಹಾಸ್ಟಲ್ ನಲ್ಲಿ ಶಿಕ್ಷಣವನ್ನು ಕೊಟ್ಟರೆ ಅಲ್ಲಿ ಅವರಿಗೆ ಸರಿಯಾದ ಊಟ ಮತ್ತು ಎಲ್ಲವೂ ಕೂಡ ಸಿಗುತ್ತದೆ ದಯವಿಟ್ಟು ೧೦ ರಲ್ಲಿ ೧ ಬೆಳಗಾಂ ಜಿಲ್ಲೆಗೆ ಈ ವರ್ಷ ಪ್ರಾರಂಭ ಮಾಡುತ್ತೇವೆಂದು ಹೇಳಬೇಕು

ಶ್ರೀ ಹೆಚ್ ಕೆ ಕುಮಾರಸ್ವಾಮಿ ಜಿಲ್ಲೆಗೊಂದು ಗ್ಯಾರಂಟಿಯಾಗಿ ಕೊಡುತ್ತೇನೆ

ಶ್ರೀ ಮಹಿಮಾ ಜೆ ಪಟೇಲ್ ಮಾನ್ಯ ರಮೇಶ್ ಕುಮಾರ್ ರವರು ಹೇಳಿದರು, ಇಲ್ಲಿ ಬುದ್ಧಿಮಾಂದ್ಯ ಮಕ್ಕಳಿಗೆ ಬೇರೆ ಶಾಲೆಯಿಲ್ಲ ಅದಕ್ಕೆ ಇಲ್ಲಿ ಸೇರಿಸಬೇಕೆಂದು ಹೇಳಿದರು ಇಲ್ಲಿ qualıficatıon ಬರಬೇಕೆಂದರೆ ಬರೀ ಬುದ್ದಿ ಮಾಂದ್ಯ ಇದ್ದರೆ ಆಗುವುದಿಲ್ಲ ಅಂಗವಿಕಲತೆ ಮತ್ತು ಬುದ್ಧಿಮಾಂದ್ರ ಎರಡು ಇದ್ದರೆ ಮಾತ್ರ qualıficatıon ಎಂದು ಕಾಣಿಸುತ್ತದೆ ಇಲ್ಲಿಗೆ ತೆಗೆದುಕೊಂಡು ಬಂದು ಬುದ್ಧಿಮಾಂದ್ಯ ಮಕ್ಕಳನ್ನು ಸೇರಿಸಬೇಕೆಂದು ಹೇಳಿದರಲ್ಲಾ, ಬರೀ ಬುದ್ದಿಮಾಂದ್ಯ ಇದ್ದರೆ ಮಾತ್ರ qualıficatıon ಆಗುವುದಿಲ್ಲ ಅಂಗವಿಕಲತೆ ಮತ್ತು ಬುದ್ದಧಮಾಂದ್ಯ ಎರಡು ಇರಬೇಕು

ಶ್ರೀ ನೆ ಲ ನರೇಂದ್ರ ಬಾಬು ಬುದ್ಧಿಮಾಂದ್ಯ ಮಕ್ಕಳ ಬಗ್ಗೆ ಬಹುಶಃ ಹಲವಾರು ವರ್ಷಗಳಿಂದ ಇಲ್ಲಿ ಕೆಲಸ ಮಾಡುವಂತಹ ಸಂಸ್ಥೆಗಳಲ್ಲಿ ನಾನು ಕೆಲಸ ಮಾಡುತ್ತಿರುವುದರಿಂದ ದಯವಿಟ್ಟು ಸರ್ಕಾರ ವಿಶೇಷವಾಘಿ ಆಸಕ್ತಿಯನ್ನು ವಹಿಸಿ ಇಡೀ ರಾಜ್ಯದಲ್ಲಿರುವ ೩೩ ಸಂಸ್ಥೆಗಳು ಎನ್‌ಜಿಒ ಗಳ ಮುಖೇಣ ಸಹಾಯವನ್ನು ಕೊಟ್ಟು ನಡೆಸುತ್ತಿದ್ದೇವೆಂದು ಹೇಳಿದ್ದೀರಿ, ಸಂತೋಷ ಆದರೆ, ಒಂದೇ ಕಡೆ ಕಡುಬಡತನದಲ್ಲಿರುವಂತಹ ಅವರ ಮನೆಗಳಲ್ಲಿ ಬುದ್ಧಿಮಾಂದ್ಯ ಮಕ್ಕಳು ಹುಟ್ಟಿದರೆ ಬಹಳ ಹೀನಾಯಸ್ಥಿತಿ ಬಹುಶಃ ಅವರ ಬದುಕು ಸಂಪೂರ್ಣವಾಗಿ ಜರ್ಜರಿತವಾಗುತ್ತದೆ ದಯಮಾಡಿ ಈ ಬಗ್ಗೆ ಮುಂದಿನ ದಿನಗಳಲ್ಲಿ ಸೆನ್ಸಸ್‌ನ್ನು ಮಾಡಿ ಸರ್ಕಾರದ ಬಜೆಟ್ ನಲ್ಲಿ ಈ ಬಗ್ಗೆ ಹೇಳಿದ್ದೀರಿ ಈ ಒಂದು ಸಮಸ್ಯೆಗೆ ಒಂದು ಶಾಶ್ವತವಾದ ಪರಹಾರವನ್ನು ಮಾಡುವುದಕ್ಕೆ ಒಂದು Long term Programme ತಾವು plan ಮಾಡಬೇಕು ಇಲ್ಲವೆಂದರೆ, ಹೇಗೋ ಶ್ರೀಮಂತರು ಅವರ ಮಕ್ಕಳಿಗೆ ಹೇಗಾದರೆ ಬದುಕನ್ನು ರೂಪಿಸಿಕೊಳ್ಳುವುದನ್ನು ಮಾಡುತ್ತಾರೆ ಪ್ರತಿವರ್ಷ ತುಂಬಾ ಕಷ್ಟವಾಗುತ್ತದೆ ದಯಮಾಡಿ ಈ ಬಗ್ಗೆ ಒಂದು ಸೆನ್ಸಸ್ ಆಗಬೇಕು ಒಂದು comprehensıve plan ಆಗಬೇಕೆಂದು ತಮ್ಮಲ್ಲಿ ವಿನಂತಿಯನ್ನು ಮಾಡುತ್ತೇನೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಈಗ ಸರ್ವಶಿಕ್ಷಣ ಅಭಿಯಾನ ಬಂದಿರುವುದರಿಂದ ಪ್ರಾಥಮಿಕ ಹಂತದಲ್ಲಿ ವಿದ್ಯಾಥಿಗಳು ಯಾರ್ಯಾರು ಅಂಗವಿಕಲರು ಮತ್ತು ಬುದ್ಧಿಮಾಂದ್ಯರು ಯಾರು ಇದ್ದಾರೆಂಬ ಬಗ್ಗೆ ಸರ್ವೆ statistics ಸರ್ಕಾರದಲ್ಲಿ ಈಗ ಲಭ್ಯವಿದೆ ಈ ಹಂತದಲ್ಲಿ ಬೇಕಾಗಿರುವಂತಹ ಒಂದು ಸಲಕರಣೆಗಳನ್ನು ಕೊಡುವಂತಹದ್ದು ಪ್ರಾಥಮಿಕ ಶಾಲೆಯ ಹಂತದಲ್ಲಿ ಪ್ರಾರಂಭವಾಗಿರುವುದರಿಂದ ಸರ್ಕಾರದಲ್ಲಿ ಸ್ಪಷ್ಟವಾದ ಮಾಹಿತಿ ಇದೆ ಮುಂದಿನ ಹಂತಗಳಲ್ಲಿ ಯವ ಯಾವ ತರಹದ ಅಂಗವಿಕಲತೆ ಮತ್ತು ಬೇರೆ ಬೇರೆ ದೌರ್ಬಲ್ಯಗಳಿಗೆ ಯಾವ ರೀತಿಯ ಸೌಲಭ್ಯಗಳು ಅಗತ್ಯವಿದೆ ಎಂಬುವುದರ ಬಗ್ಗೆ ಮಾಹಿತಿ ಲಭ್ಯವಿದೆ ಅದರ ಆಧಾರದ ಮೇಲೆ ಎಲ್ಲೆಲ್ಲ ಯಾವ ಯಾವ ರೀತಿಯಧಂತಹ institutionಗಳನ್ನು ಪ್ರಾರಂಭಿಸಬೇಕು ಎನ್ನುವುದನ್ನು ಕೂಡ ನೋಡಬೇಕು ಅದರ ಜೊತೆಯಲ್ಲಿ ಈಗಾಗಲೇ, ಯಾರು ಪ್ರಾರಂಭಿಸಿದ್ದಾರೆ ಅವರಿಗೆ ಇನ್ನಿತರ ಸೌಲಭ್ಯಗಳನ್ನು ಕೊಡಬೇಕೆಂಬುದರ ಬಗ್ಗೆ ಸರ್ಕಾರದವರು ಯೋಚಿಸಬೇಕು ಈ ಎಲ್ಲಾ ಸಂಸ್ಥೆಗಳನ್ನು ನಡೆಸುವುದಕ್ಕೆ ಕೇಂದ್ರ ಸರ್ಕಾರದ ಸಹಾಯ ಬಹಳ ದೊಡ್ಡ ಪ್ರಮಾಣದಲ್ಲಿ ಸಿಗುತ್ತದೆ ರಾಜ್ಯಸರ್ಕಾರದಿಂದ ಶಿಫಾರಸ್ಸು ಆಗಿ ಹೋಗುತ್ತದೆಯಲ್ಲಾ, ಅದೇ ಕಷ್ಟದ ಸಂಗತಿ ಎಂದು ಅನೇಕ ಸಂದರ್ಭದಲ್ಲಿ ಅವರು ನಮ್ಮ ಜೊತೆಗೆ ಬಂದು ಹೇಳುತ್ತಾರೆ ಇಲಾಖೆಯಲ್ಲಿ ಎಲ್ಲಿ ಜಟಿಲತೆಯ ವ್ಯವಸ್ಥೆ ಇದೆಯೋ ಇದನ್ನು ಕೇಮದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಕಷ್ಟ ಎನ್ನುವಂತಹ ಸ್ಥಿತಿ ನಿರ್ಮಾಣವಾಗಿದೆಯೋ, ಅಲ್ಲಿ ಯಾರ್ಯಾರು ಪಟ್ಟಭದ್ರರಾಗಿ ಎಷ್ಟೆಷ್ಟು ವರ್ಷದಿಂದ ಇದ್ದರೋ ಅಂತಹದವರ ಬಗ್ಗೆ ಇಲಾಖಾ ವತಿಯಿಂದ ನೋಡಿ ಆ ಸಂಸ್ಥೆಗಳಿಗೆ ಅನುಕೂಲವಾಗುವ ರೀತಿಯಲ್ಲಿ ವಿಶೇಷವಾದ ಗಮನವನ್ನು ಕೊಡಬೇಕೆಂದು ಮಾನ್ಯ ಸಚಿವರಿಗೆ ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ

ಅಲ್ಲಿ ಇಳ ಬುದ್ಧಿಮಾಂದ್ಯ ಮಕ್ಕಳಿದ್ದಾರೆ, ಮಾನ್ಯ ನರೇಂದ್ರಬಾಬುರವರು, ನಮ್ಮ ಹೆಗ್ಡೆಯವರು ಏನು ಹೇಳಿದರು ಅದನ್ನು ನಾನು ಒಪ್ಪುತ್ತೇನೆ ಈ ಅಂಗವಿಕಲತೆ ಅದರಲ್ಲಿಯು ಕೂಡ ಬುದ್ಧಿಮಾಂದ್ಯ

ಮಕ್ಕಳ ಬಗ್ಗೆ ನಾನು ಅನೇಕ ಪ್ರವಾಸ ಮಾಡಿ ನೋಡಿದ್ದನು ನಿಜಕ್ಕೂ ಆ ಸ್ಥಿತಿಯನ್ನು ನಾವು ನಮ್ಮ ಬೆಂಗಳೂರಿನಲ್ಲಿಯೂ ಕೂಡ ನೋಡಿದ್ದೇವೆ ಶಿಶುಮಂದಿರ, ಬಾಲಮಂದಿರಗಳಲ್ಲಿ ತಾವು ಮಾನ್ಯ ಶಾಸಕಮಿತ್ರರು ಒಂದು ಸಾರಿ ಬನ್ನಿ, ಕರೆದುಕೊಂಡು ಹೋಗುತ್ತೇನೆ, ನೋಡಬೇಕು, ಹೇಗೆ ಜೀವನ ನಡೆಸುತ್ತಿದ್ದಾರೆ ಎಂದರೆ ನಿಜಕ್ಕೂ ಅದನ್ನೊಂದು ಸಾರಿ ನಾವು ನೋಡಬೇಕು ಸುಮ್ಮನೆ ಭಾಷಣ ಮಾಡುವುದು, ಇಲ್ಲಿ ಚರ್ಚೆ ಮಾಡುವುದು ಇವೆಲ್ಲಾ ಮುಖ್ಯವಲ್ಲ, ಅಲ್ಲೊಂದು ಸಾರಿ ಹೋಗಿ ನೋಡಬೇಕು ಯಾವ್ಯಾವ ಕಾರಣಗಳಿಗಾಗಿ ಅಂಗವಿಕಲತೆ, ಬುದ್ಧಿಮಾಂದ್ಯರಾಗಿದ್ದಾರೆ, ಎಂತೆಂಥ ಅಧಿಕಾಋುಇಗಳ ಮಕ್ಕಳು, ನೈಸರ್ಗಿಕ ಕಾರಣಗಳು ಮತ್ತೊಂದು, ತಾವು ಈಗ ಹೇಳಿದ ಹಾಗೆ ಸರ್ಕಾರ ಈ ವಿಷಯದಲ್ಲಿ ಆ ಹಣದ ಲಭ್ಯತೆ ಇಲ್ಲವೆಂದಾಗಲಿ, ಮತ್ತೊಂದಾಗಲಿ ಹೇಳಿಕೊಂಡು ಕೂರುವುದಿಲ್ಲ, ಎಷ್ಟೇ ಮಕ್ಕಳು ಬರಲಿ, ಸರ್ಕಾರದವರು ಅವರನ್ನು ಸೇರಿಸಿಕೊಂಡು ಅವರನ್ನು ಪೋಷಿಸುವುದರ ಜೊತೆಗೆ ಅವರನ್ನು ಯಾರು ಪೋಷಿಸುತ್ತಿದ್ದಾರೆ, ಅವರಿಗೆ ಯಾರು ಸಹಾಯಕರಾಗಿರುತ್ತಾರೆ ಅಂಥವರಿಗೆ ಸ್ವಲ್ಪ ಗಮನ ಕೊಡಬೇಕೆಂದು ಹೇಳಿದ್ದಾರೆ ಇದರ ಕಡೆಗೆ ಹೆಚ್ಚು ಗಮನವನ್ನು ಸರ್ಕಾರ ಕೊಡುತ್ತದೆಂದು ಹೇಳಬಯಸುತ್ತೇನೆ

ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸ ಪುರ) ಅಧ್ಯಕ್ಷರೆ ತಮ್ಮ ಅನುಮತಿ ಪಡೆದು ನಾನು ಮಾತನಾಡುತ್ತಿದ್ದೇನೆ, ನೌಕರಿ ಮಾಡುವವರ ಕಡೆಯಿಂದ, ೧ನೇ ತಾರೀಖು ಸಂಬಳಕ್ಕೆ ನನ್ನು ಎದುರು ನೋಡುವವರ ಕಡೆಯಿಂದ ಮಾಡುವ ಕೆಲಸವಲ್ಲ ಇದು ಇದಕ್ಕೆ ತನ್ಮಯತೆ ಬೇಕಾಗುತ್ತದೆ, ಆ ಮಕ್ಕಳ ಮೇಲೆ ವಿಶೇಷವಾದಂಥ ಒಲವಿದ್ದು, ಅರ್ಪಣಾ ಮನೋಭಾವನೆಯಿಂದ ಕೆಲಸ ಮಾಡತಕ್ಕಂಥ voluntary organizations ಇದ್ದರೆ ಅವರಿಗೆ encouragement ಮಾಡಿ Government ವತಿಯಿಂದ ಮಾಡುತ್ತೀರಿ ಎಂದರೆ ಅದು ಆಗುವುದಿಲ್ಲ ಏಕೆಂದರೆ ಅವರು ಸಂಬಳಕ್ಕಾಗಿ ಬರುವವರು ಅಷ್ಟೆ ಅವರು ಮತ್ತಷ್ಟು ಅವರನ್ನು ಅಸಡಡಯಿಂದ ನೋಡುತ್ತಾರೆ ನಿಮಗೆ ಇದರ ಬಗ್ಗೆ ಸಾಕಷ್ಟು ಕಡೆ ಪ್ರವಾಸ ಮಾಡಿದಾಗ ಅನುಭವವಾಗಿದೆ Identify ಮಾಡಿ

ಯಾರ್ಯಾರು ಈ service organizations ನಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರಿಗೆ ಹೆಚ್ಚು ಪ್ರೋತ್ಸಾಹ ಕೊಡಿ ಈ ಸುಲ್ತಾನ್ ಪಾಳ್ಯಕ್ಕೆ enter ಆಗುತ್ತಾ ಒಬ್ಬ ಹೆಣ್ಣುಮಗಳು ಇದ್ದಾಳೆ, ದೇಶಪಾಂಡೆ ಎಂದು ಆಕೆ ಹೆಸರು, ಒಂದು ಸಣ್ಣ ಮನೆಯಲ್ಲಿ ೨೦-೨೫ ಜನ ಮಕ್ಕಳನ್ನು ಇಟ್ಟುಕೊಂಡಿದ್ದಾರೆ, ಆಕೆ ಅವಿವಾಹಿತೆಯಾಗಿದ್ದುಕೊಂಡು ಭಗವಾನ್ ಸತ್ಯ ಸಾಯಿಬಾಬಾರವರ ಆಶೀರ್ವಾದದಿಂದ ಅದನ್ನು ನಡೆಸಿಕೊಂಡು ಹೋಗುತ್ತಿದ್ದಾಳೆ ಅಲ್ಲಿಗೆ ಹೋಗಿ ನೋಡಿ ಬನ್ನಿ ನೀವು ಎಂಥ ಕರುಣಾಜನಕ ಸ್ಥಿತಿ ಆಕೆ ಯಾವ ರೀತಿ ನಡೆಸಿಕೊಂಡು ಹೋಗುತ್ತಿದ್ದಾಳೆ ಅವರು ಕಡೆ ಪಕ್ಷ ಯಾರನ್ನೂ ಡೊನೇಷನ್ ಕೂಡ ಕೇಳುವುದಿಲ್ಲ ಅಂಥ ಸ್ವಾಭಿಮಾನಿಗಳು ಅವರು, ಯಾರೋ ಅವರು ಇವರು ಅವರಿಗೆ ತಿಳಿದವರು ಹೋಗಿ ಸಹಾಯ ಮಾಡುತ್ತಿದ್ದಾರೆ ಅಂಥವರನ್ನು ನೀವು recognize ಮಾಡಿ ಅವರಿಗೆ ಜಾಗ ಕೊಡುವುದು, ಬಿಲ್ಡಿಂಗ್ ಕೊಡುವುದು ಮಾಡಿದರೆ ಸಾರ್ಥಕವಾಗುತ್ತದೆ ಸರ್ಕಾರಿ ಸೇವೆಯಲ್ಲಿದ್ದು increment ಗೆ gratuity, ಸಂಬಳಕ್ಕೆ ಕಾಯುವವರಿಗೆ ಕೊಟ್ಟರೆ ಅವರು ಇವರಿಗೆ ಕೊಟ್ಟದ್ದನ್ನು ತಿಂದುಬಿಡುತ್ತಾರೆ ಅಷ್ಟೆ ದಯಮಾಡಿ encourage only people who are service oriented, that would be a better service

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಲಕ್ಷ್ಮಿ ನಿಜಾಮುದ್ದೀನ್ ಅವರು ಒಂದು ಟ್ರಸ್ಟ್ ಮಾಡಿ ನಡೆಸಿದ್ದರು, ಈಗ ಇಂದಿರಾನಗರದಲ್ಲಿರತಕ್ಕಂಥದ್ದನ್ನು ಕೂಡ ಅವರೇ ಪ್ರಾರಂಭ ಮಾಡಿದ್ದು, ಅವರು ಬಹಳ ಚೆನ್ನಾಗಿ ಅದನ್ನು ನಡೆಸುತ್ತಿದ್ದಾರೆ ಅವರಿಗೆ ಬೇರೆ ಬೇರೆ ಪ್ರಶಸ್ತಿಗಳು ಕೂಡ ಬಂದಿತ್ತು ಅದನ್ನು ಯಾವ pattern ನಲ್ಲಿ ನಡೆಸುತ್ತಿದ್ದಾರೆಂದು ಒಂದು ಸಲ ನೋಡಬೇಕು, ಏಕೆಂದರೆ ಈಗ ಲಕ್ಷ್ಮಿ ನಿಜಾಮುದ್ದೀನ್ ಇಲ್ಲ, she passed away, ಹಾಗಾಗಿ ಆ ಟ್ರಸ್ಟ್ ನಡೆದುಕೊಂಡು ಹೋಗುತ್ತಿದೆ ಹಾಗಾಗಿ ಅಲ್ಲಿಗೆ ಹೋಗಿ ಅವರು ಯಾವ ಪ್ಯಾಟರ್ನ್‌ನಲ್ಲಿ ಮಾಡುತ್ತಿದ್ದಾರೆಂದು ನೋಡಿದರೆ ಒಳ್ಳೆಯದು ಎಂದು ಕಾಣುತ್ತದೆ, ಏಕೆಂದರೆ ಮಾನ್ಯ ರಮೇಶ್ ಕುಮಾರ್ ಹೇಳಿದ್ದು ನೂರಕ್ಕೆ

ನೂರು ಸತ್ಯ ಈ ಸಂಬಳಕ್ಕೆ ಬರುವವರು ಆ ಸಂಬಳಕ್ಕೋಸ್ಕರ ಅಲ್ಲಿ ಕೆಲಸ ಮಾಡುತ್ತಾರೆ, ಅಲ್ಲಿ ಕೆಲಸ ಮಾಡುವವರಿಗೆ ಅವರ ಬಗ್ಗೆ ಮಾನವೀಯತೆ , ಅಂತಃಕರುಣೆ ಇರಬೇಕು ಅಂಥವರಿಗೆ ಏನಾದರೂ ಒಂದು ವ್ಯವಸ್ಥೆ ಮಾಡಿದರೆ ಅವರಿಗೆ ಒಳ್ಳೆಯದಾಗುತ್ತದೆ ಹಾಗಾಗಿ ಆ ಲಕ್ಷ್ಮಿ ನಿಜಾಮುದ್ದೀನ್ ರವರ ಟ್ರಸ್ಟ್ ಅನ್ನು ನೋಡಿ ಎಂದು ಸಲಹೆ ಮಾಡುತ್ತೇನೆ

ಶ್ರೀ ಹೆಚ್ ಕೆ ಕುಮಾರಸ್ವಾಮಿ ಮಾನ್ಯ ಸದಸ್ಯರುಗಳು ಸಲಹೆ ಕೊಟ್ಟ ಮೇರೆಗೆ ಈ ರೀತಿಯ ಶಾಲೆಗಳನ್ನು ನಡೆಸುತ್ತಿರುವವರು ಸರ್ಕಾರೇತರ ಸಂಸ್ಥೆಗಳೇ ಜಾಸ್ತಿ NGO ಗಳೇ ಜಾಸ್ತಿ ಮಾನ್ಯ ಹಿರಿಯರಾದ ರಮೇಶ್ ಕುಮಾರ್ ಎಲ್ಲರೂ ಹೇಳಿದ ಹಾಗೆ ಬಹಳಷ್ಟು ಜನ ತಮ್ಮ ತನವನ್ನು ಧಾರೆಯೆರೆದು ಇಂಥವರನ್ನೆಲ್ಲಾ ಸಾಕಿ ಸಲುಹುವಂಥ ಕೆಸಲ ಮಾಡುತ್ತಿದ್ದಾರೆ ಇಂಥ ಶಾಲೆಗಳನ್ನು ಹೆಚ್ಚಾಗಿ ಅವರೇ ನಡೆಸುತ್ತಿರುವುದರಿಂದ ಸರ್ಕಾರ ಹಿಂದೆ ಹೋಗುವುದಿಲ್ಲ ಎಷ್ಟೇ ಜನ ಅಂಥ ಮಕ್ಕಳು ಬರಲಿ, ಸ್ವಯಂಸೇವಾ ಸಂಸ್ಥೆಗಳೂ ನಮ್ಮ ಹತ್ತಿರ ಬರಲಿ, ಅವರಿಗೆ ನಾವು ಪ್ರೋತ್ಸಾಹ ಕೊಡಲಿಕ್ಕೆ ಗಮನ ಕೊಡುತ್ತೇನೆ

ಉಪಾಧ್ಯಕ್ಷರು ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರವನ್ನು ಕಾನೂನು ಸಚಿವರು ಮಂಡಿಸಿ

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ೨೧ ಮತ್ತು ೨೨ನೇ ಪಟ್ಟಿ

ಶ್ರೀ ಎಂ ಪಿ ಪ್ರಕಾರ್ಶ (ಗೃಹ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ದಿನಾಂಕ ೨೯ ೦೩ ೨೦೦೭ ರಂದು ೨೧ನೇ ಪಟ್ಟಿಯು ಸದನದಲ್ಲಿ ಉತ್ತರಿಸುವ ೧೫ ಪ್ರಶ್ನೆಗಳ ಪೈಕಿ ೧೪ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ ೫೯ ಪ್ರಶ್ನೆಗಳ ಪೈಕಿ ೫೦ ಉತ್ತರಗಳನ್ನು ಹಾಗು ದಿನಾಂಕ ೩೦ ೦೩ ೨೦೦೭ ರಂದು ೨೨ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ ೯೨ ಪ್ರಶ್ನೆಗಳ ಪೈಕಿ ೭೭ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

(ಅನುಬಂಧ –೬ ಮತ್ತು ಅನುಬಂಧ – ೭)

೨ ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಚಾರಗಳು

ಅ) ಕಬ್ಬು ಬೆಳೆಗಾರರಿಗೆ ಸೂಕ್ತ ಬೆಲೆ ಇಲ್ಲದೇ ತೊಂದರೆಯಾಗುತ್ತಿರುವ ಬಗ್ಗೆ

ಶ್ರೀ ಜೆ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಇಡೀ ರಾಜ್ಯದಲ್ಲಿರತ್ತಕ್ಕಂಥ ಕಬ್ಬು ಬೆಳೆಗಾರರು ಕಬ್ಬಿಗೆ ಬೆಲೆ ಇಲ್ಲ, ರೈತರು ಸಂಪೂರ್ಣವಾಗಿ ದಿವಾಳಿಯಾಗುತ್ತಿದ್ದಾಋಎ ಅವರಿಗೆ ಇವತ್ತು ಸರ್ಕಾರ, ಸಕ್ಕರೆ ಕಾರ್ಖಾನೆ ಮಾಲೀಕರು ೧೧೦೦-೦೦ ರೂ ಗಳು ಇದ್ದಂಥ ಟನ್ ಕಬ್ಬನ್ನು ಕೇವಲ ೬೦೦-೦೦ ಮತ್ತು ೭೦೦-೦೦ ರೂ ಗಳಿಗೆ ಮಾರಾಟ ಮಾಡತಕ್ಕಂಥ ಸ್ಥಿತಿ ಬಂದಿದೆ, ಆ ಪರಿಸ್ಥಿತಿಯನ್ನು ಈ ಸಕ್ಕರೆ ಕಾರ್ಖಾನೆ ಮಾಲೀಕರು ನಿರ್ಮಾಣ ಮಾಡಿದ್ದಾರೆ ಸರ್ಕಾರ ಇದರ ಮಧ್ಯೆ ಪ್ರವೇಶ ಮಾಡಬೇಕಾಗುತ್ತದೆ, ಏಕೆಂದರೆ ಒಟ್ಟು ೨೦೦ ಲಕ್ಷ ಟನ್ ಕಬ್ಬು ಕರ್ನಾಟಕದಲ್ಲಿ ಬೆಳೆದಿದ್ದಾರೆ ಈಗಾಗಲೇ ೧೪೦ ಸಾವಿರ ಟನ್ ನಷ್ಟು ಕಬ್ಬನ್ನು ಅರೆದಿದ್ದಾರೆ ಇನ್ನು ೬೦೦೦ ಲಕ್ಷ ಟನ್ ಕಬ್ಬನ್ನು ಅರೆಯಬೇಕಾಗುತ್ತದೆ ಈಗ ಸಕ್ಕರೆ ಕಾರ್ಖಾನೆ ಮಾಲೀಕರು ಏನು ಮಾಡಿದ್ದಾರೆ ೬೦೦, ೭೦೦-೦೦ ರೂ ಗಳಿಗೆ ಖರೀದಿಸುವ ಸ್ಥಿತಿಗೆ ಬಂದು ಕೆಲವು ರೈತರು ಅದನ್ನು ಗದ್ದೆಯಲ್ಲಿಯೇ ಬಿಟ್ಟುಬಿಟ್ಟಿದ್ದಾರೆ, ಏಕೆಂದರೆ ಅದನ್ನು ಕಡಿದರೆ ಸಕ್ಕರೆ ಕಾರ್ಖಾನೆ ಮಾಲೀಕರು ಅದನ್ನು ತೆಗೆದುಕೊಳ್ಳುತ್ತಿಲ್ಲ, ರೈತರು ಅದನ್ನು ಕಡಿದು ಆಲೆಮನೆ ಮಾಡಲಿಕ್ಕೆ ಹೋದರೆ ಅದಕ್ಕೆ ಕೂಲಿ ಬರುವುದಿಲ್ಲ ಹಾಗೇ ತೋಟದಲ್ಲಿ ಬಿಟ್ಟುಬಿಟ್ಟಿದ್ದಾರೆ ತುಂಬಾ ಲೇಟಾದರೆ ಆ ಕಬ್ಬಿನಲ್ಲಿ ಸಕ್ಕರೆ ಅಂಶ ಕಡಿಮೆಯಾಗುತ್ತದೆ, ರಿಕವರಿ ಲೆಸ್ ಆಗಿ ಸಂಪೂರ್ಣವಾಗಿ ನಾಶವಾಗುತ್ತದೆ, ರೈತ ಸಂಪೂರ್ಣವಾಗಿ ದಿವಾಳಿಯಾಗುತ್ತಾನೆ ಅದರ ಪ್ರಯುಕ್ತ ಮೈಸೂರು, ಮಂಡ್ಯ ಜಿಲ್ಲೆಗಳ ಕಡೆಯಿಂದ ನೂರಾರು ಜನ ರೈತರು ಬೆಲೆ ನಿರ್ಣಯ ಮಾಡಿ ಎಂದು ಧರಣಿ ಕುಳಿತಿದ್ದಾರೆ, ಅವರು ೧೩ ಬೇಡಿಕೆಗಳನ್ನು

ಸರ್ಕಾರಕ್ಕೆ ಕೊಟ್ಟಿದ್ದಾರೆ ನಾನು ಅವೆಲ್ಲವನ್ನು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ ನಾವು ಈಗ ತಮ್ಮ ಮೂಲಕ ಸರ್ಕಾರಕ್ಕೆ demand ಮಾಡುತ್ತಿರುವುದೇನೆಂದರೆ immediate ಆಗಿ ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕು, ಕಬ್ಬು ಬೆಳೆಗಾರರ ರಕ್ಷಣೆಗೆ ಬರಬೇಕು ಮತ್ತು ಕಬ್ಬನ್ನು ಸರ್ಕಾರ ಖರೀದಿ ಮಾಡಬೇಕು, ಮತ್ತೆ ಸಕ್ಕರೆ ಕಾರ್ಖಾನೆಯ ಮಾಲೀಕರನ್ನು ಕರೆದು ಅವರೊಂದಿಗೆ ಚರ್ಚೆಮಾಡಿ ಮಾಲೀಕರಿಗೆ ಹೇಳಬೇಕು , ರೈತರ ರಕ್ಷಣೆಗೆ ಬರಬೇಕು, ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕು, ಮತ್ತೆ ಸಕ್ಕರೆ ಕಾರ್ಖಾನೆಯ ಮಾಲೀಕರನ್ನು ಕರೆದು ಅವರೊಂದಿಗೆ ಚರ್ಚೆಮಾಡಿ ಮಾಲೀಕರಿಗೆ ಹೇಳಬೇಕು , ರೈತರ ರಕ್ಷಣೆಗೆ ಬರಬೇಕು, ಸರ್ಕಾರ ಮಧ್ಯೆಪ್ರವೇಶ ಮಾಡಬೇಕು ಇದು ಬಹಳ ಗಂಭೀರವಾದಂಥ ವಿಚಾರವಾಗಿದೆ ಇಡೀ ಕಬ್ಬು ಬೆಳೆಗಾರರು ಕರ್ನಾಟಕ ರಾಜ್ಯದಲ್ಲಿ ದಿವಾಳಿಯಾಗತಕ್ಕಂಥ ಸ್ಥಿತಿಗೆ ಬಂದಿದ್ದಾರೆ ಆದ್ದರಿಂದ ಸರ್ಕಾರ ಮಧ್ಯೆ ಪ್ರವೇಶಿಸಬೇಕು, ರೈತರ ಮುಖಂಡರು, ಸಕ್ಕರೆ ಕಾರ್ಖಾನೆ ಮಾಲೀಕರನ್ನು ಕರೆದು ಚರ್ಚೆ ಮಾಡಿ ಆ ಸಮಸ್ಯೆಗೆ ತಕ್ಷಣ ಪರಿಹಾರ ಹುಡುಕಬೇಕು ಎಂದು ತಮ್ಮ ಮೂಲಕ ನಾನು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ನಾವು ಹಲವಾರು ಸಾರಿ ಈ ಕಬ್ಬು ಬೆಳೆಗಾರರ ಬಗ್ಗೆ ಪ್ರಸ್ತಾಪ ಮಾಡಿದ್ದೆವು ಆಗ ಸರ್ಕಾರದಿಂದ ಉತ್ತರ ಬರಲಿಲ್ಲ ಇವತ್ತು ಪುಟ್ಟಣ್ಣಯ್ಯನವರ ನೇತೃತ್ವದಲ್ಲಿ ರೈತ ಸಂಘದವರು ಅಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ ಸರ್ಕಾರ ಇದರ ಬಗ್ಗೆ ಯಾವುದೇ ಉತ್ತರವನ್ನು ಹೇಳದೆ ಕಬ್ಬು ಬೆಳೆಗಾರರು ಏನು ಮಾಡಬೇಕು ? ಮಾನ್ಯ ರೇವಣ್ಣನವರು ಬೆಳಿಗ್ಗೆ ಹೇಳಿದ್ದರು, ಹಿಂದೆ ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಬೇರೆ ಬೇರೆ ಕಬ್ಬಿನ ಕಾರ್ಖಾನೆಗಳಿಗೆ ಕಬ್ಬನ್ನು ಕಳುಹಿಸುವಂಥ ವ್ಯವಸ್ಥೆಯನ್ನು ಮಾಡಿದ್ದರು, ಅದನ್ನಾದರೂ ಇವರು ಇವತ್ತು ಮಾಡಬಹುದಿತ್ತಲ್ಲ ಇವತ್ತು ಕಾರ್ಖಾನೆಗಳು ಹೊಸದಾಗಿ ಬರುತ್ತಿವೆ, ಆದರೆ ಕಬ್ಬುಗಳು ಹಾಗೆಯೇ ಉಳಿದುಕೊಳ್ಳುತ್ತಿವೆ ಇದ್ಯಾಕೆ ಎಂದು ಗೊತ್ತಾಗುತ್ತಿಲ್ಲ, ಕಾರ್ಖಾನೆ ಮಾಲೀಕರೆಲ್ಲಾ ಸೇರಿಕೊಂಡು ಈ

ಒಂದು ವ್ಯವಸ್ಥೆಯನ್ನು ತಂದಿಡುತ್ತಿದ್ದಾರೆ ಅವರು ಕಡಿಮೆ ಬೆಲೆಗೆ ಕಬ್ಬು ಕೊಡಲಿಕ್ಕೆ ಒತ್ತಡವನ್ನು ತರುವ ಉದ್ದೇಶವಿರಬಹುದು ಅದನ್ನು ತನಿಖೆ ಮಾಡಬೇಕು, ಈ ಕಬ್ಬನ್ನು ಅರೆಯುವ ವ್ಯವಸ್ಥೆಗೆ ಸರ್ಕಾರ ಕೂಡಲೇ ಕ್ರಮ ಕೈಗೊಂಡು ಒಂದು ಬೆಲೆಯನ್ನು ನಿಗದಿಪಡಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ

ಶ್ರೀ ಶಿವಾನಂದ ಪಾಟೀಲ್ (ತಿಕ್ಕೋಟಾ) ಅಧ್ಯಕ್ಷರೇ ಈ ಸಮಸ್ಯೆ ರಾಜ್ಯಾದ್ಯಂತವಿದದು ವಿಶೇಷವಾಗಿ ಬಿದರೆ ಮತ್ತು ಬಿಜಾಪುರದಲ್ಲಿ ಇದೆ ನಾವು ಪರಿಪರಿಯಾಗಿ ಸರ್ಕಾರಕ್ಕೆ ವಿನಂತಿ ಮಾಡಿಕೊಂಡವು ಸಕ್ಕರೆ ಕಾರ್ಖಾನೆಗಳು ಒಯ್ಯಲಿ, ಒಯ್ಯದಿದ್ದರೆ ಮಹಾರಾಷ್ಟ್ರದವರಿಗಾದರೂ insist ಮಾಡಿ ಒಯ್ಯಿಸಬೇಕಾದ ಪ್ರಯತ್ನ ಮಾಡಬೇಕು ಆದರೆ ಯಾವುದೇ ರೀತಿಯಿಂದ ಸ್ಪಂದಿಸುವಂತಹ ಪ್ರಯತ್ನವೇ ಸರ್ಕಾರದಿಂದ ಆಗುತ್ತಿಲ್ಲ ಈ ಕಡೆ BJPಯವರು ಕೂತಿದ್ದಾಗ ರಗಡು ಇದರ ಬಗ್ಗೆ ಪ್ರಸ್ತಾಪ ಮಾಡಿ ಹೋರಾಟ ಮಾಡಿದರು ಈ ಆಯವ್ಯಯದಲ್ಲಿ ಸಕ್ಕರೆ ಬೆಳೆದವರಿಗೆ ಸಕ್ಕರೆ ಕಾರ್ಖಾನೆಗಳಿಗೆ ಏನಾದರೂ ಸಹಾಯಧನ ಕೊಡಬೇಕು ಅಂತ ಪದೇ ಪದೇ ಹೇಳಿದ್ದರು ಸರ್ಕಾರವೇ ಹೇಳಿಕೊಳ್ಳುತ್ತದೆ ತಾನು ಕೃಷಿಕರ ಕಾರ್ಮಿಕರ ಪರವಿದೆ ಎಂದು ಆದರೆ ಇಂಥ ಒಂದು ಜ್ವಲಂತ ಸಮಸ್ಯೆ ಬಂದಿರುವಾಗ ಒಬ್ಬ ಸಚಿವೂ ಇದಕ್ಕೆ ಸ್ಪಂದಿಸಲು ತಯಾರಿಲ್ಲ ಎಂಬುದು ದುರ್ದೈವದ ಸಂಗತಿ ನಮ್ಮ ಬೆಲೆಯಲ್ಲಿ ಇವತ್ತು ೬ ಲಕ್ಷ ಟನ್ ಕಬ್ಬು ಹಾಗೇ ನಿಂತಿದೆ ಇದಕ್ಕೆ ಉತ್ತರಬೇಕು

ಶ್ರೀ ಬಂಡೆಪ್ಪ ಕಾಶಂಪುರ್ ಅಧ್ಯಕ್ಷರೇ, ಸರ್ಕಾರ ಸ್ಪಂದಿಸುತ್ತಿಲ್ಲವೆಂಬ ಮಾತು ಆಡಿದರು

ಶ್ರೀ J C ಮಾಧುಸ್ವಾಮಿ ಸಂಬಂಧಪಟ್ಟ ಸಚಿವರಿಲ್ಲ, ಇದನ್ನು ೬೯ಗೆ ಪರಿವರ್ತಿಸಿ ಸೋಮವಾರಕ್ಕೆ ಗತೊಂಡುಬಿಡಿ ಸಾರ್ ಮಂಡ್ಯದ ರೈತರು ಬಂದಿದ್ದಾರೆ, ಬೀದರ್ ಗೆ ಉತ್ತರವಾಗ ಬಹುದು

ಶ್ರೀ K R ರಮೇಶ್ ಕುಮಾರ್ ವಿರೋಧ ಪಕ್ಷ ನಾಯಕರು ಕೂಡ ಈ ವಿಷಯಚಲ್ಲಿ ಚರ್ಚೆಯಾಗಬೇಕೆಂದು ನೋಟಿಸ್ ತಮ್ಮ ಕಚೇರಿಗೆ ಕಳಿಸಿದ್ದಾರೆ ಮಾಧುಸ್ವಾಮಿ ಹೇಳಿದಂತೆ ಯಾವುದೇ ರೂಪದಲ್ಲಿ ಚರ್ಚೆಗೆ ತಗೊಂಡರೆ ಎಲ್ಲರೂ ಭಾಗವಹಿಸಲು ಆಗುತ್ತದೆ ದಯಮಾಡಿ ಇದನ್ನು ನಿಯಮ ೬೯ರ ಅಡಿಯಲ್ಲಿ ಅವಕಾಶ ಮಾಡಿಕೊಡಿ

ಉಪಾಧ್ಯಕರಷರು ೬೯ ಕ್ಕೆ ಇನ್ನೂ ನೋಟೀಸ್ ಬಂದಿಲ್ಲ, ನೋಟೀಸ್ ಕಳಿಸಿಕೊಡಿ

ಆ ಬಿದರ್ ಜಿಲ್ಲೆ ಹುಮ್ನಾಬಾದ್ ತಾಲ್ಲೂಕು ಸಿದ್ದಟ್ಟೈಹಳ್ಳಿ ಗ್ರಾಮದಲ್ಲಿ ರೈತನೊಬ್ಬನು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ

ಶ್ರೀ ಮೀರಾಜುದಿನ್ ಪಟೇಲ್ (ಹುಮ್ನಾಬಾದ್) ಅಧ್ಯಕ್ಷರೇ ಬೀದರ್ ಜಿಲ್ಲೆ ಹುಮ್ನಾಬಾದ್ ನನ್ನ ಕ್ಷೇತ್ರದಾಗೆ ಸಿದ್ದಟ್ನಹಳ್ಳಿ ಗ್ರಾಮದಲ್ಲಿ ೨೨ನೇ ತಾರೀಖು ಶಿವಾನಂದ ವೀರ್ ಶೆಟ್ಟಿ ಗ್ರಾದರ್ ಎಂಬ ರೈತ ಸಮಯಾನುಸಾರ factory ಯವರು ಒಯ್ಯದ ಕಾರಣ ಆತ್ಮಹತ್ಯೆ ಮಾಡಕೊಂಡಿದ್ದಾನೆ ಕರ್ನಾಟಕವಷ್ಟೇ ಅಲ್ಲ ಭಾರತ ದೇಶದಲ್ಲೇ ಇದು ಮೊದಲ ಬಾರಿ ಕಬ್ಬು ಬೆಳೆಗಾರನೊಬ್ಬ ಆತ್ಮಹತ್ಯೆ ಮಾಡಕೊಂಡಿದ್ದು, ರೈತರಿಗೆ ಮೂರು ತಿಂಗಳಾದರೂ ಕಬ್ಬು ಹಾಕಿದ್ದರೆ ಪೇಮೆಂಟ್ ಮಾಡಲಿಲ್ಲ ಅದರ ಬಗ್ಗೆ ಸಕ್ಕರೆ ಸಚಿವರು ಗೃಹಸಚಿವರು ಆಶ್ವಾಸನೆ ಕೊಟ್ಟಿದ್ದರು ೧೫ ದಿವಸದಲ್ಲಿ ಸರಿಪಡಿಸೋಣ ಅಂತ ಈಗ ೩ factory ಗಳಿಗೆ ೪೫ ಕೋಟಿ ಬಿಡುಗಡೆ ಮಾಡಿದ್ದಾರೆ ಅದಕ್ಕಾಗಿ ಮುಖ್ಯಮಂತ್ರಿ ಉಪಮುಖ್ಯಮಂತ್ರಿ ಸಕ್ಕರೆ ಸಚಿವರನ್ನು ನಾನು ಅಭಿನಂದಿಸುತ್ತೇನೆ ಈಗ ನಮ್ಮ incharge minister ಒಂದು statement ಕೊಟ್ಟಿದ್ದಾರೆ ೧ ೫೦ ಲಕ್ಷ ಟನ್ ಇನ್ನೂ ಉಳಿಯುತ್ತದೆ ಅಂತ ಅದು ಮುಂದಿನ ವರ್ಷ ಒಯ್ಯುತ್ತಾರೆ? ರೈತರು ನೂರು ಟನ್ ಕಬ್ಬು factory ಗೆ ಹಾಕಿದರು ಅಂದರೆ ಕಟಾವ್ ಮಾಡುವವರು ೧೦ ಸಾವಿರ ರೂ ಕೇಳುತ್ತಾರೆ ಲಾರಿಯವರು ೨೦೦ ರೂ ಕೇಳುತ್ತಾರೆ ಈ ರೀತಿ mis management ಆಗಿ ಹಿಂದೆ ಡಿಸೆಂಬರ್ದು ಪೆಂಡಿಂಗ್ ಇಟ್ಟು ಜನವರಿದು ಕಬ್ಬು

ಒಯ್ಯುತ್ತಿದ್ದಾಯಿಎ ಈ ಕಾರಣಕ್ಕೇ ಸಣ್ಣ ಅತಿಸಣ್ಣ ರೈತರ ೧೫೦ ಲಕ್ಷ ಟನ್ ಉಳಿದುಬಿಡುತ್ತದೆ ಎರಡನೆಯದು ಇನ್ನೂ ಜನವರಿ ತಿಂಗಳ ಕಬ್ಬೇ ಒಯ್ದಿಲ್ಲ ಇನ್ನು february ದು ಹೇಗೆ ಒಯ್ತಾರೆ ಅಂತ ಅವರಿಗೆಲ್ಲ ಭಯ ಬಂದಿದೆ ಮುಂದೆ ಏಪ್ರಿಲ್ ನಲ್ಲಿ recovery down ಆದರೆ factory ಮುಚ್ಚಿಬಿಡುತ್ತಾರೆ ಆಗ ಈಗ ಉಳಿದಿರುವ ಕಬ್ಬು ಎಲ್ಲಿಗೆ ಹೋಗಬೇಕು ? ಅದಕ್ಕೇ ಸರ್ಕಾರ ಇದರ ಬಗ್ಗೆ ಬಹಳ ಗಂಭೀರವಾಗಿ ವಿಚಾರಿಸಿ ಅವರಿಗೆ incentive ಕೊಡುವ ವ್ಯವಸ್ಥೆ ಮಾಡಿ ರೈತರ ಕಬ್ಬು ಉಳಿಯದಂತೆ ವ್ಯವಸ್ಥೆ ಮಾಡಿಕೊಡಬೇಕೆಂದು ಸರ್ಕಾರಕ್ಕೆ ಕೇಳುತ್ತೇನೆ ಮತ್ತು ಆತ್ಮಹತ್ಯೆ ಮಾಡಿಕೊಂಡಿರುವ ಶಿವಾನಂದ ವೀರಶೆಟ್ಟಿ ಗ್ರಾದರ್ ಗೆ ಪರಿಹಾರ ಕೊಡುತ್ತೇನೆ ಮತ್ತು ಆತ್ಮಹತ್ಯೆ ಮಾಡಿಕೊಂಡಿರುವ ಶಿವಾನಂದ ವೀರಶೆಟ್ಟಿ ಗ್ರಾದರ್ ಗೆ ಪರಿಹಾರ ಕೊಡುವಿದಿದ್ದರೆ ಶ್ರೀಘ್ರವಾಗಿ ಸರ್ಕಾರ ಕೊಡಬೇಕು ಸಚಿವರು ಮಾಡಿರುವ ಹೇಳಿಕೆಯಲ್ಲಿ ಅವರ ಕಬ್ಬನ್ನು ಈಗ ಕಟಾವ್ ಮಾಡಿ factory ಗೆ ಒಯ್ಯಲಾಗಿದೆ ಎಂದಿದ್ದಾರೆ ಇದೇ cutting order ಮೊದಲೇ ಕೊಟ್ಟಿದ್ದರೆ ಆ ಸಾವೇ ಆಗುತ್ತಿರಲಿಲ್ಲ ಯಾರ್‍ಯಾರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಅವರ ಕಬ್ಬು ಒಯ್ಯಬೇಕು ಅಂತ ನಿರ್ಧಾರ ಮಾಡಿದ್ದಾರೆ ಅಂತನ್ನಿಸುತ್ತದೆ ಇದು ಸರಿಯಿಲ್ಲ ಅಲ್ಲೇನು corruption ನಡೀತಿದೆ ಅದನ್ನು ಕಂಟ್ರೋಲ್ ಮಾಡಬೇಕು Sugar Director ಅಥವಾ ಸಚಿವರ ಕಚೇರಿಯಿಂದ inspection ಮಾಡಿ ಈಗೇನು ೪೫ ಕೋಟಿ ಮಂಜೂರು ಮಾಡಿದ್ದೀರಿ ಅದನ್ನು ರೈತರ ಬಾಕಿ ಹಣಕ್ಕೆ ಪಾವತಿ ಮಾಡಲು ಉಪಯೋಗಿಸಬೇಕು ಹಾಗೂ ಆತ್ಮಹತ್ಯೆ ಮಾಡಿಕೊಂಡವರ ಕುಟುಂಬಕ್ಕೆ ಏನಾದರೂ ಪರಿಹಾರ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ

ಶ್ರೀ ಗೋವಿಂದ ರಾಜೋಳ ಎಂ (ಆಹಾರ ಸಚಿವರು) ಹುಮ್ನಾಬಾದ್ ಕ್ಷೇತ್ರದಲ್ಲಿ ರೈತರೊಬ್ಬರು ಬೆಳೆದ ಕಬ್ಬಿಗೆ ಸರಿಯಾದ ಬೆಲೆ ಸಿಗದೇ ಇರುವುದರಿಂದ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ –

ಜಿಲಾಧಿಕಾರಿಗಳು, ಬೀದರ್ ರವರು ಶ್ರೀ ಶಿವಾನಂದ ವೀರಶೆಟ್ಟಿ ಬಿರಾದರ ಎಂಬ ೪೫ ವರ್ಷ ವಯಸ್ಸಿನ ಶಿರಕಟನಹಳ್ಳಿ ಗ್ರಾಮದ ನಿವಾಸಿ

೨೨ ೦೩ ೨೦೦೭ ರಂದು ಬೆಳಗ್ಗೆ ೭ ೦೦ ಘಂಟೆಗೆ ವಿಷ ಸೇವಿಸಿ ಹಿರಿಯ ಮಗಳಾದ ಕು ಚನ್ನಮ್ಮ ಇವಳ ಮದುವೆಯ ಚಿಂತೆಯಲ್ಲಿದ್ದರು ಹಾಗೂ ಈ ಕೆಳಕಂಡ ಬ್ಯಾಂಕುಗಳಿಂದ ಹಾಗೂ ಖಾಸಗಿ ವ್ಯಕ್ತಿಗಳಿಂದ ಸಾಲ ಪಡೆದಿದ್ದರೆಂದು ಗ್ರಾಮಸ್ಥರು ತಿಳಿಸಿರುವುದಾಗಿ ಜಿಲ್ಲಾಧಿಕಾರಿಯವರು ವರದಿ ಮಾಡಿರುತ್ತಾರೆ

ಕ್ರಸಂಖ್ಯೆ	ಯಾರಿಂದ ಸಾಲ ಪಡೆದಿರುವುದು	ಸಾಲದ ಮೊತ್ತ
೧	ಸಹಕಾರ ಸಂಘದ ಬ್ಯಾಂಕ್ (ಪಿಎಸ್ಎಸ್)	೭೭ ೮೨೦ ೦೦
೨	ಪಿ ಎಲ್ ಡಿ ಬ್ಯಾಂಕ್	೫೦ ೦೦೦ ೦೦
೩	ಖಾಸಗಿ ವ್ಯಕ್ತಿಗಳಿಂದ	೨ ೦೦ ೦೦೦ ೦೦

ಮೃತರು ಮಗಳ ಮದುವೆಯ ಚಿಂತೆಯಿಂದ ಹಾಗೂ ಸಾಲ ಇದ್ದುದರಿಂದ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಗ್ರಾಮಸ್ಥರು ತಿಳಿಸಿರುತ್ತಾರೆ ಎಂದು ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ

ಮೃತರು ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಶೇರುದಾರರಾಗಿದದು ೨೦೦೫-೦೬ನೇ ಸಾಲಿನಲ್ಲಿ ೦೮ ೦೩ ೨೦೦೬ ಹಾಗೂ ೧೦ ೦೩ ೨೦೦೬ ರಂದು ೧೮ ೨೧೫ ಮೆ ಟನ್ ಸರಬರಾಜು ಮಾಡಿದ ಕಬ್ಬಿಗೆ ರೂ ೨೦,೦೩೭/- ನ್ನು ಈಗಾಗಲೇ ನೀಡಲಾಗಿರುತ್ತದೆ ಪ್ರಕಸ್ತ ಸಾಲಿನಲ್ಲಿ ೧ ೩೮ ಎಕರೆ ಜಮೀನಿನಲ್ಲಿ ಕಬ್ಬನ್ನು ಬೆಳಡಸಿದ್ದು ಕಬ್ಬಿನ ಕಟಾವಣಿಯನ್ನು ಬೀದರ್ ಸಹಕಾಋ ಸಕ್ಕರೆ ಕಾರ್ಖಾನೆಯುವರು ದಿನಾಂಕ ೨೯ ೦೩ ೨೦೦೭ಕ್ಕೆ ನಿಗದಿ ಮಾಡಿದ್ದು ಕಬ್ಬು ಕಟಾವು ಅವಧಿಯಲ್ಲಿ ಯಾವುದೇ ರೀತಿಯ ವಿಳಂಬವಾಗಿರುವುದಿಲ್ಲವೆಂದು ವರದಿಯಾಗಿದೆ

ಈ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಸುಮಾರು ೨೨ ರೂ ಲಕ್ಷ ಟನ್ ಕಬ್ಬು ಉತ್ಪಾದನೆಯಾಗಿದ್ದು ಅದರ ಬಳಕ ಈ ಕೆಳಕಂಡಂತ್ತಿರುತ್ತದೆ

ಸಕ್ಕರೆ ಕಾರ್ಖಾನೆಗಳಿಗೆ	೧೮ ೦೦ ಲಕ್ಷ ಟನ್
ಬಂಡಸಾರಿಗಳಿಗೆ	೦೧ ೪೭ ಲಕ್ಷ ಟನ್

ಬೆಲ್ಲ, ಬೀಜೋತ್ಪಾದನೆ ಹಾಗೂ ಇತರೆ ಉದ್ದೇಶಗಳಿಗೆ	೦೩.೧೨ ಲಕ್ಷ ಟನ್
ಒಟ್ಟು	೨೨.೫೯ ಲಕ್ಷ ಟನ್

ಬೀದರ್ ಜಿಲ್ಲೆಯಲ್ಲಿ ಪ್ರಸಕ್ತ ವರ್ಷದಲ್ಲಿ ೧೮ ಲಕ್ಷ ಟನ್ ಕಬ್ಬು ಸುರಿಸುವ ಗುರಿ ಇದ್ದು ದಿನಾಂಕ ೧೪.೦೩.೨೦೦೭ರ ವರೆಗೆ ೧೧.೧೧ ಲಕ್ಷ ಟನ್ ಕಬ್ಬನ್ನು ಈಗಾಗಲೇ ನುರಿಸಲಾಗಿದ್ದು, ಇನ್ನೂ ೬.೮೯ ಲಕ್ಷ ಮೆ.ಟನ್ ಕಬ್ಬು ಸುರಿಸಲು ಬಾಕಿ ಇದ್ದು, ಇದನ್ನು ಸುರಿಸಲಾಗುವುದು ಇದಲ್ಲದೆ ಸಹಕಾರಿ ಕ್ಷೇತ್ರದ ಸಕ್ಕರೆ ಕಾರ್ಖಾನೆಗಳಿಗೆ ಅನುಕೂಲವಾಗುವಂತೆ ನಾರಂಜಿ ಹಾಗೂ ಮಹಾತ್ಮ ಗಾಂಧಿ ಸಕ್ಕರೆ ಕಾರ್ಖಾನೆಗಳಿಗೆ ಎಸ್.ಸಿ.ಡಿ.ಸಿ ಯಿಂದ ತಲಾ ೧೫ ಕೋಟಿಗಳಂತೆ ದುಡಿಯುವ ಬಂಡವಾಳವನ್ನೂ ಸಹಾ ಮಂಜೂರು ಮಾಡಿದ್ದು, ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ ೧೫ ಕೋಟಿ ದುಡಿಯುವ ಬಂಡವಾಳ ಮಂಜೂರು ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ

ಮೃತರ ಜಮೀನಿನಲ್ಲಿ ಬೆಳೆದ ಕಬ್ಬನ್ನು ಸರದಿಯ ಪ್ರಕಾರ ೨೯.೦೩.೨೦೦೭ರಂದು ಕಟಾವು ಮಾಡಲು ನಿಗಧಿಯಾಗಿರುತ್ತದೆ ಆದುದರಿಂದ ಕಬ್ಬು ಕಟಾವು ಅಥವಾ ಬೆಳೆದ ಕಬ್ಬಿಗೆ ಸರಿಯಾದ ಬೆಲೆ ಸಿಗದೇ ಇರುವುದೊಂದೆ ಆತ್ಮಹತ್ಯೆಗೆ ಕಾರಣವಾಗಿರುವುದಿಲ್ಲ ಮಿರಾಜುದ್ದೀನ್ ಪಟೇಲರು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ, ಕಬ್ಬು ಕಾರ್ಖಾನೆಗೆ ಕಳುಹಿಸಬೇಕಾದರೆ ಅಲ್ಲಿ ಭ್ರಷ್ಟಾಚಾರ ನಡೆಯುತ್ತದೆ, ಪಕ್ಷಪಾತ ನಡೆಯುತ್ತದೆಂಬ ಮಾತನ್ನು ಹೇಳಿದ್ದಾರೆ ಅಂತಹ ನಿರ್ದಿಷ್ಟವಾದ ಪ್ರಕರಣಗಳಿದದರೆ, ಸರ್ಕಾರ ಕೂಡಲೇ ತನಿಖೆ ಮಾಡಿಸುವ ಮೂಲಕ ಅಂತಹ ಕಾರ್ಖಾನೆಗಳ ವಿರುದ್ಧ ಕ್ರಮಗಳನ್ನು ಕೈಗೊಳ್ಳುತ್ತದೆಂದು ಹೇಳಬಯಸುತ್ತೇನೆ

ವಿಷಯ ಬೆಂಗಳೂರು ಕಚೇರಿಯಲ್ಲಿ ಬೆರಳಚ್ಚುಗಾರರು, ಕಂಪ್ಯೂಟರ್ ದಾರರನ್ನು ತೆರವು ಮಾಡಿಸುವ ಕುರಿತು –

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) – ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಲ್ಲಿರುವ ತಾಲ್ಲೂಕು ಕಚೇರಿಯಲ್ಲಿ, ಆ ತಾಲ್ಲೂಕು ಕಚೇರಿ ಪ್ರಾರಂಭವಾದ ದಿನದಿಂದಲೂ ಅಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೆರಳಚ್ಚುಗಾರರು ಮತ್ತು ಕಂಪ್ಯೂಟರ್ ಆಪರೇಟರ್ ಗಳೇನಿದ್ದಾರೆ, ಅವರೆಲ್ಲರೂ ಖಾಲಿ ಮಾಡಬೇಕೆಮದು ಜಿಲ್ಲಾಧಿಕಾರಿಗಳು ಆದೇಶ ಮಾಡಿದ್ದಾರೆಂದು ತಿಳಿದು ಬಂದಿದೆ ಈಗ ಅಲ್ಲಿರತಕ್ಕಂಥ ಜನರು ಬಹುಶಃ ಕಳೆದ ಐವತ್ತು ವರ್ಷಗಳಿಂದಲೂ ಕೆಲಸ ಮಾಡಿಕೊಂಡು ಬಂದವರಾಗಿದ್ದಾರೆ ಮತ್ತು ಈಗಾಗಲೇ ಸರ್ಕಾರ ಕೂಡ ಅವರಿಗೆ ತಿಂಗಳಿಗೆ ೩೦೦ ರೂಪಾಯಿಗಳಂತೆ ಅವರುಗಳಿಂದ ಬಾಡಿಗೆ ತೆಗೆದುಕೊಳ್ಳುತ್ತಿದ್ದಾರೆ ಇವರುಗಳಿಂದ ಸಾಕಷ್ಟು ಸೇವೆ ಆಗುತ್ತಿದೆ ಏಕೆಂದರೆ, ಆ ತಾಲ್ಲೂಕು ಕಚೇರಿಗೆ ಬರತಕ್ಕಂಥ ಅನೇಕ ಬಡ ಜನರು ಇರಬಹುದು ಅವಿದ್ಯಾವಂತರು ಇರಬಹುದು, ಅಂಗವಿಕಲರು ಇರಬಹುದು, ಅವರೆಲ್ಲರ ಅರ್ಜಿಗಳನ್ನು ಟೈಪ್ ಮಾಡತಕ್ಕಂಥಾದ್ದು, ಛಾಪಾ ಕಾಗದಗಳಿರಬಹುದು, ನಮೂನೆಗಳಿರಬಹುದು, ಎಲ್ಲ ಕೆಲಸಗಳನ್ನೂ ಅವರುಗಳು ಮಾಡುತ್ತಾರೆ ಆದರೆ ಹೊಸದಾಗಿ ಕಂದಾಯ ಭವನ ನಿರ್ಮಿಸುತ್ತಿರುವದಿಂದ ಇವರನ್ನು ಏಕಾಏಕಿ ತೆಗೆದುಹಾಕಬೇಕೆಂಬ ಒಂದು ಆದೇಶ ಮಾಡಿದ್ದಾಋಎ ಈ ರೀತಿಯಾಗಿ ಅವರುಗಳನ್ನು 'ದಿಢೀರ್' ಎಂದು ತೆಗೆದುಹಾಕಿದರೆ, ಅವರುಗಳು ಎಲ್ಲಿಗೆ ಹೋಗಬೇಕು? ಇದರಿಂದ ಅವರುಗಳು ಕಂಗಾಲಾಗಿದ್ದಾರೆ ಮತ್ತು ಹೊಸದಾಗಿ ಕಂದಾಯ ಭವನ ಬರುತ್ತಿರುವ ಜಾಗದಲ್ಲಿ, ಇಲ್ಲವೇ ಅವರುಗಳಿಗೆ ಪರ್ಯಾಯ ವ್ಯವಸ್ಥೆ ಮಾಡುವ ಪ್ರಯತ್ನ ಮಾಡಬೇಕು ಏಕೆಂದರೆ, ಅವರಿಂದ ಜನರಿಗೆ ಸಾಕಷ್ಟು ಅನುಕೂಲತೆಗಳಿವೆ ಇವತ್ತು ಅಲ್ಲಿಗೆ ಬಹಳ ದೂರದ ಪ್ರದೇಶಗಳಿಂದ ಬರುತ್ತಾರೆ ಯಾವುದೋ ಅರ್ಜಿಗಳಿರಬಹುದು, ನಮೂನಿಎಗಳಿರಬಹದುಉ, ಛಾಪಾ ಕಾಗದ ಇರಬಹುದು, ಏನೇ ಒಂದು ಟೈಪ್ ಮಾಡಿಸಿಕೊಳ್ಳಬೇಕಾದರೆ, ಇವರ ಹತ್ತಿರವೇ ಹೋಗುತ್ತಾರೆ ಮತ್ತು

ಸರ್ಕಾರಿ ಫಾರಂಗಳಲ್ಲಿ ಭರ್ತಿ ಮಾಡುವುದು ಕಷ್ಟದ ಕೆಲಸ ಇದನ್ನು ಭರ್ತಿ ಮಾಡುವುದಕ್ಕೂ ಅವರು ಸಹಾಯ ಮಾಡುತ್ತಾರೆ ಇಷ್ಟೆಲ್ಲಾ ಇರಬೇಕಾದರೆ, ನನಗೆ ಗೊತ್ತಿರುವಂತೆ ಅಲ್ಲಿ ೧೭೦ ಮಳಿಗೆಗಳಿದ್ದು, ಅವರೆಲ್ಲರೂ ಬಾಡಿಗೆ ಕಟ್ಟುತ್ತಿದ್ದಾರೆ, ಮತ್ತು ಅವರೆಲ್ಲರೂ ಬಹಳಷ್ಟು ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆ ನನ್ನ ಒತ್ತಾಯವೇನೆಂದರೆ, ದಯವಿಟ್ಟು ಅವರುಗಳಿಗೆ ತಾವು ರಕ್ಷಣೆ ಕೊಡಬೇಕು ಅವರ ಸೇವೆ ಕೂಡ ಅಗತ್ಯವಿದೆ ಹೊಸದಾಗಿ ಕಂದಾಯ ಭವನ ಆಗುತ್ತಿರುವ ಜಾಗದಲ್ಲಿ ಅವರುಗಳಿಗೆ ಸ್ಥಳಾವಕಾಶ ಮಾಡಿಕೊಡಬೇಕು ಅಲ್ಲಿಯವರೆಗೂ ಬೇರೆ ವ್ಯವಸ್ಥೆ ಒದಗಿಸಿಕೊಡಬೇಕು ಏಕೆಂದರೆ, ಈಗ ತಾವು ಹೊಸ ಕಟ್ಟಡ ಕಟ್ಟುತ್ತಿದ್ದೀರಿ, ರಕ್ಷಣೆ ಕೊಡತಕ್ಕಂಥ ಕೆಲಸವನ್ನು ತಾವು ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಅಧ್ಯಕ್ಷರೆ, stamp venders ಮತ್ತು ಇತರೆ ಮಳಿಗೆಗಳವರ ಬಗ್ಗೆ ಹೇಳುವುದಾದರೆ, ನಾವು ಹೊಸದಾಗಿ ಕಂದಾಯ ಭವನ ಕಟ್ಟುತ್ತಿದ್ದೇವೆ ಇವತ್ತು ಸದರಿ ಭವನ ಕಟ್ಟಿಸುತ್ತಿರುವ ಪರಿಸ್ಥಿತಿಯಲ್ಲಿ ಅವರುಗಳನ್ನು ಅನಿವಾರ್ಯವಾಗಿ ಬೇರೆ ಕಡೆಗೆ ಸ್ಥಳಾಂತರಿಸುತ್ತಿರುವುದು ನಡೆಯುತ್ತಿದೆ ಹಿಂದೆ ೨೦೦೬ನೇ ಇಸವಿಯಲ್ಲಿ ಕಂದಾಯ ಇಲಾಖೆಯಿಂದ ride ಮಾಡಿದಾಗ ೧೫ ಮಳಿಗೆಗಳಲ್ಲಿ ಬೋಗಸ್ ಜಾತಿ ಪ್ರಮಾಣ ಪತ್ರಗಳು, ಆದಾಯ ಪ್ರಮಾಣ ಪತ್ರಗಳು, ಇವೆಲ್ಲವೂ ಕೆಲವು ವ್ಯಕ್ತಿಗಳಲ್ಲಿ ಸಿಕ್ಕಿದವು ಅಂತಹವರ ಮೇಲೆ ಈಗಾಗಲೇ criminal cases ಹಾಕಲಾಗಿದೆ ಮತ್ತು ಉಳಿದವರೇನಿದ್ದಾರೆ, ಅವರುಗಳಿಗೆ ತೊಂದರೆಯಾಗದ ರೀತಿಯಲ್ಲಿ ಕಂದಾಯ ಭವನದ ಕೆಲಸ ಪೂರ್ಣಗೊಳ್ಳುವವರೆಗೆ ತೊಂದರೆಯಾಗದ ರೀತಿಯಲ್ಲಿ ಏನು ಕ್ರಮ ಕೈಗೊಳ್ಳಬೇಕೆಂಬುದನ್ನು ಸರ್ಕಾರದವರಾದ ನಾವು ಆಲೋಚನೆ ಮಾಡುತ್ತಿದ್ದೇವೆ ಇನ್ನೊಂದು, ಹೊಸದಾಗಿ ಕಂದಾಯ ಭವನವಾದ ನಂತರ ಪ್ರತ್ಯೇಕವಾಗಿ ಅಲ್ಲಿ ಏನು ಸ್ಥಳಾವಕಾಶ ಮಾಡಿಕೊಡಬೇಕೆನ್ನುವಂಥಾದ್ದರ ಬಗ್ಗೆಯೂ ನಾವು ಚಿಂತನೆ

ಮಾಡುತ್ತಿದ್ದೇವೆ ಈಗ ಅವರುಗಳಿಗೆ ಯಾವುದೇ ರೀತಿಯಲ್ಲೂ ತೊಂದರೆಯಾಗದಂತೆ ಸರ್ಕಾರ ನೋಡಿಕೊಂಡು ಹೋಗುತ್ತದೆ

ಶ್ರೀ ದಿನೇಶ್ ಗುಂಡೂರಾವ್ ಯಾರು ತಪ್ಪು ಮಾಡುತ್ತಿದ್ದಾರೋ, ಅವರ ವಿರುದ್ಧ ನೀವು ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಿ ಇದರ ಬಗ್ಗೆ ನಾವ್ಯಾರೂ ಕೂಡ ಶಿಫಾರಸ್ಸು ಮಾಡುವಂತಹವರಲ್ಲ, ಅದರ ಜೊತೆಗೆ ಈಗ ನೀವು ಆಶ್ವಾಸನೆ ಕೊಡಬೇಕಾಗಿರುವುದೇನೆಂದರೆ, ನಾವು ಚಿಂತನೆ ಮಾಡುತ್ತಿದ್ದೇವೆಂದು ಈಗ ನೀವು ಹೇಳಿದಿರಿ ಚಿಂತನೆ ಬೇಡ, ಏಕೆಂದರೆ ಅವರುಗಳು ಕೂಡ ಸಾಕಷ್ಟು ಅತ್ಯವಾದ ಸೇವೆಗಳನ್ನು ಮಾಡುತ್ತಿದ್ದಾರೆ ನೀವು ಆಶ್ವಾಸನೆ ಕೊಡಿ "ಮುಂದೆ ಯಾವ ಜಾಗದಲ್ಲಿ ಕಂದಾಯ ಭವನ ನಿರ್ಮಾಣ ಮಾಡುತ್ತಿದ್ದೇವೋ, ಅಲ್ಲಿ ನಿಮಗೆ ಜಾಗ ಮಾಡಿಕೊಡುತ್ತೇವೆ ಅಲ್ಲಿಯವರೆಗೆ ನಿಮಗೆಲ್ಲರಿಗೂ ಪರ್ಯಾಯ ವ್ಯವಸ್ಥೆ ಮಾಡಿಕೊಡುತ್ತೇವೆ" ಎಂದು ಮಾನ್ಯ ಸಚಿವರು ಆಶ್ವಾಸನೆ ಕೊಡಬಬಹುದು ಇದೇನೂ ದೊಡ್ಡ ವಿಚಾರವೇನಲ್ಲ ಯಾರು ತಪ್ಪು ಮಾಡುತ್ತಾರೋ, ಅವರ ವಿರುದ್ಧ ಕ್ರಮ ಕೈಗೊಳ್ಳಿ

ಶ್ರೀ ಜಗದೀಶ್ ಶೆಟ್ಟರ್ ಅಲ್ಲಿ ಜಾಗವಿಲ್ಲ ಒಂದು ಸಲ ಅಲ್ಲಿ building construction ಚಾಲೂ ಮಾಡಿದ ನಂರ ಆಗ ಏನು ಮಾಡುವುದಕ್ಕಾಗುತ್ತದೆಂದು ನೀವೇ ಹೇಳಿ ಹೀಗಾಗಿ, ಅಲ್ಲಿಯೇ ಪರ್ಯಾಯ ವ್ಯವಸ್ಥೆ ಮಾಡಬೇಕೆಂದರೆ, ಬಹಳ ತೊಂದರೆಯಾಗುತ್ತದೆ ಮತ್ತು ಅಕ್ಕಪಕ್ಕಗಳಲ್ಲಿಯೂ ಏನಾದರೂ ವ್ಯವಸ್ಥೆ

ಶ್ರೀ ದಿನೇಶ್ ಗುಂಡೂರಾವ್ ಹೊಸ ಕಂದಾಯ ಭವನ ನಿರ್ಮಾಣವಾದಾಗ ಮಾಡಿಕೊಡುತ್ತೇವೆಂದು ನೀವು ಆಶ್ವಾಸನೆ ಕೊಟ್ಟರೆ

ಶ್ರೀ ಜಗದೀಶ್ ಶೆಟ್ಟರ್ ಈಗ ಹೊಸದಾಗಿ ಕಂದಾಯ ಭವನ ಆದನಮತರ ಅವರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಿಕೊಡುತ್ತೇವೆಂದು ನಾವು ಹೇಳುತ್ತಿದ್ದೇವೆ

ಶ್ರೀ ದಿನೇಶ್ ಕುಂಡೂರಾವ್ ಆಯಿತು

ವಿಷಯ (ಉ) ಮರಗಳನ್ನು ಕಡಿಯಲು ಅಮುಮತಿಗಾಗಿ ಕಂದಾಯ ಇಲಾಖೆಯವರು ನೀಡುವ Workshıp Certıficate ಬಗ್ಗೆ

ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ರೈತರು ತಂತಮ್ಮ ಜಮೀನಿನಲ್ಲಿ ಮರಮುಟ್ಟು ಬೆಳೆದಿರುತ್ತಾರೆ ಕೆಲವರು ಅಕೇಶಿಯಾ ಹಾಗೂ ಮರಮುಟ್ಟು ಬೆಳೆಸಿರುತ್ತಾರೆ ಅದರ cuttıng permıssıonಗೆ ಗೆ Forest Department ಹೋಗಬೇಕು ಆದರೆ, Forest Department ನವರು cuttıng ಗೆ permıssıon ಕೊಡುವುದಕ್ಕೆ Revenue Department ನವರು Ownershıp Certıficate ಕೊಡಬೇಕು ನಮ್ಮ ಜಇಲ್ಲಾಧಿಕಾರಿಗಳು Ownershıp Certıficate ಕೊಡಬಾರದೆಂದು ಎಲ್ಲರಿಗೂ ಆದೇಶ ಮಾಡಿದ್ದಾರಂತೆ Cuttıng permıssıon ಕೊಡುವುದು ಬಿಡುವುದು Foıest Department ಆದರೆ Owner ಹೌದೋ ಅಲ್ಲವೋ ಎಂದು ಇವರು certıficate ಕೊಡದೇ ಇರುವಂಥದ್ದು ತಪ್ಪಾಗುತ್ತದೆ ಅದಕ್ಕೋಸ್ಕರ, ಮಾನ್ಯ ಕಂದಾಯ ಸಚಿವರನ್ನು ಕೇಳಿಕೊಳ್ಳುತ್ತೇನೆ ತಾವು ಆದೇಶ ಮಾಡಿಸಬೇಕು Ownershıp Certıficate ಕೊಡಲಿ, ಉಳಿದಿದ್ದರ ಬಗ್ಗೆ • ತೀರ್ಮಾನ ತೆಗೆದುಕೊಳ್ಳಲಿ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಜಯಪ್ರಕಾಶ್ ಹೆಗ್ಡೆಯವರು ಏನು ವಿಷಯ ಪ್ರಸ್ತಾಪಿಸಿದ್ದಾರೆ, ಅದರಲ್ಲಿ ಉಡುಪಿ ಜಿಲ್ಲೆಯಲ್ಲಿ ಖಾಸಗಿ ಜಮೀನಿನಲ್ಲಿರುವ ಮರ-ಮುಟ್ಟುಗಳ ಒಡೆತನದ ಬಗ್ಗೆ ಮಾಲೀಕರುಗಳಿಎ ಕಂದಾಯ ಇಲಾಖೆಯವರು Non Objectıon Certıficate ಕೊಡುವ ಬಗ್ಗೆ ನನಗನಿಸುವ ಮಟ್ಟಿಗೆ ಇದಕ್ಕೇನೂ ತೊಂದರೆಯಿಲ್ಲ ಏಕೆಂದರೆ,

ಅವರುಗಳಿಗೆ ಮಾಲೀಕತ್ವದ ಹಕ್ಕು ಇದ್ದಾಗ ಅವರು ಮಾಲೀಕರು ಎಂಬುದನ್ನು ಹೇಳುವುದಕ್ಕೆ ಬಹುಶಃ ಅದನ್ನು Forest Departmentನವರೇ ಅವರ ಕಡೆಯಿಂದ ಮಾಲೀಕತ್ವದ ಹಕ್ಕಿನ ಬಗ್ಗೆ verify ಮಾಡಕೊಡಬಹುದಾಗಿತ್ತು ಕಂದಾಯ ಇಲಾಖೆಯಿಂದ verify ಮಾಡಿಸಿಕೊಂಡು Non Objection Certificate ತೆಗೆದುಕೊಂಡು ಬರಬೇಕೆಂದು ಹೇಳುವಂಥಾದ್ದು ಮತ್ತು ಜಿಲ್ಲಾಧಿಕಾರಿಗಳು ಅದನ್ನು deny ಮಾಡುತ್ತಿದ್ದಾರೆಂದು ಹೇಳುತತಿದ್ದಾರೆ ಹಾಗಾದರೆ, ಜಿಲ್ಲಾಧಿಕಾರಿಗಳೂ ನಾವು ಸೂಚನೆ ಕೊಡುತ್ತೇವೆ ಆ ರೀತಿ NOC ಕೊಡಬೇಕೆಂಬ ಸೂಚನೆಯನ್ನು ನಾವು ಕೊಡುತ್ತೇವೆ

ವಿಷಯ (ಈ) ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಸುಮಾರು ೮೫ ದಿನಗೂಲಿ ನೌಕರನ್ನು ದಿನಾಂಕ ೧೨-೧೨-೨೦೦೬ ರಂದು ಏಕಾಮೇಕಿ ಕೆಲಸದಿಂದ ತೆಗೆದುಹಾಕಿರುವ ಬಗ್ಗೆ

ಶ್ರೀ ಕೆ ಶ್ರೀನಿವಾಸ ಗೌಡ ಮಾನ್ಯ ಅಧ್ಯಕ್ಷರೇ, ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಸುಮಾರು ೮೫ ಜನರು ೧೬ ವರ್ಷಗಳಿಂದ daily wages ನಲ್ಲಿ ಕೆಲಸ ಮಾಡುತ್ತಿದ್ದರು ಅವರೆಲ್ಲರೂ ಕನ್ನಡಿಗರು ಅವರುಗಳನ್ನು ದಿನಾಂಕ ೧೨-೧೨-೨೦೦೬ರಲ್ಲಿ ಏಕಾಏಕಿ ಕಿತ್ತು ಹಾಕಿ ಅವರ ಜಾಗಗಳಿಗೆ ಕೇರಳದವರನ್ನು appointment ಮಾಡಿದ್ದಾರೆ ಇದು ಅಲ್ಲಿನ ೮೫ ಜನರಿಗೆ, ಅವರುಗಳಿಗೆ ಯಾವುದೇ ವಿಧವಾಗಿ ಬೋನಸ್ ಕೊಡುವುದಾಗಿರಬಹುದು, ಅಥವಾ ಅವರುಗಳಿಗೆ ಏನೇನು ಕೊಡಬೇಕೋ, ಅದನ್ನೂ ಕೊಡದೇ, ರಾತ್ರೋರಾತ್ರಿ ಅವರುಗಳನ್ನು ಮನೆಗೆ ಕಳುಹಿಸಿದ್ದಾರೆ ಇವರುಗಳೆಲ್ಲರೂ ಕನ್ನಡಿಗರಾಗಿ ಇಲ್ಲಿಯರೇ ಆಗಿದ್ದು ನಮ್ಮ ರಾಜ್ಯದವರೇ ಆಗಿರುವುದರಿಂದ ಈಗ ೮೫ ಜನರೂ ಅಲ್ಲಿ ೧೬ ವರ್ಷಗಳಿಂದ ಸೇವೆ ಸಲ್ಲಿಸಿದ್ದು, ಕೇವಲ ನಂತರ ಅವರನ್ನು ಕಿತ್ತು ಹಾಕಿದ್ದಾರೆ, ಅವರ ಪಾಡಿಗೆ ಅವರು ನೋಡಿಕೊಳ್ಳುತ್ತಿದ್ದರು ಅವರೆಲ್ಲರೂ ಕನ್ನಡಿಗರೇ ಆಗಿದ್ದಾರೆ ಅವರುಗಳನ್ನು ಮತ್ತೆ ಮರು ನೇಮಕ ಮಾಡಿಕೊಂಡು permanent ಮಾಡುವಂತೆ ನಮ್ಮ ಸರ್ಕಾರ ಅವರ ಮೇಲೆ ಒತ್ತಡ ಹೇರಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ By chance, ಕೋರ್ಟ್‌ಗೆ ಹೋಗಬೇಕಾದರೆ, ನಮ್ಮ ಕಾರ್ಮಿಕ ಮಂತ್ರಿಗಳೇ ಅದಕ್ಕೆ ಅರ್ಜಿ ಹಾಕಲಿ ಪಾಪ! ಅವರೆಲ್ಲರೂ labourers ಅವರುಗಳಿಗೆ ಅಷ್ಟು ತಿಳುವಳಿಕೆ ಇಲ್ಲ ಆ ತಿಳಿವಳಿಕೆ ಇಲ್ಲದೇ ಇರುವುದರಿಂದ ಸರ್ಕಾರವೇ ಯಾವ ಕೋರ್ಟಿಗೆ ಹೋಗಬೇಕೋ ಹೋಗಲಿ, ನೀವು ಕೊಟ್ಟಿರುವ ಉತ್ತರವನ್ನು ಓದಿದ ಮೇಲೆ ಮತ್ತೆ ತಮ್ಮನ್ನು ಕೇಳುತ್ತೇನೆ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ, ಮತು ???????????????//??????? ಕೈಗಾರಿಕಾ ವಿವಾದ ಕಾಯ್ದಕಯ ಸೆಕ್ಷನ್ ೨(ಎ) ರಡಿಯಲ್ಲಿ ಶ್ಯಾಖ್ಯಾನಿಸುವಂತೆ ಕೇಂದ್ರ ಸರ್ಕಾರವು " ನಕ್ಷಮ ಸರ್ಕಾರ" ಆಗಿರುತ್ತದೆ ಸದರಿ ಸಂಸ್ಥೆಯ ಬಗ್ಗೆ ಯಾವುದೇ ಕೈಗಾರಿಕಾ ವಿಚಾರಗಳು ಉದ್ಭವವಾದಲ್ಲಿ ಅಂತಹ ವಿವಾದಗಳನ್ನು ಉದ್ಭವವಾದಲ್ಲಿ ಅಂತಹ ವಿವಾದಗಳನ್ನು ಕುಂತು ಸಂಧಾನ ವಿಚಾರಣೆ ನಡೆಸುವ ಅಧಿಕಾರ ಕೇಂದ್ರ ಸರ್ಕಾರದ ಕಾರ್ಮಿಕ ಇಲಾಖೆಗೆ ಇರುತ್ತದೆ

ಹಾಗೆಯೇ ಗುತ್ತಿಗೆ ಕಾರ್ಮಿಕ (ರದ್ಧತಿ ಮತ್ತು ನಿಯಂತ್ರಣ) ಕಾಯ್ದಕೆಯ ಸೆಕ್ಷನ್ ೨(೧)(ಎ)ರಡಿಯಲ್ಲಿ ವ್ಯಾಖ್ಯಾನಿಸಿರುವಂತೆ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವು ಈ ಸಂಸ್ಥೆಗೆ ಮತ್ತು ಇಂಡಿಯನ್ ಏರ್ ಲೈನ್ಸ್ ಗೆ ಸರ್ಕಾರವು ಸಕ್ಷಮ ಸರ್ಕಾರ ಆಗಿರುತ್ತದೆ ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಗುತ್ತಿಗೆ ಕಾರ್ಮಿಕರ ಬಗ್ಗೆ ವಿಚಾರಣೆ ಮಾಡುವ ಅಧಿಕಾಋ ಕೂಡ ಕೇಂದ್ರ ಸರ್ಕಾರದ ಕಾರ್ಮಿಕ ಇಲಾಖೆಗೆ ಇರುತ್ತದೆ

ಬೆಂಗಳೂರು ವಿಮಾನ ನಿಲ್ದಾಣದಲ್ಲಿ ೩೫ ಕನ್ನಡಿಗ ದಿನಗೂಲಿ ನೌಕರರನ್ನು ದಿನಾಂಕ ೧೨-೧೨-೨೦೦೬ ರಂಗು ಏಕಾ ಏಕಿ ಕೆಲಸದಿಂದ ತೆಗೆದುಹಾಕಿರುವ ಬಗ್ಗೆ ಬೆಂಗಳೂರಿನಲ್ಲಿರುವ ಕೇಂದ್ರ ಸರ್ಕಾರದ ಕಾರ್ಮಿ ಇಲಾಖೆಯ ಅಧಿಕಾರಿಯವರು ಈ ಕಾರ್ಮಿಕರ ವಿವಾದದ ಬಗ್ಗೆ ಇಲ್ಲಿಯವರೆವಿಗೂ ಯಾವ ಕಾರ್ಮಿಕನರೂ ಕೂಡ ಮನವಿಗಳನ್ನು ಅವರ ಕಚೇರಿಗೆ ಸಲ್ಲಿಸಿಲ್ಲೆಂಬುದಾಗಿ ಮೌನವಾಗಿ ತಿಳಿಸಿರುತ್ತಾರೆ

* ೧೧೧ ಜನ ದಂಗಾಮಿ ಕಾರ್ಮಿಕರನ್ನು ಸಂಸ್ಥೆಯ ಗ್ರೌಂಡ್ ಹ್ಯಾಂಡ್ಲೀಗ್ ಆಕ್ಟಿವಿಟಿ

ಸಲುವಾಗಿ ಅಂದರೆ ವಿಮಾನದಲ್ಲಿ ಪ್ರಯಾಣಿಕರ ಲಗೇಜನ್ನು ಲೋಡಿಂಗ್, ಅನ್ ಲೋಡಿಂಗ್ ಕೆಲಸಕ್ಕೆ ನೇಮಕ ಮಾಡಿಕೊಳ್ಳಲಾಗಿತ್ತು

* ಸಂಸ್ಥೆಯ ಇತ್ತೀಚಿನ ನೀತಿಯಿಂದಾಗಿ ನಾನ್ ಕೋರ್ ಸ್ವರೂಪದ ಕೆಲಸಗಳನ್ನು ಹೊರಗುತ್ತಿಗೆ ಮಾಡಲು ನಿರ್ಧರಿಸಿದ್ದರಿಂದ ದಿನಾಂಕ ೧೨ ೧೨-೨೦೦೬ ರಿಂದ ಈ ಕೆಲಸವನ್ನು ಮೆ ಅಂಬಿಯನ್ಸ್ ಅಸೋಸಿಯೇಟ್ಸ್, ನಂ ೮೪ ನಂಜಪ್ಪ ಲೇಔಟ್, ವಿದ್ಯಾರಣ್ಯ ಪುರ, ಬೆಂಗಳೂರು – ೯೭ ಎಂಬ ಗುತ್ತಿಗೆದಾರುಗೆ ನೀಡಲಾಗಿದೆ ಈ ಗುತ್ತಿಗೆದಾರರು ಈಗ ಬೇರೆ ೫೦ ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಂಡು ಕೆಲಸ ಮಾಡಿಸುತ್ತಿದ್ದಾರೆ

* ಬಂಗಾಮಿ ಕಾರ್ಮಿಕರಾದ ಶ್ರೀ ರಮೇಶ್ ಮತ್ತು ಇತರೆ ೧೧೦ ಕಾರ್ಮಿಕರು ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಚ್ ಅರ್ಜಿ ಸಂ ೩೬೩೯೫ ೫೦೫ ೨೦೦೪, ದಿನಾಂಕ ೩೧-೦೮-೨೦೦೪ ರಲ್ಲಿ ಸಲ್ಲಿಸಿದ್ದು, ಅವರನ್ನು ಇಂಡಿಯನ್ ಏರ್ ಲೈನ್ಸ್, ಬೆಂಗಳೂರು ಈ ಸಂಸ್ಥೆಯಲ್ಲಿ ಖಾಯಂದ ನೌಕರರನ್ನಾಗಿ ನೇಮಿಸಿಕೊಳ್ಳಲು ಆದೇಶಕ್ಕಾಗಿ ಕೋರಿರುತ್ತಾರೆ

ಶ್ರೀ ಕೆ ಶ್ರೀನಿವಾಸ ಗೌಡ ಮಾನ್ಯ ಉಪಾಧ್ಯಕರಷರೆ, ನಾನು ಹೇಳುವುದೇನೆಂದರೆ, ಅವರೆಲ್ಲರೂ ಕನ್ನಡಿಗರೇ ಆಗಿದ್ದಾಋುಎ ಬೇರೆ ರಾಜ್ಯದಿಂದ ಇಲ್ಲಿಗೆ ಕರೆದುಕೊಂಡು ಬಂದು ಅವರನ್ನು ಹಂಗಾಮಿಯಾಗಿ ತೆಗೆದುಕೊಳ್ಳತಕ್ಕಂಥ ಅಗತ್ಯವೇನಿತುತ ? ಆ ತರಹ ಅವರೇನಾದರೂ

outsource ಮಾಡಿದ್ದರೆ ಇದೇ ನೌಕರರನ್ನು ತೆಗೆದುಕೊಂಡು ಕೆಲಸ ಮಾಡಿಸಲಿ ಇತ್ತೀಚೆಗೆ ಬೆಂಗಳೂರು ಕನ್ನಡಿಗರ, ರಾಜ್ಯದ ಕೇಂದ್ರ ಸ್ಥಾನ ಎಂಬುದರ ಬಗ್ಗೆ ನಮಗೆ ಅನುಮಾನಗಳು ಬರುತ್ತಿವೆ ಮೊದಲೆಲ್ಲಾ ತಮಿಳಿಯನ್ಸ್ ಬಹಳಷ್ಟು ಜನ ಇಲ್ಲಿಬೆ ಬಂದರು ಈಗ ಬಿಹಾರದವರು ಒರಿಸ್ಸಾದವರು ಮತ್ತು ಕೇರಳದವರೂ ಸಹ ಬರುತ್ತಿದ್ದಾರೆ ಈ ತರಹ ಆಗುತ್ತಿದ್ದ್ವಎ, ಈ ಬೆಂಗಳೂರನ್ನು ಕನ್ನಡಿಗರ ರಾಜಧಾನಿ ಎಂದು ಹೇಳುಬೇಕೇ ಅಥವಾ ಬೇರೆ ಇನ್ನಾವುದಾದರೂ ರಾಜ್ಯದ ರಾಜಧಾನಿ ಎಂದು ಹೇಳಬೇಕೆ? ನನ್ನ ಸಲಹೆ ಏನೆಂದರೆ, ಸರ್ಕಾರವೇ ಈ ವಿಚಾರದಲ್ಲಿ ಕೋರ್ಟ್ ಅಥವಾ ಉಚ್ಚ ನ್ಯಾಯಾಲಯಕ್ಕೆ ಹೋಗುವಂತಹ ಕೆಲಸವಾಗಬೇಕು ನಮ್ಮ ಕನ್ನಡಿಗರ ಹೋರಾಟವನ್ನು, ಅವರ ಹಕ್ಕುಗಳನ್ನು ಸಾಧಿಸಲಿಕೆಕ ಸರ್ಕಾರವೇ ಕೋಟ್ ್ಗೆ ಹೋಗುವಂತಹ ಕೆಲಸವಾಗಬೇಕು ಯಾವುದಾದರೂ ಒಳ್ಳೆಯ ಸರಿಯಾದಂತಹ ವಕೀಲರನ್ನು ಇಟ್ಟು, ಕೇಸ್ ಹಾಕಿ ನೀವೇ ಅದನ್ನು ನಡೆಸಬೇಕೆಂದು ನಾನು ಕೋರುತ್ತೇನೆ ಈ ವಿಚಾರವನ್ನು ಶೂನ್ಯ ವೇಳೆಯಲ್ಲಿ ನಾನು ಪ್ರಸ್ತಾಪ ಮಾಡಿರುವುದರಿಂದ, ನನಗೆ ಇದರಡಿ ಹೆಚ್ಚಿಗೆ ಮಾತನಾಡಲಿಕ್ಕೆ ಅವಕಾಶವಿಲ್ಲದೆಂದು ಗೊತ್ತಿದ್ದರೂ ಕುಡ, ಕನ್ನಡಿಗರಿಗೆ ಇಲ್ಲಿ ಅನ್ಯಾಯವಾಗಿರುವುದರಿಂದ ನಾನು ಇದರ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲಲಿಕ್ಕೆ ಇಷ್ಟಪಡುತ್ತೇನೆ

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶ್ರೀನಿವಾಸಗೌಡರು ಕೆಲವೊಂದು ವಿಷಯಗಳನ್ನು ಹೇಳಿದ್ದಾರೆ ಅದರ ಬಗ್ಗೆ ಹೇಳುವುದಾದರೆ, ಈ ವಿಚಾರ ಇಂಡಿಯನ್ ಏರ್ಲೈನ್ಸ್ ಮತ್ತು ಭಾರತೀಯ ವಿಮಾನ ನಿಲ್ದಾಣ ಪ್ರಧಿಕಾಋದ ವ್ಯಪ್ತಿಗೆ ಬರುತ್ತದೆ ಅವರು ಇದರ ಉಸ್ತುವಾರಿ ನೋಡಿಕೊಳ್ಳುತ್ತಾರೆ ಈಗಾಗಲೇ ಅವರು ಮೆಃ ಅಂಬಿಯನ್ಸ್ ಅಸೋಸಿಯೇಟ್ಸ್ ಎಂಬ ಬೇರೊಂದು ಏಜೆನ್ಸಿಗೆ ಕೊಟ್ಟಿದ್ದಾರೆ ಕೆಲವರು ಈ ವಿಚಾರವಾಗಿ ಕೋರ್ಟ್ ಗೆ ಹೋಗಿ injunction ಅನ್ನು ತೆಗೆದುಕೊಂಡಿದ್ದಾರೆ ಇಲ್ಲಿ ಈ ತರಹದ ಸಮಸ್ಯೆಗಳಿವೆ ಗುತ್ತಿಗೆ ಆಧಾರದ ಮೇಲೆ ಅಲ್ಲಿ ಕನ್ನಡಿಗರು ಏನು ಕೆಲಸ ಮಾಡುತ್ತಿದ್ದಾರೋ, ಅವರಿಗೆ ಏನೊಂದು ರಕ್ಷಣೆಯನ್ನು ಕೊಡಬೇಕೋ, ಆ ಬಗ್ಗೆ ರಾಜ್ಯ ಸರ್ಕಾರ

ಕೇಂದ್ರ ಸರ್ಕಾರದ ಮೇಲೆ ಹಾಗೂ ಸಂಬಂಧಪಟ್ಟಂತಹ ಪ್ರಾಧಿಕಾರದ ಮೇಲೆ ಒತ್ತಾಯ ತರುವಂತಹ ಕೆಲಸವನ್ನು ಮಾಡುತ್ತದೆ

ಉಪಾಧ್ಯಕ್ಷರು ಮುಂದಿನ ವಿಷಯಗಳನ್ನು ಪ್ರಸ್ತಾಪಿಸಬೇಕಾದ ಮಾನ್ಯ ಸದಸ್ಯರುಗಳಾದ ಗೋಪಾಲಕೃಷ್ಣ ಬೇಳೂರು ಮತ್ತು ಮಾನ್ಯ ಸುನಿಲ್ ಕುಮಾರ್ ರವರು ಸದನದಲ್ಲಿ ಕಾಣುತ್ತಿಲ್ಲ ಆದ್ದರಿಂದ ಈಗ ಮಾನ್ಯ ರಮೇಶ್ ಕುಮಾರ್ ರವರ ವಿಚಾರ ತೆಗೆದುಕೊಳ್ಳೋಣ

ಊ] **ವಿಷಯ "ಸುವರ್ಣ ಗ್ರಾಮ" ಯೋಜನೆ ಅಡಿ ಗ್ರಾಮಗಳನ್ನು ಆಯ್ಕೆ ಮಾಡಿ ಹೊರಡಿಸಲಾದ ಪಟ್ಟಿಯಿಂದ ಮೂರು ಗ್ರಾಮಗಳನ್ನು ಕೈಬಿಟ್ಟು, ಹೊಸದಾಗಿ ಮೂರು ಗ್ರಮಗಳನ್ನು ಸೇರಿಸಿರುವ ಬಗ್ಗೆ**

ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ) ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಧ ಉದಾಸಿಯವರು ಸದನದಲ್ಲಿ ಇರಬೇಕಾಗಿತ್ತು ಈ ವಇಚಾರ ಅವರ ಇಲಾಖೆಎ ಸಂಬಂಧಿಸಿದೆ ನನ್ನ ಮತಕ್ಷೇತ್ರದಲ್ಲಿ ಸುವರ್ಣ ಗ್ರಾಮಗಳ ಪಟ್ಟಿಯೊಂದನ್ನೇನು ಸರ್ಕಾರ ಅಧಿಕೃತವಾಗಿ ಹೊರಡಿಸಿತ್ತೋ, ಅದನ್ನು ಇಲ್ಲಿ ಆಸ್ವಾಸನೆ ಕೊಟ್ಟಧ ಮೇಲೆ, ಮತ್ತೆ ಮೊನ್ನೆ ಮೂರು ಗ್ರಾಮಗಳನ್ನು ಪಟ್ಟಿಯಿಂದ ಬದಲಾಯಿಸಿದ್ದಾರೆ

ಉಪಾಧ್ಯಕ್ಷರು ಮಾನ್ಯ ಧರ್ಮಸಿಂಗ್ ರವರು, ಮಾನ್ಯ ರಮೇಶ್ ಕುಮಾರ್ ರವರು, ಮಾನ್ಯ ಸಿದ್ದರಾಮಯ್ಯನವರು, ಮಾನ್ಯ ಡಿ ಕೆ ಶಿವಕುಮಾರ್ ರವರು ಮತ್ತು ಮಾನ್ಯ ಖರ್ಗೆಯವರು ದಕ್ಷಿಣ ಕನ್ನಡ ಜಿಲ್ಲೆಯ ಜೆ ಡಿ (ಎಸ್) ಮುಖಂಡರಾಗಿದ್ದ ವಸಂತ ಬಂಗೇರಾ ಅವರು ಅಬ್ಕಾರಿ ಬಗ್ಗೆ ನೀಡಿದ ಹೇಳಿಕೆ ಬಗ್ಗೆ ಚರ್ಚಿಸಲು ಸೂಚನೆ ಕೊಟ್ಟಿದ್ದೀರಿ

ಶ್ರೀ ಕೆ/ಆರ್ ರಮೇಶ್ ಕುಮಾಖ ಹೌದು, ನೋಟೀಸ್ ಕೊಟ್ಟಿದ್ದೇವೆ ಅದನ್ನು ನಾಳೆ ತೆಗೆದುಕೊಳ್ಳೋಣ ಅವರು ಇದದಾಗ ತೆಗೆದುಕೊಳ್ಳೋಣ

ಉಪಾಧ್ಯಕ್ಷರು ಆಯಿತು

ಶ್ರೀ ಕೆ ಆರ್ ರಮೇಶ್ ಕುಮಾರ್ ಈಗ ನನ್ನ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೇಳುತ್ತಿದ್ದೇನೆ

ಉಪಾಧ್ಯಕ್ಷರು ಆಯಿತು ಕೇಳಿ

ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ) ಈ ಬಗ್ಗೆ ಉತ್ತರಿಸಲು ಮಾನ್ಯ ಉದಾಸಿಯವರನ್ನು ಕರಿಸಿದರೆ ಒಳ್ಳೆಯದು ಮಾನ್ಯ ಪ್ರಕಾಶ್ರ ರವರು ಈಗಾಗಲೇ ಇಲಲಿ ಇದ್ದಾರೆ, ಆದ್ದರಿಂದ ನಾನು ಪ್ರಸ್ತಾಪಿಸುತ್ತಿದ್ದೇನೆ ಮಾನ್ಯ ಉದಾಸಿಯವರು ಮೊದಲು ಅವರ ಇಲಾಖೆಯಿಂದ ೬ ಗ್ರಾಮಗಳನ್ನು ಸೆಲೆಕ್ಟ್ ಮಾಡಿ ಆವುಗಳ ಪಟ್ಟಿಯೊಂದನ್ನು ಹೊರಡಿಸಿದ್ದರು ಆ ೬ ಗ್ರಾಮಗಳಲ್ಲಿ 'ಜನರೆಲ್ಲಾ ಹೋಗಿ ಪೂಜೆ ಮಾಡಿ, ಕೆಲಸಗಳನ್ನು ಶುರು ಮಾಡಿದ್ದಾರೆ ಇದ್ದಕ್ಕಿದ್ದ ಹಾಘೆ ಮೊನ್ನೆ ಮತ್ತೊಂದು Notification ಹೊರಡಿಸಿ, ಅದರಲ್ಲಿ ಮೊದಲಿದ್ದ ಗ್ರಾಮಗಳಲ್ಲಿ ಮೂರನ್ನು ತೆಗೆದು ಬೇರೆ ಮೂರು ಗ್ರಾಮಗಳನ್ನು ಸೇರಿಸಿದ್ದಾರೆ ಅವತ್ತು ಈ ವಿಚಾರದ ಬಗ್ಗೆ ಮಾನ್ಯ ಗುರುಪಾದಪ್ಪ ನಾಗವಾರಪಲ್ಲಿಯವರು ಪ್ರಸ್ತಾಪಿಸಿದಾಗ ನಾವೆಲ್ಲಾ ಆನ್ಯ ಸಭಾಧ್ಯಕ್ಷರ ಕೊರಡಿಯಲಿ ಸೇರಿ, ಇಲ್ಲಿಗೆ ಬಂದು ಹೇಳಿಕೆ ಮಾಡಿದ ಮೇಲೆ ಈ ರೀತಿ ಆಗಿದೆ ಮಾನ್ಯ ಉದಾಸಿಯವರಲ್ಲಿ ಕೇಳಿದೆ ಅದು ನನ್ನ ಗಮನಕ್ಕೆ ಬಂದಿಲ್ಲ ಬಹುಶಃ ಮಾನ್ಯ ಮುಖ್ಯಮಂತ್ರಿಗಳೇನಾದರೂ ಅದನ್ನು ಮಾಡಿದ್ದಾರೋ, ಏನೋ, ನನಗೆ ಗೊತ್ತಿಲ್ಲವೆಂದು ಅವರು ಹೇಳಿದರು ಇದನ್ನೇನು ದೊಡ್ಡ ವಿಷಯ ಮಾಡುವುದು ನನಗೆ ಇಷ್ಟವಿಲ್ಲ ಆ ರೀತಿ ಹೊಸದಾಗಿ ಸೇರಿಸಿದ ಮೂರು ಗ್ರಮಗಳನ್ನು ಪಟ್ಟಿಯಿಂದ ತವಗೆಯಿರಿ ಎಂದು ನಾನು ನಿಮಗೆ ಹೇಳುವುದಕ್ಕಾಗುವುದಿಲ್ಲ ಅದರಿಂದ ನನಗೆ ಕೆಟ್ಟ ಹೆಸರು ಬರುತ್ತದೆ ಅವರೂ ನನ್ನ ಗ್ರಾಮಗಳೇ, ಅವುಗಳನ್ನು ಹೆಚ್ಚುವರಿಯಾಗಿ ಪರಿಗಣನೆ ಮಾಡಬೇಕಾಗುತ್ತದೆ, ಅವುಗಳ ಹೆಸರನ್ನು ಪಟ್ಟಯಿಬಂದ ತೆಗೆಯುವುದಕ್ಕಂತೂ ಆಗುವುದಿಲ್ಲ ನಿನ್ನೆಯಿಂದ

ಯಾವುದು ಆ ಮೂರು ಗ್ರಾಮಗಳು ತೆಗೆದಿದ್ದೇವೆ ಎಂದು Notification ಹೊರಡಿಸಿದ್ದಾರೋ, ಆ ಗ್ರಾಮಗಳ ಜನರು ಅಲ್ಲಿ ಉಪವಾಸ ಕುಳಿತಿದ್ದಾರೆ ಸುಮ್ಮನೆ ಈ ರೀತಿ ಸಮಸ್ಯೆಗಳನ್ನು ಹುಟ್ಟಿ ಹಾಕಿದರೆ, ಅವುಗಳನ್ನು ನಾವು ಹೇಗೆ ನಿಭಾಯಿಸಬೆಕು? This is uncalled for If they wanted three villages, they could have added to the villages list ನಮಗೇನೂ ಅದಕ್ಕೆ ಆಕ್ಷೇಪಣೆ ಇಲ್ಲ ಹತ್ತು ವಿಲೇಜ್ ಕೊಟ್ಟರೂ ಸಹ ನಮಗೆ ಖುಷಿಯಾಗುತ್ತದೆ ಆ ಗ್ರಾಮಗಳಲ್ಲಿ ಕೆಲಸ ಶುರು ಮಾಡಿದ ಮೇಲೆ, ಪಟ್ಟಿಯಿಂದ ಅವುಗಳ ಹೆಸರುಗಳನ್ನು ತೆಗೆದರೆ ಹೇಗೆ ? ಮಾನ್ಯ ಉದಾಸಿಯವರು ನಿನ್ನೆ ನನ್ನನ್ನು ಹುಡುಕಿಕೊಂಡು ಬಂದು ಆ ಬಗ್ಗೆ ಹೇಳಿದರು ಆ ಗ್ರಾಮಗಳನ್ನು ಹಎಚ್ಚುವರಿಯಾಗಿ ತೆಗೆದುಕೊಳ್ಳುತ್ತೇನೆ ಎಂದು ಅವರು ನನಗೆ ಹೇಳಿದರು ಆದರೆ ನಾನು ಬೆಳಿಗ್ಗೆಯಿಂದ try ಮಾಡುತ್ತಿದ್ದೇನೆ ಅವರ officers ಯಾರೂ ನನಗೆ ಸಿಗುತ್ತಿಲ್ಲ, Notification ಕೂಡ ಇನ್ನೂ ಹೊರಡಿಸಿಲ್ಲ ಪುನಃ ಅದನ್ನು ದೊಡ್ಡ ವಿಷಯವನ್ನಾಗಿ ತೆಗೆದುಕೊಂಡು ಗದ್ದಲ ಮಾಡಿ, unpleasant situation create ಮಾಡುವುದರ ಬದಲು, ಮಾನ್ಯ ಪ್ರಕಾಶ್ ರವರೆ, ದಯಮಾಡಿ ತಮ್ಮ senior colleague ಗೆ ತಾವೇ ಈ ಬಗ್ಗೆ ಹೇಳಬೇಕೆಂದು ಕೋರುತ್ತೇನೆ Atleast, by Monday ನಮಗೆ ಆ Notification ಬಂದರೆ ಅನುಕೂಲವಾಗುತ್ತದೆ ಆ ಗ್ರಾಮಗಳನ್ನು ಸೇರಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಅಪೇಕ್ಷೆ ಪಟ್ಟಿದ್ದರೆ ಅದು ಒಳ್ಳೆಯದೇ ಅವರು ಈ ರಾಜ್ಯದ ಧಣಿ ಅವರು ಬೇಕಾದರೆ ಅವುಗಳನ್ನು ಸೇರಿಸಬಹುದು ನಮ್ಮ ಇನ್ನೂ ಮೂರು ಗ್ರಾಮಗಳನ್ನು ಸೇರಿಸಿದರೆ ನಮಗೆ ಖುಷಿಯೇ ಆಗುತ್ತದೆ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಕ್ಷೇತ್ರದ ವಿಚಾರದಲ್ಲಿ ಅಷ್ಟು ಮಾತ್ರ ಆಸಕ್ತಿ ವಹಿಸಿರುವುದು ಸಂತೋಷದ ವಿಚಾರ Direct ಆಗಿ ಮಾನ್ಯ ಮುಖ್ಯ ಮಂತ್ರಿಗಳೇ ನನ್ನ ಕ್ಷೇತ್ರದ ವಿಚಾರದಲ್ಲಿ ಮತ್ತು ನನ್ನ ವಿಚಾರದಲ್ಲಿ ಆಸಕ್ತಿ ವಹಿಸುತ್ತಿರುವುದು ಸಂತೋಷದ ವಿಚಾರವಾಗಿದೆ I am a privileged man in this

Assembly ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಿಗೂ ನನ್ನ ಕೃತಜ್ಞತೆಯನ್ನು ತಿಳಿಸುತ್ತೇನೆ ಸಾಧ್ಯವಾದರೆ ಇನ್ನೂ ೩-೪ ವಿಲೇಜಸ್ ಸೇರಿಸುವುದಾದರೆ, that would be a welcome move ದಯಮಾಡಿ ಆ Notification ಸೋಮವಾರದೊಳಗಾಗಿ ಬರುವಂತೆ ಮಾಡಿದರೆ ಬಹಳ ಸಂತೋಷವಾಗುತ್ತದೆ

ಶ್ರೀ ಕೆ ಶ್ರೀನಿವಾಸ ಗೌಡ ಒಮ್ಮೆ ಪಟ್ಟಿಯಲ್ಲಿದ್ದ ಗ್ರಾಮದ ಹೆಸರನ್ನು ತೆಗೆದರೆ, ಅಲ್ಲಿನ ಶಾಸಕರ ಗತಿ ಏನಾಗಬೇಕು? ನಮ್ಮಲ್ಲೂ ಮೂರು ಗ್ರಾಮಗಳ ಹೆಸರುಗಳನ್ನು ತೆಗೆದಿದ್ದಾರೆ ನಾನು ಆ ಬಗ್ಗೆ ಹೇಳಿದಾಗ, ಮಾನ್ಯ ಉದಾಸಿಯವರು ಅನದ್ನು ಸರಿ ಮಾಡಿಕೊಡುತ್ತೇನೆಂದು ಹೇಳಿದ್ದಾರೆ ಆದ್ದರಿಂದ ನಾನು ಧೈರ್ಯವಾಗಿ ಕುಳಿತಿದ್ದೆನೆ ರಾಜಕೀಯವಾಗೇನೂ ಅಲ್ಲಿ ಹೆಸರುಗಳನ್ನು ಪಟ್ಟಿಯಿಂದ ತೆಗೆದಿಲ್ಲ

ಶ್ರೀ ಎಂ ಪಿ (ಗೃಹ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಶ್ರೀನಿವಾಸ ಗೌಡರು privileged man ಅಲ್ಲ ಬಾವ-ಮೈದುನರು ಕುಳಿತುಕೊಂಡು ಅದನ್ನು ಡರಿಪಡಿಸಿಕೊಳ್ಳಬಹುದು ಅದರ ಬಗ್ಗೆ ನಾವು ಅವರಿಗೆ ಹೇಳಿಕೊಳ್ಳುತ್ತೇವೆ ಅದೇನೂ ಅಷ್ಟು ಕಷ್ಟವಾಗುವುದಿಲ್ಲ ಮಾನ್ಯ ರಮೇಶ್ ಕುಮಾಉ ರವರ ವಿಚಾರ ಬೇರೆ, ಅವರಿಗೆ ನವು ಆ ರೀತಿ ಹೇಳುವುದಕ್ಕಗುವುದಿಲ್ಲ ಮೊನ್ನೆ ಕೂಡ ಸದನದಲ್ಲಿ ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರ ಪ್ರಶ್ನೆ ಬಂದಾಗ, ಮಾನ್ಯ ಸಭಾಧ್ಯಕ್ಷರ ಕೊರಡಿಯಲ್ಲಿ ಕುಳಿತು ಮಾತನಾಡಿದ್ದೇವೆ ಈಗೇನಾದರೂ ಅವುಗಳನ್ನು ತೆಗೆಯಲಿಕ್ಕೆ ಹೋದರೆ ಬಹಳ ತೊಂದರೆಯಾಗುತ್ತದೆ ಅಲ್ಲೆ ಆ MLAಗೆ ಬಹಳ ಮುಜುಗರವಾಗುತ್ತದೆ ಯಾವುದಕ್ಕೆ ಮಾಡಿದ್ದರೂ ಅದೇ ಕ್ಷೇತ್ರಕ್ಕೇ ಆಗುತ್ತದೆ ಆದ್ದರಿಂದ ಅದನ್ನು ಮಾಡದೇ ಅದನ್ನು ಹೆಚ್ಚುವರಿಯಾಗಿ ಮಾಡಬೇಕೆನ್ನುವ ಅಭಿಪ್ರಾಯಕ್ಕೆ ನಾವು ಅಂಧು ಬಂದೆವು ಆ ವಿಚಾರ ಅಂದು ಮುಕ್ತಾಯ ಕೂಡ

ಆಯಿತು ಮಾನ್ಯ ಸಭಾಧ್ಯಕ್ಷರ ಕೊಠಡಿಯಲ್ಲಿ ಈ ಬಗ್ಗೆ ಸಭೆ ನಡೆದಾಗ ಎಲ್ಲಾ ವಿರೋಧ ಪಕ್ಷಗಳ ಮುಖಂಡರೂ ಅದಕ್ಕೆ ತಮ್ಮ ಸಹಮತಿಯನ್ನು ಕೊಟ್ಟರು ಈಗ ಅದೇನಾದರೂ ವ್ಯತ್ಯಾಸವಾಗಿದ್ದರೆ ಅದನ್ನು ತೆಗೆಯಲಾರದಂತೆ ಮತ್ತೆ ಸೇರಿಸತ್ತಕ್ಕದ್ದೇನಿದೆ ಅದನ್ನು ಮಾಡಿಸುತ್ತೇವೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಉದಾಸಿಯವರೆಇಗೆ ಇದುದ ಗೊತ್ತಿಲ್ಲ Hon'ble Chief Minister out of his special love and consideration for me ಮಾಡಿದ್ದಾಋಎ I am thankful to Hon'ble Chief Minister Since he is not thee, kindly convey my personal regards to Chief Minister and see that the notification is issued I am priviledged man because he has been taking personal interest in all prospects I am honoured ಅಲ್ಲವಾ ? This is a special honour conferred on me an unprivileged man

ಶ್ರೀ ಎಂ ಪಿ ಪ್ರಕಾಶ್ ಈ ವರ್ಷದಲ್ಲಿ ಮಾರ್ಚ್ ಆದಕೂಡಲೆ ಮತ್ತೆ ತೆಗೆದುಕೊಳ್ಳಲು ಬರುತ್ತದೆ ಹೋದ ಸಲವೂ ತೊಂದರೆ ಇತ್ತು, ಏನು ಮಾಡುವುದು ಎಂದಿದ್ದರು ಆದ್ದರಿಂದ ತಲಾ ಆದಾಯ ೨೫೦೦ ರೂಪಾಯಿಗಳಿಗೆ ಮಾಡಬೇಕಾಗಿತ್ತು ಈಗ ಆ ರೀತಿಯಲ್ಲಿ ತೆಗೆದುಕೊಂಡು ಖಂಡಿತ ಮಾಡುತ್ತೇವೆ

ಶ್ರೀ ಕೆ ಶ್ರೀನಿಔಅಸ ಗೌಡ ಅದರಲ್ಲಿ ನಮ್ಮದೂ ಇದೆ .

ಶ್ರೀ ಎಂ ಪಿ ಪ್ರಕಾಶ್ ಅದೂ ಆಗಬಹುದು ಆಲಂಗೂರು ಶ್ರೀನಿವಾಸ್ ರವರನ್ನು ಒಪ್ಪಿಸುವ ಜವಾಬ್ದಾರಿ ನನ್ನದು

ಶ್ರೀ ಕೆ ಶ್ರೀನಿವಾಸ ಗೌಡ ಅದನ್ನು ಅವರು ತೆಗೆದಿಲ್ಲ ಆದ್ದರಿಂದ ಅವರ ಮೇಲೆ ನನ್ನ blame ಇಲ್ಲ ಅದನ್ನು ತೆಗೆದಿರುವವರು ಅಧಿಕಾರಿಗಳು ಅದನ್ನು ಸೇರಿಸಿಕೊಡಬೇಕು ಅಷ್ಟೇ ನಾನು ಕೇಳುವುದು

ಶ್ರಿ ಕೆ ಆರ್ ರಮೇಶ್ ಕುಮಾರ್ ನನ್ನದನ್ನು ಅವರದ್ದರ ಜೊತೆ club ಮಾಡಬೇಡಿ ಅವರು ordinary people

ಋ) ವಿಷಯ ಮಂಗಳೂರಿನ ಕರಾವಳಿ ಅಲೆ ಪತ್ರಿಕೆಯ ಸಂಪಾದಕರನ್ನು ಹಾಗೂ ಅವರ ಶ್ರೀಮತಿಯವರನ್ನು ಬಂದಿಸಿರುವ ಬಗ್ಗೆ –

ಶ್ರೀ ಜೆ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಅಧ್ಯಕ್ಷರೆ, ಮಾರ್ಚ್ ೩ನೇ ತಾರೀಖು ಮಂಗಳೂರಿನಲ್ಲಿ ಕರಾವಳಿ ಅಲೆ ಪತ್ರಿಕೆಯ ಸಂಪಾದಕರನ್ನು ಮತ್ತು ಅವರ ಶ್ರೀಮತಿಯವರನ್ನು ರಜೆ ಇರುವ ಮಾರನೇ ದಿವಸ ಪೊಲೀಸ್ ನವರು ಬಂಧಿಸಿ ಜೈಲಿಗೆ ಹೋಗುವ ರೀತಿ ಮಾಡಿದರು ಅವರು ಅಪರಾಧ ಮಾಡಿದ್ದರೆ ಕಾನೂನಿನ ಪ್ರಕಾರ ತನಿಖೆ ಮಾಡಿದ್ದರೆ ನಮ್ಮದೇನೂ ಅಭ್ಯಂತರವಿಲ್ಲ ಆದರೆ, ಅಲ್ಲಿನ ಪೊಲೀಸ್ ನವರು, ಮುಖ್ಯವಾಗಿ ಅಲ್ಲಿನ ಸಬ್ ಇನ್ಸ್ ಪೆಕ್ಟರ್ ಮತ್ತು ಎಸ್ ಪಿ ಇಬ್ಬರು ಸೇರಿ ಉದ್ದೇಶಪೂರ್ವಕವಾಗಿ ಆ ಪತ್ರಿಕಾ ಸಂಪಾದಕರಿಗೆ ಮಾನಸಿಕ ಹಿಂಸೆ ಕೊಡತಕ್ಕ ರೀತಿಯಲ್ಲೇನು ವರ್ತನೆ ಮಾಡಿದ್ದಾರೆ ಕಾನೂನಿನ ಪ್ರಕಾರ ತನಿಖೆ ಮಾಡಿದ್ದರೆ ನಮ್ಮದೇನೂ ಅಭ್ಯಂತರವಿಲ್ಲ ಆದರೆ, ಅಲ್ಲಿನ ಪೊಲೀಸ್ ನವರು, ಮುಖ್ಯವಾಗಿ ಅಲ್ಲಿನ ಸಬ್ ಇನ್ಸ್ ಪೆಕ್ಟರ್ ಮತ್ತು ಎಸ್ ಪಿ ಇಬ್ಬರು ಸೇರಿ ಉದ್ದೇಶಪೂರ್ವಕವಾಗಿ ಆ ಪತ್ರಕಾ ಸಂಪಾದಕರಿಗೆ ಮಾನಸಿಕ ಹಿಂಸೆ ಕೊಡತಕ್ಕ ರೀತಿಯಲ್ಲೇನು ವರ್ತನೆ ಮಾಡಿದ್ದಾರೆ ಅದರ ಬಗ್ಗೆ ನನ್ನ ತೀವ್ರ ರೀತಿಯ ಆಕ್ಷೇಪವಿದೆ ಅವರು ಏನಾದರೂ ಕಾನೂನುಬಾಹಿರವಾದ ಕೆಲಸ ಮಾಡಿದ್ದರೆ ಕ್ರಮ ತೆಗೆದುಕೊಳ್ಳಲು ನಮ್ಮ ಅಭ್ಯಂತರವಿಲ್ಲ ಅವರು ಏನೋ ಜೈನಮುನಿಗಲ ಬಗ್ಗೆ ಪತ್ರಿಕೆಯಲ್ಲಿ ಬರೆದಿದ್ದಾರೆಂದು ಕೇಸನ್ನು register ಮಾಡಿ ಅವರಿಗೆ FIR, warrant ಏನೂ ಕೊಟ್ಟಿಲ್ಲ, ಏಕಾಏಕಿ ರಾತ್ರಿ ಮನೆಯಿಂದ ಅವರನ್ನೂ ಅವರ ಶ್ರೀಮತಿಯವರನ್ನೂ ಹಿಡಿದುಕೊಂಡು ಪೊಲೀಸ್ station ಗೆ ಬಂದು arrest ಮಾಡಿ ರಾತ್ರೋರಾತ್ರೆ Magistrate ಮುಂದೆ produce ಮಾಡಿ ಜೈಲಿಗೆ ಕಳುಹಿಸಿದ್ದಾರೆ ಈ

ದೇಶದಲ್ಲಿ ಅಪರಾಧ ಮಾಡಿದವರು, ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಲು ಕಾನೂನಿದೆ ಅದಕ್ಕೆ ಅದರದ್ದೇ ಆದಂಥ ನಿಯಮಗಳಿವೆ ಎಲ್ಲಾ ನಿಯಮಗಳನ್ನು ಉಲ್ಲಂಘನೆ ಮಾಡಿ arrest warrant ಇಲ್ಲದೆಯೇ, ಮಹಿಳೆಯರನ್ನು arrest ಮಾಡಲು Supreme Court ಕೆಲವು guidelines ನ್ನು ಕೊಟ್ಟಿದೆ ಸಂಜೆಯಾದ ಮೇಲೆ ಮಹಿಳೆಯರನ್ನು arrest ಮಾಡಬಾರದೆಂದು Supreme Court ತೀರ್ಪಿದೆ ನಾಗರೀಕರಾದ ಎಲ್ಲಾ ನಿಯಮಗಳನ್ನು ಉಲ್ಲಂಘನೆ arrest ಮಾಡಿ ಮಾಡಿ ರಜೆ ಇದೆಯೆಂದು ಗೊತ್ತಿದ್ದರೂ ಉದ್ದೇಶಪೂರ್ವಕವಾಗಿ ೫ ದಿವಸ ಜೈಲಿನಲ್ಲಿರಬೇಕು ಎಂಬ ಕಾರಣಕ್ಕಾಗಿ ಆ ರೀತಿ ಮಾಡಿದ್ದಾರೆ ಅಲ್ಲಿಂದ ಶಿವಮೊಗ್ಗ ಪೋಲೀಸ್ ನವರು ಅವರನ್ನು arrest ಮಾಡಿ ಕರೆದುಕೊಂಡು ಹೋಗಿದ್ದಾರೆ ಪತ್ರಿಕಾ ಸ್ವಾತಂತ್ರಯದ ಬಗ್ಗೆ ಪತ್ರಿಕೆಯಲ್ಲಿ ಬರೆದಿರತಕ್ಕದೆಲ್ಲಾ ಸತ್ಯವೆಂದು ನಾವೇನು ಒಪ್ಪಬೇಕಾಗಿಲ್ಲ ಪತ್ರಿಕೆಯಲ್ಲಿ ಬಂದಿರುವುದೆಲ್ಲಾ ಸತ್ಯವೆಂದು ಅದರ ಆದಾರ ಮೇಲೆ ಚರ್ಚೆ ಮಾಡಬಾರದೆಂದು ನಾವೇ ಹಲವಾರು ಸಲ ಈ ಸದನದಲ್ಲಿ ಚರ್ಚೆ ಮಾಡಿದ್ಧೇವೆ ಆ ರೀತಿ ಏನಾದರು ಇದ್ದರೆ ಅವರ ಮೇಲೆ defamation case ಹಾಕಿ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಬಹುದಾಗಿತ್ತು Criminal offence ನಲ್ಲಿ arrest ಮಾಡಿ ಜೈಲಿಗೆ ಕಳುಹಿಸಿ ಅವರಿಗೆ ಇವತ್ತು ಮಾನಸಿಕವಾಗಿ ಹಿಂಸೆಯನ್ನು ಕೊಟ್ಟಿದ್ದಾರೆ ವಾಸ್ತವಿಕವಾಗಿ ಅವರು ಅದರ Editors ಅಲ್ಲ ಅವರ ಮೇಲೆ ಕೇಸನ್ನು ಹಾಕಿದ್ದಾರೆ ಅದರ ಬಗ್ಗೆ Press Council ನಲ್ಲಿ ಕೂಡ ಅವರು complaint ಮಾಡಿದ್ದಾರೆ Press council ನವರು ಅದರ ಬಗ್ಗೆ ತೀವ್ರವಾಗಿ ಖಂಡಿಸಿ ಇದು ಪೋಲೀಸ್ ನವರ ದುಷ್ಕೃತ್ಯ, highhandedness ಮಾಡಿದ್ದಾರೆ ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡಿದ್ದಾರೆ ನಾನು ಕೂಡ ನಮ್ಮ ಮೂಲಕ ಸರ್ಕಾರವನ್ನು ಕೇಳತಕ್ಕದ್ದು, ಆ ರೀತಿ ಕಾನೂನು ಬಾಹಿರ ಕೆಲಸವಾಗಿದ್ದರೆ ಪತ್ರಿಕೆಯಲ್ಲಿ ಆ ರೀತಿ ಏನಾದರೂ ಅವಹೇಳನಕಾರಿಯಾಧ, ಬೇರೆ ರೀತಿಯಾದ ಬರವಣಿಗೆಗಳು ಬಂದರೆ defamation case

ಹಾಕುತ್ತಾರೆ ಅದರಲ್ಲಿ criminal defamation case ಅಥವಾ civil defamation case ಹಾಕಬಹುದು ಯಾರಿಗಾದರೂ ಆ ರೀತಿ ಬರೆದಿದ್ದರೆ case ಹಾಕಲಿ ಆದರೆ, ಪತ್ರಿಕಾ Journalist ಗಳನ್ನು ಪತ್ರಿಕಾ ಸಂಪಾದಕರನ್ನು, ಪತ್ರಕರ್ತರನ್ನು ಈ ರೀತಿಯಾಗಿ ಪೋಲೋಸ್ ನವರು ಅಮಾನವೀಯವಾಗಿ ನಡೆಸಿ ಅವರ ಮೇಲೆ ಹಲ್ಲೆ ಮಾಡತಕ್ಕ ಸ್ಥಿತಿಗೆ ಹೋದರೆ ನಾಳೆ ಪತ್ರಿಕಾ ಸ್ವಾತಂತ್ರ್ಯದ ಪರಿಸ್ಥಿತಿಯೇನಾಗುತ್ತದೆಂದು ನಾವೆಲ್ಲಾ ಆಲೋಚನೆ ಮಾಡಬೇಕಾಗುತ್ತದೆ ಆದ್ದರಿಂದ ನಾನು ತಮ್ಮ ಮೂಲಕ ಕೇಳುವುದು, ಯಾವ ಪೋಲೀಸ್ ಅಧಿಕಾರಿ ಈ ರೀತಿ ಅತಿರೇಕ ಮಾಡಿದ್ದಾರೆ, ಅವರನ್ನೇನು ಮಾನಸಿಕವಾಗಿ ಹಿಂಸೆಗೆ ಗುರಿಮಾಡಿದ್ದಾರೆ ಅದರ ಬಗ್ಗೆ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಮತ್ತು ಗೃಹ ಸಚಿವರಾದ ಮಾನ್ಯ ಪ್ರಕಾಶ್‌ರವರನ್ನು ಒತ್ತಾಯ ಮಾಡುತ್ತೇನೆ ಮಾನ್ಯ ಪ್ರಕಾಶ್ ರವರಿಗೆ ಇದರ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಇರುತ್ತದೆಂದು ನನಗನ್ನಿಸುತ್ತದೆ ನನ್ನ ಹತ್ತಿರವೂ ಇನ್ನೂ ಮಾಹಿತಿ ಇದೆ ಆದೆ, ಶೂನ್ಯ ವೇಳೆಯಲ್ಲಿ ಅದರ ಬಗ್ಗೆ ದೀರ್ಘವಾಗಿ ಹೇಳುವುದು ಸರಿಯಲ್ಲವೆಂದು ನಾನು ಅದನ್ನು ಹೇಳುತ್ತಿಲ್ಲ ಆದ್ದರಿಂದ ಅಲ್ಲಿ ಸಂಬಂಧಪಟ್ಟ ಸಬ್‌ಇನ್ಸ್ ಪೆಕ್ಟರ್ ಹಾಗೂ ಎಸ್ ಪಿ ಪೋಲೀಸ್ ಅಧಿಕಾರಗಳಾರಿದ್ದಾರೆ ಅವರ ಮೇಲೆ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳಬೇಕೆಲು ಹಿಂದೆ ಕೂಡ ಮಂಗಳೂರಿನಲ್ಲಿ ಗಲಭೇಯಾದ ಸಂದರ್ಭದಲ್ಲಿ ಅಲ್ಲಿರುವ ಎಸ್ ಪಿ ಯವರ ಮೆಲೆ ಆಪಾದನೆ ಬಂದಿತ್ತು ಅದೂ ಮಾನ್ಯ ಪ್ರಕಾಶ್ ರವರ ಗಮನದಲ್ಲಿದ ಆದ್ದರಿಂದ ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ

ಶ್ರೀ ಎಂ ಪಿ ಪ್ರಕಾರ್ಶ (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯ ಈ ಪ್ರಸ್ತಾಪ ಮಾನ್ಯ ಮುಖ್ಯಮಂತ್ರಿಯವರ ಹೆಸರಿನಲ್ಲಿ ಇದ್ದದದರಿಂದ ಅದು ಈಗ ನನ್ನ ಗಮನಕ್ಕೆ ಬಂದಿದೆ ಇದು ಮೊದಲೇ ನನ್ನ ಗಮನಕ್ಕೆ ಬಂದಿದ್ದರೆ ಎಲ್ಲಾ ನಿಖರವಾದ ಮಾಹಿತಿಗಳ ಜೊತೆಗೆ

ಒಂಉದ ಹೇಳಿಕೆಯನ್ನೇ ಪ್ರಸ್ತಾಪ ಮಾಡುತ್ತಿದ್ದೆ ಆದರೆ, ನನಗೆ ಇರತಕ್ಕ ಮಾಹಿತಿಯ ಆದಾರದ ಮೇಲೆ ಈ ಕರಾವಳಿ ಅಲೆ ಪತ್ರಿಕೆ

ಶ್ರೀ ಜೆ ವಿ ಶ್ರೀರಾಮರೆಡ್ಡಿ ಹಾಗಾದರೆ ಸೋಮವಾರ ಉತ್ತರ ಕೊಡಿ ಪರವಾಗಿಲ್ಲ

ಶ್ರೀ ಎಂ ಪಿ ಪ್ರಕಾಶ್ ಹಾಗಾದರೆ ಲಿಖಿತ ಹೇಳಿಕೆಯನ್ನು ಸೋಮವಾರ ಕೊಡುತ್ತೇನೆ

(ಋ) ವಿಷಯ ಉಡುಪಿ ಸುನಿಸಿಪಾಲಿಟಿಗೆ ಸುವರ್ಣಬಜೆ ಎಂಬ ಜಾಗದಲ್ಲಿ ಕಟ್ಟಿರುವ ಅಣೆಕಟ್ಟಿನಿಂದ ನೀರನ್ನು ತರಲು ಅನುಮತಿ ನೀಡುವ ಬಗ್ಗೆ

ಶ್ರೀ ಕೆ ಜಯಪ್ರರ್ಕಾ ಹೆಗ್ಡೆ ಮಾನ್ಯ ಉಪಾಧ್ಯಕ್ಷರೆ, ಸುವರ್ಣಬಜೆ ಎಂಬ ಜಾಗದಲ್ಲಿ ಉಡುಪಿ ಮುನಿಸಿಪಾಲಿಟಿಗೆ ನೀರನ್ನು ತರಲು ಅಣೆಕಟ್ಟೆಯನ್ನು ಕಟ್ಟಿದ್ದಾರೆ ಆ ಭಾಗದ ರೈತರು ಮೊದಲಿನಿಂದಲೂ ಅಲ್ಲಿ permission ತೆಗೆದುಕೊಂಡು motor ಇಟ್ಟು ನೀರುನ್ನು ತೆಗೆದುಕೊಳ್ಳುತ್ತಿದ್ದರು ಈಗ Municipal Administration Minister ಇಲ್ಲ ಆದ್ದರಿಂದ ಮಾನ್ಯ ಪ್ರಕಾಶ್ ರವರು ಅದರ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಕೊಟ್ಟರಾಯಿತು ಆ ಅಣೆಕಟ್ಟೆಯಿಂದ ರೈತರು ನೀರನ್ನು ತೆಗೆಯುತ್ತಿದ್ದಾಋಎ ಆದರೆ ಈಗ ಜಿಲ್ಲಾ ಆಡಳಿತ ಡಿ ಸಿ ಯವರೇ ಈಗ Municipal administrator ಅವರು ರೈತರು ನೀರನ್ನು ತೆಗೆಯಬಾರದೆಂದು ಕಟ್ ಔಟ್ ನ್ನ ತೆಗೆದುಕೊಂಡು ಹೋಗಿದ್ದಾರೆ ಅನಂತರ ೧೦ ದಿವಸಕ್ಕೊಂದು ಸಲ ನೀರನ್ನು ತೆಗೆಯಬೇಕೆಂದು ಮಾಡಿದ್ದರು ಆ ರೈತ ಏನಾಗಬೇಕು? ತೋಟಕ್ಕೆ ನೀರನ್ನು ಬಿಡಲಾಗುವುದಿಲ್ಲ ಉಡುಪಿ ಮುನಿಸಿಪಾಲಿಟಿ ಏರಿಯಾಕ್ಕೆ ನೀರನ್ನು ಕೊಡಬಾರದೆಂದಲ್ಲ ಆ ಭಾಗದ ರೈತರಿಗೆ ವಾರಕ್ಕೆ ಒಂದೆರಡು ಬಾರಿಯಾದರೂ ನೀರನ್ನು ತೆಗೆಯಲು ಅವಕಾಶ ಮಾಡಿಕೊಡಬೇಕು

ಇಲ್ಲದಿದ್ದರೆ ಅವರ ತೋಟವೆಲ್ಲಾ ಸುಟ್ಟುಹೋದರೆ, ಅವರ ಬೆಳೆಯಲ್ಲಾ ನಾಶವಾದರೆ ಅವರಿಎ ಪರಹಾರವನ್ನು ತುಂಬಿಕೊಡಲು ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ ಆದ್ದರಿಂದ ರೈತರು ವಾರಕ್ಕೆ ಮೂರು ದಿವಸವಾದರೂ ನೀರನ್ನು ತೆಗೆಯಲು ಅವಕಾಶ ಮಾಡಿಕೊಡಲು ಜಿಲ್ಲಾ ಆಡಳಿತಕ್ಕೆ ಆದೇಶ ನೀಡೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು, ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಸಚಿವರ ಪರವಾಗಿ) ಮಾನ್ಯ ಉಪಾಧ್ಯಕ್ಷರೆ, ಸಾಧಾರಣವಾಗಿ ಇಂಧ ಅಣೆಕಟ್ಟೆಯನ್ನು ಕಟ್ಟಿದಾಗ ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆ ಇರುತ್ತದೆ ಅನಮತರ ನೀರಾವರಿಗೆ ಇರುತ್ತದೆ ಆದರೆ, ಹತ್ತು ದಿವಸಕ್ಕೆ ಒಂಧು ಸಲ ನೀರನ್ನು ತಗೆದುಕೊಂಡು ಹೋಗಬೇಕೆಂಬ ಆದೇಶವನ್ನು ಮಾನ್ಯ ಸದಸ್ಯರು ತಂದಿರುವುದರಿಂದ ನಾನು ಮಾನ್ಯ ಮಂತ್ರಿಗಲ ಗಮನಕ್ಕೆ ಇದನ್ನು ತಂದು ಸೋಮವಾರದ ದಿವಸ ಸರಿಯಾದ ಉತ್ತರವನ್ನು ಕೊಡಿಸುತ್ತೇನೆ

ಶ್ರೀ ನೆ ಲಾ ನರೇಂದ್ರಬಾಬು (ರಾಜಾಜಿ ನಗರ) ಮಾನ್ಯ ಉಪಾಧ್ಯಕ್ಷರೆ ತಮ್ಮ ಮೂಲಕ ಮಾನ್ಯ ಗೃಹ ಸಚಿವರಲ್ಲಿ ಕೇಳುವುದೇನೆಂದರೆ, ಒಂದೇ crime number ಅಡಿಯಲ್ಲಿ ಆಗಿರತಕ್ಕ ಎರಡು ಅಪರಾಧಗಳನ್ನು ಮಾನ್ಯ ಗೃಹ ಸಚಿವರ ಗಮನಕ್ಕೆ ತರಬಯಸುತ್ತೇನೆ ನಮ್ಮ ಕ್ಷೇತ್ರದ ವ್ಯಾಪ್ತಿಯ ಸುಬ್ರಮಣ್ಯನಗರ ಠಾಣೆಯ ಅಡಿಯಲ್ಲಿ ಒಂದೇ crime ನ ಅಡಿಯಲ್ಲಿ ಒಂದು ರಾಬರಿ ೫ ಲಕ್ಷದ ೩೦ ಸಾವಿರ ಹಣವನ್ನು ಒಬ್ಬ ಸ್ಕೂಟರ್ ನಿಂದ ಅಪಹರಿಸಿದ ಎಂಬ ಒಂದು ದೂರು ಇನ್ನೊಂದು, ಎರಡು ದಿವಸದ ನಂತರ ಅದೇ ಠಾಣೆಯ ವ್ಯಾಪ್ತಿಯಲ್ಲಿ ಒಂದು ಸ್ಕೂಟರ್ ಕಳ್ಳತನವಾಯಿತು ಎಂದು ಎರಡು ದೂರುಗಳನ್ನು ಒಂದೇ crime ನ ಅಡಿಯಲ್ಲಿ ದಾಖಲು ಮಾಡಿ ಆ ಹಣ ನಂತರ ಸಿಕ್ಕಿತು ಎಂದು ಆ ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನ ಆರಕ್ಷಕ ಇಲಾಖೆಯ ಆ ಠಾಣೆಯಲ್ಲಿ ಆಗಿರತಕ್ಕದ್ದು ಒಂದು ಗಂಭೀರವಾದ

ಅಪಾದನೆ ಇದೆ ಹಿಂದೆ ವಿದಾನ ಸಭೆಯಲ್ಲಿ ಮಾನ್ಯ ಎ ಟಿ ರಾಮಸ್ವಾಮಿಯವರು ೩೫೧ನೇ ನಿಯಮದಡಿಯಲ್ಲಿ ಗಮನಸೆಳೆದು ಲೋಕಾಯುಕ್ತದ ವರದಿಯ ಪ್ರಕಾರ ಆ ಠಾಣೆಯ ಅಧಿಕಾರಿಗಳು ತಪ್ಪನ್ನು ಮಾಡಿದ್ದಾರೆ, ಅವರ ಮೆಲೆ ಶಿಸ್ತುಕ್ರಮ ಜರುಗಿಸಲಾಗುತ್ತದೆ ಎಂಬುದನ್ನು ಕಾನೂನು ಇಲಾಖೆಯ ಮೂಲಕ ಉತ್ತರವನ್ನು ಕೊಟ್ಟಿದ್ದೀರಿ

ಯಾರನ್ನು ಪೋಲಿಸ್ ಇಲಾಖೆಯವರು ರಕ್ಷಣೆ ಮಾಡಬೇಕಾಗಿತ್ತೋ ಅವರೆ ಭಕ್ಷಣೆಗೆ ಹೊರಟಿರುವ ಸಂದರ್ಭದಲ್ಲಿ ತಮ್ಮ ಮುಖೇನ ಗೃಹ ಸಚಿವರ ಗಮನಕ್ಕೆ ತರುತ್ತಿದ್ದೇನೆ ಒಂದು, ರೂ ೫,೩೦,೦೦೦ ಕಳ್ಳತನವಾಗಿರುವ ಕ್ರೈಂ ನಂಬರ್ ಎರಡನೆಯದು, ಅದೇ ಠಾಣೆ ವ್ಯಾಪ್ತಿಯಲ್ಲಿ ಒಂದು ಸ್ಕೂಟರ್ ಕಳ್ಳತನವಾಗಿದೆ ಎಂದು ದೂರು ದಾಖಲಾಗಿದೆ ಒಂದು ಕ್ರೈಂ ನಂ 392 IPC ಪ್ರಕಾರವಾಗಿ ಆಗಿರುವುದು, ಇನ್ನೋಮದು ಕ್ರೈಂ ನಂ 380 IPC ಪ್ರಕಾರವಾಗಿರುವ ದಾಖಲೆಯನ್ನು, ಸಂಪೂರ್ಣವಾಗಿ ಕ್ರೈಂ ನಿಂದ ವಾಪಸ್ ತೆಗೆದುಕೊಳ್ಳುವ ಒಂದು ಹುನ್ನಾರ ನಡೆದಿದೆ ತಮ್ಮ ಮುಖೇನ ಈ ಸಂಪೂರ್ಣ ವರದಿಯನ್ನು ಕೊಡುತ್ತೇನೆ, ಗೃಹ ಸಚಿವರು ಆ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳದೆ ಹೋದರೆ, ಕಾನೂನು ಮತ್ತು ಗೃಹ ಇಲಾಖೆಯ ಮೇಲೆ ಜನ ಸಂಪೂರ್ಣ ನಂಬಿಕೆಯನ್ನು ಕಳೆದುಕೊಳ್ಳುವ ಪರಿಸ್ಥಿತಿ ಬರುತ್ತದೆ ಇದನ್ನು ಪೋಲಿಸ್ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದಿದ್ದರು ನಿರ್ಲಕ್ಷವಾಗಿದೆ ಸುಬ್ರಮಣ್ಯನಗರ ಪೋಲಿಸ್ ಠಾಣೆ, ರಾಜಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಆಗಿರುವುದು ದಯವಿಟ್ಟು, ಈ ಸದನದಲ್ಲಿ ಈ ಬಗ್ಗೆ ಭರವಸೆಯನ್ನು ಕೊಟ್ಟಿದ್ದಿರಿ, ಇದುರವರೆವಿಗೂ ಸಹ ಆ ಅಧಿಕಾರಿಗೆ ನಿರ್ಭಯವಾಗಿದೆ ಇಂತಹ ಹಲವಾರು ದೂರುಗಳು ಬೆಂಗಳೂರು ನಗರದಲ್ಲಿದ್ದರು, ಇವರು ಆರಾಮವಾಘಿ ಸ್ಟೇಷನ್ ಗಳಲ್ಲಿ ಇರುತ್ತಾರೆ ಕಾನೂನು ಚೌಕಟ್ಟಿನಲ್ಲಿ, ಇಂತಹ ತಪ್ಪನ್ನು ಮಾಡಿ ತಪ್ಪಿತಸ್ಥರಾಗಿರುವ ಠಾಣೆಯ ಅದಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ, ಬಹಳ ಗುರುತರವಾದ ಅಪಾದನೆಗಳಿವೆ ಇದನ್ನು ನಾವು ಹಾಗೆಯೇ ಕೈಬಿಡತಕ್ಕಂತಹದ್ದು ಸರಿಯಾದುದ್ದಲ್ಲ ಇಂತಹ ಅಪರಾಧಗಳಾಗುವುದನ್ನು ತಡೆದು ರಕ್ಷಣೆ ಮಾಡಬೇಕಾದ ಇಲಾಖೆಯಲ್ಲಿ, ಈ ರೀತಿ ನಡೆದಿರುವುದು ಅಕ್ಷಮ್ಯ ಅಪರಾಧವಾಗಿದೆ ನಾನು ತತಕ್ಷಣ ಮಾಹಿತಿಯನ್ನು ಪಡೆದುಕೊಂಡು ಈ ದಿವಸವೇ ಪೋಲಿಸ್ ಮಹಾ ನಿರ್ದೇಶಕರಿಗೆ ಸೂಚನೆಯನ್ನು ಕೊಟ್ಟು, ಅದರ ಬಗ್ಗೆ ತನಿಖೆ ಮಾಡಿ ತಪ್ಪಿತಸ್ಥರ ಮೇಲೆ ತತಕ್ಷಣದಲ್ಲಿ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತಾ, ಈ ಅಧಿವೇಶನ ಮುಗಿಯುವುದರೊಳಗಾಗಿ ಯಾವ ಕ್ರಮವನ್ನು ಕೈಗೊಂಡಿದ್ದೇವೆ ಎನ್ನುವುದನ್ನು ಕೂಡ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ

ಶ್ರೀ ಜಗದೀಶ್ ಶೆಟ್ಟರೆ (ಕಂದಾಯ ಸಚಿವರು) ವಿಧೇಯಕವನ್ನು ಒರಿ ಮಂಡನೆ ಮಾಡುತ್ತೇನೆ, ಚರ್ಚೆ ಅಲ್ಲ, ಮಂಡನೆ, ಚರ್ಚೆ ೨ನೇ ತಾರೀಖು ಮಾಡೋಣವೆ, ಯಾವ ಒಂದು ಬಿಲ್ಲೂ ಪಾಸಾಗಲಿಲ್ಲ

ಶ್ರಿ ಎಂ ಪಿ ಪ್ರಕಾಶ್ ಈಗ ಈ ಸದನವನ್ನು ಹಾಗೇ ಇಟ್ಟುಕೊಳ್ಳಬೇಕಾಗುತ್ತದೆ, ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಉಪಾಧ್ಯಕ್ಷರೆ, ಕಾರ್ಯಕಲಾಪ ಪಟ್ಟಿಯಲ್ಲಿ ಈ ಖಾಸಗಿ ನಿರ್ಣಯ ೬ ತಿಂಗಳಿನಿಂದ ನೋಡುತ್ತಿದ್ದೇವೆ ಖಾಯಂ ಆಗಿ ಬರುತ್ತಿದೆ, ಇದಕ್ಕೆ ಏನಾದರೂ ಅಂತ್ಯವಾಗಬೇಕು ಈ ಖಾಸಗಿ ನಿರ್ಣಯ ಎರಡು ವರ್ಷದಿಂದಲು ಬರುತ್ತಿದೆ, ಎಂದು ಶುರುವಾಯಿತೋ ಅವತ್ತಿನಿಂದ ಬರುತ್ತಿದೆ

ಉಪಾಧ್ಯಕ್ಷರು ೨ ವರ್ಷಗಳಿಂದ ಇದು ಬರುತ್ತಲೆ ಇದೆ ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ, ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪನವರು, ಇಲ್ಲ, ಕ್ಯಾತಸಂದ್ರ ರಾಜಣ್ಣನವರು

೩. ಗಮನ ಸೆಳೆಯುವ ಸೂಚನೆ

ವಿಷಯ ಕೇಂದ್ರ ಪುರಸ್ಕೃತ ವಸತಿ ಕಾರ್ಯಾಗಾರ ಯೋಜನಾ ಕಾರ್ಯಕ್ರಮಕ್ಕೆ ಹಣ ಬಿಡುಗಡೆಯಾಗದಿರುವುದರಿಂದ ತುಮಕೂರು ಜಿಲ್ಲೆಯ ನೇಕಾರರಿಗೆ ಉಂಟಾಗಿರುವ ತೊಂದರೆ ಬಗ್ಗೆ

ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಕೇಂದ್ರ ಪುರಸ್ಕೃತ ವಸತಿ ಕಾರ್ಯಗಾರ ಯೋಜನಾ ಕಾರ್ಯಕ್ರಮಕ್ಕೆ ಹಣ ಬಿಡುಗಡೆಯಾಗದಿರುವುದರಿಂದ ತುಮಕೂರು ಜಿಲ್ಲೆಯ ನೇಕಾರರಿಗೆ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ಜವ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ

ವಿಷಯ ತುಮಕೂರು ಶ್ರೀ ಅಪ್ಪು ಪಟ್ಟಣ ಶೆಟ್ಟಿ (ಜವಳಿ ಸಚಿವರು) ವಸತಿ ಕಾರ್ಯಾಗಾರ ಯೋಜನೆಯು ಕೆಳಕಂಡ ಮಾರ್ಗಸೂಚಿಯನ್ವಯ ಕಾರ್ಯಕ್ರಮವನ್ನು ಅನುಷ್ಟಾನಗೊಳಿಸಲಾಗುತ್ತಿದೆ

೧ ಈ ಯೋನೆಯಡಿ ಸೌಲಭ್ಯ ಪಡೆಯುವ ಫಲಾನುಭವಿಯು ವಸತಿ ರಹಿತರಾಗಿರಬೇಕು

೨ ನಿವೇಶನದ ದಾಖಲಾತಿಗಳು ಪತಿ–ಪತ್ನಿಯ ಹೆಸರಿನಲ್ಲಿ ಜಂಟಿ ಖಾತೆ ಹೊಂದಿರಬೇಕು

೩ ನೇಯ್ಗೆ ವೃತ್ತಿಯಿಂದ ಕನಿಷ್ಟ ಶೇಕಡ ೫೦ ರಷ್ಟು ವಾರ್ಷಿಕ ವರಮಾನವನ್ನು ಹೊಂದಿರಬೇಕು ಮತ್ತು ಕೈಮಗ್ಗ ನೇಕಾರರ ಸಹಕಾರ ಸಂಘದ ಸದಸ್ಯರಾಗಿರಬೇಕು

೪ ಸರ್ಕಾರದ ಇತರೆ ಯಾವುದೇ ಯೋಜನೆಯಡಿ ಇದೇ ತೆರನಾದ ಸೌಲಭ್ಯವನ್ನು ಪಡೆದಿರಬಾರದು

೫ ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಯೋಜನಾ ಘಟದ ವೆಚ್ಚದ ವಿವರಗಳು ಈ ಕೆಳಕಂಡಂತಿದೆ

ಕ್ರಸಂ	ವಸತಿ ಸಹಿತ ಕಾರ್ಯಾಗಾರ	ಒಟ್ಟು ಘಟಕ ವೆಚ್ಚ	ಬ್ಯಾಂಕ್ / ಹಣಕಾಸು ಸಂಸ್ಥೆಗಳ ಸಾಲ	ಸಹಾಯಧನ	ಫಲಾನುಭವಿಯ ಪಾಲು
(I) ೧	ಗ್ರಾಮೀಣ ಪ್ರದೇಶ	೩೫,೦೦೦	೧೪ ೦೦೦	೧೮ ೦೦೦	೩ ೦೦೦
೨	ನಗರ ಪ್ರದೇಶ	೪೫,೦೦೦	೨೦ ೦೦೦	೨೦,೦೦೦	೫,೦೦೦
(II) ೧	ಮನೆಗೆ ಹೊಂದಿಕೊಂಡಂತೆ ಕಾರ್ಯಾಗಾರ ಗ್ರಾಮೀಣ ಪ್ರದೇಶ	೯,೦೦೦	-	೭,೦೦೦	೨,೦೦೦
೨	ನಗರ ಪ್ರದೇಶ	೧೪,೦೦೦	_	೧೦,೦೦೦	೪,೦೦೦

ಈ ಯೋಜನೆಯಡಿ ವಸತಿ ಕಾರ್ಯಾಗಾರ ಮಂಜೂರಾತಿ ಕೋರಿ ಕೇಂದ್ರ ಸರ್ಕಾರಕ್ಕೆ ಅರ್ಹ ಪ್ರಸ್ತಾವನೆಗಳನ್ನು ಶಿಫಾರಸ್ಸು ಮಾಡಲಾಗಿದ್ದು ಕೇಂದ್ರ ಸರ್ಕಾರದಿಂದ ಈ ಕೆಳಕಂಡಂತೆ ಹಣ ಬಿಡುತಗಡೆಯಾಗಿರುತ್ತದೆ

(ರೂ ಲಕ್ಷಗಳಲ್ಲಿ)

ಕ್ರ ಸಂ	ವರ್ಷ	ಕೇಂದ್ರ ಸರ್ಕಾರದಿಂದ ಮಂಜೂರಾದ ಘಟಕಗಳು			ಬಿಡುಗಡೆ ಯಾದ ಸಹಾಧನ	ಸಾಧನೆ	
		ವಸತಿ ಕಾರ್ಯಾಗಾರ	ಕಾರ್ಯಾಗಾರ	ಸಹಾಯಧನ		ಭೌತಿಕ	ಆರ್ಥಿಕ
೧	೨೦೦೨-೦೩	೩೪೫೩	೫೦೮೬	೯೮೪ ೫೬	೪೯೨ ೨೮	೩೧೯೬	೪೯೨ ೨೮
೨	೨೦೦೩-೦೪ ೨೦೦೪-೦೫	೩೦೭೦	೪೫	೫೬೪ ೯೧	೨೮೨ ೪೫೫	೧೫೩೯	೨೮೨ ೪೫೫

	ಒಟ್ಟು	೬೫೨೩	೫೧೩೧	೧೫೪೯ ೪೭	೭೭೪ ೭೩೫	೪೭೩೫	೭೭೪ ೭೩೫

ವಸತಿ ಸಹಿತ ಕಾರ್ಯಾಗಾರ ಯೋಜನೆಯ ಸೌಲಭ್ಯವನ್ನು ಬಹುತೇಕ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಸಹ ನೀಡಲಾಗಿರುತ್ತದೆ ನೇಕಾರರ ಸಾಂದ್ರತೆ ಹೆಚ್ಚಾಗಿರುವ ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾವಿ, ಚಿತ್ರದುರ್ಗ, ತುಮಕೂರು, ಕೋಲಾರ, ಶಿವಮೊಗ್ಗ, ಮಂಡ್ಯ, ಬೀದರ್, ಹಾವೇರಿ, ಮೈಸೂರು, ಚಾಮರಾಜನಗರ, ಮೈಸೂರು, ಗದಗ್ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಆದ್ಯತೆ ನೀಡಲಾಗಿರುತ್ತದೆ ವಸತಿ ಕಾರ್ಯಾಗಾರ ನಿರ್ಮಾಣವನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಹಾಗೂ ಕಾರ್ಯಾಗಾರವನ್ನು ನೇರವಾಗಿ ಸಹಕಾರ ಸಂಘಗಳ ಮೂಲ ನಿರ್ಮಿಸಿಕೊಡಲು ಸಹಾಯಧನವನ್ನು ಬಿಡುಗಡೆ ಮಾಡಲಾಗಿರುತ್ತದೆ

ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಉಪಾದಧ್ಯಕ್ಷರೆ, ನಮ್ಮ ಜಿಎಲಲ್ಯಲ್ಲಿರುವ ಇವರ ಇಲಾಖೆಯ ಅಧಿಕಾರಿ ಈ ಸರ್ಕಾರಕ್ಕೆ ಒಂದು ಪತ್ರವನ್ನು, ಈ ರೀತಿ ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಹಣ ಬಿಡುಗಡೆಯಾಗಿಲ್ಲವೆಂದು ಬರೆದಿದ್ದಾರೆ ಇದು ನಿಜವಿದ್ದರೆ ಸಚಿವರು ಒಪ್ಪಿಕೊಂಡು ಆ ಕಾರ್ಯಕ್ರಮಕ್ಕೆ ಆ ಪತ್ರದನ್ವಯ ಹಣ ಬಿಡುಗಡೆ ಮಾಡಿದ್ದಾರಾ ಇಲ್ಲವಾ ಎನ್ನುವುದನ್ನು ಹೇಳಬೇಕು ಹಾಗೆಯೆ, ಇವರು ೨೦೦೪-೦೫ ರವರೆಗೆ ಮಾಹಿತಯನು ಕೊಟ್ಟಿದ್ದಾರೆ ೨೦೦೫-೦೬, ೨೦೦೬-೦೭ ರಲ್ಲಿ ಏನೇನು ಮಾಡಿದ್ದಾರೆ ಎಂಬುದನ್ನು ಹೇಳಿ ಇವರಿಗೆ ಕೇಂದ್ರದಿಂದ ಹಣ ಬರಬೇಕಾದರೆ, ಇವರು ಮೊದಲು ಕೇಂದ್ರದಿಂದ ಬಿಡುಗಡೆಯಾದ ಹಣಕ್ಕೆ utilization certificate ಕಳುಹಿಸಿದರೆ ಮತ್ತೆ ಹಣ ಬಿಡುಗಡೆಯಾಗುವುದಕ್ಕೆ ವಿಳಂಬವಾಗುತ್ತದೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತವಾದ ಸೂಚನೆಯನ್ನು ಕೊಟ್ಟು ಈ ಒಂದು ನೇಕಾರರಿಗೆ ವಸತಿ ಯೋಜನೆಯಡಿಯಲ್ಲಿ ಬರುವ ಹಣ ಸಕಾಲದಲ್ಲಿ ದೊರಕಿ ಅವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸರ್ಕಾರ ಕ್ರಮವಹಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ

ಶ್ರೀ ಅಪ್ಪು ಪಟ್ಟಣ ಶೆಟ್ಟಿ   ಉಪಾಧ್ಯಕ್ಷರೆ, ಕೊಟ್ಟಂತಹ ಮಾಹಿತಿಯಲ್ಲಿ, ಜಿಲ್ಲೆಗೆ ಬರುವ ಬಾಕಿ ಏನು ಹಣವಿದೆ, ಕೇಂದ್ರ ಸರ್ಕಾರದ ಪತ್ರದ ದಿನಾಂಕ ೩ ರ ೨೦೦೭ರಲ್ಲಿ ವಸತಿ ಕಾರ್ಯಯೋಜನೆಯಡಿಯಲ್ಲಿ – ೨೦೦೨-೦೩ನೇ ಸಾಲಿನ ಅನುಮೋದಿತ ಪ್ರಸ್ತಾವನೆಯಂತೆ ಮೂರನೇ ಕಂತಿನ ಹಣವಾದ ೩೭೫೭ಲಕ್ಷ ಇಡೀ ರಾಜ್ಯಕ್ಕೆ ಬಿಡುಗಡೆಯಾಗಿದ್ದು ದಿನಾಂಕ ೨೦ ೨ ೨೦೦೭ ರಂದು ಸದರಿ ಹಣವು ರಾಜ್ಯಕಕ ಜಮೆಯಾಗಿರುತ್ತದೆ ಈ ಪೈಕಿ ಕೆಳಕಂಡಂತೆ ೪೮೩೫ ಲಕ್ಷ ರೂಪಾಯಿಗಳನ್ನು ತುಮಕೂರು ಜಿಲ್ಲೆಗೆ ಬಿಡುಗಡೆ ಮಾಡಲಾಗಿರುತ್ತದೆ ರಾಜ್ಯದ ಬಿಡುಗಡೆಯಾದ ಹಣ ಶೇ ೨೦ ರಷ್ಟಾಗಿರುತ್ತದೆಂದು ನಾನು ಹಿರಿಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ ಈ ಬಗ್ಗೆ ತಮಗೆ ಪತ್ರ ಬಂದಿದೆ ಆ ಬಗ್ಗೆ ಪರಿಶೀಲನೆ ಮಾಡಿ, ಯಾವುದೇ ತಪ್ಪಾಗಿದ್ದರೆ ಅಥವಾ ಸರಿಪಡಿಸುವುದಿದ್ದರೆ ಸರಿಪಡಿಸತುತ್ತೇನೆಂದು ಹೇಳಬಯಸುತ್ತೇನೆ

ಆ) ವಿಷಯ   ಶ್ರಿ ಸಿದ್ದೇಶ್ವ ಸಹಕಾರ ಬ್ಯಾಂಕ್ ನಿಯಮಿತ, ಬಿಜಾಪುರ, ಇದರಲ್ಲಿನ ನ್ಯೂನತೆಗಳ ಬಗ್ಗೆ ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರ ವಿರುದ್ದ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ ೧೯೫೯ರ ಪ್ರಕರಣ ೩೦(೧) ರನ್ವಯ ಕ್ರಮಜರುಗಿಸುವ ಬಗ್ಗೆ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ)   ಶ್ರೀ ಸಿದ್ದೇಶ್ವರ ಸಹಕಾರ ಬ್ಯಾಂಕ್ ನಿಯಮಿತ, ಬಿಜಾಪುರ, ಇದರಲ್ಲಿನ ನ್ಯೂನತೆಗಳ ಬಗ್ಗೆ ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ ೧೯೫೯ರ ಪ್ರಕರಣ ೩೦(೧) ರನ್ವಯ ಕ್ರಮಜರುಗಿಸುವ ಬಗ್ಗೆ ಮಾನ್ಯ ಸಹಕಾರಿ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ

ಶ್ರೀ ಜಿ ಟಿ ದೇವೇಗೌಡ (ಸಹಕಾರಿ ಸಚಿವರು)   ಮಾನ್ಯ ಉಪಾದ್ಯಕ್ಷರೆ,

* ಶ್ರೀ ಸಿದದೇಶ್ವರ ಸಹಕಾಬು ಬ್ಯಾಂಕ್ ನಿ ಬಿಜಾಮರ ಇದರ ವ್ಯವಹಾಬುಗಳ ಕುರಿತು ೧೭ ಆರೋಪಗಳ ಮೇಲೆ ಆಡಳಿತ

ಮಂಡಳಿಯನ್ನು ದಿನಾಂಕಾ ೨೩.೦೧.೨೦೦೭ರಂದು ರದ್ದುಗೊಳಿಸಿ ೬ ತಿಂಗಳ ಕಾಲ ಜಿಲ್ಲಾಧಿಕಾರಿಗಳು, ಬಿಜಾಪುರ ಅವರನ್ನು ಆಡಳಿತಗಾರರನ್ನಾಗಿ ನೇಮಿಸಲಾಗಿದೆ. ಆದೇಶ ಸಂಖ್ಯೆ ಯುಬಿಸಿ -೧/೧೧೭/ಎಸ್ ಎಸ್ ಎಸ್ / ೨೦೦೬-೦೭ ದಿನಾಂಕ ೨೩.೦೧.೨೦೦೭ ಲಗತ್ತಿಸಿದೆ.

* ಬ್ಯಾಂಕಿನ ವಿರುದ್ಧ ಹೊರಿಸಲಾದ ಆರೋಪಗಳನ್ನು ಸರಿಪಡಿಸಿ ವರದಿ ನೀಡಲು ಆಡಳಿತಗಾರರಿಗೆ ಸೂಚಿಸಲಾಗಿದೆ.

* ಅಲ್ಲದೆ ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಆದೇಶ ಸಂಖ್ಯೆ ಯುಬಿಸಿ - ೧/೧೧೭/ಎಸ್ ಎಸ್ ಎನ್ / ೨೦೦೬-೦೭ ದಿನಾಂಕ ೧೫-೨-೨೦೦೭ ರಲ್ಲಿ ಬ್ಯಾಂಕಿನ ವ್ಯವಹಾರಗಳ ಕುರಿತು ಪ್ರಕರಣ ನಡೆದ ವಿಚಾರಣೆಯನ್ನು ಆದೇಶಿಸಿದ್ದು, ಇದರಲ್ಲಿ ೨೦೦೦-೦೧ ರಿಂದ ೨೦೦೬-೦೭ರ ಅವಧಿಯಲ್ಲಿ ಬ್ಯಾಂಕಿನಿಂದ ವಿವಿಧ ರೀತಿಯ ಸಾಲಗಳನ್ನು ನೀಡುವಾಗ ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ / ನಿರ್ದೇಶನಗಳನ್ನು, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ ಹಾಗೂ ನಿಯಮ ಹಾಗೂ ಬ್ಯಾಂಕಿನ ಸಾಲಗಳ ಒಳನಿಯಮಗಳನ್ನು ಉಲ್ಲಂಘಿಸಿ ಹಾಗೂ ಭದ್ರತೆ ಪಡೆಯದೆ ನೀಡಿರುವ ಸಾಲದ ಪ್ರಕರಣಗಳಿದ್ದಲ್ಲಿ ಇಂತಹ ಬ್ಯಾಂಕಿಗೆ ಉಂಟಾದ ನಷ್ಟ ಹಾಗೂ ಅದಕ್ಕೆ ಹೊಣೆಗಾರರು ಯಾರು ಎಂಬುದನ್ನು ಗುರುತಿಸುವ ಅಂಶವು ಸಹ ಒಳಗೊಂಡಿರುತ್ತದೆ. ಬೆಳಗಾಂ ಪ್ರಾಂತದ ಸಹಕಾರ ಸಂಘಗಳ ಜಂಟಿ ನಿಬಂಧಕರು ಪ್ರಕರಣ ೬೪ರ ವಿಚಾರಣಾಧಿಕಾರಿ ಆಗಿರುತ್ತಾರೆ.

* ಶ್ರೀ ಜ್ಞಾನಯೋಗಿ ಶಿವಕುಮಾರ ಸಕ್ಕರೆ ಕಾರ್ಖಾನೆ ನಿ, ಹಿರೇಬೇವನೂರ ಇದಕ್ಕೆ ದಿನಾಂಕ ೩೧.೦೩.೨೦೦೬ರಂದು ರೂ ೩.೨೫ ಲಕ್ಷ ಕಟ್ಬೋರಿಯಂ ಸಾಲ ನೀಡಿದ ವಿವರಗಳಣ್ನು ಈ ಕೆಳಕಂಡಂತಿರುತ್ತದೆ.

೧) ಸಾಲ ನೀಡಿದ ದಿನಾಖ ೩೧ ೦೩ ೨೦೦೩

೨) ಸಾಲದ ಮೊತ್ತ ರೂ ೩೨೫ ೦೦ ಲಕ್ಷ

೩) ವಸೂಲಾದ ಸಾಲದ ಮೊತ್ತ ಅಸಲು ರೂ ೧೦೮ ೧೭ ಲಕ್ಷ

೪) ಬಖ್ಯ ರೂ ೧೫೧ ೯೮ಲಕ್ಷ

೪) ಈಗ ಪಾಕಿ ಇರುವ ಸಾಲದ ಮೊತ್ತ ರೂ ೨೩೯ ೬೩ ಲಕ್ಷ

೫ ಮುದ್ದತ್ತು ಮೀರಿದ ಸಾಲದ ವಿವರ ಅಸಲು ರೂ ೬೦೩೭ ಲಕ್ಷ

ಒಟ್ಟು ದೂ ೯೮ ೭೧ ಲಕ್ಷ

ಈಗ ಸದರಿ ಸಾಲದ ವಸೂಲಿ ಸಲುವಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ

* ಈ ರಾಜ್ಯದ ಆಡಳಿತ ಮಂಡಳಿಯನ್ನು ಆರೋಪಗಳ ಮೇರೆಗೆ ರದ್ದುಗೊಳಿಸಿದ್ದು ಇದರಲ್ಲಿ ೨೦೦೧-೦೨ ರಲ್ಲಿ ಶ್ರೀ ಜ್ಞಾನಯೋಗಿ ಶಿವಕುಮಾರ ಸ್ವಾಮೀಜಿ ಸಕ್ಕರೆ ಕಾರ್ಖಾನೆ ನಿ ಹಿರೇದೇವನೂರು ಇದರ ಷೇರು ಖರೀದಿಸಲು ೧೬೯ ಜನ ಸದಸ್ಯರಿಗೆ ಒಟ್ಟು ರೂ ೮ ೩೬ ಕೋಟಿ ಸಾಲ ನೀಡಲಾಗಿದ್ದು, ಈ ರೀತಿ ನೀಡಲಾದ ಸಾಲದ ಅರ್ಜಿಗಳಲ್ಲಿ ಉದ್ದೇಶಗಳನ್ನು ತಿದ್ದಿ ವ್ಯಾಪಾರ ಹಾಗೂ ಹಳೆಯ ಸಾಲಗಳ ಮರುಪಾವತಿ " ಎಂದು ನಮೂದಿಸಿರುವ ವಿಷಯವು ಒಂದಾಗಿದ್ದು, ಈಗ ಒಟ್ಟು ೧೬೨ ಪ್ರಕರಣಗಳನ್ನೊಳಗೊಂಡ ರೂ ೭,೭೪,೨೮,೦೦೦/- ಮೊತ್ತವನ್ನು ವಸೂಲಿ ಮಾಡಲು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ ೧೯೫೯ರ ಪ್ರಕರಣ ೭೦ರಡಿಯಲ್ಲಿ ದಾವಾ ಪ್ರಕರಣ ದಾಖಲು ಮಾಡಿದೆ ಇನ್ನುಳಿದ ೭ ಪ್ರಕರಣಗಳಲ್ಲಿ ಸಾಲ ವಸೂಲಾಗಿಯಾಗಿರುತ್ತೆ

ಆಡಳಿತಗಾರರು ಪ್ರಭಾರ ವಹಿಸಿಕೊಂಡ ನಂತರ ಬ್ಯಾಂಕಿನ ಪ್ರಗತಿ ಕೆಳಗಿನಂತೆ ಇರುತ್ತೆ,

(ರೂ ಲಕ್ಷಗಳಲ್ಲಿ)

ಕ್ರಸಂ	ವಿವರ	ದಿ ೨೫ ೦೧ ೨೦೦೭ಕ್ಕೆ ಇದ್ದಂತೆ	ದಿ ೧೬ ೦೩ ೨೦೦೭ಕ್ಕೆ ಇದ್ದಂತೆ
೧ ೨ ೩	ಷೇರು ಬಂಡವಾಳ ಠೇವುಗಳು ಸಾಲ ಮತ್ತು ಮುಂಗಡಗಳು	೬೯ ೪೯ ೧೯೨೮೮ ೮೫ ೧೩೨೦೩ ೨೩	೭೦೩ ೨೦ ೧೭೭೪೪ ೨೭ ೧೭೭೪೪ ೨೭
೪	ಮುದ್ದತ್ತು ಮೀರಿದ ಸಾಲದ ಮೊತ್ತ ಮತ್ತು ಪ್ರತಿಶತ	೪೩೭೬ ೭೬	೪೨೭೧ ೧೫
೫	ನಿವ್ವಳ ಅನುತ್ಪಾದಕ ಆಸ್ತಿ ಮೊತ್ತ ಹಾಗೂ ಪ್ರಮಾಣ	೫೬೭೨ ೨೨ ೫೦ ೩೩	೪೪೬೪ ೧೦ ೪೧ ೪೦

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಮಾನ್ಯ ಉಪಾಧ್ಯಕ್ಷರೆ, ಈ ಕಾಲಿಂಗ್ ಅಟೆನ್ ಶನ್ ನ್ನು ರೈಜ್ ಮಾಡಬೇಕಾದರೆ ಸ್ವಲ್ಪ ವ್ಯಾಪಕವಾಗಿ ಚರ್ಚೆಯಾಗಬೇಕೆನ್ನುವ ರೀತಿಯಲ್ಲಿ ಮಾಡಿದ್ದೇವೆ ಏನೆಂದರೆ ಆ ಶುಗರ್ ಫ್ಯಾಕ್ಟರಿ ಕಂಪನೀಸ್ ಆಯ್ಕ್ಟ್ ಕೆಳಗಡೆ ಬರುತ್ತದೆ ಅದನ್ನೂ ಸೇರಿಸಿ ಮುಖ್ಯಮಂತ್ರಿಗಳು ಹಾಗೂ ತಾವು ಉತ್ತರ ಕೊಡಬೇಕೆಂದು ನಾನು ಕೇಳಿದ್ದೆ ಇದರ ಜೊತೆಗೆ ಈ ಸದನದ ಸದಸ್ಯರಾದ ಮಾನ್ಯ ಶಿವಾನಂದ ಪಾಟೀಲ್ ರವರು ಇದರ ಮೇಲೆ ಒಂದು ಹೋರಾಟವನ್ನು ಆರಂಭ ಮಾಡಿಕೊಂಡು ಅನೇಕ ದಿವಸಗಳು ಉಪವಾಸ ಕುಳಿತು ಇಡೀ ರಾಜ್ಯದ ಗಮನವನ್ನು ಸೆಳೆದು ಅನಂತರ ಮುಖ್ಯಮಂತ್ರಿಗಳು ಮತ್ತು ಗೃಹ ಮಂತ್ರಿಗಳೂ ಅವರಿಗೊಂದು ಆಶ್ವಾಸನೆಯನ್ನು ಕೊಟ್ಟು ನಾವು

ಇದನ್ನು ತನಿಖೆ ಮಾಡಿಸುತ್ತೇವೆ, ನೀವು ಉಪವಾಸ ಸತ್ಯಾಗ್ರಹವನ್ನು ಕೈಬಿಡಿ ಎಂದು ಮೇಲೆ ಶಿವಾನಂದ ಪಾಟೀಲರು ಉಪವಾಸ ಸತ್ಯಾಗ್ರಹವನ್ನು ಕೈಬಿಟ್ಟರು ಈ ಕಾಲಿಂಗ್ ಅಟೆನ್ ಶನ್ ನಾವು ರೈಜ್ ಮಾಡಿದ್ದೇವೆ, ಇದರಲ್ಲಿ ತಮಗೆ ನಾನು ಎರಡ್ಮೂರು ಕ್ಲಾರಿಫಿಕೇಶನ್ ನ್ನು ಕೇಳಬೇಕಾಗಿದೆ ಒಂದು, ಈಗಾಗಲೇ ತಮಗೆ ಆ ಬ್ಯಾಂಕ್ ನಲ್ಲಿ ಏನು ಟ್ರಾನ್ಸಾಕ್ಷನ್ ನಡೆದಿದೆ ಎಂಬುದು ಗೊತ್ತಾಗಿಬಿಟ್ಟಿದೆ

ಅರ್ಬನ್ ಬ್ಯಾಂಕ್ ಬಹಳ ಪ್ರತಿಷ್ಠಿತವಾಗಿ ಸುಮಾರು ನೂರು ವರ್ಷಗಳ ಬಹಳ ಚೆನ್ನಾಗಿದ್ದಂಥ ಅರ್ಬನ್ ಬ್ಯಾಂಕ್ ನ್ನು ಒಂದು ಶುಗರ್ ಫ್ಯಾಕ್ಟರಿಯನ್ನು ಮಾಡಿಸುತ್ತೇವೆ ಎನ್ನುವ ಹೆಸರಿನಲ್ಲಿ ಇವೊತ್ತು ಮುಚ್ಚಿಸಿಬಿಟ್ಟಿದ್ದಾರೆ ಇಲ್ಲಿಂದ ಅಲ್ಲಿಗೆ ಹಣ ಟ್ರಾನ್ಸ್ ಫರ್ ಆಗಬೇಕಾದರೆ ಏನೇನೆಲ್ಲಾ ಆಗಿಹೋಯಿತು, ಅಲ್ಲೇನಾಯಿತು? ಅಲ್ಲಿ ಯಾರು ಯಾರಿಗೆ ಶೇರ್ ಸರ್ಟಿಫಿಕೇಟ್ ಕೊಡಬೇಕಾಗಿತ್ತು, ಅಲ್ಲಿ ಫೇಕ್ ಸರ್ಟಿಫಿಕೇಟ್ ಕೊಟ್ಟಿದ್ದರಿಂದ ಕಂಪನೀಸ್ ಆಯಕ್ಟ್ ಕೆಳಗಡೆ ಅವರ ಮೇಲೆ ಕಂಪ್ಲೆಂಟ್ ಆಯಿತು ಪೋಲಿಸ್ ಕೇಸ್ ಆಗಿ ಎಫ್ ಐ ಆರ್ ಆಯಿತು ಇಷ್ಟೆಲ್ಲಾ ಕೋಟ್ಯಾಂತರ ರೂಪಾಯಿ ಅವ್ಯವಹಾರವಾದರೂ, ಷೇರ್ ಸರ್ಟಿಫಿಕೇಟ್ ಏನು ಇಶ್ಯೂ ಆಗಿತ್ತು ಅದು ಫೇಕ್ ಇದೆ ಆದರ ಬದಲು ಒರಿಜಿನಲ್ ಸರ್ಟಿಫಿಕೇಟ್ ಇಶ್ಯೂ ಆಗಿಲ್ಲ ಎಂದಮೇಲೆ ಮತ್ತೊಂದು ಷೇರ್ ಸರ್ಟಿಫಿಕೇಟ್ ನ್ನು ಕೊಟ್ಟು ಕಮಿಟ್ ಮೆಂಟ್ ಮಾಡಿಕೊಂಡುಬಿಟ್ಟಿದ್ದಾರೆ ಬೇಕಾಬಟ್ಟಿ ಎಂ ಡಿ ಚೇಂಜ್ ಆಗುತ್ತಾರೆ, ಎಷ್ಟು ಜನ ಇಲ್ಲಿಂದ ಅಲ್ಲಿಗೆ ವರ್ಗಾವಣೆಯಾಗಿದ್ದು, ಯಾವ ಯಾವ ರೈತರ ಹೆಸರಿನಲ್ಲಿ ಆಗಿತ್ತೋ ಆ ರೈತರನ್ನು ಇವೊತ್ತು ಬಿಟ್ಟುಬಿಟ್ಟು ಯಾರೋ ಇಡೀ ಶುಗರ್ ಫ್ಯಾಕ್ಟರಿಯನ್ನು ಕಟ್ಟಿರುವವರನ್ನೇ ಅವರ ಹೆಸರನ್ನು ತೆಗೆದುಕೊಂಡು ಹೋಗುವಂಥ ಸ್ಥಿತಿ ಈ ರಾಜ್ಯದಲ್ಲಿ ನಿರ್ಮಾಣವಾದರೆ, ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತುಕೊಂಡಿದ್ದರೆ ನಾವು ಯಾರಿಗೆ ಹೇಳಬೇಕು? ಏನು ಹೇಳಬೇಕು? ಸುಮಾರು ಒಂದಿಷ್ಟು ರೈತರನ್ನು ಕರೆದು ನೀವು ಪ್ರಮೋಟರ್ ಆಗಿ, ನಿಮ್ಮದು ಒಂದಿಷ್ಟಿಷ್ಟು ಹಣವನ್ನು ನಾವು ತೆಗೆದುಕೊಳ್ಳುತ್ತೇವೆ, ನೀವೂ ಕೂಡ ಬಂಡವಾಳಗಾರರಾಗಿರು ಎಂದು ಹೇಳಲಾ?ಗದೆ ಅರ್ಬನ್ ಬ್ಯಾಂಕ್ ನ

ಮೇಲೆ ವರ್ಗಾವಣೆ ಮಾಡಿದ ಹಣವನ್ನು, ನೀವು ಅರ್ಬನ್ ಬ್ಯಾಂಕ್ ಗೂ ತೀರಿಸಲಿಲ್ಲ, ಅಲ್ಲಿ ಅವರದ್ದು ಷೇರು ಎಂದೂ ಕೂಡ ಕನ್ಸಿಡರ್ ಆಗಲಿಲ್ಲ ಇವೆಲ್ಲ ರೀತಿಯಲ್ಲಿ ಮಾಡಿರುವ ಅವ್ಯವಹಾರದ ಮೊತ್ತ ಎಷ್ಟು ಕೋಟಿ ಇದೆ ಇವೊತ್ತು? ನೀನೇನು ಆಯಕ್ಷನ್ ತೆಗೆದುಕೊಳ್ಳುತ್ತೀರಿ? ಶುಗರ್ ಫ್ಯಾಕ್ಟರಿ ಮ್ಯಾನೇಜ್‌ಮೆಂಟ್ ಮೇಲೆ ಮೊದಲು ಏನು ಆಯಕ್ಷನ್ ತೆಗೆದುಕೊಳ್ಳುತ್ತೀರಿ? ಅರ್ಬನ್ ಬ್ಯಾಂಕ್ನಲ್ಲಿ ಇಲ್ಲೀಗಲ್ ಆಗಿ ಟ್ರಾನ್ಸಾಕ್ಷನ್ ನ್ನು ಯಾರು ಮಾಡಿದ್ದಾರೋ ಅವರ ಏಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ದಯಮಾಡಿ ಸ್ಪಷ್ಟೀಕರಣವನ್ನು ಕೊಡಬೇಕು ನಿರ್ದಾಕ್ಷಿಣ್ಯವಾಗಿ, ಅವರು ಎಷ್ಟೇ ದೊಡ್ಡವರು ಇರಲಿ, ಅವರ ಮೇಲೆ ಕಾನೂನಿನ ಕೆಳಗಡೆ ತಾವು ಕ್ರಮವನ್ನು ಜರುಗಿಸುತ್ತೀರಾ? ಈ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಆಡಳಿತ ಇದೆಯೆಂದು ತಾವು ಪ್ರೂವ್ ಮಾಡುತ್ತೀರ? ಅಥವಾ ಯಾರು ದೊಡ್ಡವರಿದ್ದಾರೆ ಅವರು ಏನು ಬೇಕಾದರೂ ಮಾಡಿಕೊಂಡು ಹೋಗಬಹುದು ಎಂದು ಖುಲ್ಲಾ ಮೈದಾದಂತೆ ಇಡೀ ರಾಜ್ಯವನ್ನು ಖುಲ್ಲಾ ಇಡುತ್ತೀರಾ ? ನೀವು ಖುಲ್ಲಾ ಇಡುವುದಾದರೆ ನಾವು ಇದರಿಂದ ಏನಾದರೂ ಪಾಠ ಕಲಿತುಕೊಂಡು ಏನನ್ನಾದರೂ ಮಾಡಕೊಳ್ಳುತ್ತೇವೆ ಇಲ್ಲಾ, ನಾಳೆ ಸಿಕ್ಕಿಹಾಕಿಕೊಂಡು ಬಿಡುತ್ತೇವೆ, ತಪ್ಪಾಗಿತ್ತೇನೋ ಎಂದು ಹೆದರಿಕೊಳ್ಳುವವರು ಸುಮ್ಮನೇ ಈಗ ಸಿದ್ದರಾಗಿಬಿಟ್ಟಿದ್ದೇವೆ ಮಾಡ್ಕೊಂಡ್ ಮಾಡ್ಕೊಂಡ್ ಹೋಗುವವರು ಹೋಗುತ್ತಲೇ ಇದ್ದಾರೆ, ಈ ಸರ್ಕಾರಕ್ಕೆ ಏನಾದರೂ ನೀತಿ ಇದೆಯೇ? ಶಿವಾನಂದ ಪಾಟೀಲರಿಗೆ ನೀವು ಏನು ಅಶ್ಯೂರೆನ್ಸ್ ಕೊಟ್ಟಿದ್ದೀರಿ, ಇವೊತ್ತಿನವರೆಗೆ ಸರ್ಕಾರ ಆ ದಿಕ್ಕಿನಲ್ಲಿ ಏನು ಈಡೇರಿಸಿದ್ದೀರಿ ಎಂದು ಹೇಳಬೇಕು

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಕೆಲವು ವಿಚಾರಗಳನ್ನು ಮಾಧುಸ್ವಾಮಿಯವರು ಪ್ರಸ್ತಾಪ ಮಾಡಿದ್ದಾಋಎ ಮಾನ್ಯ ಶಿವಾನಂದ ಪಾಟೀಲರು ಉಪವಾಸ ಸತ್ಯಾಗ್ರಹ ಕುಳಿತುಕೊಂಡ ಮೇಲೆ ನಾನು ಕೂಡ ಹೋಗಿ ಆ ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದೆ ಆ ರೀತಿ ಭಾಗವಹಿಸಿದಂಥ ಸಂದರ್ಭದಲ್ಲಿ

ನಾನು ನೋಡಿದಂಥ ದೃಶ್ಯ, ಸಾವಿರಾರು ಜನ ರೈತರು ಅವರ ಜೊತೆಯಲ್ಲಿ ಧರಣಿ ಕುಳಿತಿದ್ದರು ಈ ರೀತಿ ಧರಣಿ ಕುಳಿತಿದ್ದಾರಲ್ಲ ಏಕೆ ಎಂದು ಕೇಳಿದರೆ, ವಾಸ್ತಕವಾಗಿ ರೈತರ ಹತ್ತಿರ ಬಂಡವಾಳವನ್ನು ಹಾಕಿಸಿ, ನಿಮ್ಮನ್ನೆಲ್ಲಾ, ಅದಕ್ಕೆ ಷೇರು ಹೋಲ್ಡರ್ಸ್‌ಗಳನ್ನಾಗಿ ಮಾಡುತ್ತೇವೆಂದು ಹೇಳಿ ಆ ರೈತರ ಜಮೀನನ್ನೆಲ್ಲಾ ಮಾರ್ಟಗೇಜ್ ಮಾಡಿ ಬ್ಯಾಂಕ್ ನಲ್ಲಿ ಸಾಲವನ್ನು ತೆಗೆದುಕೊಂಡು ಆ ಸಾಲವನ್ನು ಇದಕ್ಕೆ ಬಂಡವಾಳವನ್ನಾಗಿ ಹಾಕಿ ಫ್ಯಾಕ್ಟರಿ ನಡೆಸಿ ಮತ್ತೆ ನಿಮಗೆ ಷೇರು ಸರ್ಟಿಫಿಕೇಟ್ ಕೊಡುತ್ತೇವೆ, ನಿಮ್ಮನ್ನು ಪಾಲುದಾರರನ್ನಾಗಿ ಮಾಡುತ್ತೇವೆ ಎನ್ನತಕ್ಕಂಥ ಆಶ್ವಾಸನೆಯ ಮೇಲೆ ಆ ರೈತರ ಜಮೀನುಗಳನ್ನು ಮಾರ್ಟಗೇಜ್ ಮಾಡಿ ಹಣವನ್ನು ತೆಗೆದುಕೊಂಡಿದ್ದಾರೆ ಆದರೆ ಆ ಷೇರ್ ಸರ್ಟಿಫಿಕೇಟ್ ನ್ನು ಅವರಿಗೆ ಕೊಡದೇ ಇದ್ದಾಗ ಕಡೆಗೆ ಆ ರೈತರೆಲ್ಲರೂ ಹೋಗಿ ಗಲಾಟೆ ಮಾಡಿದಾಗ ಷೇರ್ ಸರ್ಟಿಫಿಕೇಟ್ ಕೊಟ್ಟಿದ್ದಾರೆ ನನ್ನ ಹತ್ತಿರ ಆ ಷೇರು ಸರ್ಟಿಫಿಕೇಟ್ ಇದೆ ಅದೂ ಕೂಡ ಫೇಕ್ ಸರ್ಟಿಫಿಕೇಟ್ ಆಗಿದೆ ಒರಿಜಿನಲ್ ಸರ್ಟಿಫಿಕೇಟ್ ನ್ನು ಗಲಾಟೆ ಆದಮೇಲೆ ಒಂದೆರಡು ಕೊಟ್ಟಿದ್ದಾರೆ ಈ ಫೇಕ್ ಸರ್ಟಿಫಿಕೇಟ್‌ನ್ನು ಹೇಗೆ ಕೊಟ್ಟರೆಂದರೆ ಜನರಲ್ ಬಾಡಿ ಮೀಟಿಂಗ್ ಎಂದು ಹೇಳಿ ಕರೆದುಬಿಟ್ಟು ಅಟೆನ್ಡೆನ್ಸ್ ರಿಜಿಸ್ಟರ್ ಗೆ ಸಹಿಯನ್ನು ಮಾಡಿಸಿಕೊಂಡು ಆ ಸಹಿಯನ್ನೇ ಇವೊತ್ತು ಉಪಯೋಗಿಸಿಕೊಂಡು ಇಡೀ ಷೇರ್‌ನ್ನೇ ಕನ್ ವರ್ಟ್ ಮಾಡಿ ಇ ಒ ನೇ ಎಂ ಡಿ ಎಂದು ಡಿಕ್ಲೇರ್ ಮಾಡಿಕೊಂಡುಬಿಟ್ಟಿದ್ದಾರೆ ಮುಗ್ಧ ರೈತರಿಗೆ ಇವೆಲ್ಲಾ ಗೊತ್ತಿಲ್ಲ, ಪಾಪ ನಂಬಿಕೆ, ರೈತರಿಗೆ ಊಟ ಹಾಕಿದರು, ಸಹಿಯನ್ನು ಅಟೆನ್ ಡೆನ್ಸ್ ರಿಜಿಸ್ಟರ್ ಗೆ ಹಾಕಿ ಎಂದರು ರೈತರು ಸಹಿಯನ್ನು ಮಾಡಿಬಿಟ್ಟರು ಆ ಸಹಿಯನ್ನೇ ಉಪಯೋಗಿಸಿಕೊಂಡು ರೈತರೆಲ್ಲಾ ತಮಗೆ ಬರೆದುಕೊಟ್ಟುಬಿಟ್ಟಿದ್ದಾರೆ ಎಂದು ಹೇಳಿ ಇಡೀ ಫ್ಯಾಕ್ಟರಿಯನ್ನು ತೆಗೆದುಕೊಂಡುಬಿಟ್ಟಿದ್ದಾರೆ ಇದರ ಬಗ್ಗೆ ಕ್ರಿಮಿನಲ್ ಕೇಸ್ ಆಗಿದೆ ಕೇಸ್ ಆದಮೇಲೆ ಎಫ್ ಐ ಆರ್ ನಲ್ಲಿ ಬಹಳ ಸ್ಪಷ್ಟವಾಗಿ ೪೨೦ ರ ಕೇಸ್ ರಿಜಿಸ್ಟರ್ ಆಗಿದೆ ಅದರಲ್ಲಿ ಇಷ್ಟೇ ಇರತಕ್ಕಂಥದದು

ಮೇಲೆ ನಮೂದಿಸಿರುವ ಆರೋಪಿಗಳು, ಯಾರು ಯಾರು ಆರೋಪಿಗಳೆಂದರೆ, ಬಸವರಾ ಪಾಟೀಲ್ ಯತ್ನಾಳ್ ಮತ್ತು ಇತರರು ಬಸವನಗೌಡ ಪಾಟೀಲ್ ಎಂ ಸಿ ಹೆಚ್ ಪಾಟಿಲ್ ಇವರ ಮೇಲೆ ಬಂದಿರುವ ಆರೋಪ ಏನೆಂದರೆ, ಮೇಲೆ ನಮೂದಿಸಿರುವ ಆರೋಪಿಗಲೂ ಶ್ರಿ ಜ್ಞಾನಯೋಗಿ ಶಿವಕುಮಾರ್ ಸಕ್ಕರೆ ಕಾರ್ಖಾನೆಯ ಸಿ ಎಂ ಡಿ ಹಾಗೂ ಎಂ ಡಿ ಗಳು ನಾಲ್ಕು ವರ್ಷಗಳ ಹಿಂದೆ ಫಿರ್ಯಾದುವಾರದಿಂದ ೫ ಲಕ್ಷ ರೂಪಾಯಿಗಳನ್ನು ಷೇರು ಹಣ ಸಂಗ್ರಹಿಸಿ ಷೇರು ಪತ್ರಗಳನ್ನು ಕೊಡದೇ ಅನಧಿಕೃತವಾಗಿ ಹಣವನ್ನು ಕಾರ್ಖಾನೆಗೆ ಬಳಸಿಕೊಂಡು ಫಿರ್ಯಾದುದಾರರು ಷೇರು ಪತ್ರವನ್ನು ನೀಡಬೇಕೆಂದು ಒತ್ತಾಯ ಮಾಡಿದಾಗ ೫ ಲಕ್ಷ ರೂಪಾಯಿಗಳಿಗೆ ಖೊಟ್ಟಿ ಷೇರು ಪತ್ರವನ್ನು ನೀಡಿ ವಂಚನೆ ಮಾಡಿದ್ದಾರೆ ಫಿರ್ಯಾದುದಾರರಾದ ರೈತರಿಗೆ ವಂಚನೆ ಮಾಡಲಾಗಿದೆಯೆಂದು ಇವರ ಮೇಲೆ ಸೆಕ್ಷನ್ ೪೨೦ ಕೇಸ್ ರಿಜಿಸ್ಟರ್ ಆಗಿದೆ ರೈತರಿಗೆ ವಂಚನೆ ಮಾಡಿದ್ದಾಋುಎ, ರೈತರನ್ನು ಷೇರುದಾರರನ್ನಗಿ ಮಾಡಬೇಕಾಗಿತ್ತು ಪಾಲುದಾರರನ್ನಗಿ ಮಾಡಬೇಕಾಗಿತ್ತು ಆದರೆ ಮಾಡದೇ ಇವರುಗಳ ಸಹಿಯನ್ನು ಷೇರಿಗಾಗಿ ಎಂದು ತೆಗೆದುಕೊಂಡು ಆ ಫ್ಯಾಕ್ಟರಿಯನ್ನೇ ಅವರ ಮ್ಯಾನೇಜ್ ಮೆಂಟ್ ಗೆ ತೆಗೆದುಕೊಂಡಿದ್ದಾಋುಎ ಇಷ್ಟು ಮೋಸ ಮಾಡಿರುವುದರ ಜೊತೆಗೆ ಆ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ಕಾರಣಕರ್ತರಾದಂಥ ಡೈರೆಕ್ಟರ್ಸ್ ಯಾರು ಇದ್ದರೋ ಅವರನ್ನೆಲ್ಲಾ ತೆಗೆದುಬಿಟ್ಟಿದ್ದಾರೆ ತೆಗೆಯುವುದಕ್ಕೆ ರೆಸಲ್ಯೂಶನ್ ನ್ನು ಮಾಡಿದ್ದಾರೆ ಅದರಲ್ಲಿ ಶಿವಾನಂದ ಪಾಟೀಲರು ಒಬ್ಬರು ಡೈರಕ್ಟರ್, ಇವರನ್ನೂ ತೆಗೆಯುವುದಕ್ಕೆ ತೀರ್ಮಾನ ಮಾಡಿದ್ದಾರೆ ಈ ರೀತಿ ರೈತರಿಗೆ ವಂಚನೆ ಮಾಡಿದ್ದಾಋುಎ, ಕಾರ್ಖಾನೆಯನ್ನು ಸ್ಥಾಪನೆ ಮಾಡಿದವರಿಗೂ ವಂಚನೆ ಮಾಡಿ ಇಡೀ ಕಾರ್ಖಾನೆಯನ್ನೇ ತಮ್ಮ ಪ್ರಾಪರ್ಟಿಯನ್ನಾಗಿ ಮಾಡಿಕೊಂಡಿದ್ದಾರೆ ನಾನು ಒತ್ತಾಯ ಮಾಡುವುದೇನೆಂದೆ, ಅಲ್ಲಿನ ರೈತರ ಹತ್ತಿರ ಸಾಲ ಮಾಡಿಸಿ ಆ ಕಾರ್ಖಾನೆಗೆ ಏನು ಬಂಡವಾಳವನ್ನು ಹಾಕಲಾಗಿದೆ ಆ ರೈತರಿಗೆ ಅನ್ಯಾಯವಾಗಿದೆ ಆ ರೈತರನ್ನು ಆ ಕಾರ್ಖಾನೆಯ ಮಾಲೀಕರನ್ನಾಗಿ ಮಾಡಬೇಕು, ರೈತರಿಗೆ ಯಾರು

ವಂಚನೆಯನ್ನು ಮಾಡಿದ್ದಾರೆ ಅವರ ಮೇಲೆ ತೀವ್ರ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುತ್ತೇವೆ

ಶ್ರೀ ಶಿವಾನಂದ ಎಸ್ ಪಾಟೀಲ್ (ತಿಕೋಟ) ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಮಾನ್ಯ ಸಚಿವರ ಗಮನಕ್ಕೆ ಬಹಳಷ್ಟು ವಿಚಾರಗಳು ಬಂದಿದೆ ಆದರೆ ಇವುಗಳು ಯಾವ ದಿಕ್ಕಿನಲ್ಲಿ ಹೋಗಬೇಕಾಗಿತ್ತೋ ಆ ದಿಕ್ಕಿನಲ್ಲಿ ಹೋಗಿಲ್ಲದಿರುವುದಕ್ಕೆ ನಮಗೆ ಖೇದವಾಗುತ್ತದೆ ನೂರು ವರ್ಷಗಳ ಇತಿಹಾಸ ಹೊಂದಿರುವ ಈ ಬಾಂಕ್ ಅವನತಿಗೆ ಹೋಯಿತು ದಕ್ಷಿಣ ಕರ್ನಾಟಕದಲ್ಲಿ ಹಿಂದೆ ನೀವೇನು ಅಮಾನತ್ ಬ್ಯಾಂಕ್ ಶೆಡ್ಯೂಲ್ ಬ್ಯಾಂಕ್ ಆಗುತ್ತದೆ ಎನ್ನುವಂಥ ಸ್ಥಿತಿಯಲ್ಲಿ ಇದ್ದಾಗ ಅದೂ ಇದೇ ತರಹ ಮುಚ್ಚಿಹೋಯಿತು ನಮ್ಮ ಉತ್ತರ ಕರ್ನಾಟಕದಲ್ಲಿಯೇ ಇದೊಂದು ಪ್ರತಿಷ್ಠಿತ ಬ್ಯಾಂಕ್ ಆಗಿತ್ತು ಸುಮಾರು ೩೦೦ ಕೋಟಿ ರೂಪಾಯಿಗಳ ವ್ಯವಹಾರವನ್ನು ಮಾಡುತ್ತಿತ್ತು ಈ ಬ್ಯಾಂಕ್ ೧೯೧೨ ರಿಂದ ೨೦೦೨ ರವರೆಗೆ ಆಡಿಟ್ ಕ್ಲಾಸಿಫಿಕೇಶನ್ ನಲ್ಲಿ ಎ 'ಗ್ರೇಡ್ ಆಗಿದೆ ಆ ದಾಖಲೆಯನ್ನು ಕೂಡ ನಾನು ನಿಮಗೆ ಕೊಡುತ್ತೇನೆ ಆದರೆ ಇವರು ಯಾವಾಗ ಅಧ್ಯಕ್ಷರಾಗಿ ಬರುತ್ತಾರೆ ಆ ಬ್ಯಾಂಕ್ ತದನಂತರದಲ್ಲಿ ಬಿ ಗೆ ಬರುತ್ತದೆ, ಸಿ ಗೆ ಬರುತ್ತದೆ, ಡಿ ಗೆ ಬರುತ್ತದೆ ಇವೊತ್ತು ಯಾವ ಪರಿಸ್ಥಿತಿಯಲ್ಲಿದೆಯೆಂದರೆ ಎನ್ ಪಿ ಎ ೫೬ ಪರ್ಸೆಂಟ್ ಆಗಿ ಇವೊತ್ತು ಬ್ಯಾಂಕ್ ಮುಚ್ಚಿ ಆ ಠೇವಣಿದಾರರು ರಸ್ತೆ ಮೇಲೆ ಬಂದು ನಿಲ್ಲತಕ್ಕಂಥ ಸ್ಥಿತಿಗೆ ತಲುಪಿದ್ದಾರೆ ಇಷ್ಟಾದರೂ ನಿಮ್ಮ ಇಲಾಖೆಯವರ ಕಣ್ಣು ತೆರೆಯಲಿಲ್ಲವಲ್ಲ ಅದು ಎಷ್ಟು ದುಃಖದ ಸಂಗತಿ ಎಂದು ನನಗನ್ನಿಸುತ್ತಿದೆ ಇವೊತ್ತು ಸುವರ್ಣ ಸಹಕಾರ ಸಪ್ತಾಹ ಆಚರಣೆಯನ್ನು ಮಾಡತಕ್ಕಂಥ ಸ್ಥಿತಿಯಲ್ಲಿದ್ದೇವೆ ಇವೊತ್ತು ಇಂಥ ಒಂದು ಪ್ರತಿಷ್ಠಿತ ಸಂಸ್ಥೆಗಳನ್ನು ಬಲಿ ಕೊಡತಕ್ಕಂಥ ಸ್ಥಿತಿಗೆ ನಿಮ್ಮ ಸಹಕಾರಿ ಇಲಾಖೆ ಅಧಿಕಾರಿಗಳು ಬಂದರೆ ನಿಮ್ಮ ಇಲಾಖೆ ಏಕಿರಬೇಕು ಎಂದು ನಾನು ನಿಮ್ಮನ್ನು ಕೇಳಬೇಕಾಗುತ್ತದೆ ಇದು ಬಹಳ ಖೇದವೆಂದು ನನಗನ್ನಿಸುತ್ತದೆ ಏಕೆಂದರೆ ನೂರು ವರುಷಗಳ ಇತಿಹಾಸ ಇರತಕ್ಕಂಥ ಬ್ಯಾಂಕ್ ಗೆ

ಇವರೊಬ್ಬರು ಅಧ್ಯಕ್ಷರಾಗಿ ಹೋದಮೇಲೆ ಇವೊತ್ತು ಎನ್ ಪಿ ಎ ೫೬ ಪರ್ಸೆಂಟ್ ಆಗುತ್ತದೆ ಇವೊತ್ತಿಗೆ ೨೦ ಕೋಟಿ ಲಾಸ್ ಆಗಿದೆ ಇತಿಹಾಸದಲ್ಲಿ ಯಾವುದೇ ವರ್ಷ ಲಾಸ್ ಬಂದಿರಲಿಲ್ಲ ಆ ಬ್ಯಾಂಕ್ ಗೆ ಇವೊತ್ತು ೧೮ ರಿಂದ ೨೦ ಕೋಟಿ ಲಾಸ್ ಬಂದಿದೆ ಒಂದು ಉದಾಹರಣೆಯನ್ನು ನಾನು ನಿಮಗೆ ಹೇಳಬಯಸುತ್ತೇನೆ ಇದನ್ನು ಹೇಳಬಾರದು, ಆದರೆ ಹೇಳುತ್ತಿದ್ದೇನೆ ಒಬ್ಬ ಮಾಜಿ ಶಾಸಕರಿಗೆ ಲೋನ್ ನ್ನು ಕೊಟ್ಟಿದ್ದಾರೆ ೫೧ ಲಕ್ಷ ರೂಪಾಯಿಗಳನ್ನು ಸಾಲ ಕೊಟ್ಟಿದ್ದಾರೆ ಇದಕ್ಕೆ ಗ್ಯಾರಂಟಿ ಏನೆಂದರೆ ಒಂದು ಸ್ಕಾರ್ ಪಿಯೋ ಗಾಡಿ ಕೇವಲ ಒಂದು ಸ್ಕಾರ್ ಪಿಯೋ ಗಾಡಿ ಯಾವ ರಾಜ್ಯದಲ್ಲಿ ನಾವು ಇದ್ದೇವೆ ಎಂದು ಹೇಳಬೇಕೋ ನನಗೆ ಆಶ್ಚರ್ಯವಾಗುತ್ತದೆ ನೀವೇ ಹೇಳಿ, ಒಬ್ಬ ಮಾಜಿ ಶಾಸಕ ಒಂದು ಸ್ಕಾರ್ ಪಿಯೋ ಗಾಡಿಯನ್ನು ಇಟ್ಟು ೫೧ ಲಕ್ಷ ರೂಪಾಯಿ ಸಾಲವನ್ನು ತೆಗೆದುಕೊಂಡು ಹೋಗುತ್ತಾರೆಂದರೆ ಎಷ್ಟು ದುರಾಡಳಿತಕ್ಕೆ ಆ ಬ್ಯಾಂಕ್ ಒಳಗಾಗಿರಬೇಕು ಎಂಬುದನ್ನು ನೀವೇ ಹೇಳಿ ಇವೊತ್ತು ನೀವು ಬ್ಯಾಂಕನ್ನಾದರೂ ನೋಡಿ ಎಂದು ನಿಮ್ಮಲ್ಲಿ ಪರಿಪರಿಯಾಗಿ ನವು ಕೇಳಿಕೊಂಡು ೨೧ ದಿವಸ ಅಲ್ಲಿ ರೈತರ ಹೋರಾಟ ಮಾಡಿದರು ಕೊನೆಗೆ ಆ ಫ್ಯಾಕ್ಟರಿ ನಿರ್ದೇಶಕರು ಬಂದು ಹೋರಾಟ ಮಾಡಿದರು ಅದಕ್ಕೂ ನಿಮ್ಮ ಇಲಾಖೆ ಗಮನ ಕೊಡಲಿಲ್ಲ ಕೊನೆಗೆ ನಾನು ಹೋದೆ ನಾನೂ ಹದಿನಾಲ್ಕು ದಿವಸ ಉಪವಾಸ ಕುಳಿತೆ ಹದಿನಾಲ್ಕು ದಿವಸವಾದರೂ ನಿಮಗೆ ಕರುಣೆ ಬರಲಿಲ್ಲ ನಮಗೆ ನಾವು ಯಾವುದೇ ಅಡತಡೆ ಮಾಡಿಲ್ಲ ನಾವಿಷ್ಟೇ ವಿನಂತಿ ಮಾಡಿಕೊಂಡೆವೆಲು ಇದರ ಬಗ್ಗೆ ಕೂಲಂಕುಶವಾಗಿ ಪರಿಶೀಲನೆ ಮಾಡಿ ನ್ಯಾಯವನ್ನು ದೊರಕಿಸಿಕೊಡಿ ಎಂದು ಒಂದು ಮನವಿಯನ್ನು ಕೊಟ್ಟಿವು ಆಗ ಉಪ ಮುಖ್ಯಮಂತ್ರಿಗಳು ಮತ್ತು ಮಾಜಿ ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ಈಶ್ವರಪ್ಪನವರೂ ಇದ್ದರು ಮನವಿ ತೆಗೆದುಕೊಂಡು ಬಂದಿರಿ ಆ ಮನವಿಯನ್ನು ತೆಗೆದುಕೊಂಡು ೧೫ ದಿವಸಗಳಾದರೂ ಆ ಕಡೆಗೆ ನೀವು ಗಮನವನ್ನೇ ತೆಗೆದುಕೊಳ್ಳಲಿಲ್ಲವೆಂದರೆ ನಮಗೆ ಎಷಟು ಬೇಸರವಾಗುತ್ತದೆ ನೀವೇ ಹೇಳಿ ದಯದ್ರೈವವಶಾತ್ ಕೊನೆಗೆ ನಾವೇ ಆ ಹೋರಾಟವನ್ನು ಮಾಡಲು

ಬೆಂಗಳೂರಿಗೆ ಬಂದೆವು ಇಲ್ಲಿ ಬಂದು ಆರು ದಿವಸ ಕುಳಿತುಕೊಳ್ಳಬೇಕೆಂದರೆ ನಮ್ಮ ಸಥಿತಿ ಹೇಗಾಗಿರಬೇಕು ಎಂಬುದು ತಮಗೆ ಗೊತ್ತಿರುತ್ತದೆ ಆಮೇಲೆ ಮನವಿಯನ್ನು ತೆಗೆದುಕೊಂಡರು ಮನವಿ ತೆಗೆದುಕೊಂಡ ಮೇಲೆ ಮಾಡಬೇಕಾಗಿರತಕ್ಕಂಥ ಕರ್ತವ್ಯವೇನು? ಯಾವ ಬ್ಯಾಂಕ್ ನಲ್ಲಿ ನೀವೇ ಹೇಳುತ್ತೀರಿ, ದಾಖಲೆಗಳನ್ನು ತಿದ್ದಿ ೮ ಕೋಟಿ ರೂಪಾಯಿಗಳನ್ನು ಷೇರು ಬಂಡವಾಳಕ್ಕೆ ೧೬೭ ರೈತರ ಹಣವನ್ನು ತೊಡಗಿಸಿದ್ದಾಎಂದು ತಾವೇ ಒಪ್ಪಿಕೊಳ್ಳುತ್ತೀರಿ ಅದರ ಬಗ್ಗೆ ಇಲ್ಲಿ ಒಂದು ಉಲ್ಲೇಖವನ್ನು ಕೊಟ್ಟಿದ್ದೀರಿ ಇದು ಕೇವಲ ೧೬೭ ರೈತರದ್ದಲ್ಲ, ೩೦೦ ಜನ ರೈತರು ಖರೀದಿಗಾಗಿ ೨೦೦೧-೨೦೦೨ ರಲ್ಲಿ ಹಣವನ್ನು ಕೊಟ್ಟಿದ್ದಾರೆ ನಾನು ಬೇಕಾದರೆ ತಮಗೆ ದಾಖಲೆ ಸಮೇತ ವಿವರಗಳನ್ನು ಕೊಡುತ್ತೇನೆ ಕಂಪನಿ ಕಾಯಿದೆ ದುಡ್ಡನ್ನು ಕೊಟ್ಟ ಆರು ತಿಂಗಳೊಳಗೆ ದುಡ್ಡು ಕೊಟ್ಟವರಿಗೆ ಷೇರು ಸರ್ಟಿಫಿಕೇಟ್ ಕೊಡಬೇಕಂದು ಹೇಳುತ್ತದೆ ಆದರೆ ೫ ವರ್ಷವಾದರೂ ಆ ರೈತರಿಗೆ ಷೇರು ಸರ್ಟಿಫಿಕೇಟ್ ನ್ನು ಕೊಡಲಿಲ್ಲ ಅದನ್ನು ಕೊಡಿ ಎಂದು ನಾವು ಕೇಳಿಕೊಂಡಾಗ ಆಸಲಿ ಅಲ್ಲ ನಕಲಿ ಷೇರು ಸರ್ಟಿಫಿಕೇಟ್ ನ್ನು ಕೊಡುತ್ತಾರೆ ನಮಗೆಷ್ಟು ಕೆಟ್ಟದೆನಿಸುತ್ತದೆ ನೋಡಿ ಅದರೂ ಒಬ್ಬ ಕೇಂದ್ರದ ಮಾಜಿ ಸಚಿವರಾಗಿರತಕ್ಕಂಥವರು ಪಾರ್ಲಿಮೆಂಟ್ ಹೌಸ್ ನಲ್ಲಿ ಓತ್ ತೆಗೆದುಕೊಂಡಿರತಕ್ಕಂಥವರು ನಕಲಿ ಷೇರು ಸರ್ಟಿಫಿಕೇಟ್ ಕೊಡುವುದು ಅದನ್ನೂ ಕೂಡ ಗಮನಿಸದೇ ಇರತಕ್ಕಂಥ ಪೋಲಿಸ್ ಅಧಿಕಾರಿಗಳು ನನಗೆ ಅದು ಬಹಳ ಕೆಟ್ಟದೆನಿಸುತ್ತದೆ ಆ ಸರ್ಟಿಫಿಕೇಟ್ ಫೇಕ್ ಅಥವಾ ಒರಿಜಿನಲ್ ಎಂದು ಇನ್ ವೆಸ್ಟಿಗೇಶನ್ ಮಾಡುವುದಕ್ಕೆ ಎಷ್ಟು ದಿವಸ ಬೇಕು? ಇಲ್ಲಿಯೇ ಶ್ರೀರಾಮರೆಡ್ಡಿಯವರ ಕೈಯಲ್ಲಿಯೇ ಇದೆ ಅದನ್ನು ನಾನು ನಿಮಗೇ ಕೊಡುತ್ತೇನೆ ಅದರಲ್ಲಿ ಒರಿಜಿನಲ್ ಯಾವುದು ಫೇಕ್ ಯಾವುದು ? ಮುಂದೆ ಒರಿಜಿನಲ್ ಇದೆ ಹಿಂದೆ ಫೇಕ್ ಇದೆ ನಮಗೆ ಅದನ್ನು ನೋಡಿ ಕೆಟ್ಟದೆನಿಸುತ್ತದೆ ಒಂದು ಇನ್ ವೆಸ್ಟಿಗೇಶನ್ ಮಾಡಿ ಒಂದು ಕೇಸ್ ಬುಕ್ ಮಾಡುವುದಕ್ಕೆ ನಿಮಗೆ ಆಗಲಿಲ್ಲ ಇವೊತ್ತು ಒಂದು ಡೆ ಆ ಬ್ಯಾಂಕ್ ದಿವಾಳಿಯಾಗಿದೆ ಆ ರೈತರು ಬೀದಿಗೆ ಹೋದರು ಆ ಫ್ಯಾಕ್ಟರಿಗೆ ಸಾಲ

ಕೊಟ್ಟವರ ಹಣೆಬರಹ ಏನು? ಅವರು ಯಾರೂ ಕೂಡ ಕಮರ್ಶಿಯಲ್ ಬ್ಯಾಂಕ್‌ನವರಲ್ಲ ದೇವೇಗೌಡರೆ Creditors ಏನಿದ್ದಾರೆ ಅವರು ಯಾರೂ ಕೂಡ Commercial Bank ನವರು ಇಲ್ಲ Apex Bank, ನನ್ನ Bank, DCC Bank ಬಿಜಾಪುರ, ಬೀದರ್ ಎಲ್ಲರೂ ಕೂಡ Co-operative institutions ನವರೆ ಅದಕ್ಕೆ finance ಮಾಡಿ ಆ factory ಯನ್ನು ಕಟ್ಟಿದೆವು ಅದನ್ನು ಕಟ್ಟಿದಂತಹ ಸಂದರ್ಭದಲ್ಲಿ ಒಂದೆ ಒಂದು ತಪ್ಪು ಏನು ಮಾಡೆದೆವು ಎಂದರೆ ಅದನ್ನು ಕಂಪನಿ ಆಡಳಿತ ವ್ಯವಸ್ಥೆಯಲ್ಲಿ ಕಟ್ಟಿದ್ದೆವು ಅದೇ ಒಂದು ತಪ್ಪಾಗಿತ್ತು ಆದೆ ಅದನ್ನು ತಪ್ಪು ಎಂದು ಹೇಳುವುದಕ್ಕೆ ಬರುವುದಿಲ್ಲ ಏಕೆಂದೆ ಇದೇ ವಿಧಾನಸಭೆಯಲ್ಲಿ ಮಾನ್ಯ ಮಾಧುಸ್ವಾಇಯವರು ಇರುವಂತಹ ಸಮಿತಿಯಲ್ಲಿ ಸೌಹಾರ್ದ ಕಾಯ್ದೆ ಕೆಳಗಡೆ ಏನಿವಿಂಕ್ investigation ಗೆ ನೀವು House Committee ಅನ್ನು appoint ಮಾಡಿದ್ದೀರಿ ಅದಕ್ಕೆ ತಾವೇ ಅಧ್ಯಕ್ಷರು, ನೀವೇ ಹೇಳಿ ಅದರ ವರದಿ ಕೂಡ ಇನ್ನೂ ಬಂದಿಲ್ಲ ಆ ಸೌಹಾರ್ದ Act ಕೆಳಗಡೆ ಬರುವಂತಹ ಕಂಪನಿಯನ್ನು investigation ಮಾಡುವುದಕ್ಕೆ ಬರುತ್ತದೆ ಆದರೆ ಒಂದು schedule Bank ಆಗತಕ್ಕಂಥ ದಿವಾಳಿ ಅಂಚಿಗೆ ಹೋಗಿ, ಒಂದು ಕೂಡ ದಿವಾಳಿ ಅಂಚಿಗೆ ಹೋಗಿ, ಇವತ್ತು ೪೦ ಕೋಟಿ ರೂಪಾಯಿ ಹಣವನ್ನು ಆ ಸಂಸ್ಥೆಗಳಿಗೆ ದುಡ್ಡು ಕೊಡಬೇಕು ಇವತ್ತು ೨೪ ಕೋಟಿ ರೂಪಾಯಿಯ ರೈತರ ಕಬ್ಬನ್ನು ನುರಿಸಿದ್ದಾರೆ ಅವರಿಗೆ ಇವತ್ತಿನವರೆಗೆ ಹತ್ತು ಪೈಸೆ ಕೂಡ ಕೊಟ್ಟಿಲ್ಲ ಈ ವಿಚಾರವನ್ನು ಕೂಡ ನಾವು Director of Sugar ಅವರ notice ಗೆ ತಂದೆದ್ದೆವು ನಿಮಗೆ ಇದು ಬಹಳ ಆಶ್ಚರ್ಯವೆನಿಸುತ್ತದೆ, ನಾವು ಜನವರಿಯಲ್ಲಿ Sugar Minister ಹೇಳಿದ್ದೇವೆ ಜನವರಿಯಲ್ಲಿ ಗೆ ನಾನು personally ಹೋಗಿ ಹೇಳಿದೆ ಅವರೂ ಕೂಡ ಇಲಲೇ ಸಭೆಯಲ್ಲಿ ಇದ್ದಾರೆ Sugar Diiector ಗೆ ಹೋಗಿ ಹೇಳಿದೆ ಅಲ್ಲಿಂದ Government of India Cane Commissioner ಗೆ ಒಂದು ಪತ್ರ ಬರೆದು, ನೋಡಿ ಅಕಸ್ಮಾತ್ ನೀವು ಈ cane ಅನ್ನು recovery ಮಾಡಿಕೊಳ್ಳದೆ ಹೋದರೆ ರೈತರಿಗೆ ಹಣ

ಸಿಗುವುದಿಲ್ಲ ಅಕಸ್ಮಾತ್ ಇವರು ಮಾರಿಕೊಂಡು ಹೋದರೆ ರೈತರು ಬೀದಿಪಾಲಾಗುತ್ತಾರೆ ಅಥವಾ ಯಾವ ಬ್ಯಾಂಕ್ ಗಳು ಈ ಸಂಸ್ಥೆಗೆ ಸಾಲ ಕೊಟ್ಟಿವೆ, ಅವೂ ಕೂಡ ದಿವಾಳಿ ಅಂಚೆಗೆ ಹೋಗುತ್ತವೆ ಎಂದು ಅವರಿಗೂ ಮನವರಿಕೆ ಮಾಡಿಕೊಟ್ಟೆ ಆದರೆ ಅದೇ Director of Sugar ಅವರು ಬಹುತೇಕ ಅವರೇ ಹೇಲಿದ್ದಾಋಎ ಎಂದು ನನಗೆ ಅನಿಸುತ್ತದೆ Union Government ಅನ್ನು party ಮಾಡಿ, State Government ಅನ್ನು ಬಾಜುಗೆ ಇಟ್ಟು High Court ನಿಂದ ಒಂದು ಆದೇಶ ತೆಗೆದುಕೊಂಡು ೫೦% Sugar ಎತ್ತಿಬಿಟ್ಟಿರು ಆದರೆ ಹತ್ತು ಪೈಸೆ ಇವತ್ತು ರೈತರಿಗೆ ಕೊಡಲಿಲ್ಲ, ಒಂದು ಬ್ಯಾಂಕ್ ಗೆ ಕೂಡ ಕೊಡಲಿಲ್ಲ ಇದಕ್ಕೆ ಯಾರನ್ನು ಜವಾಬ್ದಾರರನ್ನಾಗಿ ಮಾಡುತ್ತೀರಿ ಎಂದು ತಾವು ಹೇಳಬೇಕು ಆದರೆ ನಾನು ಏನು ಕೇಳುತ್ತೇನೆ ಎಂದರೆ ೨೦೦೧-೦೨ ರಲ್ಲಿ ಮೂಲ ಬಂಡವಾಳ ೯೭೦ ಕೋಟಿ ರೂಪಾಯಿ ರೈತರು ಕೊಟ್ಟಿದ್ದಾರೆ ಆ ರಐತರನ್ನು ನೀವು ಮಾಲೀಕರನ್ನಾಗಿ ಮಾಡುತ್ತೀರಾ ಇಲ್ಲವಾ? ಏಕೆಂದರೆ ಮಾಡತಕ್ಕಂಥ ಅಧಿಕಾರ ಇವತ್ತು ನಿಮ್ಮ ಕೈಯಲ್ಲಿ ಇದೆ ಏಕೆಂದರೆ ಕಂಪನಿಗೆ ತಾವು ಬರೆಯಬಹುದು ತಾವೇ, ಒಂದು ಕಡೆ ೯ ಕೋಟಿ ರೂಪಾಯಿ ಸಿದ್ದೇಶ್ವರ ಬ್ಯಾಂಕಿನಲ್ಲಿ share ಗೆ ಎಂದು ತಮ್ಮ ಉತ್ತರದಲ್ಲಿ ಹೇಳುತ್ತಿರಿ ಅದನ್ನು ತಿದದಿರುವಂತಹ ದಾಖಲೆ ಕೂಡ ಇವತ್ತು ತಮ್ಮ custody ಯಲ್ಲಿ ಇದೆ ಇವತ್ತು ನಮ್ಮ ಹೋರಾಟ ಏನೆಂದರೆ ಒಂದನೆಯದಾಗಿ ಆ ರೈತರನ್ನು ಮೂಲ ಮಾಲೀಕರನ್ನಾಗಿ ಮಾಡಬೇಕು ಎರಡನೆಯದಾಗಿ ಯಾವ್ಯಾವ ಸಂಸ್ಥೆಗಳಿಗೆ ಈ factory ಹಣ ಕೊಡಬೇಕಾಗಿದೆ, ಸಕ್ಕರೆಯನ್ನು seize ಮಾಡಿಸಿ ಈ ಸಂಸ್ಥೆಗಳಿಗೆ ಹಣ ಕೊಡಿಸಬೇಕು ಎನ್ನುವುದು ಇನ್ನೊಂದು ಬೇಡಿಕೆ ಮೂರನೆಯದಾಗಿ, ಇಲಾಖಾ ವಿಚಾರಣೆ ಸೆಕ್ಷನ್ ೬೪ enquiry ಮಾಡುವುದು ಬೇರೆ ಆದರೆ ಧಾರವಾಡದಲ್ಲಿ Arbitrator ಏನು ಇದ್ದಾನೆ, ಅವನ ಎದುರು ಈ ಕೇಸ್ ನಡೆಯುತ್ತಿದೆ ಅವನು particular ಆಗಿ ಮೂರು ತಿಂಗಳಿನಿಮದ ಮುಂದೆ ಹಾಕುತ್ತಿದ್ದಾನೆ ಆ Factory ಯನ್ನು party ಮಾಡಿ ಹಣವನ್ನು ನೀವು ವಸೂಲಿ ಮಾಡಿ ಎಂದು ನಾವು

ಪರಿಪರಿಯಾಗಿ ಕೇಳಿಕೊಂಡರೂ ಅವನು award ಮಾಡುವುದಕ್ಕೆ ತಯಾರಿಲ್ಲ ಇಷ್ಟೆಲ್ಲಾ ಮೋಸ ತಮ್ಮ ಕಣ್ಣೆದುರಿಗೆ ನಡೆದರೂ ಕೂಡ ತಾವು ಸುಮ್ಮನೆ ಕುಳಿತರೆ ನನಗೆ ಅನಿಸುತ್ತದೆ ನಾಳೆ ಅಹಕಾರಿ ಶತಮಾನೋತ್ಸವ ಮಾಡುವಂತಹ ಸಂದರ್ಭದಲ್ಲಿ ತಮಗೆ ಒಳ್ಳೆಯ ಬಿರುದು ಬರುವುದಿಲ್ಲ ದಯಮಾಡಿ ಈ ವಿಚಾರದಲ್ಲಿ ಇನ್ನೂ ಹೆಚ್ಚಿನ ಬೆಳಕನ್ನು ಚೆಲ್ಲಬೇಕು ಎಂದು ತಮ್ಮಲ್ಲಿ ನಾವು ಕೇಳಿಕೊಳ್ಳುತ್ತೇವೆ ತಾವು ಕೊನೆಯದಾಗಿ ಉತ್ತರ ಕೊಟ್ಟಮೇಲೆ ನಾವು ಏನು ಮಾಡಬೇಕು ಎಂದು ಹೇಳುತ್ತೇವೆ

ಶ್ರೀ ಜಇ ಟಿ ದೇವೇಗೌಡ (ಸಹಕಾರಿ ಸಚಿವರು) ಮಾನ್ಯ ಅಧ್ಯಕ್ಷರೆ, ಸಿದ್ದೇಶ್ವರ ಬ್ಯಾಂಕಿನಿಂದ ರೈತರು ಷೇರು ಸಾಲವನ್ನು ಪಡೆದು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಕಾಶ್ ರವರು ಇದ್ದಾರೆ, ಈ ವಿಚಾರ Actually, Companies Act ಕೆಳಗಡೆ ಬರುತ್ತದೆ ಮಾನ್ಯ ಪ್ರಕಾಶ್ ರವರು ಮಾತು ಕೊಟ್ಟಿದ್ದಾರೆ ಇಲ್ಲಿ Deputy C M ಇದ್ದಾರೆ ಇದು Companies Act ಕೆಳಗಡೆ ಬರುವುದರಿಂದ Deputy C M ಉತ್ತರ ಕೊಟ್ಟರೆ ಒಳ್ಳೆಯದು ಎಂದು ನನಗೆ ಅನಿಸುತ್ತದೆ

ಶ್ರೀ ಶಿವಾನಂದ ಎಸ್ ಪಾಟೀಲ್ ಸಹಕಾರಿಗೆ ಸಂಬಂಧಪಟ್ಟಿದ್ದು ನೀವು ಕೊಡಿ ಗೃಹ ಇಲಾಖೆಗೆ ಸಂಬಂಧಪಟ್ಟಿದ್ದಾದರೆ ಅವರು ಕೊಡಲಿ

ಶ್ರೀ ಜಿ ಟಿ ದೇವೇಗೌಡ (ಸಹಕಾರಿ ಸಚಿವರು) ಆಯಿತು, ಈಗ ನಾನು ಕೊಡುತ್ತೇನೆ, ಆಮೇಲೆ ಅವರೂ ಕೂಡು ಮಾತನಾಡುತ್ತಾವಿ ಈಗ ನಾನು ಹವಿಳುವುದೇನೆಂದರೆ ಏನು ೧೬೬ ಜನರಿಂದ ಸಾಲ ಬಾಕಿ ಇತ್ತು, ನಾವು ಇದೇ ದೂರಿನಿಂದಲೇ ಆಡಳಿತ ಮಂಡಳಿಯನ್ನು ರದ್ದು ಮಾಡಿ, ದಿನಾಂಕ ೨೩-೦೧-೦೭ ರಿಂದ ಜಿಲ್ಲಾಧಿಕಾರಿಯನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿ ೨ ಕೋಟಿ ೯೦ ಲಕ್ಷ ರೂಪಾಯಿ recovery ಆಗಿದೆ ನಾವು ಸದಸ್ಯರ ಹಿತರಕ್ಷಣೆ ಮಾಡುವುದಕ್ಕೆ ಎಲ್ಲಾ ರೀತಿಯ ಕ್ರಮವನ್ನು ಕೈಗೊಂಡಿದ್ದೇವೆ ನಿಯಮ ೬೪ ಟಡಿಯಲ್ಲಿ ತನಿಖೆಯನ್ನು ನಡೆಸುತ್ತಿದ್ದೇವೆ Section 70 ಪ್ರಕಾರ ದಾವೆ file

ಮಾಡಿದ್ದೇವೆ Share certificate duplicate or original ಎಂದು factory ಏನು ಮಾಡಿದ್ದಾರೆ, ಇದು Companies Act ಕೆಳಗಡೆ ಬರುತ್ತದೆ ಎಂದು ಏನು ಹೇಳುತ್ತಿದ್ದೀರಿ, ನಾವು ಇನ್ನೂ ತನಿಖೆಯನ್ನು ನಡೆಸುತ್ತಿದ್ದೇವೆ ಈ ಬಗ್ಗೆ ಸಂಪೂರ್ಣವಾದಂತಹ ಮಾಹಿತಿಯನ್ನು ನಾನು ಕೂಡಲೇ ತರಿಸುತ್ತೇನೆ ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಯಾವುದು Companies Act ಕೆಳಗಡೆ ಬರುತ್ತದೆ, ಈ ಬಗ್ಗೆ factory ಮೇಲೆ ಕ್ರಮ ಕೈಗೊಳ್ಳಬೇಕೆಂದು ತಾವೇನು ಹೇಳುತ್ತಿದ್ದೀರಿ, ಇದರ ಬಗ್ಗೆ ಕಾನೂನು ಮಂತ್ರಿಗಳಿಂದ ಸಹಿಯನ್ನು ಪಡೆದು ಸರ್ಕಾರ ಆ ಬಗ್ಗೆ ಕ್ರಮ ಕೈಗೊಳ್ಳುತ್ತದೆಂದು ಭರವಸೆಯನ್ನು ನಾನು ಕೊಡುತ್ತೇನೆ

ಶ್ರೀ ಶಿವಾನಂದ ಎಸ್ ಪಾಟೀಲ್ ತಾವು ಸಹಕಾರ ಇಲಾಖೆ ಮಂತ್ರಿಗಳಿದ್ದೀರಿ, ನನ್ನ ಹತ್ತಿರ ಒಂದು statement ಇದೆ ಯಾವುದೇ ಸಂಘ ಸದಸ್ಯತ್ವವನ್ನು ಮಾಡಿಕೊಳ್ಳುವುದಕ್ಕಿಂತಲೂ ಮೊದಲೇ ಸಾಲವನ್ನು ಕೊಡುತ್ತಾರೋ ಅಥವಾ ಸದಸ್ಯತ್ವವನ್ನು ಮಾಡಕೊಂಡ ಮೇಲೆ ಕೊಡುತ್ತದೋ ಎನ್ನುವ ಬಗ್ಗೆ simple ಉತ್ತರವನ್ನು ಕೊಡಿ ನಾನು ಸಾಲ ತೆಗೆದುಕೊಳ್ಳಬೆಕಾದರೆ ಮೊದಲು ಒಂದು Urban Co-operative Bank ನ member ಆಗಬೇಕು ಅದಕ್ಕೆ ಆಗುವುದಕ್ಕಿಂತ ಮೊದಲೇ ಸಾಲ ಮಂಜೂರು ಮಾಡುತ್ತೀರೊ ಅಥವಾ member ಆದಮೇಲೆ ಮಂಜೂರು ಮಾಡುತ್ತೀರೊ ನೀವೇ ಹೇಳಿ

ಶ್ರೀ ಜಿ ಟಿ ದೇವೇಗೌಡ ಎಲ್ಲರಿಗೂ ಗೊತ್ತು, ಆ ಸಂಘಕ್ಕೆ member ಆದಮೇಲೆ ಸಾಲ ಮಂಜೂರು ಆಗುತ್ತದೆ

ಶ್ರೀ ಶಿವಾನಂದ ಎಸ್ ಪಾಟೀಲ್ ೧೬೯ ಜನರಲ್ಲಿ ಕನಿಷ್ಟ ೪೦ ರೈತರು member ಆಗಿಲ್ಲ ಆದರೆ ಎರಡು ತಿಂಗಳು ಮೊದಲೇ ಅವರ ಹೆಸರಿನಲ್ಲಿ ಸಾಲ ಖರ್ಚು ಹಾಕಿದ್ದಾರೆ ಈ ಬ್ಯಾಂಕ್ ಯಾವ ರೀತಿ ನಡೆದಿರಬೇಕು ಎಂದು ನೀವೇ ಹೇಳಿ ಇದು ನಿಮ್ಮ ಬ್ಯಾಂಕಿನ

statement ಅವನು primary member ಆಗಿಲ್ಲ ಅವನ ಹೆಸರಿನಲ್ಲಿ ೨೫ ಲಕ್ಷ ರೂಪಾಯಿ ಸಾಲ ಖರ್ಚು ಹಾಕಿದ್ದಾರೆ

ಶ್ರೀ ಜಿ ಟಿ ದೇವೇಗೌಡ ತಾವು ಏನು ಕೇಳುತ್ತಿದ್ದೀರಿ, ಅದರ ಬಗ್ಗೆ ತಮಗೆ ಸಾಕಷ್ಟು ಅನುಭವ ಇದೆ ಸಹಕಾರಿ ಸಂಘಗಳ ಅಧ್ಯಕ್ಷರಿದ್ದೀರಿ ನೀವು ಸಾಲ ಕೊಡಿಸಿದ್ದೀರಿ ಎಲ್ಲಾ ಅನುಭವ ಇದೆ ನನಗೂ ಅನುಭವ ಇದೆ ನಾನು ಹೇಳುತ್ತೇನೆ member ಇಲ್ಲದೆ ಯಾರು ಅವರಿಗೆ ಸಾಲ ಮಂಜೂರು ಮಾಡಿರುವುದಾಗಲಿ, ಸಾಲ ಕೊಟ್ಟಿರುವುದಾಗಲಿ, ಅದನ್ನು ತನಿಖೆಯಿಂದ ಪತ್ತೆ ಹಚ್ಚಿ ಅವರ ಮೇಲೆ ಕ್ರಮವನ್ನು ನಾವು ಖಂಡಿತ ಕೈಗೊಳ್ಳುತ್ತೇವೆ, ನಿಮಗೆ ನ್ಯಾಯ ಒದಗಿಸುತ್ತೇವೆ

ಶ್ರೀ ಶಿವಾನಂದ ಎಸ್ ಪಾಟೀಲ್ ನಾನು ಮಾನ್ಯ ಗೃಹಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಒಂದು ೪೨೦ case registration ಆಗಿ ಮೂರು ತಿಂಗಳಾಯಿತು ನಿಮ್ಮ SP ಯವರಿಗೆ ಅದು ಏನಾಯಿತು ಎಂದು ಪರಿಪರಿಯಾಗಿ ಕೇಳುತ್ತೇನೆ Fake ಮತ್ತು Original Certificate ಎರಡನ್ನೂ ನಾವು ಇಲ್ಲಿ ತಂದಿದ್ದೇವೆ ನೀವೇ ಇದರಲ್ಲಿ identify ಮಾಡಿ ಯಾವುದು original, ಯಾವುದು fake ಎಂದು ಹೇಳಿಬಿಡಿ ತಾವೂ ಬಂದಿದ್ದಿರಿ, ಅದನ್ನೂ ತಮಗೂ ತೋರಿಸಿದ್ದೇವೆ ಆದರೆ ದುರ್ದೈವವೆಂದರೆ ಇಷ್ಟು ಹೋರಾಟ ಮಾಡಿರುವಂತಹ ರೈತರ ಮೇಲೆ ಲಾಠಿ charge ಮಾಡಿದರು ೧೪೪ ಮಾಡಿದರು, robbery case book ಮಾಡಿದರು ದರೋಡೆ case ಕೂಡ book ಮಾಡಿದರು, ದರೋಡೆ case ಕೂಡ book ಮಾಡಿದ್ದಾರೆ ನಾವು ಯಾವ ಸ್ಥಿತಿಗೆ ಹೋಗುತ್ತಿದ್ದೇವೆ? ಇದಕ್ಕೆ ಯಾರು ಹೊಣೆಗಾರರು ? ಅಲ್ಲಿ ಒಬ್ಬ CPI useless fellow ಇದ್ದಾನೆ, ಅದನ್ನು ನಾನು ಹೇಳಬಾರದು ಅವನು ಮಾಡಿರುವಂತಹ ಅನಾಹುತದ ಬಗ್ಗೆ ತಾವು record ತರಿಸಿ ನೋಡಿ ನಿಮ್ಮ SPಗೆ ಪರಿಪರಿಯಾಗಿ ಹೇಳಿದೆವು ಇವತ್ತು ಅವನು ಮಾಡಿದರು ನಾವು ನಿಮ್ಮನ್ನೇ ಕೇಳಬೇಕಾಗುತ್ತದೆ ಯಾರೋ ಒಬ್ಬ ಪೇದೆ ಮಾಡಿದರೆ ನಾನು ಆ ಪೇದೆಗೆ ಹೋಗಿ

ಕೇಳುವುದಕ್ಕೆ ಆಗುವುದಿಲ್ಲ ಅದಕ್ಕೆ ನೇರವಾಗಿ SP ಹೊಣೆಗಾರರಾಗುತ್ತಾರೆ ಮಾನ್ಯ ರೆಡ್ಡಿಯವರು ಇದ್ದರು, ಅವರ ಎದುರಿಗೆ ೧೪೪ ಮಾಡಿ ರೈತರನ್ನು ಯಾವ ರೀತಿ ಬಡಿದರು ಎಂದು ನೀವೆ ಕೇಳಿ ಅದೂ peaceful ಆಗಿ ಹೋರಾಟ ಮಾಡಿದರೆ ಹೀಗ, ನಾವೇನಾದರೂ ಅವರ ರೀತಿಯಲ್ಲಿ ಬಸ್ಸನ್ನು ಸುಟ್ಟಿ, ಊರಿಗೆ ಉರಿ ಹಚ್ಚಿ ಹೋರಾಟ ಮಾಡಿದರೆ ಅದು ಯಶಸ್ಸು ಕಾಣುತ್ತದೆ ಇದು ನನಗಂತೂ ತಿಳಿಯುತ್ತಿಲ್ಲ ನೀವೇ ಉತ್ತರ ಕೊಡಬೇಕು ದಯಮಾಡಿ ತಾವು ಏನು ಉತ್ತರ ಕೊಡುತ್ತೀರಿ ನೋಡಿ, ಆಮೇಲೆ ನಾವು ನಿರ್ಣಯ ಮಾಡುತ್ತೇವೆ

(ಶ್ರೀ ಎನ್ ಯೋಗೇಶ ಭಟ್ ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) ಮಾನ್ಯ ಚೇರ್ಮನ್ ರವರೆ, ಮಾನ್ಯ ಶಿವಾನಂದ ಉತ್ತಮವಾದಂತಹ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಿದ್ದೀರಿ, ಮತ್ತೆ ಈ ರೀತಿಯಲ್ಲಿ ಕುಳಿತಿದ್ದಾಗ, ಮಾನ್ಯ ಮುಖ್ಯಮಂತ್ರಿಯವರನ್ನು ಕರೆದುಕೊಂಡು ಬರುತ್ತೇವೆಂದು ನಾನು ಮತ್ತು ಮಾನ್ಯ ಚಲುವರಾಯ ಸ್ವಾಮಿಯವರು, ಪ್ರತಿಯೊಬ್ಬರೂ ಹೇಳಿದ ಮೇಲೆ, ಅವರು ನಮ್ಮೆಲ್ಲರ ಆಗ್ರಹಕ್ಕೆ ಮಣಿದು ಅವತ್ತು ಉಪವಾಸವನ್ನು withdraw ಮಾಡಿದರು ಮಾನ್ಯ ಮುಖ್ಯಮಂತ್ರಿಯವರು ಒಂದು meeting ಅನ್ನು ಕೂಡ ಕರೆದರು ಈಗಾಗಲೇ ಈ ಬಗ್ಗೆ ಕ್ರಮ ಕೈಗೊಳ್ಳುತ್ತೇನೆಂದು ಹೇಳಿದ್ದಾರೆ ಈಗ ತಾವು ದೌರ್ಜನ್ಯವನ್ನು ಮಾಡಿದ್ದಾರೆಂದು, fake certificate ಗಳ ಬಗ್ಗೆ ೪೨೦ ಕೆಳಗೆ case register ಆಗಬೇಕೆಂದು ಹೇಳಿದಿರಿ, ಈಗ D G ಯವರು ಇಲ್ಲೆ ಇದ್ದಾರೆ ನಾನು ಅವರ ಹತ್ತಿರ ಮಾತನಾಡುತ್ತೇನೆ ನಾವು ತಕ್ಷಣದಲ್ಲಿ S P ಯವರ ಹತ್ತಿರ ಕುಳಿತುಕೊಂಡು ವರದಿಯನ್ನು ತರಿಸಿಕೊಂಡು, ಅಲ್ಲಿ ಏನೇನು ಕ್ರಮವನ್ನು ತೆಗೆದುಕೊಳ್ಳಬೇಕೋ, ಆ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ ಇಲ್ಲೆ D G ಯವರು ಇದ್ದಾರೆ, ನಾನು ಈ ಕೆಲಸವನ್ನು ಮಾಡುತ್ತೇನೆ

ಶ್ರೀ ಶಿವಾನಂದ ಎಸ್ ಪಾಟೀಲ್ ಮಾನ್ಯ ಚೇರ್ಮನ್ ರವರೆ, ಇದರಲ್ಲಿ ಸಿದ್ದೇಶ್ವರ ಬ್ಯಾಂಕ್ ಹಿಡಿದುಕೊಂಡು, ಆ factoryಯಲ್ಲಿ ಆಗಿರುವಂತಹ ಅನಾಹುತಗಳು ಏನು ಇವೆ ಅವು ಒಂದು, ಎರಡು, ಮೂರು, ಇದ್ದರೆ ನಾನೇ ಹೇಳಿ ಮುಗಿಸುತ್ತಿದೆ ನಾನು ಅದಕ್ಕೆ ತಮ್ಮಿಂದ ಉತ್ತರವನ್ನು ಪಡೆದುಕೊಂಡು ಸುಮ್ಮನ ಇರುತ್ತಿದ್ದೆ ಈಗ ತಮ್ಮ House Committee existence ನಲ್ಲಿದೆ ಇದರಲ್ಲಿ ಸಿದ್ದೇಶ್ವರ ಬ್ಯಾಂಕ್ ಅನ್ನು ದಿವಾಳಿ ಮಾಡುವುದು ಹೋಗಲಿ, ೨೮ Branchಗಳು ಇರುವಂತಹ Bank ನೂರು ವರ್ಷಗಳ ಇತಿಹಾಸವಿರುವಂತಹ Bank ದಿವಾಳಿಯಾಯಿತು, ಆ ಮಾತು ಬೇರೆ, ಇದೇ ಸಂಸ್ಥೆಯ ಅಧ್ಯಕ್ಷನೇ ಮತ್ತೊಂದು ಸೌಹಾರ್ದ ಬ್ಯಾಂಕ್ ಅನ್ನು ತೆಗೆಯುತ್ತಾನೆ ಮೂರು ತಿಂಗಳಲ್ಲೆ ಅವನು ೨೮ ಶಾಖೆಗಳನ್ನು ತೆಗೆಯುತ್ತಾನೆ ಆ ಶಾಖೆಗಳು ಯಾವ ಅನುಮತಿ ಆಧಾರದ ಮೇಲೆ ತೆಗೆದಿದ್ದೀರೆಂದು ನಾನು ಕೇಳಿದರೆ, ಅದಕ್ಕೆ ಅವುರ ಸೌಹಾರ್ದ ಕಾಯಿದೆಯ ಕೆಳಗೆ ನಿಮಗೆ ಕೇಳುವುದಕ್ಕೆ ಅಧಿಕಾರವಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ ಅದು ಕೂಡ ನನ್ನ ಹತ್ತಿರ ಇದೆ, ಉತ್ತರವನ್ನು ಕೊಡುವ ಸೌಜನ್ಯ ಕೂಡ ಇಲ್ಲ ಆ ಸೌಹಾರ್ದ ಕಾಯಿದೆಯಡಿ ಇದೊಂದೇ ತಿಂಗಳಲ್ಲಿ ೨೮ Branchಗಳನ್ನು ಹೊಂದಿರುವಂತಹ ನೂರು ವರ್ಷಗಳ ಇತಿಹಾಸವನ್ನು ಹೊಂದಿರುವಂತಹ ಬ್ಯಾಂಕ್ ಅನ್ನು ದಿವಳಿ ಮಾಡಿ ಸೌಹಾರ್ದ ಕಾಯಿದೆಯಡಿಯಲ್ಲಿ ೨೮ ಹೊಸ ಬ್ಯಾಂಕ್ ಅನ್ನು ತೆಗೆಯುವಂತಹ ಅವಶ್ಯಕತೆ ಆದರೂ ಆ ಮನುಷ್ಯನಿಗೆ ಏನು ಇತ್ತು? ಇದನ್ನು ತೆಗೆದರೆ ತೆಗೆಯಲಿ, ಅದು ಯಾವ ರೀತಿಯಲ್ಲಿ ನಡೆದಿದೆಯೆಂದರೆ, ಅಲ್ಲಿಬ್ಬ employee ಗೆ ನೌಕರಿಯನ್ನು ಕೊಡಬೇಕೆಂದರೆ ಅರ್ಜಿಯನ್ನು ಕೂಡ ಆಹ್ವಾನ ಮಾಡುವುದಿಲ್ಲ ಆ ನೌಕರಿಗೆ ಯಾರು ಬರುತ್ತಾರೆ, ಅವರು ೪ ಲಕ್ಷ ರೂಪಾಯಿಗಳನ್ನು ಆ Bank ಗೆ Deposit ಅನ್ನು ಇಡಬೇಕು ಅದಕ್ಕೆ ಏನೂ interest ಇಲ್ಲ ಮತ್ತೆ ನಾಲ್ಕು ವರ್ಷ ಹಾಗೆ ದುಡಿದುಕೊಂಡು ಹೋಗಬೇಕು ಇದು ಏನಾದರೂ ಸುಳ್ಳು ಇದದೆ, ನಿಮ್ಮ ಜಿಇಲ್ಲಾ ಉಸ್ತುವಾರಿ ಮಂತ್ರಿಯವರು ಇಲ್ಲಿ ಇದ್ದಾರೆ, ಅವರೇ ಬೇಕಾದರೆ ಉತ್ತರವನ್ನು ಕೊಡಲಿ, ಬೇಕಾದರೆ

ಅವರನ್ನ ಕೇಳಿ ಜಿಲ್ಲೆಯಲ್ಲಿ ಇಷ್ಟು ಅನಾಹುತ ನಡೆದರೆ, ರತಿ ಸಾರಿ ನಾವು ಇಲಾಖೆಯವರಿಗೆ ಹೇಳಿದೆವು, ಜಿಲ್ಲಾ ಪೊಲೀಸ್ ಪರಿಷ್ಠಾಧಿಕಾರಿಯವರಿಗೆ ಹೇಳಿದೆವು DC ಯವರಿಗೆ ಹೇಳಿದೆವು ಈ ಬಗ್ಗೆ ಏನೂ ಒಂದು ಕ್ರಮವಾಗಲಿಲ್ಲವೆಂದರೆ, ನಾವು ಹೇಳುವುದಾದರೂ ಏತಕ್ಕೆ? ಹೇಳಲೇ ಬೇಡವೆಂದು ಕಾಯಿದೆಯನ್ನು ತಂದರೆ, ನಾವು ಸುಮ್ಮನೆ ಬಾಯಿ ಮುಚ್ಚಿಕೊಂಡು ಇರುತ್ತೇವೆ

೫ ಪ್ರಕಟಣೆ

ವಿಧಾನಪರಿಷತ್ತು ಕೆಲವು ವಿಧೇಯಕಗಳಿಗೆ ತನ್ನ ಸಹಮತಿ ನೀಡದಿರುವ ಬಗ್ಗೆ –

ಚೇರ್ಮನ್ ಈಗ ಒಂದು ಪ್ರಕಟಣೆ ಇದೆ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಇದೀಗ ಬಂದಿರುವ ಸಂದೇಶದಲ್ಲಿ, ಈ ಕೆಳಕಂಡ ವಿಧೇಯಕಗಳಿಗೆ, ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ

೧ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ ೨೦೦೭

೨ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ ೨೦೦೭

೩ ಕರ್ನಾಟಕ ಮೋಟಾರ್ ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ ೨೦೦೭

೪ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ ೨೦೦೭

೫ ಕರ್ನಾಟಕ ಸ್ಟ್ಯಾಂಪ್ (ಮೂರನೇ ತಿದ್ದುಪಡಿ) ವಿಧೇಯಕ ೨೦೦೭

ಶ್ರೀ ಹೆಚ್ ಸಿ ಬಾಲಕೃಷ್ಣ ದಯಮಾಡಿ ಅವರಿಗೆ ಸರ್ಕಾರ ಕೊಟ್ಟಿರುವ ಒಂದು ಕೋಟಿ ರೂಪಾಯಿಗಳ ಗ್ರಾಂಟ್ ಅನ್ನು ತೆಗೆದುಹಾಕಿ ಅವರೆಲ್ಲಾ wase, waste body ಗಳು ಅವೆಲ್ಲವನ್ನು ತೆಗೆದುಹಾಕಿ

ಶ್ರೀ ಹೆಚ್ ಡಿ ಬಸವರಾಜು ಅವರಿಗೆ ಯಾವುದು ಗ್ರಾಂಟ್ ಕೊಡಬೇಡಿ

(ಗೊಂದಲ)

ಒಬ್ಬ ಮಾನ್ಯ ಸದಸ್ಯರು ಮೇಲ್ಮನೆ ರದ್ದಾಗಬೇಕು, ಮೇಲ್ಮನೆ ರದ್ದಾಗಲಿ , ಮೇಲ್ಮನೆ ರದ್ದಾಗಲಿ,

ಶ್ರೀ ಡಿ ಹೆಚ್ ಶಂಕರಮೂರ್ತಿ ದಯಮಾಡಿ ನಾನು ಹೇಳುವುದು ಕೇಳಿ, ನಾನು ಹೇಳುವುದನ್ನು ಕೇಳುವುದಿಲ್ಲವೇ?

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು ಮೇಲ್ಮನೆಯಲ್ಲಿರುವಂಥವರು ರೈತ ವಿರೋಧಿಗಳು, ನೇರವಾಗಿ ಯಾವುದೇ ಚುನಾವಣೆಗೆ ನಿಲ್ಲುವುದಕ್ಕೆ ಅರ್ಹತೆ ಇರುವವರು ಇಲ್ಲ, ನೇರವಾಗಿ ಚುನಾವಣೆಗೆ ನಿಂತು ಜನಗಳನ್ನು ಎದುರಿಸಿ, ಜನಗಳ ಸಮಸ್ಯೆ ಏನೆಮದು ಅವರಿಗೆ ಗೊತ್ತಿದ್ದರೆ, ಇವತ್ತು ಅವರು ಬಜೆಟ್ ಅನ್ನು ವಿರೋಧ ಮಾಡುತ್ತಿರಲಿಲ್ಲ ಅವರು ರೈತರ ವಿರೋಧಿಗಳು, ನೇಕಾರರ ವಿರೋಧಿಗಳು, ಮೀನುಗಾರರ ವಿರೋಧಿಗಳು, ಸ್ತ್ರೀ ಶಕ್ತಿ, ಸ್ವಸಹಾಯ ಗುಂಪುಗಳ ವಿರೋಧಿಗಳು, ಅವರು ಆ ಮನೆಯಲ್ಲಿ ಇರುವುದಕ್ಕೆ ಅರ್ಹರಲ್ಲ ಆ ಮನೆ ಬೇಕಾಗಿಲ್ಲ ಆ ಮೇಲ್ಮನೆಯನ್ನು ರದ್ದು ಮಾಡಿ

(ಗೊಂದಲ)

ಚೇರ್ಮನ್ ಮಾನ್ಯ ಹೆಚ್ ಡಿ ಬಸವರಾಜುರವರೆ ಕುಳಿತುಕೊಳ್ಳಿ, ಮಾನ್ಯ ಡಿ ಹೆಚ್ ಶಂಕರಮೂರ್ತಿಯವರೆ ತಾವು ಮಾತನಾಡಿ

ಶ್ರೀ ಡಿ ಹೆಚ್ ಶಂಕರಮೂರ್ತಿ ಮಾನ್ಯ ಚೇರ್ಮನ್ ರವರೆ, ಅವರು ನನ್ನ ಬಗ್ಗೆ ಮಾತನಾಡುತ್ತಾರೆ, ಅವರು ನನ್ನ ಬಗ್ಗೆ ಏಕೆ ಮಾತನಾಡುತ್ತಾರೆ?

ವಿಧಾನ ಪರಿಷತ್ತಿನಲ್ಲಿ ನಾನು ಕಳೆದ ೧೯ ವರ್ಷಗಳಿಂದ ಸದಸ್ಯರಾಗಿ ಕೆಲಸ ಮಾಡಿಕೊಂಡು ಬಂದಿದ್ದೇನೆ ಈ ವಿಧಾನ ಪರಿಷತ್ತಿಗೆ ತನ್ನದೇ ಆದ ದೊಡ್ಡ ಇತಿಹಾಸ ಇದೆ ವಿಧಾನ ಪರಿಷತ್ತಿನ ಇತಿಹಾಸದಲ್ಲಿ, ಯಾವುದು ಆಡಳಿತ ಸರ್ಕಾರವಿರುತ್ತದೆ ಅವರು ತಂದಂತಹ Money Bill ಗಳನ್ನು Finnace Bill ಗಳನ್ನು defeat ಮಾಡಿದಂತಹ ವ್ಯವಸ್ಥೆಯನ್ನು ನಾವು ಎಂದೂ ಮಾಡಿಲ್ಲ ನಾವು ಇಷ್ಟು ವರ್ಷ ಇದ್ದದ್ದೇ ವಿರೋಧಪಕ್ಷದಲ್ಲಿ ಬಹಳಷ್ಟು ಸಾರಿ ವಿರೋಧಪಕ್ಷ ಮೆಜಾರಿಟಿ ಇತ್ತು ಆದರೆ ಕಳೆದ ಬಾರಿ ಮತ್ತು ಈ ಬಾರಿಯೂ ಈ ಕೆಲಸವನ್ನು ನಮ್ಮ ಕಾಂಗ್ರೆಸ್ ಮಿತ್ರರು ಮಾಡಿದ್ದಾರೆ ನಮ್ಮ ಕಾಂಗ್ರೆಸ್ ಮಿತ್ರರು ಈ ಒಂದು ಸಂಪ್ರದಾಯವನ್ನು ಮರೆತು, ರಾಜ್ಯಂಗದಲ್ಲಿರುವಂತಹ ೧೯೭, ೧೯೮ ಅನ್ನು ಓದದೇ Money Bill ನ್ನು defeat ಮಾಡಿದಂತಹ ವ್ಯವಸ್ಥೆಯನ್ನು ನಾವು ಎಂದೂ ಮಾಡಿಲ್ಲ ನಾವು ಇಷ್ಟು ವರ್ಷ ಇದ್ದದ್ದೇ ವಿರೋಧಪಕ್ಷದಲ್ಲಿ, ಬಹಳಷ್ಟು ಸಾರಿ ವಿರೋಧಪಕ್ಷಕ್ಕೆ ಮೆಜಾರಿಟಿ ಇತ್ತು ಆದರೆ ಕಳೆದ ಬಾರಿ ಮತ್ತು ಈ ಬಾರಿಯೂ ಈ ಕೆಲಸವನ್ನು ನಮ್ಮ ಕಾಂಗೆಸ್ ಮಿತ್ರರು ಮಾಡಿದ್ದಾರೆ ನಮ್ಮ ಕಾಂಗೆಸ್ ಮಿತ್ರರು ಈ ಒಂದು ಸಂಪ್ರದಾಯವನ್ನು ಮರೆತು, ರಾಜ್ಯಾಂಗಲದಲಿರುವಂತಹ ೧೯೭,೧೯೮ ಅನ್ನು ಓದದೇ Money Bill ಅನ್ನು defeat ಮಾಡಿದಂತಹ ಇತಿಹಾಸವಿರಲಿಲ್ಲ ನಮ್ಮದು ಏನಾದರೂ ಕೋಪವಿದ್ದರೆ, ವಿಧಾನಪರಿಷತ್ತಿನಲ್ಲಿರುವ ನಮ್ಮ ವಿರೋಧ ಪಕ್ಷದ ಸನ್ಮಿತ್ರರು ಯಾರು ಇದ್ದಾರೆ ಅವರು ಮಾಡಿರುವಂತಹ ತಪ್ಪೆ ಹೊರತು, ವಿಧಾನ ಪರಿಷತ್ತಿನ ಆಡಳಿತ ಪಕ್ಷವಾಗಲಿ, ಆಡಳಿತ ಪಕ್ಷದ ಸದಸ್ಯರಾಗಲಿ, ಏನೂ ತಪ್ಪು ಮಾಡಿಲ್ಲ ಅದಕ್ಕಾಗಿ ಇದರಲ್ಲಿ ಯಾರನ್ನಾದರೂ ಖಂಡನೆ ಮಾಡುವುದಿದ್ದರೆ, ಯಾರದ್ದಾದರೂ ತಪ್ಪು ಆಗಿದ್ದರೆ, ಅದು ನಮ್ಮ ಕಾಂಗ್ರೆಸ್ ಮಿತ್ರರಿಂದ ಆಗಿರುವುದೇ ಹೊರತು ಏನೂ ಗೊತ್ತಿಲ್ಲದೇ ಆಗಿರಬಹುದು, ಇದು ಅವರ ವಿರುದ್ಧ ಆಗಬೇಕಾಗಿರುವಂಥಾದ್ದು ಇದು ವಿಧಾನ ಪರಿಷತ್ತಿನ ತಪ್ಪಲ್ಲ ನಮ್ಮ ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ಪಕ್ಷದವರು ರಾಜ್ಯಾಂಗಕ್ಕೆ ಎಸಗಿರುವಂತಹ ಅವಮಾನ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾಡಿರುವಂಥ ಧಿಕ್ಕಾರದ ಕೆಲಸ

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಚೇರ್ಮನ್ ರವರೆ, ಆ ಮನೆಯಲ್ಲಿ ಏನಾಗಿದೆ, ಅದನ್ನು ಈ ಮನೆಯಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ

ಶ್ರೀ ಬಸವರಾಜ ರಾಯರೆಡ್ಡಿ ಮಾನ್ಯ ಬಸವರಾಜ ರಾಯರೆಡ್ಡಿ ಯವರ point of order ಇದೆ, ಕೇಳಿ

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ ಭಾರತದ ಸಂವಿಧಾನದ Article 198

ಶ್ರೀ ಹೆಚ್ ಡಿ ಬಸವರಾಜು ಇವರು ರೈತ ವಿರೋಧಿಗಳು ಆ ಮೆಯಲ್ಲಿ ಕುಳಿತುಕೊಳ್ಳುವುದಕ್ಕೆ ಇವರಿಗೆ ಹೇಗೆ ಅರ್ಹತೆ ಇದೆ ಎಂದು ಕೇಳಬೇಕಾಗಿದೆ ರೈತ ವಿರೋಧಿಗಳಾದ ಇವರು ಇವತ್ತು ಆ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕೆ ಅರ್ಹತೆ ಪಡೆದಿದ್ದಾರೋ ಇಲ್ಲವೋ ಎಂದು ಕೇಳಬೇಕಾಗಿದೆ ರೈತರ ಪರಮವಾದಂಥ ಬಜೆಟ್ ಕೊಟ್ಟರೆ ವಿರೋದ ಮಾಡುತ್ತಾರೆ ಎಂದರೆ ನಿಮಗೆ ಏನು ಹಕ್ಕಿದೆ? ರೈತರ ಬಗ್ಗೆ ಮಾತನಾಡಲು ನಿಮಗೆ ಏನು ಹಕ್ಕಿದೆ? ನಿಮಗೆ ಹಕ್ಕಿಲ್ಲ

(ಗೊಂದಲ)

ಚೇರ್ಮನ್ (ಎನ್ ಯೋಗೀಶ್ ಭಟ್) ಬಸವರಾಜುರವರೇ, ತಾವು ಕುಳಿತುಕೊಳ್ಳಿ

ಶ್ರೀ ಹೆಚ್ ಡಿ ಬಸವರಾಜು ಇವರಿಗೆ ರೈತರ ಬಗ್ಗೆ ಮಾತನಾಡಲು ಹಕ್ಕಿಲ್ಲ, ಬಡವರ ಬಗ್ಗೆ ಮಾತನಾಡಲು ಹಕ್ಕಿಲ್ಲ ಮೊಸಳೆ

ಕಣ್ಣೀರು ಸುರಿಸುವಂಥ ಇವರನ್ನು ಎಲಿಡಬೇಕು ಎಂದು ಜನ ತೀರ್ಮಾನ ಮಾಡಿದ್ದಾರೆ ಮತ್ತೆ ಈ ಮನೆಯಲ್ಲಿ ಆಯವ್ಯಯ ಪಾಸ್ ಆಗೇ ಆಗುತ್ತದೆ ಆದರೆ ಇವರ ಬಣ್ಣ ಬಯಲಾಗಲಿ ನಾವು ರಾಜ್ಯಕ್ಕೆ ತಿಳಿಸಲೇಬೇಕಾಗಿದೆ, ರೈತರ ವಿರೋಧಿಯಾಗಿರುವಂಥ ಇವರ ಬಗ್ಗೆ ನಾವು ರಾಜ್ಯಕ್ಕೆ ತಿಳಿಸಲೇಬೇಕಾಗಿದೆ ಬಡವರ ವಿರೋಧಿಯಾಗಿರುವಂಥ ಕಾಂಗೆಸ್ಸಿನವರ ಈ ಒಂದು ಚಾಳಿಯನ್ನು ನಾವು ತಿಳಸಲೇಬೇಕಾಗಿದೆ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು ವಿಧಾನ ಪರಿಷತ್ತನ್ನು ನಾವು ರದ್ದು ಮಾಡಲೇಬೇಕು ವಿಧಾನ ಪರಿಷತ್ತನ್ನು ರದ್ದು ಮಾಡುವ ವಿಚಾರದಲ್ಲಿ ನಾವೆಲ್ಲರೂ ಸಹಮತ ಇದ್ದೇವೆ ಈ ರಾಜ್ಯಕ್ಕೆ ವಿಧಾನ ಪರಿಷತ್ತಿನಿಂದ ಅನ್ಯಾಯವಾಗುತ್ತದೆ ರಾಜ್ಯದ ತೆರಿಗೆ ಹಣ ಅವರಿಗೆ ಹೋಗುತ್ತದೆ

ಚೇರ್ಮನ್ ಬಸವರಾಜುರವರೇ, ತಾವು ಕುಳಿತುಕೊಳ್ಳಿ

ಶ್ರೀ ಬಸವರಾಜ ರಾಯರೆಡ್ಡಿ ಭಾರತದ ಸಂವಿಧಾನದ Article 198 ರಲ್ಲಿ ಧನ ವಿಧೇಯಕಗಳಿಗೆ ಸಂಬಂಧಿಸಿದಂಥ ಪ್ರಕ್ರಿಯೆಗಳ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ ಯಾವ ರಾಜ್ಯದಲ್ಲಿ ವಿಧಾನ ಪರಿಷತ್ತು ಇದೆ, ಅಲ್ಲಿನ ವಿಧಾನಸಭೆಯಲ್ಲಿ ಧನ ವಿಧೇಯಕಗಳನ್ನು ಮಂಡಿಸದಾಗ ಅದನ್ನು ವಿಧಾನ ಪರಿಷತ್ತಿನ್ಲಲೂ ಮಂಡಿಸಿ ಅದರ ಒಪ್ಪಿಗೆಯನ್ನು ಪಡದುಕೊಳ್ಳಬೇಕು ಎಂದು ಇದೆ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು ಇಲ್ಲಿ ಅದು ಒಪ್ಪಿಗೆಯಾಗಿತ್ತು ಜನಸಾಮಾನ್ಯರಿಂದ ಗೆದ್ದಂಥ ನಾವು ಅದಕ್ಕೆ ಒಪ್ಪಿಗೆ ಕೊಟ್ಟಿದ್ದೆವು

ಶ್ರೀ ಬಸವರಾಜು ರಾಯರೆಡ್ಡಿ ಒಂದು ವೇಳೆ ಧನ ವಿಧೇಯಕಕ್ಕೆ ವಿಧಾನ ಪರಿಷತ್ತಿನ್ನಲಿ ಒಪ್ಪಿಗೆ ಪಡೆಯಲು ಸಾಧ್ಯವಾಗದಿದ್ದರೆ, Article 199, 204 ಪ್ರಕಾರ ಅದನ್ನು ಇಲ್ಲಿಗೆ ವಾಪಸ್ಸು ತೆಗೆದುಕೊಂಡು ಬರಬೇಕು ಆ ಪ್ರಕಾರ ವಾಪಸ್ಸು ತೆಗೆದುಕೊಂಡಿರುವ ಬಂದಿರುವ ಅದನ್ನು ಮತ್ತೆ ಇಲ್ಲಿ ತೆಗೆದುಕೊಳ್ಳುವಂಥ ಹಕ್ಕು ತಮಗಿದೆ

ಶ್ರಿ ಹೆಚ್ ಡಿ ಬಸವರಾಜು ಚುನಾವಣೆಗೆ ಹೋಗಿ ಬರಲಿ ಅವರು ಆಗ ಅವರಿಗೆ ಜನಸಾಮಾನ್ಯರ ಕಷ್ಟ ಏನು ಎನ್ನುವುದು ಗೊತ್ತಾಗುತ್ತದೆ ಅವರಿಗೇನು ಗೊತ್ತಿದೆ ರೈತರ ಸಮಸ್ಯೆ? ಬಡವರ ಸಮಸ್ಯೆ ಅವರಿಗೇನು ಗೊತ್ತಿದೆ?

ಶ್ರೀ ಬಸವರಾಜ ರಾಯರೆಡ್ಡಿ ಆದರೆ ಸಂವಿಧಾನಬದ್ಧವಾಗಿ ಕೊಟ್ಟಂಥ ಹಕ್ಕಿನ ಬಗ್ಗೆ, ವಿಧಾನ ಪರಿಷತ್ತಿನ ಬಗ್ಗೆ, ಮೇಲ್ಮನೆಯ ಬಗ್ಗೆ ಮಾನ್ಯ ಸದಸ್ಯರು ಟೀಕೆ ಮಾಡುವುದು ಉಚಿತವಲ್ಲ ಇದು ಸಂವಿಧಾನಬಾಹಿರವಾಗುತ್ತದೆ ಕೌನ್ಸಿಲ್ ಗೆ ಸಂವಿಧಾನದತ್ತವಾದ ಹಕ್ಕಿದೆ It is very bad precedent ಸಂವಿಧಾನದ ಉಲ್ಲಂಘನೆಯಾಗುತ್ತದೆ ಆದ್ದರಿಂದ ಮಾನ್ಯ ಸದಸ್ಯರು

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು ಏನು ಸಂವಿಧಾನ ?

ಶ್ರೀ ಬಸವರಾಜ ರಾಯರೆಡ್ಡಿ Article 199 and 204 ಪ್ರಕಾರ ಪುನಃ ಅದನ್ನು ಇಲ್ಲಿಗೆ ವಾಪಸ್ಸು ತೆಗೆದುಕೊಂಡು ಬಂದು ಇಲ್ಲಿ ಮಂಡಿಸಲಿ ಅದಕ್ಕೆ ಅವರಿಗೆ ಹಕ್ಕಿದೆ ಆದರೆ ವಿಧಾನ ಪರಿಷತ್ತಿನ್ನು ಏಕೆ ಟೀಕೆ ಮಾಡುತ್ತೀರಿ ಅದು ಸಂವಿಧಾನಬಾಹಿರವಾಗುತ್ತದೆ

ಚೇರ್ಮನ್ ರಾಯರೆಡ್ಡಿಯವರೇ, ತಾವು ತಮ್ಮ ಅಭಿಪ್ರಾಯವನ್ನು ಹೇಳಿಯಾಯಿತಲ್ಲ ಈಗ ಮಾಧುಸ್ವಾಮಿಯವರು

ಶ್ರೀ ಹೆಚ್ ಡಿ ಬಸವರಾಜು ನಾವು ಟೀಕೆ ಮಾಡಲೇಬೇಕು ಅವರ ಧೋರಣೆಯನ್ನು ನಾವು ಖಂಡಿಸಲೇಬೇಕು ಅವರ ರೀತಿಯನ್ನು ಖಂಡಿಸಲೇಬೇಕು ಅವರಿಗೆ ಜನಪರವಾದಂಥ ಚಿಂತನೆ ಮಾಡುವಂಥ, ಯೋಚನೆ ಮಾಡುವಂಥ ಭಾವನೆಗಳೇ ಇಲ್ಲ ಅವರು ಜನ ವಿರೋಧಿಗಳು, ಬಡವರ ವಿರೋಧಿಗಳು, ರೈತರ ವಿರೋಧಿಗಳು, ಮೀನುಗಾರರ ವಿರೋಧಿಗಳು

ಚೇರ್ಮನ್ ಬಸವರಾಜುರವರೇ, ತಾವು ಕುಳಿತುಕೊಳ್ಳಿ, ತಾವು ನಂತರ ಮಾತನಾಡಿ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಚೇರ್ಮನ್ ರವರೇ, ವಿಧಾನ ಪರಿಷತ್ತು ಇರಬೇಕೋ, ಬೇಡವೋ ಎಂದು ಚರ್ಚೆ ಕಾಲ ಇದಲ್ಲ ಎನ್ನುವುದು ನನ್ನ ಭಾವನೆ ವಿಧಾನ ಪರಿಷತ್ತು ಇರಲೇ ಬೇಕು ಎಂದು ನಾವ್ಯಾರೂ ಎಂದೂ ವಾದ ಮಾಡಿಲ್ಲ ಆದರೆ, ಒಂದು ಬಿಲ್ ಅಲ್ಲಿ defeat ಆದಾಗ ಅದನ್ನು ಏನು ಮಾಡಬೇಕು ಎನ್ನುವುದಕ್ಕೆ ಸಂವಿಧಾನದಲ್ಲಿ ಅವಕಾಶವಿದೆ ಈಗ ದಯಮಾಡಿ ಅಲ್ಲಿಗೆ ಒಂದುಬಿಟ್ಟು, ಆ ಕೆಲಸವನ್ನು ಮುಗಿಸಿ ಕೊಟ್ಟುಬಿಟ್ಟು ಸನ್ಮಾನ್ಯ ಹಣಕಾಸಿನ ಮಂತ್ರಿಗಳ ಕೆಲಸವನ್ನು ಈ ಸಭೆ ಸುಗಮ ಮಾಡಬೇಕಾಗಿದೆ ಒಂದು ಮನೆಯ ವ್ಯವಹಾರವನ್ನು ಇನ್ನೊಮುದ ಮನೆಯಲ್ಲಿ ನಾವು ಟೀಕೆ ಮಾಡಬಾರದು ಅದು ನಮಗೆ ಗೌರತ ತರುವಂಥಾದ್ದಲ್ಲ

ಶ್ರೀ ಹೆಚ್ ಡಿ ಬಸವರಾಜು ಈ ಮ್ಹನೆಯ ನಿರ್ಧಾರವನ್ನು ಅವರು ಕಡೆಗಣಿಸಬಹುದೇ?

ಶ್ರೀ ಜೆ ಸಿ,ಮಾಧುಸ್ವಾಮಿ ಅದನ್ನು accept ಮಾಡುವುದಕ್ಕೆ ಅಥವಾ defeat ಮಾಡುವುದಕ್ಕೆ ಅವರಿಗೆ ಅಧಿಕಾರವಿದೆ ಅವರ ವಿವೇಚನೆಯಲ್ಲಿ ಏನು ಬೇಕೋ ಅದನ್ನು ಅವರು ಮಾಡಿದ್ದಾರೆ ಅದನ್ನು ನಾವು question ಮಾಡಲಿಕ್ಕಾಗುವುದಿಲ್ಲ ಆದರೆ, ಅದೇನೂ ಅಂತಿಮವಲ್ಲ ಈ ಸಭೆಗೆ ಅದರ ಮೇಲೆ ಅಧಿಕಾರ ಇರುವುದರಿಂದ, ಈಗ ನಾವು ಬಿಲ್‌ಗೆ ಸೀಮಿತವಾಗಿ ಬರಬೇಕು

ಶ್ರೀ ಹೆಚ್ ಡಿ ಬಸವರಾಜು ಜನಪರವಾದಂಥ ಚಿಂತನೆ ಮಾಡುತ್ತಿರುವಂಥಾದ್ದು ಇದು ಜನರ ಪರವಾಗಿ ನಾವು ಮಾಡುತ್ತಿರುವಂಥ ಆಗ್ರಹವಿದು ಒಳ್ಳೆಯದಕ್ಕೆ ಯಾವತ್ತೂ ಬೆಂಬಲ ಕೊಡಬೇಕು

ಶ್ರೀ ಜೆ ಸಿ ಮಾಧುಸ್ವಾಮಿ ಎರಡನೆಯದಾಗಿ, ಮಂತ್ರಿಗಳೂ ಕೂಡ ಆ ರೀತಿ ಮಾತನಾಡಬಾರದು ಆ ಪಾರ್ಟಿಯವರು ಹೀಗೆ ಮಾಡಿದರು, ಈ ಪಾರ್ಟಿಯವರು ಹೀಗೆ ಮಾಡಿದರು ಎಂದು ಹೇಳಬಾರದು With due respect, ತಾವು ಅಲ್ಲಿ ಸಭಾನಾಯಕರು, ತಾವು ಆ ರೀತಿ ಮಾತನಾಡಬಾರದು please

(ಗೊಂದಲ)

ಶ್ರೀ ಡಿ ಹೆಚ್ ಶಂಕರಮೂರ್ತಿ ನಾನು ಅಲ್ಲಿ ವಿರೋದ ಪಕ್ಷದ ನಾಯಕನಾಗಿದ್ದಾಗ ನಮಗೆ ಅಂದರೆ ವಿರೋಧ ಪಕ್ಷಕ್ಕೆ majority ಇತ್ತು ಆದರೆ ನಾವು ಎಂದೂ Finance Bill ಅನ್ನು defeat ಮಾಡಲಿಲ್ಲ ಟೀಕೆ ಮಾಡಿದೆವು, ಚರ್ಚೆ ಮಾಡಿದೆವು, ವಾದ ಮಾಡಿದೆವು ಸಿದ್ದರಾಮಯ್ಯನವರನ್ನೇ ಕೇಳಿ ಅವರು ಹಣಕಾಸು ವಿಧೇಯಕವನ್ನು ಮಂಡಿಸಿದಾಗಲೂ ಅವರಿಗೆ majority ಇರಲಿಲ್ಲ ಆಗ ನಾವು pass ಮಾಡಿ ಕೊಡಲಿಲ್ಲವೇ?

ಶ್ರಿ ಜೆ ಸಿ ಮಾಧುಸ್ವಾಮಿ ಅವರು defeat ಮಾಡಿದ್ದನ್ನು ನಾವು defend ಮಾಡುತ್ತಿಲ್ಲ

ಶ್ರೀ ಹೆಚ್ ಡಿ ಬಸವರಾಜು ಅವರಿಗೆ ಕಾಳಜಿಯೇ ಇಲ್ಲ Sir

ಶ್ರೀ ಜೆ ಸಿ ಮಾಧುಸ್ವಾಮಿ ಈ ರೀತಯಾದರೆ ಹೇಗೆ? ನನಗೆ ಮಾತನಾಡುವುದಕ್ಕೆ ಬಿಡಿ ಅಲ್ಲಿ defeat ಮಾಡಿರುವುದನ್ನು ನಾವು defend ಮಾಡುತ್ತಿಲ್ಲ ಇವತ್ತಿಗೂ ಆಯವ್ಯಯದ ಮೇಲಿನ ಭಾಷಣ ಮುಂದುವರೆಯಬೇಕು ಎಂದಾಗ ನಾವೆಲ್ಲ ಹಣಕಾಸು ಸಚಿವರಿಗೆ ಮಾತು ಕೊಟ್ಟಿದ್ದೆವು, ನಿಮಗೆ ತೊಂದರೆ ಕೊಡುವುದಿಲ್ಲ ಇದನ್ನು ಪಾಸ ಮಾಡಿಸಿ

ಕೊಡುತ್ತೇನೆ ಎಮದು ಹೇಳಿದ್ದೆವು ದುರದೃಷ್ಟವಶಾತ್ ಈ ರೀತಿಯಾಗಿದೆ ಇವತ್ತು ಯಡಿಯೂರಪ್ಪನವರು ನಮ್ಮ ಜೊತೆ ಸಮಾಧಾನವಾಗಿ ಚರ್ಚಿಸಿಬಿಟ್ಟಿದ್ದರೆ ಈ ಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ ಯಾಕೋ ಬಹಳ ಆತುರಾತುರವಾಗಿ ನೀವು ಹೇಗೆ ಮಾಡಿಕೊಂಡು, ನಮಗೆಲ್ಲ ಇರಿಸು ಮುರಿಸಾಗಿದೆ ಈಗಲೂ ನಾವು ಹೇಳುತ್ತೇನೆ, ಈ ಮನೆಗೆ ಅಧಿಕಾರವಿದೆ ಈ ಮನೆಗೆ ಅಧಿಕಾರವಿದ್ದಾಗ ಅದನ್ನು ಚಲಾಯಿಸುವುದನ್ನು ಬಿಟ್ಟು, ನಮಗೆ ಸಂವಿಧಾನದಲ್ಲಿ ಕೊಟ್ಟಿರುವ ಅಧಿಕಾರವನ್ನು ಚಲಾಯಿಸುವುದನ್ನು ಬಿಟ್ಟು ಇನ್ನೊಬ್ಬರನ್ನು ಟೀಕೆ ಮಾಡುವುದು ನಮಗೆ ಗೌರವ ತರುವುದಿಲ್ಲ ವಿಧಾನ ಪರಿಷತ್ತು ಇರಬೇಕೋ, ಬೇಡವೋ ಎನ್ನುವುದನ್ನು ಇನ್ನೊಂದು ದಿವಸ ಚರ್ಚೆ ಮಾಡೋಣ ಈಗ ದಯಮಾಡಿ ತಾವು Bill move ಮಾಡಿಬಿಡಿ Sir

(ಈ ಹಂತದಲ್ಲಿ ಅಧ್ಯಕ್ಷರು ಪೀಠವನ್ನಲಂಕರಿಸಿದರು)

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ ಸನ್ಮಾನ್ಯ ಅಧ್ಯಕ್ಷರೇ, ತಾವು ಹೇಳಿದಂತೆ, ಸಂವಿಧಾನದ Article ೧೯೮(೪) ರ ಕೆಳಗೆ ನಾವು ಮತ್ತೆ ಅದನ್ನು ಇಲ್ಲಿ ಮಂಡಿಸಲು ಬರುತ್ತದೆ ಅವರಿಗೆ ಅಧಿಕಾರ ಇಲ್ಲ ಎನ್ನುವ ಮಾತನ್ನು ನಾನು ಹೇಳೂವುದಿಲ್ಲ ಅವರಿಗೆ ಅಧಿಕಾರವಿದೆ ಅವರು ಒಪ್ಪಬಹುದು ಅಥವಾ ತಿರಸ್ಕರಿಸಬಹದುಉ ಆದರೆ, ಒಂದು ಸಂಪ್ರದಾಯ ಎನ್ನುವುದಂತೂ ಇರುತ್ತದೆ ನಾವೆಲ್ಲರೂ ಇದನ್ನು ಒಪ್ಪಿಕೊಂಡಿದ್ದೇವೆ ಧನ ವಿಧೇಯಕಗಳು ಬಂದಾಗ ವಿಧಾನ ಪರಿಷತ್ತು ಅವುಗಳನ್ನು ಈ ತರಹದಲ್ಲಿ ತಿರಸ್ಕಾರ ಮಾಡಿರತಕ್ಕಂಥ ಉದಾಹರಣೆ ಸ್ವಾತಂತ್ರೋತ್ತರದ ನಮ್ಮ ಈ ಕರ್ನಾಟಕ ರಾಜ್ಯದಲ್ಲಿ ಎಂದೂ ಆಗಿರಲಿಲ್ಲ ಬೇರೆ ಕಡೆಗೆ ಆಗಿರತಕ್ಕಂಥಾದ್ದು ಇದೆ ಕಳೆದ ಬಾರಿ ನಾವು ಈ ರೀತಿ ವಿರೋಧ ಮಾಡಲಿಲ್ಲ, ಆದರೆ ಸಭಾಪತಿಗಳು ಬೇರೆ ತರಹ ಅರ್ಥ ಮಾಡಿಕೊಂಡು reject ಎಂದು ಹೇಳಿದರು ಎನ್ನುವ ತಾಂತ್ರಿಕ ಕಾರಣವನ್ನು ನಂತರದ ದಿನಮಾನಗಳಲ್ಲಿ ಹೇಳಿದರು ಈಗ ಏನೇ ಆಗಿರಲಿ, ಮತ್ತಿ ನಮಗೆ ಇಲ್ಲಿ

೧೯೮(೪) ರ ಕೆಳಗೆ ಮತ್ತೆ ಪಾಸ್ ಮಾಡಿಕೊಳ್ಳಲು ಅಧಿಕಾರವಿದೆ ಆದರೆ, ಈ ತರಹದ ಸಂಪ್ರದಾಯಗಳನ್ನು ಮಾಡುತ್ತಿರತಕ್ಕಂಥಾದ್ದೇನಿದೆ, ಇದು ನಿಜವಾಗಿಯೂ ಕೂಡ ನಮಗೆ ಭೂಷಣ ತರತಕ್ಕಂಥಾದ್ದಲ್ಲ ಈ ಕಾರಣಕ್ಕಾಗಿಯೇ ತಮ್ಮ ಸದಸ್ಯರು ಆ ರೀತಿಯ ಮಾತುಗಳನ್ನು ಹೇಳಿದ್ದಾರೆ ಆ ಬಗೆ, ನಾವೆಲ್ಲಾ ಕಲೆತು ಯೋಚನೆ ಮಾಡಿ ನಿರ್ಧಾರ ತೆಗೆದುಕೊಳ್ಳಬೇಕಾಗತ್ತದೆ ಅಲ್ಲಿಯ ಸಭಾ ಕಲಾಪಗಳನ್ನು ಇಲ್ಲಿ ಚರ್ಚಿಸಬಾರದು ಎನ್ನುವಂಥಾದ್ದು ನಿಜವಾದಂಥ ಮಾತು ಆದರೆ, ಮೊನ್ನೆ ನಡೆದಿರತಕ್ಕಂಥ ಘಟನೆಯನ್ನೂ ನಾವು ನೋಡಬೇಕಾಗುತ್ತೆ ಅಲ್ಲಿಯ ಸಭಾಪತಿಯ ಚುನಾವಣೆಯ ವಿಚಾರದಲ್ಲಿ ಅಲ್ಲಿಯ ಕಾರ್ಯಕಲಾಪಗಳ ಕುರಿತಾಗಿ ಇಲ್ಲಿ ಬಾವಿಗೆ ಬಂದು,ಎಲ್ಲ ಕಾರ್ಯಕಲಾಪಗಳಿಗೆ ಅಡ್ಡಿಪಡಿಸಿರತಕ್ಕಂಥಾದ್ದು ಇಲ್ಲಿ ನಡೆದಿದೆ ಹಾಗಿರತಕ್ಕಂಥ ಸಂದರ್ಭದಲ್ಲಿ, ಅಲ್ಲಿಯ ಕಲಾಪಗಳನ್ನು ಇಲ್ಲಿ ಚರ್ಚೆ ಮಾಡಬಾರದು ಎಂದು ಹೇಳಿದರೆ ಹೇಗೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ ಅದಕ್ಕೂ ಇದಕ್ಕೂ ಏನು ಸಂಬಂಧ ಪ್ರಕಾಶ್ ?

ಶ್ರೀ ಎಂ ಪಿ ಪ್ರಕಾಶ್ ಏನು ಸಂಬಂಧವೆಂದರೆ. ಆಗ ಅಲ್ಲಿಯ ಕಲಾಪಗಳನ್ನು ಇಲ್ಲಿ ಏಕೆ ಚರ್ಚೆ ಮಾಡಬೆಕಾಗಿತ್ತು? ಏಕೆ ಚರ್ಚೆ ಮಾಡಿದಿರಿ?

ಶ್ರೀ ಸಿದ್ದರಾಮಯ್ಯ ಪ್ರಜಾಪ್ರಭುತ್ವಕ್ಕೆ ವಿರೋದವಾಗಿ ನಡೆದುಕೊಂಡರೆ ಏನು ಏನು ಮಾಡಬೇಕು?

ಶ್ರೀ ಎಂ ಪಿ ಪ್ರಕಾಶ್ ಅದು ಬೇರೆ ವಿಷಯ ಆದರೆ, ಈ ವಿಷಯದಲ್ಲಿ ಪ್ರಜಾಪ್ರಭುತ್ವದ ವಿರೋಧವಿಲ್ಲದಿದ್ದರೂ ಕೂಡ ಸತ್ಸಂಪ್ರದಾಯದ ವಿರೋಧವಾಗಿ ನಡೆದುಕೊಂಡಿರತಕ್ಕಂಥ ವಿಚಾರವನ್ನು ಇಲ್ಲಿ ಚರ್ಚಿಸಬಾರದೇ?

ಶ್ರೀ ಸಿದ್ದರಾಮ್ಯಯ ಇದು ಸತ್ಸಂಪ್ರದಾಯವೇ? ಇವತ್ತು Finance Minister ಮಾಡಿದಂಥಾದ್ದು ಸತ್ಸಂಪ್ರದಾಯವೇ? ಹಾಗಾದರೆ, ನೀವು ಯಾವ ಸಂಪ್ರದಾಯವನ್ನು ಮಾಡಿದರೂ ನವು ಒಪ್ಪಿಕೊಂಡು ಕುಳಿತುಕೊಳ್ಳಬೇಕೇ?

ಶ್ರೀ ಧರಂಸಿಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೇ, ನಿನ್ನ ನಾವು, ಶ್ರೀರಾಮರೆಡ್ಡಿಯವರು, ಖರ್ಗೆಯವರು, ದೇಶಪಾಂಡೆಯವರು ಎಲ್ಲರೂ ಕೂಡ ನಿಮಗೆ ಆಶ್ವಾಸನೆಯನ್ನು ಕೊಟ್ಟಿದ್ದೆವು ನಮಗೆಲ್ಲರಿಗೂ ಚರ್ಚೆಗೆ ಅವಕಾಶವನ್ನು ಕೊಡಿ, ನಾವು ಇದನ್ನು ಪಾಸ್ ಮಾಡಿ ಕೊಡುತ್ತೇವೆ, ಇದಕ್ಕೆ ಅಡ್ಡಿ ಆತಂಕ ಮಾಡುವುದಿಲ್ಲ ಎನ್ನತಕ್ಕಂಥ ಮಾತನ್ನು ಸದನದಲ್ಲೆಏ ಹೇಳಿದ್ದೆವು ಅಧ್ಯಕ್ಷರ ಜೊತೆಯಲ್ಲಿ ಸಮಾಲೋಚನೆ ಮಾಡತಕ್ಕಂಥ ಕಾಲದಲ್ಲೂ ಕೂಡ ಅದನ್ನೇ ಹೇಳಿದ್ದೇವೆ ಮೊಟ್ಟಮೊದಲನೆಯದಾಗಿ, ಇದಕ್ಕೆ ಅಡ್ಡಿ ಆತಂಕ ಪಡಿಸಕ್ಕಂಥಾದ್ದು ಇಲ್ಲವೇ ಇಲ್ಲ ಇವತ್ತು ಸಿದ್ದರಾಮಯ್ಯನವರು, ಖರ್ಗೆಯವರು ಮತ್ತು ನಾವೆಲ್ಲವರೂ ಮಾತನಾಡಿದ ಮೇಲೆ ಅವರು ಉತ್ತರ ಕೊಡಲು ಪ್ರಾರಂಭ ಮಾಡಿದರು ಅವರು ಉತ್ತರ ಕೊಡತಕ್ಕಂಥ ಕಾಲದಲ್ಲಿ, ವಿರೋಧ ಪಕ್ಷದಲ್ಲಿರುವ ನಮಗೆ ಪ್ರತಿಯೊಂದಕ್ಕೂ ಸ್ಪಷ್ಟೀಕರಣ ಕೇಳತಕ್ಕಂಥ ಹಕ್ಕು ಇದೆ ತಮಗೂ ಗೊತ್ತಿರಬಹುದು ನಾವು, ಮಾಧುಸ್ವಾಮಿಯವರು, ವಾಟಾಳ್ ನಾಗರಾಜ್ ರವರು, ಶ್ರೀರಾಮರೆಡ್ಡಿಯವರು, ಜಯಪ್ರಕಾಶ ಹೆಗ್ಡಯವರು ಎಲ್ಲರೂ ವೆಲ್ ಗೆ ಬಂದು ಎಲ್ಲ ಸಾಲ ಮನ್ನಾ ಮಾಡಬೇಕೆಮದು ಬೇಡಿಕೆಯನ್ನಿಟ್ಟಿಇದ್ದೆವು ತಮ್ಮ ಕೊರಡಿಯಲ್ಲೂ ಚರ್ಚೆಯಾಯಿತು ೨೯ನೇ ತಾರೀಖು ನಮ್ಮ Co-ordination Committee ಇದೆ, ಅಲ್ಲಿ ಮಾತನಾಡಿ ಹೇಳುತ್ತೇವೆ ಎಮದು ಹೇಳಿದರು ಇವತ್ತೂ ಕೂಡ ಅವರು ಉತ್ತರ ಕೊಡತಕ್ಕಂಥ ಕಾಲದಲ್ಲಿ ಅದರ ಬಗ್ಗೆ ಕೇಳಿದೆವು ಅದನ್ನು ಬಿಡಿ ಅದು ಎರಡನೇ ಭಾಗ ವಿಧಾನ ಪರಿಷತ್ತಿನಲ್ಲಿ ಹಿಂದೆ ಎಂದೂ ಈ ರೀತಿಯ ಘಟನೆ ನಡೆದಿರಲಿಲ್ಲ ಎಂದು ನೀವು ಹೇಳುತ್ತಿದ್ದೀರಿ ಆದರೆ, ವಿಧಾನಸಭೆಯಲ್ಲಿ ಒಬ್ಬ ಉಪ

ಮುಖ್ಯಮಂತ್ರಿಗಳು, ಹಣಕಾಸಿನ ಸಚಿವರಾಗಿ ೨೨೦ ಕೋಟಿ ರೂಪಾಯಿಗಳ ಯೋಜನೆಗಳನ್ನು announce ಮಾಡುತ್ತಾರೆ ಅದರು ಹೇಗೆ ಕೊಡಲಿಕ್ಕೆ ಸಾಧ್ಯ? ಇದು ಬಜೆಟ್ ಆಗಿರದೇ ಘೋಷಣೆ ಎನ್ನುವ ರೀತಿಯಲ್ಲಿ ಗಲಾಟೆಯಾಗಿದೆ ನೀವೇನು ಮಾಡಿದರಿ? ಗಲಾಟೆ ಮಧ್ಯದಲ್ಲಿ ನಾವಿಲ್ಲಿ ಪ್ರತಿಭಟನೆ ಮಾಡಿದೆವು ನೀವು pass ಮಾಡಿಕೊಂಡು ಹೋದಿರಿ ನಮಗೇನೂ ಕೇಳಲಿಲ್ಲ ತಾವು pass ಮಾಡಿಕೊಟ್ಟಿರಿ ನಾವೆಲ್ಲ ಜೈಕಾರ ಹಾಕುತ್ತಿದ್ದೆವು ಅದೇ ರೀತಿಯಲ್ಲಿ ಇವತ್ತು ವಿಧಾನರಿಷತ್ತಿನಲ್ಲಿ ನಮ್ಮ ಏನು ಒಂದು ನಡವಳಿಕೆಯಾಗಿದೆ, ಅದರ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ಅಲ್ಲಿ ಕೂಡ majority ಇದೆ, ಮಾಡಿದ್ದರೆ ಆದರೆ, ಅಲಲಿ ಮಾಡಿದ್ದು ಸರಿಯೆನ್ನತಕ್ಕಂಥದ್ದಲ್ಲ A tit for tat ಯಾವಾಗಲೂ ಕೂಡ democracy setup ನಲ್ಲಿ ಇವತ್ತು ಬಹುಮತ ಇರತಕ್ಕಂಥ ರೀತಿಯಲ್ಲಿ ಮಾಡಿದ್ದಾರೆ ಅದಕ್ಕೆ ನಾನು ಹೇಳತಕ್ಕಂಥಾದ್ದೇನೆಂದರೆ, ಇವತ್ತಿನ ದಿವಸ ಸರಿಯಾದ ರೀತಿಯಲ್ಲಿ ಉತ್ತರ ಬಂದಿದ್ದರೆ ಗಲಾಟೆ ಆಗುತ್ತಿರಲಿಲ್ಲ ಗಲಾಟೆ ನಾವು ಮಾಡಿಲ್ಲ ತಾವಾಗಿ ತಾವೇ ಮಾಡಕೊಂಡಿದ್ದು ಈಗ ಅಲ್ಲಿ ಪತ್ರಕರ್ತ ಮಿತ್ರರಿದ್ದಾರೆ ಹೊರಗಡೆ ಕೂಡ ಜನ ನೋಡುತ್ತಿದ್ದಾಋಎ ೧೯೫೨ ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಹಣಕಾಸು ಸಚಿವರು, ಘೋಷಣೆ ಹೇಳುತ್ತಾ ಹೇಳುತ್ತಾ ಹೋಗುವುದು ಯಾವಾಗಲಾದರೂ ಈ ರೀತಿ ಆಗಿದೆಯೇ? ಅದನ್ನು ಹೇಗೆ ತುಂಬಿಕೊಡಲಿಕ್ಕೆ ಆಗುತ್ತಿದೆ ? ಎರಡೆರಡು ಬಜೆಟ್ ಮಾಡಿದ್ದಾರೆ ಪುನಃ ವಿಧಾನಪರಿಷತ್ತಿನಲ್ಲಿ ಮತ್ತೆ ೧೭ ಕೋಟಿ ರೂಪಾಯಿಗಳ ಹೆಚ್ಚಿನ ಹಣವನ್ನು ಘೋಷಣೆ ಮಾಡಿದ್ದಾರೆ ಇದು ತೆರಿಗೆ ಹಣ, ಜನರ ಹಣ ರಾಜ್ಯದಲ್ಲಿ ಜನ ಬೆವರು ಸುರಿಸಿ ಸಂಪಾದನೆ ಮಾಡುವ, ಬಡವರ ತೆರಿಗೆ ಮೇಲೆ ಇವತ್ತಿನ ದಿವಸ ನಿಮ್ಮ ಮನಸ್ಸಿಗೆ ಬಂದ ಹಾಗೆ ನೀವು annoucne ಮಾಡುವುದು ಅಂದರೆ how can we sit? ನೀವೇ ಹೇಳಿ ಅದಕ್ಕೆ ನಾವು ಧರಣಿ ಮಾಡಬೇಕಾಯಿತು

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲ) ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಮಂತ್ರಿಗಳು ಮಾತನಾಡುವ ಸಂದರ್ಭದಲ್ಲಿ ಸತ್ ಸಂಪ್ರದಾಯವನ್ನು ಮೀರಬಾರದೆನ್ನುವ ಒಂದು ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡಿದರು ಅದನ್ನು ನಾನು ಕೂಡ ಒಪ್ಪುತ್ತೇನೆ ಕಾನೂನು ಪ್ರಕಾರವಾಗಿ ಅವರಿಗೆ ಅಧಿಕಾರವಿದೆ Defeat ಮಾಡಿದರೆ ಮತ್ತೆ ಸಂವಿಧಾನದ ಪ್ರಕಾರವಾಗಿ ಈ ಸದನಕ್ಕೆ ಬರುತ್ತದೆ Majority ಯಿರುವುದರಿಂದ approval ಪಡೆದುಕೊಂಡು ಹೋಗುತ್ತದೆ ಅದಕ್ಕೋಸ್ಕರ ಅವರನ್ನೇನೂ ನಾವು ಇಲ್ಲಿ criticize ಮಾಡುವ ಅವಶ್ಯಕತೆಯಿಲ್ಲ ಆದರೆ, ಮಾನ್ಯ ಪ್ರಕಾಶ್ ರವರು ಹೇಳಿದ ಸತ್ ಸಂಪ್ರದಾಯವನ್ನು ಮೊದಲು ಇಲ್ಲಿಯೇ ಮುರಿದಿರುವಂಥಾದ್ದು ಬಜೆಟ್ ನಲ್ಲಿ ಮಂಡನೆ ಮಾಡಿ ಆದಮೇಲೆ ಇನ್ನೊಂದು mini budget ರೀತಿಯಲ್ಲಿ ಉಪ ಮುಖ್ಯಮಂತ್ರಿಗಳೂ ಆಗಿರುವ ಹಣಕಾಸಿನ ಸಚಿವರು announce ಮಾಡತಕ್ಕಂಥ ಸಂಪ್ರದಾಯವನ್ನು ಮುರಿದ ಹಾಗೆ ಅಲ್ಲವೇ? ಆ ಸಂಪ್ರದಾಯವನ್ನು ನೀವೇ ಇಲ್ಲಿ ಮುರಿದು, ಅವರಿಗೆ ದಾರಿ ಮಾಡಿಕೊಟ್ಟಿರಿ ಅದಕ್ಕೆ ಹೊಣೆ ಯಾರು? ಈ ತರಹ ಮಾಡಬಾರದೆಂದು ನಾಔಎಲ್ಲ ಸೇರಿ ಇಲ್ಲಿ ಕೇಳಿಕೊಂಡೆವು, request ಮಾಡಿಕೊಂಡೆವು ಆದರೆ, ನಮ್ಮ ಮಾತಿಗೆ ನೀವು ಒಂದೇ ಒಂದು ನಿಮಿಷದ ಬೆಲೆ ಕೊಟ್ಟಿದ್ದೀರಾ? Majority ಇದೆಯೆಂದು ನೀವು ಮಾತ್ರ ಇಲ್ಲಿ ಬಾಯಿ ಮುಚ್ಚಿಸಿಬಿಟ್ಟು, ಇದು ಸಂಪ್ರದಾಯವಲ್ಲವೆಂದು ನಾವು ಬೇಡಿಕೊಂಡೆವು ನಾವು ಈ ದಿನ ನಿಮ್ಮ money bill ಅನ್ನು defeat ಮಾಡುವುದಿಲ್ಲ ಖಂಡಿತ, ಅದನ್ನು ಮಾಡಿಕೊಡುತ್ತೇವೆ ಅದಕ್ಕೆ ನಮ್ಮ ವಿರೋಧವಿಲ್ಲ ಈ ಸಂಪ್ರದಾಯವನ್ನು ಸರ್ಕಾರದ ಕಡೆಯಿಂದ ನೀವು ಮುರಿದ್ದು ಸಂಪ್ರದಾಯವನ್ನು ಮುರಿದು ನೀವು ಇಲ್ಲಿ ನಿಮ್ಮ ಇದೆಯೆಂದು ನೀವು ಹೇಗೆ ವರ್ತನೆ ಮಾಡಿದರೋ ಹಾಗೆಯೇ ಅವರೂ ಸಹ ಅಲ್ಲಿ ಮಾಡುತ್ತಾರೆ

ಅಧ್ಯಕ್ಷರು ಆಯಿತು, ರೆಡ್ಡಿಯವರೇ, let us go to business ಈಗ ಸಭೆಯ ಮುದಿಡಲಾಗುವ ಕಾಗದ ಪತ್ರಗಳು

(ಗೊಂದಲ)

ಶ್ರೀ ಜೆ ವಿ ಶ್ರೀರಾಮರೆಡ್ಡಿ ನಿಮಗೆ ಇಷ್ಟ ಬಂದ ಹಾಗೆ ಬಜೆಟ್ ಮ್ಡಂಡಿಸಿ ಬಿಡುವುದೇ ? ನಿಮಗೆ ಇಷ್ಟ ಬಂದ ಹಾಫೆ ಬಜೆಟ್ ಮಂಡಿಸುವುದಿಲ್ಲ ಬಜೆಟ್ ಮಂಡನೆ ಮಾಡುವುದಕ್ಕೆ ಒಂದು ನಿಯಮವಿದೆ ಆ ನಿಯಮವನ್ನು, ಸಂಪ್ರದಾಯವನ್ನು ನೀವು ಮುರಿದಿರಿ Majority ಇದೆಯೆಂದು ಒಳ್ಳೆಯ ಸಂಪ್ರದಾಯವಿದ್ದುದನ್ನು ನೀವು ಇಲ್ಲಿ ಮುರಿಯಲಿಲ್ಲವೇ? Majority ಇದೆಯೆಂದು ನೀವು ಹೇಗೆ ಸಂಪ್ರದಾಯವನ್ನು ಮುರಿದಿರೋ ಹಾಗೆಯೇ ಅವರು ಅಲ್ಲಿ ಮುರಿದಿದ್ದಾಋಎ

ಶ್ರೀ ಶಿವಾನಂದ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ನಾವು ಕೊಟ್ಟ calling attention ಗೆ ನೀವು reply ಕೊಡಲಾರದೆ ಓದಿಬಿಟ್ಟಿರಿ, ನೀವೇ ಹೇಳಿ ಅದೊಂದು ಒಳ್ಳೆಯ ಸಂಪ್ರದಾಯವೇ?

(ಗೊಂದಲ)

೪ ಸಭೆಯ ಮುಂದಿಡಲಾದ ಕಾಗದಪತ್ರಗಳು

ಅಪರ ಕಾರ್ಯದರ್ಶಿ ವಿಧಾನ ಪರಿಷತ್ತಿನಿಂದ ತಿರಸ್ಕೃತಗೊಂಡ ಈ ಕೆಳಕಂಡ ವಿದೇಯಕಗಳನ್ನು ಸಭೆಯ ಮುಂದಿಡುತ್ತಿದ್ದೇನೆ

೧ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, ೨೦೦೭

೨ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, ೨೦೦೭

೩ ಕರ್ನಾಟಕ ಮೋಟರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, ೨೦೦೭

೪ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, ೨೦೦೭

೫ ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕ, ೨೦೦೭

೫ ಶಾಸನ ರಚನೆ

ವಿಧೇಯಕಗಳನ್ನು ಪುನರ್ ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕ, ೨೦೦೭

ಪುನರ್ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ ಎಸ್ ಯಡಿಯೂರಪ್ಪ (ಹಣಕಾಸು ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ೨೦೦೭ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕವನ್ನುಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ

ಪುನರ್ ಪ್ರಸ್ತಾಪವನ್ನು ಮಂಡಿಸಲಾಯಿತು

ಅಧ್ಯಕ್ಷರು ಪ್ರಸ್ತಾಪ ಏನೆಂದರೆ ,

"೨೦೦೭ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಶ್ರೀ ಮಲ್ಲಿಕಾರ್ಜುನ ಖರ್ಗೆ ಅದನ್ನು ನೀವು ಮಾಡಿ ಬದಲಾದ ವಿಷಯಗಳೇನಿವೆ? ಯಾವ್ಯಾವುದಕ್ಕೆ ಎಷ್ಟೆಷ್ಟು ಹಣ ಕೇಳಿದ್ದಾರೆ? ಎನ್ನುವುದು ಗೊತ್ತಾಗಬೇಕಲ್ಲವೆ?

ಶ್ರೀ ಡಿ ಕೆ ಶಿವಕುಮಾರ್ ಅದಕ್ಕಾಗಿ ಮಾತನಾಡಿಬೇಕಾಗುತ್ತದೆ ಮೇಲ್ಮನೆಯಲ್ಲಿ ಏಕೆ ಆಯಿತು

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ Additional information ಬೇಕಾಗುತ್ತದೆ

ಅಧ್ಯಕ್ಷರು ಇಲ್ಲಿಂದ pass ಆಗಿ ವಿಧಾನಪರಿಷತ್ತಿಗೆ ಹೋಗಿ ಅಲ್ಲಿಂದ ಮತ್ತೆ ತಿರಸ್ಕೃತವಾಗಿ ಇಲ್ಲಿಬೆ ಬಂದಿದೆ ಆದ್ದರಿಂದ ಇದನ್ನೆಲ್ಲ circulate ಮಾಡುವುದಕ್ಕಾಗುವುದಿಲ್ಲ Why are you creating problems?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಸ್ವಲ್ಪ ಕೇಳಿ Problem ಅಲ್ಲ Additional information you are giving Additional budget you have announced ಸುಮಾರು ೨೦-೩೦ item ಗಳನ್ನು announce ಮಾಡಿದ್ದಾರೆ ಯಾವ್ಯಾವ item ಗೆ ಯಾವ್ಯಾ ಕೆಲಸಕ್ಕೆ ಎಷ್ಟು ಕೋಟಿ ರೂಪಾಯಿಗಳು ಎನ್ನುವುದನ್ನು ವಿವರಣೆ ಮೂಲಕ ಕೊಡಬೇಕು ಅದರ ಬಗ್ಗೆ ನಾವು ಮೊದಲು ಮಾತನಾಡಲಿಕ್ಕೆ ಏಕೆ ಆಗಲಿಲ್ಲವೆಂದರೆ, ಅದು ಬಜೆಟ್ ನಲ್ಲಿ print ಆಗಿರಲಿಲ್ಲ ಅಂದೆ, ಅದರ ಮೇಲೆ ಯಾರೂ ಕೂಡ ಬೆಳಕು ಚೆಲ್ಲಲಿಲ್ಲ ಈಗ ನೀವು suo-moto reply ನಲ್ಲಿ ಅದನ್ನು ಹೇಳಿದ್ದು Reply ನಲ್ಲಿ ಹೇಳಿದ ತಕ್ಷಣವೇ ನಾವು pass ಮಾಡುತ್ತೇವೆಂದರೆ ಏನರ್ಥ? Cabinet ನಲ್ಲಿ approve ಆಗಿಲ್ಲ ನೀವು suo-moto ಇಲ್ಲಿ announce ಮಾಡುವುದು ೫ ಕೋಟಿಗಿಂತಲೂ

ಹೆಚ್ಚಿಗೆ ಯವುದೇ ಅನುದಾನವಾಗಲಿ, ಬೇರೆಯದಾಗಲಿ, ನೀವು ತೆಗೆದುಕೊಳ್ಳಬೇಕಾದರೆ cabınet approval ಬೇಕು Chıef Mınıster ರವರ Sıgnature ಬೇಕು Proceedıngs ಆಗಬೇಕು ಅದನ್ನು ಬಿಟ್ಟು ಇವತ್ತಿನ ದಿವಸ ಅವರು annouce ಮಾಡಿದ ತಕ್ಷಣವೇ ಇದನ್ನು ತೆಗೆದುಕೊಳ್ಳುತ್ತೇವೆ pass ಮಾಡಿರಿ ಎಂದರೆ ಹೇಗಾಗುತ್ತದೆ

(ಗೊಂದಲ)

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮಾನ್ಯ ಅಧ್ಯಕ್ಷರೆ, ಇದರ ಬಗೆ ಮಾತನಾಡಬೇಕಲ್ಲವೇ? ಬೇರೆ ಎಲ್ಲ ವಿಷಯ ಚರ್ಚೆಯಾಗಿದೆ

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಉಪಮುಖ್ಯಮಂತ್ರಿಗಳು ೫೨ ıtem ಗಳಿಗೆ ಘೋಷಣೆಗಳನ್ನು ಮಾಡಿದ್ದಾರೆ ಅದಕ್ಕೆ ೨೦೪ ಕೋಟಿ ರೂ ಗಳಾಯಿತು ನಂತರ, ಆ ಮನೆಗೆ ಹೋಗಿ ಆ ಮನೆಯಲ್ಲಿ ಇಲ್ಲಿ ಹೇಳಿದ್ದಕ್ಕಿಂಥ addıtıonal ıtems ಹೆಚ್ಚಿಗೆ ಅಲ್ಲಿ announcement ಮಾಡಿದ್ದಾರೆ ಅದು ಈ ಮೆನಯಲ್ಲಿ ಗೊತ್ತಾಗಬೇಕಿದೆ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದ ಈಗಿರುವಂಥ ವಿರೋಧ ಪಕ್ಷದ ನಾಯಕರು ಸಹ ಅನೇಕ ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ ಅವರಿಗೆ ಅನುಭವವಿದೆ ಯಾವುದೇ ಅನ್ನು addıtıonal ıtem ಹಣಕಾಸಿನ ಸಚಿವನಾಗಿ ಉತ್ತರ ಕೊಡುವಂಥ ಕಾಲದಲ್ಲಿ announcement ಮಾಡುವುದಕ್ಕೆ ನನಗೆ ಸಂಪೂರ್ಣವಾದ ಅಧಿಕಾರವಿದೆ ಅವುಗಳನ್ನು ನಾವು ಇವತ್ತೇ ಹಂಚಿಕೆ ಮಾಡುತ್ತಿಲ್ಲ

(ಗೊಂದಲ)

ಅಧ್ಯಕ್ಷರು ಸಚಿವರು ಏನು ಹೇಳುತ್ತಾರೆನ್ನುವುದನು ದಯವಿಟ್ಟು ಎಲ್ಲರೂ ಕೇಳಿ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ, ಮುಂದೆ ಬರುವ ದಿವಸಗಳಲ್ಲಿ Supplementary budget ಗೆ ಸಂಬಂಧಿಸಿದ ವಿಷಯಗಳು ಬಂದಂಥ ಕಾಲದಲ್ಲಿ ಆ ಸಮಯದಲ್ಲಿ ಈ ಅಂಶಗಳನ್ನು ತಂದು ಸದನದ ಅನುಮೋದನೆ ತೆಗೆದುಕೊಳ್ಳುತ್ತೇವೆ ಇದು ವಾಡಿಕೆ ಇರುವಂಥಾದ್ದೆ ನೀವು ೧ ಕೋಟಿ ಮಾಡಿದಿರಿ, ೧೦ ಕೋಟಿ ಮಾಡಿದಿರಿ, ೫೦ ಕೋಟಿ ಮಾಡಿದಿರಿ ಎಂದರೆ ಹಣಕಾಸಿನ ಚೌಕಟ್ಟಿನಲ್ಲಿ ಬಡವರಿಗೆ ಕೊಡತಕ್ಕ ಕಾರ್ಯಕ್ರಮ ಮಾಡಿದ್ದೇವೆ ನಿಮಗೆ ಹೊಟ್ಟೆಯುರಿದರೆ ನಾನೇನು ಮಾಡುವುದಕ್ಕಾಗುತ್ತದೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಹಾಗಾದರೆ ದುಡ್ಡು ಇದ್ದರೆ ರೈತರ ಸಾಲ ಮನ್ನಾ ಮಾಡಿ

ಶ್ರೀ ಬಿ ಎಸ್ ಯಡಿಯೂರಪ್ಪ ನೀವು ಹೇಳಿದ ಹಾಗೆ ಕೇಳುವುದಕ್ಕಲ್ಲ ಇರುವುದು ಯಾವುದು ಮನ್ನಾ ಮಾಡಬೇಕು, ಯಾವುದು ಬಿಡಬೇಕೆನ್ನುವುದು ನಮಗೆ ಗೊತ್ತಿದೆ

(ಗೊಂದಲ)

ಖಂಡ ಖಂಡವಾಗಿ ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು

ಖಂಡ ೨ ಮತ್ತು ೩

ಅಧ್ಯಕ್ಷರು "ಖಂಡ ೨ ಮತ್ತು ೩ ಈ ವಿಧೇಯಕದ ಅಂಗವಾಗಿರುತ್ತದೆ

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಹಾಗೂ ೩ ಅನ್ನು ವಿದೇಯಕಕ್ಕೆ ಸೇರಿಸಲಾಯಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು ಪುನರ್ ಪ್ರಸ್ತಾವವೇನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ'

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸಿರುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಧರಣಿ ನಡೆಸಲು ಸದನದ ಬಾವಿಗೆ ಆಗಮಿಸಿದರು)

ಪುನರ್ ಪ್ರಸ್ತಾವದ ಅಂಗೀಕಾರ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ,

೨೦೦೭ ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಪುನರ್ ಅಂಗೀಕರಿಸಬೇಕೆಂದು ಕೋರುತ್ತೇನೆ

ಅಧ್ಯಕ್ಷರು ಪ್ರಸ್ತಾಪ ಏನೆಂದರೆ ,

"೨೦೦೭ ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಪುನರ್ ಅಂಗೀಕರಿಸುವುದು "

ಪ್ರಸ್ತಾಪ ಪುನರ್ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಪುನರ್ ಒಪ್ಪಿಗೆ ನೀಡಲಾಯಿತು

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ (ತಮ್ಮ ಸ್ಥಾನದಿಂದ) ಯಾವ ಮುಖ್ಯಮಂತ್ರಿಯಾಗಿರಲಿ, ಉಪ ಮುಖ್ಯಮಂತ್ರಿ ಹಣಕಾಸು ಮಂತ್ರಿಯಾಗಿರಲಿ ಜಾತಿಯಾಧಾರದ ಮೇಲೆ ಯಾರೂ ಹಣ ಕೊಟ್ಟಿಲ್ಲ

(ಗೊಂದಲ)

ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, ೨೦೦೭

ಪುನರ್ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಮಂತ್ರಿಗಳು) ಮಾನ್ಯ ಅಧ್ಯಕ್ಷರೆ,

೨೦೦೭ ರ ಕರ್ನಾಟಕ ಮೌಲ್ಯವರ್ಧಿತ ತಎರಿಗೆ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ

ಪುನರ್ ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು ಪ್ರಸ್ತಾವ ಏನೆಂದರೆ,

"೨೦೦೭ ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಿವುದು"

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

<u>ಖಂಡ ೨ ರಿಂದ ೩೦</u>

ಅಧ್ಯಕ್ಷರು "ಖಂಡ ೨ ರಿಂದ ೩೦ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತವೆ"

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೩೦ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

<u>ಖಂಡ ೧ ಇತ್ಯಾದಿ</u>

ಅಧ್ಯಕ್ಷರು ಪುನರ್ ಪ್ರಸ್ತಾವ ಏನೆಂದರೆ ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪುನರ್ ಪ್ರಸ್ತಾವದ ಅಂಗೀಕಾರ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ೨೦೦೭ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪುನರ್ ಅಂಗೀಕರಿಸಬೇಕೆಂದು ಕೋರುತ್ತೇನೆ

ಅಧ್ಯಕ್ಷರು ಪ್ರಸ್ತಾವ ಏನೆಂದರೆ ,

"೨೦೦೭ ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪುನರ್ ಅಂಗೀಕರಿಸುವುದು"

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಪುನರ್ ಒಪ್ಪಿಗೆ ನೀಡಲಾಯಿತು

(ಗೊಂದಲ)

ಕರ್ನಾಟಕ ಮೋಟಾರ ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, ೨೦೦೭

ಪುನರ್ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಮಂತ್ರಿಗಳು) ಸಾರಿಗೆ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ೨೦೦೭ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ

ಪುನರ್ ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು ಪ್ರಸ್ತಾವ ಏನೆಂದರೆ,

"೨೦೦೭ ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು"

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು

<u>ಖಂಡ ೨ ರಿಂದ ೭</u>

ಅಧ್ಯಕ್ಷರು "ಖಂಡ ೨ ರಿಂದ ೭ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತವೆ"

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೭ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

<u>ಖಂಡ ೧ ಇತ್ಯಾದಿ</u>

ಅಧ್ಯಕ್ಷರು ಪುನರ್ ಪ್ರಸ್ತಾವ ಏನೆಂದರೆ ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪುನರ್ ಪ್ರಸ್ತಾವದ ಅಂಗೀಕಾರ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ೨೦೦೭ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪುನರ್ ಅಂಗೀಕರಿಸಬೇಕೆಂದು ಕೋರುತ್ತೇನೆ

ಅಧ್ಯಕ್ಷರು ಪ್ರಸ್ತಾವ ಏನೆಂದರೆ ,

"೨೦೦೭ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪುನರ್ ಅಂಗೀಕರಿಸುವುದು "

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಪುನರ್ ಒಪ್ಪಿಗೆ ನೀಡಲಾಯಿತು

(ಗೊಂದಲ)

ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, ೨೦೦೭

ಪುನರ್ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಮಂತ್ರಿಗಳು) ಮಾನ್ಯ ಅಧ್ಯಕ್ಷರೆ,

"೨೦೦೭ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ

ಪುನರ್ ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು ಪ್ರಸ್ತಾವ ಏನೆಂದರೆ,

"೨೦೦೭ ರ ಕರ್ನಾಟಕ ತೆರಿಗೆ ಕಾನೂನುಗಲ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು "

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

<u>ಖಂಡ ೨ ರಿಂದ ೫</u>

ಅಧ್ಯಕ್ಷರು "ಖಂಡ ೨ ರಿಂದ ೫ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತವೆ "

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೫ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

<u>ಖಂಡ ೧ ಇತ್ಯಾದಿ</u>

ಅಧ್ಯಕ್ಷರು ಪುನರ್ ಪ್ರಸ್ತಾವ ಏನೆಂದರೆ ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ "

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪುನರ್ ಪ್ರಸ್ತಾವದ ಅಂಗೀಕಾರ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ೨೦೦೭ ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪುನರ್ ಅಂಗೀಕರಿಸಬೇಕೆಂದು ಕೋರುತ್ತೇನೆ

ಅಧ್ಯಕ್ಷರು ಪ್ರಸ್ತಾವ ಏನೆಂದರೆ ,

" ೨೦೦೭ ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪುನರ್ ಅಂಗೀಕರಿಸುವುದು "

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಪುನರ್ ಒಪ್ಪಿಗೆ ನೀಡಲಾಯಿತು

(ಗೊಂದಲ)

ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕ, ೨೦೦೭

ಪುನರ್ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು) ಕಂದಾಯ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ೨೦೦೭ ರ ಕರ್ನಾಟಕ

ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ

ಪುನರ್ ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು ಪ್ರಸ್ತಾವ ಏನೆಂದರೆ, "೨೦೦೭ ರ ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು"

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು

ಅಧ್ಯಕ್ಷರು "ಖಂಡ ೨ ರಿಂದ ೪ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೪ ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು ಪುನರ್ ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪುನರ್ ಪ್ರಸ್ತಾವ ಅಂಗೀಕಾರ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) (ಕಂದಾಯ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ೨೦೦೭ ರ

ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕವನ್ನು ಪುನರ್ ಅಂಗೀಕರಿಸಬೇಕೆಂದು ಕೋರುತ್ತೇನೆ

ಅಧ್ಯಕ್ಷರು ಪ್ರಸ್ತಾವ ಏನೆಂದರೆ, "೨೦೦೭ ರ ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಪುನರ್ ಅಂಗೀಕರಿಸುವುದು"

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಪುನರ್ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು ಈಗ ಸಭೆಯನ್ನು ಸೋಮವಾರ ಬೆಳಿಗ್ಗೆ ೧೧-೦೦ ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವು ರಾತ್ರಿ ೯ ಗಂಟೆ ೩೦ ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ)

ದಿನಾಂಕ ೨ ನೇ ಏಪ್ರಿಲ್ ೨೦೦೭ ರಂದು ಬೆಳಿಗ್ಗೆ ೧೧-೦೦ ಗಂಟೆಗೆ ಸೇರಲು ನಿಶ್ಚಯಿಸಿತು)

ಕರ್ನಾಟಕ ವಿಧಾನಸಭೆ

ಹನ್ನೆರಡನೇ ವಿಧಾನಸಭೆ

ಐದನೇ ಅಧಿವೇಶನ

ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, ೨೦೦೭

(೨೦೦೭ರ ವಿಧಾನಸಭೆಯ ವಿಧೇಯಕ ಸಂಖ್ಯೆ ೨೧)

ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, ೨೦೦೩ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, ೨೦೦೩ನ್ನು (೨೦೦೪ ರ

ಕರ್ನಾಟಕ ಅಧಿನಿಯಮ, ೩೨) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ,

ಇದು ಭಾರತ ಗಣರಾಜ್ಯದ ಐವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ -

೧ ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ - (೧) ಈ ಅಧಿನಿಯಮವನ್ನು ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, ೨೦೦೭ ಎಂದು ಕರೆಯತಕ್ಕದ್ದು

(೨) ಇದು ೨೦೦೭ ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು

೨ ೪ನೇ ಪ್ರಕರಣದ ತಿದ್ದುಪಡಿ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, ೨೦೦೩ ರ (೨೦೦೪ರ ಕರ್ನಾಟಕ ಅಧಿನಿಯಮ ೩೨) ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) ೪ ನೇ ಪ್ರಕರಣದ (೪) ನೇ ಉಪ ಪ್ರಕರಣದಲ್ಲಿ "ಗರಿಷ್ಠ ಚಿಲ್ಲರೆ ಬೆಲೆಯ ಮೇಲೆ" ಎಂಬ ಪದಗಳ ತರುವಾಯ "ಅಥವಾ ಸಂದಾಯವಾಗತಕ್ಕ ತೆರಿಗೆಗೆ ಸಮನಾದ ಮೊಬಲಗನ್ನು ಕಡಿತಗೊಳಸಿದಂಥ ಗರಿಷ್ಠ ಚಿಲ್ಲರೆ ಬೆಲೆಯ ಮೇಲೆ" ಎಂಬ ಪದಗಳನ್ನು ಸೇರಿಸತಕ್ಕದ್ದು

೩ ೧೧ ನೇ ಪ್ರಕರಣದ ತಿದ್ದುಪಡಿ ಮೂಲ ಅಧಿನಿಯಮದ ೧೧ನೇ ಪ್ರಕರಣದ (ಎ) ಉಪ ಪ್ರಕರಣದಲ್ಲಿ (೬) ನೇ ಖಂಡದಲ್ಲಿ "ಲೈಟ್ ಡೀಸಲ್ ಆಯಿಲ್," ಎಂಬ ಪದಗಳು ಮತ್ತು ಅಲ್ಪವಿರಾಮ ಚಿಹ್ನೆಯನ್ನು ಬಿಟ್ಟುಬಿಡತಕ್ಕದ್ದು ಮತ್ತು ಯಾವಾಗಲು ಬಿಡಲಾಗಿದೆಯೆಂದು ಭಾವಿಸತಕ್ಕದ್ದು

(೧) (೧) ನೇ ಉಪಪ್ರಕರಣದಲ್ಲಿ (ಎ) ಖಂಡದಲ್ಲಿ "ನಾಲ್ಕು ಅನುಕ್ರಮ ತ್ರೈವಾಸಿಕಗಳ ಅವಧಿಯಲ್ಲಿ" ಎಂಬ ವರ್ಷದಲ್ಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು

(೨) (೨) ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ –

(೨) (೧) ನೇ ಉಪ ಪ್ರಕರಣದಲ್ಲಿ (ಎ) ಖಂಡದಲ್ಲಿ "ನಾಲ್ಕು ಅನುಕ್ರಮ ತ್ರೈಮಾಸಿಕಗಳ ಅವಧಿಯಲ್ಲಿ" ಎಂಬ ಪದಗಳಿಗೆ " ಒಂದು ವರ್ಷದಲ್ಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು

(೨) (೨) ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ –

(೨) (೧) ನೇ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, (೧) ನೇ ಉಪ ಪ್ರಕರಣದ ಒಂದಕ್ಕಿಂತ ಹೆಚ್ಚು ಖಂಡಗಳ ಅಡಿಯಲ್ಲಿ ಬರುವ ತರಹದ ವ್ಯವಹಾಋದ ಸ್ವರೂಪವನ್ನು ಹೊಂದಿರುವ ವ್ಯಾಪಾರಿಯು, ಈ ಮುಂದಿನ ಷರತ್ತುಗಳಿಗೆ ಒಳಪಟ್ಟು ಅಂಥ ಯಾವುದೇ ತರಹದ ಅಥವಾ ಎಲ್ಲ ತರಹದ ವ್ಯವಹಾರ ಸ್ವರೂಪಗಳಿಗೆ ಸಂಬಂಧಪಟ್ಟಂತೆ ತನ್ನ ವಹಿವಾಟಿನ ಮೇಲೆ ಸಂದಾಯ ಮಾಡಬೇಕಾದ ತೆರಿಗೆಯ ಸಂಬಂಧದಲ್ಲಿ ಸದರಿ ಉಪಪ್ರಕರಣದ ಅಡಿಯಲ್ಲಿ ರಾಜಿಗಾಗಿ ಆಯ್ಕೆ ಮಾಡಿಕೊಳ್ಳಲು ಅರ್ಹನಾಗಿರತಕ್ಕದ್ದು, ಎಂದರೆ –

(ಎ) ಆ ವ್ಯಾಪಾರಿಯು ಪ್ರತಿಯೊಂದು ತರಹದ ತನ್ನ ವ್ಯವಹಾರಕ್ಕೆ ಪ್ರತ್ಯೇಕ ಲೆಕ್ಕಪತ್ರಗಳನ್ನು ನಿರ್ವಹಿಸಿಕೊಂಡು ಬಂದಿರಬೇಕು

(ಬಿ) (೧) ನೇ ಉಪ ಪ್ರಕರಣದ (ಎ) ಖಂಡದ ಅಡಿಯಲ್ಲಿ ಬರುವ ಅಂಥ ವ್ಯಾಪಾರಿಯ ಎಲ್ಲ ತರಹದ ವ್ಯವಹಾರಗಳ ಸಂಬಂಧದಲ್ಲಿ

ಒಂದು ವರ್ಷದಲ್ಲಿಯ ಒಟ್ಟು ವಹಿವಾಟು ಸದರಿ ಖಂಡದ ಅಡಿಯಲ್ಲಿ ಅಧಿಸೂಚಿಸಬಹುದಾದ ಮೊಬಲಗನ್ನು ಮೀರಿರಬಾರದು ,

(ಸಿ) ಅಂಥ ವ್ಯವಹಾರದ ಪ್ರತಿಯೊಂದು ತರಹದ ಸಂಬಂಧದಲ್ಲಿ ತನ್ನ ಒಟ್ಟು ವಹಿವಾಟಿನ ಅಥವಾ ಒಟ್ಟು ಪ್ರತಿಫಲದ ಮೇಲೆ ಅಂಥ ವ್ಯಾಪಾರಿಯು ರಾಜಿಯ ರೂಪದಲ್ಲಿ ಸಂದಾಯ ಮಾಡಬೇಕಾದ ಮೊಬಲಗು (೧) ನೇ ಉಪ ಪ್ರಕರಣದ ಅಡಿಯಲ್ಲಿ ಆ ತರಹದ ವ್ಯವಹಾರಕ್ಕಾಗಿ ಅಧಿಸುಚಿತಬಹುದಾದಂತೆ ಇರತಕ್ಕದ್ದು ,

(ಡಿ) (೧) ನೇ ಉಪಪ್ರಕರಣದ ಅಡಿಯಲ್ಲಿ ಒಂದು ತರಹದ ವ್ಯವಹಾರಕ್ಕಾಗಿ ರಾಜಿ ವಿಧಾನದಲ್ಲಿ ಸಂದಾಯಮಾಡತಕ್ಕ ಮೊಬಲಗನ್ನು ಲೆಕ್ಕಹಾಕುವುದಕ್ಕಾಗಿ ಅಂಥ ಪ್ರತಿಯೊಂದು ತರಹದ ಸಂಬಂಧದಲ್ಲಿ ಒಟ್ಟು ವಹಿವಾಟಿನಿಂದ ಕಳೆಯತಕ್ಕದ್ದು,

(ಇ) (೧) ನೇ ಉಪಪ್ರಕರಣದ ಅಡಿಯಲ್ಲಿ ರಾಜಿಗಾಗಿ ತನ್ನ ಆಯ್ಕೆಯನ್ನು ಚಲಾಯಿಸದ ಅಥವಾ ರಾಜಿಗೆ ಅರ್ಹವಾಗದಂಥ ತರಹದ ವ್ಯವಹಾರದ ಸಂಬಂಧದಲ್ಲಿ, ಲ ಖಂಡದಲ್ಲಿ ನಿರ್ದಿಷ್ಟಪಡಿಸದಂತೆ ಕಳೆದ ತರುವಾಯ ಬಾಕಿ ಉಳಿದ ಒಟ್ಟು ವಹಿವಾಟಿನಿಂದ ನಿರ್ಧರಿಸಲಾದ ತೆರಿಗೆದಾಯಕ ವಹಿವಾಟಿನ ಮೇಲೆ ಆತನು ೪ ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ತೆರಿಗೆ ಸಂದಾಯಮಾಡಲು ಗುರಿಯಾಗತಕ್ಕದ್ದು "

(೩) (೫) ನೇ ಉಪ ಪ್ರಕರಣದಲ್ಲಿ , –

(ಎ)(ಬಿ) ಖಂಡದಲ್ಲಿ "ಸಂದಾಯಮಾಡತಕ್ಕ ಮೊಬಲಗಿನ ಮೇಲೆ" ಎಂಬ ಪದಗಳಿಗೆ "ಸಂದಾಯ ಮಾಡಬೇಕಾದ ಅಥವಾ ಮಾಡಿದ ಮೊಬಲಗಿನ ಮೇಲೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು

(ಬಿ)(ಸಿ) ಖಂಡದಲ್ಲಿ, "ಒಬ್ಬ ವ್ಯಾಪಾರಿಯ ಸಂದರ್ಭದಲ್ಲಿ" ಎಂಬ ಪದಗಳ ತರುವಾಯ "ಆತನು" ಎಂಬ ಪದವನ್ನು ಸೇರಿಸತಕ್ಕದ್ದು ಮತ್ತು ಯಾವಾಗಲೂ ಹಾಗೆ ಸೇರಿಸಿರುವುದಾಗಿ ಭಾವಿಸತಕ್ಕದ್ದು

(ಸಿ)(ಡಿ) ಖಂಡದಲ್ಲಿ "ಮರುಗಡೆಮಾಡತಕ್ಕದ್ದು" ಎಂಬ ಪದಗಳು ಮತ್ತು ವಿರಾಮಚಿಹ್ನೆಗೆ "ಮುರುಗಡೆ ಮಾಡತಕ್ಕದ್ದು," ಎಂಬ ಪದಗಳು ಮತ್ತು ಅಲ್ಪವಿರಾಮ ಚಿಹ್ನೆಯನ್ನು ಪ್ರತಿಯೋಜಿಸತಕ್ಕದ್ದು

(ಡಿ)ಹಾಗೆ ತಿದ್ದುಪಡಿ ಮಾಡಿದ ಲ ಖಂಡದ ತರುವಾಯ ಈ ಮುಂದಿನ ಖಂಡವನ್ನು ೨೦೦೬ರ ಏಪ್ರಿಲ್ ಒಂದನೇ ದಿನಾಂಕದಿಂದ ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು, ಎಂದರೆ

(ಇ)ಕಾಮಗಾರಿಗಳ ಕರಾರನ್ನು ನಿರ್ವಹಿಸುತತಿರುವ ಮತ್ತು (೧) ನೇ ಉಪ ಪ್ರಕರಣದ ಅಡಿಯಲ್ಲಿ ತೆರಿಗೆ ರಾಜಿಗೆ ಆಯ್ಕೆ ಮಾಡಿಕೊಂಡ ಒಬ್ಬ ವ್ಯಾಪಾರಿಯು ಆತನು ನೆರವೇರಿಸಿದ ಕಾಮಗಾರಿ ಕರಾರಿನ ಒಟ್ಟು ಪ್ರತಿಫಲದ ಮೇಲೆ ರಾಜಿಯ ರೂಪದಲ್ಲಿ ಸಂದಾಯಮಾಡುವ ತೆರಿಗೆಗೆ ಹೆಚ್ಚುವರಿಯಾಗಿ, ೩ನೇ ಪ್ರಕರಣದ (೨) ನೇ ಉಪ ಪ್ರಕರಣದ ಅಡಿಯಲ್ಲಿ, ಸಂದಾಯಮಾಡತಕ್ಕ ತೆರಿಗೆ ಯಾವುದಾದರೂ ಇದ್ದರೆ ಅದನ್ನು ಸಂದಾಯ ಮಾಡುವುದಕ್ಕೆ ಬದ್ಧನಾಗಿರತಕ್ಕದ್ದು"

೫ ೧೭ನೇ ಪ್ರಕರಣದ ತಿದ್ದುಪಡಿ – ಮೂಲ ಅಧಿನಿಯಮದ ೧೭ನೇ ಪ್ರಕರಣದಲ್ಲಿ, –

(೧) (೨) ನೇ ಖಂಡದಲ್ಲಿ, "ಮೇಲಿನ (೧) ನೇ ಖಂಡದಲ್ಲಿ" ಎಂಬ ಪದಗಳಿಗೆ ಮೊದಲು "ತೆರಿಗೆಗೆ ಗುರಿಯಾಗತಕ್ಕ ಸರಕುಗಳ

ಮಾರಾಟಗಳಿಗೆ ಅಥವಾ" ಎಂಬ ಪದಗಳನ್ನು ಸೇರಿಸತಕ್ಕುದ ಮತ್ತು ಯಾವಾಗಲು ಸೇರಿಸಲಾಗಿದೆಯೆಂಧು ಭಾವಿಸತಕ್ಕದ್ದು

(೨) (೩) ನೇ ಖಂಡದಲ್ಲಿ, "ಹೆಚ್ಚಿಗೆಯಾಗಿ ಬಳಸಿದರೆ", ಎಂಬ ಪದಗಳು ಮತ್ತು ಅಲ್ಪವಿರಾಮದ ತರುವಾಯ "ಅಥವಾ" ಎಂಬ ಪದವನ್ನು ಸೇರಿಸತಕ್ಕದ್ದು ಮತ್ತು ಯಾವಾಗಲೂ ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು

(೩) (೩) ನೇ ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದದು ಮತ್ತು ಯಾವಾಗಲೂ ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು, ಎಂದರೆ –

(೪) ಮೇಲಿನ ಯಾವುದೇ ಖಂಡಗಳು ಬಂದರೆ ಮತ್ತು ಯಾವುದೇ ಸರಕುಗಳ ಬಂಧಿತ ವಿದ್ಯುತ್ ಉತ್ಪಾದನೆಯಲ್ಲಿ ಇಂಧನವಾಗಿ ಉಪಯೋಗಿಸುವುದಕ್ಕಾಗಿ ಯಾವುದೇ ಪೆಟ್ರೋಲಿಯಂ ಉತ್ಪನ್ನವನ್ನು ಖರೀದಿಸಿದರೆ,"

೬ ಹೊಸ ೧೮ಎ ಪ್ರಕರಣದ ಸೇರ್ಪಡೆ ಮೂಲ ಅಧಿನಿಯಮದ ೧೮ನೇ ಪ್ರಕರಣದ ತರುವಾಯ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದೆ –

"೧೮ ಎ, ಕೆಲವು ಸರಕುಗಳ ಸಂಬಂಧದಲ್ಲಿ ಮೂಲದಲ್ಲಿಯೇ ತೆರಿಗೆಯನ್ನು ಮುರಿದುಕೊಳ್ಳುವುದು, – (೧) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಉತ್ಪಾದನೆ ಅಥವಾ ಸಂಸ್ಕರಣೆಯಲ್ಲಿ ಬಳಸುವುದಕ್ಕಾಗಿ ಅಥವಾ ಆಯುಕ್ತರು ಅಧಿಸೂಚಿಸಬಹುದಾದಂತೆ ಯಾವುದೇ ಇತರ ಉದ್ದೇಶಕ್ಕಾಗಿ ಬಳಸುವುದಕ್ಕಾಗಿ ಎಣ್ಣೆಬೀಜಗಳು ಅಥವಾ ಕಚ್ಚಾ ಎಣ್ಣೆ ಅಥವಾ ಹಿಂಡಿ ಅಥವಾ ಕಬ್ಬಿಣದ ಮತ್ತು ಉಕ್ಕಿನ ಸ್ಕ್ರಾಪ್ ಗಳು ಅಥವಾ ಆಯುಕ್ತರು ಅಧಿಸೂಚಿಸಬಹುದಾದ ಯಾವುದೇ ಇತರ ಸರಕುಗಳನ್ನು ಖರೀದಿಸುವ ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು, ಅಂಧ

ಸರಕುಗಳನ್ನು ತನಖೆ ಮಾರಾಟ ಮಾಡಿದ ನೋಂದಾಯಿತ ವ್ಯಾಪಾರಿಗೆ ತಾನು ಸಂದಾಯಮಾಡತಕ್ಕ ಮೊಬಲಗಿನಿಂದ, ೪ ನೇ ಪ್ರಕರಣದ ಅಡಿಯಲ್ಲಿ ಆ ಸರಕುಗಳ ಮಾರಾಟದ ಮೇಲೆ ಸಂದಾಯಮಾಡತಕ್ಕ ತೆರಿಗೆಗೆ ಸಮನಾದ ಮೊಬಲಗನ್ನು ಮುರಿದುಕೊಳ್ಳತಕ್ಕದದು

(೨) ಯಾವುದೇ ಸರಕುಗಳ ಸಂಬಂಧದಲ್ಲಿ ಅವರು ಸಂದಾಯಮಾಡತಕ್ಕ ಮೊಬಲಗು, ಅಂತರರಾಜ್ಯ ವ್ಯಾಪಾರ ಅಥವಾ ವಾಣಿಜ್ಯಕ್ಕೆ ಸಂಬಂಧಿಸಿದ್ದರೆ ಅಥವಾ ಭಾರತದ ಸರಹದ್ದುಗಳಿಂದ ಹೊರಕ್ಕೆ ರಫ್ತಿಗೆ ಅಥವಾ ಭಾರತದ ಸರಹದ್ದುಗಳೊಳಕೆಕ ಆಮದಿಗೆ ಅಥವಾ ರಾಜ್ಯದ ಹೊರಎ ಮಾರಾಟಕ್ಕೆ ಸಂಬಂಧಿಸಿದ್ದರೆ (೧) ನೇ ಉಪ ಪ್ರಕರಣದ ಅಡಿಯಲ್ಲಿ ಯಾವುದೇ ಮುರುಗಡೆಯನ್ನು ಮಾಡತಕ್ಕದ್ದಲ್ಲ

(೩) ವ್ಯಾಪಾರಿಯು, (೧) ನೇ ಉಪಪ್ರಕರಣದ ಅಡಿಯಲ್ಲಿ ಮುರುಗಡೆಯನ್ನು, ಮಾರಾಟ ಮಾಡಿದ ವ್ಯಾಪಾರಿಯು ನೀಡಿದ ತೆರಿಗೆ ದರಪಟ್ಟಿಯ ಆಧಾರದ ಮೇಲೆ ಮಾಡತಕ್ಕದ್ದು

(೪) (೧) ನೇ ಉಪ ಪ್ರಕರಣದ ಅಡಿಯಲ್ಲಿ ತೆರಿಗೆ ಮುರಿದುಕೊಳ್ಳುತ್ತಿರುವ ವ್ಯಾಪಾರಿಯು ತಾನು ಹಿಂದಿನ ತಿಂಗಳಲ್ಲಿ ಮುರುಗಡೆ ಮಾಡಿದ ತೆರಿಗೆಯ ವಿವರಗಳನ್ನು ಒಳಗೊಂಡ ನಿಯಮಿಸಲಾದ ನಮೂನೆಯಲ್ಲಿರುವ ಒಂದು ವಿವರಪಟ್ಟಿಯನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ ಪ್ರತಿ ತಿಂಗಳೂ ಕಳುಹಿಸತಕ್ಕದ್ದು ಮತ್ತು ಹಾಗೆ ತಾನು ಮುರಿದುಕೊಂಡ ತೆರಿಗೆಯ ಮೊಬಲಗನ್ನು ಯಾವ ತಿಂಗಳಲ್ಲಿ ಅಂಥ ಮುರುಗಡೆಯನ್ನು ಮಾಡಲಾಗಿದೆಯೋ ಆ ಹಿಂದಿನ ತಿಂಳು ಮುಕ್ತಾಯವಾದ ತರುವಾಯ ಇಪ್ಪತ್ತು ದಿನಗಳ ಒಳಗೆ ಸಂದಾಯಮಾಡತಕ್ಕದ್ದು ಮತ್ತು ಹಾಗೆ ಸಂದಾಯಮಾಡತಕ್ಕ ಮೊಬಲಗನ್ನು ೪೨ನೇ ಪ್ರಕರಣದ ಉದ್ದೇಶಗಳಿಗಾಗಿ ಈ ಅಧಿನಿಯಮದ ಅಡಿಯಲ್ಲಿ ಬಾಕಿ ಇರುವ ಮೊಬಲಗು ಎಂದು ಭಾವಿಸತಕ್ಕದ್ದು

(೫) ಈ ಉಪಪ್ರಕರಣದ ಉಪಬಂದಗಳನ್ನು ಪಾಲಿಸಲು ತಪ್ಪಿದರೆ ನಿಮಯಿಸಲಾದ ಪ್ರಾಧಿಕಾರಿಯು ತಾನು ಸೂಕ್ತವೆಂದು ಭಾವಿಸಿದಂಥ

ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ಸಂಬಂಧಪಟ್ಟ ವ್ಯಾಪಾರಿಗೆ ಆಹವಾಲನ್ನು ಹೇಳಿಕೊಳ್ಳಲು ಅವಕಾಶ್ನವನು ನೀಡಿದ ತರುವಾಯ, ತನ್ನ ಆತ್ಯುತ್ತಮ ವಿವೇಚನೆಗನುಸಾರ ಅಂಥ ವ್ಯಾಪಾರಿಯು ಈ ಉಪಪ್ರಕರಣದ ಅಡಿಯಲ್ಲಿ ಸಂದಾಯ ಮಾಡತಕ್ಕ ಮೊಬಲಗನ್ನು ನಿರ್ಧರಿಸಬಹುದು ಮತ್ತು ಹಾಗೆ ನಿರ್ಧರಿಸುವ ಮೊಬಲಗನ್ನು ೪೨ನೇ ಪ್ರಕರಣದ ಉದ್ದೇಶಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ಬಾಕಿಯಿರುವ ಮೊಬಲಗೆಂದು ಭಾವಿಸತಕ್ಕದ್ದು

(೬) (೪) ನೇ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯನ್ನು ಮೀರಿ, ಮುರಿದುಕೊಮಡ ತೆರಿಗೆಯನ್ನು ಸಂದಾಯ ಮಾಡುವಲ್ಲಿ ತಪ್ಪಿದರೆ (೧) ನೇ ಉಪಪ್ರಕರಣದ ಅಡಿಯಲ್ಲಿ ಮುರುಗೆ ಮಾಡುವ ವ್ಯಾಪಾರಿಯು, ಅಂಥ ತಪ್ಪು ಮುಂದುವರಿದ ಅವಧಿಯಲ್ಲಿ ೩೭ನೇ ಪ್ರಕರಣದ (೧) ನೇ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಲದ ಬಡ್ಡಿಗೆ ಸಮನಾದ ಮೊತ್ತವನ್ನು ಬಡ್ಡಿಯ ರೂಪದಲ್ಲಿ ಸಂದಾಯ ಮಾಡತಕ್ಕದ್ದು

(೭) (೧) ನೇ ಉಪ-ಪ್ರಕರಣದಡಿಯಲ್ಲಿ ತೆರಿಗೆ ಮುರಿದುಕೊಳ್ಳುತ್ತಿರುವ ವ್ಯಾಪಾರಿಯು ಯಾರಿಂದ ಹಾಗೆ ತೆರಿಗೆ ಮುರಿದುಕೊಳ್ಳಲಾಗುತ್ತಿದೆಯೋ ಆ ವ್ಯಾಪಾರಿಗೆ ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡ, ನಿಯಮಿಸಲಾದ ಪ್ರಾಧಿಕಾರಿಯಿಂದ ಪಡೆದುಕೊಳ್ಳಲಾದ ಒಂದು ಪ್ರಮಾಣ ಪತ್ರವನ್ನು ಒದಗಿಸತಕ್ಕದ್ದು

(೮) (೪) ನೇ ಉಪಪ್ರಕರಣಕ್ಕನುಸಾರವಾಗಿ ತೆರಿಗೆ ಮುರಿದುಕೊಂಡು ಮಾಡಿದ ಸಂದಾಯವು, ಈ ಅಧಿನಿಯಮದ ಅಡಿಯಲ್ಲಿ ಬಾಕಿ ಇರುವ ತೆರಿಗೆಯನ್ನು ಮಾರಾಟ ಮಾಡುವ ವ್ಯಾಪಾರಿಯಿಂದ ಇತರ ಯಾವುದೇ ವಿಧಾನದಲ್ಲಿ ವಸೂಲು ಮಾಡಿಕೊಳ್ಳುವುದಕ್ಕೆ ಪ್ರತಿಕೂಲವಾಗಿರತಕ್ಕದ್ದಲ್ಲ

(೯) (೧) ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸರಕುಗಳ ಅವನ ವ್ಯಾಪಾರದ ಸಂಬಂಧದಲ್ಲಿ ತೆರಿಗೆಯನ್ನು (೪) ನೇ ಉಪ-ಪ್ರಕರಣದ ಅಡಿಯಲ್ಲಿ ಉಮಾ ಮಾಡಿದ್ದರೆ ಅಂಥ ಮಾರಾಟ ಮಾಡುವ

ವ್ಯಾಪಾರಿಯು ಅಂಥ ಮಾರಾಟಗಳ ಸಂಬಂಧದಲ್ಲಿ ಯಾವುದೇ ಅವಧಿಗಾಗಿ ಸಂದಾಯ ಮಾಡತಕ್ಕ ತೆರಿಗೆಯಿಂದ ಸದರಿ ಉಪಪ್ರಕರಣದಡಿಯಲ್ಲಿ ಈಗಾಗಲೇ ಜಮಾಮಾಡಿದ ತೆರಿಗೆಯ ಮೊಬಲಗಷ್ಟನ್ನು ಕಳೆಯತಕ್ಕದ್ದು

(೧೦) ಅಂಥ ಮಾರಾಟದ ಮೇಲೆ ಈಗಾಗಲೇ ತೆರಿಗೆಯನ್ನು ಜಮಾ ಮಾಡಲಾಗಿದೆ ಎಂದು ಮತ್ತು ಹಾಗೆ ಜಮಾಮಾಡಿದ ತೆರಿಗೆಯ ಸರಿಯಾದ ಮೊಬಲಗು ದಷ್ಟು ಎಂಬುದನ್ನು ರುಜುವಾತುಪಡಿಸುವ ಹೊಣೆಯು ಹಾಗೆ ತೆರಿಗೆ ಕಳೆಯಬೇಕೆಂದು ಕ್ಲೇಮುಮಾಡುವ ವ್ಯಾಪಾರಿಯ ಮೇಲಿರತಕ್ಕದ್ದು "

೭ ೧೯ನೇ ಪ್ರಕರಣದ ತಿದ್ದುಪಡಿ ಮೂಲ ಅಧಿನಿಯಮದ ೧೯ನೇ ಪ್ರಕರಣದ (೨) ನೇ ಉಪ ಪ್ರಕರಣದಲ್ಲಿ "ತೆರಿಗೆಯನ್ನು ಲೆಕ್ಕಹಾಕತ್ತಕ್ಕದ್ದು" ಎಂಬ ಪದಗಳಿಗೆ "ಮರುಸಂದಾಯ ಮಾಡಬೇಕಾದ ಹೂಡುವಳಿ ತೆರಿಗೆಯನ್ನು ಲೆಕ್ಕಹಾಕತಕ್ಕದ್ದು" ಎಂಬ ಪದಗಳನ್ನು ಪರತಿಯೋಜಿಸತಕ್ಕದ್ದು ಮತ್ತು ಯಾವಾಗಲೂ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು

೮ ೨೦ನೇ ಪ್ರಕರಣದ ತಿದ್ದುಪಡಿ – ಮೂಲ ಅಧಿನಿಯಮದ ೨೦ ನೇ ಪ್ರಕರಣದಲ್ಲಿ,

(೧) ಶೀರ್ಷಿಕೆಯಲ್ಲಿ " ಅಂತರ ರಾಜ್ಯ ಮಾರಾಟಗಳ " ಎಂಬ ಪದಗಳ ತರುವಾಯ " ಮತ್ತು ವಿಶೇಷ ಆರ್ಥಿಕ ವಲಯ ಘಟಕಗಳ ಹಾಗೂ ಅಭಿವೃದ್ಧಿದಾರರ" ಎಂಬ ಪದಗಳನ್ನು ಸೇರಿಸತಕ್ಕದ್ದು,

(೨) (೨) ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಏಂದರೆ –

(೨) ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಿದ ಪ್ರಾಧಿಕಾರಿಗಳ ನೀಡಿದೆ, ಪ್ರಾಧಿಕಾರದ ಮೂಲಕ ಸ್ಥಾಪಿಸಲಾದ ಯಾವುದೇ ವಿಶೇಷ ಆರ್ಥಿಕ ವಲಯದ ಅಥವಾ ಯಾವುದೇ ವಿಶೇಷ ಆರ್ಥಿಕ

ವಲಯದಲ್ಲಿ ಇರುವಂಥ ಒಂದು ಘಟಕದ ಅಭಿವೃದ್ಧಿದಾರರಾದ ಒಬ್ಬ ನೋಂದಾಯಿತ ವ್ಯಾಪಾರಿಯು ಹೂಡುವಳಿಗಳ ಖರೀದಿಯ ಮೇಲೆ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಿದ ತೆರಿಗೆಯನ್ನು, ನಿಯಮಿಸಬಹುದಾದಂಥ ಷರತ್ತುಗಳು ಮತ್ತು ವಿಧಾನಗಳಿಗೊಳಪಟ್ಟು ಮರುಪಾವತಿ ಮಾಡತಕ್ಕದ್ದು ಅಥವಾ ಅಂಥ ವ್ಯಾಪಾರಿಯು ಸಂದಾಯ ಮಾಡತಕ್ಕ ಹುಟ್ಟುವಳಿ ತೆರಿಗೆಯುಇಂದ ಕಳೆಯತಕ್ಕದ್ದು "

೯ ೨೧ನೇ ಪ್ರಕರಣದ ತಿದ್ದುಪಡಿ – ಮೂಲ ಅಧಿನಿಯಮದ ೨೧ನೇ ಪ್ರಕರಣದಲ್ಲಿ " ಅಥವಾ ಎಂಬೆಸಿಗಳ" ಎಂಬ ಪದಗಳ ತರುವಾಯ" ಆದರೆ ಅಧಿಸೂಚಿಸಬಹುದಾದಂತೆ ಕಾನ್ಸಲೇಟ್ ಗಳ ಅಥವಾ ಅಂಥ ದೇಶಗಳ ಎಂಬೆಸಿಗಳನ್ನು ಹೊರತುಪಡಿಸಿ," ಎಂಬ ಪದಗಳನ್ನು, ಅಲ್ಪವಿರಾಮ ಚಿಹ್ನೆಗಳನ್ನು ಸೇರಿಸತಕ್ಕದ್ದು

೧೦ ೨೫ನೇ ಪ್ರಕರಣದ ತಿದ್ದುಪಡಿ – ಮೂಲ ಅಧಿನಿಯಮದ ೨೫ನೇ ಪ್ರಕರಣದ (೨) ನೇ ಉಪ ಪ್ರಕರಣದಲ್ಲಿ "ಅಂಥ ಅರ್ಜಿಯನ್ನು ಮಾಡಿಕೊಂಡ ತಿಂಗಳ ತರುವಾಯದ ತಿಂಗಳ ಮೊದಲನೇ ದಿನದಿಂದ ಅಥವಾ ಪರಸ್ಪರ ಒಪ್ಪಿಕೊಳ್ಳಬಹುದಾದ ಅಂಥ ಮೊದಲ ದಿನದಿಂದ" ಎಂಬ ಪದಗಳಿಗೆ "ಅಂಥ ಅರ್ಜಿಯ ದಿನಾಂಕದಿಂದ ಅಥವಾ ಅಂಥ ವ್ಯಾಪಾರಿಯ ವ್ಯವಹಾರದ ಪ್ರಾರಂಭದ ದಿನಾಂಕದಿಂದ, ಈ ಎರಡರಲ್ಲಿ ಯಾವುದು ನಂತರವೋ ಆ ದಿನಾಂಕದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು

೧೧ ೨೭ನೇ ಪ್ರಕರಣದ ತಿದ್ದುಪಡಿ · – ಮೂಲ ಅಧಿನಿಯಮದ ೨೭ನೇ ಪ್ರಕರಣದ (೩) ನೇ ಉಪ ಪ್ರಕರಣದಲ್ಲಿ "ಆತನು ಹೊಂದಿದ ತೆರಿಗೆಗೆ ಗುರಿಯಾಗತಕ್ಕ ಯಾವುದೇ ಸರಕುಗಳಿಗೆ ಪ್ರಚಲಿತ ಮಾರುಕಟ್ಟೆ ಬೆಲೆಯ ಮೇಲೆ ತೆರಿಗೆಯನ್ನು ಸಂದಾಯ ಮಾಡಲು" ಎಂಬ ಪದಗಳಿಗೆ " ಆತನು ಹೊಂದಿರುವ ತೆರಿಗೆಗೆ ಗುರಿಯಾಗತಕ್ಕ ಯಾವುದೇ ಸರಕುಗಳಿಗೆ ಪ್ರಚಲಿತ ಮಾರುಕಟ್ಟೆ ಬೆಲೆಯ ಮೇಲೆ ಲೆಕ್ಕಹಾಕಲಾದಂಥ ಹೂಡುವಳಿ

ತೆರಿಗೆಯನ್ನು ಮರುಸಂದಾಯ ಮಾಡಲು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು

೧೨ ೨೯ನೇ ಪ್ರಕರಣದ ತಿದ್ದುಪಡಿ - ಮೂಲ ಅಧಿನಿಯಮದ ೨೯ನೇ ಪ್ರಕರಣದಲ್ಲಿ -

(೧) (೧) ನೇ ಉಪ ಪ್ರಕರಣದಲ್ಲಿ " ತೆರಿಗೆಗೆ ಗುರಿಯಾಗತಕ್ಕ ಸ್ಥರಕುಗಳ ಮಾರಾಟ ಮಾಡಡಿದ್ದರೆ ಅಥವಾ ಯಾವುದೇ ತೆರಿಗೆಗೆ ಗುರಿಯಾಗತಕ್ಕ ಸರಕುಗಳೊಂದಿಗೆ ವಿನಾಯಿತಿ ಪಡೆದ ಸರಕುಗಳನ್ನು ಮಾರಾಟ ಮಾಡಿದ್ದರೆ" ಎಂಬ ಪದಗಳಿಗೆ "ತೆರಿಗೆಗೆ ಗುರಿಯಾಗತಕ್ಕ ಸರಕುಗಳ ಮಾರಾಟ ಮಾಡಿದ್ದರೆ ಅಥವಾ ನಿಯಮಿಸಲಾದ ಮೌಲ್ಯಕ್ಕಿಂತ ಹೆಚ್ಚುವರಿಯಾಗಿ ಯಾವುದೇ ತೆರಿಗೆಗೆ ಗುರಿಯಾಗತಕ್ಕ ಸರಕುಗಳೊಂದಿಗೆ ವಿನಾಯಿತಿ ಪಡೆದ ಸರಕುಗಳನ್ನು ಮಾರಾಟ ಮಾಡಿದ್ದರೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು

(೨) (೩) ನೇ ಉಪಪ್ರಕರಣದ ತರುವಾಯ ಈ ಮುಂದಿನ ಉಪಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ -

(೪) (೧) ನೇ ಅಥವಾ (೩) ನೇ ಉಪ ಪ್ರಕರಣಗಳಲ್ಲಿ ಅಥವಾ ೭ನೇ ಪ್ರಕರಣದ (೧) ನೇ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಸಿವಿಲ್ ಕಾಮಗಾರಿ ಕರಾರುಗಳನ್ನು ನಿರ್ವಹಿಸುವ ಒಬ್ಬ ನೋಂದಾಯಿತ ವ್ಯಾಪಾರಿಯು ನಿಯಮಿಸಬಹುದಾದಂಥ ಅವಧಿಯಲ್ಲಿ ಮತ್ತು ಅಂಥ ವಿವರಗಳನ್ನು ಒಳಗೊಂಡ ತೆರಿಗೆಯ ಬೆಲೆಪಟ್ಟಿಯನ್ನು ಅಥವಾ ಮಾರಾಟದ ಬಿಲ್ಲನ್ನು ನೀಡತಕ್ಕದ್ದು,"

೧೩ ೩೧ನೇ ಪ್ರಕರಣದ ತಿದ್ದುಪಡಿ - ಮೂಲ ಅಧಿನಿಯಮದ ೩೧ನೇ ಪ್ರಕರಣದಲ್ಲಿ -

(೧) (೪) ನೇ ಉಪ ಪ್ರಕರಣದಲ್ಲಿ "ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಮೀರುವುದೋ, ಆ ಪ್ರತಿಯೊಬ್ಬ ವ್ಯಾಪಾರಿಯು ತನ್ನ ಲೆಕ್ಕಪತ್ರಗಳನ್ನು ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಮತ್ತು ಅಂಥ

ಮಿತಿಗಳಿಗೆ ಒಳಪಟ್ಟು ಒಬ್ಬ ಚಾರ್ಟೆಡ್ ಅಕೌಂಟೆಂಟ್" ಆ ಪ್ರತಿಯೊಬ್ಬ ವ್ಯಾಪಾರಿಯು, ತನ್ನ ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂಥ ಷರತ್ತುಗಳಿಗೆ ಮತ್ತು ಅಂಥ ಮಿತಿಗಳಿಗೆ ಒಳಪಟಟು ಒಬ್ಬ ಚಾರ್ಟೆಡ್ ಅಕೌಂಟೆಂಟ್ ಅಥವಾ ಕಾಸ್ಟ್ ಅಕೌಂಟೆಂಟ್" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು

(೨) (೫) ನೇ ಉಪ ಪ್ರಕರಣದ ತರುವಾಯ ಈ ಮುಂದಿನ ಉಪ ಪರಕರಣವನ್ನು ಸೇರಿಸತಕ್ಕದ್ದು, ಎಂದರೆ –

"(೬) ತಾನಾಗಿಯೇ ಅಥವಾ ಇನ್ನೊಬ್ಬರ ಮೂಲಕ ಒಂದು ಕಟ್ಟಡವನ್ನು ಕಟ್ಟುವ ಅಥವಾ ಇತರ ಸಿವಿಲ್ ಕಾಮಗಾರಿಯನ್ನು ನಿರ್ವಹಿಸುವ ಕಾಮಗಾರಿ ಕರಾರನ್ನು ಪೂರ್ಣವಾಗಿ ಅಥವಾ ಭಾಗಶಃ ಯಾವುದೇ ತೆರಿಗೆ ಅವಧಿಯಲ್ಲಿ ನಿರ್ವಹಿಸಿಕೊಡುವಂಥ ಲಿಖಿತ ಒಪ್ಪಂದವನ್ನು ಮಾಡಿಕೊಂಡ ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿ ಅಥವಾ ಭೂಮಾಲಿಕನು ಸೇರಿದಂತೆ ಈ ಅಧಿನಿಯದಲ್ಲಿ ನೋಂದಾಯಿಸಿಕೊಳ್ಳಲು ಬದ್ಧನಾದ ಪ್ರತಿಯೊಬ್ಬ ವ್ಯಾಪಾರಿಯು ಅಂಥ ಒಪ್ಪಂದದ ಪ್ರತಿಯನ್ನು ತಾನು ಯಾರಿಗೆ ತೆರಿಗೆ ವಿವರಪಟ್ಟಿಯನ್ನು ಸಲ್ಲಿಸಲು ಅಗತ್ಯಪಡಿಸಲಾಗಿದೆಯೋ ಆ ನಿಯಮಿತ ಪ್ರಾಧಿಕಾರಿಗೆ, ತರುವಾಯದಲ್ಲಿ ಬರುವ ತೆರಿಗೆ ಅವಧಿಯು ಮುಕ್ತಾಯಗೊಳ್ಳುವರೊಳಗೆ, ಸಲ್ಲಿಸತಕ್ಕದ್ದು,"

೧೪ ೩೮ನೇ ಪ್ರಕರಣದ ತಿದ್ದುಪಡಿ – ಮೂಲ ಅಧಿನಿಯಮದ ೩೮ನೇ ಪ್ರಕರಣದಲ್ಲಿ,–

(೧)(ಎ)(೫) ನೇ ಉಪ ಪ್ರಕರಣಕ್ಕೆ ಅದರ (ಎ) ಖಂಡವೆಂದು ಮರುಸಂಖ್ಯೆ ನೀಡತಕ್ಕದ್ದು, ಹಾಗೆ ಮರು ಸಂಖ್ಯೆ ನೀಡಿದ ತರುವಾಯ (ಎ) ಖಂಡದಲ್ಲಿ "ತನ್ನ ಗಮನಕ್ಕೆ ಬಂದ ಮೇಲೆ" ಎಂಬ ಪದಗಳ ತರುಆಯ "ತನ್ನ ಜಂಟಿ ಆಯುಕ್ತನ" ಅಥವಾ ಅಪರ ಆಯುತಕ್ತನ-ಪೂರ್ವಾನುಮತಿಯೊಡನೆ" ಎಂಬ ಪದಗಳನ್ನು ಸೇರಿಸತಕ್ಕದ್ದು,

(ಬಿ)ಹಾಗೆ ಮರು ಸಂಖ್ಯೆ ನೀಡಿದ (ಎ) ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದದು, ಎಂದರೆ -

"(ಬಿ) ಜಂಟಿ ಆಯುಕ್ತ ಅಥವಾ ಅಪರ ಆಯುಕ್ತನು, ವ್ಯಾಪಾರಿಯು ಅಂಥ ರಕ್ಷಣಾತ್ಮಕ ತೆರಿಗೆಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸಲ್ಲಿಸಿದ ಯಾವುದೇ ಅರ್ಜಿಯ ಮೇಲೆ ಅಥವಾ ಅಂಥ ರಕ್ಷಣಾತ್ಮಕ ತೆರಿಗೆನಿರ್ಧರಣೆಯನ್ನು ನೀಡಿದ ದಿನಾಂದಿಂದ ಮೂವತ್ತು ದಿನಗಳೊಳಗೆ ತಾನಾಗಿಯೇ ನೀಡಲಾದ ಯಾವುದೇ ರಕ್ಷಣಾತ್ಮಕ ತೆರಿಗೆ ನಿರ್ಧರಣೆಯು ತಪ್ಪು ಎಂದು ಪರಿಗಣಿಸಿದರೆ, ಸಂಬಂಧಪಟ್ಟ ವ್ಯಾಪಾರಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ ಪ್ರಕರಣದ ಸನ್ನಿವೇಶಕ್ಕೆ ನ್ಯಾಯೋಚಿತವಾದಂಥ ಆದೇಶವನ್ನು ಹೊರಡಿಸತಕ್ಕದ್ದು"

(೨) (೬) ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ -

"*೭) ಈ ಬಗ್ಗೆ ಆಯುಕ್ತರು ಪ್ರಾಧಿಕಾರ ನೀಡಿದ ಪ್ರಾಧಿಕಾರಿಯು, ನಿರ್ದಿಷ್ಟಪಡಿಸಿದ ಅವಧಿಯೊಳಗೆ ನೋಂದಾಯಿತನಾಗಲು ಬದ್ಧನಾಗಿದ್ದರೂ ಹಾಗೆ ಮಾಡಲು ತಪ್ಪಿದ ವ್ಯಾಪಾರಿಯ ತೆರಿಗೆ ನಿರ್ಧರಣೆಯನ್ನು, ಆ ವ್ಯಾಪಾರಿಯು ನೋಂದಾಯಿತನಾಗಿದ್ದರೆ ಯಾವ ತೆರಿಗೆ ಅವಧಿ ಅಥವಾ ಅವಧಿಗಳು ಅವನಿಗೆ ಅನ್ವಯಿಸುತ್ತವೆಯೋ ಅವುಗಳ ಬಗ್ಗೆ ತನ್ನ ಉತ್ತಮ ವಿವೇಚನೆಯ ಅನುಸಾರ ಮತ್ತು ಅಂಥ ತೆರಿಗೆ ನಿರ್ಧರಣೆಯ ವಿರುದ್ಧ ಕಾರಣಗಳನ್ನು ಬರಹದಲ್ಲಿ ತೋರಿಸಲು ಆ ವ್ಯಾಪಾರಿಗೆ ಅವಕಾಶವನ್ನು ಕೊಟ್ಟ ನಂತರ ಮಾಡತಕ್ಕದ್ದು ಸದರಿ ತೆರಿಗೆ ನಿರ್ಧರಣೆಯನ್ನು ಆ

ವ್ಯಾಪಾರಿಯ ಮೇಲೆ ಜಾರಿ ಮಾಡಿದ ದಿನಾಂಕದಿಂದ ಹತ್ತು ದಿನಗಳೊಳಗೆ ನಿರ್ಧರಿಸಿದ ತೆರಿಗೆ ಹಾಗೂ ಯಾವುದಾದರೂ ಬಡ್ಡಿ ಸಂದಾಯವಾಗಬೇಕಿದ್ದರೆ ಅದನ್ನು ವ್ಯಾಪಾರಿಯು ಸಂದಾಯ ಮಾಡತಕ್ಕದ್ದು."

೧೫, ೩೯ನೇ ಪ್ರಕರಣದ ತಿದ್ದುಪಡಿ . – ಮೂಲ ಅಧಿನಿಯಮದ ೩೯ನೇ ಪ್ರಕರಣದ (೧) ನೇ ಉಪ ಪ್ರಕರಣದಲ್ಲಿ –

(೧)"ತಪ್ಪಾಗಿದೆ ಅಥವಾ" ಎಂಬ ಪದಗಳಿಗೆ "ಅಥವಾ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು

(೨) (ಎ) ಖಂಡದಲ್ಲಿ "ಸಂದಾಯ ಮಾಡಬೇಕಾದ ಹೆಚ್ಚುವರಿ ತೆರಿಗೆಯ ಮರುನಿರ್ಧರಣೆ ಮಾಡಬಹುದು ಮತ್ತು ಯಾವುದೇ ದಂಡವನ್ನು ವಿಧಿಸಬಹುದು ಹಾಗೂ ಯಾವುದೇ ಬಡ್ಡಿಯ ಸಂದಾಯಕ್ಕೆ ಒತ್ತಾಯಿಸಬಹುದು" ಎಮುಬ ಪದಗಳಿಗೆ "ಸಂದಾಯ ಮಾಡಬೇಕಾದ ಹೆಚ್ಚುವರಿ ತೆರಿಗೆಯ ಮರುನಿರ್ಧರಣೆ ಮಾಡಬಹುದು ಮತ್ತು ೭೨ನೇ ಪ್ರಕರಣದ (೨) ನೇ ಉಪ ಪ್ರಕರಣದ ಅಡಿಯಲ್ಲಿ ಅಥವಾ (೬) ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ದಂಡವನ್ನು ಸಹ ವಿಧಿಸಬಹುದು ಹಾಗೂ ಯಾವುದೇ ಬಡ್ಡಿಯ ಸಂದಾಯಕ್ಕಾಗಿ ಒತ್ತಾಯಿಸಬಹುದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು

(೩) (ಬಿ) ಖಂಡದಲ್ಲಿ "ನೋಂದಾಯಿತ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು

೧೬ ೪೦ನೇ ಪ್ರಕರಣದ ತಿದ್ದುಪಡಿ ಮೂಲ ಅಧಿನಿಯಮದ ೪೦ನೇ ಪ್ರಕರಣದ (೨) ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ –

"(೨) ನೋಂದಾಯಿತನಾಗಲು ಬದ್ಧನಾಗಿದ್ದಾಗ್ಯೂ ಹಾಗೆ ಮಾಡಲು ತಪ್ಪಿದ ಒಬ್ಬ ವ್ಯಾಪಾರಿಯು ಯಾವುದೇ ತೆರಿಗೆ ಸಂದಾಯಮಾಡಲು ತಪ್ಪಿದರೆ ಅಥವಾ ೭೯ನೇ ಪ್ರಕರಣದ ಅಡಿಯಲ್ಲಿ ಶಿಕ್ಷೆಗೆ ಗುರಿಯಾಗುವುದನ್ನು ಮೋಸದಿಂದ ತಪ್ಪಿಸಿಕೊಂಡರೆ (೧) ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಐದು ವರ್ಷಗಳಿಗೆ ಎಂಬುದನ್ನು ಹತ್ತು ವರ್ಷಗಳಿಗೆ ಎಂದು ಉಲ್ಲೀಖಿಸಿದ್ದರೆ ಹೇಗೋ ಹಾಗೆ ತೆರಿಗೆ ನಿರ್ಧರಣೆಯನ್ನು ಮಾಡಬಹುದು ಅಥವಾ ಮರು ನಿರ್ಧರಣೆಯನ್ನು ಮಾಡಬಹುದು "

೧೭ ೪೫ನೇ ಪ್ರಕರಣದ ತಿದ್ದುಪಡಿ – ಮೂಲ ಅಧಿನಿಯಮದ ೪೫ನೇ ಪ್ರಕರಣದಲ್ಲಿ (೬) ನೇ ಉಪ ಪ್ರಕರಣದಲ್ಲಿ "ಭೂ ಕಂದಾಯದ ಬಕಿ" ಎಂಬ ಪದಗಳಿಗೆ "ಈ ಅಧಿನಿಯಮದ ಅಡಿಯಲ್ಲಿ ಸಂದಾಯಮಾಡಬೇಕಾದ ಬಾಕಿ ತೆರಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು ಯಾವಾಗಲೂ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು

೧೮ ೫೨ನೇ ಪ್ರಕರಣದ ತಿದ್ದುಪಡಿ ಮೂಲ ಅಧಿನಿಯಮದ ೫೨ನೇ ಪ್ರಕರಣದಲ್ಲಿ (೧) ನೇ ಉಪಪ್ರಕರಣದಲ್ಲಿ –

(೧) (ಎ) ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ –

"(ಎ–I) ಅಂಥ ವ್ಯಾಪಾರಿಯು ತೆರಿಗೆ ದರಪಟ್ಟಿಗಳು ಅಥವಾ ಮಾರಾಟದ ಬಿಲ್ಲುಗಳನ್ನು ನೀಡುವುದನ್ನು ಪರೀಕ್ಷಿಸುವುದಕ್ಕಾಗಿ ಯಾವೊಬ್ಬ ವ್ಯಾಪಾರಿಯ ವ್ಯವಹಾರದ ಆವರಣದಿಂದ ತಾನು ಪ್ರಾಧಿಕರಿಸಿದ ಯಾವೊಬ್ಬ ವ್ಯಕ್ತಿಯು ಯಾವುದೇ ಸರಕುಗಳ ಖರೀದಿ ಮಾಡುವಂತೆ ಮಾಡುವುದಕ್ಕೆ ಅಧಿಕಾರ ಹೊಂದಿರತಕ್ಕದ್ದು ಮತ್ತು ಅಂಥ ಅಧಿಕಾರಿಯು ಹಾಗೆ ಖರೀದಿಸಿದ ಸರಕುಗಳನ್ನು ಹಿಂದಿರುಗಿಸಿದ ಮೇಲೆ, ಅಂಥ

ವ್ಯಾಪಾರಿಯು ಅಥವಾ ವ್ಯವಹಾರದ ಆವರಣಗಳ ಪ್ರಭಾರದಲ್ಲಿರುವ ಯಾವೊಬ್ಬ ವ್ಯಕ್ತಿಯು ತಾನು ನೀಡಿದ್ದ ಯಾವುದೇ ತೆರಿಗೆ ದರಪಟ್ಟಿ ಅಥವಾ ಮಾರಾಟ ಬಿಲ್ಲನ್ನು ರದ್ದುಪಡಿಸಿ ಸರಕುಗಳಿಗಾಗಿ ಸಂದಾಯಮಾಡಿದ್ದ ಮೊಬಲಗನ್ನು ಮರುಪಾವತಿ ಮಾಡತಕ್ಕದ್ದು."

(೨) (ಐ) ಖಂಡದಲ್ಲಿ "ಆಯುಕ್ತನು" ಎಂಬ ಪದಕ್ಕೆ "ಅಂಥ ಅಧಿಕಾರಿಯು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು

೧೯ ೫೩ನೇ ಪ್ರಕರಣದ ತಿದ್ದುಪಡಿ ಮೂಲ ಅಧಿನಿಯಮದ ೫೩ನೇ ಪ್ರಕರಣದ (೨) ನೇ ಉಪಪ್ರಕರಣದಲ್ಲಿ (ಬಿ) ಖಂಡದಲ್ಲಿ "ನಿಯಮಿಸಬಹುದಾದಂತೆ ತೆರಿಗೆ ಬೆಲೆಪಟ್ಟಿ, ಮಾರಾಟದ ಬಿಲ್ಲು ಅಥವಾ ರವಾನೆ ಚೀಟಿಯಂಥಹ ಇತರ ದಸ್ತಾವೇಜುಗಳನ್ನು" ಎಂಬ ಪದಗಳಿಗೆ "ನಿಯಮಿಸಬಹುದಾದಂಥ ದಸ್ತಾವೇಜುಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು ಯಾವಾಗಲೂ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು

೨೦ ೫೮ನೇ ಪ್ರಕರಣದ ತಿದ್ದುಪಡಿ – ಮೂಲ ಅಧಿನಿಯಮದ ೫೩ನೇ ಪ್ರಕರಣದ (೨) ನೇ ಉಪಪ್ರಕರಣದಲ್ಲಿ (ಬಿ) ಖಂಡದಲ್ಲಿ "ನಿಯಮಿಸಬಹುದಾದಂತೆ ತೆರಿಗೆ ಬೆಲೆಪಟಟಿ, ಮಾರಾಟದ ಬಿಲ್ಲು ಅಥವಾ ರವಾನೆ ಚೀಟಿಯಂಥಹ ಇತರ ದಸ್ತಾವೇಜುಗಳನ್ನು" ಎಂಬ ಪದಗಳಿಗೆ "ನಿಯಮಿಸಬಹುದಾದಂಥ ದಸ್ತಾವೇಜುಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು ಯಾವಾಗಲೂ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು

೨೦ ೫೮ನೇ ಪ್ರಕರಣದ ತಿದ್ದುಪಡಿ ಮೂಲ ಅಧಿನಿಯಮದ ೫೮ನೇ ಪ್ರಕರಣದಲ್ಲಿ (೨) ನೇ ಉಪ

ಪ್ರಕರಣದಲ್ಲಿ "ಚಾರ್ಟರ್ಡ್ ಅಕೌಂಟೆಂಟ್" ಎಂಬ ಪದಗಳ ತರುವಾಯ "ಅಥವಾ ಒಬ್ಬ ಕಾಸ್ಟ್ ಅಕೌಂಟೆಂಟ್" ಎಂಬ ಪದಗಳನ್ನು ಸೇರಿಸತಕ್ಕದ್ದು

೨೧ ೬೦ನೇ ಪ್ರಕರಣವನ್ನು ಬಿಟ್ಟಬಿಡುವುದು - ಮೂಲ ಅಧಿನಿಯಮದ ೬೦ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು

೨೨ ೬೨ನೇ ಪ್ರಕರಣದ ತಿದ್ದುಪಡಿ – ಮೂಲ ಅಧಿನಿಯಮದ ೬೨ನೇ ಪ್ರಕರಣದಲ್ಲಿ –

(೧) (೨) ನೇ ಉಪ ಪ್ರಕರಣದಲ್ಲಿ " ಯಾವುದೇ ಇತರ ಆದೇಶಕ್ಕೆ" ಎಂಬ ಪದಗಳಿಗೆ " ಯಾವುದೇ ಇತರ ಆದೇಶಕ್ಕೆ ಅಥವಾ ವ್ಯವಹರಣೆಗಳಿಗೆ " ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು

(೨) (೪) ನೇ ಉಪ ಪ್ರಕರಣದಲ್ಲಿ (ಬಿ) ಖಂಡದಲ್ಲಿ "ಆದೇಶದ" ಮತ್ತು "ಆದೇಶಕ್ಕೆ" ಎಂಬ ಪದಗಳ ತರುವಾಯ ಅನುಕ್ರಮವಾಗಿ "ಅಥವಾ ವ್ಯವಹರಣೆಗಳ" ಎಂಬ ಪದಗಳನ್ನು ಸೇರಿಸತಕ್ಕದ್ದು

೨೩ ೬೩ನೇ ಪ್ರಕರಣದ ತಿದ್ದುಪಡಿ – ಮೂಲ ಅಧಿನಿಯಮದ ೬೩ನೇ ಪ್ರಕರಣದ (೧) ನೇ ಉಪ ಪ್ರಕರಣದಲ್ಲಿ "ಸರ್ಕಾರದಿಂದ ಈ ಸಂಬಂಧದಲ್ಲಿ ಪ್ರಾಧೀಕೃತನಾದ" ಎಂಬ ಪದಗಳಿಗೆ "ರಾಜ್ಯ ಸರ್ಕಾರದಿಂದ ಅಥವಾ ಆಯುಕ್ತರಿಂದ ಈ ಸಂಬಂಧದಲ್ಲಿ ಪ್ರಾಧಿಕೃತನಾದ" ಎಂಬ ಪದಗಳನ್ನು ಹಾಗೂ (೪) ನೇ ಉಪ ಪ್ರಕರಣದಲ್ಲಿ " ಸರ್ಕಾರದಿಂದ ಪ್ರಧಿಕೃತನಾದ" ಎಂಬ ಪದಗಳಿಗೆ " ರಾಜ್ಯ ಸರ್ಕಾರದಿಂದ ಅಥವಾ ಆಯುಕ್ತರಿಂದ ಪ್ರಾಧಿಕೃತನಾದ" ಎಂಬ ಪದಗಳನ್ನು ೨೦೦೬ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು

೨೪ ೭೨ನೇ ಪ್ರಕರಣದ ತಿದ್ದುಪಡಿ - ಮೂಲ ಅಧಿನಿಯಮದ ೭೨ನೇ ಪ್ರಕರಣದಲ್ಲಿ,-

(೧) ಶೀರ್ಷಿಕೆಯಲ್ಲಿ " ವಿವರ ಪಟ್ಟಿಗಳಿಗೆ" ಎಂಬ ಪದಗಳ ತರುವಾಯ " ಮತ್ತು ತೆರಿಗೆ ನಿರ್ಧರಣಕ್ಕೆ" ಎಂಬ ಪದಗಳನ್ನು ಸೇರಿಸತಕ್ಕದ್ದು

(೨) (೧) ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಸೇರಿಸತಕಕದು, ಎಂದರೆ -

"(೧) ಅಧಿನಿಯಮದ ಅಡಿಯಲ್ಲಿ ಅಗತ್ಯಪಡಿಸಿದಂತೆ ಒಂಉದ ವಿವರಪಟ್ಟಿ ಸಲ್ಲಿಸಲು ತಪ್ಪಿದ ಅಥವಾ ಸಲ್ಲಿಸಿದ ಯಾವುದೇ ವಿವರ ಪಟ್ಟಿಯಂತೆ ಬಾಕಿ ಇರುವ ತೆರಿಗೆಯನ್ನು ಸಂದಾಯಮಾಡಲು ವಿಫಲನಾದ ಒಬ್ಬ ವ್ಯಾಪಾರಿಯು ಬಾಕಿ ಇರುವ ಯಾವುದೇ ತೆರಿಗೆ ಅಥವಾ ಬಡ್ಡಿಯ ಜೊತೆಗೆ,-

(ಎ)ತಪ್ಪಿದ ಪ್ರತಿಯೊಂದು ದಿನಕ್ಕೆ ಐವತ್ತು ರೈಪಾಯಿಗಳಂತೆ ದಂಡವನ್ನು ಮತ್ತು ಹಾಗೆ ತಪ್ಪಿರುವುದು ಐದು ದಿನಕ್ಕಿಂತ ಹೆಚ್ಚಾಗಿದ್ದರೆ ಅಂಥ ದಂಡವು ಎರಡುನೂರಾ ಐವತ್ತು ರೂಪಾಯಿಗಳನ್ನು ಅಥವಾ ಬಾಕಿ ಇರುವ ತೆರಿಗೆಯ ಮೊಬಲಗು ಇವೆರೆಡರಲ್ಲಿ ಯಾವುದು ಹೆಚ್ಚೋ ಆ ಮೊಬಲಗನ್ನು ಮೀರತಕ್ಕದ್ದಲ್ಲದ ದಂಡವನ್ನು, ಮತ್ತು

(ಬಿ)ಬಾಕಿ ಇರುವ ತೆರಿಗೆಯ ಮೊಬಲಿಗ ಶೇಕಡಾ ಹತ್ತರಷ್ಟು ಮೊಬಲಗಿಗೆ ಸಮನಾದ ಹೆಚ್ಚುವರಿ ದಂಡವನ್ನು

೦ ಸಂದಾಯಮಾಡಲು ಹೊಣೆಗಾರನಾಗತಕ್ಕದ್ದು

(೩) (೩) ನೇ ಉಪ ಪ್ರಕರಣಕ್ಕೆ "ಅಪೂರ್ಣವಾಗಿದ್ದ" ಎಂಬ ಪದಕ್ಕೆ ಮೊದಲು "ಆತನಿಗೆ ನೀಡಿದ ನೋಟೀಸಿನಲ್ಲಿ ತಿಳಿಸಲಾದಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು

(೪) (೫) ನೇ ಉಪ ಪ್ರಕರಣಕ್ಕೆ (೬) ನೇ ಉಪ ಪ್ರಕರಣವೆಂದು ಮರುಸಂಖ್ಯೆ ನೀಡತಕ್ಕದ್ದು

(೫) ಹಾಗೆ ಮರುಸಂಖ್ಯೆ ನೀಡಿದ (೬) ನೇ ಉಪ ಪ್ರಕರಣಕ್ಕೆ ಮೊದಲು ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ –

" (೫) ಹಾಗೆ ಮರುಸಂಖ್ಯೆ ನೀಡಿದ (೬) ನೇ ಉಪ ಪ್ರಕರಣಕ್ಕೆ ಮೊದಲು ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ –

" (೫) ನೋಂದಾಯಿತನಾಗಲು ಬದ್ಧನಾಗಿದ್ದಾಗ್ಯೂ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಹಾಗೆ ಮಾಡಲು ತಪ್ಪಿದ ಒಬ್ಬ ವ್ಯಾಪಾರಿಯು ದಂಡನೆಯನ್ನು ಏಕೆ ವಿಧಿಸಬಾರದೆಂಬ ಬಗ್ಗೆ ಲಿಖಿತದಲ್ಲಿ ಕಾರಣಗಳನ್ನು ತೋರಿಸುವ ಹೇಳಿಕೆಯನ್ನು ನೀಡಲು ಅವಕಾಶವನ್ನು ಕೊಟ್ಟ ತರುವಾಯ ಆತ ಸಂದಾಯಮಾಡಬೇಕಾದ ೩೮ನೇ ಪ್ರಕರಣದ ಅಡಿಯಲ್ಲಿ ನಿರ್ಧರಿಸಿದ ತೆರಿಗೆಯ ಅಥವಾ ೩೯ನೇ ಪ್ರಕರಣದ ಅಡಿಯಲ್ಲಿ ಮರು ನಿರ್ಧರಿಸಿದ ತೆರಿಗೆ ಮೊಬಲಗಿನ ಶೇಕಡ ಮೂವತ್ತ ದರದಲ್ಲಿ ದಂಡವನ್ನು ಸಂದಾಯಮಾಡಲು ಬದ್ಧನಾಗಿರತಕ್ಕದ್ದು "

೨೫ **೭೩ನೇ ಪ್ರಕರಣದ ತಿದ್ದುಪಡಿ** – ಮೂಲ ಅಧಿನಿಯಮದ ೭೩ನೇ ಪ್ರಕರಣದ (೧) ನೇ ಉಪ ಪ್ರಕರಣದಲ್ಲಿ "ಮೀರದ" ಎಂಬ ಪದಕ್ಕೆ "ಸಮನಾದ ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು

೨೬ **೭೪ನೇ ಪ್ರಕರಣದ ತಿದ್ದುಪಡಿ** ಮೂಲ ಅಧಿನಿಯಮದ ೭೪ನೇ ಪ್ರಕರಣದ (೧) ನೇ ಉಪ ಪ್ರಕರಣದಲ್ಲಿ –

(೧)"ಮತ್ತು ನಿರ್ವಹಿಸಲು" ಎಂಬ ಪದಗಳ ತರುವಾಯ "ಅಥವಾ ಸಿವಿಲ್ ಕಾಮಗಾರಿ ಕರಾರನ್ನು ಕೈಗೊಳ್ಳಲು

ಮಾಡಕೊಂಡ ಒಪ್ಪಂದದ ಪ್ರತಿಯನ್ನು ಸಲ್ಲಿಸಲು" ಎಂಬ ಪದಗಳನ್ನು ಸೇರಿಸತಕ್ಕದ್ದು

(೨) "ಐದು ಸಾವಿರ ರೂಪಾಯಿಗಳಿಗೆ" ಎಂಬ ಪದಗಳಿಗೆ ಯಾವುದೇ ಒಂದು ವರ್ಷದ ಅವಧಿಯಲ್ಲಿ ಹಾಗೆ ತಪ್ಪಿರುವುದು ಮೊದಲ ಬಾರಿಯಾಗಿದ್ದರೆ ಎರಡು ಸಾವಿರ ರೂಪಾಯಿಗಳಿಗೆ ಅಥವಾ ಆ ವರ್ಷದಲ್ಲಿ ಎರಡನೇ ಬಾರಿಗೆ ಅಥವಾ ಅದರ ನಂತರ ತಪ್ಪಿದ್ದರೆ ಐದು ಸಾವಿರ ರೂಪಾಯಿಗಳಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು

೨೭ **ಒಂದನೇ ಅನುಸೂಚಿಯ ತಿದ್ದುಪಡಿ** ಮೂಲ ಅಧಿನಿಯಮದ ಒಂದನೇ ಅನುಸೂಚಿಯಲ್ಲಿ,-

(೧) ೪೨ನೇ ಕ್ರಮ ಸಂಖ್ಯೆಗೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು

(೨)೫೦ನೇ ಕ್ರಮ ಸಂಖ್ಯೆಗೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು

೨೮ **ಮೂರನೇ ಅನುಸೂಚಿಯ ತಿದ್ದುಪಡಿ** – ಮೂಲ ಅಧಿನಿಯಮದ ಮೂರನೇ ಅನುಸೂಚಿಯಲ್ಲಿ, –

(೧) ೩೪ನೇ ಕ್ರಮ ಸಂಖ್ಯೆಗೆ ಸಂಬಂಧಿಸಿದ ನಮೂಮಗಳಲ್ಲಿ "ಅಂಥವುಗಳು ಎಂಬ ಪದಕ್ಕೆ ಮೊದಲು " ಯಾವುದೇ ಹೆಸರಿನಿಮದ ಕರೆಯಬಹುದಾದ ಸಾಫ್ಟ್ ವೇರ್ ಲೈಸನ್ಸುಗಳನ್ನು ಒಳಗೊಂಡಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು

(೨) ೫೨ನೇ ಕ್ರಮ ಸಂಖ್ಯೆಗೆ ಸಂಬಂಧಿಸಿದ ನಮೂದುಗಳಿಗೆ ಈ ಮುಂದಿನ ನಮೂದುಗಳನ್ನು ಪ್ರತಿಯೋಜಿಸತಕ್ಕದ್ದು, ಎಂದರೆ

"೫೨ ೧೧೦೦ ವೋಲ್ಟ್ ಗಳವರೆಗಿನ ಉಪಯೋಗಕ್ಕಾಗಿ ತಾಮ್ರ ಮತ್ತು ಅಲ್ಯೂಮಿನಿಯಂ ಸಿಂಗಲ್ ಕೋರ್ ಪಿವಿಸಿ ಕೇಬಲ್ ಗಳನ್ನು ಹೊರತುಪಡಿಸಿ ಆರು ಚದರ ಮಿಲಿ ಮೀಟರುಗಳ ಕೈಗಾರಿಕಾ ಕೇಬಲ್ ಗಳು"

೨೯ **ನಾಲ್ಕನೇ ಅನುಸೂಚಿಯ ತಿದ್ದುಪಡಿ** - ಮೂಲ ಅಧಿನಿಯಮದ ನಾಲ್ಕನೇ ಅನುಸೂಚಿಯಲ್ಲಿ, ೨ನೇ ಕ್ರಮ ಸಂಖ್ಯೆಗೆ ಸಂಬಂಧಿಸಿದ ನಮೂದುಗಳ ತರುವಾಯ, ಈ ಮುಂದಿನ ನಮೂದುಗಳನ್ನು ಸೇರಿಸತಕ್ಕದು, ಎಂದರೆ -

"೩ ಡಿನೇಚರ್ಡ ಅನ್ ಹೈಡ್ರಸ್ ಅಲ್ಕೋಹಾಲ್

೪ ಡಿನೇಚರ್ಡ ಸ್ಪಿರಿಟ್

೫ ಈಥೆಲ್ ಅಲ್ಕೋಹಾಲ್

೬ ರೆಕ್ಟಿಫೈಡ್ ಸ್ಪಿರಿಟ್"

೩೦ **ಅಧಿಸೂಚನೆಯನ್ನು ತಿದ್ದುಪಡಿಮಾಡಲು ಅಧಿಕಾರ** - ಸರ್ಕಾರವು, ಅಧಿಸೂಚನೆಯ ಮೂಲಕ, ೨೦೦೭ರ ಏಪ್ರಿಲ್ ಐದನೇ ದಿನಾಂಕಕ್ಕೆ ಮೊದಲು ಮೂಲ ಅಧಿನಿಯಮದ ೪ನೇ ಪ್ರಕರಣದ (೩) ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಯಾವುದೇ ಅಧಿಸೂಚನೆಯನ್ನು ಪೂರ್ವಾನ್ವಯವಾಗಿ ತಿದ್ದುಪಡಿಮಾಡಬಹುದು ಅಥವಾ ಮಾರ್ಪಾಡುಮಾಡಬಹುದು

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಆಯವ್ಯಯದಲ್ಲಿ ಮಾಡಿದ ಪ್ರಸ್ತಾವಗಳನ್ನು ಜಾರಿಗೊಳಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ

ತೆರಿಗೆ ಅಧಿನಿಯಮ ೨೦೦೩ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ

ಕೆಲವು ಅನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ

ಆದ್ದರಿಂದ ಈ ವಿಧೇಯಕ

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ

ಖಂಡ–೬ ೬ನೇ ಖಂಡವು, ಒಬ್ಬ ವ್ಯಾಪಾರಿಗೆ ಇನ್ನೊಬ್ಬ ವ್ಯಾಪಾರಿಯು ಮಾಡಿದ ಕೆಲವು ಸರಕುಗಳ ಮಾರಾಟದ ಸಂಬಂಧದಲ್ಲಿ ಮೂಲದಲ್ಲಿಯೇ ತೆರಿಗೆಯನ್ನು ಕಡಿಗೊಳಿಸುವ ಬಗ್ಗೆ ನೋಂಧಾಯಿತ ವ್ಯಾಪಾರಿಯು ಸಲ್ಲಿಸಬೇಕಾದ ಮಾಸಿಕ ವಿವರಣೆಯಲ್ಲಿ ನಮೂದಿಸಬೇಕಾದ ವಿವರಗಳನ್ನು ನಿಯಮಿಸಲು ಮತ್ತು ಮಾಡಿದ ತೆರಿಗೆ ಕಡಿತದ ಬಗ್ಗೆ ಅಂಥ ವ್ಯಾಪಾರಿಗೆ ನೀಡಬೇಕಾದ ಪ್ರಮಾಣ ಪತ್ರದ ಬಗ್ಗೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ

ಖಂಡ–೮ ೮ನೇ ಖಂಡವು, ವಿಶೇಷ ಆರ್ಥಿಕ ವಲಯಗಳಲ್ಲಿರುವ ಅಭಿವೃದ್ಧಿದಾರರಿಗೆ ಮತ್ತು ಘಟಕಗಳಿಗೆ ಅನುಮತಿಸುವ ಮರುಪಾವತಿ ಅಥವಾ ಕಡಿತಗಳಿಗೆ ಷರತ್ತುಗಳು ಮತ್ತು ವಿಧಾನಗಳನ್ನು ನಿಯಮಿಸಲು - ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ

ಖಂಡ-೧೨ ೧೨ನೇ ಖಂಡವು ಸಿವಿಲ್ ಕಾಮಗಾರಿ ಕರಾರನ್ನು ನಿರ್ವಹಿಸುವ ನೋಂದಾಯಿತ ವ್ಯಾಪಾರಿಯು ನೀಡಬೇಕಾದ ತೆರಿಗೆ ದರಪ್ಪಿ ಅಥವಾ ಮಾರಾಟದ ಬಿಲ್ಲಿನಲ್ಲಿ ಒದಗಿಸಬೇಕಾದ ವಿವರಗಳು ಮತ್ತು ಅವಧಿಯನ್ನು ನಿಯಮಿಸಲು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ

ಪ್ರಸ್ತಾವಿಕ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ಸಾಮಾನ್ಯ ಸ್ವರೂಪದ್ದಾಗಿದೆ

ಬಿ ಎಸ್ ಯಡಿಯೂರಪ್ಪ
ಉಪ ಮುಖ್ಯಮಂತ್ರ ಹಾಗೂ
ಹಣಕಾಸು ಸಚಿವರು

ಎಸ್ ಬಿ ಪಾಟೀಲ್
ಅಪರ ಕಾರ್ಯದರ್ಶಿ

ಅನುಬಂಧ

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, ೨೦೦೩ ರ (೨೦೦೪ರ ಕರ್ನಾಟಕ

ಅಧಿನಿಯಮ ೩೨) ಉದ್ಧೃತ ಭಾಗ

XX XX XX

೪ ತೆರಿಗೆ ಬದ್ಧತೆ ಮತ್ತು ಅದರ ದರಗಳು – (೧) ೨೨ ಮತ್ತು ೨೪ನೇ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದಂತೆ ನೋಂದಾಯಿತನಾದ ಅಥವಾ ನೋಂದಾಯಿತನಾಗಲು ಅಗತ್ಯಪಡಿಸಲಾದ ಪ್ರತಿಯೊಬ್ಬ ವ್ಯಾಪಾರಿಯು ತನ್ನ ತೆರಿಗೆಗೆ ಗುರಯಾಗತಕ್ಕ ವಹಿವಾಟಿನ ಮೇಲೆ

(ಎ) ಈ ಮುಂದಿನಂತೆ ಎಂದರೆ –

(1) ಎರಡನೇ ಅನುಸೂಚಿಯಲ್ಲಿ ನಮೂದಿಸಿದ ಸರಕುಗಳ ಸಂಬಂಧದಲ್ಲಿ ಶೇಕಡಾ ಒಂದರ

ದರದಲ್ಲಿ

(11) ಮೂರನೇ ಅನುಸೂಚಿಯಲ್ಲಿ ನಮೂದಿಸಿದ ಸರಕುಗಳ ಸಂಬಂಧದಲ್ಲಿ ಶೇಕಡಾ ನಾಲ್ಕರ

ದರದಲ್ಲಿ, ಮತ್ತು

(111) ನಾಲ್ಕನೇ ಅನುಸೂಚಿಯಲ್ಲಿ ನಮೂದಿಸಿದ ಸರಕುಗಳ ಸಂಬಂಧದಲ್ಲಿ ಶೇಕಡಾ ಇಪ್ಪತ್ತರ ದರದಲ್ಲಿ

(ಬಿ) ಇತರ ಸರಕುಗಳ ಸಂಬಂಧದಲ್ಲಿ ಶೇಕಡಾ ಹನ್ನೆರಡುವರೆಯ ದರದಲ್ಲಿ

–ತೆರಿಗೆಯನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು

(ಸಿ) ಆರನೇ ಅನುಸೂಚಿಯ (೨) ನೇ ಅಂಕಣದಲ್ಲಿ ನಿರ್ದಿಷಟಪಡಿಸಿದ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಾಗ

ಒಳಗೊಂಡ, ಸರಕುಗಳ ಸ್ವತ್ತು ವರ್ಗಾವಣೆಯ ಸಂಬಂಧಧಲ್ಲಿ (ಸರಕುಗಳ ರೂಪದಲ್ಲಿ ಅತವಾ ಇನ್ನವುದೇ ರೂಪದಲ್ಲಿ) ಕೇಂದ್ರ ಮಾರಾಟ ತೆರಿಗೆ ಅಧಿನಿಯಮ ೧೯೫೬ರ (೧೯೫೬ರ ಕೇಂದ್ರ ಅಧಿನಿಯಮ, ೭೪) ೧೪ ಮತ್ತು ೧೫ನೇ ಪ್ರಕರಣಗಳಿಗೆ ಒಳಪಟ್ಟು, ಸದರಿ ಅನುಸೂಚಿಯ (೩) ನೇ ಅಂಕಣದಲ್ಲಿಯ ಸಂವಾದಿ ನಮೂದುಗಳಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ

XX XX XX

(೪) (೧) ನೇ ಉಪಪ್ರಕರಣದಲ್ಲಿ ಧನೇ ಒಳಗೊಂಡಿದ್ದರೂ, ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಪ್ರತಿಯೊಬ್ಬ ವ್ಯಾಪಾರಿಯು, ಮೂರನೇ ಅನುಸೂಚಿಯ ೬೦ನೇ ಕ್ರಮ ಸಂಖ್ಯೆಯಲ್ಲಿ ನಿರ್ದಿಷ್ಟಪಡಿಸಿದ ಸರಕುಗಳ ಮೇಲಿನ ತೆರಿಗೆಯನ್ನು, ಕಂಟೇನರ್‌ನ ಅಥವಾ ಅದರ ಪ್ಯಾಕಿನ ಲೇಬಲ್ ಮೇಲೆ ಸೂಚಿಸಲಾದ ಗರಿಷ್ಟ ಚಿಲ್ಲರೆ ಬೆಲೆಯ ಮೇಲೆ ಸಂದಾಯ ಮಾಡಲು ಆಯ್ಕೆ ಮಾಡಿಕೊಂಡರೆ, ಹಾಗೆ ಸಂದಾಯ ಮಾಡಬಹುದು

XX XX XX

ಹೂಡುವಳಿ ತೆರಿಗೆಯ ನಿರ್ಬಂಧಗಳು – (ಎ) ಈ ಮುಂದಿನವುಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ನಿವ್ವಳ ತೆರಿಗೆಯನ್ನು ಲೆಕ್ಕಹಾಕುವಾಗ ಹೂಡುವಳಿ ತೆರಿಗೆಯನ್ನು ಕಡಿತಗೊಳಿಸತಕ್ಕದ್ದಲ್ಲ

(೧) XX XX XX

(೬) ಭಾರತ ಸರಹದ್ದಿನ ಹೊರಗೆ ರಫ್ತು ಕ್ರಮದಲ್ಲಿ ಮಾರಾಟಕ್ಕಾಗಿ ಯಾವುದೇ ಸರಕುಗಳ ಅಥವಾ ತೆರಿಗೆ ಸಂದಾಯ ಮಾಡಬೇಕಾದ ಸರಕುಗಳ ಅಥವಾ ಸ್ವಂತ ಉಪಯೋಗ ವಿದ್ಯುಚ್ಛಕ್ತಿಯ

ಉತ್ಪಾದನೆಗಳಲ್ಲಿ ಇಂಧನವಾಗಿ ಉಪಯೋಗಿಸದಾಗ ಹೂಡುವಳಿ ತೆರಿಗೆಯನ್ನು ೧೪ನೇ ಪ್ರಕರಣದಲ್ಲಿ ಉಪಬಂಧಿಸಲಾದಂತೆ ಕಡಿತ ಮಾಡತಕ್ಕದಂಥವುಗಳನ್ನು ಹೊರತುಪಡಿಸಿ, ನ್ಯಾಫ್ತಾ, ದ್ರವೀಕೃತ ಪೆಟ್ರೋಲಿಯಂ ಅನಿಲ, ಕುಲುಮೆ ಎಣ್ಣೆ, ಲೈಟ್ ಡೀಸಲ್ ಆಯಿಲ್, ಸುಪೀರಿಯರ್ ಸೀಮೆ ಎಣ್ಣೆ, ಸೀಮೆ ಎಣ್ಣೆ ಮತ್ತು ಇತರ ಯಾವುದೇ ಪೆಟ್ರೋಲಿಯಂ ಉತ್ಪನ್ನಗಳನ್ನು ಮೋಟಾರು ವಾಹನಗಳಲ್ಲಿ ಇಂಧನವಾಗಿ ಉಪಯೋಗಿಸಿದಾಗ ಅವುಗಳ ಖರೀದಿಗಳ ಮೇಲೆ ಸಂದಾಯ ಮಾಡಿದ ತೆರಿಗೆ

XX XX XX

೧೫ ತೆರಿಗೆಯ ಬಗ್ಗೆ ರಾಜಿ (೧) ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ಮತ್ತು ಅಂಥ ಸಂದರ್ಭಗಳಲ್ಲಿ ೪ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ರಾಜ್ಯದ ಹೊರಗಿನಿಂದ ಅಥವಾ ಭಾರತದ ಸರಹದ್ದುಗಳ ಹೊರಗಿನಿಂದ ಸರಕುಗಳನ್ನು ಖರೀದಿಸುವ ಅಥವಾ ಪಡೆಯುವ ವ್ಯಾಪಾರಿಯ ಹೊರತಾಗಿ

(ಎ) ಯಾರ ಒಟ್ಟು ವಹಿವಾಟು ನಾಲ್ಕು ಅನುಕ್ರಮ ತ್ರೈಮಾಸಿಕಗಳ ಅವಧಿಯಲ್ಲಿ ಐವತ್ತು ಲಕ್ಷ ರೂಪಾಯಿಗಳನ್ನು ಮೀರದಂತೆ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ಮೊಬಲಗನ್ನು ಮೀರುವುದಿಲ್ಲವೋ ಮತ್ತು ಯಾರೂ ಈ ಮುಂದಿನ (ಬಿ) ಅಥವಾ (ಸಿ) ಅಥವಾ ಲ ಖಂಡದ ಅಡಿಯಲ್ಲಿ ಬರುವುದಿಲಲವೋ ಅಂಥ ವ್ಯಾಪಾರಿಯು

(ಬಿ) ಕಾಮಗಾರಿ ಕರಾರುಗಳನ್ನು ನಿರ್ವಹಿಸುವ ವ್ಯಾಪಾರಿಯು, ಅಥವಾ

(ಸಿ) ಒಬ್ಬ ಹೊಟೆಲ್ ನಡಸುವ, ರೆಸ್ಟೋರೆಂಟ್ ನಡೆಸುವ ಕೇಟರರ್ ಆಗಿರುವ ವ್ಯಾಪಾರಿಯು, ಅಥವಾ ಸಿಹಿ ತಿಂಡಿಗಳ ಸ್ಟಾಲನ್ನು ಅಥವಾ ಐಸ್ ಕ್ರೀಮ್ ಪಾರಲರ್ ಅನ್ನು, ಅಥವಾ

ಬೇಕರಿಯನ್ನು ನಡೆಸುವ ವ್ಯಾಪಾರಿಯು ಅಥವಾ ಸರ್ಕಾರವು ಅಧಿಸೂಚಿಸ ಬಹುದಾದಂಥ ಯಾವುದೇ ಇತರ ವರ್ಗದ ವ್ಯಾಪಾರಿಯು

(ಡಿ) ಗ್ರಾನೈಟ್ ಅಥವಾ ಇತರ ಯಾವುದೇ ಜಲ್ಲಿ ಕಲ್ಲುಗಳನ್ನು ಉತ್ಪಾದಿಸುವ ಯಾಂತ್ರೀಕೃತ ಕ್ರಷಿಂಗ್ ಘಟಕವನ್ನು ಹೊಂದಿರುವ ಯಾವೊಬ್ಬ ವ್ಯಾಪಾರಿಯು

– ಈ ಅಧಿನಿಯಮದ ಅಡಿಯಲ್ಲಿ ತಾನು ಸಂದಾಯ ಮಾಡಬೇಕಾದ ತೆರಿಗೆಯ ನಿವ್ವಳ ಮೊತ್ತಕ್ಕೆ ಬದಲು, ರಾಜಿಯ ರೂಪದಲ್ಲಿ ತನ್ನ ವಹಿವಾಟಿನ ಮೇಲೆ ಅಥವಾ ಕಾಮಗಾರಿಗಳ ಕರಾರಗಳನ್ನು ಕೈಗೊಂಡಿದ್ದಾಗಿನ ಒಟ್ಟು ಪ್ರತಿಫಲದ ಮೇಲೆ ನಿಯಮಿಸಬಹುದಾದಂತೆ ಶೇಕಡಾ ಐದರಷ್ಟನ್ನು ಮೀರದ ಅಥವಾ ಪ್ರತಿ ಕ್ರಷಿಂಗ್ ಯಂತ್ರಕ್ಕೆ ಸರ್ಕಾರವು ಅಧಿಸೂಚಿಸಬಹುದಾದಂತೆ ವರ್ಷಕ್ಕೆ ಎರಡು ಲಕ್ಷ ರೂಪಾಯಿಗಳಿಗೆ ಮೀರದ ಅಂಥ ದರದಲ್ಲಿ ಮೊತ್ತವನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಳ್ಳಬಹುದು

(೨) ಮೇಲಿನ (೧) ನೇ ಉಪ ಪ್ರಕರಣದ ಉದ್ದೇಶಗಳಿಗಾಗಿ ತ್ರೈಮಾಸಿಕ ಎಂಬುದು ಮಾರ್ಚ್, ಜೂನ್, ಸೆಪ್ಟಂಬ್ ಮತ್ತು ಡಿಸೆಂಬರ್ ತಿಂಗಳುಗಳ ಅಂತಿಮ ದಿನದಂದು ಮುಕ್ತಾಯಗೊಳ್ಳುವ ಯಾವುದೇ ಅವಧಿಯಾಗಿರತಕ್ಕದ್ದು

XX XX XX

(೫) (೧) ಮತ್ತು (೪) ನೇ ಉಪ ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ, –

(ಎ) ರಾಜ್ಯದ ಹೊರಗಿನಿಂದ ಅಥವಾ ಭಾರತದ ಗಡಿಯ ಹೊರಗಿನಿಂದ ಸರಕುಗಳನ್ನು ಖರೀದಿಸುವ ಅಥವಾ ಪಡೆದುಕೊಳ್ಳುವ ಕಾಮಗಾರಿಕರಾರುಗಳನ್ನು ನಿರ್ವಹಿಸುವ ಒಬ್ಬ

ವ್ಯಾಪಾರಿಯು (೧) ಉಪ ಪ್ರಕರಣದ ಅಡಿಯಲ್ಲಿ ರಜಿಮಾಡಿಕೊಳ್ಳುವುದಕ್ಕಾಗಿ ಅರ್ಹನಾಗಿರತಕ್ಕದ್ದು ಮತ್ತು (ಸರಕುಗಳಾಗಿಯಾಗಲಿ ಅಥವಾ ಇನ್ನಾವುದೇ ರೂಪದಲ್ಲಾಗಲಿ) ಅಂಥ ಸರಕುಗಳ ಸ್ವತ್ತು ಅವನು ನಿರ್ವಹಿಸಿದ ಯಾವುದೇ ಕಾಮಗಾರಿಗಳ ಕರಾರುಗಳಲ್ಲಿ ವರ್ಗಾವಣೆಯಾದರೆ, ವ್ಯಾಪಾರಿಯು, ಅಂಥ ಸರಕುಗಲ ಮೌಲ್ಯದ ಮೇಲೆ ೪ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ತೆರಿಗೆ ಸಂದಾಯಕ್ಕೆ ಗುರಿಯಾಗತಕ್ಕದ್ದು ಮತ್ತು ಅಂಥ ಮೌಲ್ಯವನ್ನು ಈ ಅಧಿನಿಯಮದ ಅಡಿಯಲ್ಲಿ ಸಂದಾಯಮಾಡತಕ್ಕ ತೆರಿಗೆಗೆ ಬದಲಾಗಿ ಅಧಿಸೂಚಿಸಲಾದಂತೆ ರಾಜಿಯ ಮೂಲಕ (೧) ನೇ ಉಪ ಪ್ರಕರಣದ ಅಡಿಯಲ್ಲಿ, ಸಂದಾಯಮಾಡತಕ್ಕ ಮೊಬಲಗು ಪಾವತಿಸಬೇಕಾದಂಥ ನಿರ್ವಹಿಸಲಾದ ಕಾಮಗಾರಿಗಳ ಕರಾರಿನ ಒಟ್ಟು ಪ್ರತಿಫಲದಿಂದ ಮುರಿದುಕೊಳ್ಳತಕ್ಕದ್ದು

(ಬಿ) ಕಾಮಗಾರಿಗಳ ಕರಾರನ್ನು ನಿರ್ವಹಿಉಸತ್ತಿರುವ ಮತ್ತು (೧) ನೇ ಉಪ ಪ್ರಕರಣದ ಅಡಿಯಲ್ಲಿ ತೆರಿಗೆ – ರಾಜಿಗಾಗಿ ಆಯ್ಕೆಮಾಡಿಕೊಂಡ ಒಬ್ಬ ವ್ಯಾಪಾರಿಯ ಸಂದರ್ಭದಲ್ಲಿ, ಪೂರ್ಣವಾಗಿ ಅಥವಾ ಭಾಗಶಃ ಕಾಮಗಾರಿಗಳ ಕರಾರನ್ನು ನಿರ್ವಹಿಸುವುದಕ್ಕಾಗಿ ಪ್ರತಿಪಲವಾಗಿ– ಒಳ– ಕರಾರುದಾರನಿಗೆ ಸಂದಾಯಮಾಡಿದ ಮೊಬಲಗಿನ ಮೇಲೆ, ರಾಜಿಯ ರೂಪದಲ್ಲಿ ಯಾವುದೇ ತೆರಿಗೆಯನ್ನು ಸಂದಾಯಮಾಡತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಅಡಿಯಲ್ಲಿ ಸಂದಾಯಮಾಡತಕ್ಕ ತೆರಿಗೆಗೆ ಬದಲಾಗಿ ರಾಜಿಯ ಮೂಲಕ (೧) ನೇ ಉಪ ಪ್ರಕರಣ ಅಡಿಯಲ್ಲಿ ಅಧಿಸೂಚಿಸಲಾದಂತೆ ಸಂಧಾಯಮಾಡತಕ್ಕ ಮೊಬಲಗಿನ ಮೇಲೆ ನಿರ್ವಹಿಸಲಾದ ಕಾಮಗಾರಿಗಳ ಕರಾರಿನ ಒಟ್ಟು ಪ್ರತಿಫಲದಿಂದ, ಅಂಥ ಒಳ–ಕರಾರುದಾರನು, ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಸಂದಾಯಮಾಡಲು

ಬದ್ಧನಾದ ನೋಂದಾಯಿತ ವ್ಯಾಪಾರಿಯಾಗಿರುವನೆಂದು ಮತ್ತು ಅಂಥ ಮೊಬಲು ಅಂಥ ಒಳ ಕರಾರುದಾರನು ದಾಖಲ್ಮಾಡಿದ ವಿವರಣ ಪತ್ರಗಳಲ್ಲಿ ಒಳಗೊಂಡಿದೆ ಎಂಬ ಬಗ್ಗೆ ರುಜುವಾತನ್ನು ಹಾಜರುಪಡಿಸುವುದಕ್ಕೆ ಒಳಪಟ್ಟು, ಮುರುಗಡೆಮಾಡತಕ್ಕದ್ದು

(ಸಿ) (೧) ನೇ ಉಪ - ಪ್ರಕರಣದ ಅಡಿಯಲ್ಲಿ ತೆರಿಗೆ-ರಾಜಿಗಾಗಿ ಆಯ್ಕೆಮಾಡಿಕೊಂಡ ತರುವಾಯ ಕಾಮಗಾರಿಗಳ ಕರಾರನ್ನು ನಿರ್ವಹಿಸುತ್ತಿರುವ ಒಬ್ಬ ವ್ಯಾಪಾರಿಯ ಸಂದರ್ಭದಲ್ಲಿ ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಬದ್ಧವಾದ ಯಾವುದೇ ಸರಕುಗಳನ್ನು ತಾನು ನಿರ್ವಹಿಸಿದ್ದ ಯಾವುದೇ ಕಾಮಗಾರಿ ಕರಾರಿನಲ್ಲಿ ಅಂಥ ಸರಕುಗಳ ಸ್ವತ್ತನ್ನು (ಸರಕುಗಳಾಗಿಯಾಗಲಿ ಅಥವಾ ಯಾವುದಾದರೂ ಇತರ ರೂಪದಲ್ಲಾಗಲಿ) ವರ್ಗಾವಣೆ ಮಾಡುವ ರೀತಿಯಲ್ಲಲ್ಲದೆ, ಮಾರಾಟಮಾಡಿದರೆ, ಅಂಥ ಸರಕುಗಲ ಮೌಲ್ಯದ ಮೇಲೆ, ತಾನು ಮಾಡಿದ ಅಂಥ ಸರಕುಗಳ ಖರೀದಿಯ ಮೇಲೆ ಹೂಡುವಳಿ ತೆರಿಗೆಗಾಗಿ ಯಾವುದೇ ಮುಗುಗಡೆ ಮಾಡದೇ ೪ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ತೆರಿಗೆ ಸಂದಾಯಮಾಡಲು ಬದ್ಧನಾಗಿರತಕ್ಕದ್ದು

ಲ (೧) ನೇ ಉಪ ಪ್ರಕರಣದ (ಎ) ಅಥವಾ (ಸಿ) ಖಂಡದ ಅಡಿಯಲ್ಲಿ ತೆರಿಗೆ ರಾಜಿಗಾಗಿ ಆಯ್ಕೆ ಮಾಡಿಕೊಳ್ಳುವ ಒಬ್ಬ ವ್ಯಾಪಾರಿಯ ಸಂದರ್ಭದಲ್ಲಿ, ೩ನೇ ಪ್ರಕರಣದ (೨) ನೇಉಪ ಪ್ರಕರಣದ ಅಡಿಯಲ್ಲಿ ತೆರಿಗೆಗೆ ವಿಧಿಸುವುದಕ್ಕೆ ಬದ್ಧವಾದ ವಹಿವಾಟನ್ನು, ಅಧಿನಿಯಮದ ಅಡಿಯಲ್ಲಿ ಸಂದಾಯಮಾಡತಕ್ಕ ತೆರಿಗೆ ಬದಲಾಗಿ ರಾಜಿಯ ರೂಪದಲ್ಲಿ ಯಾವ ವಹಿವಾಟಿನ ಮೇಲೆ (೧) ನೇ ಉಪ ಪ್ರಕರಣದ ಅಡಿಯಲ್ಲಿ ಮೊಬಲಗನ್ನು ಸಂದಾಯಮಾಡತಕ್ಕದೆಂದು ಅಧಿಸೂಚಿಸಲಾಗಿದೆಯೋ ಆ ವಹಿವಾಟಿನಿಂದ ಮುರುಗಡೆಮಾಡತಕ್ಕದ್ದು

XX XX XX

೧೭ ಭಾಗಶಃ ರಿಯಾಯಿತಿ - ಹೂಡುವಳಿ ತೆರಿಗೆಯನ್ನು ಕಡಿತಗೊಳಿಸುವ ಒಬ್ಬ ನೋಂದಾಯಿತ ವ್ಯಾಪಾರಿಯು, -

(೧) ತೆರಿಗೆಗೆ ಗುರಿಯಾಗತಕ್ಕ ಸರಕುಗಳನ್ನು ಮತ್ತು ೫ನೇ ಪ್ರಕರಣದ ಅಡಿಯಲ್ಲಿ ವಿನಾಯಿತಿಗೊಳಿಸಿದ ಸರಕುಗಳನ್ನು ಮಾರಾಟ ಮಾಡಿದರೆ, ಅಥವಾ

(೨)ಮೇಲಿನ (೧) ನೇ ಖಂಡದಲ್ಲಿ ಉಲ್ಲೇಖಿಸಿದ ಮಾರಾಟಗಳಿಗೆ ಹೆಚ್ಚುವರಿಯಾಗಿ, ತೆರಿಗೆಗೆ ಗುರಿಯಾಗತಕ್ಕ ಸರಕುಗಳನ್ನು ಅಥವಾ ೫ನೇ ಪ್ರಕರಣದ ಅಡಿಯಲ್ಲಿ ವಿನಾಯಿತಿ ಪಡೆದ ಸರಕುಗಳನ್ನು ಅಂತರ ರಾಜ್ಯ ವ್ಯಾಪಾರ ಕ್ರಮದಲ್ಲಿ ಮಾರಾಟ ಅಥವಾ ಖರೀದಿಯ ನೇರ ಪರಿಣಾವಾಗಿರದಂತೆ ರಾಜ್ಯದ ಹೊರಗೆ ರವಾನೆ ಮಾಡಿದರೆ, ಅಥವಾ

(೩) ಯಾವುದೇ ಇತರ ಉದ್ದೆಸಕ್ಕಾಗಿನ ಖರೀದಿ ಮಾಡಿದ ಹೂಡುವಳಿಗಳನ್ನು, (ಸರಕುಗಳ ಮಾರಾಟ, ತಯಾರಿಕೆ, ಸಂಸ್ಕರಣೆ, ಪ್ಯಾಕಿಂಗ್ ಅಥವಾ ದಾಸ್ತಾನು ಮಾಡುವುದನ್ನು ಹೊರತುಪಡಿಸಿ) ತನ್ನ ವ್ಯಾಪಾರ ಕ್ರಮದಲ್ಲಿ ಬಳಸುವುದಕ್ಕೆ ಹೆಚ್ಚಿಗೆಯಾಗಿ ಬಳಸಿದರೆ,

- ಸರಕುಗಳ ಅಂಥ ಮಾರಾಟಗಳು ಮತ್ತು ರವಾನೆಗಳು ಅಥವಾ ಅಂಥ ಉದ್ದೇಸದ ನಡುವೆ ಕಡಿತಮಾಡಬಹುದಾದ ಹೂಡುವಳಿ ತೆರಿಗೆಯ ಹಂಚಿಕೆಗಳನ್ನು ಮತ್ತು ವರ್ಗೀಕರಣ (ಅಟ್ರಿಬ್ಯೂಷನ್) ಗಳನ್ನು ನಿಯಮಗಳಿಗೆ ಅಥವಾ ಆಯುಕ್ತನಿಂದ ಅಥವಾ ಯಾವೊಬ್ಬ ಇತರ ಪ್ರಧಿಕೃತ ವ್ಯಕ್ತಿಯು ಅನುಮೋದಿಸುವ . ವಿಶೇಷ ವಿಧಾನಗಳಿಗೆ ಅನುಸಾರವಾಗಿ ಮಾಡತಕ್ಕುದ್ದು ಮತ್ತು ಹೆಚ್ಚುವರಿಯಾಗಿ ಕಡಿತಗೊಳಿಸಿದ ಯಾವುದೇ ಹೂಡುವಳಿ ತೆರಿಗೆಯನ್ನು ತಕ್ಷಣವೇ ಮರುಸಂದಾಯ ಮಾಡತಕ್ಕದ್ದು

XX XX XX

೧೮ ಕ್ಯಾಂಟೀನುಗಳ ಸಂದರ್ಭದಲ್ಲಿ ಮೂಲದಲ್ಲಿ ತೆರಿಗೆಯನ್ನು ಮುರಿದುಕೊಳ್ಳುವುದು – (೧) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಒಂದು ಕಾರ್ಖಾನೆ ಅಥವಾ ಇತರ ಕೈಗಾರಿಕಾ ಉದ್ಯಮವು ಅಥವಾ ಯಾವುದೇ ಇತರ ಉದ್ಯಮ ಸಂಸ್ಥೆಯು, ಒಂದು ಕ್ಯಾಂಟೀನನ್ನು ಅಥವಾ ಕೆಫಿಟೇರಿಯವನ್ನು ಅಥವಾ ರೆಸ್ಟೋರೆಂಟನ್ನು ಅಥವಾ ಇತರ ಅದೇ ಬಗೆಯ ಸೌಲಭ್ಯ ಒಬ್ಬ ವ್ಯಾಪಾರಿಯ ಮೂಲಕ, ಅಂಥ ಕಾರ್ಖಾನೆಗಳ ಅಥವಾ ಕೈಗಾರಿಕಾ ಉದ್ದಯಮಗಳ ಅಥವಾ ಉದ್ಯಮ ಸಂಸ್ಥೆಗಳ ನೌಕರರಿಗೆ ಒಂದು ಸೌಕರ್ಯವಾಗಿ, ನಡೆಸುತ್ತಿದ್ದರೆ, ತಮ್ಮ ನೌಕರರಿಗೆ ಆಹಾರ ಮತ್ತು ಪಾನೀಯ ವಸ್ತುಗಳ ಮಾರಾಟದ ಸಂಬಂಧದಲ್ಲಿ, ಯಾವುದೇ ಹೆಸರಿನಿಂದ ಕರೆಯಲಾಗುವ ಅವರ ಕೊಡುಗೆಯಾಗಿ ಅಂಥ ವ್ಯಾಪಾರಿಗೆ ಅವರು ಸಂದಾಯಮಾಡತಕ್ಕ ಯಾವುದೇ ಮೊಬಲಗಿನಿಂದ ನೌಕರರಿಂದ ಅಂಥ ವ್ಯಾಪಾರಿಗೆ ಅವರು ಸಂದಾಯಮಾಡತಕ್ಕ ಯಾವುದೇ ಮೊಬಲಗಿನಿಂದ ನೌಕರರಿಂದ ಅಂಥ ವ್ಯಾಪಾರಿಯು ಸ್ವೀಕರಿಸಿದ ಅಥವಾ ಸ್ವೀಕರಿಸತಕ್ಕ ಒಟ್ಟು ಮಾರಾಟ ಬೆಲೆಯ ಮತ್ತು ಅಂಥ ವ್ಯಾಪಾರಿಗೆ ಅಂಥ ಕಾರ್ಖಾನೆಗಲು ಅಥವಾ ಕೈಗಾರಿಕಾ ಉದ್ಯಮಗಳು ಅಥವಾ ಉದ್ಯಮ ಸಂಸ್ಥೆಗಳು ಸಂದಾಯಮಾಡಿದ ಅಥವಾ ಸಂದಾಯಮಾಡತಕ್ಕ ಕೊಡುಗೆಯ ಶೇಕಡಾ ನಾಲ್ಕರ ದರದಲ್ಲಿ ಮೊಬಲಗನ್ನು ಮುರುಗಡೆಮಾಡತಕ್ಕದ್ದು

XX XX XX

೧೯ ಹೂಡುವಳಿ ತೆರಿಗೆಯನ್ನು ಕಡಿತಗೊಳಿಸಿದ ತರುವಾಯ ಬಳಕೆಯಲ್ಲಿಯ ವ್ಯತ್ಯಾಸ – (೧) ಯಾವೊಬ್ಬ ನೋಂದಾಯಿತ ವ್ಯಾಪಾರಿಯು ಯಾವುದೇ ಸರಕುಗಳ ಮೇಲೆ ಹೂಡುವಳಿ ತೆರಿಗೆಗಳನ್ನು ಕಡಿತಗೊಳಿಸಿದ್ದರೆ ಮತ್ತು ಆ ಸರಕುಗಳನ್ನು ತನ್ನ ವ್ಯಾಪಾರ ಕ್ರಮದಲ್ಲಿ ಬಳಸಿರದಿದ್ದರೆ ಅಥವಾ ಅವುಗಳು ಕಳೆದಿದ್ದರೆ ಅಥವಾ ಹಾನಿ ಹೊಂದಿದ್ದರೆ,

ಕಡಿತಗೊಳಿಸಿದ ಹೂಡುವಳಿ ತೆರಿಗೆಯು ಆ ಸರಕುಗಳನ್ನು ಅಂಥ ಇತರ ಉಪಯೋಗಕ್ಕಾಗಿ ಬಳಸಿದ ದಿನಾಂಕದಿಂದ ಮುಂದಿನ ಅವಧಿಯಲ್ಲಿ ಮರುಸಂದಾಯ ಯೋಗ್ಯವಾಗುತ್ತದೆ

(೨) ಅಂಥ ಸರಕುಗಳನ್ನು ಬಳಕೆಯ ವ್ಯತ್ಯಾಸಕ್ಕೆ ಪೂರ್ವದಲ್ಲಿ ತೆರಿಗೆಗೆ ಗುರಿಯಾಗುವ ಸರಕುಗಳ ಮಾರಾಟದಲ್ಲಿ ಅಥವಾ ಭಾರತದ ಸರಹದ್ದಿನ ಹೊರಗೆ ರಫ್ತಿನ ಕ್ರಮದಲ್ಲಿ ಯಾವುದೇ ಸರಕುಗಳ ಮಾರಾಟದಲ್ಲಿ ಪೂರ್ಣವಾಗಿಯಾಗಲಿ ಅಥವಾ ಮುಖ್ಯವಾಗಿ ಉಪಯೋಗಿಸಿದ್ದರೆ ಅಥವಾ ಉಪಯೋಗಿಸಲು ಉದ್ದೇಶಿಸಿದ್ದರೆ, ಬಳಕೆಯ ವ್ಯತ್ಯಾಸದ ಸಮಯದಲ್ಲಿ ಅಂಥ ಸರಕುಗಳ ಪ್ರಚಲಿತ ಮಾರುಕಟ್ಟೆ ಮೌಲ್ಯದ ಮೇಲೆ ತೆರಗೆಯನ್ನು ಲೆಕ್ಕ ಹಾಕತಕ್ಕದ್ದು

೨೦ ರಫ್ತು ಮತ್ತು ಅಂತರ ರಾಜ್ಯ ಮಾರಾಟಗಳ ಮೇಲೆ ಹೂಡುವಳಿ ತೆರಿಗೆಯ ಕಡಿತ, ಇತ್ಯಾದಿ – (೧) ಈ ಅಧಿನಿಯಮದ ಅಡಿಯಲ್ಲಿ,-

(ಎ)ಭಾರತದ ಅರಹದ್ದಿನ ಹೊರಗೆ ರಫ್ತು ಕ್ರಮದಲ್ಲಿ ಯಾವುದೇಸರಕುಗಳ ಮಾರಾಟದ ಅಥವಾ

(ಬಿ)ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಗುರಿಯಾಗುವ ಯಾವುದೇ ಸರಕುಗಳ ಅಂತರ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯದ ಕ್ರಮದಲ್ಲಿ ಮಾಡಿದ ಮಾರಾಟದ, ಅಥವಾ

– ಸಂಬಂಧದಲ್ಲಿಯ ಹೂಡುವಳಿಗಳ ಖರೀದಿಯ ಮೇಲೆ ಯಾವೊಬ್ಬ ವ್ಯಾಪಾರಿಯು ಸಂದಾಯ ಮಾಡಿದ ತೆರಿಗೆಯನ್ನು, ಅಂಥ ವ್ಯಾಪಾರಿಯು ಸಂದಾಯ ಮಾಡಬೇಕಾದ ಹುಟ್ಟುವಳಿ ತೆರಿಗೆಯಿಂದ ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ೧೦ನೇ ಪ್ರಕರಣದಲ್ಲಿಯ ಉಪಬಂಧಗಳಿಗೆ ಅನುಸಾರವಾಗಿ ಕಡಿತಮಾಡತಕ್ಕದ್ದು

(೨) ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಿದ ಪ್ರಾಧಿಕಾರಗಳ ಮೂಲಕ ಸ್ಥಾಪಿಸಲಾದ ಯಾವುದೇ ವಿಶೇಷ ಆರ್ಥಿಕ

ವಲಯ ಯೋಜನೆಯಲ್ಲಿ ಇರುವಂಥ ಒಂದು ಘಟಕವಾಗಿರುವ ಒಬ್ಬ ನೋಂದಾಯಿತ ವ್ಯಾಪಾರಿಯು ಹೂಡುವಳಿಗಳ ಖರೀದಿಯ ಮೇಲೆ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಿದ ತೆರಿಗೆಯನ್ನು ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ೧೦ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾದಂತೆ, ಅಂಥ ವ್ಯಾಪರಿಯು ಸಂದಾಯ ಮಾಡತಕ್ಕ ಹುಟ್ಟುವಳಿ ತೆರಿಗೆಯಿಂದ ವಜಾಮಾಡತಕ್ಕದ್ದು

XX XX XX

೨೧ ತೆರಿಗೆಯನ್ನು ಮರುಪಾವತಿಸುವುದು , - ವಿಶ್ವ ಸಂಸ್ಥೆ ಮತ್ತು ಯಾವುದೇ ಇತರ ದೇಶಗಳ ಕೌನ್ಸಲ್ ಕಚೇರಿಗಳ ಅಥವಾ ಎಂಬೇಸಿಗಳ ಪರಿಣಿತ ಏಜೆನ್ಸಿಗಳಿಂದ ಮಾಡಿದ ಖರೀದಿಗಳ ಮೇಲೆ ಈ ಅಧಿನಿಯಮದ ಅಡಿಯಲ್ಲಿ ಸಂಗ್ರಹಿಸಿದ ತೆರಿಗೆಯನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಮರುಪಾವತಿಮಾಡತಕ್ಕದ್ದು

XX XX XX

೨೫ ನೋಂದಣಿ (೧) ೨೨ ಅಥವಾ ೨೩ನೇ ಪ್ರಕರಣದ ಅಡಿಯಲ್ಲಿ ನೋಂದಣಿ ಮಾಡಿಸಲು ಅರ್ಜಿ ನಮೂನೆ ಅರ್ಜಿಯನ್ನು ಸಲ್ಲಿಸಲು ಸಮಯ ಮತ್ತು ವಿಧಾನವನ್ನು ಹಾಗೂ ಸಂದಾಯ ಮಾಡಬೇಕಾದ ಶುಲ್ಕ ಇವುಗಳು ನಿಯಮಿಸಬಹುದಾದಂತೆ ಇರತಕ್ಕದ್ದು

(೨) ೨೨ . ಅಥವಾ ೨೩ನೇ ಪ್ರಕರಣದ ಅಡಿಯಲ್ಲಿ ನೋಂದಣಿಗಾಗಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ ನಿಯಮಿಸಲಾದ ಪ್ರಾಧಿಕಾರವು, ಅರ್ಜಿದಾರನು ನಿಜವಾದ ವ್ಯಾಪಾರಿಯೆಂದು ಹಾಗೂ ಆತನು ಈ ಅಧಿನಿಯಮದ ಅಗತ್ಯತೆಗಳನ್ನು ಪೂರ್ಣಗೊಳಿಸುತ್ತಾನೆಂದು ತನಗೆ ಮನವರಿಕೆಯಾದರೆ ಅಂಥ ಅರ್ಜಿಯನ್ನು ಮಾಡಿಕೊಂಡ ತಿಂಗಳ

ತರುವಾಯದ ತಿಂಗಳ ಮೊದಲನೇ ದಿನದಿಂದ ಅಥವಾ ಪರಸ್ಪತರ ಒಪ್ಪಿಕೊಳ್ಳಬಹುದಾದ ಅಂಥ ಮೊದಲ ದಿನದಿಂದ ಜಾರಿಗೆ ಬರುವಂತೆ ಯಾವೊಬ್ಬ ಅಂಥ ವ್ಯಾಪಾರಿಯನ್ನು ನೋಂದಾಯಿಸತಕ್ಕದ್ದು ಮತ್ತು ಆತನಿಗೆ ನೋಂದಣಿಯ ಬಗ್ಗೆ ಒಂದು ಪ್ರಮಾಣ ಪತ್ರವನ್ನು ನೀಡತಕ್ಕದ್ದು

XX XX XX

೨೭ ನೋಂದಣಿಯ ರದ್ದಿಯಾತಿ – (೧) ಈ ಮುಂದಿನ ಯಾವುದೇ ಸಂದರ್ಭದಲ್ಲಿ ಎಂದರೆ, –

(ಎ) ಒಬ್ಬ ನೋಂದಾಯಿತಿ ವ್ಯಾಪಾರಿಯು ಯಾವುದೇ ವ್ಯಾಪಾರವನ್ನು ಮುಂದುವರೆಸದಿದ್ದಲ್ಲಿ, ಪೂರ್ಣವಾಗಿ ವರ್ಗಾಯಿಸಿದ್ದಲ್ಲಿ ಅಥವಾ ಅನ್ಯಥಾ ವಿಲೆ ಮಾಡಿದ್ದಲ್ಲಿ, ಅಥವಾ

XX XX XX

(೩) ನೊಮದಣಿಯ ರದ್ದಾದ ಮೇಲೆ, ನಿರ್ದಿಷ್ಟಪಡಿಸಿದಂತೆ ವ್ಯಾಪಾರಗಳನ್ನು ಪುರ್ಣವಾಗಿ ಇನ್ನೊಬ್ಬ ನೋಂದಾಯಿತ ವ್ಯಾಪಾರಿಗೆ ವರ್ಗಾವಣೆ ಮಾಡಿದ್ದನ್ನು ಹೊರತುಪಡಿಸಿ, ಹೂಡುವಳಿ ತೆರಿಗೆಯು ಕಡಿತದ ಪ್ರಯೋಜನವನ್ನು ಪಡೆದ ವ್ಯಾಪಾರಿಯು ಆತನು ಹೊಂದಿದ ತೆರಿಗೆಗೆ ಗುರಿಯಾಗತಕ್ಕ ಯಾವುದೇ ಸರಕುಗಳಿಗೆ ಪ್ರಚಲಿತ ಮಾಕಟ್ಟೆ ಬೆಲೆಯ ಮೇಲೆ ತೆರಿಗೆಯನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು

೨೯ ತೆರಿಗೆ ಬೆಲೆಪಟ್ಟಿ ಮತ್ತು ಮಾರಾಟ ಬಿಲ್ಲುಗಳು – (೧) ಒಬ್ಬ ನೊಂದಾಯಿತ ವ್ಯಾಪಾರಿಯು, ತೆರಿಗೆಗೆ ಗುರಿಯಾಗತಕ್ಕ ಸರಕುಗಳ ಮಾರಾಟ ಮಾಡಿದ್ದರೆ ಅಥವಾ ಯಾವುದೇ ತೆರಿಗೆಗೆ ಗುರಿಯಾಗತಕ್ಕ ಸರಕುಗಳೊಂದಿಗೆ ವಿನಾಯಿತಿ ಪಡೆದ ಸರಕುಗಳನ್ನು ಮಾರಾಟ ಮಾಡಿದ್ದರೆ, ಅವನು ಮಾರಾಟದ ಸಮಯದಲ್ಲಿ, ನಿಯಮಿಸಬಹುದಾದ ವಿವರಗಳನ್ನು

ಒಳಗೊಂಡಂತೆ, ಮಾರಾಟಕ್ಕಾಗಿ ತೆರಿಗೆ ಬಲೆ ಪಟ್ಟಿಯ ಮೂಲ ಪ್ರತಿ ಎಂಬುದಾಗಿ ಗುರುತು ಮಾಡಿದ ಪಟ್ಟಿಯೊಂದನ್ನು ಒದಗಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಇಟ್ಟುಕೊಳ್ಳತಕ್ಕದ್ದು

(೨) ತೆರಿಗೆ ಬೆಲೆಪಟ್ಟಿಯ ಮೂಲಪ್ರತಿ ಎಂಬುದಾಗಿ ಗುರುತ ಮಾಡಿದ ಪಟ್ಟಿಯನ್ನು (೧) ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಂದರ್ಭಗಳನ್ನು ಹೊರತುಪಡಿಸಿ ಇತರೆ ಸಂದರ್ಭಗಳಲ್ಲಿ ಯಾವೊಬ್ಬ ನೋಂದಾಯಿತ ವ್ಯಾಪಾರಿಗೆ ನೀಡತಕ್ಕದ್ದಲ್ಲ ಮತ್ತು ಮೂಲ ಪ್ರತಿಯು ಕಳೆದುಹೋದ ಸಂದರ್ಭದ್ಲಲಿ ಅಂಥ ನೋಂದಾಯಿತ ವ್ಯಾಪಾರಿಯು ಹಾಗೆ ಕೋರಿಕೊಂಡಲ್ಲಿ ಅದರ ಒಂದು ಪ್ರತಿಯನ್ನು ನೀಡತಕ್ಕದ್ದು

(೩) ತೆರಿಗೆಗೆ ಗುರಿಯಾಗದಿರುವ ಸರಕುಗಳನ್ನು ಮಾರಾಟ ಮಾಡುವ ಒಬ್ಬ ನೋಂದಾಯಿತ ವ್ಯಾಪಾರಿಯು ಅಥವಾ ೧೫ನೇ ಪ್ರಕರಣದ ಅಡಿಯಲ್ಲಿ ರಜಿಯ ಮೂಲಕ ತೆರಿಗೆ ಸಂದಾಯ ಮಾಡಲು ಆಯ್ಕೆ ಮಾಡಿಕೊಂಡ, ನಿಯಿಸಬಹುದಾದ ಮೌಲ್ಯಕ್ಕಿಂತ ಹೆಚ್ಚಿನ ಸರಕುಗಳನ್ನು ಮಾರಾಟ ಮಾಡಿದ, ಒಬ್ಬ ವ್ಯಾಪಾರಿಯು ಅಥವಾ ೧೬ನೇ ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಅನುಮತಿ ನೀಡಲಾದ ಒಬ್ಬ ವ್ಯಾಪಾರಿಯು, ನಿಯಮಿಸಬಹುದಾದ ವಿವರಗಳನ್ನೊಳಗೊಂಡ ಮಾರಾಟ ಬಿಲ್ಲನ್ನು ನೀಡತಕ್ಕದ್ದು

XX XX XX

೩೧ ಲೆಕ್ಕ ಪತ್ರಗಳು –(೧) XXXX XX

(೪) ಯಾರ ತೆರಿಗೆ ಸಂದಾಯ ಮಾಡಬೇಕಾದ ವಹಿವಾಟು ಒಂದು ವರ್ಷದಲ್ಲಿ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಮೀರುವುದೋ, ಆ ಪ್ರತಿಯೊಬ್ಬ ವ್ಯಾಪಾರಿಯು, ತನ್ನ ಲೆಕ್ಕಪತ್ರಗಳನ್ನು ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಮತ್ತು ಅಂಥ ಮಿತಿಗಳಿಗೆ ಒಳಪಟ್ಟು ಒಬ್ಬ ಚಾರ್ಟೆಡ್ ಅಕೌಂಟೆಂಟ್ ಅಥವ ಒಬ್ಬ ತೆರಿಗೆ ವೃತ್ತಿದಾರನಿಂದ ಪರಿಶೋಧಿಸತಕ್ಕದ್ದು ಮತ್ತು ಪರಿಶೋಧಿತ ಲೆಕ್ಕಪತರಗಳ ವಿವರಣ ಪಟ್ಟಿಯ ಒಂದು ಪ್ರತಿಯನ್ನು ಮತ್ತು ನಿಯಮಿಸಲಾದ ದಸ್ತಾವೇಜುಗಳನ್ನು, ನಿಯಮಿಸಲಾದ ರೀತಿಯಲ್ಲಿ ನಿಯಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು

(೫) ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು ತನ್ನ ವಹಿವಾಟಿಗೆ ಸಂಬಂಧಿಸಿದಂಥ ವಿವರಪತ್ರವನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಅಂಥ ವಿವರಗಣನ್ನು ತಿಳಿಸಿ ಹಾಗೂ ಅಂಥ ಅವಧಿಯೊಳಗೆ ನಿಯಮಿಸಲಾದ ಪ್ರಾಧಿಕಾಋಕ್ಕೆ ಪ್ರತಿವರ್ಷವೂ ಸಲ್ಲಿಸತಕ್ಕದ್ದು

XX XX XX

೩೮ ತೆರಗೆಯ ನಿಧಾರಣೆ (೧) ವ್ಯಾಪಾರಿಯು, ಯಾವುದೇ ಅವಧಿಗಾಗಿ ಸಲ್ಲಿಸಿದ ವಿವರ ಪಟ್ಟಿಯ ಸಮರ್ಥನೆಗಾಗಿ ನಿಯಮಿಸಲಾದ ಪ್ರಾಧಿಕಾರದ ಮುಂದೆ ಲೆಕ್ಕಪತ್ರಗಳನ್ನು ಹಾಜರುಪಡಿಸಬೇಕಾಗಿದೆ ಎಂಬುದಾಗಿ ಆಯುಕ್ತನು ಅಧಿಸುಚಿಸಬಹುದಾದ ಪ್ರಕರಣಗಳಲ್ಲಿ ಹೊರತು, ೩೫ನೇ ಪ್ರಕರಣದ ಅಡಿಯಲ್ಲಿ ವ್ಯಾಪಾರಿಯು ಸಲ್ಲಿಸಿದ ವಿವರ ಪಟ್ಟಿಯ ಆಧಾರದ ಮೇಲೆ ಆತನ ತೆರಿಗೆಯನ್ನು ನಿರ್ಧರಿಸಲಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಲೆಕ್ಕಪತ್ರ ಹಾಜರಪಡಿಸಿದ ಸಂದರ್ಭದಲ್ಲಿ ನಿಯಮಿಸಲಾದ ಪ್ರಾಧಿಕಾರವು–

(ಎ) ಸಲ್ಲಿಸಿದ ವಿವರ ಪಟ್ಟಿಯ ಸರಿಯಾಗಿದೆ ಮತ್ತು ಸಂಪೂರ್ಣವಾಗಿದೆ ಎಂದು ಮನಗಂಡಲ್ಲಿ ಸಲ್ಲಿಸಿದ ವಿವರಪಟ್ಟಿಯ ಆಧಾರದ ಮೇಲೆ ಅಂಥ ವ್ಯಾಪಾರಿಯ,-

ತೆರಿಗೆ ನಿರ್ಧರಣೆಗೆ ಮುಂದುವರೆಯತಕ್ಕದ್ದು, ಅಥವಾ

(ಬಿ) ಸಲ್ಲಿಸಿದ ವಿವರ ಪಟ್ಟಿಯು ಸರಿಯಾಗಿಲ್ಲವೆಂದು ಅಥವಾ ಪೂರ್ಣವಾಗಿಲ್ಲವೆಂದು ಕುಡುಂಬಂದಲ್ಲಿ, ತನ್ನ ಅತ್ಯುತ್ತಮ ವಿವೇಚನೆಯಲ್ಲಿ ತೆರಿಗೆ ನಿರ್ಧರಣೆಯನ್ನು, ಅಂಥ ನಿರ್ಧರಣೆ ವಿರುದ್ಧ ಬರಹದಲ್ಲಿ ಕಾರಣವನ್ನು ತೋರಿಸಲು ಅಂಥ ವ್ಯಾಪಾರಿಗೆ ಅವಕಾಶವನ್ನು ನೀಡಿದ ಮೇಲೆ, ಮಾಡಲು ಮುಂದುವರಿಯತಕ್ಕದ್ದು ಮತ್ತು ಅದರಲ್ಲಿ ಯಾವುದೇ ಹೆಚ್ಚುವರಿ ನಿರ್ಧರಣೆಯಾದ ತೆರಿಗೆಯನ್ನು ಅಂಥ ನಿರ್ಧರಣೆಯನ್ನು ವ್ಯಾಪಾರಿಗೆ ಜಾರಿಮಾಡಿದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ವ್ಯಾಪಾರಿಯು ಸಂದಾಯಿಸತಕ್ಕದ್ದು

XX XX XX

(೫) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಒಬ್ಬ ವ್ಯಾಪಾರಿಯ ಅಥವಾ ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾಗಲು ಬದ್ಧನಾದ ವ್ಯಾಪಾರಿಯ ಸಂಬಂಧದಲ್ಲಿ, ನಿಯಮಿಸಲಾದ ಪ್ರಾಧಿಕಾರವು, ತೆರಿಗೆಗೆ ಬುದ್ಧನಾಗಿರುವನೆಂದು ತೋರಿಸುವ ಯಾವುದೇ ಸಾಕ್ಷ್ಯವು ತನ್ನ ಗಮನಕ್ಕೆ ಬಂದ ಮೇಲೆ ಅಂಥ ವ್ಯಾಪಾರಿಯು, ಹಾಗೆ ನಿರ್ಧರಿಸಲಾದ ಅಥವಾ ವಿಧಿಸಲಾದ ಅಥವಾ ಸಂದಾಯಮಾಡತಕ್ಕ ಯಾವುದೇ ತೆರಿಗೆ, ದಂಡ ಅಥವಾ ಬಡ್ಡಿಯನ್ನು ಸಂಗಾಯ ಮಾಡಲು ತಪ್ಪುವನೆಂದು ನಂಬಲು ಕಾರಣ ಇದೆ ಎಂದು ನಿಯಮಿಸಲಾದ ಪ್ರಾಧಿಕಾರವು ಅಭಿಪ್ರಾಯಪಟ್ಟರೆ ಆ ವ್ಯಾಪಾರಿಗೆ ರಕ್ಷಣಾತ್ಮಕ ತೆರಿಗೆ ನಿರ್ಧರಣೆಯನ್ನು ಮಾಡಬಹುದು ಹಾಗೂ ಅಂಥ ತೆರಿಗೆ, ದಂಡ ಅಥವಾ ಬಡ್ಡಿಯನ್ನು ಕೂಡಲೇ ಸಂದಾಯ ಮಾಡತಕ್ಕದ್ದು

(೬) ಈ ಅಧಿನಿಯಮದಲ್ಲಿ ಏನೇ ಇದ್ದರೂ, ವ್ಯಾಪಾರಿಯು ಒಂದು ನಿಗಮಿತ ನಿಕಾಯವಾಗಿದ್ದಲ್ಲಿ ಮತ್ತು ಒಂದಕ್ಕಿಂತ ಹೆಚ್ಚು ವ್ಯವಹಾರದ ಸ್ಥಳಗಳನ್ನು ಹೊಂದಿದ್ದಲ್ಲಿ, ಆಯುಕ್ತನು, ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಮತ್ತು ವ್ಯಾಪಾರಿಯ ಸಮ್ಮತಿಯೊಡನೆ ವ್ಯವಹಾರಗಳ ಅಂಥ ಪ್ರತಿಯೊಂದು ಪ್ರದೇಶವನ್ನು ತೆರಿಗೆ ವಿಧಿಸುವಿಕೆ, ನಿರ್ಧರಣೆ, ಮತ್ತು ಸಂಗ್ರಹಣೆಯ ಉದ್ದೇಶಗಳಿಗಾಗಿ ಪ್ರತ್ಯೇಕ ಘಟಕಗಳೆಂದು ಪರಿಗಣಿಸತಕ್ಕದ್ದು ಮತ್ತು ತದನಂತರ ನೋಂದಣಿ ವಿವರ ಪಟ್ಟಿಕೆಗಳ ಸಲ್ಲಿಕೆ ತೆರಿಗೆ ನಿರ್ಧರಣೆ ಮತ್ತು ತೆರಿಗೆ ಸಂಗ್ರಹಣೆಗೆ ಸಂಬಂಧಿಸಿದಂತೆ ಈ ಅಧಿನಿಯಮದ ಎಲ್ಲಾ ಉಪಬಂಧನಗಳನು ಅಂಥ ವ್ಯವಹಾರ ಸ್ಥಳಗಳು ಪ್ರತ್ಯೇಕ ಘಟಕಗಳಾಗಿದ್ದರೆ ಹೇಗೋ ಹಾಗೆ ಅವುಗಳಿಗೆ ಅನ್ವಯವಾಗತಕ್ಕದ್ದು

XX XX XX

೩೯ ತೆರಿಗೆಯ ಮರು ನಿರ್ಧರಣೆ (೧) ತೆರಿಗೆ ನಿರ್ಧರಣೆ ಮಾಡಲಾಗಿದೆಯೆಂದು ಭಾವಿಸಲಾದ, ಸಂದರ್ಭದಲ್ಲಿ ನೀಡಿದ ಯಾವುದೇ ವಿವರ ಪಟ್ಟಿಯು ತಪ್ಪಾಗಿದೆ ಅಥವಾ ೩೮ನೇ ಪ್ರಕರಣದ ಅಡಿಯಲ್ಲಿ ನೀಡಿದ ಯಾವುದೇ ತೆರಿಗೆ ನಿರ್ಧರಣೆಯು, ವ್ಯಾಪಾರಿಯು ಸರಿಯಾದ ತೆರಿಗೆ ಹೊಣೆಗಾರಿಕೆಯನ್ನು ಕಡಿಮೆ ನಿರೂಪಿಸಿದೆ ಎಂದು ನಿಯಮಿಸಲಾದ ಪ್ರಾಧಿಕಾರವು ನಂಬಲು ಕಾರಣಗಳಿದ್ದಲ್ಲಿ, ಅದು,-

(ಎ) ಲಭ್ಯವಿರುವ ಯಾವುದೇ ಮಾಹಿತಿಯ ಆಧಾರದ ಮೇಲೆ, ತನ್ನ ಅತ್ಯುತ್ತಮ ವಿವೇಚನೆಯಲ್ಲಿ, ಸಂದಾಯ ಮಾಡಬೇಕಾದ ಹೆಚ್ಚುವರಿ ತೆರಿಗೆಯ ಮರು ನಿರ್ಧರಣೆ ಮಾಡಬಹುದು ಮತ್ತು ಯಾವುದೇ ದಂಡವನ್ನೂ ವಿಧಿಸಬಹುದು ಹಾಗೂ ಯಾವುದೇ ಬಡ್ಡಿಯ ಸಂದಾಯಕ್ಕೆ ಒತ್ತಾಯಿಸಬಹುದು , ಮತ್ತು

(ಬಿ) ಲಿಖಿತದಲ್ಲಿ ಅಂಥ ಮರು ನಿರ್ಧರಣೆಗೆ ಪ್ರತಿಯಾಗಿ ಕಾರಣ ತೋರಿಸಲು ವ್ಯಾಪಾರಿಗೆ ಅವಕಾಶ ನೀಡಿದ ತರುವಾಯ, ನೋಟೀಸನ್ನು ಜಾರಿಗೊಳಿಸಿದ ದಿನಾಂಕದಿಂದ ಹತ್ತು ದಿನಗಳೊಳಗೆ ತೆರಿಗೆಯನ್ನು ಸಂದಾಯ ಮಾಡತಕ್ಕದ್ದೆಂದು ಕೋರಿ ನೋಂದಾಯಿತ ವ್ಯಾಪಾರಿಗೆ ಮರು ನಿರ್ಧರಣೆಯ ಒಂದು ನೋಟೀಸನ್ನು ನೀಡತಕ್ಕದ್ದು

XX XX XX

೪೦ ತೆರಿಗೆ ನಿರ್ಧರಣೆಗಾಗಿ ಕಾಲಮಿತಿ – (೧) XX

XX XX

(೨) ೭೯ನೇ ಪ್ರಕರಣದ ಅಡಿಯಲ್ಲಿ ಶಿಕ್ಷೆಗೆ ಗುರಿಯಾಗುವಂತೆ ಯಾವುದೇ ತೆರಿಗೆಯನ್ನು ಮೋಸದಿಂದ ತಪ್ಪಿಸಿಕೊಂಡರೆ (೧) ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಐದು ವರ್ಷಗಳಿಗೆ ಎಂಬುದನ್ನು ಹತ್ತು ವರ್ಷಗಳಿಗೆ ಎಂದು ಉಲ್ಲೇಖಿಸಿದ್ದರೆ ಹೇಗೋ ಹಾಗೆ ತೆರಿಗೆ ನಿರ್ಧರಣೆಯನ್ನು ಮಾಡಬಹುದು

XX XX XX

೪೫ ಕೆಲವು ಇತರ ವ್ಯಕ್ತಿಗಳಿಂದ ತೆರಿಗೆ, ದಂಡ ಅಥವಾ ಇತರ ಯಾವುದೇ ಮೊಬಲಗಿನ ವಸೂಲಿ

(೧) XX XX XX

(೬) ಒಬ್ಬ ವ್ಯಕ್ತಿಯು, ಯಾವ ಮೊಬಲಗನ್ನು ನಿಯಮಿಸಲಾದ ಪ್ರಧಿಕಾರಕ್ಕೆ ಸಂದಾಯಮಾಡಬೇಕೆಂದು ಅಗತ್ಯಪಡಿಸಲಾಗಿದೆಯೋ ಅಥವಾ

ಯಾವ ಮೊಬಲಿಗಿಗಾಗಿ ಈ ಪ್ರಕರಣದ ಅಡಿಯಲ್ಲಿ ನಿಯಮಿಸಲಾದ ಪ್ರಧಿಕಾಖಯಕ್ಕೆ ಅವನು ವೈಯಕ್ತಿಕವಾಗಿ ಬದ್ಧನಾಗಿರುವನೋ ಆ ಯಾವುದೇ ಮೊಬಲಗು, ಸಂದಾಯವಾಗದೇ ಉಳಿದಿದ್ದರೆ ಸದರಿ ವ್ಯಕ್ತಿಯ ಸ್ವತ್ತುಗಳ ಮೇಲೆ ಅದು ಋಣ ಭಾರವಾಗಿರತಕ್ಕದ್ದು ಮತ್ತು ಭೂಕಂದಾಯದ ಬಾಕಿ ಎಂಬಂತೆ ಅದನ್ನು ವಸೂಲು ಮಾಡಬಹುದು

XX XX XX

೫೨ ದಸ್ತಾವೇಜುಗಳನ್ನು ಹಾಜರುಪಡಿಸುವುದು ಮತ್ತು ಪರಿಶೀಲಿಸುವುದು ಮತ್ತು ಪ್ರವೇಶ, ಶೋಧನೆ ಮತ್ತು ವಶಕ್ಕೆ ತೆಗೆದುಕೊಳ್ಳು ಅಧಿಕಾರಿಗಳು – (೧) ಈ ಸಂಬಂಧದಲ್ಲಿ ಆಯುಕ್ತನು ಪ್ರಾಧಿಕೃತಗೊಳಿಸಿದ ಯಾವೊಬ್ಬ ಅಧಿಕಾರಿಯು, ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು,-

(ಎ) ಯಾವೊಬ್ಬ ವ್ಯಾಪಾರಿಯ ವ್ಯವಹಾರದ ಸ್ಥಳದಲ್ಲಿ ಅಥವಾ ಇತರ ಯವುದೇ ಸ್ಥಳದಲ್ಲಿ ಅಂಥ ವ್ಯವಹಾವು ನಡೆಯುತ್ತಿದೆ ಎಂದು ಅಥವಾ ಅಂಥ ವ್ಯಾಪಾರಿಯು, ದಸ್ತಾವೇಜುಗಳೂ ಸೇರಿದಂತೆ ಲೆಕ್ಕಪತ್ರಗಳನ್ನು ಇಟ್ಟಿದ್ದಾರೆಂದು ಅಂಥ ಅಧಿಕಾರಿಯು ನಂಬಿದಲ್ಲಿ, ಅಂಥ ಸ್ಥಳವನ್ನು ಪ್ರವೇಶಿಸುವುದು ಮತ್ತು ಪರಿಶೀಲಿಸುವುದು ,

(ಬಿ) ಒಬ್ಬ ವ್ಯಾಪಾರಿಯ ವ್ಯವಹಾರದ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಲೆಕ್ಕಪತ್ರಗಳು ರಿಜಿಸ್ಟರುಗಳು ಮತ್ತು ದಸ್ತಾವೇಜುಗಳನ್ನು, ಅಂಥ ಸಮಯದಲ್ಲಿ ಮತ್ತು ಅಂಥ ಸ್ಥಳದಲ್ಲಿ ಪರಿಶೀಲನೆಗಾಗಿ ಹಾಜರುಪಡಿಸುವಂತೆ ಅಂಥ ವ್ಯಾಪಾಖಇಗೆ ನಿರ್ದೇಶಿಸುವುದು

XX XX XX

(ಐ) ತಪ್ಪು ಅಥವಾ ಮೋಸದ ವಿರುದ್ಧ ರಾಜಸ್ವವನ್ನು ರಕ್ಷಿಸುವುದು ಅವಶ್ಯಕವೆಂದು ಅವನು ಪರಿಗಣಿಸಿದಲ್ಲಿ ಯಾವೊಬ್ಬ

ವ್ಯಾಪಾರಯ ಸ್ವಾಧೀನದಿಂದ ಸರಕುಗಳ ಮಾದರಿಗಳನ್ನು ತೆಗೆದುಕೊಳ್ಳುವುದು ಮತ್ತು ಹಾಫೆ ತೆಗೆದುಕೊಂಡ ಯಾವುದೇ ಮಾದರಿಗಳಿಗಾಗಿ ಒಂದು ಸ್ವೀಕೃತಿ ಪತ್ರವನ್ನು ನೀಡುವುದು, ಮತ್ತು ಅಪರಾಧವು ಕಂಡುಬಂದ ಹೊರತು ಆಯುಕ್ತನು ಮಾದರಿಗಳನ್ನು ವ್ಯಾಪಾರಿಗೆ ಹಿಂತಿರುಗಿಸಕ್ಕದ್ದು ಅಧವಾ ಆ ವ್ಯಾಪಾರಿಯ ಸಮ್ಮತಿಯೊಂದಿಗೆ ವಿಲೆ ಮಾಡತಕ್ಕದ್ದು

XX XX XX

೫೩. **ಚೆಕ್ ಪೋಸ್ಟ್ ಗಳ ಸ್ತಾಪನೆ ಮತ್ತು ಸಾಗಣೆಯಲ್ಲುರವ ಸರಕುಗಳ ಪರಿಶೀಲನೆ** – (೧) ರಾಜ್ಯದಲ್ಲಿನ ಯಾವುದೇ ಸ್ಥಳ ಅಧವಾ ಸ್ಥಳಗಳಲ್ಲಿ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ತಪ್ಪಿಸುವುದನ್ನು ತಡೆಹಿಡಯುವ ಅಧವಾ ಪ್ರತಿಬಂದಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರ ಅಧವಾ ಆಯುಕ್ತನು ಅವಶ್ಯಕವೆಮದು ಪರಿಗಣಿಸಿದಲ್ಲಿ ಅದು ಅಧವಾ ಅವನು ಅಧಿಸೂಚಿಸಬಹುದಾದಂತೆ ಅಂಧ ಸ್ಧಳ ಅಧವಾ ಸ್ಧಳಗಳಲ್ಲಿ ಚೆಕ್ ಪೋಸ್ಟ್ ನ್ನು ಅಧವಾ ಸುಂದ ಕಟ್ಟೆಯನ್ನು ಅಧವಾ ಅವೆರಡನ್ನು ಸ್ಥಾಪಿಸುವಂತೆ ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು

(೨) ಒಂದು ಸರಕು ವಾಹನ ಅಧವಾ ನಾವೆ, ಹಡಗು ಅಧವಾ ಅಂಧವೇ ನೌಕೆಯ ಮಾಲೀಕ ಅಧವಾ ಪ್ರಭಾರ ಹೊಂದಿದ ವ್ಯಕ್ತಿಯು,-

(ಎ) ತನ್ನ ಜೊತೆಯಲ್ಲಿ ಸಂದರ್ಭಾನುಸಾರ ಸರಕು ವಾಹನದ ದಾಖಲೆ, ಟ್ರಿಪ್ ಶೀಟ್ ಅಧವಾ ಲಾಗ್ ಪುಸ್ತಕವನ್ನು ಒಯ್ಯತಕ್ಕದ್ದು, ಮತ್ತು

(ಬಿ) ಸರಕುಗಳ ವಾಹನ ಅಧವಾ ನಾವೆ,ಹಡಗು ಅಧವಾ ಅಂಧವೇ ನೌಕೆಯಲ್ಲಿ ಸಾಗಿಸುತ್ತಿರುವ ಸರಕುಗಳಿಗೆ ಸಂಬಂಧಪಟ್ಟಂತೆ, ನಿಯಮಿಸಬಹುದಾದಂತೆ ತೆರಿಗೆ ಬೆಲೆಪಟ್ಟಿ, ಮಾರಾಟದ ಬಿಲ್ಲು ಅಧವಾ ರವಾನೆ

ಚೀಟಿಯಂತಹ ಇತರ ದಸ್ತಾವೇಜುಗಳನ್ನು ತನ್ನ ಜೊತೆಯಲ್ಲಿ ತೆಗೆದುಕೊಂಡು ಒಯ್ಯತಕ್ಕದ್ದು , ಮತ್ತು

XX XX XX

೫೮ ಆಯುಕ್ತ, ಅಪರ ಆಯುಕ್ತರು, ಜಂಟಿ ಆಯುಕ್ತರು, ಉಪ ಆಯುಕ್ತರು, ಸಹಾಯಕ ಆಯುಕ್ತರು, ರಜ್ಯ ಪ್ರತಿನಿಧಿಗಳು ಮತ್ತು ವಾಣಿಜ್ಯ ತೆರಿಗೆ ಅಧಿಕಾಋುಇಗಳು – (೧) XX XX XX

(೨) ಆಯುಕ್ತನು, ರಾಜ್ಯ ಪ್ರತಿನಿಧಿಯ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ, ಸಹಾಯಕ ಆಯುಕ್ತನ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಒಬ್ಬ ಅಧಿಕಾರಿಯನ್ನು ಅಥವಾ ಒಬ್ಬ ನ್ಯಾಯವಾದಿ ಅಥವಾ ಒಬ್ಬ ಚಾರ್ಟರ್ಡ್ ಅಕೌಂಟೆಂಟ್ ಅಥವಾ ನಿಯಮಿಸಬಹುದಾದ ವಿಧಾನದಲ್ಲಿ, ಪಟ್ಟಿಯಲ್ಲಿ ಸೇರಿಸಲಾದ ಒಬ್ಬ ತೆರಿಗೆ ವೃತ್ತಿದಾರರನ್ನು ಪ್ರಾಧಿಕೃತಗೊಳಿಸಬಹುದು

೬೦ ಸ್ಪಷ್ಟೀಕರಣ ಹಾಗೂ ಪೂರ್ವಭಾವಿ ನಿರ್ಣಯಗಳು – ಆಯುಕ್ತನು, ಅಧಿನಿಯಮದ ಅಡಿಯಲ್ಲಿ ಯಾವುದೇ ಸರಕುಗಳ ಸಂಬಂಧದಲ್ಲಿ ತೆರಿಗೆಯ ದರದ ಬಗ್ಗೆ ಅಥವಾ ಯಾವುದೇ ವ್ಯವಹರಣೆಯಲ್ಲಿ ಬಲವಂತವಾಗಿ ತೆರಿಗೆ ವಿಧುಸುವಿಕೆಯ ಬಗ್ಗೆ ಸ್ಪಷ್ಟೀಕರಣ ನೀಡಲು ಮೂವರು ಅಪರ ಆಯುಕ್ತರುಗಳನ್ನು ಒಳಗೊಂಡ " ಸ್ಪಷ್ಟೀಕರಣ ಹಾಗೂ ಪೂರ್ವಭಾವಿ ನಿರ್ಣಯಗಳ ಪ್ರಾಧಿಕಾರ" ವನ್ನು ರಚಿಸಬಹುದು

(೨) ಈ ಅಧಿನಿಯಮದ ಅಡಿಯಲ್ಲಿ ಸ್ಪಷ್ಟೀಕರಣ ಅಥವಾ ಪೂರ್ವಭಾವಿ ನಿರ್ಣಯವನ್ನು ಕೋರುವ ಯಾವೊಬ್ಬ ನೋಂದಾಯಿತ ವ್ಯಾಪಾರಿಯು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಅಂಥ ಶುಲ್ಕವನ್ನು ಸಂದಾಯ ಮಾಡಿದ ಬಗ್ಗೆ ರುಜುಮಾತನ್ನು ಒಳಗೊಂಡಂತೆ ಅಂಥ ನಮೂನಿಎಯಲ್ಲಿ ಪ್ರದಿಕಾರಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದದು

(೩) ಯಾವೊಬ್ಬ ಅಧಿಕಾರಿ ಅಥವಾ ಇಲಾಖೆಯ ಯಾವುದೇ ಇತರ ಪ್ರಧಿಕಾರ ಅಥವಾ ಅಪೀಲು ನ್ಯಾಯಾಧಿಕರಣವು ಈ

ಅಧಿನಿಯಮದ ಅಡಿಯಲ್ಲಿ ಯಾವ ಪ್ರಕರಣದ ಸಂಬಂಧಲದಲಿ ಅರ್ಜಿದಾರನು ಅರ್ಜಿಯನ್ನು ಹಾಕಿಕೊಂಡಿರುವನೋ ಅದರ ಬಗ್ಗೆ ತೀರ್ಮಾನವನ್ನು ಕೈಗೊಳ್ಳಲು ಮುಂದುವರೆಯತಕ್ಕದಲ್ಲ

(೪) ಪ್ರದಿಕಾರದ ಆದೇಶವು, ಸ್ಪಷ್ಟೀಕರಣವನ್ನು ಕೋರಿದ ಅರ್ಜಿದಾರನಿಗೆ ಮಾತ್ರ ಬಂಧಕವಾಗಿರತಕ್ಕದ್ದು ಮತ್ತು ಸ್ಪಷ್ಟೀಕರಣ ಕೋರಿರುವ ಸರಕುಗಳ ಅದವಾ ವ್ಯವಹಾರದ ಸಂಬಂಧದಲ್ಲಿ ಮಾತ್ರ ಹಾಗೂ ಎಲ್ಲಾ ಅಧೀನಾಧಿಕಾರಿಗಳಿಗೆ ಮಾತ್ರ ಬಂಧಾಕವಾಗಿರಕ್ಕದ್ದು

(೫) ಈ ಪ್ರಕರಣದ ಅಡಿಯಲ್ಲಿ ಪ್ರದಿಕಾರದ ಆದೇಶವು, ಕಾನೂನಿನಲ್ಲಿ ಅಧವಾ ಆದೇಶವನ್ನು ಹೊರಡಿಸಿದ ಸಂಗತಿಗಳ ಹಿನ್ನಲೆಯಲ್ಲಿ ಬದಲಾವಣೆಯಾಗದ ಹೊರತು, ಈ ಹಿಂದ ಹೇಳಿದಂತೆ ಬಂದಕವಾಗಿರತಕ್ಕದ್ದು

(೬) ಪ್ರಾಧಿಕಾರಕ್ಕೆ ಯಾವೊಬ್ಬ ಅಧಿಕಾರಿಯು ಸ್ಲಿಸಿದ ಮನವಿಯ ಮೇಲೆ ಅಧವಾ ಅನ್ಯಥಾ, ತಾನು ಹೊರಡಿಸಿದ ಆದೇಶವನ್ನು, ಅರ್ಜಿದಾರನು ಮೋಸದಿಂದ ಅಧವಾ ಸಂಗತಿಗಳನ್ನು ತಪ್ಪಾಗಿ ನಿರೂಪಿಸುವ ಮೂಲಕ ಪಡೆದಿದ್ದಾರೆಂದು ಅಕದ್ಕೆ ಕಂಡುಬಂದರೆ, ಅದು ಆದೇಶದ ಮೂಲಕ, ಅಂಧ ಆದೇಶವನ್ನು ಆರಂಭದಿಂದಲೇ ಶೂನ್ಯವಾದುದೆಂದು ಘೋಷಿಸಬಹುದು ಮತ್ತು ತದನಂತರ ಈ ಅಧಿನಿಯಮದ ಎಲ್ಲ ಉಪಬಂಧಗಳು, ಅಂಧ ಆದೇಶವನ್ನು ಎಂದೂ ಹೊರಡಿಸದಿದ್ದರೆ ಹೇಗೋ ಹಾಗೆ ಅರ್ಜಿದಾರನಿಗೆ ಅನ್ವಯಿಸತಕ್ಕದ್ದು

(೭) ೬೪ ಮತ್ತು ೬೬ನೇ ಪ್ರಕರಣಗಳು ಉಪಬಂಧಗಳಿಗೆ ಒಳಪಟ್ಟು ಈ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವು ಅಂತಿಮವಾಗಿರತಕ್ಕದ್ದು

XX XX XX

೬೨ ಅಪೀಲುಗಳು – (೧) ನಿಯಮಿಸಲಾದ ಪ್ರದಿಕಾರವು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಹೊರಡಿಸಿದ ಯಾವುದೇ ಆದೇಶದಿಂದ ಅಥವಾ ವ್ಯವಹರಣೆಗಳಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಅವುಗಳನ್ನು ಆಕ್ಷೇಪಿಸಿ ಅಪೀಲು ಪ್ರಾಧಿಕಾರಕ್ಕೆ ಅಪೀಲು ಮಾಡಕೊಳ್ಳಬಹುದು

(೨)ಅಪೀಲನ್ನು, –

(ಎ)ತೆರಿಗೆ ನಿರ್ಧರಣೆಯ ಒಂದು ಆದೇಶಕ್ಕೆ ಸಂಬಂಧಿಸಿದಂತೆ ಅಪಿಲುದಾರನಿಗೆ ತೆರಿಗೆ ನಿರ್ಧರಣೆಯ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಮತ್ತು

(ಬಿ) ಯಾವುದೇ ಇತರ ಆದೇಶಕ್ಕೆ ಸಂಬಂಧಿಸಿದಂತೆ, ಅರ್ಜಿದಾರನಿಗೆ ಆದೇಶವನ್ನು ತಿಳಿಸಿದಂಥ ದಿನಾಂಕದಿಂದ ಮೂವತ್ತು ದಿನಗಳೊಳಗೆ

XX XX XX

–ಹೂಡತಕ್ಕದ್ದು

(೪) (ಎ) ತೆರಿಗೆ ನಿರ್ಧರಣೆಯ ಆದೇಶದ ವಿರುದ್ಧ ಯಾವುದೇ ಅಪೀಲನ್ನು ಅದರೊಂದಿಗೆ ಅಪೀಲಿನಲ್ಲಿ ವಿವಾದಿಸದೇ ಇರುವ ತೆರಿಗೆ ಮತ್ತು ದಂಡ ಸಂದಾಯದ ಬಗ್ಗೆ ತೃಪ್ತಿಕರ ರುಜುವಾತು ಇದ್ದ ಹೊರತು ಅಪೀಲು ಪ್ರಾಧಿಕಾರಿಯು ಪುರಸ್ಕರಿಸತಕ್ಕದ್ದಲ್ಲ

(ಬಿ)ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಆದೇಶಕ್ಕೆ ಅನುಸಾರವಾಗಿ ತೆರಿಗೆ ಅಥವಾ ಇತರ ಮೊಬಲಗನ್ನು ಸಂದಾಯ ಮಾಡತಕ್ಕದ್ದು,

XX XX XX

(ಇ) ಅಪೀಲು, ನಿಯಮಿಸಲಾದ ನಮೂನೆಯಲ್ಲಿ ಇರತಕ್ಕದ್ದು ಮತ್ತು ನಿಯಮಿಸಲಾದ ರೀತಿಯಲ್ಲಿ ಸತ್ಯಾಪನೆ ಮಾಡತಕ್ಕದ್ದು

(೬) ಅಪೀಲನ್ನು ವಿಲೇ ಮಾಡುವಲ್ಲಿ, ಅಪೀಲು ಪ್ರಾಧಿಕಾರವು, ಅಪೀಲುಗಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ

(ಎ) ತೆರಿಗೆ ನಿರ್ಧರಣೆ ಅಥವಾ ದಂಡಕ್ಕೆ ಸಂಬಂಧಿಸಿದ ಆದೇಶದ ಸಂದರ್ಭದಲ್ಲಿ,

(1) ತೆರಿಗೆ ನಿರ್ಧರಣೆಯ ಯಾವುದೇ ಭಾಗಕ್ಕೆ ಅಪೀಲಿನಲ್ಲಿ ಆಕ್ಷೇಪಣೆ ಮಾಡಿರಲಿ ಅಥವಾ ಇಲ್ಲದಿರಲಿ, ಅಂಥ ಯಾವುದೇ ಭಾಗವು ಸೇರಿದಂತೆ ತೆರಿಗೆ ನಿರ್ಧರಣೆಯನ್ನು ಸ್ಥಿರೀಕರಿಸಬಹುದು ಕಡಿಮೆಗೊಳಿಸಬಹುದು ಅಥವಾ ಹೆಚ್ಚಿಸಬಹುದು

(11) ತಾವು ಸೂಕ್ತವೆಂದು ಭಾವಿಸಬಹುದಾದ ಅಂಥ ಇತರ ಆದೇಶಗಳನ್ನು ಮಾಡಬಹುದು, ಮತ್ತು

(ಬಿ) ಇತರ ಯಾವುದೇ ಆದೇಶದ ಸಂದರ್ಭದಲ್ಲಿ ಅಂಥ ಆದೇಶವನ್ನು ಸ್ಥಿರೀಕರಿಸಬಹುದು ರದ್ದುಗೊಳಿಸಬಹುದು ಅಥವಾ ವ್ಯತ್ಯಾಸಗೊಳಿಸಬಹುದು

(೬–ಎ) (1) ಅಪೀಲು ಪ್ರಾಧಿಕಾರವು, ತನ್ನ ಮುಂದಿರುವ ಅಪೀಲನ್ನು ವಿಲೆ ಮಾಡುವಾಗ ತೆರಿಗೆ ನಿರ್ಧರಣೆ ಮಾಡಲು ಅಥವಾ ಹೊಸದಾಗಿ ಆದೇಶವನ್ನು ಮಾಡಲು ಪುನರ್ ವಿಚಾರಣೆಗಾಗಿ ಪ್ರಕರಣವನ್ನು ವಾಪಸು ಕಳುಹಿಸತಕ್ಕದ್ದಲ್ಲ ಆದರೆ, ಅಪೀಲನ್ನು ಮಾಡಲು

ಪುನರ್ ವಿಚಾರಣೆಗಾಗಿಪ್ರಕರಣವನ್ನು ವಾಪಸು ಕಳುಹಿಸತಕ್ಕದ್ದಲ್ಲ ಆದರೆ, ಅಪೀಲನ್ನು ಅದರ ಗುಣ-ದೋಷಗಳ ಮೇಲೆ, ಹೆಚ್ಚಿನ ಸಾಕ್ಷ್ಯವನ್ನು ತೆಗೆದುಕೊಳ್ಳುವುದು ಅವಶ್ಯಕವಾಗಿದ್ದರೆ ಅದನ್ನು ತೆಗೆದುಕೊಂಡು ತಾನು ಸೂಕ್ತವೆಂದು ಭಾವಿಸುವಂತೆ ವಿಲೆ ಮಾಡಲು ಮುಂದುವರಿಯತಕ್ಕದ್ದು

XX XX XX

೬೩ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು (1) – ಸರ್ಕಾರದಿಂದ ಈ ಸಂಬಂಧದಲ್ಲಿ ಪ್ರಾಧಿಕೃತವಾದ ಯಾವೊಬ್ಬ ಅಧಿಕಾರಿ ಅಥವಾ ೬೨ನೇ ಪ್ರಕರಣದ ಅಡಿಯಲ್ಲಿ ಅಪೀಲು ಪ್ರಾಧಿಕಾರವು ಮಾಡಿದ ಆದೇಶವನ್ನು ಆಕ್ಷೇಪಿಸುವ ಯಾವೊಬ್ಬ ಇತರ ವ್ಯಕ್ತಿಯು, ಅವನಿಗೆ ಆದೇಶವನ್ನು ತಿಳಿಸಿದ ದಿನಾಂಕದಿಂದ ಅರವತ್ತು ದಿನಗಳ ಅವಧಿಯ ಒಳಗೆ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲನ್ನು ಮಾಡಿಕೊಳ್ಳಬಹುದು

XX XX XX

(೪) ಅಪೀಲು ಅಥವಾ ಎದುರು ಆಕ್ಷೇಪಣೆಗಳ ವಿವರಣ ಪತ್ರವು ನಿಯಮಿಸಲಾದ ನಮೂನೆಯಲ್ಲಿ ಇರತಕ್ಕದ್ದು ನಿಯಮಿಸಲಾದ ರೀತಿಯಲ್ಲಿ ಸತ್ಯಾಪನೆ ಮಾಡಿರತಕ್ಕದ್ದು ಮತ್ತು (೧) ನೇ ಉಪಪ್ರಕರಣದ ಅಡಿಯಲ್ಲಿ ಸರ್ಕಾರದಿಂದ ಪ್ರಾಧಿಕೃತನಾದ ಅಧಿಕಾರಿಯ ಹೊರತಾಗಿ ಯಾವೊಬ್ಬ ವ್ಯಕ್ತಿಯು, ಅಪೀಲು ಸಲ್ಲಿಸಿದ ಸಂದರ್ಭದಲ್ಲಿ, ತೆರಿಗೆಯ ಅಥವಾ ವಿವಾದಿತ ಇತರೆ ಮೊಬಲಗಿನ ಅರ್ಧದಷ್ಟನ್ನು ಸಂದಾಯ ಮಾಡಿದ ಬಗ್ಗೆ ರುಜುವಾತಿನೊಡನೆ ಮತ್ತು ಆಕ್ಷೇಪಿಸಲಾದ ತೆರಿಗೆ ನಿರ್ಧರಣಾ ಮೊಬಲಿಗಿನ ಶೇಕಡಾ ಎರಡರಷ್ಟಕೆಕೆ ಸಮನಾದ ಎರಡುನೂರು ರೂಪಾಯಿಗಳಿಗಿಂತ ಕಡಿಮೆ ಇರತಕ್ಕದ್ದಲ್ಲ ಅಥವಾ ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಇರತಕ್ಕದ್ದಲ್ಲ

XX XX XX

೭೨ ವಿವರ ಪಟ್ಟಿಗಳಿಗೆ ಸಂಬಂಧಿಸಿದ ದಂಡಗಳು – (೧) ಒಬ್ಬ ವ್ಯಾಪಾರಿಯು, ೩೫ನೇ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ಒಂದು ವಿವರ ಪಟ್ಟಿಯನ್ನು ಒದಗಿಸಲು ತಪ್ಪಿದಲ್ಲಿ ಅಥವಾ ಒದಗಿಸಲಾದ ಯಾವುದೇ ವಿವರ ಪಟ್ಟಿಯ ಮೇಲೆ ಬಾಕಿ ಇರುವ ತೆರಿಗೆ ಸಂದಾಯ ಮಾಡಲು ತಪ್ಪಿದಲ್ಲಿ ಅವನು ಶೇಕಡಾ ಹತ್ತರಷ್ಟು ಮೊಬಲಿಗಿನ ದಂಡಕ್ಕೆ ಹೆಚ್ಚಿಗೆಯಾಗಿ ತೆರಿಗೆ ನೀಡಲು ತಪ್ಪಿದ ಪ್ರತಿಯೊಂದು ದಿನಕ್ಕ ಐವತ್ತು ರೂಪಾಯಿಗಳ ದಂಡವನ್ನು, ಬಾಕಿ ಇರುವ ಯಾವುದೇ ತೆರಿಗೆ ಅಥವಾ ಬಡ್ಡಿಯೊಂದಿಗೆ ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು

(೨) XX XX XX

(೩) ಅಪೂರ್ಣವಾಗಿದ್ದ ಅಥವಾ ಯಾವುದೇ ಮುಖ್ಯ ವಿವರಗಳಲ್ಲಿ ತಪ್ಪಾಗಿರುವ ಒಂದು ವಿವರ ಪಟ್ಟಿಯನ್ನು ಸಲ್ಲಿಸದಿದ್ದ ಒಬ್ಬ ವ್ಯಾಪಾರಿಯು, ವಿವರ ಪಟ್ಟಿಯು ಅಪೂರ್ಣವಾಗಿ ಅಥವಾ ತಪ್ಪಾಗಿ ಉಳಿಯುವ ಪ್ರತಿದಿನಕ್ಕಾಗಿ ಐವತ್ತು ರೂಪಾಯಿಗಳ ದಂಡಕ್ಕೆಬದ್ಧನಾಗಿರತಕ್ಕದ್ದು

(೪) XX XX XX

(೫) ಮೇಲ್ಕಂಡ ದಂಡಗಳನ್ನು ವಿಧಿಸುವ ಅಧಿಕಾರವು, ವಿವರ ಪಟ್ಟಿಯನ್ನು ಸ್ವೀಕರಿಸಲು ಅಗತ್ಯಪಡಿಸಲಾದ ನಿಯಮಿಸಲಾದ ಪ್ರದಿಕಾರದಲ್ಲಿ ಅಥವಾ ತೆರಿಗೆ ನಿರ್ಧರಣೆ ಅಥವಾ ತೆರಿಗೆ ಪುನರ್ ನಿರ್ಧರಣೆ ಮಾಡಲು ನಿಯಮಿಸಲಾದ ಪ್ರಾಧಿಕಾರದಲ್ಲಿ ನಿಹಿತವಾಗಿರತಕ್ಕದ್ದು

XX XX XX

೭೩ ಅನಧಿಕೃತ ತೆರಿಗೆ ಸಂಗ್ರಹಣೆಗೆ ಸಂಬಂಧಿಸಿದ ದಂಡಗಳು - (೧) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾಗಿರದ ಯಾವೊಬ್ಬ ವ್ಯಾಪಾರಿಯು, ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯ ರೂಪದಲ್ಲಿ ಅಥವಾ ತೆರಿಗೆ ರೂಪದಲ್ಲಿ ಎಂದು ತಾತ್ಪರ್ಯವಾಗುವ ಯಾವುದೇ ಮೊಬಲಗನ್ನು ಸಂಗ್ರಹಿಸಿದರೆ, ಆ ಮೊಬಲಗನ್ನು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸಂದಾಯಮಾಡಬೇಕಾದುದಾಗಿರಲಿ ಅಥವಾ ಸಂದಾಯ ಮಾಡಬೇಕಾಗಿಲ್ಲದಿರಲಿ, ಅವನು ಅಂಥ ಮೊಬಲಗನ್ನು ನಿಯಮಿಸಲಾದ ಪ್ರಾದಿಕಾರಕ್ಕೆ ಅಥವಾ ತೆರಿಗೆ ನಿರ್ಧರಣೆ ಅಥವಾ ತೆರಿಗೆ ಪುನರ್ ನಿರ್ವಹಣೆ ಮಾಡಲು ನಿಯಮಿಸಲಾದ ಪ್ರಧಿಕಾರದಲ್ಲಿ ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು ಮತ್ತು ತೆರಿಗೆಯ ಮರು ಸಂದಾಯದ ಮತ್ತು ಅಂಥ ದಂಡವನ್ನು ವಿಧಿಸಿದ್ದರ ವಿರುದ್ಧ ಲಿಖಿತದಲ್ಲಿ ಕಾರಣಗಳನ್ನು ತಿಳಿಸಲು ಅವಕಾಶವನ್ನು ನೀಡಿದ ತರುವಾಯ ಹಾಗೆ ಸಂಗ್ರಹಿಸಲಾದ ಮೊಬಲಗಿಗೆ ಮೀರಿದ ದಂಡಕ್ಕೂ ಸಹ ಬದ್ಧನಾಗಿರತಕ್ಕದ್ದು

XX XX XX

೭೪ ದಾಖಲೆಗಳನ್ನು ಇಡುವುದಕ್ಕೆ ಸಮಬಂಧಿಸಿದ ದಂಡಗಳು - (೧) ಯಾವೊಬ್ಬ ವ್ಯಾಪಾರಿಯು, ೩ನೇ ಪ್ರಕರಣಕ್ಕೆ ಅನುಸಾರವಾಗಿ ಅಥವಾ ನಿಯಮಿಸಲಾದ ಪ್ರಧಿಕಾರದ ಆದೇಶದ ಮೂಲಕ, ಸೂಕ್ತ ದಾಖಲೆಗಳನ್ನು ಇಡಲು ಮತ್ತು ನಿರ್ವಹಿಸಲು ತಪ್ಪಿದಲ್ಲಿ ಅವನು ಐದು ಸಾವಿರ ರೂಪಾಯಿಗಳಿಗೆ ಮೀರದ ದಂಡಕ್ಕೆ ಮತ್ತು ಅಂಥ ವಿಧಿಸಿದ್ದರ ವಿರುದ್ಧ ಕಾರಣಗಳನ್ನು ತೋರಿಸಲು ಅವಕಾಶವನ್ನು ನೀಡಿದ ತರುವಾಯ, ದಂಡ ನೀಡಲು ತಪ್ಪುವುದು ಮುಂದುವರುತ್ತಿರುವವರೆಗೆ ಪ್ರತಿದಿನಕ್ಕೆ ಎರಡು ನೂರು ರೂಪಾಯಿಗಳಿಗೆ ಮೀರದ ಹೆಚ್ಚಿನ ದಂಡವನ್ನು ಸಹ ನೀಡಲು ಬದ್ಧನಾಗಿರತಕ್ಕದ್ದು

XX XX XX

ಒಂದನೇ ಅನುಸೂಚಿ

(೫ನೇ ಪ್ರಕರಣದ (೧) ನೇ ಉಪಪ್ರಕರಣದ ಅಡಿಯಲ್ಲಿ ತೆರಿಗೆಯಿಂದ ವಿನಾಯಿತಿಗೊಳಿಸಿದ ಸರಕುಗಳು)

ಕ್ರಮ ಸಂಖ್ಯೆ ಸರಕುಗಳ ವಿವರ

೧ XX XX XX

೪೨ ರೆಕ್ಟಿಫೈಡ್ ಸ್ಪಿರಿಟ್

XX XX XX

೫೦ ಅಬ್ಕಾರಿ ಹೆಚ್ಚುವರಿ ಸುಂಕ (ವಿಶೇಷ ಮಹತ್ವದ ಸರಕುಗಳು) ಅಧಿನಿಯಮ, ೧೯೫೭ರ (೧೯೫೭ರ ಕೇಂದ್ರ ಅಧಿನಿಯಮ ೫೮) ಒಂದನೇ ಅನುಸೂಚಿಯ ೨ನೇ ಅಂಕಣದಲ್ಲಿ ಕಾಲಕಾಲಕ್ಕೆ ವಿವರಿಸಲಾದಂತೆ (ಭಾರತದಲ್ಲಿ ಉತ್ಪಾದಿಸಲಾದ ಅಥವಾ ತಯಾರಿಸಲಾದ) ತಂಬಾಕು ಮತ್ತು ಅದರ ಎಲ್ಲಾ ಉತ್ಪನ್ನಗಳು

ಮೂರನೇ ಅನುಸೂಚಿ

ಶೇಕಡಾ ನಾಲ್ಕರ ದರದಲ್ಲಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳು

[೪(೧)(ಎ)(11) ನೇ ಪ್ರಕರಣ]

ಕ್ರಮ ಸಂಖ್ಯೆ
ಸರಕುಗಳ ವಿವರ

೧ ೨

೧ XX XX XX

೩೪ ಎಕ್ಸಿಮ್ ಸ್ಕ್ರಿಪ್ ಗಳು, ಆರ್ ಇ ಪಿ ಲೈಸೆನ್ಸ್ ಗಳು, ವಿಶೇಷ ಆಮದು ಲೈಸೆನ್ಸ್ ಗಳು (ಎಸ್ ಐ ಎಲ್) ಮೌಲ್ಯಾಧಾರಿತ ಮುಂಗಡ ಲೇಸೆನ್ಸ್ ಗಳು (ವಿ ಎಬಿಎಲ್) ರಫ್ತು ಕೋಟಾಗಳು, ಡಿಇಪಿಬಿ ಲೈಸೆನ್ಸ್ ಗಳುಕೃತಿ ಸ್ವಾಮ್ಯಗಳು, ಪೇಂಟೆಂಟ್ ಗಳು ಮತ್ತು ಅಂಥವುಗಳು

XX XX XX

೫೨ ೧೦೦೦ ವೋಲ್ಟೇಜ್‌ಗಳನ್ನು ಮೀರಿದ ವೋಲ್ಟೇಜ್ ಗಾಗಿ ಎಲೆಕ್ಟ್ರಿಕಲ್ ಕೇಬಲ್ ಗಳು

XX XX XX

ನಾಲ್ಕನೇ ಅನುಸೂಚಿ

ಶೇಕಡಾ ಇಪ್ಪತ್ತರ ದರದಲ್ಲಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳು

[೪(I)(ಎ)(111) ನೇ ಪ್ರಕರಣ]

ಕ್ರಮ ಸಂಖ್ಯೆ ಸರಕುಗಳ ವಿವರ

೧ ೨

೧ ನಿದ್ರಾಜನಕಗಳೂ (ನಾರ್ಕೊಟಿಕ್ಸ್)

೨ ಕಾಕಂಬಿ

XX XX
XX

ಅನುಬಂಧ –೩

ಕರ್ನಾಟಕ ವಿಧಾನಸಭೆ

ಹನ್ನೆರಡನೇ ವಿಧಾನಸಭೆ

ಐದನೇ ಅಧಿವೇಶನ

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, ೨೦೦೭

(೨೦೦೭ರ ವಿಧಾನಸಭೆಯ ವಿಧೇಯಕ ಸಂಖ್ಯೆ ೧೮)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, ೧೯೫೭ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, ೧೯೫೭ನ್ನು (೧೯೫೭ರ ಕರ್ನಾಟಕ ಅಧಿನಿಯಮ ೩೫) ಮತ್ತಷ್ಟು ತಿದ್ದುಪಡಿಮಾಡುವುದು ಯುಕ್ತವಾರಿರುವುದರಿಂದ,

ಇದು ಭಾರತ ಗಣರಾಜ್ಯದ ಐವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ

೧ ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ – (೧) ಈ ಅಧಿನಿಯಮವನ್ನು ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, ೨೦೦೭ ಎಂದು ಕರೆಯತಕ್ಕದ್ದು

೨ ಇದು ೨೦೦೭ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು

೨ ೩ನೇ ಪ್ರಕರಣದ ತಿದ್ದುಪಡಿ – ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, ೧೯೫೭ ರ (೧೯೫೭ರ ಕರ್ನಾಟಕ ಅಧಿನಿಯಮ ೩೫) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) ೩ನೇ ಪ್ರಕರಣದಲ್ಲಿ,

(೧) (೧) ನೇ ಉಪ – ಪ್ರಕರಣದಲ್ಲಿ ನಾಲ್ಕನೇ ಪರಮತುಕದಲ್ಲಿ, (ಎ) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ –

"(ಎಎ) ಭಾರ ಹೇರಿದಾಗ ೧,೫೦೦ ಕಿಗ್ರಾಂ, ಮೀರಿದ ಆದರೆ ೩,೦೦೦ ಕಿಗ್ರಾಂ ಮೀರದ ಒಟ್ಟು ವಾಹನ 'ತೂಕವನ್ನು ಹೊಂದಿರುವ ಸರಕು ವಾಹನಗಳ ಸಂಬಂಧದಲ್ಲಿ, ಅವುಗಳನ್ನು ಬಾಡಿಗೆಗೆ ಅಥವಾ ಪ್ರತಿಫಲಕ್ಕಾಗಿ ಬಳಸಲಿ ಅಥವಾ ಬಳಸದಿರಲಿ, ಅನುಸೂಚಿಯ ಭಾಗ–ಎ೬ ರಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ತೆರಿಗೆಯನ್ನು ವಿಧಿಸತಕ್ಕದ್ದು"

(೨) (೪) ನೇ ಉಪ–ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ –

(೫) (೧) ರಿಂದ (೪) ನೇ ಉಪ – ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ ಅನುಸೂಚಿಯ 'ಇ' ಭಾಗದಲ್ಲಿ ನಿರ್ದಿಷ್ಟಪಡಿಸಲಾದ ದರದಲ್ಲಿ ತೆರಿಗೆಯನ್ನು ಜಾಸೀಗಳೂ ಸೇರಿದಂತೆ ತಾತ್ಕಾಲಿಕ ನೋಂದಣಿಯ ಅಗತ್ಯವಿರುವ ಎಲ್ಲಾ ಮೋಟಾರು ವಾಹನಗಳ ಮೇಲೆ ವಿಧಿಸತಕ್ಕದ್ದು"

೩ ೪ನೇ ಪ್ರಕರಣದ ತಿದ್ದುಪಡಿ –ಮೂಲ ಅಧಿನಿಯಮದ ೪ನೇ ಪ್ರಕರಣದಲ್ಲಿ, (೧) ನೇ ಉಪ ಪ್ರಕರಣದಲ್ಲಿ, ಮೂರನೇ ಪರಂತುಕದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ –

" ಅಲ್ಲದೇ ಪರಂತು, ೨೦೦೭ರ ಏಪ್ರಿಲ್ ೧ನೇ ದಿನಾಂಕಕ್ಕೆ ಮೊದಲು ಈಗಾಗಲೇ ತೆರಿಗೆಯನ್ನು ಸಂದಾಯ ಮಾಡಿದ ಭಾರಹೇರಿದಾಗ ೧೫೦೦ ಕಿ ಗ್ರಾ ತೂಕವನ್ನು ಮೀರಿದ ಆದರೆ, ೩೦೦೦ ಕ್ರಿಗ್ರಾಂ ಮೀರದ ಒಟ್ಟು ವಾಹನ ತೂಕವನ್ನ ಹೊಂದಿರುವ ಸರಕು ವಾಹನಗಳ ಸಂದರ್ಭದಲ್ಲಿ ೩ನೇ ಪ್ರಕರಣದ (೧) ನೇ ಉಪ–ಪ್ರಕರಣದ ನಾಲ್ಕನೇ ಪರಂತುಕಕ್ಕೆ (ಎಎ) ಖಂಡದಲ್ಲಿ ನಇರ್ದಿಷ್ಟಪಡಿಸಿದ ತೆರಿಗೆಯನ್ನು (೧) ನೇ ಉಪ–ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಸಂದಾಯಮಾಡಿದ ಅವಧಿಯು ಮುಕ್ತಾಯವಾದ ತರುವಾಯ ವಿಧಿಸತಕ್ಕದ್ದು ಮತ್ತು ಅಂಥ ತೆರಿಗೆಯನ್ನು, ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, ೨೦೦೭ರ ಪ್ರಾರಂಭದ ದಿನಾಂಕದಿಂದ ಒಂದು ತಿಂಗಳೊಳಗೆ ಸಂದಾಯಮಾಡತಕ್ಕದ್ದು "

೪ ೭ನೇ ಪ್ರಕರಣದ ತಿದ್ದುಪಡಿ – ಮೂಲ ಅಧಿನಿಯಮದ ೭ನೇ ಪ್ರಕರಣದಲ್ಲಿ (೩) ನೇ ಉಪ ಪ್ರಕರಣದಲ್ಲಿ, "ಭಾಗ ಸಿ, ಭಾಗ ಸಿಸಿ, ಭಾಗ ಸಿ೧, ಭಾಗ ಸಿ೨, ಭಾಗ ಸಿ೩ ಭಾಗ ಸಿ೪" ಎಂಬ ಪದಗಳು, ಅಕ್ಷರಗಳು ಮತ್ತು ಅಂಕಿಗಳಿಗೆ, "ಭಾಗ ಸಿ, ಭಾಗ ಸಿಸಿ, ಭಾಗ ಸಿ೧, ಭಾಗ ಸಿ೨, ಭಾಗ ಸಿ೩, ಭಾಗ ಸಿ೪ ಮತ್ತು ಭಾಗ ಸಿ೫" ಎಂಬ ಪದಗಳು, ಅಕ್ಷರಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು

೫ ೧೦ನೇ ಪ್ರಕರಣದ ತಿದ್ದುಪಡಿ – ಮೂಲ ಅಧಿನಿಯಮದ ೧೦ನೇ ಪ್ರಕರಣದಲ್ಲಿ, (11)ನೇ ಖಂಡದಲ್ಲಿ (ಎಚ್) ಉಪ ಖಂಡದ ತರುವಾಯ, ಈ ಮುಂದಿನ ವಿವರಣೆಯನ್ನು ಸೇರಿಸತಕ್ಕದ್ದು, ಎಂದರೆ –

"ವಿವರಣೆ ಈ ಪ್ರಕರಣದ ಉದ್ದೇಶಕ್ಕಾಗಿ, ಹಾಸಲು ಮತ್ತು ಸಾಗಣೆ ಬಾಡಿಗೆಗಳಿಂದ ಬಂದ ಒಟ್ಟು ಆದಾಯದಲ್ಲಿ ವಾಹನಗಳ

ಮಾಲೀಕನು ನೀಡಿದ ರಿಯಾಯಿತಿ ಪಾಸ್ ಗಳ ಸಂಬಂಧದಲ್ಲಿ ಸರ್ಕಾರವು ಮರುಸಂದಾಯ ಮಾಡಿದ ಮೊಬಲಗನ್ನು ಒಳಗೊಳ್ಳುವುದಿಲ್ಲ"

೬ ೧೫ನೇ ಪ್ರಕರಣದ ಪ್ರತಿಯೋಜನೆ – ಮೂಲ ಅಧಿನಿಯಮದ ೧೫ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ –

"೧೫ ಅಪೀಲುಗಳು – (I) ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಪ್ರಾಧಿಕಾರವು ಮಾಡಿದ ಯಾವುದೇ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ನಿಯಮಿಸಲಾದ ಸಮಯದೊಳಗೆ ಮತ್ತು ನಿಯಮಿಸಲಾದ ರೀತಿಯಲ್ಲಿ ನಿಯಮಿಸಲಾದ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು

(೨) (ಎ) ಯಾವುದೇ ಅಪೀಲನ್ನು, ಅಪೀಲಿನಲ್ಲಿ ವಿವಾದಿಸಿರದ ತೆರಿಗೆಯ ಸಂದಾಯದ ಬಗ್ಗೆ ತೃಪ್ತಿಕರ ರುಜುವಾತನ್ನು ಅದು ಒಳಗೊಂಡಿದ್ದ ಹೊರತು ಅಪೀಲು ಪ್ರಧಿಕಾರವು ಪುರಸ್ಕರಿಸತಕ್ಕದ್ದಲ್ಲ

(ಬಿ) (೧) ನೇ ಉಪ ಪ್ರಕರಣದ ಅಡಿಯಲ್ಲಿ ಒಂದು ಅಪೀಲನ್ನು ಸಲ್ಲಿಸಲಾಗಿದ್ದರೂ, ತೆರಿಗೆ ಅಥವಾ ಇತರೆ ಮೊಬಲಗನ್ನು ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಆದೇಶಕ್ಕನುಸಾರವಾಗಿ ಸಂದಾಯ ಮಾಡತಕ್ಕದ್ದು,

ಪರಂತು, ಅಪೀಲು ಪ್ರಾಧಿಕಾರವು, ನಿಯಮಿಸಬಹುದಾದಂಥ ನಮೂನಿಎಯಲ್ಲಿ ಮತ್ತು ಅಂದ ರೀತಿಯಲ್ಲಿ ತನಗೆ ತೃಪ್ತಿಕರವಾಗುವಂತೆ ಪ್ರರ್ಯಾಪ್ತ ಭದ್ರತೆಯನ್ನು ಅರ್ಜಿದಾರನು ಒದಗಿಸಿದಲ್ಲಿ ತನ್ನ ವಿವೇಚನೆಗನುಗುಣವಾಗಿ, (ಬಿ) ಖಂಡದ ಅಡಿಯಲ್ಲಿ ಸಂದಾಯವಾಗತಕ್ಕ ತೆರಿಗೆ ಅಥವಾ ಇತರೆ ಮೊಬಲಗಿನ ಸಂದಾಯದ ಸಂಬಂಧದಲ್ಲಿ ತಾನು ಸೂಕ್ತವೆಂದು ಭಾವಿಸಬಹುದಾದ ನಿರ್ದೇಶನಗಳನ್ನು ನೀಡಬಹುದು

(೩) ನಿಯಮಿಸಲಾದ ಅವಧಿಯ ತರುವಾಯ ಸಲ್ಲಿಸಲಾದ ಯಾವುದೇ ಅಪೀಲನ್ನು ರದ್ದುಪಡಿಸತಕ್ಕದ್ದು"

೭ ಅನುಸೂಚಿಯ ತಿದ್ದುಪಡಿ – ಮೂಲ ಅಧಿನಿಯಮದ ಅನುಸೂಚಿಯಲ್ಲಿ,–

(I) ಎ ಭಾಗದಲ್ಲಿ –

(i) ೩ನೇ ಬಾಬಿನಲ್ಲಿ, (೧) ನೇ ಉಪಬಾಬಿನಲ್ಲಿ, (ಎ) ಖಂಡ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು,

(ii) ೩ನೇ ಅಂಕಣದಲ್ಲಿ, ೩ಎ ಬಾಬಿನಲ್ಲಿ "೨೨೦೦ ಮತ್ತು ೧೫೦೦೦ ಕೆ ಜಿ ಗಳಿಗೆ ಮೀರಿದ ಪ್ರತಿ ೨೫೦ ಕೆ ಜಿ ಅಥವಾ ಅದರ ಭಾಗಕ್ಕೆ ರೂ ೫೦ " ಎಂಬ ಪದಗಳು, ಅಂಕಿಗಲು ಮತ್ತು ಅಕ್ಷರಗಳಿಗೆ "೨೨೦೦ ಮತ್ತು ೧೫೦೦೦ ಕಿ ಗ್ರಾಂ ಗಳಿಗೆ ಮೀರಿದ ಪ್ರತಿ ೨೫೦ ಕಿ ಗ್ರಾಂ / ಅಥವಾ ಅದರ ಭಾಗಕ್ಕೆ ರೂ ೭೫ " ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು

(iii) ಬಾಬು ಸಂಖ್ಯೆ ೫(ಎ) (i) ರಲ್ಲಿ,–

(ಎ) ೨ನೇ ಅಂಕಣದಲ್ಲಿ, "ಮತ್ತು ಮೋಟಾರು ವಾಹನಗಳ ಅಧಿನಿಯಮ, ೧೯೮೮ರ ೭೪ನೇ ಪ್ರಕರಣದ ಅಡಿಯಲ್ಲಿ ನೀಡಲಾದ ಪರ್ಮಿಟ್ಟಿಗೆ ಒಳಪಡುವ" ಎಂಬ ಪದಗಳು ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು ಮತ್ತು ಯಾವಾಗಲೂ ಬಿಟ್ಟುಬಿಡಲಾಗಿದೆ ಎಂದು ಭಾವಿಸತಕ್ಕದ್ದು

(ಬಿ) ೩ನೇ ಅಂಕಣದಲ್ಲಿ, "೭೫೦ ೦೦" ಎಂಬ ಅಂಕಿಗಳಿಗೆ "೧೦೦೦ ೦೦" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು

(iv) ಬಾಬು ಸಂಖ್ಯೆ ೫ (ಎ) (ii) ರಲ್ಲಿ –

(ಎ) ೨ನೇ ಅಂಕಣದಲ್ಲಿ, "ಮತ್ತು ಮೋಟಾರು ವಾಹನಗಳ ಅಧಿನಿಯಮ, ೧೯೮೮ರ ೭೪ನೇ ಪ್ರಕರಣದ ಅಡಿಯಲ್ಲಿ ನೀಡಲಾದ

ಪರ್ಮಿಟ್ಟಿಗೆ ಒಳಪಡುವ ಮತ್ತು ಕೇಂದ್ರ ಮೋಟಾರು ವಾಹನಗಳ ನಿಯಮಗಳು ೧೯೮೯ರ ೧೨೮ನೇ ನಿಯಮದೊಂದಿಗೆ ಪಾಲಿಸುವ" ಎಂಬ ಪದಗಳು ಮತ್ತು ಅಂಕಿಗಳಿಗೆ "ಬಾಬು ೫(ಎ) () ರ ಅಡಿಯಲ್ಲಿ ತೆರಿಗೆಗೆ ಗುರಿಯಾಗತಕ್ಕವನ್ನು ಹೊರತುಪಡಿಸಿ ಇತರೆ" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದದು ಮತ್ತು ಯಾವಾಗಲೂ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು

(ಬಿ) ೩ನೇ ಅಂಕಣದಲ್ಲಿ, "೨೦೦೦ ೦೦" ಎಂಬ ಅಂಕಿಗಳಿಗೆ, "೨೫೦೦ ೦೦" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು

(v) ಬಾಬು ಸಂಖ್ಯೆ ೫(ಬಿ) ನಲ್ಲಿ, ೩ನೇ ಅಂಕಣದಲ್ಲಿ, "೬೦೦ ೦೦" ಎಂಬ ಅಂಕಿಗಳಿಗೆ "೭೦೦ ೦೦" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದದು,

(vi) ಬಾಬು ೬ ರಲ್ಲಿ –

(ಎ) (ಎ) ಖಂಡದಲ್ಲಿ, ೩ನೇ ಅಂಕಣದಲ್ಲಿ, "೨೦೦೦ ೦೦" ಎಂಬ ಅಂಕಿಗಳಿಗೆ "೨೫೦೦ ೦೦" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು,

(ಬಿ) (ಬಿ) ಖಂಡ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು

(vii) ೭ನೇ ಬಾಬಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ –

"೭ (ಎ)ಬಾಡಿಗೆಗೆ ಅಥವಾ ಪ್ರತಿಫಲಕ್ಕಾಗಿ ಉಪಯೋಗಿಸುವ

ಕ್ಯಾಂಪರ್ಸ್ ವ್ಯಾನ್‌ಗೆ, ಫ್ಲೋರ್ ವಿಸ್ತೀರ್ಣ ಆಧರಿಸಿ

ಪ್ರತಿ ಚದರ ಮೀಟರಿಗೆ
೪೭೦೦ ೦೦

(ಬಿ)ಸ್ಲೀಪರ್ ಕೋಚ್ ಗಳಾಗಿ ನೋಂದಣಿಯಾಗಿ ೧೨ಕ್ಕಿಂತ ಹೆಚ್ಚು

ಪ್ರಯಾಣಿಕರನ್ನು ಒಯ್ಯಲು ಅನುಮತಿ ಪಡೆದಿರುವ (ಚಾಲಕ

ಮತ್ತು ನಿರ್ವಾಹಕ ಅಥವಾ ಅಟೆಂಡರ್ ಹೊರತುಪಡಿಸಿ)

ಪ್ರತಿ ಸ್ಲೀಪರ್ ಗೆ
೩೦೦೦ ೦೦

(viii) ೮ಎ ಬಾಬಿನಲ್ಲಿ –

(ಎ)(ಎ)ಖಂಡದಲ್ಲಿ, ೩ನೇ ಅಂಕಣದಲ್ಲಿ, "೧೦೦೦ ೦೦" ಎಂಬ ಅಂಕಿಗಳಿಗೆ "೧೧೦೦ ೦೦" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು,

(ಬಿ)(ಬಿ)ಖಂಡದಲ್ಲಿ, ೩ನೇ ಅಂಕಣದಲ್ಲಿ, "೧೦೫೦ ೦೦" ಅಂಕಿಗಳಿಗೆ "೧೨೦೦ ೦೦" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು,

(ಸಿ)(ಸಿ)ಖಂಡದಲ್ಲಿ, ೩ನೇ ಅಂಕಣದಲ್ಲಿ, "೧೧೫೦ ೦೦" ಅಂಕಿಗಳಿಗೆ "೧೩೦೦ ೦೦" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು

(ಡಿ)(ಡಿ)ಖಂಡದಲ್ಲಿ, ೩ನೇ ಅಂಕಣದಲ್ಲಿ, "೧೩೦೦ ೦೦" ಅಂಕಿಗಳಿಗೆ "೧೫೦೦ ೦೦ ಎಂಬ

ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು

(IX) ೧–ನೇ ಬಾಬಿನಲ್ಲಿ, (ಜಿ) ಖಂಡದಲ್ಲಿ ೩ನೇ ಅಂಕಣದಲ್ಲಿ, ೨೩೦೦ ೦೦ ಮತ್ತು ೧೫೦೦೦ ಕಿಗ್ರಾಂ ಮೀರಿದ ಪ್ರತಿ ೨೫೦ ಕಿಗ್ರಾಂ ಅಥವಾ ಅದರ ಭಾಗಕ್ಕೆ ರೂ ೩೫ರಂತೆ ಎಂಬ ಪದಗಳು, ಅಂಕಿಗಳಿಗೆ "೨೩೦೦ ಮತ್ತು ೧೫೦೦೦ ಕಿಗ್ರಾಂ ಮೀರಿದ ಪ್ರತಿ ೨೫೦ ಕಿಗ್ರಾಂ ಅಥವಾ ಅದರ ಭಾಗಕ್ಕೆ ರೂ ೭೫ರಂತೆ" ಎಂಬ ಪದಗಳನ್ನು, ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು

(೨) ಭಾಗ ಎ ೧ಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ –

"ಭಾಗ ಎ ೧

(೩(೧) ನೇ ಪ್ರಕರಣ ನೋಡಿ)

ದ್ವಿಚಕ್ರ ವಾಹನಗಳಿಗಾಗಿ ಅಜೀವ ತೆರಿಗೆ

ಕ್ರ ಸಂ	ವಾಹನಗಳ ವರ್ಗ	ವಾಹನದ ಬೆಲೆ ರೂ. ೫೦,೦೦೦ ಮೀರದ ಮೋಟಾರು ಸೈಕಲ್ ಗಳಿಗೆ	ವಾಹನದ ಬೆಲೆ ಮೌಲ್ಯ ರೂ ೫೦,೦೦೦ ಮೀರಿ ಮೋಟಾರು ಸೈಕಲ್ ಗಳಿ
೧	೨	೩	೪
ಎ	ಹೊಸ ವಾಹನ ನೋಂದಣಿಯ ಸಮಯದಲ್ಲಿ	ವಾಹನದ ಬೆಲೆಯ ಮೇಲೆ ಶೇ ೮ ರಷ್ಟು	ವಾಹನದ ಬೆಲೆಯ ಮೇಲೆ ಶೇ ೧೦ ರಷ್ಟು
ಬಿ	ವಾಹನವು ಈಗಗಲೇ ನೋಂದಣಿಯಾಗಿದ್ದಲ್ಲಿ ಹಾಗೂ	ಎ ಖಂಡದ ಅಡಿಯಲ್ಲಿ ವಿಧಿಸಿರುವ ಅಜೀವ	ಎ ಖಂಡದ ಅಡಿಯಲ್ಲಿ ವಿಧಿಸಿರುವ ಉಚಿತ

	ಅದರ ವಯಸ್ಸು ವಾಹನ ನೋಂದಣಿಯಾದ ತಿಂಗಳಿನಿಂದ	ತೆರಿಗೆಯ ಶೇಕಡಾವಾರು	ತೆರಿಗೆಯ ಶೇಕಡಾವಾರು
೧	೨ ವರ್ಷಗಳಿಗೆ ಮೀರದ	೯೩%	೯೩%
೨	೨ ವರ್ಷಗಳಿಗೆ ಮೀರಿದ, ೩ ವರ್ಷಗಳಿಗೆ ಮೀರದ	೮೭%	೮೭%
೩	೩ ವರ್ಷಗಳಿಗೆ ಮೀರಿದ, ೪ ವರ್ಷಗಳಿಗೆ ಮೀರದ	೮೧%	೮೧%
೪	೪ ವರ್ಷಗಳಿಗೆ ಮೀರಿದ, ೫ ವರ್ಷಗಳಿಗೆ ಮೀರದ	೭೫%	೭೫%
೫	೫ ವರ್ಷಗಳಿಗೆ ಮೀರಿದ ೬ ವರ್ಷಗಳಿಗೆ ಮೀರದ	೬೯%	೬೯%
೬	೬ ವರ್ಷಗಳಿಗೆ ಮೀರಿದ, ೭ ವರ್ಷಗಳಿಗೆ ಮೀರದ	೬೪%	೬೪%
೭	೭ ವರ್ಷಗಳಿಗೆ ಮೀರಿದ, ೮ ವರ್ಷಗಳಿಗೆ ಮೀರದ	೫೯%	೫೯%
೮	೮ ವರ್ಷಗಳಿಗೆ ಮೀರಿದ, ೯ ವರ್ಷಗಳಿಗೆ ಮೀರದ	೫೪%	೫೪%
೯	೯ ವರ್ಷಗಳಿಗೆ ಮೀರಿದ, ೧೦ ವರ್ಷಗಳಿಗೆ ಮೀರದ	೪೯%	೪೯%
೧೦	೧೦ ವರ್ಷಗಳಿಗೆ ಮೀರಿದ, ೧೧ ವರ್ಷಗಳಿಗೆ ಮೀರದ	೪೫%	೪೫%
೧೧	೧೧ ವರ್ಷಗಳಿಗೆ ಮೀರಿದ, ೧೨ ವರ್ಷಗಳಿಗೆ ಮೀರದ	೪೧%	೪೧%
೧೨	೧೨ ವರ್ಷಗಳಿಗೆ ಮೀರಿದ, ೧೩ ವರ್ಷಗಳಿಗೆ ಮೀರದ	೩೭%	೩೭%
೧೩	೧೩ ವರ್ಷಗಳಿಗೆ ಮೀರಿದ, ೧೪ ವರ್ಷಗಳಿಗೆ ಮೀರದ	೩೩%	೩೩%

೧೪	೧೪ ವರ್ಷಗಳಿಗೆ ಮೀರಿದ, ೧೫ ವರ್ಷಗಳಿಗೆ ಮೀರದ	೨೯%	೨೯%
೧೫	೧೫ ವರ್ಷಗಳಿಗೆ ಮೀರಿದ	೨೫%	೨೫%

ಟಿಪ್ಪಣಿಗಳು –

೧ ೨೦೦೭ರ ಏಪ್ರಿಲ್ ೧ನೇ ದಿನಾಂಕಕ್ಕೆ ಮೊದಲು ಅಜೀವ ತೆರಿಗೆ ಬಾಕಿ ಇದ್ದು ಪಾವತಿಯಾಗಿಲ್ಲದಿರುವ ವಾಹನಗಳ ಸಂಬಂಧದಲ್ಲಿ ಅಂಥ ದಿನಾಂಕಕ್ಕೆ ಮುಂಚೆ ಜಾರಿಯಲ್ಲಿದ್ದ ತೆರಿಗೆ ದರದಲ್ಲಿ ಹಾಗೂ ದಂಡಯಾವುದೇ ಇದ್ದಲ್ಲಿ ಅದರೊಡನೆ ಅಂಥ ತೆರಿಗೆಯನ್ನು ವಸೂಲಿ ಮಾಡತಕ್ಕದ್ದು

೨ ೨೦೦೭ರ ಏಪ್ರಿಲ್ ೧ನೇ ದಿನಾಂಕದಂದು ಹಾಗೂ ನಂತರಲದಲಿ ನೋಂದಣಿಯಾದ ವಾಹನಗಳ ಸಂಬಂಧದಲ್ಲಿ ವಾಹನ ಖರೀದಿಯ ದರಪಟ್ಟಿಯನ್ನು (ಇನ್ ವಾಯ್ಸ್ ನ್ನು) ಸಲ್ಲಿಸತಕ್ಕದ್ದು"

೩ ಮೋಟಾರು ವಾಹನಕ್ಕೆ ಸಂಬಂಧಿಸಿದಂತೆ ವಾಹನದ ಬೆಲೆ ಎಂದರೆ –

(ಎ) ಭಾರತದಲ್ಲಿ ತಯಾರಾದ ವಾಹನಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ರಾಜ್ಯದಲ್ಲಿ ಸಂದಾಯ ಮಾಡತಕ್ಕ ಅಬ್ಕಾರಿ ಸುಂಕ, ಮಾರಾಟ ತೆರಿಗೆ, ಅಧಿಭಾರ ಅಥವಾ ಉಪಕರ, ಪ್ರವೇಶ ತೆರಿಗೆ ಇತ್ಯಾದಿಗಳೂ ಒಳಗೊಂಡಂತೆ ವಾಹನದ ತಯಾರಕನಾಗಲಿ ಅಥವಾ ವ್ಯಾಪಾರಿಯಾಗಲಿ ನೀಡಿದ ಖರೀಇದ ದರಪಟ್ಟಿಗೆ ಅನುಸಾರವಾಗಿ ವಾಹನದ ಬೆಲೆ, ಮತ್ತು

(ಬಿ) ಆಮದಾದ ಮೋಟಾರು ವಾಹನಕ್ಕೆ ಸಂಬಂಧಪಟ್ಟಂತೆ, ಅದರ ತಯಾರಿಕೆಯ ಸ್ಥಳವು ಯಾವುದೇ ಆಗಿದ್ದರೂ, ವಾಹನವನ್ನು ಆಮದು ಮಾಡಿಕೊಳ್ಳುವಲ್ಲಿ ತಲುಲಿದ ಒಟ್ಟು ವೆಚ್ಚವು , ಅಂದರೆ, ಎಂಟ್ರಿ ಬಿಲ್ಲಿನಲ್ಲಿ ಅಥವಾ ಅಂಥ ಇತರ ದಸ್ತಾವೇಜಿನಲ್ಲಿ ಹಿಂಬರಹ ಮಾಡಲಾದಂತೆ ಮತ್ತು ಸೀಮಾಸುಂಕಗಳ ಅಧಿನಿಯಮ ೧೯೬೨ರ ಅಡಿಯಲ್ಲಿ ಹಾಗೆ ನಿರ್ಧರಣೆ ಮಾಡಿದಂತೆ ಮೋಟಾರು ವಾಹನದ ಮೌಲ್ಯ

ಹಾಗೂ ವಿಧಿಸಲಾದ ಸೀಮಾ ಸುಂಕ, ವಹಿಸಲಾದ ಸಾಗಣಿ ವೆಚ್ಚಗಳು ಮತ್ತು ಸೀಮಾ ಸುಂಕಗಳ ಇಲಾಖೆ ಅಥವಾ ಯಾವುದೇ ಇತರ ಇಲಾಖೆಯು ವಿಧಿಸಿದ ಹೆಚ್ಚುವರಿ ಸುಂಕ/ದಂಡ ಯಾವುದಾದರೂ ಇದ್ದಲ್ಲಿ ಅವುಗಳೂ ಸೇರಿದಂತೆ ಅವುಗಳ ಮೇಲೆ ವಿಧಿಸಲಾದ ಇತರ ತೆರಿಗೆಗಳು "

(೩) ಅನುಸೂಚಿಯ ಭಾಗ ಎ ೫ಕ್ಕೆ, ಈ ಮುಂದಿನವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ –

ಭಾಗ– ಎ ೫

[೩(೧) ನೇ ಪ್ರಕರಣ ನೋಡಿ)

ಮೋಟಾರು ಕಾರುಗಳು, ಜೀಪುಗಳು, ಆಮ್ನಿ ಬಸ್ಸುಗಳು ಮತ್ತು ಖಾಸಗಿ ಸೇವಾ ವಾಹನಗಳಿಗಾಗಿ

ಅಜೀವ ತೆರಿಗೆ

ಕ್ರಮ ಸಂಖ್ಯೆ	ವಾಹನಗಳ ವರ್ಗ	೫ ಲಕ್ಷ ರೂ ಗಳ ಬೆಲೆಯನ್ನು ಮೀರದ ೫ ಚ ಮೀ ವರೆಗೆ ಫ್ಲೋರ್ ವಿಸ್ತೀರ್ಣ ಹೊಂದಿರುವ ಮೋಟಾರು ಕಾರುಗಳು ಜೀಪುಗಳು ಅಮ್ನಿ ಬಸ್ಸುಗಳು ಮತ್ತು ಖಾಸಗಿ ಸೇವಾ ವಾಹನಗಳು	೫ ಲಕ್ಷ ರೂ ಗಳ ಬೆಲೆಯನ್ನು ಮೀರಿದ ಆದರೆ ೧೦ ಲಕ್ಷ ರೂ ಗಳ ಬೆಲೆಯನ್ನು ಮೀರದ ೫ ಚ ಮೀ ವರೆಗೆ ಫ್ಲೋರ್ ವಿಸ್ತೀರ್ಣ ಹೊಂದಿರುವ ಮೋಟಾರು ಕಾರುಗಳು ಜೀಪುಗಳು ಅಮ್ನಿ ಬಸ್ಸುಗಳು ಮತ್ತು ಖಾಸಗಿ ಸೇವಾ ವಾಹನಗಳು	೧೦ ಲಕ್ಷ ರೂ ಗಳ ಬೆಲೆಯನ್ನು ಮೀರಿದ ೫ ಚ ಮೀ ವರೆಗೆ ಫ್ಲೋರ್ ವಿಸ್ತೀರ್ಣ ಹೊಂದಿರುವ ಮೋಟಾರು ಕಾರುಗಳು ಜೀಪುಗಳು ಅಮ್ನಿ ಬಸ್ಸುಗಳು ಮತ್ತು ಖಾಸಗಿ ಸೇವಾ ವಾಹನಗಳ
೧	೨	೩	೪	೫
ಎ	ಹೊಸ ವಾಹನಗಳ ನೋಂದಣಿ ಸಮಯದಲ್ಲಿ	ವಾಹನಗಳ ಬೆಲೆಯ ಮೇಲೆ ಶೇ ೧೦	ವಾಹನದ ಮೌಲ್ಯದ ಮೇಲೆ ಶೇ ೧೧	ವಾಹನದ ಮೌಲ್ಯದ ಮೇಲೆ ಶೇ ೧೪

ಬಿ	ವಾಹನವು ಈಗಾಗಲೇ ನೊಂದಣಿಯಾಗಿದ್ದಲ್ಲಿ ಹಾಗೂ ಅದರ ವಯಸ್ಸು ವಾಹನ ನೋಂದಣಿಯಾದ ತಿಂಗಳಿನಿಂದ	ಎ-ಖಂಡದ ಅಡಿಯಲ್ಲಿ ವಿಧಿಸಲಾದ ಅಜೀವ ತೆರಿಗೆಯ ಶೇಕಡಾವಾರು	ಎ-ಖಂಡದ ಅಡಿಯಲ್ಲಿ ವಿಧಿಸಲಾದ ಅಜೀವ ತೆರಿಗೆಯ ಶೇಕಡಾವಾರು	ಎ-ಖಂಡದ ಅಡಿಯಲ್ಲಿ ವಿಧಿಸಲಾದ ಅಜೀವ ತೆರಿಗೆಯ ಶೇಕಡಾವಾರು
೧	೨ ವರ್ಷಗಳಿಗೆ ಮೀರದಿದ್ದರೆ	೯೩%	೯೩%	೯೩%
೨	೨ ವರ್ಷಗಳಿಗೆ ಮೀರಿದ, ಆದರೆ ೩ ವರ್ಷಗಳಿಗೆ ಮೀರದಿದ್ದರೆ	೮೭%	೮೭%	೮೭%
೩	೩ ವರ್ಷಗಳಿಗೆ ಮೀರಿದ ಆದರೆ ೪ ವರ್ಷಗಳಿಗೆ ಮೀರದಿದ್ದರೆ	೮೧%	೮೧%	೮೧%
೪	೪ ವರ್ಷಗಳಿಗೆ ಮೀರದ ಆದರೆ ೫ ವರ್ಷಗಳಿಗೆ ಮೀರದಿದ್ದರೆ	೭೫%	೭೫%	೭೫%
೫	೫ ವರ್ಷಗಳಿಗೆ ಮೀರಿದ, ಆದರೆ ೬ ವರ್ಷಳಿಗೆ ಮೀರದಿದ್ದರೆ	೬೯%	೬೯%	೬೯%
೬	೬ ವರ್ಷಗಳಿಗೆ ಮೀರಿದ, ಆದರೆ ೭ ವರ್ಷಳಿಗೆ ಮೀರದಿದ್ದರೆ	೬೪%	೬೪%	೬೪%
೭	೭ ವರ್ಷಗಳಿಗೆ ಮೀರಿದ, ಆದರೆ ೮ ವರ್ಷಳಿಗೆ	೫೯%	೫೯%	೫೯%

	ಮೀರದಿದ್ದರೆ			
೮	೮ ವರ್ಷಗಳಿಗೆ ಮೀರಿದ, ಆದರೆ ೯ ವರ್ಷಳಿಗೆ ಮೀರದಿದ್ದರೆ	೫೪%	೫೪%	೫೪%
೯	೯ ವರ್ಷಗಳಿಗೆ ಮೀರಿದ, ಆದರೆ ೧೦ ವರ್ಷಳಿಗೆ ಮೀರದಿದ್ದರೆ	೪೯%	೪೯%	೪೯%
೧೦	೧೦ ವರ್ಷಗಳಿಗೆ ಮೀರಿದ, ಆದರೆ ೧೧ ವರ್ಷಳಿಗೆ ಮೀರದಿದ್ದರೆ	೪೫%	೪೫%	೪೫%
೧೧	೧೧ ವರ್ಷಗಳಿಗೆ ಮೀರಿದ, ಆದರೆ ೧೨ ವರ್ಷಳಿಗೆ ಮೀರದಿದ್ದರೆ	೪೧%	೪೧%	೪೧%
೧೨	೧೨ ವರ್ಷಗಳಿಗೆ ಮೀರಿದ, ಆದರೆ ೧೩ ವರ್ಷಳಿಗೆ ಮೀರದಿದ್ದರೆ	೩೭%	೩೭%	೩೭%
೧೩	೧೩ ವರ್ಷಗಳಿಗೆ ಮೀರಿದ, ಆದರೆ ೧೪ ವರ್ಷಳಿಗೆ ಮೀರದಿದ್ದರೆ	೩೩%	೩೩%	೩೩%
೧೪	೧೦ ವರ್ಷಗಳಿಗೆ ಮೀರಿದ, ಆದರೆ ೧೫ ವರ್ಷಳಿಗೆ ಮೀರದಿದ್ದರೆ	೨೯%	೨೯%	೨೯%
೧೫	೧೫ ವರ್ಷಗಳಿಗೆ ಮೀರಿದ,	೨೫%	೨೫%	೨೫%

ಟಿಪ್ಪಣಿಗಳು –

೧ ೨೦೦೭ರ ಏಪ್ರಿಲ್ ೧ನೇ ದಿನಾಂಕಕ್ಕೆ ಮೊದಲು ಅಜೀವ ತೆರಿಗೆ ಬಕಿ ಇದದು ಪಾವತಿಯಾಗಿಲ್ಲದಿರುವ ವಾಹನಗಳ ಸಂಬಂಧದಲ್ಲಿ ಅಂಥ ದಿನಾಂಕ್ಕೆ ಮುಂಚೆ ಜಾರಿಯಲ್ಲಿದದ ತೆರಿಗೆ ದರದಲ್ಲಿ ಹಾಗೂ ದಂಡ ಯಾವುದೇ ಇದ್ದಲ್ಲಿ ಅದರೊಡನೆ ಅಂಥ ತೆರಿಗೆಯನ್ನು ವಸೂಲಿ ಮಾಡತಕ್ಕದ್ದು

೨ ೨೦೦೭ರ ಏಪಿರಲ್ ೧ನೇ ದಿನಂಕದಂದು ಹಾಗೂ ನಂತರದಲ್ಲಿ ನೋಂದಣಿಯಾದ ವಾಹನಗಳ ಸಂಬಂಧದಲ್ಲಿ ವಾಹನ ಖರೀದಿಯ ದರಪಟ್ಟಿಯನ್ನು (ಇನ್ ವಾಯ್ಸ್ ನ್ನು) ಸಲ್ಲಿಸುವುದು

೩ ಮೋಟಾರು ವಾಹನಕ್ಕೆ ಸಂಬಂಧಿಸಿದಂತೆ ವಾಹನದ ಬೆಲೆ ಎಂದರೆ –

(ಎ) ಭಾರತದಲ್ಲಿ ತಯಾರಾದ ವಾಹನಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ರಾಜ್ಯದಲ್ಲಿ ಸಂದಾಯ ಮಾಡತಕ್ಕ ಅಬ್ಕಾರಿ ಸುಂಕ, ಮಾರಾಟ ತೆರಿಗೆ, ಅಧಿಕಾರ ಅಧವಾ ಉಪಕರ, ಪ್ರವೇಶ ತೆರಿಗೆ ಇತ್ಯಾದಿಗಳೂ ಒಳಗೊಂಡಂತೆ ವಾಹನದ ತಯಾರಕನಾಗಲಿ ಅಧವಾ ವ್ಯಾಪಾರಿಯಾಗಲಿ ನೀಡಿದ ಖರೀದಿ ದರಪಟ್ಟಿಗೆ ಅನುಸಾರವಾಗಿ ವಾಹನದ ಬೆಲೆ , ಮತ್ತು

(ಬಿ) ಆಮದಾದ ಮೋಟಾರು ವಾಹನಕ್ಕೆ ಸಂಬಂಧಪಟ್ಟಂತೆ, ಅದರ ತಯಾರಿಕೆಯ ಸ್ಥಳವು ಯಾವುದೇ ಆಗಿದ್ದರೂ, ವಾಹನವನ್ನು ಆಮದು ಮಾಡಿಕೊಳ್ಳುವಲ್ಲಿ ತಲುಲಿದ ಒಟ್ಟು ವೆಚ್ಚವು ಅಂದರೆ ಎಂಟ್ರಿ ಬೆಲ್ಲಿನಲ್ಲಿ ಅಧವಾ ಅಂಥ ಇತರ ದಸ್ತಾವೇಜಿನಲ್ಲಿ ಹಿಂಬರಹ ಮಾಡಲಾದಂತೆ ಮತ್ತು ಸೀಮಾಸುಂಕಗಳ ಅಧಿನಿಯಮ ೧೯೬೨ರ ಅಡಿಯಲ್ಲಿ ಹಾಗೆ ನಿರ್ಧರಣೆ ಮಾಡಿದಂತೆ ಮೋಟಾರು ವಹನದ ಮೌಲ್ಯ ಹಾಗೂ ವಿಧಿಸಲಾದ ಸೀಮಾ ಸುಂಕ ವಹಿಸಲಾದ ಸಾಗಣೆ ವೆಚ್ಚಗಳು ಮತ್ತು ಸೀಮಾ ಸುಂಕಗಳು ಇಲಾಖೆ ಅಧವಾ ಯಾವುದೇ ಇತರ

ಇಲಾಖೆಯು ವಿಧಿಸಿದ ಹೆಚ್ಚುವರಿ ಸುಂಕ/ದಂಡ ಯಾವುದಾದರೂ ಇದ್ದಲ್ಲಿ ಅವುಗಳೂ ಸೇರಿದಂತೆ ಅವುಗಳ ಮೇಲೆ ವಿಧಿಸಲಾದ ಇತರ ತೆರಿಗೆಗಳು "

(೪) ಅನುಸೂಚಿಯ ಭಾಗ ಎ೫ರ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ -

ಭಾಗ–ಎಚ್

[೩(೧) ನೇ ಪ್ರಕರಣ ನೋಡಿ]

ಭಾರಹೇರಿದಾಗ ೧೫೦೦ ಕಿ ಗ್ರಾಂ ಗಳನ್ನು ಮೀರಿದ ಆದರೆ ೩೦೦೦ ಕಿ ಗ್ರಾಂಗಳನ್ನು ಮೀರದ ಒಟ್ಟು ವಾಹನ ತೂಕವನ್ನು ಹೊಂದಿರುವ, ಬಾಡಿಗೆಗಾಗಿ ಅಥವಾ ಪ್ರತಿಫಲಕ್ಕಾಗಿ ಬಳಸುತ್ತಿರಲಿ ಅಥವಾ ಅಲ್ಲದಿರಲಿ, ಸರಕು ವಾಹನಗಳಿಗಾಗಿ ಅಜೀವ ತೆರಿಗೆ

ಬಾಬು ಸಂಖ್ಯೆ	ವಾಹನಗಳ ವರ್ಗ	೧೫೦೦ ಕಿ ಗ್ರಾಂ ಗಳನ್ನು ಮೀರಿದ ಆದರೆ ೨೦೦೦ ಕಿ ಗ್ರಾಂ ಗಳನ್ನು ಮೀರದ ಒಟ್ಟು ತೂಕವನ್ನು ಹೊಂದಿರುವ ಸರಕು ವಾಹನಗಳು	೨೦೦೦ ಕಿ ಗ್ರಾಂ ಗಳನ್ನು ಮೀರಿದ ಆದರೆ ೩೦೦೦ ಕಿ ಗ್ರಾಂಗಳನ್ನು ಮೀರದ ಒಟ್ಟು ತೂಕವನ್ನು ಹೊಂದಿರುವ ಸರಕು ವಾಹನಗಳು
೧	೨	೩	೪
ಎ	ಹೊಸ ವಾಹನ ನೊಂದಣಿಯ ಸಮಯದಲ್ಲಿ	೧೦,೦೦೦ ೦೦	೧೫,೦೦೦
ಬಿ	ವಾಹನವು ಈಗಾಗಲೇ ನೋಂದಣಿಯಾಗಿದ್ದಲ್ಲಿ ಹಾಗೂ ಅದರ ವಯಸ್ಸು ವಾಹನ ನೋಂದನೀಯಾದ ತಿಂಗಳಿನಿಂದ		
೧	೨ ವರ್ಷಗಳಿಗೆ ಮೀರದ	೯೩೦೦ ೦೦	೧೩೯೫೦ ೦೦
೨	೨ ವರ್ಷಗಳಿಗೆ ಮೀರಿದ, ೩ ವರ್ಷಗಳಿಗೆ ಮೀರದ	೮೭೦೦ ೦೦	೧೩೯೫೦ ೦೦
೩	೩ ವರ್ಷಗಳಿಗೆ ಮೀರಿದ, ೪ ವರ್ಷಗಳಿಗೆ ಮೀರದ	೮೧೦೦ ೦೦	೧೨೧೫೦ ೦೦

೪	೪ ವರ್ಷಗಳಿಗೆ ಮೀರಿದ ೫ ವರ್ಷಗಳಿಗೆ ಮೀರದ	೭೫೦೦ ೦೦	೧೧೨೫೦ ೦೦
೫	೫ ವರ್ಷಗಳಿಗೆ ಮೀರಿದ, ೬ ವರ್ಷಗಳಿಗೆ ಮೀರದ	೬೯೦೦ ೦೦	೧೦೩೫೦ ೦೦
೬	೬ ವರ್ಷಗಳಿಗೆ ಮೀರಿದ, ೭ ವರ್ಷಗಳಿಗೆ ಮೀರದ	೬೪೦೦ ೦೦	೯೬೦೦ ೦೦
೭	೭ ವರ್ಷಗಳಿಗೆ ಮೀರಿದ, ೮ ವರ್ಷಗಳಿಗೆ ಮೀರದ	೫೯೦೦ ೦೦	೮೮೫೦ ೦೦
೮	೮ ವರ್ಷಗಳಿಗೆ ಮೀರಿದ, ೯ ವರ್ಷಗಳಿಗೆ ಮೀರದ	೫೪೦೦ ೦೦	೮೧೦೦ ೦೦
೯	೯ ವರ್ಷಗಳಿಗೆ ಮೀರದ, ೧೦ ವರ್ಷಗಳಿಗೆ ಮೀರದ	೪೯೦೦ ೦೦	೭೩೫೦ ೦೦
೧೦	೧೦ ವರ್ಷಗಳಿಗೆ ಮೀರಿದ, ೧೧ ವರ್ಷಗಳಿಗೆ ಮೀರದ	೪೫೦೦ ೦೦	೬೭೫೦ ೦೦
೧೧	೧೧ ವರ್ಷಗಳಿಗೆ ಮೀರಿದ, ೧೨ ವರ್ಷಗಳಿಗೆ ಮೀರದ	೪೧೦೦ ೦೦	೬೧೫೦ ೦೦
೧೨	೧೨ ವರ್ಷಗಳಿಗೆ ಮೀರಿದ, ೧೩ ವರ್ಷಗಳಿಗೆ ಮೀರದ	೩೭೦೦ ೦೦	೫೫೫೦ ೦೦
೧೩	೧೩ ವರ್ಷಗಳಿಗೆ ಮೀರಿದ ೧೪ ವರ್ಷಗಳಿಗೆ ಮೀರದ	೩೩೦೦ ೦	೪೯೫೦ ೦೦
೧೪	೧೪ ವರ್ಷಗಳಿಗೆ ಮೀರಿದ, ೧೫ ವರ್ಷಗಳಿಗೆ ಮೀರದ	೨೯೦೦ ೦೦	೪೩೫೦ ೦೦
೧೫	೧೫ ವರ್ಷಗಳಿಗೆ ಮೀರಿದ ೨೫%	೨೫೦೦ ೦೦	೩೭೫೦ ೦೦

ಟಿಪ್ಪಣಿಗಳು –

೧ ೨೦೦೭ರ ಏಪ್ರಿಲ್ ೧ನೇ ದಿನಾಂದಂದು ಹಾಗೂ ನಂತರದಲ್ಲಿ ನೋಂದಣಿಯಾದ ವಾಹನಗಳ ಸಂಬಂಧದಲಲಿ ವಾಹನ ಖರೀದಿಯ ದರಪಟ್ಟಿಯನ್ನು (ಇನ್ ವಾಯ್ಸ್ ನ್ನು) ಸಲ್ಲಿಸುವುದು

೨ ಮೋಟಾರು ವಾಹನಕ್ಕೆ ಸಂಬಂಧಿಸಿದಂತೆ ವಾಹನದ ಬೆಲೆ ಎಂದರೆ –

(ಎ) ಭಾರತದಲ್ಲಿ ತಯಾರಾದ ವಾಹನಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ರಾಜ್ಯದಲಿ ಸಂದಾಯ ಮಾಡತಕ್ಕ ಅಬ್ಕಾರಿ ಸುಂಕ, ಮಾರಾಟ ತೆರಿಗೆ, ಅಧಿಕಾರ ಅಥವಾ ಉಪಕರ, ಪ್ರವೇಶ ತೆರಿಗೆ ಇತ್ಯಾದಿಗಳೂ ಒಳಗೊಂಡಂತೆ ವಾಹನದ ತಯಾರಕನಾಗಲಿ ಅಥವಾ ವ್ಯಾಪಾರಿಯಾಗಲಿ ನೀಡಿದ ಖರೀದ ದರಪಟ್ಟಿಗೆ ಅನುಸಾರವಾಗಿ ವಾಹನದ ಬೆಲೆ, ಮತ್ತು

(ಬಿ) ಆಮದಾದ ಮೋಟಾರು ವಾಹನಕ್ಕೆ ಸಂಬಂಧಪಟ್ಟಂತೆ, ಅದರ ತಯಾರಿಕೆಯ ಸ್ಥಳವು ಯಾವುದೇ ಆಗಿದ್ದರೂ, ವಾಹನವನ್ನು ಆಮದು ಮಾಡಿಕೊಳ್ಳುವಲ್ಲಿ ತಗುಲಿದ ಒಟ್ಟು ವೆಚ್ಚವು, ಅಂದರೆ, ಎಂಟ್ರಿ ಬೆಲ್ಲಿನಲ್ಲಿ ಅಥವಾ ಅಂಥ ಇತರ ದಸ್ತಾವೇಜಿನಲ್ಲಿ ಹಿಂಬರಹ ಮಾಡಲಾದಂತೆ ಮತ್ತು ಸೀಮಾಸುಂಕಗಳ ಅಧಿನಿಯಮ ೧೯೬೨ ರ ಅಡಿಯಲ್ಲಿ ಹಾಗೆ ನಿರ್ಧರಣೆ ಮಾಡಿದಂತೆ ಮೋಟಾರು ವಹನದ ಮೌಲ್ಯ ಹಾಗೂ ವಿಧಿಸಲಾದ ಸೀಮಾ ಸುಂಕ ವಹಿಸಲಾದ ಸಾಗಣಿ ವೆಚ್ಚಗಳು ಮತ್ತು ಸೀಮಾ ಸುಂಕಗಳು ಇಲಾಖೆ ಅಥವಾ ಯಾವುದೇ ಇತರ ಇಲಾಖೆಯು ವಿಧಿಸಿದ ಹೆಚ್ಚುವರಿ ಸುಂಕ/ದಂಡ ಯಾವುದಾದರೂ ಇದ್ದಲ್ಲಿ ಅವುಗಳೂ ಸೇರಿದಂತೆ ಅವುಗಳ ಮೇಲೆ ವಿಧಿಸಲಾದ ಇತರ ತೆರಿಗೆಗಳು ”

(೫) ಭಾಗ ‘ಬಿ’ ಯಲ್ಲಿ,-

(1) ಬಾಬು ಸಂಖ್ಯೆ ೫ ರಲ್ಲಿ, ೩ ಮತ್ತು ೪ನೇ ಅಂಕಣದಲ್ಲಿ “೧೦೦ ೦೦” ಮತ್ತು “೨೫೦ ೦೦” ಎಂಬ ಅಂಕಿಗಳಿಗೆ ಕ್ರಮವಾಗಿ

"೩೦೦ ೦೦" ಮತ್ತು "೪೫೦ ೦೦" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು

(11) ಬಾಬು ಸಂಖ್ಯೆ ೬ ರಲ್ಲಿ,-

(ಎ) ೨ನೇ ಅಂಕಣದಲ್ಲಿ -

(1) "(ಸುಖಾಸೀನ ಬಸ್ ಗಳು)" ಎಂಬ ಪದಗಳು ಮತ್ತು ಆವರಣಗಳನ್ನು ಬಿಟ್ಟುಬಿಡತಕ್ಕ್ದ ಮತ್ತು ಯಾವಾಗಲೂ ಬಿಟ್ಟುಬಿಡಲಾಗಿದೆ ಎಂದು ಭಾವಿಸತಕ್ಕದ್ದು,

(11) "ಮತ್ತು ಕೇಂದ್ರ ಮೋಟಾರು ವಾಹನಗಳ ನಿಯಮಗಳು ೧೯೮೯ರ ೧೨೮ನೇ ನಿಯಮವನ್ನು ಪಾಲಿಸುವುದು ಅಥವಾ ಅನ್ಯಥಾ" ಎಂಬ ಪದಗಳು ಮತ್ತು ಅಂಕಿಗಳಿಗೆ "ಬಾಬು ಸಂಖ್ಯೆ ೫ರ ಅಡಿಯಲ್ಲಿಕಿ ತೆರಿಗೆಗೆ ಗುರಿಯಾಗತಕ್ಕವುಗಳನ್ನು ಹೊರತುಪಡಿಸಿ" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು ಯಾವಾಗಲೂ ಪ್ರತಿಯೋಜಿಸಲಾಗಿದೆ ಎಂಧು ಭಾವಿಸತಕ್ಕದ್ದು

(ಬಿ) ೩ ಮತ್ತು ೪ನೇ ಅಂಕಣದಲ್ಲಿ, "೪೦೦ ೦೦" ಮತ್ತು "೧೦೦೦ ೦೦" ಎಂಬ ಅಂಕಿಗಳಿಗೆ, ಕ್ರಮವಾಗಿ "೬೦೦ ೦೦ ಮತ್ತು "೧೫೦೦ ೦೦" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು

